# ಬತ್ತದ ತೊರೆ

ಶಿವರಾಮ ಕಾರಂತ

1953

ಬೆಲೆ: ಮೂರೂಕಾಲು ರೂಪಾಯಿ.

ಹರ್ಷ ಮುದ್ರಣ, ಪ್ರಕಟಣಾಲಯ; ಪುತ್ತೂರು, ದ. ಕ.

# ಮುನ್ನುಡಿ

ಮನುಷ್ಯನ ಮನೋಧರ್ಮ ಎರಡೆರಡು ಬಗೆಯ ಪ್ರವಾಹಗಳಿಗೆ ಸಿಲುಕಿ ತೊಳಲಾಡುತ್ತಿರುವುದನ್ನು ನಾವಿಂದು ಕಾಣುತ್ತಿದ್ದೇವೆ—ಪ್ರಾಣಿ ಸಹಜವಾದ ಅವನಲ್ಲಿರುವ ನೈಸರ್ಗಿಕ ಲಾಲಸೆ, ಅಭಿರುಚಿ, ಸ್ವಭಾವಗಳಿಗೂ ಅವನು ನಾಗರಿಕನಾದ ಮೇಲೆ ತನ್ನ ಸಂಸ್ಕೃತಿಯಿಂದಾಗಿ ಕಲ್ಪಿಸಿಕೊಂಡ ಇತರ ಪ್ರವೃತ್ತಿಗಳಿಗೂ ಹೋರಾಟ ಪ್ರಾಪ್ತವಾಗುತ್ತದೆ. ಈ ಬರಹದಲ್ಲಿ ಅಂಥ ಹೋರಾಟದ ಬರಿಯ ಒಂದು ಮುಖವನ್ನಷ್ಟೆ ಚಿತ್ರಿಸಲು ಪ್ರಯತ್ನ ಮಾಡಿರುತ್ತೇನೆ-ಅದು ನಮ್ಮ ಜೀವನದ ಲೈಂಗಿಕ ಸಮಸ್ಯೆಗೆ ಸಂಬಂಧಿಸಿ ದಂಥ ಪ್ರಶ್ನೆಯಾಗಿದೆ.

ಹೆಣ್ಣು ಗಂಡುಗಳ ಒಡನಾಟವು ನಿಸರ್ಗಸಹಜವಾದ ಒಂದು ಸ್ನೇಹ. ಸಂತಾನ ಲಾಭ, ಸಂಗೋಪನಗಳು ಅದರ ಮುಖ್ಯ ಹೇತು. ಈ ಕೆಲಸಗಳು ಪೂರೈಸುವುದಕ್ಕೆ, ಪ್ರಕೃತಿ ಮಾನವನಲ್ಲಿ ಕಾಮವನ್ನು ಕೆರಳಿಸುತ್ತದೆ. ಗಂಡು ಹೆಣ್ಣುಗಳ ಸ್ನೇಹ ಉಳಿಯುವುದಕ್ಕೆ ಪ್ರೇಮವನ್ನು ರೂಪಿಸುತ್ತದೆ. ಹಾಗೆಯೇ ಶಿಶು ಸಂಗೋಪನೆಯಾಗಬೇಕಾದುದರಿಂದ ವಾತ್ಸಲ್ಯ, ಪ್ರೇಮ, ತಾಯ್ತನದ ಹಂಬಲಗಳನ್ನೆಲ್ಲ ಹೆಣ್ಣು ಗಂಡುಗಳಲ್ಲಿ ಅದು ಪ್ರೇರಿಸುತ್ತದೆ. ಇಂಥ ನಿಸರ್ಗದ ಅಸ್ತಿವಾರದ ಮೇಲೆ ಮನುಷ್ಯ ತನ್ನದಾದ ಸಂಸ್ಕೃತಿಯ ಮಂದಿರ ಕಟ್ಟಿದ್ದಾನೆ. ಕಾಲ, ಕಾಲಗಳಲ್ಲಿ ಆತ ಬೇರೆ ಬೇರೆಯ ನೀತಿ, ನಿಯಮ, ನಿರ್ಬಂಧ, ಆಚಾರಗಳನ್ನು ರೂಪಿಸಿ ಗಂಡು ಹೆಣ್ಣುಗಳ ಸಂಬಂಧಕ್ಕೆ ತನ್ನದೇ ಆದೊಂದು ರೂಪ ವಿಶೇಷವನ್ನು ಕೊಟ್ಟಿದ್ದಾನೆ. ವಿವಾಹ, ದಾಂಪತ್ಯ, ದಾಂಪತ್ಯ ವಿಚ್ಛೇದ, ವೈಧವ್ಯ ಇತ್ಯಾದಿ ಏರ್ಪಾಟುಗಳಿಂದ ನೈಸರ್ಗಿಕ ಪ್ರವೃತ್ತಿಗಳಿಗೂ ತನ್ನ ಕಾಲದ ಸಂಸ್ಕಾರದ ನಡವಳಿಕೆಗಳಿಗೂ ಒಂದು ಬಗೆಯ ಹೊಂದಿಕೆ ತರುವುದಕ್ಕೆ ಪ್ರಯತ್ನಿಸುತಿದ್ದಾನೆ. ಈ ಪ್ರಯತ್ನಗಳು ನೀತಿ, ಅನೀತಿಗಳ ಹಲವು ಪ್ರಶ್ನೆಗಳನ್ನು ಕೆರಳಿಸಿವೆ. ವೈಧವ್ಯ, ವ್ಯಭಿಚಾರ ಮೊದಲಾದ ಯಾತನೆಗಳನ್ನೂ, ಸಮಸ್ಯೆಗಳನ್ನೂ ಹುಟ್ಟಿಸಿವೆ. ಒಟ್ಟಿನಿಂದ ಮನುಷ್ಯನ ಸುಖಕ್ಕೆ ಕಾಮ, ಪ್ರೇಮಗಳು ಎಷ್ಟು ಕಾರಣವಾಗಿವೆಯೋ, ಅಷ್ಟೇನೆ ದುಃಖಕ್ಕೂ ಕಾರಣವಾಗಿವೆ.

— II —

ಇಲ್ಲಿನ ಕಥಾನಕದಲ್ಲಿ ಐವರು ತರುಣಿಯರ ವಾಸ್ತವಿಕ ಜೀವನವನ್ನು ಮೂಲವಸ್ತುವಾಗಿರಿಸಿಕೊಂಡು ಮಂಜುಳೆ, ವಿನತೆ ಮತ್ತು ಅಂಜಲಿ ಎಂಬ ಮೂವರು ಸ್ತ್ರೀ ವ್ಯಕ್ತಿಗಳ ಮೂಲಕ ಚಿತ್ರಿಸಿದ್ದೇನೆ. ಸಹಜ ಪ್ರೇಮದಿಂದ ನಿರಾಶೆಗೊಂಡು–ಮದುವೆಯೇ ಹುಳಿಯೆಂದು ತಿಳಿದವಳೊಬ್ಬಳು; ಮದುವೆಯೆಂಬುದೇ ಮೂರ್ಖತನವೆಂದು ಸಾರಿ, ಜೀವನದ ಭದ್ರತೆಗಾಗಿ ಮದುವೆಯಾದವಳೊಬ್ಬಳು, ತಾಯ್ತನವನ್ನು ಅದುಮಿ ಹಿಡಿದು ಕಣ್ಣೀರು ಕರೆದವಳೊಬ್ಬಳು, ವೇಶ್ಯೆಯ ಕುಲದಲ್ಲಿ ಹುಟ್ಟಿಯೂ ಮರ್ಯಾದವಂತ ಬಾಳಿಗಾಗಿ ಊರು ಬಿಟ್ಟೋಡಿದವಳೊಬ್ಬಳು, ಕಾದು, ಕಾದು, ಮದುವೆಯಾಗಿ ಗಂಡನನ್ನು ನಂಬಿ, ಅವನ ಸೆರೆಗೆ ಸಿಲುಕಿ–ತಪ್ಪಿತಸ್ಥಳಲ್ಲದಿದ್ದರೂ, ತಾನು ಜಾರೆಯೆಂದು ಬರೆದು ಕೊಟ್ಟವಳೊಬ್ಬಳು — ಹೀಗೆ ಐವರು ಸ್ತ್ರೀಯರು ಕೂಡಿ ಇಲ್ಲಿನ ಮಂಜುಳೆ, ವಿನತೆ, ಅಂಜಲಿಯರಾಗಿದ್ದಾರೆ. ಮರ್ಯಾದೆಯಿಂದ ಬಾಳಬೇಕೆಂಬ ಹಂಬಲ, ಒಲುಮೆ ಶೃಂಗಾರಗಳ ಹಂಬಲ, ನಿರಾತಂಕ ವಿಷಯ ಲಾಲಸೆಯ ಹಂಬಲ, ತಾಯ್ತನದ ಹಂಬಲ, ತಾನು ಒಂಟಿಯಾಗಿ ಸಾಯಬಾರದು ಎಂಬ ಹಂಬಲ–ಇವೆಲ್ಲ ಈ ಮೂರು ಜೀವಗಳಲ್ಲಿ ತುಳುಕಾಡಿ ಅವರ ಚರಿತ್ರೆಗಳನ್ನು ರೂಪಿಸುವುದು ಕಾಣಿಸುತ್ತದೆ. ಇಲ್ಲಿನ ಕೆಲವೊಂದು ಸನ್ನಿವೇಶಗಳು ಊಹೆಗೂ ಮೀರಿದ ಸತ್ಯಗಳಾಗಿವೆ. ಈ ಕಾದಂಬರಿಯ ಪಾತ್ರಗಳು — ಕಾಮ, ಪ್ರೇಮಗಳು ನಮ್ಮಲ್ಲಿ ಕೆರಳಿಸಬಹುದಾದಂಥ ಕೆಲವು ಪ್ರಶ್ನೆಗಳಿಗೆ ಬರಿಯ ಕೆಲವೊಂದು ಉತ್ತರಗಳನ್ನು ಮಾತ್ರ ಇಲ್ಲಿ ಸಲ್ಲಿಸುತ್ತವೆ. ಜೀವನ ಎಷ್ಟು ವಿವಿಧವೋ ಇವೇ ಪ್ರಶ್ನೆಗಳಿಗೆ ಪ್ರತ್ಯುತ್ತರಗಳೂ ಅಷ್ಟೇ ವಿವಿಧವಾಗಲು ಸಾಧ್ಯವಿದೆ.

ಪುತ್ತೂರು, ದ. ಕ.
15 – 5 – 53

**ಶಿವರಾಮ ಕಾರಂತ.**

# ಬತ್ತದ ತೊರೆ

## ಮೊದಲನೆಯ ಅಧ್ಯಾಯ

ನಂದಿನಿ, ಆಶಾ, ವಿನತೆ, ಮಂಜುಳೆ, ಮಾಧವಿ, ಊರ್ವಶಿ ಇವರೆಲ್ಲ ಸಹಪಾಠಿಗಳು; ಎಲ್ಲರಿಗೂ ವಿದ್ಯಾಭ್ಯಾಸದ ಒಂದು ಘಟ್ಟ ಮುಗಿದಿದೆ–ಎಂದರೆ ಈಗಷ್ಟೆ ಮುಗಿದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಅವರು ಮೇಲಕ್ಕೆ ಬಿದ್ದರೆ ಅದು ಮುಗಿದಂತೆಯೆ ಸರಿ. ಎಲ್ಲರೂ ಓದುವುದಕ್ಕೆ ಕಡಿಮೆ ಮಾಡಿದವರಲ್ಲ; ಅಭ್ಯಾಸದಲ್ಲಿ ಉದಾಸೀನರಾದವರಲ್ಲ; ಪುಸ್ತಕಕ್ಕೆ ಅಂಟಿಕೊಂಡ ಕೀಟಗಳೇ. ಉಪಾಧ್ಯಾಯರು ಕೊಟ್ಟ ಟಿಪ್ಪಣಿ, ಟೀಕೆಗಳು ಅವರೆಲ್ಲರ ಪಾರಾಯಣ ಪುಸ್ತಕ. ಆ ಮಟ್ಟಿಗೆ ಎಲ್ಲರೂ ಒಂದೇ. ಆದರೆ ಸ್ವಭಾವ, ವಯಸ್ಸುಗಳಲ್ಲಿ ಅಂತರವಿದೆ. ಅವರಲ್ಲಿ ವಯಸ್ಸಿನ ಅಂತರ ಕಡಿಮೆಯಾದರೂ ಸ್ವಭಾವದ ಅಂತರ ಬಹಳ. ಈಗ ಬೇಸಿಗೆಯ ಬಿಸಿಲಿನಲ್ಲಿ ಒಬ್ಬರು ಇನ್ನೊಬ್ಬರ ಮನೆಯನ್ನು ಹೊಕ್ಕು, ಒಬ್ಬರನ್ನೊಬ್ಬರು ಎಬ್ಬಿಸಿಕೊಂಡು ಗುಂಪುಗೂಡಿ ಹೊರಟ ಅವರು, ಹೊರಟದ್ದು ಶಾಲೆಗೆ. ಶಾಲೆಯಲ್ಲಿ ತಮ್ಮ ಕಟ್ಟಕಡೆಯ ಕೀರ್ತಿಯನ್ನು ಬೆಳಗುವುದಕ್ಕಾಗಿ. ಅಪೂರ್ವಕ್ಕೊಮ್ಮೆ ಅವರ ಶಾಲೆಯಲ್ಲಿ ಶಾಲಾ ವರ್ಧಂತಿ ಉತ್ಸವ ನಡೆಯುವುದರಿಂದ ಅದರಲ್ಲಿ ಭಾಗವಹಿಸುವ ತಯಾರಿ ಅವರದು. ಉಳಿದ ವಿದ್ಯಾರ್ಥಿಗಳು ಇವರಷ್ಟು ಸ್ವತಂತ್ರರಲ್ಲ. ಐದನೆಯ ಫಾರ್ಮಿನ ತನಕ ಓದುತ್ತಿರುವವರಿಗೆ–ಈಗಷ್ಟೆ ಪರೀಕ್ಷೆಯು ನಡೆಯುತ್ತಿದೆ. ಅವರು ಅತ್ತ ಅದಕ್ಕೂ ಗಮನ ಕೊಡಬೇಕು, ಇತ್ತ ವರ್ಧಂತಿಯ ಉತ್ಸವದಲ್ಲೂ ಭಾಗವಹಿಸಬೇಕೆಂದರೆ ತುಂಬ ಸಂಕೋಚ. ಇವರು ಹಾಗಲ್ಲ; ಒಮ್ಮತದಿಂದ ಹೊರಟಿದ್ದಾರೆ. ಹೀಗೆ ಆರು ಜನ ಶಾಲೆಯ ಹುಡುಗಿಯರು ಒಮ್ಮತವಾಗಿ ಹೊರಟಿದ್ದಾರೆಂದರೆ ಅದೂ ಸೋಜಿಗದ ಮಾತೇ. ಅವರಲ್ಲಿ ಎರಡು ಮೂರು ವರ್ಷ ಒಬ್ಬರಿನ್ನೊಬ್ಬರ ಮುಖ ಕಾಣ

ದವರುಂಟು; ತನಗೆ ಆಗದವರನ್ನು ಕುರಿತು 'ಅದು' 'ಇದು' ಎಂದು ಹೆಸರನ್ನೂ ಹೇಳಲಾರದ ವ್ರತಧಾರಿಗಳಿದ್ದಾರೆ. ಅವರಲ್ಲೊಬ್ಬಳಾದ ನಂದಿನಿ, ಉಳಿದ ಐವರಲ್ಲಿ ಎಂಟೆಂಟು ಬಾರಿ ದೋಸ್ತಿ ಕಡಿದಿದ್ದಾಳೆ; ದೋಸ್ತಿ ಕೂಡಿಸಿದ್ದಾಳೆ. ಅವಳ ಮಾತನ್ನು ಕೇಳದಂಥವರ ವಿಷಯದಲ್ಲಿ ಅವಳಿಗೆ ವಿರೋಧ. ಅವಳ 'ಹೊಸ ಸೀರೆಯ ಅಂಚು ಸ್ವಲ್ಪ ಊನವಾಗಿದೆ' ಎಂದವರೊಡನೆ ವೈರ. 'ನಿನ್ನ ಕೊರಳಿನ ಸರ ಅತಿ ಚೆನ್ನಾಗಿದೆ' ಎಂದರೆ ಸ್ನೇಹ. ತನ್ನ ಸ್ನೇಹಿತರಿಗೆ ಬೋಗರಿ ಹಣ್ಣು, ಪೆಪ್ಪರಮಿಂಟು, ಚೊಕಲೇಟು—ಏನಿಲ್ಲವಾದರೆ ಹುರಿದ ಹುಣಸೆಯ ಬೀಜ—ಇಷ್ಟನ್ನು ಮುಕ್ತಹಸ್ತದಿಂದ ದಾನ ಮಾಡುವವಳು ಅವಳೊಬ್ಬಳೇನೆ. ಊರ್ವಶಿ ಇನ್ನೊಂದು ಧ್ರುವ. ಅವಳು ಎಲ್ಲರೊಡನೆಯೂ ಮಾತನಾಡುತ್ತಾಳೆ; ತನಗೆ ಇಷ್ಟವಿಲ್ಲದವರನ್ನು ಕುಕ್ಕುವುದಕ್ಕಾದರೂ ಮಾತನಾಡಿಸುತ್ತಾಳೆ. ತನ್ನ ಸೀರೆಯು ಎಷ್ಟು ಬಡಕಲೇ ಇರಲಿ, ಅವಳ ಪಾಲಿಗೆ-ನಂದಿನಿ ತೊಟ್ಟು ಬರುವ ಸೀರೆಗಿಂತ, ಅವಳ ಅಣ್ಣ ಅತ್ತಿಗೆಗೆ ತಂದು ಕೊಟ್ಟ ಸೀರೆ ಮತ್ತೂ ಚೆನ್ನಾಗಿರುತ್ತದೆ. ಅವೆರಡನ್ನು ಕೊಂಡ ಅಂಗಡಿಯೂ ಒಂದೇ; ನಮೂನೆಯೂ ಒಂದೇ; ಬೆಲೆಯೂ ಒಂದೇ. ಅಲ್ಲದೆ ಊರ್ವಶಿಗೆ ಅತ್ತಿಗೆಯ ಮೇಲೆ ಹೆಚ್ಚಿನ ಪ್ರೇಮವೂ ಇಲ್ಲ. 'ನಂದಿನಿ ತೊಟ್ಟ ಸೀರೆಗಿಂತ ತಾನು ಚೆನ್ನಾದ ಸೀರೆ ನೋಡಿದ್ದೇನೆ' ಎಂದಾದರೂ ಅವಳಿಗೆ ಹೇಳಬೇಕು. ಅವಳು ಸದಾ ಬಾಯಲ್ಲೇನಾದರೂ ಮೆಲುಕಾಡುತ್ತಲೇ ಇರುವವಳು. ಆದರೆ ಒಬ್ಬರಿಗೂ ಪಾಲುಕೊಡುವ ಪುಣ್ಯಾಳಿಯನ್ನು ಕಲಿತವಳಲ್ಲ. ನಂದಿನಿ, ಊರ್ವಶಿ—ಇಬ್ಬರೂ ಹದಿನಾರು ವರ್ಷ ಪ್ರಾಯದವರು. ವಿಶೇಷ ಬುದ್ಧಿವಂತೆಯರಲ್ಲವಾದರೂ ಹೆಡ್ಡರೂ ಅಲ್ಲ. ಆಶಾ ತುಸು ಕುಳ್ಳಜೀವಿ. ತುಸು ದುರ್ಬಲ ಶರೀರಿ. ಅವಳಿಗೆ ಬಾಯಿ ತುಂಬ ಮಾತು ಬೇಕು. ಅವಳನ್ನು ಹೊಗಳಿವವರಿಗೆ ಏನನ್ನೂ ತಂದು ಕೊಡುತ್ತಾಳೆ. ತನ್ನದನ್ನು ಕೊಟ್ಟು 'ಅದು ಕಳೆದುಹೋಗಿದೆ!' ಎಂದು ಮನೆಯಲ್ಲಿ ನೆಪ ಹೇಳಿ, ಇನ್ನೊಂದಾದರೂ ತಂದಾಳು. ಅಂಥ ದಾನವನ್ನು ಎಷ್ಟೋ ಬಾರಿ ಊರ್ವಶಿಗೆ ಮಾಡಿದ್ದಾಳೆ. ಆದರೂ ಇದೇ ವರ್ಷದಲ್ಲಿ ಆಶೆ ಮತ್ತು ಊರ್ವಶಿಯರೊಳಗೆ ಆರು ತಿಂಗಳ ಮೌನ ವ್ರತ ನಡೆದಿತ್ತು. ಊರ್ವಶಿಯನ್ನು ಕೇಳಿದರೆ ಹೇಳುತ್ತಾಳೆ: 'ಆಸೆ ಅವಳ ಹುಟ್ಟುಗುಣ; ಅವಳ ತಂದೆ ತಾಯಿಗಳಿಗೆ ಅದು ಗೊತ್ತಿತ್ತು. ಅವರೇನು ತಿಳಿಯದವರಲ್ಲ—ಆಶಾ ಎಂದು ಹೆಸರಿಡಲಿಕ್ಕೆ. ನಿಜಕ್ಕೂ ಅವಳು

ಆಸೆಯ ಪಿನಾರಿ' ಎನ್ನುತ್ತಾಳೆ. ಅದೂ—ಆಶೆಯ ಬಣ್ಣದ ಪೆನ್ಸಿಲನ್ನು ಊರ್ವಶಿ ತೆಗೆದುಕೊಂಡು ಕಳೆದು ಹಾಕಿದ ಎರಡೇ ದಿನಗಳೊಳಗೆ.

ವಿನತೆ ಇನ್ನೊಂದು ಜಾತಿ; ತನ್ನ ಸಹಪಾಠಿಗಳೊಡನೆ ಮಿತವರಿತು ಮಾತನಾಡುವ ಶೀಲದವಳು. ಅವಳಿಗೆ ಈಗಾಗಲೆ ಹದಿನೇಳನೆಯ ವಯಸ್ಸು ತುಂಬಿದೆ. ಮೈ ಇನ್ನೂ ಒಂದೆರಡು ವರ್ಷ ಹೆಚ್ಚಿಗೆ ಬೆಳೆದಂತೆ ಕಾಣಿಸುತ್ತದೆ. ಲಕ್ಷಣಪೂರ್ವಕವಾದ ಮುಖ, ಕಾಂತಿಯುತವಾದ ಕಣ್ಣುಗಳು. ಆದರೆ ಎಲ್ಲದಕ್ಕೂ ತುಸು ಅಳುಕು ಅವಳಿಗೆ; ಅವಳ ಮಾತಿಗೆ ಅಪಾರ್ಥ ಕಲ್ಪಿಸುವವರೇ ಎಲ್ಲರು. ತಾನು ಮಾತನಾಡಿದರೆ ಏನಾದರೂ ನಿಷ್ಠುರಕ್ಕೆ ಕಾರಣವಾದೀತು ಎಂಬ ಅಂಜಿಕೆ ಅವಳಿಗೆ. ಹಾಗೆಂದು- ಹೊಲಿಗೆಯಲ್ಲಿ, ಚಿತ್ರ ಕೆಲಸದಲ್ಲಿ, ಹಾಡುಗಾರಿಕೆಯಲ್ಲಿ ಸಾಕಷ್ಟು ನುರಿತವಳು. ತಾನು ತಿಳಿದುದನ್ನು ಪರರಿಗೆ ಹೇಳಿಕೊಡಲು ಸಂಕೋಚವೂ ಇಲ್ಲ. ಅವಳ ಅಳುಕಿನ ಮುಖ್ಯ ಕಾರಣವೆಂದರೆ—ಬಾಯ್ದೆರೆದು ಹೇಳಬಹುದಾದ ತಂದೆಯೊಬ್ಬ ತನಗಿಲ್ಲವೆಂಬುದು. ಈ ನೋವನ್ನು ಹೈಸ್ಕೂಲ್ ತರಗತಿಗೆ ಬಂದ ಮೇಲೆ ಅವಳು ಚೆನ್ನಾಗಿ ಅರಿತುಕೊಂಡಿದ್ದಾಳೆ. ಅದಕ್ಕೊಂದು ಕಾರಣವೂ ಉಂಟು. ಅವಳ ತಮ್ಮ ರಾಮಕೃಷ್ಣ ಶಾಲೆಗೆ ಸೇರಿದ ಹೊಸತರಲ್ಲಿ, ಶಾಲೆಯ ದಾಖಲು ಪಟ್ಟಿಯಲ್ಲಿ ತಂದೆಯ ಹೆಸರನ್ನು ಕೊಡುವಾಗ 'ಆನಂದ ನಾಯಕ' ಎಂದು ಹೆಸರನ್ನು ಕೊಟ್ಟ. ಅದನ್ನೇ ಹೊಂಚುಹಾಕಿಕೊಂಡಿದ್ದ ಹುಡುಗರ ಬಾಯಿಂದ ಶಾಲೆಯಲ್ಲೆಲ್ಲ ಆ ಸುದ್ದಿ ಪಸರಿಸಿತು. ಅದು ನಂದಿಸಿಯ ಕಿವಿಯನ್ನೂ ಸೇರಿತು. ಆ ಒಂದು ವಿಚಾರದಲ್ಲಿ, ಅವಳ ಗೆಳತಿಯರೆಲ್ಲರು ಕೂಡಿ, ಅವಳನ್ನು ಬೆನ್ನ ಹಿಂದೆ ಪರಿಹಾಸ್ಯ ಮಾಡತೊಡಗಿದರು. ಆನಂದ ನಾಯಕರು ಮುದ್ದೂರಿನ ಸಂದು ಹೋದ ವ್ಯಾಪಾರಿಗಳೊಬ್ಬರು. ಅವರು ರಾಮಕೃಷ್ಣನಿಗೆ ತಂದೆಯಾಗಿದ್ದಂತೆ ವಿನತೆಗೂ ತಂದೆಯಾಗಿದ್ದುದು ನಿಜ. ಆದರೆ ಸೂಳೆಯೊಬ್ಬಳ ಮಗನಾಗಲಿ, ಮಗಳಾಗಲಿ ಜನ್ಮದಾತನನ್ನು ಶಾಲೆಯ ದಾಖಲೆಯಲ್ಲಿ ಹೆಸರಿಸುವುದು ಅಪರಾಧ ಎಂದು ಊರಿನ ಮಕ್ಕಳ ತಿಳುವಳಿಕೆ. ಊರ್ವಶಿಗೆ ನಾಲಗೆಯ ತೀಟೆ ಹೆಚ್ಚು. ವಿನತೆಯೊಂದು ದಿನ ಶಾಲೆಗೆ ಬರುತ್ತಿದ್ದಾಗ, ನಂದಿನಿಯನ್ನು ಕೆಣಕಿ, "ನೋಡು ನಿನ್ನ ಅಕ್ಕ ಬಂದಳು" ಎಂದು ಮೂದಲಿಸಿದಳು. ಆಕೆಯ ದಪ್ಪನಾದ ಬುದ್ಧಿಗೆ ಆ ಮಾತಿನ ಅರ್ಥ ಹೊಳೆಯಲಿಲ್ಲ. "ಅವಳಿಗೂ ನನಗೂ ಮಾತಿಲ್ಲದೆಯೆ ಒಂದು ವರ್ಷವಾಯಿತು" ಎಂದು

ಸೆಟೆದು ಉತ್ತರಿಸಿ ಹೋದಳು. ಆದರೆ ಊರ್ವಶಿ ಬಿತ್ತಿದ ಬೀಜ ಸಾಯದೆ ಅವಳ ಮನಸ್ಸಿನಲ್ಲಿ ಉಳಿಯಿತು. ಒಂದು ದಿನ ಅವಳಿಗೆ, ತನ್ನ ತೀರಿಹೋದ ತಂದೆ, ವಿನತೆಗೂ ತಂದೆಯಾಗಿದ್ದರು ಎಂಬ ತಿಳಿವು ಉಂಟಾಯಿತು. ಆ ದಿನ ಅವಳು ದುಃಖದಿಂದ ಅತ್ತುದೂ ಉಂಟು. ಅನಂತರ, ಪಾಠದ ವೇಳೆಯನ್ನು ಬಿಟ್ಟರೆ, ವಿನತೆ ಕುಳಿತಲ್ಲಿ ಅವಳು ಕುಳಿತಿರುವುದೆಂಬುದಿಲ್ಲ. ಏಕೋ, ಒಂದು ಬಗೆಯ ದ್ವೇಷ ಅವಳಲ್ಲಿ. ಒಂದು ವರ್ಷಕ್ಕೆ ಹಿರಿಯಳಾಗಿ ವಿನತೆ ಹುಟ್ಟಿ, ತನ್ನನ್ನು ಅವಮಾನಿಸಿದಳು ಎಂಬುದು ನಂದಿನಿಯ ಭಾವನೆ. ಆದರೆ ಇಂದು ಎಲ್ಲರಿಗೂ ಶಾಲೆಯ ಋಣ ಸಂದಿದೆ. 'ಇನ್ನು ತಾವೆಲ್ಲೋ, ತಮ್ಮ ಗೆಳತಿಯರೆಲ್ಲೋ! ಕೊನೆಯ ನಾಲ್ಕು ದಿನಗಳಲ್ಲಿ, ಹಳೆಯ ಹುಣ್ಣುಗಳನ್ನು ಉರಿಸಬಾರದು' ಎಂಬ ಸದ್ಭಾವನೆ ಅವರನ್ನು ತಿರುಗಿ ಜತೆಗೂಡಿಸುವುದಕ್ಕೆ ಕಾರಣವಾಗಿದೆ.

ಮಂಜುಳೆಯ ಸ್ವಭಾವ ಮತ್ತೊಂದು ತೆರ. ವಿನತೆಯಂತೆ ಅವಳಿಗೂ ಹದಿನೇಳು ವಯಸ್ಸು. ನಿಲುವು, ಗಾತ್ರಗಳಲ್ಲಿ ಅವಳಿಗಿಂತ ತುಸು ಚಿಕ್ಕವಳಾಗಿ ಕಾಣಿಸುತ್ತಾಳೆ. ಅರಸಿನವೊತ್ತಿದ ಬಿಳುಪು ಮೈಬಣ್ಣ; ಮಂದಹಾಸ ಪೂರಿತ ಮುಖ. ನಿತ್ಯ ಜೀವನದಲ್ಲಿ ನಿರಾಡಂಬರ ಉಡುಗೆ ತೊಡುಗೆಗಳಿಂದ ತೃಪ್ತಳಿದ್ದಂತೆ ಕಾಣುವ ಸ್ವಭಾವ. ಸಾಮಾನ್ಯವಾಗಿ ನಗುಮುಖದಿಂದಲೇ ಮಾತನಾಡುವಳಾದರೂ, ಒಮ್ಮೊಮ್ಮೆ ಅವಳಿಗೆ ಅಳತೆಗೆಟ್ಟ ಸಿಟ್ಟು, ಸೆಡವುಗಳು ಬರುವುದುಂಟು. ಶಾಲೆಯ ಆಟಪಾಠಗಳಲ್ಲೂ ಉತ್ಸಾಹಶೀಲೆ ಅವಳು. ಆದರೆ ಬಹುದಿನ ಬಾಳುವ ಉತ್ಸಾಹ ಯಾವುದೂ ಇಲ್ಲ. ಎಲ್ಲವನ್ನೂ ಕಲಿಯುವ ಆತುರವಿದೆ. ಬೇಗ ಕಲಿತು ಮುಗಿಸುತ್ತೇನೆಂಬ ವಿಶ್ವಾಸವಿದೆ. ಕಲಿತು ಪೂರ್ಣವಾಗುವುದರೊಳಗೆ, ಔದಾಸೀನ್ಯವೋ ವಿರಕ್ತಿಯೋ ಬಂದು ಬಿಡುತ್ತದೆ. ಬುದ್ಧಿಕೊಟ್ಟು ಕಲಿತರೆ ತರಗತಿಯಲ್ಲೇ ಮೊದಲಿಗಳಾಗುವ ಯೋಗ್ಯತೆ ಅವಳಿಗಿದೆ ಎಂದು ಅವಳ ಉಪಾಧ್ಯಾಯರುಗಳು ಅನೇಕ ಬಾರಿ ನುಡಿದಿದ್ದಾರೆ. "ಅಷ್ಟೆಲ್ಲ ಬುದ್ಧಿ ಖರ್ಚುಮಾಡಿ ಏನಾಗಬೇಕು?" ಎಂದು ತಿಳಿಯುವುದು ಮಂಜುಳೆಯ ಮನೋವೃತ್ತಿ. ಹೂವಿಂದ ಹೂವಿಗೆ ಹಾರುವ ಪತಂಗದಷ್ಟು ಸುಲಭ ತೃಪ್ತ ಮನಸ್ಸು ಅವಳದು. ಹೊಲಿಗೆಯಲ್ಲಿ ಪ್ರವೀಣೆ. ಮನಸ್ಸು ಬಂದರೆ ಯಾರಾರ ಮನೆಯ ಮಕ್ಕಳಿಗೆ ಬಟ್ಟೆ ಹೊಲಿದೂ ಕೊಡುತ್ತಾಳೆ. ಸಂಜೆಯಾಯಿತೆಂದರೆ ಆ ಮಕ್ಕಳನ್ನು ಹೊತ್ತು, ತನಗಿಲ್ಲದ ತಂಗಿ,

ತಮ್ಮಂದಿರ ಪ್ರೇಮವನ್ನೆಲ್ಲ ಅವರ ಮೇಲೆ ಸೂಸುತ್ತಾಳೆ. ಅವೇ ಮಕ್ಕಳು ನಾಲ್ಕು ದಿನದ ಸಲಿಗೆಯಿಂದ ಅವಳನ್ನು ಅರಸಿಕೊಂಡು ಬಂದರೆ "ಈಗ ಬರುತ್ತೇನೆ–ಇನ್ನೊಂದು ಕ್ಷಣದೊಳಗೆ" ಎಂದು ಹೇಳಿ ಹೊರಟು ಹೋದರೆ, ಮತ್ತೊಮ್ಮೆ ಆ ಮಕ್ಕಳನ್ನು ಕಾಣುವುದು ವಾರವೋ, ತಿಂಗಳೋ! ಆದರೆ ಊರ್ವಶಿಯಂತೆ ಯಾರನ್ನೂ ಅವಳು ಮೂದಲಿಸುವವಳಲ್ಲ. ಅವಳೇನಾದರೂ ಜಗಳ ಕಟ್ಟಿಕೊಂಡಿದ್ದರೆ, ಅದೂ ಅಲ್ಪ ಕಾಲದ ಜಗಳ, ಅದು ನಂದಿನಿಯೊಡನೆ ಮಾತ್ರ.

ನಂದಿನಿಗೆ ತನ್ನ ಮನೆಯವರು ಶ್ರೀಮಂತರು ಎಂಬ ಜಂಬ. ಈ ಆರು ಮಂದಿಯಲ್ಲೇ ಅವಳ ನೆಚ್ಚಿನ ಸ್ನೇಹಿತೆ ಎಂದರೆ ಮಾಧವಿ. ಮಾಧವಿಗೆ ಮನೆಯವರಿರಿಸಿದ ಹೆಸರು 'ಅಮ್ಮಣ್ಣಿ' ಎಂದು. ಅವಳ ಗೆಳತಿಯರು ಕರೆಯುವುದು 'ನಾರಾಯಣಿ' ಎಂದು. ಊರ್ವಶಿ ಹೇಳುವುದು 'ವೆಂಕಿ' ಎಂದು; ಶಾಲೆಯ ದಾಖಲೆಯಲ್ಲಿ ಮಾಧವಿ ಎಂದೇ ಇದೆ. ಹುಡುಗಿಯರ ಹರಟೆಯ ಬಾಯಲ್ಲಿ, ಎಷ್ಟೆಷ್ಟು ಅಪಹಾಸ್ಯದ ಹೆಸರುಗಳಿವೆಯೋ, ಅವುಗಳೆಲ್ಲ ಮಾಧವಿಯ ಕೊರಳಿಗೆ. ಆಕೆಯ ಕಾಯ ದೊಡ್ಡದು; ಎಲುಬೂ ದೊಡ್ಡವು. ಆಕಾರ ಮಾತ್ರ ಅನಾಕರ್ಷಕ. ಸ್ವಭಾವ ಮಾತ್ರ ಸಹನಶೀಲವೂ, ಸ್ನೇಹಪರವೂ ಆದುದು. ಅವಳೊಡನೆ ಪ್ರಯತ್ನಪೂರ್ವಕವಾಗಿ ವೈರ ಕಟ್ಟಿಕೊಳ್ಳುವುದಕ್ಕೂ ಕಷ್ಟವೆ. ಅವಳನ್ನು ಎಷ್ಟು ಬೈದರೂ ಅದು ಒಂದು ಕ್ಷಣಕ್ಕೆ. ಬೈದ ಗೆಳತಿಯ ಸೆರಗು ಅಸ್ತವ್ಯಸ್ತವಾದರೆ, ಕುಂಕುಮ ಧೂಮಕೇತುವಾದರೆ, ಶಾಯಿ ಚೆಲ್ಲಿದರೆ–ಎಲ್ಲ ಚಾಕರಿಯನ್ನು ಕೇಳದೆಯೆ ಅವಳಾಗಿ ಮಾಡುವವಳು. ಹೀಗಾಗಿ ಮಾಧವಿ ಶಾಲೆಯೊಳಗೆ ತನ್ನ ಸ್ನೇಹಿತೆಯರಿಗೆ ಪರಿಚಿತೆಯಾದಂತೆ ಅವರ ಮನೆಯವರಿಗೂ ಪರಿಚಿತಳು. ಯಾರೆಷ್ಟು ಬೈದರೂ, ಮೂದಲಿಸಿದರೂ ವಿನತೆಯ ಮನೆಗೆ ಇಂದಿಗೂ ಹೋಗಿ ಬರುತ್ತಿರುವವಳೆಂದರೆ ಅವಳೊಬ್ಬಳೇನೆ. ಈ ಹೊತ್ತು ತನ್ನ ಗೆಳತಿಯರನ್ನೆಲ್ಲ ಕೂಡಿಸಿಕೊಂಡು, ಮಧ್ಯಾಹ್ನದ ಎರಡು ಘಂಟೆಯ ಬಿಸಿಲಿಗೆ ರಾಮಯ್ಯ ಮಾಸ್ತರರು ನಡೆಯಿಸುತ್ತಿರುವ ನಾಟಕ ವ್ಯಾಸಂಗಕ್ಕೆ ಮುಂದಾಳು ಅವಳೇ. ನಾಟಕ 'ಸಾವಿತ್ರಿ ಸತ್ಯವಾನ್'. ಬಡಿದರೂ ಮರಳಿ ಬಡಿಯಲಾರದ ಮಾಧವಿ, ಎಲ್ಲರೂ ಬಿಟ್ಟಂಥ ಯಮನ ಪಾತ್ರಕ್ಕೆ ಆಯ್ಕೆಗೊಂಡವಳು. ಹುಡುಗಿಯರಿಂದಲೇ ಆ ನಾಟಕ ನಡೆಯಬೇಕಾಗಿದ್ದುದರಿಂದ, ಅಪಶ್ರುತಿಯಲ್ಲಿ ಹಾಡುವ

ಮಾಧವಿ ಯಮುನಾಗದೆ ಬೇರೆ ಗತಿಯಿರಲಿಲ್ಲ. ಮಂಜುಳೆ ಸಾವಿತ್ರಿಯಾಗುವವಳು. ಬೇಕೆಂದೇ ಊರ್ವಶಿಗೆ ನಾರದನ ಪಾತ್ರ ಕೊಟ್ಟಿದ್ದಾರೆ. ಚೆನ್ನಾಗಿ ಹಾಡಬಲ್ಲ ವಿನತೆ, ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಸತ್ಯವಾನ್ ಆಗುತ್ತಾಳೆ. ರಾಮಯ್ಯ ಮಾಸ್ತರರು ನಂದಿನಿಗೆ ಆ ಭೂಮಿಕೆ ಕೊಡುತಿದ್ದರೋ ಏನೋ, ಅಂತು ನಂದಿನಿ ದ್ಯುಮತ್ಸೇನಳಾಗಿದ್ದಾಳೆ. ಆಶಾ ಅಶ್ವಪತಿಯಾಗುವವಳು.

ಈ ಮಹಾನಾಟಕವು ಸಾಗ್ರ ಸಂಗೀತ ನಾಟಕ. ಸ್ವತಃ ರಾಮಯ ಮಾಸ್ತರರೇ ಅದನ್ನು ಬರೆದಿದ್ದರು; ಅವರೇನೆ ಅದಕ್ಕೆ ಸಂಗೀತ ಕೂಡಿಸಿದವರು. ನಾಳೆ ರಂಗ ಮಂಟಪಕ್ಕೆ ಅವರೇನೇ ಅದನ್ನು ತರುವವರು. ಈ ನಾಟಕ, ಇನ್ನೊಂದು ನಾಟಕದ ಜೊತೆಗೆ ರಂಗಭೂಮಿಗೆ ಬರಬೇಕಾದುದರಿಂದಲೇ ವರ್ಧಂತಿ ಉತ್ಸವ ಗೊತ್ತಾಗಿದೆ ಎಂದರೂ ತಪ್ಪಿಲ್ಲ. ಸಕಲ ವಿದ್ಯಾ ಪಾರಂಗತರಾದ ರಾಮಯ್ಯ ಮಾಸ್ತರರು ಮುದ್ದೂರು ಶಾಲೆಗೆ ವರ್ಗವಾಗಿ ಬಂದದ್ದು ಈ ವರ್ಷವೇ. ಅವರೆನ್ನುವಂತೆ "ಈ ಹೈಸ್ಕೂಲ್ ಇಷ್ಟೊಂದು ಸತ್ತ ಹೆಣವಾಗಿತ್ತೆಂದು ನನಗೆ ಗೊತ್ತೇ ಇಲ್ಲ" ಎಂದು ವಿಸ್ಮಯ ಪಟ್ಟಿದ್ದಾರೆ. ಅದರ ವರ್ಧಂತಿ ಉತ್ಸವ ಒಮ್ಮೆ ನಡೆದದ್ದು ಹತ್ತು ವರ್ಷಗಳ ಹಿಂದೆ; ಮಾಜಿ ಕಾಲದಲ್ಲಿ. ಈಗ ಆರೇಳು ವರ್ಷಗಳಿಂದ ಶಾಲೆಯ ಮುಖ್ಯೋಪಾಧ್ಯಾಯರಾಗಿ ಭೀಮರಾಯರು ಬಂದಿದ್ದಾರೆ. ತಮ್ಮ ಕೆಲಸ, ಶಾಲೆಯ ರಿಕಾರ್ಡುಗಳು, ಇಷ್ಟರ ಮಟ್ಟಿಗೆ ಹೊರತು ಅವನ್ನು ಬಿಟ್ಟು ಇನ್ನೊಂದು ಪ್ರಪಂಚವಿದೆ; ಮಕ್ಕಳಿಗೊಂದು ಸ್ವತಂತ್ರ ಜೀವನವಿದೆ—ಎಂದು ಅವರೆಣಿಸಿದವರಲ್ಲ. "ಅದೆಲ್ಲ ನನಗೆ ಯಾಕೆ? ವರ್ಧಂತಿ ಮಾಡಿದರೆ ಬಡತಿ ಕೊಡುತ್ತಾರೋ! ನನ್ನ ಕಾಲ ಹೀಗೆ ಹೋದರೆ ಸಾಕು. ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ. ಶಾಲೆಯ ಮಾಸ್ತರರು ಮನುಷ್ಯರೆಂದು ಊರವರೂ ಗಣಿಸಿಲ್ಲ; ಬೋರ್ಡಿನವರೂ ಮೊದಲೇ ಎಣಿಸಿಲ್ಲ. ನನ್ನ ಮೇಲೆ ಖರ್ಚು, ಶ್ರಮ ಎರಡೂ ಬೀಳದ ಹಾಗೆ ನೀವು ವರ್ಧಂತಿಯನ್ನೇ ಮಾಡಿ, ಶ್ರಾದ್ಧವನ್ನೇ ಮಾಡಿ—ನನ್ನ ಆಕ್ಷೇಪವಿಲ್ಲ" ಎಂದು ರಾಮಯ್ಯ ಮಾಸ್ತರರ ಉತ್ಸಾಹವನ್ನು ತಣಿಸುವ ಮಾತನ್ನು ಅವರು ಆಡಿದ್ದರು. ಆದರೆ ರಾಮಯ್ಯನವರೂ, ಇನ್ನೊಬ್ಬ ಸಹೋದ್ಯೋಗಿಗಳಾವ ಶೀನಪ್ಪ ಮಾಸ್ತರರೂ ಜಿಗಣೆಗಳಂತೆ ಕಾಡಿ, ಬೇಡಿ ತಮ್ಮ ಹಟ ಸಾಧಿಸಿದರು. ಹಾಗಾಗಿ ವರ್ಧಂತಿ ಉತ್ಸವ ನಡೆದೇ ನಡೆಯುತ್ತದೆ. 'ನಾಟಕ, ಗೀಟಕಗಳನ್ನು ಹುಡಿಹಾರಿಸುವ' ಜವಾಬ್ದಾರಿ ರಾಮಯ್ಯ

ಮಾಸ್ತರರದು. 'ವಂತಿಗೆ, ವರಾಡ' ಮೊದಲಾದ ತಾಪತ್ರಯದ ಕೆಲಸಗಳೆಲ್ಲ ಶೀನಪ್ಪ ಮಾಸ್ತರರದು.

ಶೀನಪ್ಪ ಮಾಸ್ತರರಿಗೆ ಅಂಥ ಚಟುವಟಿಕೆಗಳೆಲ್ಲವೂ ಬೇಕು. ಆದರೆ 'ಒಟ್ಟು ಮಾಡಿದ ಹಣದಲ್ಲಿ ಎಷ್ಟೋ ಅಂಶ ಕೈಗೆ ಅಂಟಿಕೊಳ್ಳುತ್ತದೆ' ಎಂದು ಅವರ ಸ್ನೇಹಿತರು ಬಲ್ಲರಾದರೂ, ಉಳಿದವರು ಅವರ ಉತ್ಸಾಹಕ್ಕೆ ತಡೆಯಾಗಲಿಲ್ಲ. "ಹೋಗಲಿ, ಅವರೇನೋ ಸ್ವಲ್ಪ ದುಡ್ಡು ತಿಂದು ಹಾಕುವುದು ಖಂಡಿತ; ದೊಡ್ಡ ಸಂಸಾರವಿದೆ. ಹಾಗೆಲ್ಲ ಲೆಕ್ಕಾಚಾರಕ್ಕೆ ಹೋದರೆ ಪ್ರಪಂಚ ನಡೆಯಲಾರದು" ಎಂಬ ಸಹಾನುಭೂತಿಯ ತೀರ್ಮಾನ ಉಳಿದ ಸಹಾಯಕ ಉಪಾಧ್ಯಾಯರಿಂದ ಬಂದಿತು. ಅಪೂರ್ವಕ್ಕೊಮ್ಮೆ ನಡೆಯಿಸುವ ವರ್ಧಂತಿ ಉತ್ಸವ, ಶಾಲೆಯ ಪಾಲಿಗೆ ನಿಜವಾದೊಂದು ಹಬ್ಬವೆನಿಸಿತು. ವಿವಿಧ ವಿನೋದಗಳು,ಸ್ಪರ್ಧೆಗಳು ಎಲ್ಲವೂ ಬೇಕೆಂದು ಗೊತ್ತಾಗಿ,ಒಮ್ಮೆಗೇ ಉಪಾಧ್ಯಾಯರ ವಿರಕ್ತ ಪ್ರಪಂಚವು ಇನ್ನೊಂದು ಬಗೆಯ ಚಟುವಟಿಕೆಯಲ್ಲಿ ಮುಳುಗಿತು. ರಾಮಯ್ಯ ಮಾಸ್ತರರಿಗೆ ಅದರಲ್ಲಿ ಅಹೋರಾತ್ರಿ ಕೆಲಸ. ಅವರ ಶ್ರಮ ತುಸುವಲ್ಲ. 'ಅವರು ಎಳೆಯರು; ಬೇಕಷ್ಟು ಕುಣಿದಾಡುವ ಶಕ್ತಿ ಅವರಿಗಿದೆಯೆಂದು' ಉಳಿದೆಲ್ಲ ಸಹಾಯಕರ ತೀರ್ಮಾನವಾಗಿತ್ತು. ಸಂಗೀತನಾಟಕ ಎಂದರೆ ಅವರಿಗೆ ಜೀವ; ತಬಲಾ ಹಾರ್ಮೋನಿಯಮ್‌ಗಳೆರಡನ್ನೂ ಸವಾರಿಮಾಡಬಲ್ಲ ಅವರಿಗೆ—ನಾಟಕದ ಹಾಡುಗಳೆಲ್ಲವೂ ಕಂಠಪಾಠ. ಸುಶ್ರಾವ್ಯ ಕಂಠವೊಂದಕ್ಕೇನೆ ಕೊರತೆ. 'ಬೇಕಾದರೆ ಒಂದು ಡಾನ್ಸ್ ಕೂಡಿಸುವ; ತಾಳಜ್ಞಾನವಿರುವವನಿಗೆ ಅದೇನು ಕಷ್ಟ' ಎಂದು ನುಡಿಯುವಷ್ಟು ಉತ್ಸಾಹಶೀಲರಾಗಿದ್ದರು ರಾಮಯ್ಯನವರು. ಅವರು ಒಂದೆರಡು ಡಾನ್ಸ್‌ಗಳನ್ನು ಸಿನೆಮಾಗಳಲ್ಲಿ ಕಂಡಿದ್ದಾರೆ. ಅವರ ಈ ಉತ್ಸಾಹಕ್ಕೆ ಬಂದ ಅಡಚಣೆಯೆಂದರೆ, ಮುಖ್ಯ, ಆಗಿನ ದಿನಗಳಲ್ಲಿ ಗೆಜ್ಜೆಕಟ್ಟಿ ಕುಣಿಯಲು ಸಿದ್ಧರಾಗಿರದ ವಿದ್ಯಾರ್ಥಿನಿಯರೇ.

ರಾಮಯ್ಯ ಮಾಸ್ತರರಿಗೆ ವಿನತೆಯ ಕುಲಗೋತ್ರಗಳು ತೀರ ಗೊತ್ತು. 'ಅವಳೇಕೆ ಕುಣಿಯಬಾರದು?' ಎಂದು ಅವರ ಮನಸ್ಸು ಹೇಳುತ್ತಿತ್ತು. ಆದರೆ ಅವರ ನಾಟಕದಲ್ಲಿ ಸತ್ಯವಾನ್ ಆಗುವುದಕ್ಕೇನೆ ಅಂಜಿದ ಅವಳು, ಕುಣಿತಕ್ಕೆ ಬರಲಾರಳು—ಎಂದು ಅವಳನ್ನು ಕೇಳದೆಯೆ ಇರಬೇಕಾಯಿತು.

ರಾಮಯ್ಯ ಮಾಸ್ತರರ ವಿಚಾರ ಇನ್ನೆಲ್ಲ ಸರಿಯೇ; ಹುಡುಗರನ್ನು

ಬಾಯಿ ಮಾತಿನಿಂದ ಮರುಳುಗೊಳಿಸಿ, ಚೇಷ್ಟೆ, ನಕಲಿ ಮಾಡಿ ತೋರಿಸಿ, ಒಂದುಗೂಡಿಸುವುದರಲ್ಲಿ ಅವರು ನಿಸ್ಸೀಮರು. ಆದರೆ ಅವರ ಒಂದೇ ಒಂದು ಕೊರತೆಯೆಂದರೆ—ವಾಚಾಳಿತನ. ಮಾಡುವುದೊಂದಾದರೆ ಹೇಳುವುದು ಹತ್ತು. ತನ್ನಿಂದಲೇ ಲೋಕ ಬೆಳಗಾಗುತ್ತದೆ-ಎಂಬ ಮಾತಿನ ಚಪಲ. ಅದಕ್ಕೆ ಸಮನಾಗಿ, ಉಳಿದವರಲ್ಲಿ ಅನಾಸಕ್ತಿ ಇದ್ದುದರಿಂದ, ಅವರಿಗೆ ವಿರೋಧವಿರಲಿಲ್ಲ. ಹೆಡ್‌ಮಾಸ್ಟರ್ ಭೀಮರಾಯರು ಅವರಿಗೆ ವಿನೋದಗಳ ಮಟ್ಟಿನ ಸರ್ವಾಧಿಕಾರವನ್ನು ಬಿಟ್ಟುಕೊಟ್ಟಿದ್ದಾರೆ. "ಒಂದು ಮಾತ್ರ ಹೇಳುತ್ತೇನೆ—ನಿಮಗೆ ಬೇಕಾದುದನ್ನು ಮಾಡಿಕೊಳ್ಳಿ; ಆದರೆ ಗಳಿಗೆ ಗಳಿಗೆಗೆ ಬಂದು ನನಗೆ ಕರಕರೆಯನ್ನು ಮಾತ್ರ ಕೊಡಬೇಡಿ" ಎಂದು ಅಪ್ಪಣೆಮಾಡಿದ್ದರು.

ರಾಮಯ್ಯನವರು ತಿಂಗಳ ಮುಂಚಿನಿಂದಲೇ ನಾಟಕ ತೊಡಗಿದರು. ಪರೀಕ್ಷೆ ಮುಗಿದ ವಿದ್ಯಾರ್ಥಿನಿಯರಿಂದ ಸಾವಿತ್ರಿ-ಸತ್ಯವಾನ್ ನಡೆಯುವುದರಿಂದ, ಅವರೆಲ್ಲರು ವೇಳೆಗೆ ಬಂದು, ಕಂಭದಂತೆ ನಿಂತು, ತಲೆ ಅಲ್ಲಾಡಿಸಬಲ್ಲರಾದುದರಿಂದ, ಅವರ ಶ್ರಮ ಕಡಿಮೆ. ಆಡುವ, ಹಾಡುವ ಪದ್ಯಗಳಿಗೆ ಸಮನಾಗಿ—ಕೇವಲ ಕೈಗಳಿಂದ ವಿವಿಧ ರೀತಿಯಲ್ಲಿ ಮೊಳಹಾಕುವ 'ಹಾವ'ಗಳನ್ನಿಷ್ಟು ಹೇಳಿಕೊಟ್ಟರಾಯಿತು. ವ್ಯಾಸಂಗದಲ್ಲಿ ಮಂಜುಳೆ, ಮಾಧವಿ ಇಬ್ಬರೂ—ಹೀಗೆ ಮೊಳಹಾಕಲು ಹಿಂಜರಿದರಲ್ಲ. ಮಾಧವಿ ಮೊಳ ಹಾಕಿದರೆ ಮಾತ್ರ ಕರಾಳವಾಗಿಯೇ ಕಾಣಿಸುತ್ತಿತ್ತು, ಆಗ ಉಳಿದ ಹುಡುಗಿಯರಿಗೆ ಅದನ್ನು ನೋಡಿ ನಗು ತಡೆಯುವುದು ಕಷ್ಟವಾಗುತಿತ್ತು. ಅವರು ನಕ್ಕರೆ ರಾಮಯ್ಯನವರು ಸಟಕ್ಕನೆ 'ಹೌದು, ಅವಳು ಸಹ ನಿಮ್ಮಂತೆಯೇ ಕಂಭದ ಹಾಗೆ ನಿಲ್ಲಬೇಕೆಂದು ನಿಮ್ಮ ಯೋಚನೆಯಲ್ಲವೇ?' ಎಂದು ಉಳಿದವರನ್ನು ಗದರಿಸುತ್ತಾರೆ. ಅನಂತರ ಮಾಧವಿಯ ಸಹಸ್ರನಾಮ ಮಾಲೆಯಲ್ಲಿ 'ಕೈ ಕಂಭ' ಎಂದು ಅವಳಿಗೆ ಒಂದು ಹೊಸ ಹೆಸರು ಈ ನಾಟಕದ ಅಭಿನಯದಿಂದಾಗಿ ದೊರೆಯಿತು.

ಇತ್ತ ಹುಡುಗರ ಗುಂಪೊಂದಿದೆಯಲ್ಲ. ಅವರೂ ರಾಮಯ್ಯನವರ ನೇತೃತ್ವದಲ್ಲಿ ಇನ್ನೊಂದು ನಾಟಕವನ್ನು ಆಡುವವರು. 'ಸಾಮಾಜಿಕ ನಾಟಕ ಬೇಕು' ಎಂದು ಕೂಗಿಕೊಂಡು—ಕೊನೆಗೆ "ವಿಷಮ ವಿವಾಹ"ಕ್ಕೆ ಕೈಯಿಕ್ಕಿದರು. ಅದರ ಹಾಡುಗಳೆಲ್ಲ ರಾಮಯ್ಯನವರಿಗೆ ಗಂಟಲ ನೀರು. ಶ್ರೀ ಗರೂಡ ಸದಾಶಿವರಾಯರ 'ತದ್ ಪ್ರತಿ ನಾನು' ಎಂದು ಅವರು ತಿಳಿದಿದ್ದುದರಿಂದ,

ಅಶೋಕ ಚಕ್ರವರ್ತಿಯ ಪಾರ್ಟು ಅವರಿಗೇನೆ. ಉಳಿದ ನಟವರ್ಗವೆಲ್ಲ ವಿದ್ಯಾರ್ಥಿಯರು. ಅವರಲ್ಲಿ ತರ ತರನ ವ್ಯಕ್ತಿಗಳಿದ್ದರು. ಎಸ್. ಎಸ್. ಎಲ್. ಸಿ. ಪರೀಕ್ಷೆ ಮುಗಿಸಿದ ಮನೋಹರನು ಅಶೋಕನ ಮಗ ಕಮಲಾಕರ; ರಾಣಿಯ ಪಾರ್ಟಿಗೆ ಅವರ ಗ್ರಹಚಾರಕ್ಕೆ ದೊರಕಿದ ಹುಡುಗ ಐದನೆಯ ಫಾರ್ಮಿನಲ್ಲೋದುವ ಸುಧಾಕರ. ಅವನಿಗೆ ಹಾಡಲು ಕಂಠವಿದೆ; ಮಾತು ಮಾತ್ರ ಕಲಿತು ಆಗಬೇಕು. ಆತ ಹುಡುಗನಾಗಿದ್ದರೂ ವೇಷ ಹಾಕಿದರೆ ಹುಡುಗಿಯಂತೆ ಕಾಣಿಸಬಲ್ಲ ಆಕಾರ ಅವನಿಗಿತ್ತು. ಅವನು ಪಠ್ಯಪುಸ್ತಕ ಬಿಟ್ಟು ನಾಟಕಕ್ಕಾಗಿ ತಲೆ ಕೆಡಿಸಿಕೊಳ್ಳುವವನಲ್ಲ; ತಾನಿಲ್ಲದೆ ಬೆಳಗಾಗದು ಎಂದು ತಿಳಿದವ. ಹೀಗಾಗಿ ಅವನ ಮತ್ತು ಕೆಳ ತರಗತಿಯ ಹುಡುಗರ ಸಲುವಾಗಿ ನಾಟಕದ ತಾಲೀಮು ಸಂಜೆಯ ಐದು ಘಂಟೆಯ ಬಳಿಕ್ಕ ನಡೆಯಬೇಕು. ಮಕ್ಕಳೆಲ್ಲರು ಕಾಫಿ ಕುಡಿದು ಬರುವಾಗಲೇ ತಡವಾಗುವುದರಿಂದ, ಹತ್ತು ಹದಿನೈದು ದಿನ ವ್ಯಾಸಂಗ ಕಳೆದ ಬಳಿಕ 'ಪಾರ್ಟು ಮಾಡುವವರಿಗೆ ಕಾಫಿ ಕೊಡುವ, ಏರ್ಪಾಟಾದ ಮೇಲೆ, ಪಾರ್ಟು ಕಲಿಯುವುದು ಮೆಲ್ಲಗಾದರೂ, ಹಾಜರಿಯು ಕ್ರಮಾಗತವಾಗುತ್ತ ಬಂದಿತು. ಅಲ್ಲಿಯ ತನಕ ಕಪ್ಪೆ ಮರಿಗಳನ್ನು ಒಂದೇ ಬುಟ್ಟಿಯಲ್ಲಿ ತುಂಬಿಸುವ ಕೆಲಸ ರಾಮಯ್ಯನವರಿಗೆ. ಆದರೆ ಅವರಿಗೆ ಸುಧಾಕರನಲ್ಲಿ ತುಂಬ ವಿಶ್ವಾಸ, ಪ್ರೇಮ; ಅವನಿಂದಲೇ ನಾಟಕ ಪೂರೈಸುತ್ತದೆ ಎನ್ನುತ್ತಾರೆ— ಅವರು. ಸುಧಾ ಮಾತ್ರ "ಮಾಷ್ಟ್ರೇ— ಪರೀಕ್ಷೆ ಮುಗಿದ ಮರುದಿನ ಒಂದೇ ಘಂಟೆಯಲ್ಲಿ ನಿಮ್ಮ ಪಾರ್ಟು ಬಾಯಿಪಾಠ ಮಾಡಿದರಾಯಿತಲ್ಲ! ಅದೇನು ಮಹಾ! ಈಗ— ಗ್ರಹಚಾರದ ನಿಮ್ಮ ನಾಲ್ಕು ಹಾಡು ಕಲಿತುಕೊಳ್ಳುತ್ತೇನೆ" ಎಂದು ಹಾಡನ್ನು ಹೇಳಿಸಿಕೊಂಡು, ಕೈಯಲ್ಲಿ ಪಾರ್ಟಿನ ಹಾಳೆ ಹಿಡಿದುಕೊಂಡು, ರಿಕಾರ್ಡಿಗೆ ಸಮನಾಗಿ ತಾಲೀಮು ನಡೆಯುವಾಗ ಮಾತನಾಡುತ್ತಿದ್ದಾನೆ. 'ಆದರೂ ನಾಟಕ ಪಥಪ್ರೋಶಿಯಾಗಲಾರದು' ಎಂದು ರಾಮಯ್ಯನವರ ಧೈರ್ಯ.

ಮನೋಹರನ ವಿಚಾರದಲ್ಲಿ 'ಅವನು ಬುದ್ಧಿವಂತ; ಆದರೆ ಅಪಾಪೋಲಿ' ಎಂದು ರಾಮಯ್ಯನವರ ಸ್ಪಷ್ಟ ಅಭಿಪ್ರಾಯ. ಅವನಿಗೆ ಜಂಬವೂ ಹೆಚ್ಚು. ಅಲ್ಲದೆ ಮನೆಯವರ ಅಂಕೆಯಿಲ್ಲದೆ ಸುಖವಾಗಿ ಬೆಳೆದ ಹುಡುಗ. ತಂದೆ ತಾಯಿಗಳಿರುವುದು ಹಳ್ಳಿಯಲ್ಲಿ; ಹಿರಿಯ ಮಗ; ಕೇಳಿದಷ್ಟು ಹಣ ಸಿಗುತ್ತದೆ. ನಾಲ್ಕು ಜನ ಮಿತ್ರರಿಗೆ ಕಾಫಿ ಕುಡಿಸಿ, ತಾನೂ ಕುಡಿದು, ಮೆರೆ

ದಾಡುವ ಸ್ವಭಾವ ಅವನದು. ಬುದ್ಧಿಯೂ ಚುರುಕಾಗಿದೆ. ಆದರೆ ಓದಿನಲ್ಲಿ ಅವನಿಗೆ ಆಸಕ್ತಿ ಕಡಿಮೆ. ಸೊಗಸಾದ ಮಾತುಗಾರ. ತಾಲೀಮು ತೊಡಗಿದಂದಿನಿಂದ ಶಾಲೆಯ ವಟಾರವನ್ನು ಬಿಟ್ಟೇಳದವನು ಎಂದರೆ ಅವನೊಬ್ಬನೇ ಸರಿ. ರಾಮಯ್ಯ ಮಾಸ್ತರರ ಹಲವು ಕೆಲಸಗಳಲ್ಲಿ ಅವನೇನೆ ಓಡಾಡುವ ಬಲಗೈಯ ಬಂಟನಿದ್ದಂತೆ ಇದ್ದಾನೆ. ಆದರೂ ದುಡುಕಿ ಒಂದಕ್ಕೊಂದು ಮಾಡಿಯಾನು–ಎಂದು ಮಾಸ್ತರರ ಭಯ.

ಎಪ್ರಿಲು ಮೊದಲನೆಯ ವಾರದಲ್ಲಿ ಪರೀಕ್ಷೆಗಳೆಲ್ಲ ಮುಗಿದು, ಹತ್ತನೆಯ ತಾರೀಖಿನ ದಿನ ವರ್ಧಂತಿ ಉತ್ಸವ ಎಂದು ನಿಶ್ಚಯವಾಯಿತು. ಭೀಮರಾಯರು ಆಸಕ್ತಿ ವಹಿಸಿದರು. ಅವರ ವಿದ್ಯಾಧಿಕಾರಿಗಳೇ ಅಧ್ಯಕ್ಷರಾಗುತ್ತಾರೆಂದ ಬಳಿಕ, ಎಲ್ಲ ವ್ಯವಸ್ಥೆಗಳೂ ಅಚ್ಚುಕಟ್ಟಾಗಿ ಆಗಬೇಕೆಂದು ನಿರ್ಣಯವಾಯಿತು. ಕಾರ್ಯಕ್ರಮದಲ್ಲಿ ಮೂರನೆಯ ಒಂದು 'ಮರಿ ನಾಟಕ'ವೂ ಒಳಗಿಂದೊಳಗೇನೇ ತಯಾರಾಗತೊಡಗಿತು. ರಾಮಯ್ಯ ಮಾಸ್ತರರ ನಾಟಕದಲ್ಲಿ ಸಂಗೀತ ಬಾರದವರಿಗೆ ಅವಕಾಶವಿರದಿದ್ದುದರಿಂದ, ಇನ್ನೊಂದು ಪಂಗಡ ಎದ್ದುನಿಂತಿತು. ಅವರಿಗೆ ಏನಾದರೂ ಮಾಡುವ ಹಟ; "ಫಾರ್ಸು" ತಮ್ಮದು ಎಂದರು. ಕೊನೆಗೆ 'ಎರಡು ನಾಟಕಗಳಿರುವಾಗ, ಮೂರನೆಯ ಒಂದು ಫಾರ್ಸು ಬೇಡ' ಎಂಬ ರಾಮಯ್ಯ ಮಾಸ್ತರವರ ಅಭಿಪ್ರಾಯದಿಂದಾಗಿ, ಆ ಮಕ್ಕಳ ಅಸಂತೃಪ್ತಿ ಹೆಚ್ಚಿತು.

ವರ್ಧಂತಿಯ ಮುಂಚಿನ ರಾತ್ರಿ "ಶಿಬಿರಾಗ್ನಿ" ಎಂದು ತೀರ್ಮಾನವಾಗಿತ್ತು. ಆದಿನ ಅಸಂತೃಪ್ತ ಪಂಗಡದ ಮಕ್ಕಳ ಸಂಪೂರ್ಣ ರಾಜ್ಯಭಾರ ನಡೆಯಿತು. ಅಲ್ಲಿ ನಾನಾ ರೀತಿಯ, ಫಾರ್ಸು, ಅಣಕವಾಡಗಳಾದುವು. ಅದನ್ನೆಲ್ಲ ಕಾಣುವಾಗ ಆ ಶಾಲೆಯಲ್ಲಿ ರಸಿಕರ ಹಿಂಡೇ ಇದ್ದಂತಿತ್ತು. ಕಟ್ಟಕೊನೆಗೆ "ವಾಲಿ ಸುಗ್ರೀವರ ಕಾಳಗ" ಎಂಬ ಯಕ್ಷಗಾನ ಆಟವೂ ಆ ಮಕ್ಕಳಿಂದ ನಡೆಯಿತು. ಶಾಲೆಯಲ್ಲಿ ಪೇಟೆಯ ಗಾಳಿ ಬೀಸಿದವರಿಗಿಂತಲೂ, ಹಳ್ಳಿಯ ಗಾಳಿ ಬೀಸಿದವರೇ ಅಧಿಕವಾಗಿದ್ದುದರಿಂದ, ಹಲವರು ಸೇರಿ ಆಡಿದ "ವಾಲಿ ಸುಗ್ರೀವ" ಆಟ ನಿಜಕ್ಕೂ ಚೆನ್ನಾಗಿತ್ತು. "ನಮ್ಮ ಮಕ್ಕಳು ಇಷ್ಟು ಚೆನ್ನಾಗಿ ಕುಣಿದಾರೆಂದು ನಾನು ತಿಳಿದಿರಲಿಲ್ಲ. ತಾವೇ ಕಷ್ಟಪಟ್ಟು ವೇಷ, ಕಿರೀಟ ಎಷ್ಟು ಚೆನ್ನಾಗಿ ಮಾಡಿದ್ದಾರೆ! ಭಾಗವತ,ಮದ್ದಲೆಗಾರರು ಯಾಕೂ ಬೇಡದ ಮಕ್ಕಳು ಎಂದು ನಾನು ತಿಳಿದಿದ್ದೆ. ಈಗ ನೋಡುವಾಗ

ಅವರು ಬಹಳ ಹುಷಾರಿದ್ದಾರೆ." ಎಂದು ಹೆಡ್ಮಾಸ್ಟರರಾದ ಭೀಮರಾಯರೇ ಹೇಳುವಂತಾಯಿತು. ಅತ್ಯಂತ ಉತ್ಸಾಹದಿಂದಾಡಿದ ಆ ಆಟವು, ಎಲ್ಲರ ಮನವೊಲಿಸಿದ್ದೇನೋ ನಿಜ. ಅಲ್ಲದೆ ಆ ರಾತ್ರಿಯ ಆಟ ಮುಗಿಯುತ್ತಲೇ ಶಾಲೆಯ ಹುಡುಗ ಹುಡುಗಿಯರೆಲ್ಲರು ಅಲ್ಲಿ ಬಂದು ತುಂಬಿದರು. 'ಚೆನ್ನಾಗಿತ್ತು' ಅನ್ನಲು ಭೀಮರಾಯರೂ ಬಂದಿದ್ದರು. ಯಾವುದೋ ಒಂದು ಮೂಲೆಯಲ್ಲಿ ನಿಂತ ಮಂಜುಳೆ ಆಗ "ಸರ್, ನಾಳೆಗೆ ಇದನ್ನು ಖಂಡಿತವಾಗಿಯೂ ಆಡಬೇಕು" ಎಂದಳು. "ನನಗೂ ಹಾಗೆನಿಸುತ್ತದೆ–ಡಿ. ಇ. ಓ. ಕಂಡು ಖುಶಿ ಪಟ್ಟಾರು" ಎಂದರು ಭೀಮರಾಯರು.

ಗ್ರಹಚಾರ ವಶಾತ್ ಆ ಆಟ ಮುಗಿಯುವ ತನಕ ಅಲ್ಲಿ ಕಾದು ನಿಂತಿರಲಾರದ ರಾಮಯ್ಯನವರು, ನಾಟಕಶಾಲೆಯನ್ನು ಕಟ್ಟುವ ಗಲಭೆಯಲ್ಲಿದ್ದರು. ಅವರಿಗೆ ಭೀಮರಾಯರ ಈ ತೀರ್ಮಾನ ತಿಳಿದುದು ಮರುದಿನ. "ಸರ್, ನಾಟಕದ ಸ್ಟೇಜಿನಲ್ಲಿ ಆಟ ಆಡಿ ಮರ್ಯಾದೆಗೆಡಿಸುವುದೇ?" ಎಂದು ಅವರು ವಾದಿಸಿದಾಗ, ಭೀಮರಾಯರು "ಹಾಗೆಂದರೇನು? ನಿಮ್ಮದೂ ಒಂದು ಆಟ; ಇದೂ ಆಟವೇ! ಅವರೂ ಚೆನ್ನಾಗಿ ಮಾಡುತ್ತಾರೆ. ಅವರೂ ನಮ್ಮ ಶಾಲೆಯವರೇ–ಅಲ್ಲದೆ ಡಿ. ಇ. ಓಗೆ ಇದೆಲ್ಲ ಖುಶಿ" ಎಂದಾಗ ರಾಮಯ್ಯನವರ ದಮ್ಮು ನಿಂತುಹೋಯಿತು. ಮನಸ್ಸಿನಲ್ಲೇ ಅವರೆಣಿಸಿದರು: 'ಇದು ಈ ಶಾಲೆಯಲ್ಲಿ ನಾನಾಡಿಸುವ, ಕಟ್ಟಕಡೆಯ ನಾಟಕ. ನಾಟಕ ಏನು, ಬಯಲಾಟವೇನು ಎಂಬ ವ್ಯತ್ಯಾಸ ತಿಳಿಯದವರಿಗಾಗಿ, ನಾನಿನ್ನು ನೇಣುಹಾಕಿಕೊಳ್ಳಲಾರೆ." ಎಂದಂದರು. ಅವರ ಮರುಕದಲ್ಲಿ ನಿಜಕ್ಕೂ ಸಹಭಾಗಿಯಾಗಿ "ಬೇಸರಮಾಡಿಕೊಳ್ಳಬೇಡಿ ಮಾಸ್ತರರೇ . . . . . .ನಮ್ಮ ಎರಡು ನಾಟಕಗಳು ಮುಗಿಯುವಾಗ, ಮಧ್ಯರಾತ್ರಿಯೇ ಕಳೆಯುತ್ತದೆ. ಅನಂತರ ಡಿ. ಇ. ಓ ಇವರ ಆಟವನ್ನು ಕುಳಿತು ನೋಡುತ್ತಾರೆಯೇ?" ಎಂದು ಸಮಾಧಾನ ಹೇಳಿದವನು ಮನೋಹರ.

ಈ ವಿಷಯವನ್ನು ಭೀಮರಾಯರ ತಲೆಯಲ್ಲಿ ತುರುಕಿದವಳು "ಮಂಜುಳೆ" ಎಂದು ರಾಮಯ್ಯನವರ ಕಿವಿಗೆ ದೂರು ಬಿದ್ದಾಗ, ಅವರು "ಅವಳಿಗೆ ದುರಹಂಕಾರ! ಅವಳ ಅಹಂಕಾರಕ್ಕೆ ತಕ್ಕ ಪಾರ್ಟ್ ಆಗುತ್ತದೆ ಇವತ್ತು" ಎಂದು ಅವಳ ಪಾತ್ರದ ಭವಿಷ್ಯವನ್ನು ಕುರಿತು ಶಾಪವನ್ನೂ ಕೊಟ್ಟರು.

ಮನಸ್ಸಿನ ಆತುರದ ವೇಗಕ್ಕೆ ಸರಿಯಾಗಿ, ವರ್ಧಂತಿಯ ದಿನ ಉದಯಿಸಿತು. ರಾಮಯ್ಯ ಮಾಸ್ತರರ ಮನಸ್ಸು ಮುನಿದಿದ್ದರೂ, ಕೊನೆಯ ಗಳಿಗೆಯ ತನಕವೂ ಮಾಡಬೇಕಾದ ಕೆಲಸಗಳಿದ್ದುದರಿಂದ, ಚಿಂತೆಗೆ ಅವಕಾಶವಿರಲಿಲ್ಲ. ಹೀಗೆ ಅವಕಾಶ ಸಾಲದುದರಿಂದಲೇ, ನಾಟಕದ ಪ್ರಥಮ ಪ್ರಯೋಗ ಅದೇ ರಾತ್ರಿ ನಡೆಯಬೇಕಾಗಿತ್ತು. ಅದೂ ಅಲ್ಲದೆ, ತಮ್ಮ ಪ್ರಯೋಗದಿಂದ ಒಮ್ಮೆಗೇ ಊರನ್ನು ದಂಗುಬಡಿಸುತ್ತೇವೆ—ಎಂಬ ಒಣ ಜಂಬ ಹೊಸಬರಲ್ಲಿ ಸೇರಿರುವುದು ಸಹಜ. ಆ ದಿನದ ತನಕ 'ಪ್ರಾಮ್ಟಿಂಗ್' ಕೆಲಸ ತಾವಾಗಿ ನಡೆಯಿಸಿದ ರಾಮಯ್ಯನವರು, ಆ ಹೊಣೆಯನ್ನು ಸ್ವಲ್ಪ ಮಟ್ಟಿಗೆ ಮನೋಹರನಿಗೂ, ಬಹುಮಟ್ಟಿಗೆ ಶೀನಪ್ಪಮಾಸ್ತರರಿಗೂ ವಹಿಸಿಕೊಟ್ಟರು. "ಮೊದಲು ಹುಡುಗಿಯರ ನಾಟಕ, ಅನಂತರ ಹುಡುಗರದ್ದು. ನಾವೆಲ್ಲರು ಸ್ಟೇಜ್ ಬಿಟ್ಟುಕೊಟ್ಟ ಮೇಲೆ, ಅವರ ವಾಲಿ ಸಂಹಾರವೋ, ರಾವಣಾಸುರ ವಧೆಯೋ ಯಾವುದೂ ಆಗಿಕೊಳ್ಳಲಿ" ಎಂದು ನುಡಿದರು. ಮಧ್ಯಾಹ್ನ ಮೂರು ಘಂಟೆಗೇನೇ ರಾಮಯ್ಯ ಮಾಸ್ತರರು ಬಣ್ಣಕ್ಕೆ ಕೈಯನ್ನದ್ದಿ ಕುಳಿತರು. ಶಾಲೆಯ ಮೂರು ಕೋಣೆಗಳು ಮೂರು ಪಂಗಡದವರಿಗೆ ಬಣ್ಣ ಬಳಿಸುಕೊಳ್ಳುವುದಕ್ಕೆ ಮೀಸಲಾಗಿದ್ದುವು. ಮೂರು ಘಂಟೆಯಿಂದಲೇ ಹೊರಗಿನ ಸಭೆಯು ಗದ್ದಲವನ್ನು ಮೀರಿಸುವ ಗದ್ದಲ ತೊಡಗಿತ್ತು. ಆ ಗದ್ದಲದ ಮಟ್ಟಿಗೆ, ನಾಟಕಗಳು ಕೊನೆಗಾಣುವ ತನಕ-ಅವನ್ನು, ಯಾರಿಂದಲೂ ತಡೆಯುವುದು ಶಕ್ಯವಿರಲಿಲ್ಲ. "ಸೈಲೆನ್ಸ ಪ್ಲೀಸ್"ಎನ್ನುವ ಗದ್ದಲವೇ ಉಳಿದ ಗದ್ದಲಗಳಿಗಿಂತ ಕಡಿಮೆಯಾಗಿರಲಿಲ್ಲ. ಸಂಜೆ ಐದು ಘಂಟೆಗೆ ಸ್ಟೇಜಿನಲ್ಲಿ ಉತ್ಸವ ತೊಡಗಿ, ಏಳು ಘಂಟೆಯ ತನಕ—ವರದಿ ವಾಚನ, ಉಪನ್ಯಾಸ, ಅಧ್ಯಕ್ಷವಾಣಿ, ಬಹುಮಾನ ವಿತರಣೆ—ಇವೆಲ್ಲ ಸಂಭ್ರಮದಿಂದಲೇ ಸಾಗಿದುವೆನ್ನಬೇಕು. ನಾಟಕ ನೋಡುವ ಆತುರದಿಂದ ವಿದ್ಯಾರ್ಥಿಗಳ ಬಂಧುಗಳು, ಮಿತ್ರರು, ಸಕುಟುಂಬ ಸಪರಿವಾರ ಸಮೇತರಾಗಿ ಚಿತ್ತೈಸಿದ್ದುದರಿಂದ-ಸಭೆಯಲ್ಲಿ ಏನೇನು ಆಗುತ್ತಿದೆ ಎಂಬುದರ ಪರಿಜ್ಞಾನ,ಮುಂದಿನ ಕುರ್ಚಿಯ ಸಾಲುಗಳಲ್ಲಿ ಕುಳಿತವರಿಗಷ್ಟೇ ಆಗಬಹುದು. ನಿಜವಾದ ಜೀವಕಳೆ ತುಂಬಿಕೊಂಡದ್ದು ನೇಪಥ್ಯ ಗೃಹಗಳಲ್ಲಿಯೇ.

ಹುಡುಗಿಯರು ಕ್ರಮ ತಪ್ಪದೆ ಸಮಯಕ್ಕೆ ಮುಂಚಿತವಾಗಿ ಬಂದಿದ್ದರು. ತಮ್ಮ ಮನೆಯ ಸೀರೆ ಆಭರಣಗಳನ್ನೆಲ್ಲ ಜಮಾಯಿಸಿ ತಂದಿದ್ದರು.

ಸಂಖ್ಯೆಯಲ್ಲಿ ಅವರು ಬರಿಯ ಆರೇಳು ಮಂದಿ ಮಾತ್ರ. ಆದರೆ ಅವರಿಗೆ ಬಣ್ಣ ಹಚ್ಚಿ ಮುಗಿಸುವಾಗ ಮೂರು ತಾಸಿನ ಕಾಲ ಸರಿದಿತ್ತು. ಅವರಲ್ಲಿ ಮಂಜುಳೆ, ವಿನತೆಯರು ತೊಂದರೆ ಕೊಟ್ಟವರಲ್ಲ. ವಿನತೆ ಸೀರೆ ಮಡಿಸಿ, ಧೋತ್ರ ಮಾಡಿ ಉಟ್ಟುಕೊಂಡು, ಮುಂದಲೆಗೆ ಜುಟ್ಟು ಕಟ್ಟಿ, ಮೈಮೇಲೆ ಶಾಲು ಹೊದ್ದು ಎಂದೇ ಕುಳಿತುಕೊಂಡಿದ್ದಳು. 'ಚಿನ್ನ ಗಿನ್ನ ಏನೂ ಹಾಕಿಕೊಳ್ಳುವುದಿಲ್ಲವೆ' ಎಂದು ರಾಮಯ್ಯ ಮಾಸ್ತರರು ಕೇಳಿದಾಗ "ಸತ್ಯವಾನ್ ವಟುವಲ್ಲವೇ? ಇಷ್ಟೇ ಹೆಚ್ಚು" ಎಂದು ಆಕೆ ನಕ್ಕು ಹೇಳಿದರೆ "ಛೆ, ಛೆ, ನಾಟಕವಲ್ಲವೋ ಇದು? ಪ್ರತಿಯೊಬ್ಬರೂ ಚೆನ್ನಾಗಿ ಕಾಣಿಸಬೇಕು" ಎಂದು ಅವರು ಉಪದೇಶಿಸಿ ಹೋದರು. ಮಂಜುಳೆ ತನ್ನ ಬಣ್ಣಕ್ಕೆ ಕಾದು ಕಾದು, ಆಗಾಗ ಕೊಟಡಿಗೆ ಬಂದು ಹೋಗುತ್ತಿದ್ದ ಮನೋಹರನನ್ನು ಬೇಡಿ, ಅವನಿಂದ ಬಣ್ಣ ಹಾಕಿಸಿಕೊಂಡಳು; ಹುಬ್ಬು ಹಚ್ಚಿಸಿಕೊಂಡಳು. ತುಟಿಗೆ ತಾನೇ ಇಷ್ಟು ಕೆಂಪನ್ನು ಹಚ್ಚಿಕೊಂಡು ಸಾಲಂಕೃತೆಯಾದಳು. ಅವಳ ನಿತ್ಯದ ಉಡುಗೆಗೂ, ಇಂದಿನ ಬೆಡಗಿಗೂ ಇರುವ ವಿಶೇಷ ಅಂತರ ಕುರುಡನಿಗೂ ಕಾಣಿಸಬಹುದು. ಹಾಗಾಗಿ ಪ್ರಾಮ್‌ಟಿಂಗ್ ಕೆಲಸ ಮಾಡಲಿರುವ ಮನೋಹರ. ನಾಲ್ಕು ನಾಲ್ಕು ಬಾರಿ ಅವಳ ಬಳಿಗೆ ಬಂದು "ಮಾತುಗಳು ಚೆನ್ನಾಗಿ ನೆನಪಿವೆಯಲ್ಲ! ಈ ಹಾಡಿನ ನಂತರ ಈ ಮಾತು; ಈ ಮಾತಿನ ನಂತರ ಈ ಹಾಡು" ಎನ್ನುತ್ತ, ಅವಳೊಡನೆ ಮಾತಿನ ಅವಕಾಶ ದೊರಕಿಸಿಕೊಳ್ಳುತ್ತಿದ್ದ "ಬೊಟ್ಟು ಸರಿಯಾಯಿತಲ್ಲ; ತಲೆಗೂದಲು ಕೆದರಿತಲ್ಲ" ಎಂದು ಅವಳ ಉಪಚಾರದಲ್ಲಿಯೂ ಆತುರನಾಗಿದ್ದ. ರಾಮಯ್ಯ ಮಾಸ್ತರರ ಜೀವ ತಿಂದವಳಲ್ಲಿ ಮೊದಲಿಗಳೆಂದರೆ 'ನಂದಿನಿ' ಯಾನೆ 'ದ್ಯುಮತ್ಸೇನ'. ಅವಳ ಕಂದು ಬಣ್ಣ ಕಡು ಕಂದು ಬಣ್ಣವಾದುದರಿಂದ, ಬಣ್ಣ ಹಾಕುವುದೂ ಕಷ್ಟವೆ! ಹಾಕಿದ್ದಕ್ಕೆಲ್ಲ ಅವಳ ಆಕ್ಷೇಪ. ಅವಳು ಕನ್ನಡಿ ಬಿಟ್ಟಗಳಿಗೆಯೂ ಇಲ್ಲ. ಉಡುಗೆ, ಮುಖ ವರ್ಣಿಕೆ, ಅಲಂಕಾರಗಳ ವಿಚಾರದಲ್ಲಿ ನಾಟಕದ ಕೊನೆಯ ತನಕವೂ ಅವಳ ಶುಶ್ರೂಷೆ ಮಾಡುವುದು ಮಾಸ್ತರರಿಗೆ ಸಾಕುಬೇಕಾಯಿತು. ನಾರದಳಾದ ಊರ್ವಶಿಯ ಜಂಬವೂ ಅದಕ್ಕಿಂತ ಕಡಿಮೆಯಾಗಿರಲಿಲ್ಲ. ಅವಳದು ಜೋಲಂಗಿಯ ಋಷಿ ಉಡುಗೆಯಾದರೂ, ಮನೆಗೆ ತಮ್ಮನನ್ನು ಕಳುಹಿಸಿ, ಬೇರೆ ಕನ್ನಡಿಯೊಂದನ್ನು ತರಿಸಿ, ಮುಖದೆದುರು ಸೂರ್ಯವಾದ್ಯದಂತೆ ಇರಿಸಿಕೊಂಡಿದ್ದಳು. ಈ ತಾಪತ್ರಯದಲ್ಲಿ ಆಕೆಗೆ ಹೇಗೋ

ಹೇಗೋ ಬಣ್ಣ ಬಳಿದು, ಅವಳು ಬೇಡೆಂದರೂ ಮುಖಕ್ಕೆ ಮಸಿಯಿಂದ ಮೀಸೆಗಳನ್ನು ಬರೆದರು. ಅನಂತರ ನೀಲವರ್ಣಕ್ಕೆ ಕೈ ಅದ್ದಿ, ಮಾಧವಿಯನ್ನು ಯಮುನನ್ನಾಗಿಸಲು ಹೊರಟರೆ, ಅಲ್ಲಿಗೂ ನಂದಿನಿ ಓಡಿಬಂದು "ನೋಡಿ ಸರ್; ತುಟಿಯ ಬಣ್ಣ ಮುಖ ತುಂಬ ಹರಡಿದೆ" ಎಂದು ಕಾಡಿದಾಗ "ಏ ಮಹಾರಾಯಿತಿ; ಎಲ್ಲವನ್ನು ಸರಿಮಾಡುತ್ತೇನೆ, ಸ್ಟೇಜಿಗೆ ಹೋಗುವ ಮುಂಚೆ ನೀವು ಸ್ವಲ್ಪ ನಿಮ್ಮ ನಿಮ್ಮ ಪಾರ್ಟು ಓದಿಕೊಂಡಿರಿ" ಎಂದರು. ಅಷ್ಟಕ್ಕೆ ನಂದಿನಿಯು ಗರ್ವ ಭಂಗವಾಗಿ ನಾಲ್ಕು ತೊಟ್ಟು ಕಣ್ಣೀರೂ ಹರಿಯಿತು.

ಎರಡನೆಯ ನೇಪಥ್ಯದಲ್ಲಿ—ಮನೋಹರ, ಸುಧಾಕರ ಮತ್ತಿತ್ತರ ವಿದ್ಯಾರ್ಥಿ ನಟರನ್ನು ಕೇಳುವವರಿಲ್ಲ. ಈ ವರೆಗೆ ಬಣ್ಣ ಏನೆಂದು ಮುಟ್ಟಿ ನೋಡದ ಶೀನಪ್ಪ ಮಾಸ್ತರರು, ತುಸು ಪ್ರಾಜ್ಞನಾದ ಮನೋಹರನ ಹೇಳಿಕೆಯಂತೆ ಹೇಗೋ ಹೇಗೋ ಕೆಲವರಿಗೆ ಬಣ್ಣವನ್ನು ಸವರಿದರು. ಅವರವರೇ ತಮಗೆ ತೋಚಿದ ಗಂಡುಡುಗೆ ಉಟ್ಟರು. ಸ್ತ್ರೀ ಪಾತ್ರಗಳದಷ್ಟೇ ತೊಂದರೆ. ಸುಧಾಕರ ರಾಣಿಯಾಗಬೇಕು. ಇನ್ನಿಬ್ಬರು ಸಖಿಯರಾಗಬೇಕು. ಅದಕ್ಕೆ ಸೀರೆ, ರವಕೆಗಳು ಬೇಕೆಂದು, ಅಲ್ಲಿ ಬಂದ ಮೇಲೆಯೇ ಅವರಿಗೆ ಗೊತ್ತು. ಮೊದಲೇ ಮನೋಹರ, ಮಂಜುಳೆಯನ್ನು ಆಶ್ರಯಿಸಿ ಎರಡು ಮೂರು ರವಕೆ, ಸಾದಾ ಸೀರೆಗಳನ್ನು ಬೇಡಿಕೊಂಡು ಬಂದಿದ್ದ. ಆದರೆ ರಾಣಿಗೆ ಬೇಕಾದ ಜರತಾರಿ ಸೀರೆಯನ್ನಾಗಲೀ, ರೇಶ್ಮೆ ಸೀರೆಯನ್ನಾಗಲೀ ಎಲ್ಲಿಂದ ತರಲಿ? ರಾಮಯ್ಯ ಮಾಸ್ತರರನ್ನು ಕೇಳಿದರೆ "ಸಾವಿತ್ರಿ–ಸತ್ಯವಾನ್ ನಾಟಕವಾದ ಮೇಲೆ ಸೀರೆಗಳ ಅಂಗಡಿಯನ್ನೇ ಇಡಬಹುದು. ಈಗ ನೀನು ಹೋಗು" ಎಂದು ಗದರಿಸಿದರು. ಮನೋಹರ ಯೋಚಿಸಿದ: 'ವೇಳೆ ಆಗಿದೆ. ಹೊರಗಣ ಸಭೆ ಮುಗಿದಿದೆ. ಬೇಗನೆ ನಾಟಕದ ರಾಣಿಯನ್ನು ತಯಾರಿಸದಿದ್ದರೆ ಇನ್ನಷ್ಟು ವಿಳಂಬವಾಗುತ್ತದೆ' ಎಂದು ಧೈರ್ಯಮಾಡಿ, ಆಚೀಚೆ ಕಣ್ಣು ಹಾಯಿಸಿದ. ನಂದಿನಿ ತಂದಿಟ್ಟ ಸೀರೆಗಳ ಭಂಡಾರದಿಂದ ಎರಡನ್ನು ಕದ್ದು ಸಾಗಿಸಿದ. ಸುಧಾಕರನ ರಾಣಿ ಪಾತ್ರವು ಅಸದೃಶವಾಗಿಯೇ ಆಯಿತು. ಸೀರೆ ಉಡಿಸುವಾಗಲೂ ತನ್ನ ಪಾತ್ರದ ಮಾತನ್ನು ನೋಡುತ್ತ ನಿಂತ ಅವನು, ಮಾತಿನ ಕಡೆಗೆ ಗಮನಕೊಟ್ಟದ್ದು ಸಾಲದೆಂಬುದು ಸ್ಪಷ್ಟ.

ಸರಿ; ಭೀಮರಾಯರು ಒಳಕ್ಕೆ ಬಂದರು; ರಾಮಯ್ಯ ಮಾಸ್ತರರನ್ನು

ಸಂಬೋಧಿಸಿ "ಡಿ. ಇ. ಓ.ಗೆ ಬೇಸರ ಬಂದಾಯಿತು. ಬೇಗ ಶುರುಮಾಡಿ" ಎಂದು ಆಜ್ಞಾಪಿಸಿದ ಮೇಲೆ, ತಬಲೆಯವರು, ಹಾರ್ಮೋನಿಯಮಿನವರು ರಂಗಮಂಟಪದ ಮುಂದೆ ಕುಳಿತು,ವಾದನಗಳನ್ನು ಆರ್ಭಟಿಸತೊಡಗಿದರು.

ಸಾಗ್ರ ಸಂಗೀತಮಯವಾದ ಸಾವಿತ್ರಿ ಸತ್ಯವಾನ್ ನಾಟಕ ಪ್ರಾರಂಭ ವಾಯಿತು. ನಾಟಕದ ಪಾತ್ರ ವರ್ಗದವರ ರೂಪ ಸಾಕಷ್ಟು ಚೆನ್ನಾಗಿತ್ತು. ಸಾವಿತ್ರಿ, ಸತ್ಯವಾನ್, ನಾರದರು ಚೆನ್ನಾಗಿಯೇ ನಟಿಸಿದರು; ಮಾತನಾಡಿ ದರು. ಅಂದಿನ ಸಾವಿತ್ರಿ ಸತ್ಯವಾನರ ಜತೆಯೂ ಚೆನ್ನಾಗಿತ್ತು. ಅಭಿನಯದಲ್ಲಿ ಸತ್ಯವಾನ್ ತುಸು ಅಳುಕಿದರೂ, ಮಾತಿನ ಭಾವವಾಗಲೀ ಹಾಡುಗಳಾಗಲೀ ಆಕರ್ಷಿತವಾಗಿದ್ದುವು. ಈ ನಡುವೆ ತನ್ನ ಪ್ರಾಮ್ ಟಿಂಗ್ ಅನಾವಶ್ಯಕ ವಾದುದನ್ನು ಕಂಡ ಮನೋಹರ, ಹೊರಗಿನ ಸುದ್ದಿಯನ್ನು ತರಿಸಿಕೊಂಡ. ಮಂಜುಳೆಯ ಬಳಿಗೆ ಬಂದು 'ಇದ್ದದರಲ್ಲಿ ನಿನ್ನ ಪಾತ್ರ ಬಹು ಚೆನ್ನಾಗಿದೆ ಯಂತೆ! ಕಳಪೆ ಎಂದರೆ ದ್ಯುಮತ್ಸೇನ. ಯಮ ಮಾತ್ರ ಏನಾಗುತ್ತದೋ!" ಎಂದು ಹೇಳಿಹೋದ. ರಾಮಯ್ಯ ಮಾಸ್ತರರಿಗೆ—ಯಾರ ನಂತರ ಯಾರು, ಎಲ್ಲಿಂದ ಎಲ್ಲಿಗೆ ಹೋಗಬೇಕು—ಎಂದು ದಾರಿ ತೋರಿಸುವ ಕೆಲಸ; ಅಳಿಸಿದ ಬಣ್ಣ ತಿರುತಿರುಗಿ ಹಚ್ಚುವ ಕೆಲಸ. ಅದರ ಎಡೆಯಲ್ಲಿ "ನನ್ನ ಸೀರೆಗಳಲ್ಲಿ ಎರಡು ಕಳವಾಗಿವೆ" ಎಂದ ನಂದಿನಿಯ ರೋಷಕ್ಕೆ ಸಮಾಧಾನವನ್ನು ಹೇಳುವ ಕೆಲಸ. ಅಷ್ಟಕ್ಕೆ ರಂಗ ಮಂಟಪದಲ್ಲಿ ಯಮನು ಬಂದೂ ಆಯಿತು. ಆಕೆ ತಾಳ ತಪ್ಪುತ್ತಾಳೆಂದು, ತಾಳದ ರಗಳೆಯಿಲ್ಲದ ಕಂದ ಪದ್ಯವೊಂದನ್ನು ಮಾಸ್ತರರು ಕಲಿಸಿಕೊಟ್ಟಿದ್ದರು. ಮಾಧವಿ, ಕಂಪೆನಿ ನಾಟಕಗಳ ರಾವಣ ನನ್ನೋ ಯಮನನ್ನೋ ಕಂಡಿರಬೇಕು. ನೀಲ ಬಣ್ಣ ಸವರಿದ ಅವಳ ರೂಪ ಮತ್ತಷ್ಟು ಭೀಕರವಾಗಿತ್ತು. ಬಾಯಿಂದ ಮಾತು ಭಯ ಭೀತಿಯಿಲ್ಲದೆ ಬರುತ್ತಿತ್ತು. ಯಕ್ಷಗಾನದ ಆರ್ಭಟೆಯಿಂದಲೇ ಕಂದ ಪದ್ಯ ಹೇಳಿದ ಅವ ಳಿಗೆ ಚಪ್ಪಾಳೆಯೂ ದೊರೆಯಿತು. ಚಪ್ಪಾಳೆ ತೊಡಗಿದ ಹುಡುಗರು ಮೂಲ ದಲ್ಲಿ ಅದನ್ನು ಲೇವಡಿಗೆ ತೊಡಗಿದ್ದರೂ ಸ್ವತಃ ಭೀಮರಾಯರೇ, 'ಯಮ ಚಿಂತೆಯಿಲ್ಲ' ಎನ್ನಬೇಕಾದರೆ, ನಾಟಕ ಚಂದವಾದ ಹಾಗೆಯೇ ಸರಿ.

ಅಂತು ನಾಟಕದ ಕೊನೆಯಲ್ಲಿ, ಸಾವಿತ್ರಿ ಸತ್ಯವಾನರ ಸಮಾಗಮ ತುಂಬ ಮನೋಹರವಾಗಿ ಕಾಣಿಸಿತು. ಜನರು ಅವರ ರೂಪಗಳಿಗೆ ಮೆಚ್ಚಿ ದರೋ ನಟನೆಗೋ—ಅದು ಬೇರೆಯೇ ಮಾತು.

ಎರಡನೆಯ ನಾಟಕವಾದ 'ವಿಷಮ ವಿವಾಹ'ದಲ್ಲಿ ರಾಮಯ್ಯ ಮಾಸ್ತರರ ಅಶೋಕನ ಪಾತ್ರಕ್ಕೆ ಇನ್ನೂ ಬಣ್ಣ ಬಳಿದಾಗಬೇಕು. ನುರಿತ ಅವರು ಹಾಗೂ ಹೀಗೂ ಕಾಲು ತಾಸು ವಿಳಂಬಿಸಿ, ವೇಷ ಧರಿಸಿಕೊಂಡು, ಸಿದ್ಧರಾದರು. ಆದರೂ ನಂದಿನಿಯು ಅವರನ್ನು ಕಾಡುವುದನ್ನು ಬಿಡಲಾರಳು. "ನಮ್ಮ ಬಣ್ಣ ತೆಗೆಯುವುದು ಯಾರು ಸರ್?" ಎಂದಳು ಒಮ್ಮೆ. "ನನ್ನ ಸೀರೆಯನ್ನು ಸುಧಾಕರ ಉಟ್ಟಿದ್ದಾನೆ" ಎಂದು ದೂರಿದಳು ಇನ್ನೊಮ್ಮೆ. "ಆ ಸೀರೆಗೆ ಬಣ್ಣವಾದರೆ ಅಮ್ಮ ಬಯ್ಯುತ್ತಾಳೆ" ಎಂದಳು ಮೂರನೆಯ ಬಾರಿ. ಅದನ್ನೆಲ್ಲ ಕೇಳುವ ವ್ಯವಧಾನ ಮಾತ್ರ ರಾಮಯ್ಯನವರಿಗಿರಲಿಲ್ಲ.

ಎರಡನೆಯ ನಾಟಕವೂ ತೊಡಗಿತು. ಬೆಣ್ಣೆಯ ಮುದ್ದೆಯ ಹಾಗೆ ಕುಳಿತ ಎರಡನೆಯ ರಾಣಿ ಇಲ್ಲವೆ 'ಸುಧಾಕರ'ನನ್ನು ಅಶೋಕ ನೋಡಿ, ಸಂಭೋಧಿಸಿ "ಸುಮುಗಳ ನೋಡು ಸುಮಶರನರಗಿಳಿ" ಎಂಬ ಹಾಡನ್ನು ಕಾಲು ತಾಸು ಹಾಡಿದರು ರಾಮಯ್ಯನವರು. ಅವರ ಅಭಿನಯ, ಮಾತುಗಾರಿಕೆ, ಹಾಡುಗಾರಿಕೆ ಎಲ್ಲವೂ ಸ್ವಾಭಿಮಾನಪೂರಿತವಾಗಿದ್ದುದರಿಂದ ಅತಿಯಾಗಿಯೇ ಇದ್ದುವು. ಸುಧಾಕರನ ರಾಣಿಯ ಪಾತ್ರ, ಮಾತು ಬಾರದೆಯೆ, ಅಳುಕು ಹೆಚ್ಚಿ, ಬರಿಯ ಗೊಂಬೆಯೊಂದನ್ನು ತಂದು ನಿಲ್ಲಿಸಿದ ಹಾಗಾಗಿತ್ತು. ರಾಜಕುಮಾರನ ಪಾತ್ರವನ್ನು ವಹಿಸಿದ ಮನೋಹರ ಇದ್ದುದರಲ್ಲಿಯೆ ಮಾತಿನ ಮರ್ಮವರಿತು ಕೆಲಸಮಾಡಿದ. ನೋಟಕ್ಕೂ ಸುಂದರನಾಗಿದ್ದ; ಸಭಾಕಂಪವೂ ಇದ್ದಿರಲಿಲ್ಲ. ಆದರೆ ಪಾತ್ರ ವಹಿಸುತ್ತ ಸಾಗಿದಂತೆ, ಶೃಂಗಾರ ತಿರಸ್ಕಾರದ ಈ ಭೂಮಿಕೆಗಿಂತ, ಶೃಂಗಾರಪೂರಿತವಾದ ಒಂದು ಭೂಮಿಕೆ ತನಗೆ ದೊರಕಿದ್ದರೆ, ಇದರ ಹತ್ತುಪಾಲು ಚೆನ್ನಾಗುತ್ತಿತ್ತು—ಎಂದು ಅವನಿಗೆ ತೋರದಿರಲಿಲ್ಲ. ರಂಗ ಮಂಟಪದ ಆಚೀಚಿನ ಪಕ್ಕಗಳಲ್ಲಿ ಅರ್ಧಬಣ್ಣ ತೆಗೆದ, ಏನೂ ಬಣ್ಣ ತೆಗೆಯದ ಹುಡುಗಿಯರು, ನಾಟಕ ನೋಡುವುದರಲ್ಲಿ ಆತುರರಾಗಿ ನಿಂತಿದ್ದರು. ಹೊರಗೆ ಜಾಗ ಸಿಗದೆಯೆ ಒಳಗೆ ತುಂಬಿಕೊಂಡ ಇತರ ವಿದ್ಯಾರ್ಥಿ ವರ್ಗವೂ ಅಲ್ಲಿತ್ತು. ಹೀಗಾಗಿ ಎರಡನೆಯ ನಾಟಕವು ಗೊಂದಲ ಪೂರಿತವಾಗಿತ್ತು. ನಾಟಕ ಮುಗಿಯುವಾಗ ರಾಮಯ್ಯ ಮಾಸ್ತರರು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ "ನಾನೇ ಭೂತ!" ಎಂದು ಗರೂಡ ಸದಾಶಿವರಾಯರನ್ನು ಅನುಕರಿಸಿ ಎಷ್ಟು ಆರ್ಭಟಿಸಿದರೂ, ಎರಡನೆಯ ನಾಟಕ ಕಳೆಗೊಳ್ಳಲಿಲ್ಲ. ಕೇಂದ್ರ ವ್ಯಕ್ತಿಯಾದ ಸುಧಾಕರನ ಗೊಂಬೆಯನ್ನು

ನಂಬಿ ಪಾರ್ಟ್ ಕೊಟ್ಟುದು ತಪ್ಪಾಯಿತು' ಎಂಬ ಪರಿಜ್ಞಾನ ನಮ್ಮ ಮಾಸ್ತರರಿಗೂ ಉಂಟಾಯಿತು. ಈ ನಾಟಕದ ವೇಳೆಯಲ್ಲಿ, ರಂಗಮಂಟಪವನ್ನು ಪಕ್ಕದಿಂದ ಕಣ್ಣು ಕೀಳದೆ ನೋಡಿದವರಲ್ಲಿ ಮಂಜುಳೆಯೊಬ್ಬಳು. ಮನೋಹರನ ಪಾತ್ರವನ್ನು ಅವಳು ಎವೆಬಿಡದೆ ಅಭಿಮಾನದಿಂದ ನೋಡಿದ್ದಳು. ಆತ ರಾಣಿಯ ಬಂಧಿಯಾಗಿ, ಅವಳ ಸೇಡಿಗೆ ಗುರಿಯಾದಾಗ ತುಂಬ ಅನುಕಂಪಗೊಂಡಳು. ಅವನ ಬಂಧ ವಿಮೋಚನೆಯಾಗಲು ತೀರ ಹಿಗ್ಗಿದಳು. ಆತ ಹೊರಗೆ ಬಂದಾಗ "ಮನು, ನಿನ್ನ ಪಾರ್ಟ್ ಮಾಸ್ತರರ ಪಾರ್ಟಿಗಿಂತಲೂ ಚೆನ್ನಾಗಿತ್ತು." ಎಂದು ದ್ವಿಗುಣಿತ ಉತ್ಸಾಹದಿಂದ ಅವನಿಗೆ ಅಭಿನಂದನೆ ಸಲ್ಲಿಸಿದಳು."ಹೌದೇ!" ಎಂದು ಆತನ ಬಾಯಿಯೂ ತೊದಲಿತು. ರಾಮಯ್ಯ ಮಾಸ್ತರರು ನಾಟಕ ಕೊನೆಗೊಳ್ಳುವಾಗ ತೀರ ಸೋತು ಸುಣ್ಣವಾಗಿದ್ದರು. ಕಿರುಚಿ, ಬೊಬ್ಬಿರಿದು, ದಣಿದು 'ಶುಂಗಳ' 'ಮಂಗಳ' ಎಂದು ಹೇಳಿ, ಎಲ್ಲರಿಂದಲೂ ಮಂಗಳ ಪದವನ್ನು ಹಾಡಿಸಿ, ಹೊರಗೆ ಬಂದು ಏಗುತ್ತಿರುವಾಗ, ಮಾಧವಿ ಅಲ್ಲಿಗೆ ಬಂದು, ಕರುಣೆಯಿಂದ ಒಂದು ರಟ್ಟಿನ ತುಂಡನ್ನು ಹಿಡಿದು, ಅವರಿಗೆ ಗಾಳಿಯನ್ನು ಬೀಸಿ ಉಪಚರಿಸಿದಳು. "ನೀವು ಥೇಟು ಗರೂಡ ಸದಾಶಿವರಾಯರ ಹಾಗೆಯೇ ಪಾತ್ರ ಮಾಡುತ್ತೀರಿ" ಎಂದು ಅವಳು ತನ್ನ ಗುರುಭಕ್ತಿಯನ್ನು ಸಲ್ಲಿಸಿದಳು. ಅವಳ ಸೌಜನ್ಯ, ತಮ್ಮ ಪರಿಶ್ರಮಕ್ಕೆ ತಕ್ಕುದಾದ ಕೃತಜ್ಞತೆ ಎಂದು ಅವರಿಗೂ ಹೊಳೆಯದಿರಲಿಲ್ಲ.

ಇನ್ನೆಲ್ಲಿನ ಅವಕಾಶ!ಆಗಲೇ ಚಂಡೆಯ ಧ್ವನಿಯೂ,ವಾಲಿ ಸುಗ್ರೀವರ ಆರ್ಭಟೆಗಳೂ ನೇಪಥ್ಯದಿಂದ ತೊಡಗಿಯೂ ಆಯಿತು. ಚಿಕ್ಕ ಹುಡುಗರೆಲ್ಲ ಬಯಲಾಟ ನೋಡುವುದಕ್ಕೆ ಸ್ಟೇಜನ್ನು ಬಂದು ನುಗ್ಗಿಯಾಯಿತು. ನಾಟಕ ಕಂಪೆನಿಯವರು ಜಾಗ ಬಿಟ್ಟು, ಬಣ್ಣ ತೊಳೆದು, ಈಚೆಗೆ ಬರುವುದರೊಳಗಾಗಿ, ಯಕ್ಷಗಾನ ಆಟದ ಕೋಲಾಹಲವೇ ಕೋಲಾಹಲ! ತಮ್ಮ ಮಕ್ಕಳ ಆಟವನ್ನು ನೋಡಿ ಹೊರಟ ಅನೇಕ ಹಿರಿಯರು ಈ ವೇಷ,ಆರ್ಭಟೆಗಳಿಗೆ ಮೋಹಿತರಾಗಿ, ತಿರುಗಿ ಬಂದು ಆಟವನ್ನು ನೋಡಲು ಕುಳಿತರು. ಅರ್ಧರ್ಧ ಬಣ್ಣ ಇನ್ನೂ ತಮ್ಮ ಕೈ ಮೈಗಳಿಗೆ ಅಂಟಿಕೊಂಡಿದ್ದರೂ, ಮೊದಲಿನ ಎರಡು ನಾಟಕಗಳ ದಳಗಳು ಸ್ಟೇಜಿನ ಎದುರು, ಜಾಗವಿಲ್ಲದಲ್ಲಿ ಜಾಗ ಮಾಡಿಕೊಂಡು ಕುಳಿತುಕೊಂಡುವು. ತಾವು ಅಲ್ಲಿಂದೆದ್ದು ಹೋದರೆ, 'ಇವರಿಗೆ ಹೊಟ್ಟೆಕಿಚ್ಚು!' ಎಂದು ಯಾರಾದರೂ ತಿಳಿಯಬಾರದು ಎಂಬುದ

ರಿಂದಲೇ ರಾಮಯ್ಯ ಮಾಸ್ತರರು ಅವರ ಜತೆಗೆ ತಾವೂ ಕುಳಿತಿರಬೇಕಾಯಿತು. ಯಕ್ಷಗಾನದಲ್ಲಿ ಅವರಿಗೆ ಎಂದೂ ಅಭಿಮಾನವಿರಲಿಲ್ಲ. ಈ "ಕಾಟು" ಮಕ್ಕಳ ಆಟವನ್ನು ನೋಡಿ ಅಂಥ ಅಭಿಮಾನ ಹುಟ್ಟುವುದೂ ಸಾಧ್ಯವಿಲ್ಲ. ಅವರು ತಮ್ಮ ಕತ್ತು ತಿರುಗಿಸಿ ಹಿಂದಕ್ಕೆ ನೋಡಿದರು. ಹನ್ನೊಂದು ಘಂಟೆಯಾಗಿತ್ತು. ಭೀಮರಾಯರು ಬಾಯಿ ಆಕಳಿಸಿ, ಚಿಟಿಕೆ ಹೊಡೆದು, ಆಟ ನೋಡಲು ಇನ್ನೂ ಕುಳಿತಿದ್ದರು. ಅವರ ಮಗ್ಗುಲಲ್ಲಿ ಡಿ. ಇ. ಓ ಸಾಹೇಬರಿದ್ದರಲಿಲ್ಲ. ರಾಮಯ್ಯಮಾಸ್ತರರು ಮನೋಹರನ ಕಿವಿಯಲ್ಲಿ "ಇವರಿಗೆ ಹಾಗೆಯೇ ಆಗಬೇಕು! ಈ ಡೊಂಬರಾಟ ನೋಡುವುದಕ್ಕೆ ಅವರಿಗೇನು ಬುದ್ಧಿ ಇಲ್ಲವೋ" ಎಂದು ನಕ್ಕು ನುಡಿದರು. ಮನೋಹರನೂ ಅದಕ್ಕೆ ನಕ್ಕ. ಚಂಡೆಯ ಧ್ವನಿಯಿಂದಾಗಿ ಎಲ್ಲರ ಗಮನ ರಂಗಸ್ಥಳಕ್ಕೆ ಸರಿಯಿತು. ಆಟ ತೊಡಗಿಬಿಟ್ಟಿತು.

ವಾಲಿ ಸುಗ್ರೀವಾದಿ ಕಪಿಸೇನೆ, ರಾಮ, ಲಕ್ಷ್ಮಣರು, ಭಾಗವತರು, ಮದ್ದಲೆಗಾರರು—ಎಲ್ಲರೂ ಹುಡುಗರೇ. ಬಯಲಾಟದ ವೇಷ ಭೂಷಣಗಳನ್ನು ಅನುಕರಿಸುವುದಕ್ಕೂ ಕಡಿಮೆಮಾಡಿರಲಿಲ್ಲ. ಮಾತುಗಾರಿಕೆ, ಹಾಡುಗಾರಿಕೆ, ಕುಣಿತಗಳಲ್ಲೂ ಸಾಕಷ್ಟು ಚೆನ್ನಾಗಿಯೇ ಮೆರೆದರು. ಆ ಎರಡು ತಾಸಿನ ಕೋಲಾಹಲ ಮುಗಿದು, ಜನರು ಮನೆಗೆ ಮರಳುವಾಗ, ಅವರ ಬಾಯಲ್ಲಿ "ಸಾವಿತ್ರಿ–ಸತ್ಯವಾನ್ ಚಿಂತೆಯಿಲ್ಲ. ವಾಲಿ ಸುಗ್ರೀವ ಪಷ್ಟ್." ಎಂಬ ಮಾತು ಬರುತ್ತಿತ್ತು. ಆ ಮಾತುಗಳನ್ನು ಆ ರಾತ್ರಿಯೇ ರಾಮಯ್ಯ ಮಾಸ್ತರರು ಕೇಳಿದ್ದರೆ ಏನು ಮಾಡುತ್ತಿದ್ದರೋ! ಮರುದಿನ ಅವರಾಗಿ 'ಹೇಗಿತ್ತು ನಮ್ಮ ನಾಟಕ!' ಎಂದು ಕೇಳಿದರೆ "ವಿಷಮ ವಿವಾಹ ಏನೇನೂ ಸಾಲದು" ಎಂದರು ಎಲ್ಲರು. 'ನಿಮ್ಮ ಪಾರ್ಟಾದರೂ ಚೆನ್ನಾಗಿತ್ತು' ಎಂದಿದ್ದರೆ, ರಾಮಯ್ಯ ಮಾಸ್ತರರಗಷ್ಟು ಸಮಾಧಾನವಾಗುತ್ತಿತ್ತು. ತನ್ನ 'ಪಶ್ಚಾತ್ತಾಪ'ದ ಮಾತುಗಳಿಂದ ಸಭೆ ಕರಗಿ ನೀರಾಗಬೇಕು—ಎಂದು ಅವರೆಣಿಸಿಕೊಂಡಿದ್ದರು. ಅವರ ಭೂಮಿಕೆ ಅಷ್ಟೇನೂ ಕೆಟ್ಟಿಲ್ಲವಾದರೂ, ಸಭೆಯಲ್ಲಿ ಸೇರಿದ ಮಕ್ಕಳ ಗುಜು ಗುಜು ಧ್ವನಿಯ ದೆಸೆಯಿಂದಾಗಿ ಯಾರ ಪಶ್ಚಾತ್ತಾಪ ಯಾರಿಗೂ ಕೇಳಿಸುವ ಹಾಗಿರಲಿಲ್ಲ. ರಾಮಯ್ಯ ಮಾಸ್ತರರು ತಮ್ಮ ಧ್ವನಿ ಕೆಡಿಸಿಕೊಂಡದ್ದೇ ಬಂದಿತು. ಇನ್ನು ಎಂಟು ದಿನಗಳ ತನಕ ಶುಂಠಿ, ಮೆಣಸಿನ ಕಾಳಿನ ಕಷಾಯ ಬೇಕು ಅವರ ಸ್ವರ ಚೇತರಿಸುವುದಕ್ಕೆ.

ವರ್ಧಂತಿ ಮುಗಿಯಿತು. ನಾಟಕದ ಬಟ್ಟೆಬರೆ, ದೀಪ, ಚಾಪೆಗಳನ್ನು ಅವರವರಿಗೆ ಮುಟ್ಟಿಸುವ ಉತ್ತರ ಕ್ರಿಯೆಯೂ ಆಯಿತು. ಶೀನಪ್ಪ ಮಾಸ್ತರರು ವಸೂಲು ಮಾಡಿದ ಕಾಸು, ಪೈಗಳಿಗೆ ಸಮನಾಗಿ "ಒಟ್ಟು ಜಮೆಯಾದ ಹಣ ಮುನ್ನೂರ ಹತ್ತು ರೂಪಾಯಿ ನಾಲ್ಕಾಣೆ. ಖರ್ಚು-ಮುನ್ನೂರ ಹದಿನೆರಡು ರೂಪಾಯಿ; ನನಗೆ ಏಳು ಪಾವಲಿ ಬರಬೇಕು." ಎಂದಾಗ ರಾಮಯ್ಯ ಮಾಸ್ತರರು "ನಮ್ಮ ಹೊಟೇಲಿನ ಬಿಲ್ ಸಂದಿದೆಯಲ್ಲ?" ಎಂದು ಕೇಳಿದರು. ಮೂವತ್ತಮೂರು ರೂಪಾಯಿ ಚಿಲ್ಲರೆ ಹಣ ತಮ್ಮ ಮಂಡಲದ ಹುಡುಗರ ಸಲುವಾಗಿ ರಾಮಯ್ಯ ಮಾಸ್ತರರು ಹೇಳಿ ತರಿಸಿದ ಕಾಫಿಯ ಲೆಕ್ಕಾಚಾರವು ಶೀನಪ್ಪ ಮಾಸ್ತರರ ದಾಖಲೆಯಲ್ಲೇ ಬಂದಿರಲಿಲ್ಲ. ರಾಮಯ್ಯನವರಿಗೆ ದಿಗಿಲಾಯಿತು. ಲೆಕ್ಕವನ್ನು ಎಷ್ಟು ಕೂಡಿಸಿ, ಕಳೆದರೂ, ಹೋಟೆಲಿನವನ ಹಣ ಬಾಕಿಯೇ. ಶೀನಪ್ಪ ಮಾಸ್ತರರ ಲೆಕ್ಕಾಚಾರ ಅಷ್ಟು ಚೊಕ್ಕವಾಗಿತ್ತು. ಅಷ್ಟು ಚೊಕ್ಕತನ ಅದಕ್ಕೆ ಬಂದದ್ದು—ಸ್ವಂತ ಅಂಗಡಿಯ ಸಾಲದಲ್ಲಿ ಐವತ್ತು ರೂಪಾಯಿ ತೀರಿಸಿದ ಮೇಲೆ. ಅದು ಅವರಿಗೊಬ್ಬರಿಗೆ ಮಾತ್ರ ತಿಳಿದಿದ್ದ ಸಂಗತಿ. ಭೀಮರಾಯರಲ್ಲಿ ದೂರು ಹೇಳಿದರೆ, "ಅದನ್ನೆಲ್ಲ ನೀವು ಮೊದಲೇ ಯೋಚನೆ ಮಾಡಬೇಕಿತ್ತು. ನನಗೆ ಅಂಥ ಕರಕರೆ ಹಚ್ಚಬೇಡಿ; ಹಾಸಿಗೆಗೆ ಸಮನಾಗಿ ಕಾಲು ಚಾಚಬೇಕೆಂದು ನಾನು ಮೊದಲೇ ಹೇಳಿದ್ದೆ" ಎಂದುಬಿಟ್ಟರು.

ವರ್ಧಂತಿಯಿಂದ ಪ್ರಾಪ್ತವಾದ ಒಂದು ಲಾಭವೆಂದರೆ ರಾಮಯ್ಯ ಮಾಸ್ತರರಿಗೆ ಶೀನಪ್ಪನವರ ಪ್ರಾಮಾಣಿಕತೆಯ ವಿಚಾರದಲ್ಲಿ ಅನುಮಾನ ಬಂದುದು. ಸ್ವತಃ ಅವರ ಕೈಯಲ್ಲಿಯೇ ದುಡ್ಡು ಬಂದದ್ದರೆ, ಈ ಹಣದ ಇಮ್ಮಡಿ ವೆಚ್ಚವಾಗುತ್ತಿತ್ತು. ಅದು ಹೇಗಿದ್ದರೂ, ಅಂಗಡಿಕಾರ ಕಾಫಿ ತಂದು ಕೊಟ್ಟದ್ದು ರಾಮಯ್ಯ ಮಾಸ್ತರರ ನಂಬಿಕೆಯಿಂದ. ಅವರಿಗುಂಟಾದ ಯಾತನೆಯನ್ನು ಉಳಿದ ಮಾಸ್ತರರು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಹಾಕಿಕೊಂಡವ 'ಅಪಾಪೋಲಿ'ಯಾದರೂ ಧಾರಾಳಿಯಾದ ಮನೋಹರ. ಅಂಗಡಿಕಾರನು ರಾಮಯ್ಯ ಮಾಸ್ತರರೊಡನೆ ಮಾತಾಡುವಾಗ ಬಹುವಚನದಿಂದ ಏಕವಚನಕ್ಕಿಳಿದುದನ್ನು ನೋಡಿ, ಅವನ ಲೆಕ್ಕಾಚಾರ ತಿರುಗಿ ಮಾಡಿ, ಲೆಕ್ಕದ ಹೆಚ್ಚುಕಡಿಮೆ ಸರಿಪಡಿಸಿ, ಅದನ್ನು ರೂಪಾಯಿ ಮೂವತ್ತಕ್ಕೆ ಇಳಿಸಿ, ದಾನಶೂರ ಕರ್ಣನಂತೆ ಮೂವತ್ತು ರೂಪಾಯಿಗಳ ದಂಡವನ್ನು ಮನೋ

ಹರನೇ ತತ್ಕಾಲಕ್ಕೆ ತೆತ್ತವನು. ಅಂದಿನಿಂದ ಮನೋಹರನೆಂದರೆ ರಾಮಯ್ಯ ಮಾಸ್ತರರಿಗೆ ಪಟ್ಟದ ಶಿಷ್ಯನಾದ. ಆತ ಪಾಸಾದರೆ ಮಂಗಳೂರಿಗೆ ಹೋಗಿ ಬಿಡುತ್ತಾನಲ್ಲ ಎಂಬುದೊಂದೆ ಬೇಸರ ಅವರಿಗೆ. ಶಾಲೆ ಮುಗಿದರೂ ನಾಟಕದಿಂದ ದೊರೆತ ಗೆಳೆತನದ ಸುಖವನ್ನು ಆಸ್ವಾದಿಸುವುದಕ್ಕೆ ಆತ ಎರಡು ದಿನ ಹೆಚ್ಚಾಗಿ ಮುದ್ದೂರಿನಲ್ಲಿ ಕುಳಿತು, ಅನಂತರ ತನ್ನ ಹಳ್ಳಿಗೆ ಹೋದ; ಅದೂ ಹಿರಿಯರು ಸಿಟ್ಟುಗೊಂಡಾರು ಎಂಬ ಭಯದಿಂದ. ರಾಮಯ್ಯ ಮಾಸ್ತರರೂ ಅವನೊಡನೆ ಹೋಗಿ ನಾಲ್ಕು ದಿನಗಳ ಕಾಲ ಇದ್ದು ಬಂದು, ಅನಂತರವೇ ತಮ್ಮ ಸ್ವಗ್ರಾಮಕ್ಕೆ ತೆರಳಿದರು.

ವರ್ಧಂತಿಯ ಒಂದು ನಾಟಕ ಮುಗಿಯಿತು. ಮನೋಹರನ ಮನೋವಿಲಾಸದಲ್ಲಿ ಇನ್ನೊಂದೇ ನಾಟಕ ತೊಡಗಿತು: ಅದಕ್ಕೆ ಪರಿಪೋಷಕವಾದ ಉಪಪಾತ್ರಗಳೂ ಸಿದ್ಧವಾಗುತ್ತ ಬಂದುವು.

---

# ಎರಡನೆಯ ಅಧ್ಯಾಯ

ನಾಟಕ ಮುಗಿದು, ಮಧ್ಯರಾತ್ರಿ ಕಳೆದ ಮೇಲೆ ಅದಕ್ಕೆ ಬಂದ ಹಿರಿಕಿರಿಯರೆಲ್ಲರು ತಂತಮ್ಮ ಮನೆಯನ್ನು ಹರ್ಷಚಿತ್ತರಾಗಿ ಸೇರಿದರು. ಅದರಲ್ಲಿ ನಾಟಕ ಭಾಗಿಗಳಾದ ಒಬ್ಬೊಬ್ಬರ ಮನೋವಿಲಾಸವು ಒಂದೊಂದು ತರನಾಗಿತ್ತು. ನಂದಿನಿಯ ಭೂಮಿಕೆ ಚೆನ್ನಾಗಿತ್ತೆಂದು ಅವಳ ತಾಯಿಯೇ ಹೇಳಿದ ಬಳಿಕ, ತುಸು ಅಹಂಭಾವ ಪ್ರೇರಿತಳಾದ ಆ ಮೊದ್ದು ಹುಡುಗಿಗೆ ಮಲಗಿ ಸಿದ್ದೆ ಹೋಗುವಾಗ ರಾಮಯ್ಯ ಮಾಸ್ತರರ ಮೇಲೆ ತುಂಬ ಅಸಮಾಧಾನ ಮೂಡಿತ್ತು. ತಾನು ಸಂಗೀತ ಶಿಕ್ಷಣ ಪಡೆಯುತಿದ್ದವಳು; ವಿನತೆ, ಮಂಜುಳೆಯರಿಗಿಂತ ಚೆನ್ನಾಗಿ ಹಾಡುತ್ತಿದ್ದೆ. ಅಷ್ಟೆಲ್ಲ ಪೇಚಾಟಪಟ್ಟು, ಬಣ್ಣ ಹಾಕಿಸಿಕೊಂಡು, ಉಜ್ಜಿ, ತೆಗೆದು, ತಿರುಗಿ ಹಾಕಿ ನಾಟಕಕ್ಕೆ ಹೋದರೆ, ಒಯ್ದ ಕೆಲವು ಬಟ್ಟೆಗಳನ್ನು ಬದಲಿಸಿ ಉಡುವುದಕ್ಕೂ ತನಗೆ ಅವಕಾಶವಿದ್ದಿರಲಿಲ್ಲ. ತನ್ನ ಪ್ರವೇಶದ ಎರಡು ದೃಶ್ಯಗಳಲ್ಲಿ ಇದ್ದ ಮಾತುಗಳೂ ಸ್ವಲ್ಪ. ತೀರ ಸಣ್ಣ ಪಾರ್ಟು ತನ್ನದು. ರಾಮಯ್ಯ ಮಾಸ್ತರರು ಕಡು ಪಕ್ಷಪಾತಿಗಳು. ಇನ್ನು ತಾನು ಚಿಕ್ಕ ಪುಟ್ಟ ಪಾರ್ಟುಗಳನ್ನು ಮಾಡಲೇಬಾರದು—ಎಂಬ ವಿಚಾರ ಸರಣಿ ಅವಳನ್ನು ಕಾಡುತಿತ್ತು.

ಊರ್ವಶಿಯ ನಿದ್ರೆಯು ಸುಖಸ್ವಪ್ನಗಳಿಂದ ಕೂಡಿತ್ತು. 'ನಿಜಕ್ಕೂ ತಾನು ನಾರದನಷ್ಟೇ ಬುದ್ಧಿವಂತೆ! ತನ್ನ ಒಂದು ಪಾತ್ರವೇ ನಾಟಕಕ್ಕೆ ಪೂರ್ಣ ಜೀವಕಳೆಯನ್ನು ಕೊಟ್ಟದ್ದು!' ಎಂದು ಯೋಚಿಸಿ ಹೊರಟ ಅವಳು, ತನಗೆ ತಿಳಿದ ಭಾಗವತದ ಇತರ ಕಥೆಗಳನ್ನು ನೆನೆದುಕೊಂಡು, ಅದರಲ್ಲಿಯೂ ನಾರದನಾಗಿ ನಟಿಸಿ, ಸ್ವಪ್ನ ವಿಜಯಿಯಾಗಿ ಮೆರೆದಾಡಿದಳು.

ಮನೆಗೆ ಬಂದ ಮಾಧವಿಯ ಮನಸ್ಸು ಮತ್ತೊಂದೇ ತರ. ಅವಳಿಗೆ ತನ್ನ ಯಮನ ಬಾಧೆ ಇಷ್ಟಿಷ್ಟೂ ಕಾಡುವಂತಿರಲಿಲ್ಲ; ಆಡುವ ಮನಸ್ಸಿಗಿಂತ, ಅವಳ ನೋಡುವ ಕಣ್ಣು ಹೆಚ್ಚಿನದು. ನಿಜಕ್ಕೂ ರಂಗಭೂಮಿಗೆ ಆರ್ಭಟಿಸಿ ಯಮನಂತೆ ಬಂದ ಅವಳ ಮನಸ್ಸು, ರಂಗಮಂಟಪದಲ್ಲಿ, ಮೃತಿಯನ್ನೈದಿದ ಸತ್ಯವಾನನಿಗಾಗಿ ಮರುಗುತ್ತಲಿತ್ತು. ಪತಿಗಾಗಿ ಅಳುವ ಸಾವಿತ್ರಿಗಾಗಿ ಕಳವಳಗೊಳ್ಳುತ್ತಿತ್ತು. ಆ ಎರಡು ಚೆಲುವಿನ ಪಾತ್ರಗಳನ್ನು

ಧರಿಸಿದ ತನ್ನ ಗೆಳತಿಯರಿಬ್ಬರ ಸಲುವಾಗಿ ಆಕೆ ಹೆಮ್ಮೆ ಪಡುತ್ತಿದ್ದಳು. ಶವ
ದಂತೆ ಮಲಗಿದ ಸತ್ಯವಾನನಾದ ವಿನತೆಯ ಸಾವಿನ ನೆನಪುಂಟಾದಾಗ
‘ಅಯ್ಯೋ! ಪಾಪ!’ ಎನಿಸಿತು. ರಾತ್ರಿಯುದ್ದಕ್ಕೂ ‘ವಿನತೆ ಸತ್ತಳು; ತಾನು
ವೈದ್ಯಳಾಗಿ ಅವಳನ್ನು ಗುಣಪಡಿಸಲು ಎಷ್ಟು ಪ್ರಯತ್ನಿಸಿದರೂ ಆಗಲಿಲ್ಲ’
ಎಂಬ ಅನುಕಂಪದ ಭೀಕರ ಚಿತ್ರ ಅವಳನ್ನು ಕಾಡುತ್ತಿತ್ತು. ರಾಮಯ್ಯ
ಮಾಸ್ತರರು ಅಶೋಕನಾಗಿ ಬಂದುದು, ಪಶ್ಚಾತ್ತಾಪ ಪಟ್ಟುದು, ಇದೊಂದರ
ನೆನವರಿಕೆಯೂ ಉಂಟಾಗದೆ, ಕೇವಲ ತನ್ನ ಗೆಳತಿ ವಿನತೆಯ ಕಲ್ಪನೆಯ
ಸಾವು ಅವಳನ್ನು ಕಾಡುತ್ತಿತ್ತು. ಮರುದಿನ ಬೆಳಿಗ್ಗೆ ಮುಖ ತೊಳೆದ ಮೇಲೆ
ಅವಳು ಮಾಡಿದ ಮೊದಲ ಕೆಲಸವೆಂದರೆ, ಆಕೆಯ ಮನೆಗೆ ಓಡಿ ಹೋಗಿ
ಅವಳನ್ನು ಕಂಡುದು. “ನಿನ್ನ ಪಾರ್ಟ್ ಎಷ್ಟು ಮುದ್ದಾಗಿತ್ತು ವಿನತಾ,
ಮಂಜುಳೆಯದೂ ಹಾಗೆಯೇ. ನೀವಿಬ್ಬರೂ ಥೇಟ್ ಸಾವಿತ್ರಿ, ಸತ್ಯವಾನ
ರಂತೆ ಕಂಡಿರಿ ನನಗೆ” ಎಂದು ನುಡಿದು, ಹರಟೆ ಮಾತನಾಡಿ, ಬಳಿಕ
ಮಾತಿನ ಚಪಲ ತಡೆಯದ್ದಕ್ಕೆ ತನಗೆ ಹಿಂದಣ ರಾತ್ರೆ ಉಂಟಾದ ದುಸ್ವಪ್ನ
ಗಳ ಸುದ್ದಿಯನ್ನೂ ಹೇಳಿದಳು. “ನಿಜಕ್ಕೂ ಹೇಳಲೇ, ನಾನು ಬೆಳಿಗ್ಗೆ
ಏಳುವಾಗ ಅಷ್ಟು ಕಿರಿಕಿರಿಯಾದ್ದರಿಂದಲೇ ಇಲ್ಲಿಗೆ ಬಂದು ನಿನ್ನ ಮುಖ
ವನ್ನು ನೋಡುವ ತನಕ ನನಗೆ ತೃಪ್ತಿಯಿರಲಿಲ್ಲ” ಎಂದಳು.

“ಹಾಗೆ ಯಾರಿಗಾದರೂ ಕುಳಿತಲ್ಲಿಯೇ ಸಾವು ಬರುವುದಾದರೆ
ಎಷ್ಟು ಸುಖ!” ಎಂದಳು ವಿನತೆ. ಅದು ಮಾತಿಗೆ ಮಾತಾಗಿರಲಿಲ್ಲ. ಬದಲು
ಯಾವುದೋ ಒಂದು ಆಂತರಿಕ ಆಸೆಯ ಫಲವಾಗಿತ್ತು.

“ಏನು ಹೇಳುತ್ತೀ ನೀನು! ನನಗದನ್ನು ನೆನೆದೇ ಹೆದರಿಕೆಯಾಯಿತು.
ಕಥೆಯಲ್ಲಿ ನಿಜಕ್ಕೂ ಸತ್ಯವಾನ್ ಸತ್ತಿದ್ದರೆ ಆ ಸಾವಿತ್ರಿಯ ಪಾಡನ್ನು ನೆನೆ
ಯುವುದಕ್ಕಿತ್ತೇ!” ಎಂದಳು ಮಾಧವಿ.

“ಸಾವಿತ್ರಿಗೆ ಹಾಗಾಗಬೇಕೆಂದು ನಾನು ಹೇಳಿದ್ದಲ್ಲ. ಯಾರಿಗಾದರೂ
ಸಾವು ಬರುವುದಿದ್ದರೆ, ಕಾಯಿಲೆ ಬಂದು, ನರಳಿ, ಹೆದರಿ ಸಾಯುವ ಬದಲು,
ಸುದ್ದಿ ಇಲ್ಲದೆಯೆ ಸತ್ತರೆ ಎಷ್ಟು ಸುಖ ಎಂದದ್ದು.”

ಮಾಧವಿಯ ಸುದ್ದಿಯ ಚೀಲದಲ್ಲೇ ಆ ತೆರನ ಎಷ್ಟು ಸುದ್ದಿಗಳು
ಬೇಕು! ರಾತ್ರೆಯೆಲ್ಲ ಮಾತನಾಡಿಕೊಂಡು ಇದ್ದು, ಸುಖವಾಗಿ ಮಲಗಿ
ಕೊಂಡು, ಬೆಳಗ್ಗೆ ಏಳದೇ ಹೋದ ಒಬ್ಬಿಬ್ಬರ ಕಥೆಯನ್ನು ಅವಳು ಹೇಳಿ

ದಳು. ಅನಂತರ ತನ್ನ ಉಳಿದ ಮಿತ್ರರಲ್ಲಿ, ಹಿಂದಣ ದಿನದ ನಾಟಕ ಹೇಗಾಗಿತ್ತೆಂದು ಕೇಳುವುದಕ್ಕೆ ಹೊರಟಳು. ಹೊರಡುವ ಮುಂಚೆ "ವಿನತೆ, ನಿಜಕ್ಕೂ ನಿನ್ನೆ ಯಕ್ಷಗಾನ ಭಾರೀ ಗಡದ್ದಾಗಿತ್ತಲ್ಲವೇ? 'ರಾಮಕೃಷ್ಣ' ವಾಲಿಯೆಂದರೆ ವಾಲಿಯೇ! ರಾಮನೂ ಕಡಿಮೆಯಾಗಿರಲಿಲ್ಲ. ನಮ್ಮೂರಿಗೆ ಬರುವ ಮೇಳದವರಿಗಿಂತಲೂ ನಮ್ಮ ಶಾಲೆಯ ಹುಡುಗರ ಆಟ ಏನೂ ಕಡಿಮೆಯಾಗಿರಲಿಲ್ಲ." ಎಂದು ಹೇಳಿ ಹೊರಟು ಹೋದಳು.

ವಿನತೆಯ ಮನೋವೃತ್ತಿಯು ಬೇರೊಂದೇ ತೆರ. ನಾಟಕ ಮುಗಿದಾಗ 'ಇದೊಂದು ರಗಳೆ ಮುಗಿಯಿತು' ಎಂದು ಕಾಣಿಸಿತ್ತು ಅವಳಿಗೆ. ಗುರುಹಿರಿಯರು "ನೀನು ಪಾರ್ಟುಮಾಡಲೇ ಬೇಕು" ಎಂದು ಒತ್ತಾಯಿಸಿದ್ದಕ್ಕೆ, ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಅವಳು ಪಾತ್ರ ವಹಿಸಿದಳು. ಮಾತು ಕಲಿತಳು; ಹಾಡು ಕಲಿತಳು; ಬಣ್ಣ ಸವರಿಕೊಂಡಳು; ಬಂದಳು, ಹೋದಳು. ಗಂಡುಡುಗೆ ಉಡುವಾಗಲಷ್ಟೆ ಅವಳ ಮನಸ್ಸಿನಲ್ಲಿ ಒಂದು ಕಿರಿಯ ಆಸೆ ಉತ್ಪನ್ನವಾಗಿತ್ತು; ತಾನು ಹುಡುಗಿಯಾಗಿ ಹುಟ್ಟುವುದಕ್ಕಿಂತ ಹುಡುಗನಾಗಿ ಹುಟ್ಟಿದ್ದರೆ ಎಷ್ಟು ಲೇಸಿತ್ತು' ಎಂಬ ಆಸೆಯದು. ಆದೂ, ನಾಟಕ ಮುಗಿದು ಮನೆಗೆ ಬಂದ ಮೇಲೆ, ಅವಳ ಸ್ವಪ್ನದಲ್ಲಿ ಕುಣಿದಾಡಿದದೂ ಅದೇ ಆಸೆ. ತಾನು ಹೆಣ್ಣಾಗಿ ಹುಟ್ಟಿದ್ದಕ್ಕೆ ಅವಳಿಗೆ ಸಮಾಧಾನವಿಲ್ಲವಾಯಿತು. ಅದರ ಜತೆಗೆ ತನ್ನ ಕುಲದ ನೆನಪೂ ಅವಳಿಗೆ ಆಗದೆಯೆ ಹೋಗಲಿಲ್ಲ. ವಕ್ರ ಮಾತುಗಳಿಂದ ಅವಳ ಕಿವಿಗಳಿಗೆ ಕೇಳಿಸುವಂತೆ ಅಥವಾ ಇನ್ನೊಬ್ಬರಿಗೆ ಕೇಳಿಸುವಂತೆ ತನ್ನ ಗೆಳತಿಯರು, ವಿಟ್ಟ ಹುಡುಗರು, ತನ್ನ ಕುಲವನ್ನು ಕುರಿತಾಡಿದ ಚುಚ್ಚುಮಾತುಗಳನ್ನು ಅವಳು ಬಲ್ಲಳು. ಎಂಟು ವರ್ಷಗಳ ಹಿಂದೆ ತಮ್ಮ ಮನೆಗೆ ಆಗಾಗ ಬರುತಿದ್ದ ಆನಂದ ನಾಯಕರ ಮಗಳು ತಾನು; ಮಕ್ಕಳು ಚುಚ್ಚಿ ನುಡಿಯುವಂತೆ ನಂದಿನಿಯ ಅಕ್ಕನೂ ನಿಜ—ಎಂಬುದನ್ನು ಬಲ್ಲಳು. ಆಗ ಅವಳು ಎಳೆಯಳು; ಈ ವಿಚಾರವಾಗಿ ಮನಸ್ಸಿನಲ್ಲಿ ಅಷ್ಟು ಅಸಮಾಧಾನವಿದ್ದರಲಿಲ್ಲ. ಎಂಟೊಂಬತ್ತು ವರ್ಷದ ಅವಳಿಗೆ ಪ್ರಪಂಚದ ಅರಿವೇನಿತ್ತು! ಅಷ್ಟು ಹಿಂದೆಯೇ, ಇದ್ದಕ್ಕಿದ್ದಂತೆ, ನಾಯಕರು ತೀರಿಕೊಂಡರು. ಅವಳ ಮನೆಯ ಮೇಲೆ ವಿಪತ್ತು ಕವಿಯಿತು. ಆ ದಿನ ಅವಳ ತಾಯಿಯಾದ ಮಂಜರಿಯು ಕರೆದ ಕಣ್ಣೀರನ್ನು ಸ್ವತಃ ಕೈ ಹಿಡಿದ ಮಡದಿಯೂ ಕರೆದರಲಾರಳು. ಕಾಲ ಸರಿಯಿತು. ಮೊದಲು ಬರುತ್ತಿದ್ದ ಹಣದ ನೆರವು ತಪ್ಪಿತು.

ಬಾಳ್ವೆಯ ಕಷ್ಟದೊಡನೆ ಶರೀರದ ಬಯಕೆಯೂ ಸೇರಿ, ಅವಳ ತಾಯಿ ಹೆರವರ ಕೈಯ್ಯ ಪದಾರ್ಥವಾದಳು. ವಿನತೆಯೂ ಬೆಳೆಯುತ್ತ ಬಂದಳು. ಹದಿನೆರಡು ಹದಿಮೂರು ವರ್ಷಗಳಾದ ಮೇಲೆ ತನ್ನ ಮನೆಯ ಚಿತ್ರ, ಕುಲದ ಚಿತ್ರ — ತಾಯಿಯ ಬಾಳಿನಿಂದಾಗಿ, ಮನೆಗೆ ಬಂದು ಹೋಗುತಿದ್ದ ಕೆಲವು ಜನಗಳಿಂದಾಗಿ ಅವಳ ಕಣ್ಮುಂದೆ ನಲಿದಾಡತೊಡಗಿತು. ಶಾಲೆಯ ಅಭ್ಯಾಸದಲ್ಲಿ ಅವುಗಳ ಮರವೆಯಾಗುತಿದ್ದರೂ, ಅವಳ ದರ್ಶನಕ್ಕಾಗಿಯೇ ಈ ಒಂದೆರಡು ವರ್ಷಗಳಿಂದ ಯೌವನಸ್ಥರು ಬರತೊಡಗಿದ ಮೇಲೆ, ಅವಳಿಗೆ ಮನೆಯು ಮುಳ್ಳಿನ ಹಂದರವಾಯಿತು. ತಾಯಿ ಮಂಜರಿಗೆ ವಿನತೆಯೆಂದರೆ ಜೀವ. ಮಗನ ಮೇಲಿರುವುದಕ್ಕಿಂತಲೂ ಮಗಳ ಮೇಲೆ ಅಧಿಕ ಪ್ರೇಮ. ಮುಂದಿನ ಜೀವನದ ದಾರಿಯನ್ನೆಣಿಸುತ್ತಿದ್ದ ಅವಳು, ಮಗಳನ್ನು ಬಯಸಿ ಬಂದ ಒಬ್ಬಿಬ್ಬರ ವಿಚಾರದಲ್ಲಿ ಆದರ ತೋರಿಸಿದಳು. "ವಿನೂ, ಯಾರು ಬಂದಿದ್ದಾರೆ ನೋಡು" ಎಂದು ನಕ್ಕು ತಿಳಿಸಿದಳು. "ಯಾರು ಬಂದರೆ ನನಗೇನು? ನನಗೆ ಓದಲಿಕ್ಕಿದೆ" ಎಂದು ಮಗಳು ದುಡುಕಿ ನುಡಿದಾಗ ಮಾತ್ರ, ತಾಯಿ ಬೆಚ್ಚಿಬಿದ್ದಳು. ಆಭರಣ ಕೊಟ್ಟರೂ, ಆಸಕ್ತಿತೋರಿಸದಂಥ ಮಗಳ ನಡತೆಯು ತಾಯಿಗೆ ಒಂದು ಸಮಸ್ಯೆಯಾಗಿ ಕಾಣಿಸತೊಡಗಿತು. "ಇನ್ನೂ ಸಣ್ಣವಳು. ಅವಳಿಗೆ ಏನೂ ಬುದ್ಧಿಸಾಲದು" ಎಂದು ನಾಲ್ಕು ದಿನ ಹಂಬಲಿಸಿ ಕಾದು ಕುಳಿತಳು. ಆದರೂ ಕುಲದ ಬುದ್ಧಿ ಅವಳಿಗೆ ಬರುವಂತೆ ಕಾಣಿಸಲಿಲ್ಲ. ಅವಳ ಮನೆಗೆ ಆಗಾಗ ಹರಟೆಗೆಂದು ಬರುವ ಮುದುಕ ನಾರ್ಣಪ್ಪಯ್ಯನವರೊಡನೆ "ಏನೋ ಅಪ್ಪ, ನಮ್ಮ ವಿನೂ ದಾರಿಯೇ ಗೊತ್ತಾಗುವುದಿಲ್ಲ" ಎಂದು ತಾಯಿ ಮಗಳನ್ನು ದೂರಿದರೂ, ವಿನುವನ್ನು ನೇರಾಗಿ ಇದಿರಿಸಿ, ಬುದ್ಧಿ ಹೇಳಿ, ಅವಳು ಕೊಡಬಹುದಾದ ಉತ್ತರಕ್ಕೆ ತಾಯಿ ಸಿದ್ಧಳಾಗಲಿಲ್ಲ. ನಾರ್ಣಪ್ಪಯ್ಯನವರು, ಸಾಹುಕಾರ ಆನಂದ ನಾಯಕರ ಗುರುತು, ಪರಿಚಯ, ಅಭಿಮಾನಗಳುಳ್ಳ ವ್ಯಕ್ತಿ. ಅಲ್ಲಿಗೆ ಅವರ ಮರಣಾನಂತರ ಸಮಾಧಾನ ಹೇಳಬಲ್ಲ ಹಿರಿಯರಾಗಿ ಬರುತಿದ್ದರೇ ಹೊರತು ಮಂಜರಿ ಒಬ್ಬಳು ಸೂಳೆ ಎಂಬ ಕೀಳು ದೃಷ್ಟಿಯನ್ನು ತೊಟ್ಟು ಬಂದವರಲ್ಲ. ಅವರಿಗೆ ಸ್ವಂತ ಹೆಣ್ಣು ಮಕ್ಕಳಿಲ್ಲ. ಗಂಡು ಮಕ್ಕಳು ಯಾವುದೋ ಊರನ್ನು ಸೇರಿಕೊಂಡು ಉದ್ಯೋಗಗಳಲ್ಲಿ ನಿರತರಾಗಿದ್ದಾರೆ. ಮಕ್ಕಳು ಕಳುಹಿಸಿಕೊಡುತ್ತಿರುವ ಅಲ್ಪ ಸ್ವಲ್ಪ ವರಮಾನದಿಂದ ವಯಸ್ಸಾದ ಹೆಂಡತಿ

ಯೊಡನೆ ಸುಖವಾಗಿ ಸಂಸಾರಮಾಡಿಕೊಂಡಿದ್ದಾರೆ. ಮೊದಲಿನಿಂದಲೂ-ವಿನತೆಯನ್ನು ಕಂಡಾಗಲೆಲ್ಲ "ಏನು ಮಗಳೇ" ಎಂದು ವಾತ್ಸಲ್ಯದಿಂದ ಮಾತನಾಡಿಸುತ್ತಿದ್ದ ಸ್ವಭಾವ ಅವರದು. ಅದೆಷ್ಟೋ ಬಾರಿ ವಿನತೆಯೂ ಅವರ ಮನೆಗೆ ಹೋಗಿ, ಉಂಡು, ಹರಟೆ ಮಾತುಗಳನ್ನಾಡಿ ನಾರ್ಣಪ್ಪಯ್ಯ ನವರ ಹೆಂಡತಿ ಕಾವೇರಮ್ಮನನ್ನು 'ದೊಡ್ಡಮ್ಮ' ಎಂದು ಮಾತನಾಡಿಸಿ ಬರು ತ್ತಿದ್ದಳು. ಮಂಜರಿ ನಾರ್ಣಪ್ಪಯ್ಯನವರೊಡನೆ ದೂರುಕೊಟ್ಟರೂ, 'ವಿನು ತಾಯಂತಾಗಬಾರದು' ಎಂಬುದು ಅವರ ಬಯಕೆಯಾಗಿತ್ತು. ಅನೇಕ ವೇಳೆ "ವಿನೂ, ದೊಡ್ಡಮ್ಮನನ್ನು ನೋಡಲಿಕ್ಕೆ ಮನೆಗೆ ಬರುವುದಿಲ್ಲವೇ" ಎಂದು ಹೇಳಿ, ಅವಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ, ಅವಳ ಓದು ಬರಹದ ವಿಚಾರವಾಗಿ ಕೇಳುತ್ತಾರೆ. "ಎಷ್ಟು ಓದಬೇಕೆಂದು ಮಾಡಿ ದ್ದೀಯಾ? ಅಷ್ಟಕ್ಕೆಲ್ಲ ನಿನ್ನ ತಾಯಿಯಲ್ಲಿ ಹಣವಿದೆಯೆ? ಮೆಟ್ರಿಕ್ ಆದರೆ ಸಾಲದೇ?" ಎಂದು ಕೇಳುತ್ತಾರೆ.

"ಓದಿಕೊಂಡು ಏನಾದರೂ ಒಂದು ಕೆಲಸ ಸಿಕ್ಕಿದರೆ ಯಾರ ಹಂಗೂ ಇಲ್ಲದೆಯೆ ಬದುಕಬಹುದಲ್ಲ. ಹಾಗೆ ಕಲಿತರೆ ಡಾಕ್ಟರಿಕೆಯನ್ನೋ ಇನ್ನೇ ನನ್ನೋ ಕಲಿಯಬಹುದು. ಹಣವಿಲ್ಲದೆ ಹೋದರೆ ಇಷ್ಟಕ್ಕೇ ನಿಲ್ಲಿಸುವುದು; ಉಪಾಧ್ಯಾಯರ ಟ್ರೈನಿಂಗಿಗೆ ಹೋಗುವುದು" ಎನ್ನುತ್ತಾಳೆ ವಿನತೆ.

"ಅದು ನ್ಯಾಯವಾದ ಯೋಚನೆ. ನಿನ್ನ ತಾಯಿಯ ಮನಸ್ಸು ಹಾಗೂ ಹೀಗೂ ಓಲಾಡುತ್ತದೆ ಎಂದು ನನಗೆ ಗೊತ್ತು. ಆದರೆ ಒಂದು ನೋಡು– ನೀನು ಸಣ್ಣವಳು; ನಿನಗೆ ತಿಳಿಯಲಾರದು. ಆದರೂ ಹೆಂಗಸಿನ ಸಂಸಾರ ಗಂಡಸಿಲ್ಲದೆಯೆ ಸಾಗಲಾರದು."

ಆ ಮಾತಿನ ಅರ್ಥ ವಿನತೆಗೂ ಹೊಳೆಯುತ್ತದೆ. ಆದರೆ ತಾಯಿಯ ಉಪದೇಶವನ್ನೇ ಇವರೂ ಹೇಳುತ್ತಿರುವರೇ ಎನ್ನುವ ಅನುಮಾನ ಉಂಟಾ ಗುತ್ತದೆ. "ನೀವೂ ಹಾಗೆಯೇ ಹೇಳುತ್ತೀರಾ?" ಎಂದು ಕೇಳಿದಳು.

"ಗಂಡಿಗೆ ಹೆಣ್ಣು ಬೇಕು; ಹೆಣ್ಣಿಗೆ ಗಂಡು ಬೇಕು. ದೇವರು ಮಾ ಡಿದ ಮಾಯೆ ಅದು. ಆ ಮಾಯೆ ಗೆಲ್ಲುತ್ತೇವೆ ಎನ್ನುವ ಮಾತು ಮಕ್ಕ ಳಾಟದ ಮಾತು...."

"ನೀವೆನ್ನುವ ಮಾತನ್ನೂ 'ಅಲ್ಲ' ಎನ್ನುವ ಧೈರ್ಯ ನನಗಿಲ್ಲ. ಆದರೆ ಏನಾದರೊಂದು ಚಾಕರಿ ದೊರಕಿಸಿಕೊಂಡರೆ, ಆನಂತರ ಲಗ್ನಮಾಡಿಕೊಳ್ಳ

ಬೇಕೆಂದು ನನ್ನ ಅಪೇಕ್ಷೆ."

"ಅಪೇಕ್ಷೆ ಒಳ್ಳೆಯದೇ. ಆದರೆ ನಿಮ್ಮವರಲ್ಲಿ? . . . . "

"ನಮ್ಮವರಲ್ಲಿ ಗಂಡು ಸಿಗುವುದು ಕಷ್ಟ. ನನಗೆ ಗೊತ್ತು. ಅಂಥ ಭಾಗ್ಯ ನನಗಿಲ್ಲದಿದ್ದರೆ--ಬೇರೆ ರೀತಿಯಿಂದ ಬದುಕಿದರೇನು, ಸತ್ತರೇನು? ನನಗೆ ದೊಡ್ಡವರೇ ಬೇಕೆಂದಿಲ್ಲ. ಮರ್ಯಾದೆಯಿಂದ ನಡೆಯಿಸಿಕೊಂಡು ಹೋಗಬಲ್ಲ ಒಬ್ಬ ಗಂಡಸು ನನಗಾಗಿ ಹುಟ್ಟಿದ್ದೇ ಇಲ್ಲ ಎಂದಾದರೆ ಆ ಮೇಲೆ ದೇವರು ಕಂಡ ಹಾಗೆ ಆಗುತ್ತದೆ."

ವಿನತೆಯ ಈ ಮಾತುಗಳನ್ನು ಕೇಳಿ ನಾರ್ಣಪ್ಪಯ್ಯನವರಿಗೂ ಅವರ ಹೆಂಡತಿಗೂ ಆದ ಸಂತೋಷ ಅಷ್ಟಿಷ್ಟಲ್ಲ. ಆ ಸಂತೋಷದ ಜತೆಗೆ ಚಿಂತೆಯೂ ಉಂಟಾಯಿತು — 'ಈ ಪದಾರ್ಥ ಒಳ್ಳೆಯ ಕುಲದಲ್ಲಿ ಹುಟ್ಟದೆ ಹೋಯಿತೆ? ತಮ್ಮ ಹೊಟ್ಟೆಯಲ್ಲಿ ಹುಟ್ಟಿದ್ದರೂ ಎಷ್ಟು ಚೆನ್ನಾಗಿತ್ತು!' ಎಂದು.

ಈ ಮಾತುಗಳಿಂದ ವಿನತೆಯ ಮನಸ್ಸನ್ನು ತೀರ ತಿಳಿದ ಬಳಿಕ ನಾರ್ಣಪ್ಪಯ್ಯನವರೇ ಮಂಜರಿಯ ಆಸೆ ಹಂಬಲಗಳ ತಪ್ಪುದಾರಿಯನ್ನು ತಡೆಯಲೆತ್ನಿಸಿದರು. ವಿನುವಿನ ಕೈ ನೋಡಿದರು; ಜಾತಕ ನೋಡಿದರು—ಅವುಗಳ ವಿಚಾರದಲ್ಲಾದರೂ ಭರವಸೆಯುಳ್ಳ ತಾಯಿಗೆ "ನಿನ್ನ ಮಗಳಿಗೆ ನಾಲ್ಕು ದಿನ ತಡವಾದರೂ ಮದುವೆಯಾಗುವ ಯೋಗವಿದೆ, ನೋಡು. ನೀನು ಅವಳಿಗೆ ಬೇರೇನಾದರೂ ಬೋಧಿಸುವುದಕ್ಕೆ ಹೋಗಿ ಆ ಸಂದರ್ಭವನ್ನು ಹಾಳು ಮಾಡಬಾರದು. ನಿನ್ನ ಚಿಂತೆ ನನಗೆ ಗೊತ್ತಾಗುತ್ತದೆ. ಮಗಳಿಗೆ ತಾಯಿಯ ಮೇಲೆ ಪ್ರೀತಿ ಇದ್ದರೆ, ಎಲ್ಲಿದ್ದರೂ ನಿನ್ನನ್ನು ಸಾಕಿಯಾಳು. ಬದಲು ಹಾಗೆ ಪ್ರೀತಿಯೇ ಇಲ್ಲದಿದ್ದರೆ, ಅವಳು ಎಂಥ ಶ್ರೀಮಂತನನ್ನು ಕಟ್ಟಿಕೊಂಡರೂ ನಿನ್ನ ಸುಖ, ದುಃಖ ನಿನಗೇ. ಹಾಗಾಗುವ ದೃಷ್ಟಾಂತ ಊರಲ್ಲಿಯೇ ಎಷ್ಟು ಬೇಕಾಗಿದೆ!" ಎಂದು ಹಿತವಚನ ನುಡಿದರು.

ನಾಟಕದ ದಿನ ತಮ್ಮ ದತ್ತ ಕನ್ಯೆಯು ನಟಿಸಿದ ಸತ್ಯವಾನನ ಪಾತ್ರವನ್ನು ನೋಡಿದ ನಾರ್ಣಪ್ಪಯ್ಯನವರಿಗೆ "ವಿನು ಗಂಡಾಗಿದ್ದರೆ ಎಷ್ಟು ಸುಖವಾಗಿರುತ್ತಿದ್ದಳೋ ಏನೋ!" ಎಂದು ಅನಿಸಿತ್ತು. ಆ ದಿನ ವಿನುವಿನ ಮನಸ್ಸಿನಲ್ಲಿ, ಸತ್ಯವಾನನಾಗಿ ಕಣ್ಮುಚ್ಚಿಕೊಂಡಾಗ, ಹಾಗೆಯೇ ಕಣ್ಮುಚ್ಚಿ ಸತ್ತರೆ ಎಷ್ಟು ಸುಖ, ಎಂಬ ವಿಚಿತ್ರ ಕನಸೊಂದು ಕ್ಷಣಕ್ಕೆ ಮೂಡಿ ಮಾಯವೂ ಆಗಿತ್ತು.

ಹಿಂದಣ ದಿನದ ಶ್ರಮಗಳಿದ್ದರೂ ನಗು ಉತ್ಸಾಹಗಳಿಂದ ಮಲಗಿ, ಸುಖ ಸ್ವಪ್ನಗಳಲ್ಲಿ ತೇಲಿ ಉಲ್ಲಾಸ ಆನಂದಗಳಲ್ಲಿ ಬೆಳಗನ್ನು ನೋಡಿದ ಳೆಂದರೆ ಮಂಜುಳೆ. ಉತ್ಸಾಹವಿದ್ದಷ್ಟು ಕಾಲ ತೀರ ಕಾರ್ಯ ಪ್ರವರ್ತಳಾಗು ವವಳು ಅವಳು. ಉತ್ಸಾಹವಿಲ್ಲದಿದ್ದರೆ ಕೆಲಸಮಾಡುವ ಗೋಜಿಗೇ ಹೋಗು ವುದಿಲ್ಲ. ಶ್ರಮದಿಂದ ಯಾವುದನ್ನಾದರೂ ಸಾಧ್ಯಮಾಡಿಕೊಳ್ಳಬೇಕು ಎಂಬ ಹಟ ಅವಳದಲ್ಲ. ಈ ನಾಟಕ ಒಂದು ಆಟವಾಗಿ ಅವಳಿಗೆ ಕಾಣಿಸಿತು. ಆಟಕ್ಕೆ ಶಕ್ಯ ಲಘು ಮನಸ್ಸಿನಿಂದ ಅವಳು ಅಭ್ಯಾಸಕ್ಕೆ ಹೋದಳು. ಗೆಳತಿ ಯರ ಕೂಡ ಸರಸವಾಡಿದಳು. ತನ್ನ ಪಾರ್ಟು ಏನಾಗುತ್ತದೋ ಎಂಬ ಆತುರ ವಿಲ್ಲದೆಯೆ ಮುಖಕ್ಕೆ ಬಣ್ಣವನ್ನು ಸವರಿಕೊಂಡಳು. ವೇಷ ಧರಿಸಿ, ಮುಖ ವನ್ನು ಕನ್ನಡಿಯಲ್ಲಿ ನೋಡಿ ಹಿಗ್ಗಿದಳು. ತಾನೇನೂ ಕಡಮೆ ಚೆಲುವಿನವಳಲ್ಲ -ಎಂಬ ಆತ್ಮಾಭಿಮಾನವೂ ಉಂಟಾಯಿತು. ರಂಗಭೂಮಿಯೊಂದು ಬೇರೆ, ಅದರ ಹೊರಗಿನ ಅಂಕಣ ಬೇರೆ— ಎಂಬ ಭಿನ್ನ ಭಾವ ಅವಳ ಮನಸ್ಸಿಗೆ ಬರಲೇ ಇಲ್ಲ. ತನಗೆ ಬಣ್ಣ ಸವರುತ್ತಿದ್ದ ಮನೋಹರನ ಜತೆಯಲ್ಲಿ ಸರಳ ವಾಗಿ ಮಾತನಾಡುತ್ತ ಸಮಯ ಕಳೆದಳು. ಅವನ ಕರಸ್ಪರ್ಶ ಹಿತ ಕರವಾಗಿ ಕಂಡಿತು. ಅನಂತರ ಆತ 'ಬೊಟ್ಟು ನೋಡಿಕೋ, ಬಾಚಿದ ಕೂದಲು ಹಾರುತ್ತಿದೆ' ಎಂದಾಡಿದ ಉಪಚಾರದ ಮಾತುಗಳು, ತನ್ನ ವ್ಯಕ್ತಿತ್ವ ವನ್ನು ನೆನಪು ಮಾಡಿಕೊಟ್ಟವು. ಮನು ಅವಳ ಉಡಿಗೆ ತೊಡಿಗೆಗಳನ್ನು ಕಂಡು ಮೆಚ್ಚಿದಾಗ, ಅವಳಿಗೂ ಮೆಚ್ಚುಗೆಯಾಯಿತು. ಅದೇ ಆತ, ಹೊರ ಗಿನ ಜನಗಳಾಡುತ್ತಿದ್ದ ಪ್ರಶಂಸೆಯ ಮಾತುಗಳನ್ನು ಅವಳ ಕಿವಿಗೆ ಮುಟ್ಟಿಸಿ ದಾಗ, ಅವು ಕೇಳುವುದಕ್ಕೆ ಹಿತವಾದುವು. ಅವು ಮನಸ್ಸಿನಲ್ಲೊಂದು ಬಗೆಯ ಹೆಮ್ಮೆಗೂ ಕಾರಣವಾದುವು. ಆಗ— ಈ ತನಕ ಗೆಳತಿಯರ ಪ್ರಪಂಚದಲ್ಲಿ ನಲಿದ ಅವಳ ಮನಸ್ಸಿಗೆ, ಗೆಳೆತನಕ್ಕೆ ತಕ್ಕೊಬ್ಬ ಸಹಪಾಠಿ ಇರುವನೆಂಬ ಕಲ್ಪನೆಯಾಯಿತು. ಹಾಗೆಂದು ಈ ತನಕ ಮನೋಹರನೊಡನೆ ಅವಳು ಹೆಚ್ಚಿಗೆ ಮಾತನಾಡಿದವಳಲ್ಲ. ಆತ ಅವಳ ಮುಖವನ್ನು ನೋಡಿದಾಗ ಕತ್ತನ್ನಡ್ಡ ತಿರುಗಿಸಿದವಳೂ ಅಲ್ಲ. ಅವಳ ಮನೆ, ಅವನ ಬಿಡಾರಕ್ಕೆ ಸಮೀಪ ವಾಗಿತ್ತು. ಪಾಠದಲ್ಲಿ ಉದಾಸೀನನಾದ ಮನು ನೋಟ್ಸು ಬರೆದುಕೊಳ್ಳಲು ಆಲಸಿಯಾಗಿ, ಎಷ್ಟೋ ಬಾರಿ ಅವಳ ಪುಸ್ತಕವನ್ನು ಕೊಂಡೊಯ್ದು, ಮರಳಿ ಕೊಟ್ಟಿದ್ದನು. ಅವಳ ಮನೆಯ ಜಗುಲಿಯ ಮೇಲೆ ಬಂದು ಕುಳಿತು,

ತಮ್ಮ ಗುರುಗಳ ಪಾಠದ ಲೇವಡಿ, ಉಪಾಧ್ಯಾಯರ ಲೇವಡಿಮಾಡಿ ಹೋಗಿದ್ದನು.

ಆದರೆ ಹಿಂದಣ ದಿನ ಅವನು ಮಾಡಿದ ಸೇವೆ, ಉಪಚಾರದ ಮಾತುಗಳು–ಬರಿಯ ಪರಿಚಯಕ್ಕಿಂತಲೂ ಹೆಚ್ಚಿನ ಸ್ಥಾನವನ್ನು ಕಲ್ಪಿಸಿಕೊಟ್ಟವು. ಹೀಗಾಗಿ ತುಂಬ ಆದರದ ಬುದ್ಧಿಯಿಂದ, ಆಕೆ ವಿಷಮ ವಿವಾಹದಲ್ಲಿ 'ಮನು ಹೇಗೆ ಪಾತ್ರ ವಹಿಸುತ್ತಾನೆ?' ಎಂದು ನೋಡುವ ಚಪಲದಿಂದ, ಕಣ್ಣವೆ ಕೀಳದೆ ನಾಟಕನೋಡುತ್ತಿದ್ದಳು. ಅವನ ರೂಪ, ವಿಲಾಸಗಳಲ್ಲೊಂದು ಬಗೆಯ ಮೋಹಕತೆ ಇತ್ತು. ತನ್ನ ಅಳತೆಗಿಂತ ತುಸು ದೊಡ್ಡ ಜರತಾರಿ ಅಂಗಿ ತೊಟ್ಟಿದ್ದನಾದರೂ, ಪ್ರಾಚೀನ ಕಥೆಯೊಂದರ ರಾಜಕುಮಾರನಾಗಿಯೇ ಅವಳಿಗೆ ಕಾಣಿಸಿದನು. ಆತನ ಚುರುಕುತನ, ಚಿಕ್ಕ ತಾಯಲ್ಲಿ ಆತ ತೋರಿದ ವಿನಯ, ಅವಳ ಶೃಂಗಾರಕ್ಕೆ ಬಲಿಬೀಳದ ನಿಲುಮೆ, ರಾಜಕುಮಾರನ ಬದಲು—ಮನೋಹರನ ಮನಸ್ಸಿನ ದಾರ್ಢ್ಯವನ್ನೇ ಅವಳಿಗೆ ತೋರಿಸಿದುವು. ಆತ ಅಜೇಯನಾಗಿ ತೋರಿದ. ಆದುದರಿಂದ ಆರಾಧ್ಯ ವ್ಯಕ್ತಿಯಾದ. ಅದಕ್ಕೆ ಪ್ರತಿಯಾಗಿ, ರಾಮಯ್ಯ ಮಾಸ್ತರರ ಅಶೋಕ ಪಾತ್ರದ ರೂಪವೂ ಚೆನ್ನಾಗಿ ಕಾಣಿಸಲಿಲ್ಲ. ಹಾಡುಗಾರಿಕೆಯೂ ಅತಿಯಾಗಿ ಕಂಡಿತು. ಮಾತುಗಳು ಕೃತಕವೆನಿಸಿದವು. ಇನ್ನು ರಾಣಿಯ ಪಾತ್ರವನ್ನು ವಹಿಸಿದ ಸುಧಾಕರ ತನ್ನ ಮಾತು ತಪ್ಪಿ ಉಳಿದವರನ್ನು ಪೇಚಿಗೊಡ್ಡಿದುದರಿಂದ "ಅದೊಂದು ಹೆಣ" ಎಂಬ ತಾತ್ಸಾರವನ್ನು ಅವಳಲ್ಲಿ ಉಂಟುಮಾಡಿತು. ಅಲ್ಲದೆ ಎಷ್ಟೆಂದರೂ, ಹುಡುಗರು ಹುಡುಗಿಯರ ಪಾರ್ಟನ್ನು ಹಾಕಿದರೆ ಚೆನ್ನಾಗಲಾರವು–ಎಂಬ ವಿಚಾರ ಸರಣಿ ಅವಳಲ್ಲಿ ಮೂಡಿತು. ಮನೆಗೆ ಬರುವಾಗಲೂ ಅದೇ ಮಾತುಗಳನ್ನು ಅವಳು ತನ್ನ ಗೆಳತಿಯರೊಡನೆ ಆಡಿದ್ದಳು. "ಹಾಗಿದ್ದರೆ ನಮ್ಮ ವಿನು ಸತ್ಯವಾನ್ ಮಾಡಬಾರದಿತ್ತಲ್ಲವೆ" ಎಂದು ಅವಳ ಗೆಳತಿಯರು ಕೇಳಿದಾಗ, ಅವಳ ಬಾಯಿಂದ ಪ್ರತ್ಯುತ್ತರ ಹೊರಡಲಿಲ್ಲ. ವಿನುವಿನ ಪಾತ್ರ ಚೆನ್ನಾಗಿಲ್ಲ ಎಂದೆನ್ನಲಾರಳು. ವಿನುವಿನಲ್ಲಿ ಅವಳಿಗೆ ದ್ವೇಷವೂ ಇಲ್ಲ. ಆದರೆ ಆ ಭೂಮಿಕೆಯನ್ನು ಮನೋಹರ ಮಾಡಿದ್ದರೆ ಇನ್ನಷ್ಟು ಚೆನ್ನಾಗಿ ಕಾಣಿಸಬಹುದಿತ್ತು ಎಂದು ಅವಳ ಮನಸ್ಸಿಗೆ ಅನಿಸಿದ್ದರೂ, ಗೆಳತಿಯರ ಮುಂದೆ ಆ ಮಾತನ್ನು ಆಡುವುದಕ್ಕಿಲ್ಲವಷ್ಟೆ.

ಮನೆಗೆ ಹೋದಳು. ಹಾಸಿಗೆಯಲ್ಲೊರಗಿಕೊಂಡಳು. ಹೋಗುವಾಗ

ಜತೆಯಲ್ಲಿ ಆಶೆಯನ್ನು ತಮ್ಮಲ್ಲಿಗೆ ಕರೆದುಕೊಂಡು ಹೋಗಿದ್ದಳು—ಅವಳ ಮನೆ ದೂರವಿದೆ ಎಂಬುದರಿಂದ. ಇಬ್ಬರೂ ಮುಖಗಳಲ್ಲಿ ಇನ್ನೂ ಉಳಿದಿರುವ ಬಣ್ಣವನ್ನು ಸಂಪೂರ್ಣ ತೆಗೆಯದೆ ಜತೆಯಲ್ಲಿ ಮಲಗಿಕೊಂಡರು. ಆಶಾ ತುಸು ಚೆಪ್ಪು ಹುಡುಗಿ. "ಇವತ್ತಿನ ನಾಟಕ ಚೆನ್ನಾಗಿತ್ತಲ್ಲವೇ" ಎಂದು ಕೇಳ ಕೇಳುತ್ತ ಮಲಗಿದಳು.

ಮಂಜುಳೆ ಪರಿಹಾಸ್ಯವಲ್ಲೇ ಅವಳಿಗೆ ಉತ್ತರವಿತ್ತು "ಹೊತ್ತಾಯಿತು ಬಹಳ; ಈಗ ಮಲಗಿಕೊಳ್ಳುವ" ಎಂದು ಹೇಳಿ ಮಲಗಿಕೊಂಡಳು. ದೀಪ ಆರಿಸಿದ ಮೇಲೆ "ಆಶಾ, ಇಲ್ಲವೆ—ನಾಟಕ ಚೆನ್ನಾಗಿತ್ತು. ನಮ್ಮ ನಾಟಕ ಅವರ ನಾಟಕಕ್ಕಿಂತಲೂ ಚೆನ್ನಾಗಿ ಆಗಿತ್ತು. ನಿನ್ನ ಪಾರ್ಟಿನ ಚಿಂತೆಯಿಲ್ಲ. ಆದರೆ ನಂದಿನಿಯ ಭೂಮಿಕೆ ಏನೇನೂ ಸಾಲದು. ಹುಳಿ ಹೆಚ್ಚಾದರೆ ಹಾಗೇ" ಎಂದಳು. ಅಷ್ಟರಿಂದ ಆಶೆಯ ಆತ್ಮತೃಪ್ತಿಯಾಯಿತು. ಅಷ್ಟನ್ನು ಯಾರೂ ಅವಳಿಗೆ ಹೇಳಿದವರಿಲ್ಲ; ಅವಳು ಅದಕ್ಕೆ ಪ್ರತಿಯಾಗಿ—ವಿನೂ, ಮಂಜುಳೆ, ಮನೋಹರ—ಈ ಮೂವರ ಪಾತ್ರಗಳನ್ನು ಬಣ್ಣಿಸುತ್ತ ಎಷ್ಟು ಹೊತ್ತಿನ ತನಕ ಬಡಬಡಿಸುತ್ತಿದ್ದಳೋ ತಿಳಿಯದು. ಮಂಜುಳೆಯ ನಿಡಿದ ಉಸಿರನ್ನು ಕೇಳಿ, ನಿದ್ರಿಸುವವರು ಮಾತನಾಡುವುದಿಲ್ಲ, ಎಂದು ತಿಳಿದುಕೊಂಡಳು; ಅನಂತರ ತಾನೂ ನಿದ್ದೆ ಹೋದಳು.

ಆಶಾ ಬಿತ್ತಿದ ಕೊನೆಯ ಮಾತೇ ಮಂಜುಳೆಯ ಸ್ವಪ್ನ ಕ್ಷೇತ್ರದಲ್ಲಿ ಚಿಗುರೊಡೆಯಿತು. ಇನ್ನೆರಡು ಜಾವಗಳ ಕಾಲದ ತನಕ ಮನೋಹರನ ಪಾತ್ರ ವಿನತೆಯ ಸ್ಥಾನದಲ್ಲಿ ನಿಂತು ಅವಳನ್ನು ಕಾಡತೊಡಗಿತು. ಸತ್ಯವಾನನಿಗಾಗಿ ಅವಳು ಅರಸಿ ಬಂದಳು. ನಾರದನ ಭವಿಷ್ಯವಾಣಿಗಾಗಿ ಸಿಡುಕುಗೊಂಡಳು. ಒಂದು ವರ್ಷ ಕಾನನದಲ್ಲಿ ಪತಿಯನ್ನೊಡಗೂಡಿ ವಾಸಮಾಡಿದಳು. ವಿಷಮ ವಿವಾಹದ ಕಮಲಾಕರನ ಮನೋಧಾರ್ಢ್ಯವನ್ನುಳ್ಳ ಹೊಸ ಸತ್ಯವಾನನ ಮಡದಿ ಈ ಸಾವಿತ್ರಿ. ಅವನ ಮನಸ್ಸನ್ನೆಲ್ಲ ಒಲಿಸುವುದಕ್ಕಾಗಿ ಏನೇನೋ ಕಾಲ್ಪನಿಕ ಪ್ರಯತ್ನಗಳನ್ನು ಮಾಡುತ್ತಿದ್ದಾಳೆ. ವಿಜಯವನ್ನೂ ಗಳಿಸಿದ್ದಾಳೆ. ವರ್ಷದ ಕೊನೆಗೆ ಅವನೊಡನೆ ಕಾಡಿಗೂ ಹೊರಟಿದ್ದಾಳೆ. ಅಂತಿಮದ ದುರ್ದಿನ ಬಂದಿದೆ. ಯಮ ಎದುರಿಗೇ ಕಾಣಿಸುತ್ತಿದ್ದಾನೆ. ನೀಲ ಬಣ್ಣದ ಪರದೆಯ ಹಿಂದೆ ನಿಂತ ಮಾಧವಿ (ಯಮನ ಪಾತ್ರದಲ್ಲಿರುವ) ಯನ್ನೋಡಿಸುವುದೇನು ಕಷ್ಟ—ಎಂದು ಮಕ್ಕಳಾಟದ ವಿಚಿತ್ರ ಕಣ್ಣುಮುಚ್ಚಾಲೆಯಂತೆ ಕಂಡೂ

ಕಾಣದಂತೆ, ಬರಿದೆ ನಟಿಸುವ ಹಾಗೆ, ಚಿಂತಿಸುತ್ತಿದ್ದಾಳೆ. ಮಾಧವಿಯನ್ನು ಅವಳು ಕಿವಿ ಹಿಡಿದು ನೂಕಿಯೂ ಆಯಿತು. ಮರುಗಳಿಗೆಗೆ ಯಮನಿಲ್ಲ; ಸತ್ಯವಾನನಿಲ್ಲ;ಸಾವಿತ್ರಿಯೂ ಇಲ್ಲ. ತಾನು ಮತ್ತು ಮನೋಹರ–ಇಬ್ಬರೇ ಕುಳಿತು ಮಾತನಾಡುತ್ತಿದ್ದೇವೆ. ತಾವಿಬ್ಬರೂ ಪರೀಕ್ಷೆಯಲ್ಲಿ ತೇರ್ಗಡೆ ಯಾಗಿದ್ದೇವೆ. ತಮ್ಮ ಮದುವೆಯೂ ನಿಶ್ಚಯವಾಗಿದೆ. ಅದು ಗೊತ್ತಾ ದೊಡನೆ-ಊರ್ವಶಿ ನಾರದನ ವೇಷವನ್ನು ತೊಟ್ಟು, ತನ್ನ ತಾಯಿಯ ಬಳಿಗೆ ಹೋಗಿ, ಏನೇನೋ ಚಾಡಿ ಹೇಳಿದ್ದಾಳೆ. ಮನೋಹರನ ತಂದೆಯ ಬಳಿಗೂ ಹೋಗಿದ್ದಾಳೆಂದು ಯಾರಿಂದಲೋ ಕೇಳಿದಳು. ಆದರೆ ಮನೋಹರ ತನಗೆ ಮಾತುಕೊಟ್ಟಿದ್ದಾನೆ–ಎಂಬೆಲ್ಲ ಕನಸಿನ ಕಲಸು ಮೇಲೋಗರವಾಯಿತು.

ಅಲ್ಲಿಂದ ಅರ್ಧ ನಾಟಕ, ಅರ್ಧ ಭಾವಸ್ವಪ್ನ ಇದ್ದುದು ನಶಿಸಿ ಹೋಗಿ ಕೇವಲ ಭಾವ ಸ್ವಪ್ನವೇ ಪ್ರಧಾನವಾಗಿ, ತಾನು ಮನೋಹರನನ್ನು ಕಾಣ ಬೇಕು. ಆತನೇ ಬಂದು ತನ್ನ ಸ್ನೇಹವನ್ನು ಯಾಚಿಸಬೇಕು. ಅದರಿಂದ ತನ್ನ ಸಂಕೋಚ ತಪ್ಪುತ್ತದೆ–ಎಂದು ಹೊಳೆಯತೊಡಗಿತು. ತಾಯಿ, ತನಗಿರುವ ಒಬ್ಬನೇ ಅಣ್ಣ, ಅವನ ಲಂಕಿಣಿಯಂತಹ ಹೆಂಡತಿ ಸುಮಿತ್ರೆ, ಇವರ— ಚಿತ್ರಗಳ ನೆನವರಿಕೆಯಾಯಿತು. ತನ್ನತಾಯಿ ಇನ್ನೂ ಬದುಕಿದ್ದಾಳೆ; ತಂದೆ ತೀರಿಕೊಂಡ ನೆನಪು ಆಗಲೊಲ್ಲದು. ಹೀಗಾಗಿ ಧೈರ್ಯದಿಂದ, ತನ್ನ ಪ್ರಣಯಿಯನ್ನು ದೂರಿದ ಅಣ್ಣ,ನಾದನಿಯರೊಡನೆ ಜಗಳಾಡತೊಡಗಿದಳು. ಜಗಳದಲ್ಲಿ ನಾದನಿಯ ಕಂಠವನ್ನು ಅವಳಿಂದ ತಡೆಯುವುದಕ್ಕಾಗಲಿಲ್ಲ. ಅಷ್ಟಕ್ಕೆ ತನ್ನ ತಾಯಿಯೂ ಎಷ್ಟೋ ಹಿಂದೆ ಸತ್ತುಹೋದ ನೆನಪಾಯಿತು. ತಾನು ಇಂಟರ್ ಕಲಿಯುವುದಕ್ಕೆ ಮಂಗಳೂರು ಸೇರಿಕೊಂಡು ಹಾಸ್ಟೆಲ್ ಸೇರಿ ಸ್ವತಂತ್ರಳಾಗುತ್ತೇನೆ. ಅನಂತರ ತನ್ನ ಮನುವನ್ನು ಸೇರುತ್ತೇನೆ– ಎಂದು ಕನಸನ್ನು ಹೆಣೆಯತೊಡಗಿದಳು.

ಅಲ್ಲಿಂದ ಅವಳ ಕನಸು ಅವಳನ್ನು ಎಳೆತನಕ್ಕೊಯ್ದಿತು. ಎಂಟು ವರ್ಷದವಳನ್ನಾಗಿ ಮಾಡಿತು. ಆಗ ಸದಾ ಗೊಂಬೆಗಳನ್ನು ಸಂಗ್ರಹಿಸು ವುದು, ಅವಕ್ಕೆ ಅಲಂಕಾರ ಮಾಡುವುದು, ತಾಯಿಯಾಟ ಆಡುವುದು— ಇವೇ ಮೊದಲಾದ ತಾಯ್ತನದ ಕನಸುಗಳು ಅವಳ ಜೀವನದ ಮೂರು ನಾಲ್ಕು ವರ್ಷಗಳನ್ನು ಕಾಡಿದಂತೆ, ನಿದ್ರೆಯ ಆ ಒಂದೆರಡು ಗಳಿಗೆಗಳನ್ನು ಕವಿದವು. ಮಂಜುಳೆ ಬೆಳಗ್ಗೆ ಏಳುವಾಗ, ತಲೆದಿಂಬನ್ನು ತನ್ನ ಹೊಟ್ಟೆಯ

ಮೇಲಿರಿಸಿಕೊಂಡು ಅದು ಮಗುವೆಂಬಂತೆ ತಬ್ಬಿಹಿಡಿದು, ಎಚ್ಚರಗೊಂಡಳು. ತಾಯಿಯ ಗದರಿಕೆ ನೆನಪಾಯಿತು. "ಮಂಜೂ ಎಷ್ಟು ಹೊತ್ತಿಗೂ ಗೊಂಬೆ ಆಟ ನಿನಗೆ!" ಎಂದಾಡುತ್ತಿದ್ದ ಮಾತದು.

ಗಣೇಶ ರಾಯರು ಮಂಜುಳೆಯ ತಂದೆ. ಮೊದಲ ಹೆಂಡತಿಯಲ್ಲಿ ಒಬ್ಬನೇ ಮಗ ರತ್ನಾಕರನನ್ನು ಪಡೆದರು. ಅನಂತರ ಅವರ ಪತ್ನಿ ಮೂರು ವರ್ಷಗಳ ಕಾಲ ಬಾಳಿ ಕ್ಷಯರೋಗದಿಂದ ಸತ್ತಳು. ಅನಂತರ ಎರಡನೆಯ ಮದುವೆಯಾದರು. ಆಗುವಾಗಲೇ ನಾಲ್ವತ್ತು ವರ್ಷ ವಯಸ್ಸಾಗಿತ್ತು. ಬಡವರ ಮನೆಯ ಹೆಣ್ಣೊಂದನ್ನು ತಂದು ಲಗ್ನವಾಗಿ ಸುಖವಾಗಿ ಇದ್ದರು. ಅವಳಲ್ಲಿ ಹುಟ್ಟಿದವಳು ಮಂಜುಳೆ. ರತ್ನಾಕರ ಮಂಜುಳೆಯರಲ್ಲಿ ಆರೆಂಟು ವರ್ಷಗಳ ಅಂತರವಿತ್ತು. ರತ್ನಾಕರನಿಗೆ ಮೆಟ್ರಿಕ್ ಮುಗಿದಾಗ ತಂದೆಗೆಷ್ಟೊ ಸಂತೋಷ. ಆ ಸಂತೋಷವನ್ನು ಮಾತ್ರ ಅವರು ಬಹುಕಾಲ ಅನುಭವಿಸಲಿಲ್ಲ. ಮಗ ಇಪ್ಪತ್ತು ವರ್ಷದವನಿದ್ದಾಗಲೇ ಅವನಿಗೆ ಸೋದರಿಕೆಯಿಂದ ಹೆಣ್ಣನ್ನು ತಂದರು. ಮದುವೆಯಾದ ವರ್ಷದ ಕೊನೆಗೆ ಅವರೂ ಮೃತಿಯನ್ನೈದಿದರು. ಮಂಜುಳೆಯ ತಾಯಿ, ಮಂಜುಳೆಯರು ಅಂದಿನಿಂದ ನಿರ್ಗತಿಕರಾದರು. ರತ್ನಾಕರ ತಂದೆಯಂತೆ ಗುಮಾಸ್ತನಾದ; ಸಂಸಾರವನ್ನು ಹೊರೆಯುವ ಹೊಣೆಗೆ ತಲೆಯೊಡ್ಡಿದ. ಅವನ ಮನಸ್ಸು ಕ್ರಮೇಣ ಹೆಂಡತಿ ಸುಮಿತ್ರೆಯ ಅಧಿಕಾರಕ್ಕೊಳಗಾಯಿತು. ಸುಮಿತ್ರೆಗೆ ಅತ್ತೆಯಲ್ಲಿ ಹೆಚ್ಚಿನ ಆದರವಿರಲಿಲ್ಲ. ತನ್ನ ನಾದಿನಿಯು ದುಷ್ಟ ಹುಡುಗಿಯಾಗಿಯೇ ಕಾಣಿಸುತ್ತಿದ್ದಳು. ಆದರಿಂದಾಗಿ ಮಂಜುಳೆಯ ಮನಸ್ಸು ಎಳೆತನದ ಸಂಪೂರ್ಣ ಸುಖಾನುಭವಗಳಿಗೆ ತಡೆಯಾಯಿತು. ಮನೆಯಲ್ಲಿ ಕಾಣದ ಸುಖವನ್ನು ಹೊರಗೆ ಪಡೆಯಲೆತ್ನಿಸಿದಳು. ಗೆಳತಿಯರೊಡನೆ ಬೆರೆತಳು. ನೆರೆಕರೆಯ ಮಕ್ಕಳನ್ನು ಮುದ್ದಾಡಿದಳು. ಅವರ ಮಕ್ಕಳನ್ನು ಮನೆಗೆ ಕರೆದು ತಂದು ತಿಂಡಿ ತೀರ್ಥಗಳನ್ನು ಕೊಟ್ಟು ಅತ್ತಿಗೆಯಿಂದ ಬೈಸಿಕೊಂಡಳು. ಯಾವುದೋ ಒಂದು ದಿಟ್ಟತನ ಅವಳನ್ನಾಳಿಸಿಕೊಂಡಿತು. ತನ್ನ ಅಣ್ಣನ ಹೆಂಡತಿಯು ಹೊರಗಿಂದ ಬಂದು ಮನೆಯ ಪಾರುಪತ್ಯ ನಡೆಸುವುದು, ತನ್ನ ತಾಯನ್ನು ಅನಾದರಿಸುವುದು ಅವಳಿಗೆ ಸರಿದೋರಲಿಲ್ಲ. ಹಾಗೆಂದು ಅಂಜದೆ, ಅಳುಕದೆ, ಅತ್ತಿಗೆಯ ಒಂದು ಮಾತಿಗೆ ನಾಲ್ಕು ಮಾತಾಡತೊಡಗಿದಳು. ಹೆಂಡತಿಯ ಪಕ್ಷ ವಹಿಸುವ ಅಣ್ಣನ ಮೇಲೆ ಇದ್ದ ಅಭಿಮಾನವೂ ಅವಳಿಂದ ಹೋ

ಯಿತು. "ಇವರಿಗೆಲ್ಲ ಒಂದು ದಿನ ನಾನು ಬುದ್ಧಿ ಕಲಿಸಬೇಕು"ಎಂಬ ಚಪಲ ಉಂಟಾಯಿತು. ಆ ಚಪಲಕ್ಕೆ ಸಮನಾದ ಹಟಸಾಧನೆಯ ಗುಣ ಅವಳಲ್ಲಿ ಲ್ಲದುದರಿಂದ ಮನೆಯ ಜೀವನ ಹಾಗೂ ಹೀಗೂ ಸಾಗಿತು. 'ಮಂಜುಳೆ ಬೇಗ ದೊಡ್ಡವಳಾಗಿ, ಅವಳಿಗೊಬ್ಬ ಒಳ್ಳೆಯ ಗಂಡ ಸಿಕ್ಕಿ, ಅವಳು ಸ್ವಂತ ಮನೆ ಮಾಡಿದ ಮೇಲೆ ತಾನು ಈ ಸೊಸೆಯ ಹಂಗಿನಿಂದ ಪಾರಾದೇನು' – ಎಂಬ ಬಯಕೆ ಅವಳ ತಾಯಿಯ ಮನಸ್ಸಿನಲ್ಲಿಯೂ ಉಂಟಾಗಿತ್ತು. ಆದರೆ ನಾಲಿಗೆ ಯಿಂದ ಯಾವ ಗಳಿಗೆಯಲ್ಲೂ ಅವಳು ಮನಸ್ಸನ್ನು ತೋಡಿಕೊಂಡವಳಲ್ಲ. ತನ್ನ ವೈಧವ್ಯವಾಗಲಿ, ಕಷ್ಟಗಳಾಗಲಿ ಪೂರ್ವ ಜನ್ಮದ ಪಾಪದ ಫಲವೆಂದು ತಿಳಿದುಕೊಂಡಳು. ವಿಧಿಯು ಅವಳ ಮನೋವ್ಯಥೆಗೆ ಪಾರುಗಾಣಿಕೆಯನ್ನು ಒದಗಿಸಿತು. ಆಕೆ ಅರಸಿನಮುಂಡಿಗೆ ಬೇನೆಗೆ ಗುರಿಯಾದಳು. ಬಹು ದಿನ, ಸುದ್ದಿ ಇಲ್ಲದೆಯೆ ಕೊರಗಿದಳು. ಕಣ್ಣು, ಚರ್ಮಗಳೆಲ್ಲ ಅತಿ ಅರಸಿನವಾದ ಮೇಲೆ ರತ್ನಾಕರ ಎಚ್ಚೆತ್ತು, ಉಪಚಾರವನ್ನು ನಡೆಯಿಸಿದ. ಔಷಧ ಸಾಲ ದಾಯಿತು. ಆ ಬೇನೆ ಏನೆಂದು ತಿಳಿದುದೂ ತಡವಾಯಿತು. ಒಂದು ರಾತ್ರಿ ಅವಳೂ ಕಣ್ಮುಚ್ಚಿದಳು. ಆಗ ಮಂಜುಳೆಗೆ ಬರಿಯ ಹದಿನೆರಡು ವಯಸ್ಸು. ಮಂಜುಳೆ, ತಂದೆ ತೀರಿಕೊಂಡ ಮೇಲೆ ನಿಜವಾದ ನೋವನ್ನನುಭವಿಸಿದ್ದು ಆ ದಿನವೇ; ಮತ್ತು ಅನಂತರದ ಬಹುದಿನಗಳ ತನಕ. ರತ್ನಾಕರ ತನ್ನ ಮಲ ತಾಯಿಯ ಸಾವಿಗಾಗಿ ಮರುಗಿದ್ದು ನಿಜ. ಅಳುವ ತಂಗಿಯನ್ನು ಅನೇಕ ಬಾರ "ನೀನ್ಯಾಕಮ್ಮ ಅಳುತ್ತೀ? ನಾನಿಲ್ಲವೇ? ನಿನ್ನ ಕೈ ಬಿಡುತ್ತೇನೆಯೇ? ಒಬ್ಬಳೇ ತಂಗಿಯಲ್ಲವೇ ನೀನು"ಎಂದು ಸಮಾಧಾನ ಹೇಳಿದ್ದೂ ನಿಜ. ಆದರೆ ವಾಸ್ತವಿಕ ಜೀವನದಲ್ಲಿ, ಬಾಳು ಬೇರೆಯೇ ಬಗೆಯಲ್ಲಿ ಹರಿಯಿತು. ತಾಯಿಯ ನೆನಪು ಗೋಡೆಯ ಮೇಲೆ ತೂಗಿದ ಅವಳ ಒಂದು ಚಿತ್ರದಲ್ಲಷ್ಟೇ ಉಳಿಯಿತು. ಮನೆಯಲ್ಲಿ ಅವನ ಹೆಂಡತಿ ಸುಮಿತ್ರೆಯ ಸರ್ವಾಧಿಕಾರ ಸ್ಥಾಪನೆಯಾಯಿತು. ಅವಳೆನ್ನುತ್ತಿದ್ದ ಸತ್ಯಗಳ ಜತೆಯಲ್ಲಿ ಸುಳ್ಳುಗಳೂ ಸತ್ಯ ವಾದುವು. ಎರಡುಮೂರು ವರ್ಷಗಳಿಂದ, ಆಚೀಚೆ ಮನೆಗಳಿಗೆ ಸುತ್ತಾಡು ತ್ತಿದ್ದ ಮಂಜುಳೆಯು ಒಬ್ಬಳು ಬಸವಿಯಾಗಿ ಅವಳ ಕಣ್ಣಿಗೆ ಕಾಣಿಸತೊಡಗಿ ದಳು. ಹೊರಗೆ ಹೋಗಕೂಡದೆಂದು ಆಜ್ಞಾಪಿಸಿದರೂ ಅಲಕ್ಷಿಸಿ, ಅಷ್ಟೇ ತಿರಸ್ಕಾರದಿಂದ ಗೆಳತಿಯರ ಮನೆಗೆ ಹೋಗಿ ಬರುತ್ತಿದ್ದ ಮಂಜುಳೆಯು, ಅಣ್ಣನ ಮನಸ್ಸಿಗೂ ಅನಾವಶ್ಯಕವಾದ ಸಂಶಯಕ್ಕೆ ಎಡೆಮಾಡಿಕೊಟ್ಟಳು.

ಸುಮಿತ್ರ 'ಅವಳನ್ನು ಶಾಲೆಗೆ ಕಳುಹಿಸುವುದನ್ನು ನಿಲ್ಲಿಸಿ ಬಿಡಿ; ಮನೆಗೆಲಸ ನನ್ನೊಬ್ಬಳಿಂದಾಗುವುದಲ್ಲ. ಇವಳು ಯಾವ ಹೊತ್ತಿಗೆ ಬರುತ್ತಾಳೆ, ಯಾವಾಗ ಹೊರಡುತ್ತಾಳೆ–ಎಂದು ತಿಳಿಯುವುದಲ್ಲ. ಅವಳಿಂದ ನಮ್ಮ ಕುಟುಂಬಕ್ಕೆ ಅಪಕೀರ್ತಿ' ಎಂಬ ವಿಷ ಬೀಜವನ್ನು ಬಿತ್ತಿದಳು. ಅಣ್ಣ ಅವೇ ಮಾತುಗಳಿಗೆ ಮಾರ್ದನಿಗೊಟ್ಟ. ಮಂಜುಳೆ ಉದ್ಧಟೆಯಾದಳು. "ಹೌದು, ನನ್ನ ಖುಶಿ ಕಂಡಂತೆ ಮಾಡುತ್ತೇನೆ. ನೀವೇನು ಮಾಡುತ್ತೀರಿ?" ಎಂದೇಬಿಟ್ಟಳು. ಅಲ್ಲಿಂದ ಅಣ್ಣ ಸುಮ್ಮನಾಗಿಬಿಟ್ಟ. ನಾದಿನಿ ಮಾತ್ರ ಸುಮ್ಮನಾಗಲಿಲ್ಲ.

ಮಂಜುಳೆಯ ಮನಸ್ಸು ಈ ಎಲ್ಲ ಕಾರಣಗಳಿಂದ ತೀರ ಒಡೆಯಿತು; ಮನೆಯ ವಿಷಯದಲ್ಲಿ ಅನಾದರಗೊಂಡಿತ್ತು. ಹೆಂಡತಿಯ ಮಾತನ್ನು ಕೇಳುತ್ತಿರುವ ಅಣ್ಣನನ್ನು ತಿಂಗಳಿಗೊಂದೆರಡು ಬಾರಿ ಮಾತನಾಡಿಸುವ ವಿಂತಿಯನ್ನಷ್ಟೆ ಪಡೆಯಿತು. ಸಂಬಳ ಕೇಳುವುದಕ್ಕೆ, ತನಗೆ ಈ ಸೀರೆ ಬೇಕು, ಈ ಬಟ್ಟೆ ಬೇಕು–ಎನ್ನುವುದಕ್ಕೆ ಮಾತ್ರ ಅವಳ ಮಾತುಕತೆ. ಆದರೆ ಆಡಂಬರ ಅವಳ ರೀತಿಯಾಗಿರಲಿಲ್ಲ. ಅನಾವಶ್ಯಕವಾದ ವೆಚ್ಚ ಅವಳಿಗೆ ಬೇಕಿರಲಿಲ್ಲ. ಆಚೀಚಿನ ಮಕ್ಕಳನ್ನು ಅಲಂಕರಿಸಿ, ತನ್ನ ಕಸೂತಿ, ಹೊಲಿಗೆಯ ಚಪಲ ತೀರಿಸಿಕೊಳ್ಳುವುದಕ್ಕಷ್ಟೆ ನಾಲ್ಕು ಕಾಸುಗಳನ್ನು ಕೇಳುತ್ತಿದ್ದಳು. ಅಂಥ ವೇಳೆ, ಅತ್ತಿಗೆ ನಡುವೆ ಬಾಯಿ ಹಾಕುತ್ತಿದ್ದುದರಿಂದ ಅದನ್ನೂ ಕೇಳುವುದನ್ನು ನಿಲ್ಲಿಸಿದಳು. ಮುಂದೆ ತಾನು ಸ್ವತಂತ್ರಳಾಗಬೇಕು; ಆಗಿಯೇ ಆಗುತ್ತೇನೆ–ಎಂಬ ಧೈರ್ಯ ಅವಳಿಗೆ. ಓದಿ, ಕಲಿತು, ಮುಂದೆ ತಾನೊಂದು ಕೆಲಸ ಸಂಪಾದಿಸಬೇಕು ಎಂಬ ಬಯಕೆ ಅವಳಲ್ಲಿ ಉಂಟಾಯಿತು. ಅಲ್ಲದೆ ತಾಯಿ ಇರುವಾಗಲೇ ಮನೆಯ ವಿಚಾರಗಳನ್ನು ಸ್ವಲ್ಪವಾದರೂ ತಿಳಿದುಕೊಂಡಿದ್ದಳು. ಅವಳ ತಂದೆ ಸಾಯುವಾಗ ಉಯಿಲು ಮಾಡಿ ಸತ್ತಿದ್ದರು. ತಮ್ಮಲ್ಲಿದ್ದ ಏಳು ಸಾವಿರ ರೂಪಾಯಿಗಳನ್ನು ಪಾಲುಮಾಡಿ, ಎರಡು ಸಾವಿರವನ್ನು ತಮ್ಮ ಮಡದಿಗೂ ಅನಂತರ ಅದು ಮಗನಿಗೂ; ಉಳಿದ ಐದು ಸಾವಿರವನ್ನು ಮಗಳ ಮದುವೆಗೂ ಸಿಗುವಂತೆ ಉಯಿಲು ಮಾಡಿದ್ದರು. ತನ್ನ ಪರೀಕ್ಷೆ ಪೂರ್ಣವಾದರೆ ಆ ಹಣವನ್ನು ತನ್ನ ಓದಿಗೆ ಪಡೆದು ತಾನು ಪಾರಾಗುತ್ತೇನೆ–ಎಂಬುದು ಮಂಜುಳೆಯ ಯೋಚನೆ. ಆದರೆ ಸುಮಿತ್ರ ಅಷ್ಟು ಹೆಡ್ಡಳಲ್ಲ. ಇವಳ ಓದುವ ಹಂಬಲ ಅವಳಿಗೂ ಗೊತ್ತು. 'ಅವಳು ಓದುವವಳಲ್ಲ. ಯಾರ ಬೆನ್ನನ್ನಾದರೂ ಹಿಡಿದು ಓಡುವವಳು. ಅವಳ ಮದುವೆ ಮಾಡಿ

ಕೊಳ್ಳುವ ಕಾಲ ಬಂದಾಗ, ಐದುಸಾವಿರ ಕೊಡಬೇಕೇ ಹೊರತು ಮುಂಚಿತವಾಗಿ ಅಲ್ಲ' ಎಂದು ಗಂಡನಿಗೆ ಬೋಧಿಸಿದಳು. ಪಿತ್ರಾರ್ಜಿತ ಭೂಮಿಯು ಸ್ವಲ್ಪ ಹುಟ್ಟುವಳಿ ತರುತ್ತಿದ್ದುದರಿಂದ, ರತ್ನಾಕರ ತಂಗಿಗೆ ಮನೆಯಲ್ಲಿರುವಷ್ಟು ದಿನ ಅನ್ನ ಹಾಕುವುದು ಕರ್ತವ್ಯವೆಂದು ತಿಳಿದಿದ್ದ. ತಂಗಿ ತಪ್ಪುದಾರಿ ಹಿಡಿಯುವುದಾದರೆ, ಅವಳ ಐದು ಸಾವಿರವನ್ನು ಅವಳಿಗೆ ಕೊಡುವುದು ಅವಶ್ಯವಿಲ್ಲ—ಎಂಬ ತೀರ್ಮಾನಕ್ಕೆ ಅವನ ಮನಸ್ಸೂ ಕೆಲವೊಮ್ಮೆ ಹೂಂಗುಡುತ್ತಿತ್ತು. ತಂಗಿಯ ಸ್ವಭಾವವನ್ನು ನೋಡಿ ಅವನೂ ತೀರ ಮುನಿದಿದ್ದಾನೆ.

ಮಂಜುಳೆಯು ಮುಂದಕ್ಕೆ ವಿಚಾರಮಾಡಬೇಕಾದ ಕಾಲ ಬಂದೊದಗಿತು. ಆಲಸ್ಯದಿಂದ ಕಳೆಯಬಹುದಾದ ರಜಾದಿನಗಳು ಸಾಗಿದವು. 'ಪರೀಕ್ಷೆಯಲ್ಲಿ ತಾನು ಪಾಸಾಗಬಹುದು; ಅದೊಂದು ಕಷ್ಟವಾಗಲಾರದು. ಮುಂದೆ ಇಂಟರ್ ಮೀಡಿಯಟ್ ಓದಬೇಕು' ಎಂಬ ವಿಚಾರ ಹೊಳೆದಿದ್ದರೂ ಅದಿನ್ನೂ ದೃಢವಾಗಿಲ್ಲ. ಗೆಳತಿಯರ ಮನೆಗೆ ರಜೆಯ ದಿನಗಳಲ್ಲಿ ಹೋಗಿಬರುತ್ತಾಳೆ. "ಊರ್ವಶಿ, ನೀನೇನು ಮಾಡುತ್ತೀ? ನಂದಿನಿ, ನೀನ್ಯಾಕೆ ಕಲಿಯಬಾರದು? ನಿನಗಂತು ದುಡ್ಡಿನ ಹೆದರಿಕೆ ಇಲ್ಲವೇ ಇಲ್ಲ. ವಿನೂ, ನಿನ್ನ ವಿಚಾರ ಏನು?" ಎಂದು ಅವರನ್ನೆಲ್ಲ ಮಾತನಾಡಿಸತೊಡಗಿದಳು. ಮನಸ್ಸಿನಲ್ಲಿ, ಮನೋಹರನನ್ನು ಕೇಳೋಣ—ಎಂಬ ಆಸೆಯೂ ಮೂಡುತ್ತಿತ್ತು. ಆದರೆ ಆತ ಮಾತ್ರ ಹಳ್ಳಿಗೆ ಹೋದವನು ಮುದ್ದೂರಿಗೆ ಇನ್ನೂ ಬಂದಿರಲಿಲ್ಲ. ಇಲ್ಲದೆ ಹೋದರೆ ಕೇಳುವುದಕ್ಕೆ ಅವನೇ ತಕ್ಕವ ಎಂಬ ಭಾವನೆಯಾಗುತ್ತಿತ್ತು. ನಾಟಕ ಕೊನೆಗೊಂಡಂದಿನಿಂದ ದಿನಕ್ಕೊಂದು ಕ್ಷಣವಾದರೂ ಮನೋಹರನ ಸುಂದರ ಸ್ನೇಹಮಯ ರೂಪ ಅವಳ ಕಣ್ಮುಂದೆ ಹಾಯದಿರುತ್ತಿರಲಿಲ್ಲ. ಅವನಿಗೆ ಪತ್ರ ಬರೆಯುವ ಆಸೆಯೂ ಒಮ್ಮೊಮ್ಮೆ ಹುಟ್ಟುತ್ತಿತ್ತು. ಆದರೆ ಅವನ ವಿಳಾಸವೂ ತಿಳಿಯದು. ಮನಸ್ಸಿಗೆ ಹೊಳೆದುದನ್ನು ಆ ಕೂಡಲೆ ಮಾಡಲು ಸಿದ್ಧಳಾದ ಅವಳು, ಯೋಚನೆ ಹೊಳೆದಾಕ್ಷಣ, ಅವನ ವಿಳಾಸ ದೊರಕಿದ್ದರೆ ಕಾಗದವನ್ನು ಬರೆದೂ ಬರೆಯುತ್ತಿದ್ದಳು. ವಿಳಾಸ ಹೇಳುವವರಿಲ್ಲದೆ ಹೋಯಿತು. ಆದರೂ—ಆತ ಬಂದಾನು; ಈ ಊರಿಗೆ ಬಂದರೆ ತನ್ನನ್ನು ಕಾಣದೆ ಹೋಗಲಾರ—ಎಂದು ಅವಳ ಮನಸ್ಸು ಹೇಳುತ್ತಿತ್ತು. ಆದೊಂದು ದಿವಸ ಮಂಜುಳೆ ವಿನತೆಯ ಮನೆಗೆ ಹೋಗಿದ್ದಳು. ವಿನತೆಯೊಡನೆ "ನೀನೇನು ಮಾಡುತ್ತೀ ಹೇಳು? ನೀನು ಮಂಗಳೂರಿಗೆ ಹೋಗುವುದಾದರೆ ನಾನೂ

ಹೋಗುತ್ತೇನೆ. ಮಂಗಳೂರಿನಲ್ಲಿ, ಹಾಸ್ಟೆಲಿನಲ್ಲೋ ವನಿತಾಶ್ರಮದಲ್ಲೋ ಇಬ್ಬರೂ ಸೇರಿ ಗಮ್ಮತ್ತಿನಲ್ಲಿರುವ. ನನಗಂತೂ ನಮ್ಮ ಮನೆಯು ಕರಿಕರಿ ಹುಟ್ಟಿಸಿಬಿಟ್ಟಿದೆ. ನನ್ನ ಅಣ್ಣ, ಅತ್ತಿಗೆಯರಿಬ್ಬರಿಗೂ ನಾನು ಬೇಡವಾಗಿದ್ದೇನೆ. ನಾನು ಸತ್ತರೂ ಅವರಿಗೆ ಚಿಂತೆಯಿಲ್ಲ. ಕಾಲೇಜಿಗೆ ಸೇರಿ ರಜೆ ಸಿಕ್ಕಿದಾಗಲೂ ನಾನು ಈ ಊರಿಗೆ ಬರುವವಳಲ್ಲ. ಬಂದರೂ ನಮ್ಮ ಮನೆಯಲ್ಲಿ ಇರುವವಳಲ್ಲ" ಎಂದು ಬಡಬಡಿಸತೊಡಗಿದಳು. ವನಿತೆಗೆ ಅವಳಲ್ಲಿ ಪ್ರೀತಿ ಹೆಚ್ಚು. ತನ್ನ ಗೆಳತಿ ಈ ತನಕ ಅಷ್ಟೊಂದು ಸಂಕೋಚದ ಆವರಣದಲ್ಲಿ ಬೆಳೆದವ್ವಾಳೆ ಎಂಬ ಕಲ್ಪನೆ ಅವಳಿಗೆ ಆಗಿರಲಿಲ್ಲ. ಮೊದಲ ಬಾರಿಗೆ ಅವಳಿಂದ ಅದನ್ನು ಕೇಳಿ ಆಶ್ಚರ್ಯವಾಯಿತು. ಅವಳಿಗಾಗಿ ಮರುಕಗೊಂಡಳು. ಅನಂತರ "ನನಗೂ ಮಂಗಳೂರಿಗೆ ಹೋಗುವ ಆಸೆ ತುಂಬ. ಏನಾಗದೆ ಹೋದರೆ ಬಿ. ಎ., ಎಲ್. ಟಿ. ಆಗುವಂಥ ಯೋಚನೆ ನನ್ನದು. ಮೆಡಿಕಲಿಗೆ ತುಂಬ ಹಣ ಬೇಕಂತೆ. ಅಲ್ಲಿ ಪ್ರವೇಶ ಸಿಗುವುದೂ ಕಷ್ಟವಂತೆ. ಇದಕ್ಕೂ ಆರು ವರ್ಷ ಬೇಕು. ಅಮ್ಮನನ್ನು ಕೇಳಿದರೆ 'ದುಡ್ಡೆಲ್ಲಿ?' ಅನ್ನುತ್ತಾಳೆ. ಬರಿಯ ಇಷ್ಟಕ್ಕೆ ವಿದ್ಯೆ ನಿಲ್ಲಿಸಿಬಿಟ್ಟು, ಟೀಚರ್ ಆಗುವ ಪಾಡು ಬರುತ್ತದೋ ಏನೋ—ಯಾರು ಬಲ್ಲರು? ನಾರ್ಣಪ್ಪಯ್ಯನವರಿಂದ ಅಮ್ಮನಿಗೆ ಹೇಳಿಸಿ ನೋಡಬೇಕಷ್ಟೆ. ನಮ್ಮ ಅಮ್ಮನ ಮನಸ್ಸು ಏನೆಂದೇ ನನಗೆ ತಿಳಿಯುವುದಿಲ್ಲ. ಅವಳು ಬಾಯ್ತೆರೆದು ಏನನ್ನೂ ನನ್ನೊಡನೆ ಹೇಳುವುದಿಲ್ಲ."

"ನಿನ್ನಮ್ಮನಿಗೆ ನಿನ್ನ ಮೇಲೆ ಪ್ರೀತಿಯೇ ಇಲ್ಲ, ನೀನು ಹೇಳಿದ ಹಾಗೆ ಕೇಳಲಾರಳು—ಅನ್ನುತ್ತೀಯಾ"

"ಪ್ರೀತಿ ಇಲ್ಲ ಎಂದೇನೇ? ಪ್ರೀತಿಯೇನೋ ತುಂಬಾ ಇದೆ. ಆದರೆ ಅವಳ ಮನಸ್ಸಿನ ದಾರಿ ಏನೆಂಬುದು ನನಗೆ ಗೊತ್ತು. ಆದರೆ ನಾನು ಮಾತ್ರ ಪ್ರಾಣವಿರುವ ತನಕ ಆ ದಾರಿಗೆ ಹೋಗುವವಳಲ್ಲ."

ಮಂಜುಳೆ ತನ್ನ ಗೆಳತಿಯ ಕುಲವನ್ನು ನೆನೆದಳು. ಅವಳಿರುವ ಪರಿಸ್ಥಿತಿಯನ್ನು ನೆನೆದಳು. ಅವಳಂತಹಳು ಕೂಡ ವಿವಾಹಿತ ಬಾಳ್ವೆಯನ್ನು ಬಯಸುತ್ತಿರುವಳೆಂಬ ಬೋಧೆ ಆಗದಿರಲಿಲ್ಲ. ಆ ಗಳಿಗೆಗೆ ಅವಳ ಮನಸ್ಸಿನಲ್ಲಿ ಮನೋಹರನ ನೆನಪು ಹೊಳೆಯಿತು. 'ತಾನು ಅವನನ್ನು ಮದುವೆಯಾದರೆ ಚೆನ್ನಲ್ಲವೆ! ಇಬ್ಬರೂ ಜತೆಯಲ್ಲಿ ಕಲಿಯಬಹುದಲ್ಲ' ಎಂದು

ಏನೇನೋ ಹುಚ್ಚು ದಾರಿ ಹಿಡಿಯಿತು. ಅಷ್ಟಕ್ಕೆ ಮಾಧವಿ ಅಲ್ಲಿಗೆ ಬಂದಳು. ಆಗ ಮಂಜುಳೆ "ನಾಣೀ, ಏನು ಸುದ್ದಿ ಹೇಳು" ಎಂದು ಕೇಳಿದಳು.

"ಅದನ್ನೇ ಹೇಳುವುದಕ್ಕೇನೆ ನಾನು ಬಂದದ್ದು. ನಮ್ಮ ನಂದನಿಗೆ ಮದುವೆ ನಿಶ್ಚಯವಾಗಿದೆ; ಗೊತ್ತೇ?" ಆ ಎಂದು ಮದುವೆಯ ಸಮಾಚಾರ ತೆಗೆದುಕೊಂಡಳು. ಆ ಸುದ್ದಿ ವಿನತೆಗೆ ಹೊಸತಲ್ಲ. ನಾರ್ಣಪ್ಪಯ್ಯನವರಿಂದ ಅವರ ಮನೆಗೂ ಆ ಸುದ್ದಿ ಮುಟ್ಟಿತ್ತು. ಆದರೆ ವಿನತೆ ಮಾತ್ರ ಇಂಥ ಸುದ್ದಿಗಳಲ್ಲಿ ಆಸ್ತಿಕಳಾಗಿರಲಿಲ್ಲ. ಮಾಧವಿ ಬಂದ ಮೇಲೆ ಕೇಳಬೇಕೇನು? ನಂದನಿಯ ಗಂಡನಾಗುವವನೆಲ್ಲಿನವ; ಹೆಚ್ಚಾಗಿ ಓದಿದವನಲ್ಲವಾದರೂ ಎಷ್ಟು ಆಸ್ತಿಯಿದೆ; ಎಷ್ಟು ವ್ಯಾಪಾರವಿದೆ— ಎಂದೆಲ್ಲ ಹೇಳಿದಳು. ಹುಡುಗಿಯ ಮನೆಯವರು ಎಷ್ಟುಬಂಗಾರ ಹಾಕುತ್ತಾರೆ;ಎಷ್ಟುವರದಕ್ಷಿಣೆಯನ್ನುಕೊಡುತ್ತಾರೆ–ಎಂದೆಲ್ಲ ತಿಳಿಸಿದಳು. ಮುಂದಣ ವಾರವೇ ಲಗ್ನವಾದುದರಿಂದ, ನಂದನಿಯ ತಾಯಿ ಮಾಧವಿಯನ್ನು ತಮ್ಮ ಮನೆಗೇನೇ ಬಂದಿದ್ದು, ಲಗ್ನ ಕಳೆಯುವ ತನಕ ಇರಲಿಕ್ಕೆ ಹೇಳಿದ ಶುಭ ಸಮಾಚಾರವನ್ನೂ ತಿಳಿಸಿದಳು. "ನಾನೀಗ ಅಲ್ಲಿಗೇನೇ ಹೊರಟದ್ದು. ಬರುತ್ತೀಯಾ ವಿನೂ; ಬರುತ್ತೀಯಾ ಮಂಜುಳಾ" ಎಂದು ತನ್ನ ಆಮಂತ್ರಣವನ್ನಿತ್ತಳು.

"ಆ ಪುಳಿಮೂಟೆಯ ಮನೆಗೆ ಯಾರು ಹೋಗುತ್ತಾರೋ" ಎಂದಳು ಮಂಜುಳೆ ನಗುತ್ತ.

"ಹಾಗಿಲ್ಲವೇ! ನಂದನಿಯ ಸ್ವಭಾವ ನಿನಗೆ ಗೊತ್ತಿಲ್ಲ. ನೀವೆಲ್ಲರೂ ಸೇರಿ – ಅವಳನ್ನು 'ಪುಳಿಮೂಟೆ' ಎಂದು ಚೇಷ್ಟೆ ಮಾಡುವುದು ಬರಿಯ ಅನ್ಯಾಯ. ಪಾಪದವಳು ಅವಳು. ಅವರ ಮನೆಯವರೆಷ್ಟು ದೊಡ್ಡವರು! ನಾನೆಷ್ಟು ಬಡವಳು. ಆದರೆ ಅವಳ ಮನೆಗೆ ಹೋದರೆ, ಒಂದಿಷ್ಟು ಜಂಬವನ್ನು ಅವಳು ತೋರಿಸಿದ್ದೆಂಬುದಲ್ಲ. ಅವಳೂ ಹಾಗೆಯೇ; ಅವಳ ತಾಯಿಯೂ ಹಾಗೆಯೇ; ಅವಳ ಮನೆಯವರೇ ಹಾಗೆ. ನೀನು ಈ ವರೆಗೆ ಹೋಗಿಲ್ಲ ಎಂದು ಕಾಣುತ್ತೆ— ಅದಕ್ಕೇ ಹೇಳುತ್ತೀಯ."

"ನೀನು, ನಾಣಿ, ಜವಾನರ ಹಾಗೆ ಯಾರ ಹಿಂದೆಯೂ ನಿಂತು ಕುಂಚ ಬೀಸುವುದಕ್ಕೆ ತಯಾರು. ನಿನ್ನಂಥವರನ್ನು ಕಂಡರೆ ಅವರಿಗೆ ಖುಶಿ. ತನಗಿಂತ ಕುಸು ಚಂದವಿದ್ದವರನ್ನು, ಹೆಚ್ಚಿಗೆ ಬುದ್ಧಿ ಇದ್ದವರನ್ನು ಕಂಡರೆ ಅವಳಿಗೆ ಆಗದೇ ಆಗದು."

"ಹೌದು, ಆಗದು! ಏನೇನೆಲ್ಲ ಅನ್ಯಾಯ ಹೇಳಬೇಡ. ನಾಳೆ ಮದುವೆಯಾಗಿ, ಅವಳು ಗಂಡನ ಮನೆಗೆ ಹೋದರೆ, ಈಗ ಕಾಣಬಹುದಾದಂತೆ, ನಿತ್ಯವೂ ಕಾಣಸಿಗುತ್ತಾಳೆಯೇ? ನಾವೆಲ್ಲರು ಒಂದೇ ಶಾಲೆಯವರು; ಒಂದೇ ಕ್ಲಾಸಿನವರು. ಹಳೆಯ ಯಾವುದಾದರೂ ಒಂದು ಮಾತನ್ನು ನೆನೆದುಕೊಂಡು ಮನಸ್ಸು ಕೆಡಿಸಿಕೊಳ್ಳಬಾರದು" ಎಂದು ಉಪದೇಶಿಸಿ, ಗೆಳತಿಯರನ್ನು ತನ್ನ ಜತೆಗೆ ಅಲ್ಲಿಗೆ ಬರಲು ಒತ್ತಾಯಿಸಿದಳು. ವಿನತೆ ಆಗ 'ಒಲ್ಲೆ' ಎಂದಳು. ಕಾರಣವನ್ನು ಹೇಳಲಿಲ್ಲ. ಮಂಜುಳೆಗೆ ಹೊತ್ತು ಕಳೆಯುವುದಕ್ಕೆ 'ಹೋದರೇನು?' ಎಂದು ತೋರಿತು; ಅಲ್ಲಿಂದೆದ್ದಳು. ಆದರೆ, ಬರಿಯ ಮಾಧವಿಯ ಜತೆ ಸಾಲದೆಂದು "ನಾನು ಬೇಕಾದರೆ, ನೀನು ಬರಬೇಕು" ಎಂಬ ದಾಕ್ಷಿಣ್ಯಕ್ಕೆ ವಿನತೆಯನ್ನು ಕೆಡವಿ, ಅವಳನ್ನೂ ಜತೆಗೆ ಕರೆದೊಯ್ದಳು.

ವಿನತೆ ಮನೆಯಿಂದ ಹೊರಡುವುದಕ್ಕೇನೋ ಹೊರಟಳು. ಆದರೆ ಹೋಗುಹೋಗುತ್ತ ಅವಳ ಉತ್ಸಾಹ ತಗ್ಗಿತು. ತಾನೆಲ್ಲಿಗೆ ಹೋಗುತ್ತಿದ್ದೇನೆ ಎಂಬ ಅರಿವಾಯಿತು. ಬಹುದಿನ ತನ್ನೊಡನೆ ಮಾತು ಬಿಟ್ಟ ನಂದಿನಿಯ ಮನೆಗೆ ಹೋಗುವ ಮೊದಲು, ತನ್ನ ತಾಯನ್ನು ಕೇಳಬೇಕಿತ್ತು-ಎಂದೆನಿಸಿತು. ಕಾಲುಗಳನ್ನು ಎಳೆದುಕೊಂಡು ಹೋದಂತೆ ಹೋದಳು. ಹಿಂದು ಮುಂದಿನ ಅರಿವಿಲ್ಲದ ಮಾಧವಿ ಅವರನ್ನೆಬ್ಬಿಸಿಕೊಂಡು ಹೊರಟಾಗ, 'ಜತೆಗೆ ಇವರೂ ಇದ್ದಾರೆ. ಏನೂ ಆಗಲಾರದು' ಎಂಬ ಧೈರ್ಯದಿಂದ ಹೆಜ್ಜೆ ಹಾಕಿದಳು.

ಬಾಯಿ ತುಂಬ ಮಾತನಾಡುತ್ತ ಮಂಜುಳೆ, ವಿನತೆ, ಮಾಧವಿಯರು ಆನಂದ ನಾಯಕರ ಮನೆಯನ್ನು ಸೇರುವಾಗ, ನಂದಿನಿ ಹೊರಗೇನೆ ಬಂದು ಸ್ವಾಗತಿಸಿದಳು. ತನ್ನನ್ನು ಕಾಣುವುದಕ್ಕೆ ಬಂದ ಗೆಳತಿಯರನ್ನು, ಮನೆಯೊಳಗೆ ನಗುತ್ತ ಕರೆದೊಯ್ದಳು; ಕುಳ್ಳಿರಿಸಿದಳು. ತಾಯಿಯ ಬಳಿಗೋಡಿ ಸುದ್ದಿಯನ್ನು ಹೇಳಿದಳು: ಆಕೆ ಬಂದವರ ಮುಖ ನೋಡಿ, ಮಗಳ ಅಪ್ಪಣೆಯಂತೆ ಉಪಹಾರ ತರಲು ಹೋದಳು. ಅವರು ಕುಳಿತ ಕೋಣೆಯೊಳಗೆ ಗೆಳತಿಯರ ಸ್ವರ ತುಂಬಿ ಮಾರ್ದನಿಸುತ್ತಿತ್ತು. ವಿನತೆಯೊಬ್ಬಳೇ, ಮೊಣಕಾಲುಗಳನ್ನು ಕೈಯಿಂದ ಬಿಗಿದು, ಮಣಿಗಂಟುಗಳ ಮೇಲೆ ಗಲ್ಲವನ್ನಿರಿಸಿ ಬೇಕೋ ಬೇಡವೋ ಎಂದು ಉದಾಸೀನಳಾಗಿ ಕುಳಿತಿದ್ದಳು. "ಏನು, ವಿನೂ, ಮಾತೇ ಆಡುವುದಿಲ್ಲ" ಎಂದಳು ನಂದಿನಿ. ಅವಳ ನುಡಿಯಲ್ಲಿ ಕಹಿ ಇರಲಿಲ್ಲ. ಸ್ನೇಹ ತುಂಬಿತ್ತು.

"ಮಾತನಾಡುವ ಕೆಲಸವೆಲ್ಲ ಮದುಮಗಳಿಗೆ" ಎಂದಳು ಮಂಜುಳೆ. ಅಷ್ಟಕ್ಕೆ ನಂದನಿಯ ತಾಯಿ ಬಂದಳು. ಅವಳಿಗೆ ವಿನತೆಯ ಗುರುತಾಯಿತು. ಒಂದು ಕ್ಷಣ ಕಣ್ಣಿನಲ್ಲಿ ಸಿಟ್ಟು, ತಿರಸ್ಕಾರ ಮೂಡಿದಂತೆಯೂ ಕಾಣಿಸಿತು. "ಇವರೋ!" ಎಂದ ಅವಳ ಮಾತಿನಲ್ಲಿ, ಬಂದವರಲ್ಲಿ ಕೆಲವರ ಬಗ್ಗೆ ಆದರ, ವಿನತೆಯ ಬಗ್ಗೆ ಅನಾದರ, ಮುಚ್ಚುಮರೆ ಇಲ್ಲದಂತೆ ಕಾಣಿಸಿತು. ಆಕೆ ಬಂದವಳು ಥಟ್ಟನೆ ಹೊರಟುಹೋದರೂ, ಒಂದು ಕ್ಷಣ ಕಾಲ ಅವಳ ಮುಖದಲ್ಲಿ ಕಾಣಿಸಿದ ಈ ಭಾವ ವಿನತೆಯ ದೃಷ್ಟಿಗೆ ಗೋಚರವಾಯಿತು. ಆಕೆ ಸರಿದು ಹೋದ ಮೇಲೆ, ವಿನತೆ ಮೆಲುದನಿಯಲ್ಲಿ "ನಾನು ಬಂದದ್ದು ನಿನ್ನಮ್ಮನಿಗೆ ಬೇಸರವಾಗಿರಬೇಕು" ಎಂದೂ ಅಂದಳು. ಆಗ ನಂದಿನಿ "ಇಲ್ಲವೇ, ಇಲ್ಲವೇ" ಎಂದೆಷ್ಟು ಹೇಳಿದರೂ ವಿನತೆಯ ಸಂಶಯ ಹಾಗೆಯೇ ಉಳಿಯಿತು. ಅನಂತರ ಒಳಗಿಂದ ಅವಳ ತಾಯಿಯ ಕರೆ ಕೇಳಿಸಿತು. ನಂದಿನಿಯೇ ಹೋಗಿ ಉಪಾಹಾರವನ್ನು ಗೆಳತಿಯರ ಮುಂದೆ ತಂದಿರಿಸಿದಳು. ಎಲ್ಲರೂ ಮಾತನಾಡುತ್ತ ಅದನ್ನು ಮುಗಿಸಿದರು. ವಿನತೆ ಅರ್ಧ ಮನಸ್ಸಿನಿಂದ ತಿನ್ನುತ್ತಿದ್ದುದನ್ನು ಕಂಡು, ಅವಳಿಗೆ ನೋವಾಗಿದೆ ಎಂಬುದನ್ನು ನಂದಿನಿ ಅರಿತುಕೊಂಡಳು. ಆ ಗೆಳತಿಯರನ್ನು ಮನೆಯಲ್ಲೇ ಬೀಳ್ಕೊಡುವ ಬದಲು ಅವರೊಂದಿಗೆ ತುಸು ದೂರ ಹೋದಳು. ದಾರಿಯಲ್ಲಿ ಮಂಜುಳೆ ತೊಲಗಿದಳು. ನಂದಿನಿ, ಮಾಧವಿಯರಿಬ್ಬರೂ ವಿನತೆಯ ಮನೆಯ ತನಕವೂ ಹೋದರು. ನಂದಿನಿ ವಿನತೆಯ ಕೈಹಿಡಿದು "ಖಂಡಿತಕ್ಕೂ ನನ್ನ ಮದುವೆಗೆ ಬರಬೇಕು" ಎಂದು ಬಲವಂತ ಮಾಡಿ, ಅವಳು 'ಆಗಲಿ' ಎನ್ನುವ ತನಕವೂ ಬಿಡಲಿಲ್ಲ. ಆಕೆಗೂ ತನ್ನ ಹಿಂದಿನ ನಡತೆಯು ನೆನಪಾಯಿತು. ತಾನು ವಿನತೆಯಲ್ಲಿ ಅನ್ಯಾಯವನ್ನು ಎಣಿಸಿದ್ದು ಸಮನಲ್ಲವೆಂದೂ ಕಂಡಿತು. ತಾವು ಅಗಲುವ ಮುನ್ನ ಸ್ನೇಹಿತರಾಗಿ ಅಗಲುವ ಎನ್ನುವ ಬಯಕೆಯಿಂದ, ಅಷ್ಟು ಹೇಳುವುದಕ್ಕೇನೇ ಅವಳು ಬಂದು ಹೋದಳು. ಅದರಿಂದ ವಿನತೆಗೂ ತುಂಬ ಸಮಾಧಾನವಾಯಿತು.

ವಿನತೆ ತನ್ನ ಮನೆಗೆ ಬಂದರೆ ಮುಂದಿನ ನೆನಪುಗಳು ಹೆಚ್ಚಿದುವು. ಅದನ್ನೇ ನೆನೆದು, ಆಕೆ ತಾಯೊಡನೆ ತನ್ನ ಭವಿಷ್ಯವನ್ನು ಕುರಿತು ತಿರುಗಿ ಪ್ರಸ್ತಾಪ ತೆಗೆಯಲು ಆತುರಗೊಂಡಳು. 'ಅಮ್ಮ, ಮಂಜುಳೆಯೂ ಮಂಗಳೂರಿಗೆ ಹೋಗುತ್ತಾಳಂತೆ; ಇಂಟರ್ ಕಲಿಯುತ್ತಾಳೆ. ಹಾಸ್ಟೇಲಿನಲ್ಲಿಯೋ

ವನಿತಾಶ್ರಮದಲ್ಲಿಯೋ ಇಬ್ಬರೂ ಕೂಡಿಯೇ ಇರಬಹುದು" ಎಂದಳು. ಅದು ಅವಳ ಮಾತಿನ ಪೀಠಿಕೆ. ಆದರೆ ಅದಕ್ಕೆ ಸಮನಾದ ಉತ್ತರ ತಾಯಿಯಿಂದ ದೊರಿಯಲಿಲ್ಲ. ಅವಳು ತನ್ನ ಮಗಳ ಆಸೆಯನ್ನು ಗಾಳಿಗೆ ತೂರಿ ಬಿಡಲೂ ಇಲ್ಲ. "ಅದಕ್ಕೆ ಈಗಲೇ ಏನು ಅಷ್ಟು ಅವಸರ? ಪರೀಕ್ಷೆಯ ಪಾಸು ಫೈಲು ಬಂದಾಗಬೇಕಲ್ಲ" ಎಂದಳು.

"ಪಾಸಾಗದಿದ್ದರೆ ಹೇಗೂ ಹೋಗುವುದಕ್ಕಿಲ್ಲವಲ್ಲ.- ಪಾಸು ಆಗುತ್ತೇನೆ ಎಂಬ ಧೈರ್ಯವಿದೆ ನನಗೆ. ಹಾಸ್ಟೆಲು, ಗೇಸ್ಟೆಲು ಎಂದರೆ ಮೊದಲೇ ಹೋಗಿ ಮಾತನಾಡಿ ಬರುವುದು ಒಳಿತು. ಅನಂತರ ತಡವಾಗಿ ಹೋದರೆ, ಇರುವುದಕ್ಕೆ ಜಾಗವೇ ಸಿಗದೆ ಹೋದೀತು" ಎಂದಳು.

ಅದಕ್ಕೆ ತುಸು ಸಾವಕಾಶದಿಂದ ತಾಯಿಯಿಂದ ಉತ್ತರ ಬಂದಿತು: "ಕಲಿತದ್ದು ಸಾಕೆಂದರೆ ಕೇಳುವವಳು ನೀನಲ್ಲ. ನನ್ನಲ್ಲಿ ತೋಡಿ ತೆಗೆಯಲು ಹಣ ಎಲ್ಲಿದೆಯೆಂದು ಬೇಡವೇ? ಸಾಲ ಪಡೆಯುವುದಕ್ಕೆ ನಮಗೆ ಭೂಮಿ, ಮನೆ ಇದೆಯೇ? ನೀನು ನೆಲದಲ್ಲಿಯೇ ಇಲ್ಲ; ಪ್ರಪಂಚದ ಕಷ್ಟವೇನೆಂದು ನಿನಗೆ ತಿಳಿಯದು. ಇಷ್ಟು ದಿನ ನಾನು ಸಂಸಾರ ಸಾಗಿಸಿದ್ದೇ ಆಶ್ಚರ್ಯ . . . ." ಎಂದು ಹೇಳಿ ತನ್ನ ಕೆಲಸಕ್ಕೆ ಹೊರಟುಹೋದಳು.

ಇಲ್ಲಿಯ ತನಕ ವಿನತೆಗೆ ತುಸುವಾದರೂ ಆಸೆ ಉಳಿದಿತ್ತು. ಈಗ ಆ ಆಸೆ ಧ್ವಂಸವಾಗುವಂತೆ ಕಾಣಿಸಿತು. ಆದರೂ ಅವಳ ನಿರ್ಧಾರ ಕದಲಲಿಲ್ಲ. 'ನಾರ್ಣಪ್ಪಯ್ಯನವರ ಮುಂದೆ ಕಣ್ಣೀರಿಟ್ಟು, ಅವರಿಂದ ತಾಯಿಗೆ ಹೇಳಿಸಿ ನೋಡಬೇಕು. ಅದೂ ಸಾಗದಾದರೆ— ಮಾಸ್ತರಿಕೆಯೊಂದನ್ನು ಹಿಡಿಯುತ್ತೇನೆ. ದುಡಿದು, ಗಳಿಸಿ ಅನಂತರ ಓದನ್ನು ಮುಂದುವರಿಸುತ್ತೇನೆ. ಹಾಗೆ ಮಾಡುವವರೂ ಇದ್ದಾರೆ. ಅದು ಕಷ್ಟವಾದೀತು; ನಿಜ; ಕಷ್ಟಪಡುವುದಕ್ಕೇ ಹುಟ್ಟಿದ್ದು ಜೀವ' ಎಂಬ ವೇದಾಂತಕ್ಕೆ ಮನಸ್ಸನ್ನು ತಿರುಗಿಸಿಕೊಂಡಳು. ಅಲ್ಲಿಂದ ತನ್ನ ಮಲಗುವ ಮನೆಗೆ ಹೋದಳು; ಕದ ಮುಚ್ಚಿಕೊಂಡಳು. ಹೊರಗಣ ಪ್ರಪಂಚಕ್ಕೆ ಕಿವುಡಾದಳು. ಆದರೂ ಆ ಸಂಜೆ ಮಂಜುಳೆ ತನ್ನ ಪುರಾಣವನ್ನು ಹೇಳಿದುದು ನೆನಪಾಯಿತು. 'ಅವಳೂ ನನ್ನಂತೆಯೇ. ಅವಳಿಗೆ ತಾಯಿ ತಂದೆಯರಿಲ್ಲವಾದರೂ, ಅಣ್ಣ ನಾದಿನಿಯರಿದ್ದಾರೆ. ಅವರಿಂದಾಗಿ ಅವಳ ಕಷ್ಟ. ಆದರೆ ಮದುವೆಯ ಮುಖದಿಂದ ಅವಳಿಗೆ ಪಾರಾಗುವ ದಾರಿ ಸುಲಭ' ಎಂದು ಯೋಚಿಸಿದಳು. ಅದರಲ್ಲೂ ಅನುಮಾನ

ಮೊಳೆಯಿತು. "ಮದುವೆ–ನಿಜ–ಮದುವೆ, ಅದನ್ನು ಮಾಡಿಸಬೇಕಾದವರು ಮುನಿದಿದ್ದಾರೆ. ಅವಳ ಅಣ್ಣನೇ ಉದಾಸೀನನಾಗಿ ಹಣ ಖರ್ಚಾಗುತ್ತದೆಂದು ಕುಳಿತರೆ, ಆಗ ತನ್ನ ಗೆಳತಿ ಮಂಜುಳೆಯ ಪಾಡು ಕಷ್ಟ; ಬದಲು–ಯಾವನಾದರೂ ಮನಸ್ಸಿಗೊಪ್ಪದ ವರನನ್ನು ತೋರಿಸಿ, 'ಆದರೆ ಇವನನ್ನಾಗು; ಇಲ್ಲವಾದರೆ ನಿನ್ನ ಪಾಡಿಗೆ ನೀನು' ಎಂದು ತಮ್ಮ ಹೊಣೆಯನ್ನೂ ತಪ್ಪಿಸಿಕೊಂಡರೆ ಮತ್ತೂ ಕಷ್ಟ. ಹೆಂಗಸರ ಪಾಡು ತೀರ ಕಷ್ಟದ್ದು; ಒಂದಲ್ಲ ಒಂದು ಪಾರತಂತ್ರ್ಯ ಅವರಿಗೆ ತಪ್ಪಿದ್ದೇ ಅಲ್ಲ. ಹೆಣ್ಣಾಗಿ ಹುಟ್ಟುವುದು ಪೂರ್ವಜನ್ಮದ ಪಾಪ ಎನ್ನುತ್ತಾರೆ ಮಾತಿಗೆ–ಅದೂ ನಿಜವಿರಬೇಕು" ಎಂದು ಯೋಚಿಸಿದಳು. ಅವಳ ಮನಸ್ಸು ಖಿನ್ನವಾಯಿತು; ಮಂಜುಳೆಗಾಗಿ ಮರುಗಿತು. ಅಲ್ಲಿಂದ 'ನಂದಿನಿಯ ಮದುವೆಗೆ ಬರುತ್ತೇನೆಂದು ಒಪ್ಪಿಕೊಂಡೆನಲ್ಲ. ಅವರ ಮನೆಯವರು ನಮಗೆ ಹೇಳುವುದುಂಟೇ? ತಾಯಿ ಹೋದಾಳೆಯೇ? ಹೋದರೂ ತಾನು ಹೋಗುವುದೇನು ಚೆನ್ನ? ನಾಲ್ಕು ಜನರು ಕೈಮಾಡಿ ತೋರಿಸುವದಕ್ಕೆ ದಾರಿಯಾಗುತ್ತದೆ' ಎಂದೆಣಿಸಿಕೊಂಡಳು. ಆದರೆ ತನ್ನನ್ನು ನೋಡಿ ಕೈ ತೋರಿಸುವವರು ಈಗಲೂ ಇದ್ದಾರಲ್ಲ ಎಂದೂ ಅನಿಸಿತು.

ಈಗಲೇ ಅವಳನ್ನು ಬಯಸುವವರಿದ್ದಾರೆ. ಶಾಲೆಗೆ ಹೋಗುವಾಗ, ಬರುವಾಗ, ಒಬ್ಬಿಬ್ಬರು ಗೆಳತಿಯರ ಜತೆಯಿಲ್ಲದೆಯೆ ಅವಳು ಬರುತ್ತಲಿಲ್ಲ. ಬರುವಾಗಲೂ ತಲೆತಪ್ಪಿಸಿಕೊಂಡು ಬರುತ್ತಾಳೆ. ಅಚೀಚೆ ನಿಂತ, ತನ್ನನ್ನು ನೋಡಲು ಹಂಬಲಿಸುವ ಕಣ್ಣುಗಳ ಅರ್ಥ ಅವಳಿಗೂ ತಿಳಿಯುತ್ತದೆ. ಕೆಲವರು ಮನೆಯ ತನಕ ಹಿಂಬಾಲಿಸಿ ಬಂದವರುಂಟು; ಬರುತ್ತಿರುವವರುಂಟು. ಅದೂ–ಸಾವಿತ್ರಿ ಸತ್ಯವಾನ್ ನಾಟಕ ಪ್ರದರ್ಶನದ ಬಳಿಕ ಇನ್ನೂ ಹೆಚ್ಚಾಗಿದೆ. ಅವಳ ಮನೆ ಮುಂದೆಯೇ ಹಾಯುವಾಗ, ಅವಳದೇ ಹಾಡುಗಳನ್ನೋ, ಸಾವಿತ್ರಿಯ ಹಾಡುಗಳನ್ನೋ ಸಿಳ್ಳು ಹಾಕುತ್ತ ಸರಿಯುವ ಕೆಲವರೂ ಇದ್ದಾರೆ. ಸಾಲದುದಕ್ಕೆ, ನಾಲ್ಕು ಮನೆಗಳ ಆಚೆಗೆ, ಒಬ್ಬ ಬೀಡಾವಾಲ ಇದ್ದಾನೆ. ಅವನಿಗೆ ರಾತ್ರಿ ಮಲಗುವ ಮುಂಚೆ ಕೊಳಲಿನ ಹುಚ್ಚು. ಆತ ಕೆಲವು ಬಾರಿ ಸಾವಿತ್ರಿ ನಾಟಕದ ಹಾಡುಗಳನ್ನು ಗಟ್ಟಿಯಾಗಿ ಬಾರಿಸುತ್ತಾನೆ. ಕೇಳುವುದಿಲ್ಲ—ಎಂದು ಇವಳು ಕಿವಿ ಮುಚ್ಚಿದರೂ ಅವು ಕೇಳಿಸುತ್ತವೆ. ತಾನೇಕೆ ಆ ನಾಟಕದಲ್ಲಿ ಹಾಡನ್ನು ಹಾಡಿದೆ, ಕಲಿತೆ–ಎನಿಸುವಷ್ಟು ದುಃಖವಾಗುತ್ತದೆ ವಿನತೆಗೆ. ಇವಕ್ಕೆಲ್ಲ ಅಷ್ಟು ವಿಶೇಷವಾದ ಅರ್ಥ ಅವಳಿಗೆ

ಹೊಳೆಯಬಾರದಿತ್ತು. ನಾಟಕ, ಸಿನೆಮಾಗಳು ನಡೆದ ಎಂಟು ದಿನ, ಬೀದಿಯ ನಾಯಿಗಳೂ "ಗೋರಿ ಧೀರೇ ಚಲೋ" ಅನ್ನುವುದೂ "ಮಮ ಮಮ ಚಕೋರ" ಅನ್ನುವುದೂ, "ಚಂದ್ರ ಬಿಂಬವೋ ಮಾರಹರನ ಪತಾಕೆಯೋ, ಮನೋಹರಿ" ಅನ್ನುವುದೂ ಸಾಮಾನ್ಯವಾದ ವಾಡಿಕೆ. 'ಅವೆಲ್ಲ ತನ್ನನ್ನು ಉದ್ದೇಶಿಸಿಯೋ ಹಾಡಿದವುಗಳು, ಎನ್ನುವ ಅಪಾರ್ಥ ಕಲ್ಪನೆ ಯಾಕೆ?– ಎಂದೂ ಕೆಲವೊಮ್ಮೆ ಅನಿಸುತ್ತದೆ.

ನಾಟಕ ಮುಗಿದ ಆ ಹತ್ತಿಪ್ಪತ್ತು ದಿನಗಳೊಳಗೆ ಅವಳಿಗೆ ಅನಾಮಧೇಯರು ಕೆಲವರ ನಾಲ್ಕಾರು ಪ್ರಣಯ ಪತ್ರಗಳೂ ಬಂದಿದ್ದುವು. ಕೆಲವು ಅವಳ ಪಾತ್ರವನ್ನು ಹೊಗಳಿ, ಸ್ನೇಹವನ್ನು ಬೇಡಿ ಬರೆದವು; ಕೆಲವು 'ಸಂಜೆ ಶಾಲೆಯ ಕಡೆ ಬರುತ್ತೀಯಾ'; 'ದೇವಾಲಯದ ಕಡೆ ಬರುತ್ತೀಯಾ' ಎಂದು ಬಯಸಿ ಬರೆದವು. ಕೆಲವು ಅಶ್ಲೀಲ ಬರವಣಿಗೆಯಿಂದ ತುಂಬಿದುವು. ಓದಿದರೆ ದುಃಖದ ಬದಲು ಕೋಪವನ್ನು ಕೆರಳಿಸುವಂಥವು. 'ಮನುಷ್ಯ ಕುಲ ಇಷ್ಟು ನೀಚತ್ವಕ್ಕೆ ಇಳಿದಿದೆ' ಎಂದು ತೋರಿ ನೋವನ್ನುಂಟುಮಾಡುವಂಥವು. ಸಂಪೂರ್ಣ ವಿಳಾಸಕೊಟ್ಟು ಬರೆದ ಕಾಗದಗಳು ಕೆಲವಿವೆಯಾದರೂ, ಅವು ತೀರ ಕಾಲ್ಪನಿಕ ಹೆಸರಿನವಾಗಿಯೇ ಕಾಣಿಸುತಿದ್ದವು. ಅವೆಲ್ಲವುಗಳಿಂದಾಗಿ— ತಾನು ಲಗ್ನವಾಗಿ ಪರಕೀಯ ವಸ್ತುವಾಗುವ ತನಕ ತನ್ನ ಗತಿ ಹೇಗೆಯೋ ಏನೋ-ಎಂಬ ಬೆದರಿಕೆ ಅವಳಿಗೆ ಉಂಟಾಗುತ್ತಲಿತ್ತು.

ಒಂದೆರಡು ಬಾರಿ ಅವಳು ಅಂಥ ಕಾಗದಗಳನ್ನು ತಂದ ಅಂಚೆಯವನೊಂದಿಗೆ "ನೋಡಣ್ಣಾ, ನನಗೆ ಸ್ನೇಹಿತರಿಲ್ಲ; ನಂಟರಿಲ್ಲ ಇವಾವುದೂ ನನಗಲ್ಲ; ಇಲ್ಲಿಗೆ ಇಂಥ ಕಾಗದ ತರಬೇಡ" ಎಂದೂ ಅಂದಿದ್ದಳು. ಆದರೆ ಅಂಚೆಯವನು ಹಾಗೆ ಮಾಡಲು ಬಂದೀತೇ? ಕಾಗದ ಬಾರದಿದ್ದರೆ ಮಾತ್ರ ಆತ ಕೊಡುವುದಲ್ಲ; ಬಂದ ಕಾಗದವನ್ನೇನು ಮಾಡಿಯಾನು!

'ಇಲ್ಲ–ನಾನೂ ಮಂಜುಳೆಯೂ ಕೂಡಿ ಏನಾದರೊಂದು ಯೋಚನೆ ಮಾಡಬೇಕು. ಅವಳಿಗೆ ನನಗಿಂತ ತುಸು ಧೈರ್ಯ ಹೆಚ್ಚಾಗಿದೆ. ನೋಡುವ; ಹೆಡ್ಮಾಸ್ತರ್ ಭೀಮರಾಯರ ಬಳಿಗೆ ಹೋದರೆ ಏನಾದರೂ ಮುಂದಿನ ದಾರಿ ತೋರಿಸಿಯಾರು' ಎಂದು ಏನೇನೋ ತೆರನಾಗಿ ತನ್ನ ಭವಿಷ್ಯವನ್ನು ನೆನೆಯುತ್ತ ಅವಳು ಚಿಂತಿಸಿ ಆ ದಿನ ಮಲಗಿಕೊಂಡಳು. ಒಂದು ರಾತ್ರೆ ಹಾಗೆಯೇ ಯೋಚನೆಯಲ್ಲಿ ಕಳೆಯಿತು.

— — — — — — —

# ಮೂರನೆಯ ಅಧ್ಯಾಯ

ಸಾಮಾನ್ಯವಾಗಿ ಎಲ್ಲ ತರುಣ ಮನಸ್ಸುಗಳು ಊಹೆಗಳಿಗೆ ಶರಣು ಹೋಗುವುದೇ ಸ್ವಭಾವ. ಏನಾದರೊಂದು ವಿಚಾರ ಹೊಳೆದಲ್ಲಿ ಅದನ್ನೇ ಮನಸ್ಸಿನಲ್ಲಿ ಹಿಗ್ಗಿಸಿ, ಆಡಿ, ನಲಿದು ಸಂತೋಷಪಡಬಲ್ಲ ಮನಸ್ಸುಗಳು ಅವರವು. ತಮ್ಮ ಪ್ರೀತಿಯ ವಸ್ತುಗಳ ವಿಚಾರಗಳಲ್ಲಿ ಸಾಧ್ಯಾಸಾಧ್ಯತೆಗಳ ಕಲ್ಪನೆ ಬರುವುದಿಲ್ಲ. ಸಾಮಾನ್ಯವಾಗಿ ಸಾಧ್ಯವಲ್ಲದ್ದು ಯಾವುದೂ ಇಲ್ಲ—ಎಂಬ ಭ್ರಮೆಯ ಲೋಕದಲ್ಲಿ ತೇಲಾಡುವುದು ಅವರಿಗೆ ಸುಲಭ. ನಂದನಿಯ ಮನೆಯಿಂದ ಮರಳಿ ಬಂದ ಮಂಜುಳೆಯ ಮನಸ್ಸು ಅಂಥೊಂದು ಸುಖ ಸ್ವಪ್ನದ ಸೆರಗನ್ನು ಹಿಡಿದುಕೊಂಡು ಆಗಾಗಲೇ ವಿಹರಿಸತೊಡಗಿತು. ಮದುವೆಯ ಮಾತು ಬಂದರೆ, ಅನಂತರದ ಕಷ್ಟ ಸುಖಗಳ ಅರಿವು ಬರಲಾರದು. ಬದಲು ನಾಲ್ಕು ದಿನ ಉಟ್ಟುಡುವ, ಉಪಚಾರ ಭಾಗಿಗಳಾಗುವ, ಸುಖ ಸ್ವಪ್ನಗಳಷ್ಟೇ ಕಾಣಿಸುತ್ತವೆ. ಅಂಥ ಸ್ವಪ್ನಗಳಲ್ಲಿ ತೇಲುತ್ತಿರುವ ನಂದನಿ ಬಹು ಸುಖಿಯು, ಹರ್ಷಚಿತ್ತಳು, ಕ್ಷಮಾಗುಣ ಸಂಪನ್ನೆಯೂ ಆಗಿದ್ದಾಳೆ. ವಿನತೆಯಲ್ಲಿನ ಹಳೆಯ ವೈರ ಮಾಯವಾಗಿ ಸ್ನೇಹಭಾವ ಮೂಡಿದೆ. ಇಷ್ಟಿರುತ್ತ ತೀರ ಸ್ವತಂತ್ರಳೆನಿಸಿಕೊಂಡ ಮಂಜುಳೆ, 'ತನಗೆ ಮದುವೆಯಾಗುವುದಕ್ಕೇನಡ್ಡಿ?' ಎಂದು ಮದುವಣಗಿತ್ತಿಯ ಪಾತ್ರವನ್ನು ವಹಿಸಲು ಮನೋರಾಜ್ಯದಲ್ಲಿ ಹವಣಿಸಿದಳು. ದಾರಿಯುದ್ದಕ್ಕೂ ಅದೇ ಕನಸನ್ನು ಹೆಣೆಯುತ್ತ ಮನೆಗೆ ಮರಳಿದಳು. ತನ್ನ ಕನಸಿಗೆ ಸಮನಾದ ಪತಿಯನ್ನು ತಾನೇ ಆರಿಸುವುದು ಸಾಧ್ಯ ಎಂದು ಅವಳ ಎಣಿಕೆ. ಅಣ್ಣನ ಹಿರಿತನ, ಅಯ್ಯಗಳನ್ನು ಮನ್ನಿಸಬೇಕೆಂಬ ವಿಶ್ವಾಸವಿಲ್ಲ ಅಥವಾ ಅವನಾಗಿಯೇ ತನ್ನ ಮದುವೆಯ ಸೂಚನೆ ಮಾಡಬಹುದೆಂಬ ಭರವಸೆಯೂ ಇಲ್ಲ. ಅಥವಾ ಮಾಡಿದರೂ ಸುಮಿತ್ರೆಯಂತಹ ಶೂರ್ಪನಖಿ ಅನುಕೂಲ ದಾಂಪತ್ಯಕ್ಕೆ ಸಹಾಯಕಳಾಗುವವಳಲ್ಲ. ಅತ್ತಿಗೆಯ ನೆನಪು ಬಂದರೆ ಭಾರತ, ರಾಮಾಯಣಗಳ ತಾಟಕಿ, ಶೂರ್ಪನಖಿ, ಲಂಕಿಣಿಯರುಗಳೇ ಅವಳ ಸ್ಥಾನದಲ್ಲಿ ಗೋಚರಿಸುತ್ತಾರೆ. ಹೀಗಾಗಿ-ಯಾರನ್ನು ಕೇಳುವುದೇನು? ತನಗೆ ಕಂಡವರನ್ನು ತಾನೇ ಆರಿಸುತ್ತೇನೆ—ಎಂಬ ಆಸೆ ಕುಣಿದಾಡಿತು. ಆ ಹುಚ್ಚು ಆಸೆಯಲ್ಲಿ—ಈಗಾಗಲೇ

ಪರಿಚಿತನಾಗಿ ಅಭಿಮಾನಕ್ಕೆ ಗುರಿಯಾದ ಮನೋಹರನಲ್ಲದೆ ಬೇರೊಂದು ವ್ಯಕ್ತಿಯು ಅವಳಿಗೆ ತೋರಲಾರನು. ಆತ ತಾನಾಗಿಯೆ ಆ ಸೂಚನೆಯನ್ನು ತಂದಾನೆಯೇ? ಅದು ಅನುಮಾನ. ನಾಟಕದ ದಿನ ಅಷ್ಟೊಂದು ಉಪಚಾರ ಮಾಡಿದ ವ್ಯಕ್ತಿ, ಮುಂದೆಲ್ಲವನ್ನೂ ಮರೆತು ಮಾಯವಾದನೇಕೆ? ತಾನು ಅವನನ್ನು ಕುರಿತು ಹಂಬಲಿಸಿದಷ್ಟು ಆತ ಹಂಬಲಿಸುತ್ತಲಿಲ್ಲ ಎನ್ನುವುದಕ್ಕೆ ಅವನ ಔದಾಸೀನ್ಯವೇ ಸಾಕ್ಷಿಯಲ್ಲವೆ! ನಾಟಕ ಮುಗಿದ ಮೇಲೆ ಒಂದು ಬಾರಿಯೂ ಬಂದು ಭೇಟಿಯಾಗಲಿಲ್ಲ. ಅವರ ಮೊದಲು ಹತ್ತುಸಲ ನೋಟ್ಸು ಪುಸ್ತಕಗಳನ್ನು ಬೇಡಿಕೊಂಡು ಹೋದ ಮಹಾನುಭಾವ, 'ತಾನು ಊರಿಗೆ ಹೋಗುತ್ತೇನೆ' ಎನ್ನುವುದಕ್ಕೂ ಬಂದಿರಲಿಲ್ಲ.

ಹಾಗಿದ್ದರೆ ಅವನು ತನ್ನನ್ನು ಒಲಿಸುವ ಬದಲು, ತನ್ನ ಮೇಲೆಯೇ ಆ ಹೊಣೆಯನ್ನು ಹೊರಿಸಿದಂತಾಯಿತು. ಪರೀಕ್ಷೆಯ ಫಲಾಫಲ ತಿಳಿಯುವುದಕ್ಕಾದರೂ ಆತ ಮುದ್ದೂರಿಗೆ ಬರಬಹುದಿತ್ತು. ಬಂದಾಗ ಭೇಟಿಯಾಗಬಹುದಿತ್ತು. ಆಗದಿದ್ದರೆ ಕಾಲೇಜಿಗೆ ಹೋದ ಮೇಲೆ ಸ್ನೇಹ, ಪರಿಚಯ ಮುಂದುವರಿಯಬೇಕು. ಅಷ್ಟಕ್ಕೂ ವಿಘ್ನವಿದೆ. ತಾನು ಫೈಲಾಗಿ ಆತ ಪಾಸಾದರೆ ತೊಡಕು. ಆತನೇ ಫೈಲಾಗಿ ತಾನು ಪಾಸಾದರೂ ತೊಡಕಿದೆ. ಅಂಥ ಪ್ರಸಂಗ ಬಂದು, ಮಂಗಳೂರಿನಂಥ ದೊಡ್ಡ ಶಹರಿನಲ್ಲಿ ಪರಸ್ಪರ ಮಿಲನ, ಸಖ್ಯಗಳು ಸಾಧ್ಯವಾಗುವ ಅವಕಾಶ ಬಾರದೆಹೋದರೆ ಏನು ಗತಿ? ಇಬ್ಬರೂ ಪಾಸಾಗಿ ಇದೇ ಶಾಲೆಯಲ್ಲಿ ಇನ್ನೊಂದು ವರ್ಷಕಾಲ ಹಾಕಬಹುದೆಂಬ ಪ್ರಸಂಗವೂ ಅವಳಿಗೆ ಅಪ್ರಿಯವಾಗಿ ಕಾಣಿಸಲಿಲ್ಲ.

ಯಾವುದಕ್ಕೂ ಸುದ್ದಿಯನ್ನೇ ಎತ್ತದೆ ಊರಿಗೆ ಹೋದ ಮನುವಿನ ನಡತೆ ಸಂಶಯಕ್ಕೆಡೆಮಾಡಿದೆ. ಆತನ ಬಯಕೆ ಉಂಟಾಗುತ್ತದೆ. ತನ್ನಂಥ ಚೆಲುವೆ ತಾನಾಗಿ ಸ್ನೇಹ ಭಿಕ್ಷೆಗೆ ಹೋಗಬಾರದು—ಎಂದು ಯೋಚನೆಗಳನ್ನು ಮೆಲುಕಾಡುತ್ತ ಇರುವಾಗಲೇ ಇಳಿ ಸಂಜೆಯಾಗಿತ್ತು. ಎದುರಿಗೆ, ಆ ವಠಾರಕ್ಕೆ ಪತ್ರಗಳನ್ನು ತರುವ ಟಪ್ಪಾಲು ಪೇದೆ ಮಂಜಯ್ಯ ಸಿಕ್ಕಿದ; ಗುರುತಿನ ಅವಳನ್ನು ಕಂಡು "ಏನಮ್ಮ, ಹ್ಯಾಗಿದ್ದೀರಿ? ಪರೀಕ್ಷೆಯ ಪಾಸು, ಫೈಲು ಬಂತೇ?" ಎಂದು ಅವಳನ್ನು ಕೇಳಿದ.

ಅದಕ್ಕೆ ಅವಳು "ಬರುತ್ತದೆ ಮೆಲ್ಲಗೆ. ಯಾರಿಗಿದೆ ಅವಸರ? ಪಾಸಾಗುವವರು ಪಾಸಾಗುತ್ತಾರೆ; ಫೈಲಾಗುವವರು ಫೈಲಾಗುತ್ತಾರೆ" ಎಂದಳು.

ಅನಂತರ ಪರಿಹಾಸ್ಯಕ್ಕೆ "ಅದೇನು ಮಂಜಯ್ಯ, ನೀನು ಊರಿನ ಎಲ್ಲರಿಗೂ ಕಾಗದ ತಂದುಕೊಡುತ್ತೀಯಾ. ನನಗೇಕೆ ತರುವುದಿಲ್ಲ" ಎಂದು ಕೇಳಿದಳು. "ಯಾಕೆ, ಮೊನ್ನೆ ಒಂದು ಕಾಗದ ತಂದುಕೊಟ್ಟಿದ್ದೆನಲ್ಲ. ಮನೆಯಲ್ಲಿ ನೀವಿರಲಿಲ್ಲ, ನಿಮ್ಮ ಅತ್ತಿಗೆಯ ಕೈಯಲ್ಲಿ ಅದನ್ನು ಕೊಟ್ಟುಹೋದೆ" ಎಂದ.

"ಕಾಗದವೇ? ಎಲ್ಲಿನದು?"

"ಎಲ್ಲಿಯದೋ, ಯಾರಿಗೆ ಗೊತ್ತು? ಒಂದು ಕಾಗದವನ್ನು ತಂದು ಕೊಟ್ಟ ನೆನಪು ನನಗೆ. ನಿಮ್ಮ ಅಣ್ಣನಿಗೋ ನಿಮಗೋ ಬಂದಿತ್ತು" ಎಂದು ತಿಳಿಸಿ ಹೊರಟು ಹೋದ. ಮಂಜಯ್ಯನ ನೆನಪೂ ಮಸುಕು ಮಸುಕಾದದ್ದೇ. ಅವನನ್ನು ಇನ್ನೊಮ್ಮೆ ನಿಲ್ಲಿಸಿ, "ಖಂಡಿತವೇ?" ಎಂದು ಕೇಳುವ ಧೈರ್ಯ ಮಂಜುಳೆಗೂ ಬರಲಿಲ್ಲ. ತಾನು ಯಾರಿಗೂ ಕಾಗದ ಬರೆಯದೆ ಉತ್ತರವೆಲ್ಲಿಂದ ಬರಬೇಕು ಎಂಬ ವಿಚಾರದಲ್ಲಿ ಅವಳ ಮನಸ್ಸು ಹರಿಯಿತು. ಅವಳು ಮನೆಯನ್ನು ಮುಟ್ಟಿದ ಮೇಲೂ ಅದೇ ವಿಚಾರ ಮುಂದೊತ್ತಿ ಹರಿಯಿತು. ಮನೆಗೆ ಹೋದವಳೇ ಅತ್ತಿಗೆಯೊಡನೆ "ನನಗೆ ಮೊನ್ನೆ ಒಂದು ಕಾಗದ ಬಂದಿತ್ತಂತೆ. ಟಪ್ಪಾಲು ಪೇದೆ ಮಂಜಯ್ಯ ದಾರಿಯಲ್ಲಿ ಸಿಕ್ಕಿದ. ಅದನ್ನು ನಿನ್ನೊಡನೆ ಕೊಟ್ಟಿದ್ದೆ ಎಂದ" ಎಂದಳು.

ಅತ್ತಿಗೆ ಅವಳನ್ನೇ ದಿಟ್ಟಿಸಿ ನೋಡಿದಳು; 'ಅದು ನಿನಗಲ್ಲ ಅವರಿಗೆ' ಅನ್ನುವ ಬದಲು "ಮಂಜಯ್ಯ ಇಲ್ಲಿಗೆ ಬಾರದೆಯೆ ಒಂದು ವಾರದ ಮೇಲಾಯಿತು" ಎಂದುಬಿಟ್ಟಳು. ಇದು ಮಂಜುಳೆಯನ್ನು ಅನುಮಾನಕ್ಕೆ ಗುರಿಪಡಿಸಿತು. ಊಟ ಮುಗಿಸಿ, ಪುಸ್ತಕ ಹಿಡಿದುಕೊಂಡಳು. ತಲೆಯಲ್ಲಿ ಕಾಗದದ ವಿಚಾರವಲ್ಲದೆ ಇನ್ನೇನೂ ಹೊಳೆಯುತ್ತಿರಲಿಲ್ಲ. 'ಮಂಜಯ್ಯ ಸುಳ್ಳು ಹೇಳಲಾರ. ಅಣ್ಣನಿಗೆ ಆ ಕಾಗದ ಬಂದದ್ದಾಗಿದ್ದರೆ ಅತ್ತಿಗೆಯೂ ಹಾಗೆ ಸುಳ್ಳನ್ನು ಹೇಳಬೇಕಿರಲಿಲ್ಲ. ಕಾಗದ ಬಂದದ್ದು ನಿಜ. ತನ್ನ ಕಾಗದವನ್ನು ಅವಳು ಒಡೆದು ನೋಡಿ, ಎಲ್ಲಿಯೋ ಅಡಗಿಸಿಟ್ಟಿರಬೇಕು' ಎಂದು ಹೊಳೆಯಿತು. ಅವಳು ಪಾಲಿಗೆ ಸುಮಿತ್ರೆ ಮೊದಲೇ ಸಂಶಯಕ್ಕೆ ತಕ್ಕ ವ್ಯಕ್ತಿ. ಆದರೆ ತಾನು ನಿರಪರಾಧ. 'ಯಾರು ಆ ಕಾಗದವನ್ನು ಬರೆದಿರಬಹುದು, ಏನು ಬರೆದಿರಬಹುದು'— ಎಂಬುದನ್ನು ಯೋಚಿಸುವ ಶಕ್ತಿ ಅವಳಿಗೆ ಬರಲಿಲ್ಲ. ಅವಳಿಗೆ ಒಂದು ಅನುಮಾನವಾಯಿತು- ಬರೆದರೆ ಮನೋಹರ ಬರೆದಿರಬೇಕು. ತಾನು ಬಂದು ಭೇಟಿಯಾಗದ ತಪ್ಪಿಗೆ ಅವನೇ ಕಾಗದ ಬರೆದಿರ

ಬಹುದು. ಏನು ಬರೆದಿದ್ದಾನೆಂದು ತಿಳಿಯುವ ಭಾಗ್ಯವೂ ಇಲ್ಲ. ಹಾಗಾಗಿ ಊಹೆಯಿಂದಲೇ ಆ ಕಾಗದದ ಒಕ್ಕಣೆಯನ್ನು ಎಣಿಸುವುದರಲ್ಲಿ ವೇಳೆ ಕಳೆದಳು. ನಾಟಕದ ದಿನ ಆತನಾಡಿದ ಮಾತುಗಳನ್ನೇ ಬೆಳೆಯಿಸಿ ಪ್ರಬಂಧವಾಗಿ ಮಾಡಿಕೊಂಡಳು. ಅಂಥ ಒಂದು ಪತ್ರ ಕೈಯಲ್ಲಿದ್ದರೆ ಎಷ್ಟು ಆನಂದವಾಗುತಿತ್ತೋ! ಆ ಭಾಗ್ಯ ತನಗೆ ಇಲ್ಲ ಎಂಬ ನೋವೂ ಉಂಟಾಯಿತು. ಹೀಗೆ ಅಸಮಾಧಾನದ ಒಂದು ರಾತ್ರಿಯೇ ಕಳೆಯಿತು.

ಮಾರುದಿನವೂ ಅವಳ ಮನಸ್ಸಿನಿಂದ ಮನೋಹರನ ಕಾಲ್ಪನಿಕ ಲೇಖನದ ವಿಚಾರ ಸರಣಿ ಅಳಿಯುವಂತಿರಲಿಲ್ಲ. ಅವಳ ಅಣ್ಣ ಊರಲ್ಲಿದ್ದಿರಲಿಲ್ಲ. ತಾಲೂಕು ಕಚೇರಿಯ ಗುಮಾಸ್ತನಾಗಿದ್ದ ಆತನಿಗೆ ಬಡತಿಯ ಯೋಗ ಬಂದಿತ್ತು; ಅವನಿಗೆ ತಾತ್ಕಾಲಿಕ ಮಣೆಗಾರಿಕೆಯೊಂದು ದೊರಕಿ, ಸಮೀಪದ ಊರಿಗೆ ವರ್ಗವಾಗಿತ್ತು. ಬರಿಯ ಆದಿತ್ಯವಾರಕ್ಕಷ್ಟೆ ಆತ ಮನೆಗೆ ಬಂದು ಹೋಗುತ್ತಿದ್ದಾನೆ. ಅವನಿಗಾದರೂ ಪತ್ರ ಬಂದಿತ್ತೇ-ಎಂದು ಅವನನ್ನೇ ಕೇಳಿ ತಿಳಿದು ತನ್ನ ಭ್ರಮೆ ನಿರಸನಗೊಳಿಸುವ ಪ್ರಯತ್ನಕ್ಕೂ ಅವಕಾಶವಿರಲಿಲ್ಲ. ಹೀಗಾಗಿ ಅತ್ತಿಗೆ ಮನೆಯನ್ನು ಬಿಟ್ಟು ಆಚೀಚೆ ಸರಿದಾಗ, ಮನೆಯ ಸಂದು ಮೂಲೆಗಳನ್ನೆಲ್ಲ ಅವಳು ಅರಸುವುದಕ್ಕೆ ತೊಡಗಿದಳು. ಟಪ್ಪಾಲು ಪೇದೆ ಆ ಕಡೆ ಬರುವ ವೇಳೆಯನ್ನೇ ಎರಡುಮೂರು ದಿನಗಳ ತನಕವೂ ಕಾದು ಕುಳಿತಳು. ಆ ಪೇದೆಯು ಬರಲಿಲ್ಲವೋ; ಇವಳು ಕಾಣಲಿಲ್ಲವೋ—ಅದೂ ನಿರಾಶೆಯಾಯಿತು. ಒಂದು ದಿನ ಮನೆಯ ಹಿತ್ತಿಲಲ್ಲಿ ಆಕೆ ಸುಳಿದಾಡುತ್ತಿದ್ದಾಗ, ಮುದ್ದೆಮಾಡಿ ಎಸೆದೊಂದು ಲಕೋಟೆ ಕಾಣಸಿಕ್ಕಿತು. ಕೈಹಾಕಿ ಎತ್ತಿದಳು; ಬಿಡಿಸಿದಳು. ಲಕೋಟೆಯ ವಿಳಾಸ ಅವಳದ್ದೇ ಇದಿತ್ತು. ಒಳಗಿನ ಕಾಗದ ಇರಲಿಲ್ಲ. ಮನಸ್ಸು ಉದ್ವಿಗ್ನವಾಯಿತು. ಅತ್ತಿಗೆಯ ಕಪಟ ಹೊಳೆಯಿತು. ತನ್ನನ್ನು ತೊಡಕಿಗೆ ಸಿಲುಕಿಸುವ ಹೊಂಚು ಅವಳದ್ದು ಎಂಬುದು ಸ್ಪಷ್ಟವಾಯಿತು. ಮೂರು ಮೂರು ಬಾರಿ ವಿಳಾಸದಲ್ಲಿನ ಬರಹ ನೋಡಿದಳು. ಅದರ ಅಂಚೆಯ ಮುದ್ರೆಯನ್ನು ನೋಡಿದಳು. ಅದನ್ನೇ ತಿರುತಿರುಗಿ ನೋಡಿದಳು. ಕಾಗದ ಹೊರಟ ಸ್ಥಳ ಯಾವುದೆಂದು ಸ್ಪಷ್ಟವಾಗಿರಲಿಲ್ಲ. ಬರಹವೇನೋ ಸ್ಪಷ್ಟವಾಗಿತ್ತು. ಮನೋಹರನದೇ ಮುತ್ತಿನಂಥ ಅಕ್ಷರಗಳವು. ಅದನ್ನೆಣಿಸಿಕೊಂಡಾಗ, ಅವಳಿಗೆ ಉಂಟಾದ ನಿರಾಶೆ, ವ್ಯಥೆ ಅಷ್ಟಿಷ್ಟಲ್ಲ. ಎಣಿಸಿಕೊಂಡಂತೆ ಒಂದು ರೀತಿಯ ಭಯವೂ ಆಯಿತು. ಆತ

ಏನೇನು ಮಾತುಗಳನ್ನು ಬರೆದಿದ್ದನೋ! ತಾನು ಎಣಿಸಿಕೊಂಡಂತೆ ಅವನು ತನ್ನ ಆಸೆ ಹಿಡಿದಿದ್ದರೆ, ಅಂಥ ಮಾತು ಬರೆದಿದ್ದರೆ, ಅತ್ತಿಗೆಯ ಕೈಯಲ್ಲಿ ಸೇರಿದ ಪತ್ರ ಒಂದು ಕತ್ತಿಯ ರೂಪ ತಾಳುತ್ತದೆ. ಅದು ಬರಿಯ ಪತ್ರವಾಗಿದ್ದರೂ, ಬರೆದಾತ ಹುಡುಗನೆಂಬುದರಿಂದ, ಅತ್ತಿಗೆ ಅದನ್ನು ತನ್ನ ಅಣ್ಣನಿಗೆ ಕೊಟ್ಟು, ಒಂದಲ್ಲ ಒಂದು ದಿನ ಬೆಳಕಿಗೆ ತಂದೇ ತರುತ್ತಾಳೆ; ತಾನೇನೂ ಹೆದರಬೇಕಿಲ್ಲ; ಈ ಮನೆಯ ಋಣ ಇದ್ದೂ ಇಲ್ಲದಂತೆ ತನಗೆ—ಎಂದು ಯೋಚಿಸಿ ಅಸಮಾಧಾನದಲ್ಲಿ ದಿನವನ್ನು ಕಳೆದಳು.

ಬೇಸಿಗೆಯ ದಿನಗಳವು. ಸೆಕೆ ತುಂಬ; ಊರಿನ ಬಾವಿಗಳು ಬರಿದು. ಅವರ ಮನೆಯವರು ಮತ್ತೊಂದು ಹಿತ್ತಿಲಿಂದ ನೀರು ತಂದು ತುಂಬಿಸಿಕೊಳ್ಳಬೇಕಾಗಿತ್ತು. ತನ್ನ ಕರ್ತವ್ಯವೆಂದು ನಾಲ್ಕು ದಿನ ಕಾಲ ನೀರು ತಂದು ತುಂಬಿಸುತಿದ್ದ ಮಂಜುಳೆ, ತನಗೆ ಬಂದ ಪತ್ರ ಕಾಣೆಯಾಯಿತೆಂದು ತಿಳಿದ ದಿನದಿಂದ, ಆ ಕೆಲಸ ಮಾಡುವುದನ್ನು ನಿಲ್ಲಿಸಿದಳು. ಅತ್ತಿಗೆ ಆ ವಿಚಾರದಲ್ಲಿ ಬಾಯಿಬಿಟ್ಟು ಹೇಳಿದಳು. ಅದನ್ನು ಕೇಳಿಯೂ ಕೇಳಿಸದಂತೆ ಮಂಜುಳೆ ಮನೆಯಿಂದ ಹೊರಗೆ ಹೊರಟು ಹೋಗುತ್ತಿದ್ದಳು. ಗೆಳತಿಯರ ಮನೆಯಲ್ಲಿ ಊಟಮಾಡಿ, ತನ್ನ ಇಷ್ಟ ಕಂಡಾಗ ಮನೆಗೆ ಮರಳುತಿದ್ದಳು.

ಅನಂತರದ ಆದಿತ್ಯವಾರ ರತ್ನಾಕರ ರಾಯನ ಸವಾರಿ ತನ್ನ ಮನೆಗೆ ಬಂದಿತು. ಆಗ ಸುಮಿತ್ರೆಗೆ ಗಂಡನೊಡನೆ ನಾದಿನಿಯನ್ನು ದೂರುವುದಕ್ಕೆ ಬಾಯ್ತುಂಬ ಅವಕಾಶ ಸಿಕ್ಕಿತು. ಏನಿಲ್ಲದೆಯೂ ದೂರಬಲ್ಲಂಥ ಅವಳು, ವಿಷಯವಿದ್ದೂ ದೂರಲಾರಳೇ? "ನನ್ನಿಂದ ಇಷ್ಟೆಲ್ಲ ಮನೆಗೆಲಸ ಪೂರೈಸುವುದಿಲ್ಲ. ನಾಲ್ಕು ಕೊಡ ನೀರು ತಂದು ಹಾಕುತಿದ್ದ ಮಂಜು, ಬೆಳಿಗ್ಗೆ ಮನೆ ಬಿಟ್ಟುಹೊರಟರೆ ಸಂಜೆಗೆ ಬರುತ್ತಾಳೆ. ಯಾವಾವ ಹುಡುಗರೊಡನೆ ಹೋಗುತ್ತಾಳೆ. ಅವಳಿಗೆ ಮದುವೆಮಾಡಿಸಿ; ಇಲ್ಲವೆ ಅವಳನ್ನು ಇಲ್ಲಿಂದ ಹೊರಡಿಸಿ. ನಾನೂ ಅವಳೂ ಕೂಡಿ ಒಂದೇ ಮನೆಯಲ್ಲಿರುವುದಕ್ಕಾಗುವುದಲ್ಲ" ಎಂದು ಏನೇನೋ ಬಣ್ಣ ಸವರಿ ಮಾತನಾಡಿದಳು. ಆ ಮೇಲೆ ತಾನು ಅಡಗಿಸಿಟ್ಟ, ಮಂಜುಳೆಗೆ ಮನೋಹರ ಬರೆದ ಪತ್ರವನ್ನು ತಂದು ಆತನ ಕೈಯಲ್ಲಿಟ್ಟಳು.

ಗ್ರಾಮ ಸಂಚಾರಮಾಡಿ, ಆಫೀಸ್ ರಿಕಾರ್ಡುಗಳನ್ನು ಹೊತ್ತು, ಓದಿ,ಕಣ್ಣು ಕೆಡಿಸಿಕೊಂಡು,ಒಂದು ದಿನದ ವಿಶ್ರಾಂತಿಗೆಂದು ಮನೆಗೆ ಬಂದರೆ ಬಂದಾಗ ಎಲ್ಲಿಲ್ಲದ ದೂರೊಂದು ಬಂದಿತು. ಕಾಗದವನ್ನೋದಿದ; ತಾರು

ಣ್ಯಕ್ಕೆ ಸಮನಾದ ಭಾವಾವಿಷ್ಟವಾದ ಪತ್ರ ಅದು. ಸಹಜ ಸ್ನೇಹಮಯವಾದ ಪತ್ರವಾಗಿದ್ದರೂ ಮಾತುಗಳು ನಾಟಕೀಯವಾಗಿದ್ದವು. ನಾಟಕೀಯವೆಂದರೇನು? ಅವರಾಡಿದ ಆ ಎರಡು ನಾಟಕದಿಂದಲೇ ಉದ್ಧರಿಸಿದಮಾತುಗಳು ಹಲವು. ಅಂಥ ಮಾತುಗಳಲ್ಲಿ ನೇರಾಗಿ ಪ್ರಣಯದ ವಿಚಾರ ಇರದಿದ್ದರೂ ಕಲ್ಪಿಸುವಲ್ಲಿ,ಪ್ರಣಯದ ಊಹೆ ಅದರಿಂದ ಅಸಾಧ್ಯವಾಗಿರಲಿಲ್ಲ.ಅದು ಸ್ಪಷ್ಟ ಮಾತುಗಳಲ್ಲಿ ಬಾರದಿರುವುದಕ್ಕೆ ಮನೋಹರನಿಗಿದ್ದ ಅಂಜಿಕೆಯೇ ಕಾರಣವಾಗಿತ್ತು. “ನೀನು ರಜೆಯನ್ನು ಹೇಗೆ ಕಳೆಯುತ್ತೀ? ಮುದ್ದೂರಲ್ಲಿ ವಿಶೇಷವೇನು? ಇಲ್ಲಿ ನನಗೂ ಬೇಸರ. ಆದರೆ ನಮ್ಮ ಹಳ್ಳಿಯಲ್ಲಿ ಒಂದು ಚಂದವಾದ ಹೊಳೆ ಇದೆ. ನಿತ್ಯವೂ ಈಜಾಟಕ್ಕೆ ನಾನು ಹೋಗುತಿದ್ದೇನೆ. ಇಲ್ಲಿ ಹಲವಾರು ಗುಡ್ಡಗಳಿವೆ. ಕಾಡುಗಳಿವೆ. ನಮ್ಮ ಶಾಲೆಯವರು ಇಲ್ಲಿಗೆ ಪ್ರವಾಸಕ್ಕೆ ಬಂದರೆ ಬಲು ಚೆನ್ನಾಗುತಿತ್ತೆಂದು ನನ್ನೊಂದಿಗೆ ಬಂದ ರಾಮಯ್ಯ ಮಾಸ್ತರರೂ ಅಭಿಪ್ರಾಯ ಪಟ್ಟಿದ್ದಾರೆ. ಪೇಟೆಯಲ್ಲಿರುವ ನಿನಗೆ ಈ ಚಂದದ ಹಳ್ಳಿಯ ಕಲ್ಪನೆಯಾಗಲಾರದು. ನೀನು ಬರುವಿಯಾದರೆ ಕರೆದುಕೊಂಡು ಹೋಗುತ್ತೇನೆ.ನಿನ್ನ ಸ್ನೇಹಿತರನ್ನೂ ಕರೆದುಕೊಂಡು ಬರಬಹುದು. ನನ್ನ ತಂದೆ ತಾಯರಿಗೂ ಹೊರಗಿಂದ ಮನೆಗೆ ಜನ ಬಂದರೆ ತುಂಬ ಸಂತೋಷ” ಎಂದು ಸುದೀರ್ಘವಾದ ಪತ್ರವನ್ನು ಬರೆದು ಮುಗಿಸಿದ್ದ. ‘ಯಾವುದೋ ಜಾತಿಯ,ಯಾವುದೋ ಮನೆಯ ಒಬ್ಬಳು ಹುಡುಗಿಯನ್ನು ಆಮಂತ್ರಿಸುವ ಧೈರ್ಯ ಮನೋಹರನಿಗೆ ಬಂತೆಂದ ಮೇಲೆ, ಅವನ ಸ್ನೇಹ, ಪರಿಚಯ ನಿಷ್ಕಲಂಕವಾದುದಲ್ಲ’ ಎಂಬ ತೀರ್ಮಾನ ಸುಮಿತ್ರೆಯದು. ಸುಮಿತ್ರೆಯ ಅಭಿಪ್ರಾಯಕ್ಕೆ ಸದಾ ತಲೆದೂಗುವ ರತ್ನಾಕರನೂ ಭಿನ್ನ ಅಭಿಪ್ರಾಯ ತಾಳುವುದಕ್ಕೆ ಶಕ್ತನಾಗಿರಲಿಲ್ಲ. ಆತ ಸ್ನಾನಕ್ಕೆ ಹೋದ. ಆಗ ಹಂಡೆಯಲ್ಲಿ ನೀರಿರಲಿಲ್ಲ. ಆಗ, ತಾನೇ ನೀರು ಹೊತ್ತು ತಂದು ಹಾಕಿ, ನೀರು ಕಾಯಿಸಿ ಸ್ನಾನ ಮಾಡಬೇಕಾದ ಕಷ್ಟ ಬಂದೊದಗಿದುದರಿಂದ, ತಂಗಿಯ ದುಷ್ಟತನ ಇನ್ನಷ್ಟು ಚೆನ್ನಾಗಿ ಅವನಿಗೆ ಹೊಳೆಯಿತು.

ಆ ದಿನ ಮಧ್ಯಾಹ್ನ ಮಂಜುಳೆ ಮನೆಗೆ ಊಟಕ್ಕೂ ಬರಲಿಲ್ಲ. ರತ್ನಾಕರನ ಮನಸ್ಸು ಇನ್ನಷ್ಟು ವಿಚಾರಕ್ಕೊಳಗಾಯಿತು. ಇದರ ಪರಿಹಾರದ ಬಗೆಯನ್ನು ಆತ ಯೋಚಿಸತೊಡಗಿದ. “ಅಪ್ಪ ಅವಳ ಮದುವೆಗಿರಿಸಿದ ಐದುಸಾವಿರ ರೂಪಾಯಿಗಳಿವೆ. ತಾಯಿ ಬಿಟ್ಟುಹೋದ ಚಿನ್ನವಿದೆ. ಅಷ್ಟನ್ನು

ಹೊರಿಸಿ ಯಾರಿಗಾದರೂ ತನ್ನ ತಂಗಿಯನ್ನು ದಾಟಿಸಿ, ತಾನು ಪಾರಾಗುವುದೊಂದೇ ಯೋಗ್ಯ ಮಾರ್ಗ. ಬದಲು ಅವಳನ್ನು ಕಾಲೇಜು, ಗೀಲೇಜಿಗೆ ಹಾಕಿದರೆ, ಸುಮಿತ್ರೆಗೆ ತೊಂದರೆ ತಪ್ಪೀತೇ ಹೊರತು, ತನ್ನ ಹೊಣೆ ಮುಗಿಯುವುದಿಲ್ಲ. ಇರುವ ಐದು ಸಾವಿರ ರೂಪಾಯಿಗಳು ಅವಳ ವಿದ್ಯೆಗೆ ವೆಚ್ಚವಾದರೆ, ನಾಳೆ ಮದುವೆಗೆ ಸಲಬೇಕಾದ ವರದಕ್ಷಿಣೆಯನ್ನು ತಾನು ಎಲ್ಲಿಂದ ತರಬೇಕು? ಈಗ ಅವಳು ಮೆಟ್ರಿಕ್ ಆಗಿದ್ದಾಳೆ. ಎಂಥವನಾದರೂ, ಒಬ್ಬ ದುಡಿಯುವ ಗಂಡನನ್ನು ಹುಡುಕಿ, ಅವನ ಕೊರಳಿಗೆ ಅವಳನ್ನು ಕಟ್ಟಿ ತಾನು ಪಾರಾಗುವುದೇ ಲೇಸು" ಎಂದು ತನ್ನ ಮನಸ್ಸಿನಲ್ಲಿ ತರ್ಕಿಸಿದ; ಭಾರ್ಯೆಯೊಡನೆ ಚರ್ಚಿಸಿದ; ಕಣ್ಣಿಗೆ ಕಾಣುವ, ಕುಲದ ನಾಲ್ಕೆಂಟು ಸಂಬಂಧಗಳನ್ನು ಎಣಿಕೆ ಹಾಕಿದ. ಆದರೆ ಒಂದು ಅನುಮಾನ ಹೊಳೆಯಿತು—ತಮಗೆ ಸಾಧ್ಯ ಎಂದು ಕಾಣುವ ಹುಡುಗರು, ಮಂಜುಳೆ ಓದಿದಷ್ಟೇ ಓದಿಕೊಂಡವರು; ಗುಮಾಸ್ತಿಕೆಯಲ್ಲಿ ಇರುವವರು; ಶ್ಯಾನುಭೋಗಿಕೆಯಲ್ಲಿರುವವರು ಅಥವಾ ಉಪಾಧ್ಯಾಯ ವೃತ್ತಿಯಲ್ಲಿರುವವರು. ಅಂಥವರನ್ನು ವರಿಸಲು ಮಂಜುಳೆ 'ಊಹೂಂ' ಎಂದರೇನು ಗತಿ—ಎಂಬ ಭಯವೂ ಉಂಟಾಯಿತು.

ರಾತ್ರಿ ಊಟಕ್ಕೆ ಕುಳಿತಾಗ ತಂಗಿಯ ಮುಂದೆ, ತನಗೆ ನೋವಾಗಿದೆ ಎಂದು ತೋರಿಸಿಕೊಳ್ಳದೆ, ಉಪಾಯದಿಂದ ಕಾರ್ಯ ಸಾಗಿಸುವ ಎಣಿಕೆ ಮಾಡಿದ: "ನಿನಗಾಗಿ ನಾನು ಒಂದೆರಡು ಕಡೆಗಳಿಂದ ಜಾತಕ ತರಿಸಿಕೊಂಡಿದ್ದೇನೆ. ನಮ್ಮ ಪುರೋಹಿತರಿಗೆ ಕೊಟ್ಟಿದ್ದೇನೆ. ಒಂದಲ್ಲ ಒಂದು ಜಾತಕ ಹೊಂದಬಹುದು. ಸಾಧ್ಯವಾದರೆ ಆದಷ್ಟು ಬೇಗನೆ ಲಗ್ನಮಾಡಬೇಕೆಂದಿದ್ದೇನೆ. ಈ ವರ್ಷ ನಿನ್ನ ಓದೂ ಮುಗಿಯುತ್ತದೆಯಲ್ಲ. ಎಸ್. ಎಸ್. ಎಲ್. ಸಿ. ಪಾಸಾದರೆ ಧಾರಾಳವಾಗಿ ಸಾಕು. ಗಂಡಸರ ಹಾಗೆ ಹೆಂಗಸರು ಓದಿ, ಮಾಡಿ, ಸಂಪಾದನೆ ಮಾಡಬೇಕಿಲ್ಲವಲ್ಲ" ಎಂದ.

ಅದಕ್ಕೆ ಮಂಜುಳೆ ಮಾತನಾಡಲಿಲ್ಲ. ತಾನು ಮುಂದೆ ಓದಬೇಕೋ ಬೇಡವೋ ಎಂಬ ನಿಶ್ಚಯ ಅವಳಿಗೇನೇ ಆಗಿಲ್ಲ. ಇನ್ನು ನಿಶ್ಚಯ ಮಾಡಬೇಕು. ಮನೋಹರನನ್ನು ಕೇಳಿಯೇ ನಿಶ್ಚಯಮಾಡುತ್ತೇನೆ—ಎಂದಂದುಕೊಂಡಿದ್ದಳು ಅವಳು. ಅಲ್ಲದೆ ಅತ್ತಿಗೆಯ ಮುಂದೆ ಯಾವ ಉತ್ತರವನ್ನೂ ಹೇಳುವುದು ಉಚಿತವೆಂದು ತೋರದೆ ಸುಮ್ಮನಾಗಿಬಿಟ್ಟಳು.

ರತ್ನಾಕರನಿಗೆ ಆ ಗಳಿಗೆಯಲ್ಲಿ ತಂಗಿಯ ಮೌನ, ಸಮ್ಮತಿಯಾಗಿ ಕಾಣಿ

ಸಿತು. ಆ ರಾತ್ರಿ ಸುಮಿತ್ರೆಯು ಮಾತ್ರ "ನೋಡಿ, ಅವಳು ಬಾಯ್ತೆರೆಯಲೇ ಇಲ್ಲ; ಅವಳು ತನ್ನ ಖುಷಿ ಬಂದಂತೆ ಇರುವವಳು" ಎಂದು ಮಂಜುಳೆಯ ಮೌನಕ್ಕೆ ಅರ್ಥ ಹೇಳಿದುದರಿಂದ, ರತ್ನಾಕರರಾಯನ ಮನಸ್ಸು ತಿರುಗಿ ಅನುಮಾನಕ್ಕೆ ಎಡೆಕೊಟ್ಟಿತು. ಆದರೂ ಮದುವೆಯನ್ನು ಆದಷ್ಟು ಬೇಗನೆ ಮಾಡಿ ಮುಗಿಸುವುದು ತನ್ನ ಕರ್ತವ್ಯ ಎಂದು ಯೋಚಿಸಿ "ನೀನು ಸುಮ್ಮಗಿರು; ನಾನು ಮಾಡುತ್ತೇನೆ. ಉಪಾಯವಾಗಿ ಅವಳನ್ನೊಲಿಸಿಕೊಂಡು ಈ ಕೆಲಸವನ್ನು ಮಾಡಬೇಕೇ ಹೊರತು, ಸಿಟ್ಟುಮಾಡಿ ಕೆಲಸ ಕೆಡಿಸಬಾರದು" ಎಂದ. ಅದರಿಂದ ಸುಮಿತ್ರೆಗೆ ಸಮಾಧಾನವಾಗಲಿಲ್ಲ. "ಹೌದು, ಸಿಟ್ಟು ಜಗಳಗಳನ್ನೆಲ್ಲ ಕಲಿತವಳೇ ನಾನು. ನಿಮ್ಮ ತಂಗಿ ದೇವರಂಥ ಮೂರ್ತಿ—ನನಗೇನು?" ಎಂದು ಆಕೆ ಸಿಡುಕುಗೊಂಡಳು.

ಮರುದಿನ ಬೆಳಿಗ್ಗೆ ರತ್ನಾಕರ ರಾಯ ಉಪಾಹಾರ ಮುಗಿಸಿ, ತಂಗಿಯನ್ನು ಹಿತ್ತಿಲ ಹೊರಗೆ ಕರೆದೊಯ್ಯುತ್ತ, ದಾರಿಯಲ್ಲಿ ನಿಲ್ಲಿಸಿ, ಸಾಕಷ್ಟು ಪ್ರೀತಿಯಿಂದ ಮಾತು ತೊಡಗಿದ: "ನಿನಗೆ ಒಳ್ಳೆಯ ಗಂಡನನ್ನು ಹುಡುಕಿ ತರುತ್ತೇನೆ. ಅವಳಿಗೂ ನಿನಗೂ ಸರಿಹೋಗುವುದಿಲ್ಲವೆಂದು ನನಗೆ ಗೊತ್ತು. ಅಮ್ಮ ಸಾಯುವಾಗ ನಾನು ಹೇಳಿದ ಮಾತುಗಳು ಜ್ಞಾಪಕವಿರಬಹುದು. ಆದರೆ ನೋಡು, ನಾವು ಬಡವರಾದರೂ ನಮ್ಮ ಕುಲ ದೊಡ್ಡದು. ಮರ್ಯಾದೆಯಿಂದ ಕಾಲ ಕಳೆಯಬೇಕು ನಾವು. ಯಾವಾವ ಪೋಲಿಗಳ ಸಹವಾಸದಿಂದ ನೀನು ಹಾಳಾಗಬಾರದು" ಎಂದು ಬುದ್ಧಿಯನ್ನು ಹೇಳಿ, ತನ್ನ ನೌಕರಿಗೆ ಹೊರಟುಹೋದನು. ಆತ ತಂಗಿಯ ಬೆನ್ನು ಸವರಿ, ಅಕ್ಕರೆಯ ಮಾತುಗಳನ್ನು ಹೇಳಿ, ಆತ್ಮೀಯವಾಗಿ ಮಾತನಾಡಿದ್ದೆಂಬುದು ಅದೇ ಮೊದಲು. ಅವನೇನೋ ಹೊರಟುಹೋದನು; ಹೋಗುವಾಗ "ಯಾವಾವ ಪೋಲಿಗಳ ಸಹವಾಸದಿಂದ" ಎಂದುದಕ್ಕೆ ಕಾರಣವನ್ನು ಮಾತ್ರ ಹೇಳಲಿಲ್ಲ. ಮನೋಹರನ ಕಾಗದವೇ ಅಂಥ ಅನುಮಾನಕ್ಕೆಡೆಕೊಟ್ಟಿರಬೇಕು ಎಂದು ಮಂಜುಳೆ ಊಹಿಸಿದಳು. "ನೀನೇನು ಕಾಗದ ಬರೆದದ್ದೀ ಮಹಾರಾಯಾ" ಎಂದು ಪತ್ರಮುಖೇನ ಮನೋಹರನನ್ನು ಕೇಳುವ ಹಂಬಲವೂ ಅವಳಿಗೆ ಆಯಿತು. ಅದಕ್ಕೆ ಅಡಚಣೆಯೊಂದೇ-ಅವನ ವಿಳಾಸ ತಿಳಿಯದಿರುವುದು. ಅವನ ಇನ್ನೊಂದು ಪತ್ರ ತನಗೆ ಬರಲಾರದೇ ಎಂಬ ಹಂಬಲ ಅವಳಲ್ಲಿ ಮೂಡಿತು; ಮನೆಗೆ ಬಂದಳು. ತನ್ನ ಅಣ್ಣ, ಅತ್ತಿಗೆಯಂತೆ ಕೆರಳಲಿಲ್ಲ.

ಅವನನ್ನು ತಾನು ಬೇಸರಗೊಳಿಸಬಾರದು ಎಂಬ ಕೃತಜ್ಞತಾಭಾವ ಮೂಡಿತು. ಆ ದಿನ ತಿರುಗಿ ನೆರೆಮನೆಯ ಬಾವಿಯಿಂದ ನೀರನ್ನು ಹೊತ್ತು ತಂದು, ಬಚ್ಚಲ ಹಂಡೆಯನ್ನು ತುಂಬಿಸಿ, ನೀರು ಕಾಯಿಸುವ ಔದಾರ್ಯವನ್ನು ತೋರಿದಳು.

ಅನಂತರ–ನಂದಿನಿ, ಮಾಧವಿ, ವಿನತೆ, ಊರ್ವಶಿ—ಇವರ ಮನೆಗಳಿಗೆ ನಿತ್ಯ ಸಂದರ್ಶನೆಯಾಗಬೇಕಲ್ಲ. ಹಾಗೆ ಅಲೆದಾಡಿಕೊಂಡು ಹೋಗುವಾಗ ದಾರಿಯಲ್ಲಿ ಟಪ್ಪಾಲು ಪೇದೆ ಮಂಜಯ್ಯ ಭೇಟಿಯಾದ. ಮಂಜುಳೆ ಕೇಳುವ ಮುಂಚೆಯೇ ಕೈಯೆತ್ತಿ ಒಂದು ಕಾಗದವನ್ನು ಕೊಟ್ಟ. "ನಿನಗೆ ನೂರು ವರ್ಷ ಆಯುಷ್ಯ!" ಎಂದು ನಗುತ್ತ ಹೇಳಿ, ಕಾಗದ ಇಸಕೊಂಡು, ನಾಲ್ಕು ಹೆಜ್ಜೆ ಮುಂದಕ್ಕೆ ಹೋದಳು. ದಾರಿಯಲ್ಲಿ ಅದನ್ನು ಬಿಡಿಸಿ ಓದುವ ಸಾಹಸವಾಗಲಿಲ್ಲ. ಅಂತು ಅತ್ತಿಗೆಯ ಕೈಗೆ ಅದು ಸಿಗಲಿಲ್ಲವಲ್ಲ—ಎಂಬ ಸಂತೋಷವಾಯಿತು. ಪತ್ರ ಗೆಳೆಯನದು; ಬಿಡಿಸಿ ಓದುವುದಕ್ಕೆ ಸಮನಾದ ತಾವು ಕಾಣದೆ, ಯೋಚನೆಗೀಡಾದಳು. ಸುಮ್ಮನೆ ತುಸು ದೂರ ನಡೆದು ಮನೆಗೆ ಮರಳಿ ಬಂದಳು; ಕದವಿಕ್ಕಿಕೊಂಡು ಪತ್ರ ಪಠಣಕ್ಕೆ ತೊಡಗಿದಳು. 'ನನ್ನ ಮೊದಲಿನ ಪತ್ರಕ್ಕೆ ಉತ್ತರ ಬರೆಯಲಿಲ್ಲ' ಎಂಬ ದೂರು ಮೊದಲಿಗೇನೇ ಕಾಣಿಸಿತು. ಅನಂತರ 'ಪರೀಕ್ಷೆಯ ಫಲಿತ ಎಂದು ಬರುತ್ತದೆ?' ಎಂದು ಕೇಳಿದ್ದ. ಮುಂದುವರಿಸಿ, ತನ್ನ ಊರನ್ನು ಕುರಿತು ಲಲಿತ ಬಣ್ಣನೆಗಳನ್ನೆಲ್ಲ ಆ ಕಾಗದದಲ್ಲಿ ತುಂಬಿಸಿದ್ದ. 'ನಮ್ಮೂರು ಇಷ್ಟು ಚೆನ್ನಾಗಿದ್ದರೂ ಈ ಹಾಳು ರಜೆಯನ್ನು ಒಬ್ಬನೇ ಕಳೆಯುವುದಕ್ಕೆ ಬೇಸರ; ಸಾಧ್ಯವಾದರೆ ಈ ಸೋಮವಾರವೇ ಮುದ್ದೂರಿಗೆ ಬರುತ್ತೇನೆ. ಅಜ್ಜಿಯ ಹೋಟೇಲಿನಲ್ಲಿ ವಿಚಾರಿಸಿಕೊಂಡು ಹೋಗುತ್ತೇನೆ. ಬರುವುದಕ್ಕೆ ಇಷ್ಟೇ ಕಷ್ಟ–'ರಜೆಯಲ್ಲಿಯೂ ಪೇಟೆಗೆ ಹೋಗಿ ಸಾಯಬೇಕೇ? ಅಲ್ಲೇನಿದೆ? ಸುಮ್ಮನೆ ದುಡ್ಡು ಹಾಳು' ಎಂದು ನಮ್ಮ ಅಪ್ಪನಿಗೆ ಬೇಸರ. ಈ ಹಳ್ಳಿಯ ಹಿರಿಯರ ಮನೋವೃತ್ತಿಯೇ ಹಾಗೆ. ಆದರೆ ನಾನು ಕಷ್ಟಪಟ್ಟು ಹಾಗೂ ಹೀಗೂ ಅವರನ್ನು ಒಲಿಸಿದ್ದೇನೆ. ಮುಂದಿನ ವರ್ಷ ಮಂಗಳೂರಿಗೆ ಇಂಟರ್ ಕಲಿಯಲು ಹೋಗುವುದಂತು ನಿಶ್ಚಯ. ಅಷ್ಟು ಒಪ್ಪಿಗೆಯನ್ನು ಅವರಿಂದ ಪಡೆಯುವುದಕ್ಕೆ ಪ್ರಾಣಕ್ಕೆ ಬಂದಿತು. ಮುದ್ದೂರಿಗೆ ಬರುವುದೂ ಸುಲಭವಲ್ಲ. ಅದಕ್ಕೆ ಸುಳ್ಳುಗಳನ್ನು ವೆಚ್ಚಮಾಡಬೇಕು. 'ರಿಸಲ್ಟ್' ಈಗಾಗಲೇ ಬಂದಿರಬೇಕು–ಎಂದು ಸುಳ್ಳು ಹೇಳಿ ಹೊರಡಬೇಕು. ಅಷ್ಟು ಹೇಳುತ್ತೇನೆ. ಸತ್ಯ ಹೇಳುವುದಾದರೆ, ನಿನ್ನನ್ನು

ನೋಡಿ ಮಾತನಾಡುವ ಆಸೆಯುಂಟಾದುದರಿಂದಲೇ ಬರುವುದು’ ಎಂದು ಬರೆದು, ತನ್ನ ಪತ್ರವನ್ನು ಮುಗಿಸಿದ್ದ.

ಮಂಜುಳೆ ಆ ಪತ್ರವನ್ನು ಮೂರು ಮೂರು ಬಾರಿ ಓದಿದಳು. ಅವನು ಬರುತ್ತೇನೆಂದು ಬರೆದ ಸೋಮವಾರ ದಿನ ಅದೇನೇ. ಅವಳ ಮನಸ್ಸು ತುಂಬ ಹಿಗ್ಗಿತು. ತನ್ನ ಕಲ್ಪನೆಯಂತೆಯೇ ಮನೋಹರನು ತನಗೊಂದು ದೊಡ್ಡ ಸ್ಥಾನ ಕಲ್ಪಿಸಿದ್ದಾನೆ–ಎಂಬ ಹಿಗ್ಗುಂಟಾಯಿತು. ಅವನು ತನ್ನವನಾದಾನೆಯೇ ಎಂಬ ಆಸೆಯಾಯಿತು. ಆದರೆ ಕೈಯಲ್ಲಿ ಹಿಡಿದ ಪತ್ರವನ್ನು ಕೆಳಕ್ಕಿರಿಸಲಾರಳು; ಒಳಕ್ಕಿರಿಸಲಾರಳು. ಸುಮಿತ್ರೆಯ ಭೂತ ಒಂದಿದೆಯಲ್ಲ –ಮನೆಯಲ್ಲಿ; ತನ್ನ ಆಶೆಗಳನ್ನು ಹೊತ್ತಿಸುವವಳು—ಎಂದು ಮನಸ್ಸಿಲ್ಲದ ಮನಸ್ಸಿನಿಂದ ಅದನ್ನು ಹರಿದು ಚೂರುಮಾಡಿದಳು; ಬಚ್ಚಲು ಮನೆಯ ಒಲೆಯಲ್ಲಿ ಉರಿಸಿ ಬಂದಳು. ಬಂದ ಮೇಲೆ ‘ಅದನ್ನಿಟ್ಟುಕೊಳ್ಳದೆ ಹೋದೆನೇ’ ಎಂಬ ಬೇಸರವೂ ಆಯಿತು. ಆದರೆ ಆ ಬೇಸರವೆಲ್ಲ ಕ್ಷಣಕಾಲದ್ದು. ಅವನನ್ನು ಇಂದೋ ನಾಳೆಯೋ ಕಾಣುತ್ತೇನೆಂಬ ಹರ್ಷದಲ್ಲಿ ತೇಲಿದಳು. ತಿರುಗಿ ಮನೆಯಿಂದ ಹೊರಟಳು. "ಊಟಮಾಡಿ ಹೊರಡಬಹುದು ಸವಾರಿ. ನಿತ್ಯವೂ ಅಡಿಗೆ ಮಾಡಿರಿಸುವುದು; ಅನ್ನ ತೆಗೆದಿರಿಸುವುದು; ಕಾಯುವುದು" ಎಂದು ಮೂದಲಿಸುವ ಅತ್ತಿಗೆಗೆ ಅಂಜಿ, ಕಾದು ಕುಳಿತು, ಮತ್ತೂ ಅರ್ಧ ಘಂಟೆ ತಪಸ್ಸುಮಾಡಿ ಬಳಿಕ ಊಟಮಾಡಿದಳು. ಅತ್ತಿಗೆಯ ಮಕ್ಕಳೊಡನೆ ಆಟವಾಡಿದಳು. ಅವರನ್ನು ಊಟವಾದ ಬಳಿಕ ಮಲಗಿಸಿ, ನಿದ್ದೆಬರಿಸಿ ಮನೆಯಿಂದ ಹೊರಬಿದ್ದಳು. ದಾರಿಯುದ್ದಕ್ಕೂ ಮನೋಹರನ ಬಿಂಬವೇ ಅವಳ ಕಣ್ಣೆದುರಿಗೆ ನಲಿದಾಡುತಿತ್ತು. ಮಾಧವಿಯ ಮನೆ ಸಮೀಪಿಸಿತು. ಯೋಚನೆ ಇಲ್ಲದೆಯೆ ದಾಟಿ ಮುಂದಕ್ಕೆ ಸರಿದಳು. ಇನ್ನೂ ಗುರಿ ಇಲ್ಲದೆಯೆ ಮುಂದೆ ಹೋಗುತ್ತಿದ್ದಳೋ ಏನೋ— ವಿನತೆಯ ಮನೆಯ ಜಗುಲಿಯಲ್ಲಿ ಅವಳ ರೂಪು ಕಾಣಿಸಿತು; ಒಳಕ್ಕೆ ಹೋದಳು. "ಏನು ವಿಶೇಷ?" ಎಂದು ಅವಳು ಕೇಳಿದರೆ ತುಂಬಿದ ಮನಸ್ಸಿನಿಂದ "ಇವತ್ತು ಮನೋಹರ ಬರುತ್ತಾನಂತೆ" ಎಂದಳು. ಪತ್ರ ಬಂದ ಸುದ್ದಿಯನ್ನೂ ಹೇಳಿದಳು. ವಿನತೆ ಅದಕ್ಕೆ "ಅವನು ನಿನಗೆ ಕಾಗದ ಬರೆದಿದ್ದಾನೆಯೆ" ಎಂದು ಒಂದು ವಿಧದ ಕುತೂಹಲದಿಂದ ಮಾತನಾಡಿಸಿದಳು.

"ಯಾಕೆ, ಬರೆಯ ಬಾರದೇ?"

"ಬರೆಯಬಾರದೆಂದಲ್ಲ. ಸಹಪಾಠಿ, ಬರೆಯಬೇಕೆಂದು ಅನಿಸಿತೋ ಏನೋ. ಬರೆದರೇನು ತಪ್ಪು?" ಎಂದರೂ, ಅವಳ ಮನಸ್ಸಿಂದ ತನಗೆ ಅನಾಮಧೇಯರು ಬರೆದ ಪತ್ರಗಳಿಂದುಂಟಾದ ನೋವು ಮರವೆಯಾಗಿರಲಿಲ್ಲ. ಆದುದರಿಂದಲೇ "ಏನೆಲ್ಲ ಬರೆದಿದ್ದಾನೆ?" ಎಂದು ಕೇಳಿದಳು. ಮಂಜುಳೆಗೆ ಹಿಂದಣ ಬಾರಿ ಆತ ಬರೆದ ಕಾಗದವು ತನ್ನ ಕೈಗೆ ಸಿಕ್ಕದೆ ಉಂಟಾದ ನೋವನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಒದಗಿದಂತಾಯಿತು. ವಿನತೆ ಅವಳಿಗೆ ತಿಳಿಯದವಳಲ್ಲ. ಹಾಗಾಗಿ ಎಲ್ಲವನ್ನೂ ಅವಳೊಡನೆ ಹೇಳಿದಳು. ಕೈಗೆ ಸಿಕ್ಕದ ಪತ್ರದ ಸಾರಾಂಶವನ್ನೂ ಹೇಳಿದಳು. ಆ ಮೇಲೆ ಆಸೆಯಿಂದ "ಅವನು ತಮ್ಮ ಊರಿಗೆ ಬರುತ್ತೀಯಾ ಎಂದು ಕೇಳಿದ್ದಾನೆ. ನೀನೂ, ಮಾಧವಿ ಅಥವ ಇನ್ನಾರಾದರೂ ಬರುವುದಾದರೆ ಕೂಡಿ ಹೋಗಬಹುದಿತ್ತು. ಮಾಧವಿ ಬರಲಾರಳು; ನಂದಿನಿಯ ಲಗ್ನವಿದೆಯಲ್ಲ. ನೀನೊಬ್ಬಳು ಬಂದರೂ ಸಾಕು. ನಾನೊಬ್ಬಳೇ ಅಲ್ಲಿಗೆ ಹೋಗುವುದು ಚೆನ್ನಾಗಿ ಕಾಣಿಸುವುದಿಲ್ಲ. ಅವರ ಮನೆಯವರೇನು ತಿಳಿಯುತ್ತಾರೋ. ನಿನ್ನ ತಾಯಿ ಬಿಟ್ಟಾರೆಯೇ? ನಾನು ಕೇಳಲೇ?"

"ಈಗ ಬೇಡ; ಸುಮ್ಮನಿರು" ಎಂದು ನುಡಿದಳು ವಿನತೆ. ಆದರೆ ತನಗೆ ಹಿತವೆಂದು ತೋರದ ಆಮಂತ್ರಣ, ನಂದಿನಿಯ ಮದುವೆಯ ಕರೆಯನ್ನು ಊರಲ್ಲಿದ್ದು ತಪ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ. ಈ ನೆಪ ದೊರೆತರೆ ಒಳಿತಲ್ಲವೇ-ಎಂದು ಹೊಳೆಯಿತು. "ಊರಲ್ಲಿದ್ದು ನನಗೂ ಬೇಸರ. ಅಲ್ಲಿಗೆ ಹೋದರೆ ಹೋಗಬಹುದಿತ್ತು. ಆದರೆ ಯಾರ್ಯಾರ ಮನೆಗೆ ಹೋಗುವುದು ಹೇಗೆ? ನಿನ್ನನ್ನು ಅವನು ಕರೆದಿದ್ದಾನೆ. ನಾನೂ ಹೋಗುವುದೇ?" ಎಂದಳು.

"ನನಗೂ ಅವನು ನೆಂಟನಲ್ಲ. ಸ್ನೇಹಿತನಾಗಿ ಕರೆದದ್ದು. ನಿನ್ನನ್ನೂ ಕರೆಯುವಂತೆ ಅವನಿಗೆ ಹೇಳುತ್ತೇನೆ" ಎಂದಳು. ತುಸು ಯೋಚಿಸಿದಳು. "ಯಾವುದಕ್ಕೂ ಅವನು ಬರಲಿ; ಬಂದು, ಇನ್ನೊಮ್ಮೆ ಬಾಯ್ದೆರೆ ಕರೆಯಬೇಕು. ಇದು ಕಾಗದದಲ್ಲಿ ಬರೆದದ್ದು. ಉಪಚಾರಕ್ಕಿದ್ದರೂ ಇರಬಹುದು" ಎಂದಳು. ವಿನತೆ ಅಲ್ಲಿಂದ ಥಟ್ಟನೆ ಎದ್ದಳು. ಏನೋ ಯೋಚಿಸಿ ಒಳಗೆ ಹೋಗಿ, ಕೈಯಲ್ಲಿ ನಾಲ್ಕು ಕಾಗದಗಳನ್ನು ಹಿಡಿದುಕೊಂಡು ಬಂದು, ಮಂಜುಳೆಯ ಕೈಗೆ ಆ ನಾಲ್ಕು ಪತ್ರಗಳನ್ನು ಕೊಟ್ಟು "ನಿನಗೆ ಒಂದು ಬಂದಿದೆ; ನನಗೆ ನಾಲ್ಕು ಕಾಗದ ಬಂದಿವೆ ನೋಡು. ಓದುವಾಗ ಮೈ ಉರಿ

ಯುತ್ತದೆ. ಎಂತಹ ನಾಚಿಕೆಗೇಡಿ ಜನಗಳು ಊರಲ್ಲಿದ್ದಾರೆ ನೋಡು!" ಎಂದಳು. ಅವನ್ನು ಗೆಳತಿಗೆ ಓದುವುದಕ್ಕೆ ಕೊಟ್ಟಳು. ಮಂಜುಳೆಗೆ ಓದಿ ಆಶ್ಚರ್ಯವಾಯಿತು. ಮನಸ್ಸು ಖಿನ್ನವೂ ಆಯಿತು. ತಮ್ಮ ಊರಲ್ಲಿ ಆ ಬಗೆಯ ದುಷ್ಟ ಪತ್ರಗಳನ್ನು ಬರೆಯುವವರಿರಬಹುದು ಎಂದು ಆಗ ತಾನೇ ತಿಳಿವಾಯಿತು. ಪತ್ರ ಬರೆದ ವ್ಯಕ್ತಿಗಳಿಗೆ, ತಮ್ಮ ಹೆಸರನ್ನು ಬರೆಯುವ ಧೈರ್ಯ ಸಹ ಇಲ್ಲದಿರುವಾಗ, ಅಂಥ ಜನತೆ ಷಂಡ ವರ್ಗ ಎಂದನಿಸದೇ ಹೋಗಲಿಲ್ಲ. ಅವಳ ಮನೋಭಾವವನ್ನರಿತವಳಂತೆ ವಿನತೆ "ಮಂಜುಳೆ, ಈ ಕಾಗದಗಳನ್ನು ನೋಡಿ ನನಗೆ ಈ ಊರೇ ಸಾಕೆನಿಸಿದೆ. ಹೇಗಾದರೂ ಇಲ್ಲಿಂದ ಮಂಗಳೂರಿಗೆ ಹೋಗಿ, ಓದನ್ನು ಮುಂದುವರಿಸಬೇಕು ಎಂದು ಯೋಚಿಸಿದರೆ, ನಮ್ಮ ಅಮ್ಮನ ಮನಸ್ಸು ಅನುಕೂಲವಾಗಿಲ್ಲ. ಏನು ಮಾಡುತ್ತಾಳೋ ತಿಳಿಯದು. ನನಗಂತೂ ಧೈರ್ಯವಿಲ್ಲ. ಹಾಗೆಂದು–ಇಲ್ಲಿಯೇ ಏನಾದರೊಂದು ಟೀಚರ್ ಕೆಲಸ ದೊರೆತರೆ ಆಗಬಹುದು ಎನಿಸುತ್ತದೆ. ಸಿಕ್ಕಿದರೂ ಇಂತಹ ಕುಲಗೆಟ್ಟ ಊರಿನಲ್ಲಿ ಅದೂ ಕಷ್ಟವೇ ಎಂಬ ಭೀತಿಯಾಗುತ್ತದೆ" ಎಂದು ನಿಟ್ಟುಸಿರುಗರೆದು "ನಿಮ್ಮೆಲ್ಲರ ಭಾಗ್ಯ ನನಗೆಲ್ಲಿಂದ ಬಂದೀತು" ಎಂದಳು.

ಆ ಮಾತಿನ ಅರ್ಥ ಮಂಜುಳೆಗೆ ಹೊಳೆಯಲಿಲ್ಲ; ಅವಳು "ನಮ್ಮದೇನು ಭಾಗ್ಯ? ನನ್ನ ಕಥೆಯನ್ನೆಲ್ಲ ನಿನಗೆ ಹೇಳಿದ್ದೇನಲ್ಲ. ಇವತ್ತು ಬೆಳಿಗ್ಗೆಯಷ್ಟೆ ನನ್ನಅಣ್ಣ, ಮದುವೆಯ ಮಾತೆತ್ತಿದರು. ನಾನು ಉತ್ತರವನ್ನೇ ಕೊಡಲಿಲ್ಲ. ನನ್ನ ಖುಶಿಯಿದ್ದವರನ್ನು ನಾನುಮದುವೆಯಾಗುವವಳೇ ಹೊರತು, ಇವರ ಒತ್ತಾಯಕ್ಕೆ ಸಿಲುಕುವವಳಲ್ಲ" ಎಂದಳು.

ವಿನತೆಯಾಗ ಆಶ್ಚರ್ಯವನ್ನು ಸೂಚಿಸಿದಳು. ಈ ವಯಸ್ಸಿನಲ್ಲಿ ಹಿರಿಯರು ಮನೆಯ ಮಕ್ಕಳಿಗೆ ಮದುವೆಯನ್ನು ಯೋಚಿಸುವುದು ಸ್ವಾಭಾವಿಕ. ಅವಳ ಗೆಳತಿ ನಂದಿನಿಗೆ ಮದುವೆ ನಿಶ್ಚಯವಾಗಿದೆ. ಉಳಿದವರಿಗೂ ಆಗುತ್ತದೆ. ತನ್ನಂಥ ಅಭಾಗಿನಿಗೆ ಅದು ಕಷ್ಟ ಎಂದು ತೋರುತಿತ್ತು. "ನಿನಗೆ ಒಪ್ಪಿದವರನ್ನು ಮದುವೆಯಾಗಬೇಕೆನ್ನುವುದು ನ್ಯಾಯ. ಹಾಗೆ ಲಗ್ನ ನಿಶ್ಚಯಿಸುವಾಗ ನಿನ್ನನ್ನು ಕೇಳದಿರುತ್ತಾರೆಯೇ? ಕೇಳಿಯಾರು. ಹುಡುಗ ನಿನ್ನನ್ನು ನೋಡುವುದಕ್ಕೆ ಬಂದಾನು. ಅವನು ನಿನ್ನನ್ನು ನೋಡುವ ಹಾಗೆ ನೀನೂ ಅವನನ್ನು ನೋಡಬಹುದಲ್ಲ. ಅದಕ್ಕೇನು ಕಷ್ಟ? ನನ್ನ ಹಣೆಬರಹದ ಹಾಗಿಲ್ಲವಲ್ಲ ನಿನ್ನದು. ಯಾರಾದರೂ ಒಬ್ಬ ಯೋಗ್ಯ, ಹೊಟ್ಟೆಗಿಲ್ಲದವನಾ

ದರೂ ಸರಿಯೆ, ರೂಪವಿಲ್ಲದವನೂ ಸರಿಯೆ, ಗುಣವಂತನಾಗಿದ್ದರೆ ಸಾಕು, ನನ್ನನ್ನು ಮದುವೆಯಾಗಲು ಬಂದರೆ, ನನ್ನ ಸಂಕಟ ಮುಗಿದೀತು ಎಂದು ನನಗೆ ತೋರುತ್ತದೆ. ಮರ್ಯಾದೆಯಿಂದ ಬಾಳುವ ಆಸೆಯೊಂದೇ ನನಗೆ. ಸಂಪತ್ತು ಬೇಡ; ಇನ್ನೇನೂ ಬೇಡ" ಎಂದು ತನ್ನ ನೋವನ್ನು ತೋಡಿ ಕೊಂಡಳು. ತಾನು ಹುಟ್ಟಿದ ಕುಲವನ್ನು ದೂಷಿಸಿದಳು. ತನ್ನ ಹುಟ್ಟಿಗಾಗಿ, ತನ್ನ ವಿಷಯದಲ್ಲಿ ತಾಯಿಗಿರುವ ದುರಾಸೆಗಾಗಿ, ವ್ಯಥೆಯನ್ನೂ ತೋಡಿ ಕೊಂಡಳು. ತಾನು ಸುಮಂಗಲಿಯಾಗಬೇಕು. ನಿತ್ಯ ಸುಮಂಗಲಿಯಾಗ ಬಾರದು-ಎಂಬುದೊಂದೇ ಕನಸು ಅವಳದ್ದು. ಸ್ವಸುಖದ ಕಲ್ಪನೆಯೂ ಅವ ಳಿಗೆ ಇಲ್ಲ. ಮರ್ಯಾದೆಯ ಹಂಬಲ ಒಂದೇನೆ. 'ಆದರೆ ಮದುವೆಯಾಗ ಬೇಕು. ಇಲ್ಲದೆ ಹೋದರೆ-ಚಿರಕಾಲ ಕನ್ಯೆಯಾಗಿರುತ್ತೇನೆ' ಎಂಬ ನಿರ್ಧಾರ ಅವಳದ್ದು. ಆ ನಿರ್ಧಾರಕ್ಕೆ ತನ್ನ ಸಮಾಜವೇನು ಮಾಡೀತು, ತನ್ನ ನಾಳಿನ ಯೌವನ ಹೇಗೆ ಸಾಗೀತು--ಎಂಬುದೇ ಭೀತಿ ಅವಳಿಗೆ. ಅದನ್ನೆಲ್ಲ ಗೆಳತಿ ಯೊಡನೆ ಮನಬಿಚ್ಚಿ ಚರ್ಚಿಸಿದಳು. ಆದರೆ ಮಂಜುಳೆಗೆ ಪ್ರಪಂಚ, ವಿನತೆಗೆ ಕಂಡಷ್ಟು ಕಠಿಣವಾಗಿ ಕಾಣಿಸುತ್ತಿರಲಿಲ್ಲ. "ಯಾರಾದರೂ ಸಿಗಲಿಕ್ಕಿಲ್ಲ ಅನ್ನುತ್ತೀಯಾ? ನಾನಾದರೆ ಜಾತಿ ಗೀತಿ ನೋಡುವುದಿಲ್ಲ" ಎಂದಳು. "ಜಾತಿ ಗೀತಿಗಳನ್ನು ನಾನೂ ಅಪೇಕ್ಷಿಸುವುದಿಲ್ಲ. ಆದರೆ ನಮ್ಮ ಕುಲವನ್ನೊಪ್ಪು ವವರು ಬೇಕಲ್ಲ. ಇನ್ನೊಬ್ಬರು ಬರಲಾರರು. ನಮ್ಮ ಜನಗಳೇ ಸಿಗಬೇಕು, ಸಿಗದೆ ಹೋದರೆ ಏನು ಮಾಡಬೇಕು?"

"ಮದುವೆಯಾಗದೆಯೆ ಉಳಿದರೆ ಏನಾಗುತ್ತದೆ? ಈಗ ನಾನು ನನ್ನ ಇಷ್ಟಕ್ಕೆ ಒಪ್ಪಿದವರು ಸಿಗದಿದ್ದರೆ ಮದುವೆಯಾದೇನೆನ್ನುತ್ತೀಯಾ? ಜೀವ ಹೋದರೂ ಆಗಲಿಕ್ಕಿಲ್ಲ."

ವಿನತೆಯಿಂದ ಪ್ರತ್ಯುತ್ತರ ಬಂದಿತು: "ಜೀವ ಹೋದರೆ ಏನೂ ಕಷ್ಟ ವಿಲ್ಲ. ಹೋಗದಿದ್ದರೇನೇ ಕಷ್ಟ. ಅದನ್ನು ಯೋಚಿಸಿದಷ್ಟು ಪರಿಹಾರ ಹೊಳೆಯುವುದಿಲ್ಲ."

"ಸುಮ್ಮನಿರೆ, ನಿನಗೇನಾಗಿದೆ—ಧಾಡಿ? ದೇವರು ರೂಪು ಕೊಟ್ಟಿದ್ದಾನೆ. ಬುದ್ಧಿ ಕೊಟ್ಟಿದ್ದಾನೆ. ನಿನ್ನನ್ನು ಯಾರೂ ಒಲಿಯಬಹುದು. ಯಾರನ್ನೂ ಒಲಿಸ ಬಹುದು. ಹಿರಿಯರ ಮಾತು ಕೇಳಿ ಜಾತಿ ಎಂದು ಕುಳಿತರೆ ಮಾತ್ರ ಕಷ್ಟ."

ಆಗ ಹೊರಗಿಂದ, ಮನೆಗೆ ಬರುವ ಊರ್ವಶಿಯ ಸ್ವರ ಕೇಳಿಸಿತು.

"ನಾರದಿ ಬಂದಳು. ಸುಮ್ಮನಿರು, ಅವಳ ಹತ್ತಿರ ಏನೂ ಹೇಳಬೇಡ. ಗಾಳಿಗೆ ಕೊಟ್ಟ ಕಸ್ತೂರಿ" ಎಂದಳು. ಊರ್ವಶಿ ಬರುವಾಗಲೇ ಬೇರೆ ಸುದ್ದಿಗಳನ್ನು ತಂದಿದ್ದಳು. "ಗ್ರೇಟ್ ಇಂಡಿಯನ್ ಸರ್ಕಸಿನ ಮೊದಲನೆಯ ದೇಖಾವೆ ಇಂದೇ ರಾತ್ರಿ ಆಗುತ್ತದೆ" ಎಂದೆನ್ನುತ್ತ ಬಂದೂ ಆಯಿತು. ಹಯವದನ ಎಂಬ ಆನೆಯಿಂದ ತೊಡಗಿ ಮೃತ್ಯುಂಜಯನೆಂಬ ಕತ್ತೆಕಿರುಬನ ತನಕ ಹೆಸರನ್ನು ಹೇಳಿದಳು. 'ಚೀನಿ, ಜಪಾನಿ ಕಸರತ್ತುಗಾರರಿದ್ದಾರಂತೆ'. 'ಈ ಊರಿಗೆ ಸರ್ಕಸ್ಸು ಬಾರದೆ ಸುಮಾರು ಎಂಟು ವರ್ಷಗಳಾದುವು'. 'ನಾನಿವತ್ತು ಖಂಡಿತ ಹೋಗುವವಳು' ಎಂದು ಗೆಳತಿಯರನ್ನು ಪುಸಲಾಯಿಸತೊಡಗಿದಳು. ಮಂಜುಳೆಯೂ ಅದಕ್ಕೆ ಮುಂದೆ.

ಸರ್ಕಸಿನ ಕರಪತ್ರ, ಗೋಡೆಗೆ ಅಂಟಿಸಿದ ಚಿತ್ರಗಳನ್ನೆಲ್ಲ ನೋಡಿದ ಊರ್ವಶಿಯು, ನೋಡಿದವರಿಗಿಂತಲೂ ಹೆಚ್ಚಿನ ಅಭಿಮಾನ ಅವರ ಆಟಗಳ ವಿಷಯದಲ್ಲಿ ತಾಳಿದ್ದಳು. 'ಇದು ಮೊದಲನೆಯ ರಾತ್ರಿ; ಜನಗಳನ್ನಾಕರ್ಷಿಸಲು ಬಹು ಚೆನ್ನಾಗಿಯೇ ಆಡುತ್ತಾರೆ' ಎಂದು ವಾದಿಸಿದಳು. ಈ ಮಾತುಗಳ ಸರಣಿ ಸಾಗುತ್ತಿರುವಾಗಲೇ— ಮುಂದಲ ಬೀದಿಯಲ್ಲಿ, ಆನೆ, ಅಲಂಕೃತ ಕುದುರೆ, ಕೋತಿಗಳ ಮೆರವಣಿಗೆ ಬಂದೂ ಆಯಿತು. ಮೂವರೂ ಹೊರಕ್ಕೆ ಬಂದು ಕುದುರೆಗಳನ್ನೆಣಿಸಿದರು, ಆನೆಗಳನ್ನೆಣಿಸಿದರು, ಸವಾರರನ್ನೆಣಿಸಿದರು–ಅವರ ಹಿಂದೆ ಸಾಲಾಗಿ ಬಣ್ಣದ ನೋಟೀಸಿಗಾಗಿ ಧಾವಿಸುವ ಜನ ಸಮುದಾಯವನ್ನೂ ಎಣಿಸಿದರು . . . . ಹೋಗಿ ನೋಡಲೇಬೇಕೆಂಬ ನಿರ್ಧಾರ ಯಾರಿಗೂ ಆಗಬೇಕು.

ಮಂಜುಳೆಗೆ ಅಂಜಿಕೆ–ಮನೆಯಲ್ಲಿ ಬೇರೆ ಗಂಡಸರಿಲ್ಲ. ಅಣ್ಣ ಊರು ಬಿಟ್ಟಿದ್ದಾನೆ. ಕಾವಲಿಗೆ ಒಬ್ಬ ಹಳೆಯ ಉಗ್ರಾಣಿ ಬರುತ್ತಾನಾದರೂ, ಯಜಮಾನರಿಲ್ಲದ ವೇಳೆಯಲ್ಲಿ, ತನ್ನನ್ನು ಹೋಗಗೊಡಲು ಸುಮಿತ್ರೆಯು ಒಪ್ಪ ಬೇಕಲ್ಲ – ಎಂಬ ಚಿಂತೆ! ಟಿಕೇಟಿನ ಆರೆಂಟಾಣೆ ಕಾಸಿಗಾದರೂ ಅವಳ ಮುಖವನ್ನು ನೋಡಬೇಕು. ಆ ತೊಡಕನ್ನು ವಿವರಿಸಿದಳು. "ಅಷ್ಟು ಜೋರೋ ನಿನ್ನ ಅತ್ತಿಗೆ!" ಎಂದು ಕೇಳಿದಳು ಊರ್ವಶಿ. ಮಾತಿಗೆ, ದಿಟ್ಟತನಕ್ಕೆ ಊರ್ವಶಿ ಕಡಿಮೆಯಲ್ಲ. ಅವಳು ಉಪಾಯ ಹೇಳಿದಳು–'ನೀನು ಸುಮ್ಮನಿರು. ನಾನೂ ವಿನತೆಯೂ ನಮ್ಮ ಊಟ ಮುಗಿಸಿಕೊಂಡು, ನನ್ನ ತಮ್ಮನೊಡನೆ ನಿಮ್ಮಲ್ಲಿಗೆ ಬರುತ್ತೇವೆ. 'ಹೊರಡು' ಎನ್ನುತ್ತೇವೆ....ನೀನು

'ಬೇಡ,ಬೇಡ' ಎಂದು ನಾಟಕ ಮಾಡು."ಬರಲಿ ಸುಮಿತ್ರಮ್ಮ, ಅವಳು ಮನೆ ಕಾಯಲಿಕ್ಕೆ ಬೇಕೇ? ನಾವು ಕರೆದು ತಂದು ಬಿಡುತ್ತೇವಲ್ಲ" ಎಂದರೆ, ನಮ್ಮ ಮುಂದೆ ಮರ್ಯಾದೆ ಉಳಿಸಿಕೊಂಡಾಳು!-ಎಂಬ ಉಪಾಯವನ್ನು ಸೂಚಿಸಿದಳು.

"ಆದರೂ ಹಣಬೇಕಲ್ಲ. ಇಲ್ಲ ಎಂದರೆ?"

"ಇವತ್ತಿಗೆ ನನ್ನ ಹತ್ತಿರ ದುಡ್ಡಿದೆ" ಎಂದಳು ಊರ್ವಶಿ. ಅನಂತರ ವಿನತೆಯ ತಾಯಿಯ ಬಳಿಗೆ ಹೋಗಿ, ವಕಾಲತ್ತು ನಡೆಯಿಸಿ, ಅವಳ ಅನುಮತಿಯನ್ನು ಪಡೆದೂ ಆಯಿತು.

"ನನಗಿಂತ ಊರ್ವಶಿ ಜಾಣೆ" ಎಂಬ ಹಿಗ್ಗಿನಿಂದ ಮಂಜುಳೆ ಮನೆಗೆ ಹೊರಟಳು. ಅವಳು ಮನೆ ಸೇರುವಾಗ ಕತ್ತಲೂ ಆಗಿತ್ತು. ವಾಡಿಕೆಯಂತೆ ಸುಮಿತ್ರ ತನ್ನ ಬೇವಾರೀಸು ನಾದಿನಿಯನ್ನು ದೂರುತ್ತ ಮನೆಗೆಲಸದಲ್ಲಿ ನಿರತಳಾಗಿದ್ದಳು. ಮಂಜುಳೆಯು ಎಲ್ಲಿಲ್ಲದ ಉತ್ಸಾಹದಿಂದ, ಅವಳೆರಡು ಮಕ್ಕಳನ್ನು ಆಡಿಸಿ ವೇಳೆ ಕಳೆದಳು.ಊಟ ಮುಗಿಯಿತು.ಒಂದು ಬಾರಿ ಮನೋಹರನ ಸ್ಮರಣೆಯೂ ಆಯಿತು. "ಛೆ,ಅಜ್ಜಯ ಹೊಟೇಲಿಗೆ ಹೋಗಿ ವಿಚಾರಿಸಬಹುದಿತ್ತು" ಎಂದು ತನ್ನನ್ನು ದೂಷಿಸಿಕೊಂಡು, ವೇಳೆಗೆ ಮುಂಚಿತವಾಗಿ ಹಾಸುಗೆಯನ್ನು ಹಾಸಿಕೊಂಡು, ಏನೋ ಪುಸ್ತಕ ಹಿಡಿದು ಕುಳಿತಳು. ಅತ್ತಿಗೆಯ ಮಗುವೊಂದು ಕೂಗಿತು. ಅದನ್ನು ತೊಟ್ಟಿಲಲ್ಲಿ ಮಲಗಿಸಿ ಹಾಡತೊಡಗಿದಳು.ಅದಕ್ಕೆ ಕಣ್ಣು ಬಾಡುವ ವೇಳೆಗೆ ಸಮನಾಗಿ ಸರ್ಕಸಿಗೆ ಹೊರಟ ಗೆಳತಿಯರು ಬಂದರು-ವಿನತೆ,ಊರ್ವಶಿ, ಮಾಧವಿ, ಇನ್ನಿಬ್ಬರು ಕಿರಿಯ ಮಕ್ಕಳು; ವಿನತೆಯ ಸೋದರ ರಾಮಕೃಷ್ಣ. ಅವರೆಲ್ಲ ಬಂದೊಡನೆ ಇನ್ನೊಂದು ನಾಟಕವಾಯಿತು. ಸುಮಿತ್ರ ಮಾತಿಲ್ಲದೆ ಒಡಂಬಡುವಂತಾಯಿತು. ಮಂಜುಳೆ "ಎಂಟಾಣೆ ಕೊಡು" ಎನ್ನಲಿಲ್ಲ. ಅವಳಾಗ ಕರೆದು ಅದನ್ನು ಕೊಡಲೂ ಇಲ್ಲ. ಅವರೆಲ್ಲರು ಹೊರಟುಹೋದ ಬಳಿಕ ಸುಮಿತ್ರ "ಅವರೆಲ್ಲ ತುಂಬ ದುಡ್ಡಿದ್ದವರಪ್ಪ; ಯಾವ ಚಿಂತೆಯೂ ಇಲ್ಲ. ಎಷ್ಟೊ ನಾಟಕ, ಸರ್ಕಸುಗಳನ್ನೂ ನೋಡಬಹುದು. ನೋಡುವ, ಎಷ್ಟು ದಿನ ಕಾಡಿಯಾಳೆಂದು" ಎಂದು ಗೊಣಗಿದಳು; ತನ್ನ ವೇಳೆಗೆ ಸಮನಾಗಿ ಒರಗಿಕೊಂಡಳು.

ಹುಡುಗಿಯರ ಪಟಾಲಮು ಊರ ಮೈದಾನಿಗೆ ಹೊರಟಿತು. ಅನಿರೀಕ್ಷಿತ ಜನಸಂದಣಿ ಆ ದಿನ. ಕ್ಷಾಮ ಬಂದ ಊರಿಗೆ ಸಮಾರಾಧನೆಯ

ಊಟಕ್ಕೆ ಹೇಳಿದಂತಿತ್ತು. ಯಾವ ಹೆಚ್ಚಿನ ವಿನೋದವೂ ಅವರ ಊರಿಗೆ ಬಾರದೆ ಎಷ್ಟೋ ಕಾಲವಾಗಿತ್ತು. ಹಾಗಾಗಿ ಮೊದಲನೆಯ ದಿನವೇ ಊರಿಗೆ ಊರೇ ಅಲ್ಲಿ ಸೇರಿತ್ತು. ಇವರಿಗೊಂದು ತೊಡಕು—ಟಿಕೇಟಿನ ಗೂಡಿನ ಬಳಿ ಹೋಗಲು ಜನರ ನುಗ್ಗು ಹೇಳಿತೀರದು. ಕತ್ತು ಹಣಕುತ್ತ, ಗುರುತಿನ ಗಂಡುಸರು ಸಿಗುತ್ತಾರೋ—ಎಂದು ಕಾಯಬೇಕಾಯಿತು.

ಅಂಥ ವೇಳೆ, ಆ ಜನಗಳ ಗುಂಪಿನಲ್ಲಿ, ಅದೇ ಸಂಜೆ ಆ ಊರಿಗೆ ಬಂದ ಮನೋಹರ ಕಾಣಿಸಬೇಕೇ? ಅದೂ ಅವನದೇ ಧ್ಯಾನ ಮಾಡಿಕೊಂಡಿದ್ದ ಮಂಜುಳೆಗೆ! "ನಿಲ್ಲು—ಅದು ಮನೋಹರನಿರಬೇಕು. ಅವನು ಟಿಕೇಟು ತಂದುಕೊಟ್ಟಾನು" ಎಂದು ಧಾವಿಸಿದಳು. ಅವನನ್ನು ಸಮೀಪಿಸಿ, ಕೂಗಿ, ಆ ನುಗ್ಗಿನಲ್ಲಿ ತರುಬಿಯೂ ತರುಬಿದಳು! ಆತನಿಗೆ ಅಷ್ಟೇ ಆಶ್ಚರ್ಯ—ಈ ಸಂದರ್ಶನದಿಂದ! "ಯಾರು, ಮಂಜುಳೆ! ಸರ್ಕಸಿಗೆ ಬಂದುದಲ್ಲವೇ? ಟಿಕೇಟುಕೊಳ್ಳುತ್ತೇನೆ—ಯಾವುದರಲ್ಲಾಗಬಹುದು?"

"ನಾವಾರೆಂಟು ಮಂದಿ ಇದ್ದೇವೆ—ಬಾ. ವಿನು, ಊರ್ವಶಿ ಎಲ್ಲರೂ ಬಂದಿದ್ದಾರೆ. ಈ ಜನರ ಗದ್ದಲದಲ್ಲಿ ನಮಗೆ ಟಿಕೇಟು ಕೊಳ್ಳುವುದು ಕಷ್ಟವಾಗಿ ನಿಂತಿದ್ದೇವೆ."

ಮನೋಹರ ಅಲ್ಲಿಗೆ ಧಾವಿಸಿ ಹೋದ. ಅವನೀಗ ನೆಲದ ಮೇಲೆಯೇ ಇರಲಿಲ್ಲ. ಅಲ್ಲಿನ ಜನಗಳನ್ನೆಣಿಸಿದ—ಹುಡುಗರು ಸೇರಿ ಎಂಟು ಮಂದಿ ಇದ್ದರು. ಊರ್ವಶಿ ದುಡ್ಡೆಣಿಸಿ ಕೊಡುವುದಕ್ಕೆ ಮುಂಚಿತವಾಗಿ "ಯಾವ ಕ್ಲಾಸು? ಯಾವುದು?" ಎಂದು ಕೇಳಿದ. "ಗೆಲರಿ" ಎಂಬ ಉತ್ತರ ಅವರಿಂದ ಬಂದಿತು. "ಗೆಲರಿ ಸಾಕು" ಎಂದಳು ವಿನತೆ. "ನನಗೂ ಅದೇನೆ" ಎಂದಳು ಮಾಧವಿ. ಅವಳೂ ದುಡ್ಡನ್ನೆಣಿಸ ಹೊರಟಳು. ಆದರೆ ಅವರು ದುಡ್ಡೆಣಿಸುವುದರೊಳಗಾಗಿ ಮನೋಹರ ಹೋಗಿದ್ದ.

"ಅವನು ಹಣ ಬಿಟ್ಟು ಹೋದನಲ್ಲ" ಎಂದಳು ಊರ್ವಶಿ.

"ಆ ಮೇಲೆ ತೆಗೆದುಕೊಂಡಾನು" ಎಂದಳು ಮಂಜುಳೆ.

ಅವನಿಗಾಗಿ ಕಾದು ನಿಲ್ಲುವಾಗಲೂ ಅವರಿಗೆ ದಣಿವಾಗಿತ್ತು. ನಿಂತು, ನಿಂತು ಆ ಜನರ ಅವ್ಯವಸ್ಥಿತ ಗುಂಪಿನಲ್ಲಿ ನುಗ್ಗಿ, ಪಾರಾಗುವಂತಿರಲಿಲ್ಲ. ಗೆಲರಿ, ನೆಲಗಳೆರಡರ ಟಿಕೇಟಿಗೂ ಗರಿಲ್ಲಾ ಯುದ್ಧ ಮಾಡಬೇಕಿತ್ತು. ಅದು ಅವನಿಂದಾಗದೆ ಮರಳಿ; ಹದಿನೆರಡಾಣೆ ಬೆಲೆಯ ಒಂಬತ್ತು ಬೆಂಚಿನ ಟಿಕೇಟು

ಗಳನ್ನು ತೆಗೆದುಕೊಂಡು ಬಂದ!

"ಒಂದಿಷ್ಟು ಹೊತ್ತಾಗಿದ್ದರೆ ಅದೂ ಸಿಗುವುದು ಕಷ್ಟ" ಎಂದು ನಿಟ್ಟುಸಿರು ಬಿಡುತ್ತ ಬಂದು ಅವರಿಗೆ ಟಿಕೇಟುಗಳನ್ನು ಕೊಟ್ಟಾಗ—ಈ ದಂಡಿನೊಳಗೆ ನುಗ್ಗಿ ಬಂದ ಅವನೇ ಧೀರ—ಎಂದು ಎಲ್ಲರಿಗೂ ತೋರಿತು.

"ದುಡ್ಡು, ದುಡ್ಡು?" ಎಂದಳು ಮಾಧವಿ.

"ಆ ಮೇಲೆ ಕೊಡಬಹುದು" ಎಂದ ಮನೋಹರ. "ಗೆಲರಿಯಲ್ಲ. ಬೆಂಚಿನ ಟಿಕೇಟು—ಹೋಗುವ ಬನ್ನಿ" ಎಂದು ಅವರಿಗೆ ಮುಂದಾಳಾಗಿ ನಿಂತು ಹೊರಟ. ಎಲ್ಲರೂ ಒಂದೇ ಕಡೆ ಕುಳಿತಿರಬಹುದು ಎಂದು ಆತ ಯೋಚಿಸಿದ್ದ. ಆದರೆ ಸರ್ಕಸ್ ನಿಯಮಾನುಸಾರ—ಬೆಂಚಿನ ತರಗತಿಯ ತನಕ ಮಹಿಳೆಯರಿಗೆ ಪ್ರತ್ಯೇಕವಾದ ಸ್ಥಳ ಏರ್ಪಟ್ಟಿತ್ತು. ಆದರೂ ಅವನು ಕುಳಿತ ತಾವು ಅವರಿಗಿಂತ ದೂರವಾಗಿರಲಿಲ್ಲ. ತನ್ನ ಸೇಹಿತೆಯರನ್ನು ಕಾಣಲಾರದ ದಿಕ್ಕಿನಲ್ಲಿಯೂ ಇರಲಿಲ್ಲ.

ಸಕಾಲದಲ್ಲಿ ಸರ್ಕಸ್ ಆಟ ತೊಡಗಿತು—ಜನರ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿತು. ಅದನ್ನು ನೋಡಿದ ಮಂಜುಳೆಯ ಬಾಯಿಂದ "ಸರ್ಕಸ್ ಕಂಪೆನಿ ಸೇರೋಣವೇ" ಎಂಬ ಮಾತು ಬಂದಿತು.

"ನೀನೊಂದು ಪೆಂಗಿ" ಎಂದಳು ಊರ್ವಶಿ! ಉಳಿದವರು ನಕ್ಕರು.

ನಡುವೆ ದೂರದಲ್ಲಿ ಕುಳಿತ ಮನೋಹರ, ಅವರೆಲ್ಲರ ಕೈಗೆ ನೆಲಗಡಲೆ, ಚಮುರ್ಕರಿ ಮೊದಲಾದ ತಿಂಡಿ ತಿನಸುಗಳನ್ನು ತಂದು ಮುಟ್ಟಿಸಿದ. ಅವರ ಕಣ್ಣು ಬಾಯಿಗಳೆರಡೂ ಕೆಲಸ ಮಾಡಿದುವು. ನಕಲಿ, ಕಸರತ್ತು, ಪ್ರಾಣಿಗಳನ್ನು ನೋಡುತ್ತ ಮರುಳುಗೊಂಡರು. ತಾನೇ ಸರ್ಕಸನ್ನು ಊರಿಗೆ ಕರೆಯಿಸಿದವಳಷ್ಟು ಜಂಬವನ್ನು ಊರ್ವಶಿ ಕೊಚ್ಚಿದಳು.

ಆಟ ಮುಗಿದು ಹೊರಡುವಾಗ—ಮನೋಹರ ಎಷ್ಟು ಹೊಂಚು ಹಾಕಿ ಹಿಂಬಾಲಿಸಿದರೂ—ಹೊರಗಣ ಗದ್ದಲಲ್ಲಿ, ಮುಂದಿನ ಕತ್ತಲಲ್ಲಿ, ಗೆಳತಿಯರನ್ನು ಕಾಣದೆಯೆ ತನ್ನ ಹೊಟೇಲಿಗೆ ಒಬ್ಬನೇ ಮರಳುವಂತಾಯಿತು. ಅವನದು ಒಂದೇ ಯೋಚನೆ—"ನನ್ನ ಕಾಗದ ಸಿಕ್ಕಿತೇ" ಎಂದು ಮಂಜುಳೆಯನ್ನು ಕೇಳುವುದಕ್ಕೆ ಆಗಲಿಲ್ಲವಲ್ಲ ಎಂದು

ಮರು ದಿನದ ಸುಪ್ರಭಾತವನ್ನು ನಿರೀಕ್ಷಿಸಿ, ಅಜ್ಜಯ ಹೊಟೇಲಿನ ಹೊರ ಪಡಸಾಲೆಯಲ್ಲಿ ಗೊರಕೆ ಹೊಡೆಯುತ್ತ ಮಲಗಿಕೊಂಡನು.

# ನಾಲ್ಕನೆಯ ಅಧ್ಯಾಯ

ಮೂರು ನಾಲ್ಕು ದಿನಗಳ ಕಾಲ ಮನೋಹರ ಮುದ್ದೂರಿನಲ್ಲಿ ಸುಖವಾಗಿ ಅಲೆದಾಡಿದ. ಪ್ರತಿ ದಿನವೂ, ಕಂಡ ಸರ್ಕಸಿನ ಆಟವನ್ನೇ ತಿರುತಿರುಗಿ ಕಂಡು ಸಂತೋಷಿಸಿದ. ಸರ್ಕಸಿನ ಬದಲು ಯಾವುದಾದರೊಂದು ನಾಟಕ ಕಂಪೆನಿ ಬಂದಿದ್ದರೆ ಇನ್ನೆಷ್ಟು ಸಂತೋಷವಾಗುತಿತ್ತೋ! ಅವನ ಹಳ್ಳಿಯ ಊರಲ್ಲಿ ಅಂಥ ವಿನೋದಗಳ ಸುಂದರ ಅವಕಾಶ ಕಡಿಮೆ. ಮನೆಯವರು ತೋರಿಸಿದ ಮುದ್ದಿನಿಂದಾಗಿ, ಶಾಲೆ ಓದುತ್ತಿರುವ ಮಕ್ಕಳಲ್ಲಿ ಹಿರಿಯನಾದ ಅವನಿಗೆ ಮನೆಗೆಲಸದ ತಾಪತ್ರಯವಿರಲಿಲ್ಲ. ಅವನ ಸಮವಯಸ್ಸಿನ ಹುಡುಗರು ಅವನ ಊರಲ್ಲಿ ಕೆಲವರಿರುವರಾದರೂ, ಅವನಂತಹ ಸರಸ ವಿನೋದಿಗಳಾರೂ ಇರಲಿಲ್ಲ. ಹೀಗಾಗಿ ಅವನ ಮನಸ್ಸೆಲ್ಲ ಪೇಟೆಯ ಕಡೆಗೆ ಓಡುತಿತ್ತು. ಅಲ್ಲಿ ಅವನಂತೆ ವಿರಾಮಶಾಲಿಗಳಾದ ಸಹಪಾಠಿಗಳಿದ್ದಾರೆ. ಅವರೊಡನೆ ಮಾತಿನ ಕಡಲಿನಲ್ಲಿ ತೇಲಿದರೆ ಹೊತ್ತುಹೋಗುವುದೇ ಗೊತ್ತಾಗುವುದಿಲ್ಲ. ಅವನು ವಾಸಕ್ಕಿರುವ ಹೊಟೇಲು ನಾಮ ಪೂರ್ತಿಯ ಹೊಟೇಲು. ಒಬ್ಬಳು ಬ್ರಾಹ್ಮಣ ಮುದುಕಿ, ನಾಲ್ಕಾರು ಮಂದಿ ವಿದ್ಯಾರ್ಥಿಗಳಿಗೆ ಊಟಹಾಕಿ, ಅದರಿಂದ ತನ್ನ ಜೀವನ ಸಾಗಿಸುತ್ತಿದ್ದಾಳೆ. ಈಗ ಬೇಸಿಗೆಯ ರಜೆ ಬಂದುದರಿಂದ, ಅವಳಿಗೂ ಬೇಸರವೇ. ಇದ್ದ ಹುಡುಗರು ತಂತಮ್ಮ ಮನೆಗಳಿಗೆ ಹೋಗಿದ್ದಾರೆ. ಕೋರ್ಟು ಕಚೇರಿಗಳಿಗೆ ರಜೆಯಾದುದರಿಂದ, ಅಪೂರ್ವಕ್ಕೆ ಹೊಟೇಲಿನಲ್ಲಿ ಊಟಕ್ಕೆ ಬರುವ ಆ ಹುಡುಗರ ಹಿರಿಯರೂ ಬರುವುದಿಲ್ಲ. "ನಿಮ್ಮನ್ನು ನೋಡುವುದಕ್ಕೇ ಬಂದೆ" ಎಂದು ಅವಳೊಡನೆ ಮನೋಹರ ಹೇಳಿದಾಗ, ಅವಳಿಗೂ ಸ್ವರ್ಗ ಸಿಕ್ಕಿದಂತಾಯಿತು. "ನಾಲ್ಕು ದಿನ ಇರು ಮಗು; ನನಗೂ ತುಂಬ ಬೇಸರವಾಗುತ್ತದೆ" ಎಂದಳು. ಅಜ್ಜಿಯ ಹೊಟೇಲಿನ ಪಡಸಾಲೆ ಮನೋಹರನ ಪಟ್ಟಾಂಗ ಕಚೇರಿಯಾಗುವುದಕ್ಕೆ ತುಂಬ ಅನುಕೂಲವಾಗಿತ್ತು. ಅವನ ಗೆಳೆಯರು ಬರುತ್ತಾರೆ; ಎರಡು ಮೂರು ಬಾರಿ ಮಂಜುಳೆಯೂ ಅಲ್ಲಿಗೆ ಬಂದಿದ್ದಳು. ಆಕೆಯೊಡನೆ ವಿನೋದಪೂರ್ಣವಾಗಿ ಮಾತನಾಡುವುದಕ್ಕೆ, ಸ್ವಪ್ರತಿಷ್ಠೆಯಿಂದ ಕೊಚ್ಚಿಕೊಳ್ಳುವುದಕ್ಕೆ, ಅವಳನ್ನು ಹೊಗಳುವುದಕ್ಕೆ, ತಿರುಗಿ ಅವಳಿಂದ ಹೊಗಳಿಸಿಕೊಳ್ಳುವುದಕ್ಕೆ—ಆ ಸ್ಥಳ ನಿರಾತಂಕವಾಗಿತ್ತು. ಅವರ ಮಾತುಗಳು ಸಂದು

ಗೊಂದು ಇಲ್ಲದುವು; ತುದಿಮೊದಲಿಲ್ಲದುವು. ಅವುಗಳ ವಿಷಯವೇನೇ ಇದ್ದರೂ, ಅಪ್ರತ್ಯಕ್ಷವಾದ ಧ್ವನಿ, ಪರಸ್ಪರ ಒಲುಮೆಯ ದಾರಿ ಹಿಡಿದಿತ್ತು. ಮಾತುಗಳೆಡೆಯಲ್ಲೊಮ್ಮೊಮ್ಮೆ ಮಂಜುಳೆಯ ಭುಜ ಸವರಿ "ನೀನು ನಮ್ಮ ಹಳ್ಳಿಗೆ ಬರುವ ವಿಚಾರ ಮಾತನ್ನೇ ಆಡುವುದಿಲ್ಲ. ನಮ್ಮೂರಲ್ಲಿ ಚಂದವಾದ ಹೊಳೆಯಿದೆ; ಗುಡ್ಡಗಳಿವೆ; ಕಾಡುಗಳಿವೆ. ಪೇಟೆಯ ನಿನಗೆ ಅವೆಲ್ಲ ಸ್ವರ್ಗವಾಗಿ ಕಾಣಿಸೀತು" ಎನ್ನುತ್ತಿದ್ದ.

"ಬರುವುದಕ್ಕೆ ನನಗೂ ಇಷ್ಟವಿದೆ. ಆದರೆ ನಾನು ಅಷ್ಟು ಸ್ವತಂತ್ರಳೇ? ಅಣ್ಣ ಊರಲ್ಲಿಲ್ಲ. ಅವನನ್ನು ಕೇಳದೆ ಎಲ್ಲಿಗೂ ಹೊರಡಲಾರೆ. ಅತ್ತಿಗೆಯೊಡನೆ ಮಾತನಾಡಿದರೆ ಏನೇನೋ ತಿಳಿದುಕೊಂಡಾಳು" ಎಂದಳು ಒಮ್ಮೆ. ಇನ್ನೊಮ್ಮೆ "ನಾನೊಬ್ಬಳೇ ಹೊರಡುವುದಿಲ್ಲ. ನೀನು ನಮ್ಮ ಊರ್ವಶಿಯನ್ನೂ ವಿನತೆಯನ್ನೂ ಜತೆಗೆ ಬರಹೇಳಿದರೆ, ಅವರೂ ಬಂದಾರು. ನಾವು ಮೂವರು ಕೂಡಿ ಹೊರಟರೆ, ನನ್ನ ಅತ್ತಿಗೆಯೋ ಅಣ್ಣನೋ ಆಕ್ಷೇಪ ತೆಗೆಯಲಾರರು. ಬದಲು ನಾನೊಬ್ಬಳೇ ಹೊರಡುವುದು ಸರಿಯಲ್ಲ."

"ಅವರೂ ಬರಲಿ; ಇಬ್ಬರಲ್ಲ ನಾಲ್ಕು ಮಂದಿ ಬಂದರೂ ನಮ್ಮ ಮನೆಗೆ ಹೆಚ್ಚಲ್ಲ. ನಿತ್ಯವೂ ನಮ್ಮ ಮನೆಗೆ ಬಂದು ಹೋಗುವ ಜನ ಇದ್ದೇ ಇದ್ದಾರೆ. ನನ್ನ ತಂದೆ ತಾಯಿಗಳಿಗೂ ನೀವೆಲ್ಲ ಬಂದರೆ ತುಂಬ ಸಂತೋಷವಾದೀತು."

ಹೀಗೆಂದ ಮರುದಿನ, ಮಂಜುಳೆ ತನ್ನ ಗೆಳತಿಯರೊಂದಿಗೆ ಕೂಡಿ ವಿಹಾರಕ್ಕೆ ಹೊರಟವಳು, ಹೊಟೇಲಿನಲ್ಲಿ ಮನುವಿನ ಭೇಟಿಮಾಡಲು ಬಂದಳು. ಅವನೂ ಅಲ್ಲಿದ್ದ; ಅಜ್ಜಮ್ಮನೂ ಬಂದು ಕುಳಿತರು. ತಾವಾಡಿದ ನಾಟಕದ ಪ್ರಶಂಸೆಯಾಯಿತು; ಉಭಯ ಕುಶಲೋಪರಿಗಳಾದುವು. ಮನೋಹರ ತನ್ನ ಮನೆಗೆ ಬರಲು ಅವರೆಲ್ಲರಿಗೂ ಆಮಂತ್ರಣವನ್ನಿತ್ತ. ಹೋಗುವುದಕ್ಕೆ ಎಲ್ಲರಿಗೂ ಇಷ್ಟವೇ. ಅದರಲ್ಲಿಯೂ ಊರ್ವಶಿಗೆ ಸಂಚಾರದ ಹುಚ್ಚು ಹೆಚ್ಚು. ಅವಳೆಂಪಳು: "ನಮ್ಮ ಶಾಲೆಯಲ್ಲಿ ಇಷ್ಟು ವರ್ಷಗಳನ್ನು ಕಳೆದೆವಲ್ಲ; ಒಂದು ಟ್ರಿಪ್ಪಿಲ್ಲ, ಎಕ್ಸರ್ಷನ್ ಇಲ್ಲ; ನಮ್ಮ ಮಾಸ್ತರರೆಲ್ಲ ಭೀಷ್ಮಾಚಾರ್ಯರ ಜಾತಿಯವರು. ನಾವೇ ಏಕೆ ಒಟ್ಟುಗೂಡಿ ಹೋಗಬಾರದು? ನನನ್ನೂ ಮನೆಯಲ್ಲಿ ಬಿಟ್ಟಾರು. ನಾನು ಹೊರಡಲು ತಯಾರು" ಎಂದಳು.

ವಿನತೆ ಅದಕ್ಕೆ "ನನ್ನಮ್ಮ ಬಿಡುವುದು ಹೇಗೋ! ನಾರ್ಣಪ್ಪಯ್ಯನವರಿಂದ ಹೇಳಿಸಿ ನೋಡಬೇಕು. ಅವರು ಹೇಳಿದರೆ ಕೂಡದು ಎನ್ನಲಾರಳು"

ಎಂದು ತನ್ನ ಆಸೆ ಸೂಚಿಸಿದಳು. ಮಂಜುಳೆ ಅತ್ತಿಗೆಯನ್ನು ದೂರತೊಡಗಿದಳು. ಅದಕ್ಕೆ ಊರ್ವಶಿಯ ಉಪಾಯವಿದೆ: "ನಿನಗೆ ಮಂಗಳೂರಿನಲ್ಲಿ ಯಾರೂ ನಂಟರಿಷ್ಟರಿಲ್ಲವೇ? ಅಲ್ಲಿಗೆ ಹೋಗಿ ಬರುತ್ತೇನೆ—ಎನ್ನು. ನಾವೂ ಜತೆಗಿದ್ದೇವೆ ಎಂದು ಹೇಳು. ಯಾವ ಬಸ್ಸಿನಲ್ಲಿ ಕುಳಿತುಕೊಳ್ಳುತ್ತೇವೆಂದು ಅವಳಿಗೆ ಗೊತ್ತೇ? ಕುಳಿತ; ಹೊರಟ. ಊರಿಗೆ ತಿರುಗಿ ಬಂದ ಮೇಲೆಯೇ ಗೊತ್ತು; ಅದೂ ನೀನಾಗಿ ಹೇಳಿದರೆ. ಆದರೆ ಒಂದು ದಿವಸದ ಟ್ರಿಪ್ಪಾದರೆ ನಾನು ಬರುವುದಿಲ್ಲ. ಮೂರು ದಿನಗಳ ತನಕ, ಅವರ ಊರಿನ ಹೊಳೆಯ ನೀರು ಬರಿದಾಗುವ ತನಕ ಕುಣಿದು ಬರುವವಳು" ನಾನು ಎಂದು ಸಾಕಷ್ಟು ಹುಮ್ಮಸ್ಸ ಹುಟ್ಟಿಸಿದಳು.

"ಆದರೆ ಬಸ್ಸಿನ ದಾರಿಯನ್ನು ಬಿಟ್ಟು ಮೂರು ಮೈಲು ನಡೆಯಲಿಕ್ಕಿದೆ" ಎಂದ ಮನೋಹರ.

"ಮೂರಲ್ಲ, ಆರು ಮೈಲನ್ನೂ ನಡೆದೇವು" ಎಂದಳು ಊರ್ವಶಿ.

ಊರ್ವಶಿಯ ಇಂತಹ ಉಪಾಯ, ದುಡುಕುತನಗಳೆರಡೂ ಮಂಜುಳೆಗೆ ಒಪ್ಪಿಗೆಯಾಗುತಿತ್ತು. ಆದರೆ ಅವಳ ಮಾತಿನ ರೀತಿ, ಅಭಿನಯದ ಒನಪು, ವಯ್ಯಾರ ಅಷ್ಟೊಂದು ಪ್ರಿಯವಾಗಿರಲಿಲ್ಲ. ಮನೋಹರ ಮೂವರೊಡನೆಯೂ ಒಂದೇ ಬಗೆಯ ಸಲುಗೆ, ಸ್ನೇಹವನ್ನು ತನ್ನ ಮಾತುಕತೆಗಳಲ್ಲಿ ತೋರಿಸುತ್ತಲಿದ್ದ. ಅದಕ್ಕೆ ವಿನತೆಯ ಪ್ರತಿಕ್ರಿಯೆ ಶೀತವಾದುದು; ಊರ್ವಶಿಯ ಪ್ರತಿಕ್ರಿಯೆ ಉತ್ಸಾಹಪೂರ್ಣವಾದುದು. ಅವಳಿಗೆ ಬಾಯ್ಮಾತಿಗಿಂತ ಕಣ್ಣಿನ ಚಳಕ ಮತ್ತಷ್ಟು ಹೆಚ್ಚು. ಅವಳನ್ನು ತನ್ನ ಜತೆಗೆ ಕರೆದೊಯ್ದರೆ, ಮನೋಹರನ ಕುರಿತು ತನ್ನಲ್ಲುಂಟಾದ ಆಸೆಯನ್ನು ತಾನು ಪ್ರಕಟಿಸುವುದಕ್ಕೂ ಇಲ್ಲ. ಪ್ರಕಟಿಸಿದರೂ ಊರ್ವಶಿಗೆ ತಾನು ಸೋಲಬೇಕಾಗುತ್ತದೋ—ಎಂಬ ಸಣ್ಣ ಅನುಮಾನವೂ ಅವಳಲ್ಲಿ ಇತ್ತು. ಆದರೆ ಅವನ ಜತೆಯಲ್ಲಿ, ಊರಿನಲ್ಲಿ, ನಾಲ್ಕು ದಿನ ಕಳೆಯುವ ಆಸೆ ಉತ್ಕಟವಾಗಿದ್ದುದರಿಂದ, ಉಳಿದ ವಿಚಾರಗಳನ್ನೆಣಿಸದೆ ಹೋಗುವ ನಿಶ್ಚಯ ಮಾಡಿದಳು.

ಶನಿವಾರ ಬೆಳಗಿನ ಎಂಟು ಘಂಟೆಗೆ, ಮುದ್ದೂರಿನಿಂದ ಹೊರಡುವ ಬಸ್ಸೊಂದರಲ್ಲಿ ಕುಳಿತು, ಅವರೆಲ್ಲರೂ ಸೇರಿ ಹೊರಟುಬಿಟ್ಟರು. ಆದಿತ್ಯವಾರ ಮಂಜುಳೆಯ ಅಣ್ಣ ರತ್ನಾಕರ ಊರಿಗೆ ಬರುವುದರಿಂದ ಇನ್ನೊಂದು ವಿಘ್ನ ಇದಿರಾದೀತೆಂದು ಯೋಚಿಸಿ, ಮಂಜುಳೆ ಆ ದಿನವನ್ನಾರಿಸಿದ್ದಳು. ಅದಕ್ಕೆ

ಉಳಿದವರ ಒಪ್ಪಿಗೆ ಸಿಕ್ಕಿತು. ಬಸ್ ನಿಲ್ದಾಣದಲ್ಲಿ, ಮನೋಹರ ಎಲ್ಲರಿಗೂ ಟಿಕೇಟನ್ನು ಕೊಂಡು ಕಾದಿದ್ದ. ಅವರು ಬಂದೊಡನೆಯೆ ಬಸ್ಸನ್ನೇರಿ ಕುಳಿತ.

ಮಂಜುಳೆ ಸುಮಿತ್ರೆಯೊಡನೆ "ನಾಳೆ ವಿನು, ಊರ್ವಶಿಯರು ಮಂಗಳೂರಿಗೆ ಹೋಗುತ್ತಾರೆ. ಹಾಸ್ಟೆಲಿನಲ್ಲಿ ಸೀಟಿನ ವಿಚಾರ ಮಾತನಾಡಿ ಬರುವುದಕ್ಕೆ ನಾನೂ ಹೋಗಬೇಕು" ಎಂದು ಮಾತಿನ ಪೀಠಿಕೆ ಹಾಕಿ, ಅವಳಿಂದ ವೆಚ್ಚಕ್ಕೆ ಮೂರು ರೂಪಾಯಿಗಳನ್ನು ಇಸಕೊಂಡು, ಮಂಕು ಬೂದ ಎರಚಿದ್ದಳು. ಈಗ ಬಸ್ಸನ್ನೇರಿಯಾಯಿತು; ಅದೂ ಹೊರಟಿತು. ಇಪ್ಪತ್ತು ಮೈಲುಗಳ ದೂರ ಅಂಕುಡೊಂಕಾದ ಗುಡ್ಡಗಾಡಿನ ದಾರಿಯಲ್ಲಿ, ಕೆಂದೂಳನ್ನು ಹಾರಿಸುತ್ತ, ಮುಂದುವರಿಯಿತು. ದಾರಿಯ ಇಕ್ಕಡೆಯ ಮರಗಳಿಗೆ ಕಾವಿಯ ಬಣ್ಣದ ಅಭಿಷೇಕವಾಗಿತ್ತು. ಕೊರೆಯುವ ಬಿಸಿಲು ಎಲ್ಲೆಲ್ಲೂ ಚೆಲ್ಲಿತ್ತು. ಜನ ತುಂಬಿಸಿಕೊಂಡ ಬಸ್ಸು, ಅಲ್ಲಲ್ಲಿ ನಿಂತು, ದಾರಿಯಲ್ಲಿ ನಿಂತ ಯಾರಿಗೂ ಜಾಗವಿಲ್ಲ ಎಂದು ಹೇಳದೆಯೆ, ಮುಂದುವರಿಯುವಾಗ ಎಂಟು ಹರದಾರಿಯ ಪ್ರಯಾಣಕ್ಕೆ ಮೂರು ಘಂಟೆಗಳ ಕಾಲವೇ ಹಿಡಿಯಿತು. ಇಳಿಯುವ ಸ್ಥಾನ ಬರುತ್ತಲೇ ಮನೋಹರ ಬಸ್ಸನ್ನು ನಿಲ್ಲಿಸಿದ. ತನ್ನ ಗೆಳತಿಯರೊಡನೆ ಕೆಳಕ್ಕಿಳಿದ. ಬಸ್ಸು ಮುಂದುವರಿಯಿತು. ಎಲ್ಲರಿಗೂ ನೀರಡಿಕೆಯಾಗಿತ್ತು. ಎಲ್ಲರಿಗೂ ಸಾಕಷ್ಟು ಧೂಳಿನ ಸ್ನಾನವಾಗಿತ್ತು. ನೀರು ಸಿಗುವ ಮನೆ ಹತ್ತಿರದಲ್ಲಿರಲಿಲ್ಲ. ಕಾಡಿನಲ್ಲಿ ಗಾಡಿಯ ದಾರಿಯೊಂದನ್ನು ತೋರಿಸಿ "ಇದೇ ನಮ್ಮ ಮನೆಗೆ ಹೋಗುವ ರೋಟು. ಈ ದಾರಿ ಮಾತ್ರ ತಂಪಾಗಿದೆ. ಮುಂದೊಂದು ಹಳ್ಳ ಸಿಗುತ್ತದೆ. ಒಳದಾರಿಯಲ್ಲಿ ನಮ್ಮಲ್ಲಿಗೆ ಬರಿಯ ಮೂರು ಮೈಲೆಂದು ಅಂದಾಜು. ಒಂದು ಒಂದೂವರೆ ಘಂಟೆಯಲ್ಲಿ ಹೇಗೂ ಹೋಗಬಹುದು. ನಡೆಯಬಹುದಲ್ಲ?" ಎಂದು ಉಪಚರಿಸಿದ.

"ನಡೆಯದೆ ಇಲ್ಲಿಯೇ ಕುಳಿತಿರುವುದಕ್ಕಾಗುತ್ತದೆಯೇ" ಎಂದಳು ಮಂಜುಳೆ. ನಾಲ್ವರೂ ತಂತಮ್ಮ ಕೈ ಚೀಲಗಳನ್ನು ಹಿಡಿದುಕೊಂಡು ಹರಟೆ ಹೊಡೆಯುತ್ತ ಹೊರಟರು. ಅದು ಕಾಡಿನ ದಾರಿ; ಮರಗಳಿಂದ ತುಂಬ ತಂಪಾಗಿತ್ತು. ಒಂದು ಮೈಲು ದೂರ ಸಾಗುವಾಗಲೇ ಒಂದು ಹಳ್ಳ ಅಡ್ಡಾಯಿತು; ಅಲ್ಲಿ ಮುಖ ತೊಳೆದುಕೊಂಡರು. "ಆದದ್ದಾಗಲಿ; ನಾನು ಈ ನೀರನ್ನೇ ಕುಡಿಯುವವಳು" ಎಂದು ಊರ್ವಶಿಯು ತೃಷೆಯನ್ನೂ ನೀಗಿಸಿಕೊಂಡಳು. ಉಳಿದವರು ಆ ತಂಡಿಯಾದ ನೀರನ್ನು ಕಣ್ಣು ಮುಖಗಳಿಗೆ

ಸವರಿ, ಒರಸಿಕೊಂಡರು. ಅಲ್ಲಿಂದ ಅವರ ಪಯಣ ಮುಂದುವರಿಯಿತು. ಹಾದಿ ಮೊದಲಿನಂತೆಯೇ ಕಾಡಿನಿಂದ ತುಂಬಿತ್ತು. ದೂರದ ಮರಗಳಿಂದ ಕಾಡು ಪಾರಿವಾಳಗಳ ಗುಟುರು ಕೇಳಿಸುತ್ತಿತ್ತು. ಹೆಂಟೆಗೊದ್ದಗಳ ಕರ್ಕಶ ಸಂಗೀತ ಕಿವಿಯ ಮೇಲೆ ಬೀಳುತ್ತಿತ್ತು. ಗುಡ್ಡಗಳನ್ನು ಹತ್ತಿ, ಇಳಿಯುತ್ತ, ಮುಂದುವರಿದಂತೆ ಮಾತಿನ ಮಲ್ಲಿಯರ ಬಾಯಿ ಮುಚ್ಚುತ್ತ ಬಂದಿತು. ಕಾನನದ ಭೀಕರ ಸೌಂದರ್ಯ ಬೆದರಿಕೆ ಹುಟ್ಟಿಸುತ್ತಿತ್ತು. "ಇಂಥಲ್ಲಿಯೂ ಜನಗಳಿದ್ದಾರೆಯೆ? ನಾನಾದರೆ ಜನ್ಮಕ್ಕೆ ಈ ಊರಿನಲ್ಲಿ ಮನೆಮಾಡಿಕೊಂಡಿರಲಾರೆ—'ಇದು ಹಗಲಲ್ಲಿಯೇ ಹುಲಿ ಬಂದು ತಿನ್ನುವ ಸ್ಥಳ" ಎಂದು ಊರ್ವಶಿ ಆ ಸ್ಥಳವನ್ನು ಬಣ್ಣಿಸಿದಳು.

"ಇಲ್ಲಿಯೇ? ಹುಲಿಯೂ ಇದೆ; ಚಿರತೆಯೂ ಇದೆ. ನಮ್ಮ ಊರಿನ ಹಳ್ಳಿಗಳಲ್ಲೆಲ್ಲ ಹಾಗೆಯೆ. ನಾಲ್ಕು ದಿನ ಕಾದು ಕುಳಿತರೆ ಹುಲಿ ಕಾಣುವುದಕ್ಕೂ ಸಿಗಬಹುದು. ನಿಜವಾದ ಹುಲಿಯನ್ನು ಕಾಣಬೇಕಾದರೆ ನಿಮ್ಮ ಮುದ್ದೂರಿನಲ್ಲಿ ಸಾಧ್ಯವೇ? ಅಲ್ಲಿ ಸರ್ಕಸ್ಸಿನ ಹುಲಿಯನ್ನು ನೋಡಬೇಕು, ಇಲ್ಲವಾದರೆ ನಾಗಪ್ಪನ ಹುಲಿವೇಷ ನೋಡಬೇಕು" ಎಂದ ಮನೋಹರ.

"ಈಗ ನಿಜಕ್ಕೂ ಹುಲಿ ಬರಲಿಕ್ಕಿಲ್ಲವಲ್ಲ" ಎಂದಳು ವಿನತೆ, ಹುಲಿಯನ್ನು ನೆನೆದು.

ನಡೆದು ನಡೆದು, ದಾರಿಯ ಒರಟು ಕಲ್ಲುಗಳನ್ನು, ಕಣಿಗಳನ್ನು ತುಳಿದು, ಆ ಮೂವರಿಗೂ ಸಾಕಾಗಿತ್ತು. ಹಳ್ಳಿಯ ಆ ಮೂರು ಮೈಲು ನಿಜವಾಗಿಯೂ ಆರು ಮೈಲುಗಳಷ್ಟು ಇದ್ದಿರಬಹುದು. ಮನುವಿನ ಊರಿನ ಹೊಳೆ ಸಮೀಪಿಸುವಾಗ, ಊರ್ವಶಿ "ನಾನು ಇಲ್ಲೇ ಕುಳಿತಿರುವವಳು; ನಿನ್ನ ಮೂರು ಮೈಲು ಎಂದರೆ-ಮೂರು ಹರದಾರಿ" ಎಂದು ಹೇಳುವಂತಾಯಿತು.

ಹೊಳೆಯನ್ನು ದಾಟುವಾಗ, ಆ ನೀರಿನ ಮತ್ತು ಬಂಡೆಗಳ ಸೊಬಗನ್ನು ನೋಡಿ ಅವರ ಆಯಾಸ ಮರವೆಯಾಯಿತು. 'ಎಷ್ಟು ಚೆಂದ' 'ಎಷ್ಟು ಚೆಂದ' ಎಂದು ಎಲ್ಲರೂ ಕೊಂಡಾಡಿದರು. "ಇನ್ನು ಬರಿಯ ಎರಡು ಫರ್ಲಾಂಗ್ ದೂರ; ಬಂತು ಮನೆ. ನಮ್ಮ ಊರಲ್ಲಿ ಒಂದೆರಡು ಚೆನ್ನಾದ ಜಲಪಾತಗಳೂ ಇವೆ. ಸ್ನಾನಮಾಡುವುದಕ್ಕೆ ತಣ್ಣೀರಾಗಬಹುದಾದರೆ ತೋಟದಲ್ಲೇ ನೀರಿನ ಅಬ್ಬಿಯೊಂದದೆ" ಎನ್ನುತ್ತ, ನದ ದಂಡೆಯನ್ನೇರಿ ಅಡಿಕೆ ತೋಟವೊಂದನ್ನು ಹೊಕ್ಕರು. ಅಲ್ಲಿ ಬಿಸಿಲೆಂಬುದಿಲ್ಲ. ತೀರ ತಂಪಾಗಿತ್ತು ತೋಟದ ನೆಲ;

ಸಿಂಗಾರ ಹೂವಿನ ಕಂಪು ಎಲ್ಲೆಲ್ಲೂ ಹರಡಿತ್ತು. ಜೇನಿನ ವಾಸನೆಯಂಥ ಮಧುರ ವಾಸನೆಯೂ ಬೀಸುತಿತ್ತು. ವಿಚಿತ್ರವಾದ ಶಾಂತ ಆವರಣವದು. ಅದರಿಂದ ವಿನತೆಯ ಮನಸ್ಸು ತುಂಬ ಉಲ್ಲಸಿತವಾಯಿತು. ತಮ್ಮ ನಗರಕ್ಕಿಂತಲೂ ಎಷ್ಟು ಭಿನ್ನ, ಎಷ್ಟು ಶಾಂತ, ಎಷ್ಟು ಸುಂದರ–ಎಂದು ತೋರಿತು. "ಚಂದ ಅಲ್ಲವೆ" ಎಂದು ಎರಡೇ ಮಾತುಗಳಲ್ಲಿ ತನಗಾದ ಆನಂದವನ್ನು ಅವಳು ತೋಡಿಕೊಂಡಳು. ಆ ತೋಟದ ದಾರಿ ಕಳೆಯಿತು. ಮುಂದೆ ಕಲ್ಲು ಕಟ್ಟಿದ ಕೊಳವೊಂದು ಕಾಣಿಸಿತು. ಹರಿಯುವ ನೀರಿನ ಕಾಲುವೆಯೊಂದು ಇದಿರಾಯಿತು. ಥಗಥಗಿಸುವ, ಮರೆ ಇಲ್ಲದ ಬಚ್ಚಲಿನ, ಉರಿಯೊಂದು ಬಂದಿತು. ಹತ್ತು ಹೆಜ್ಜೆ ಮೇಲಕ್ಕೇರುತ್ತಲೇ, ಎಲ್ಲೆಲ್ಲೂ ಅಡಿಕೆಗಳನ್ನು ಹರವಿದ ದೊಡ್ಡ ಅಂಗಣವೂ ಬಂದಿತು. ಇಪ್ಪತ್ತು, ಮೂವತ್ತು ಮಂದಿ ವಾಸವಾಗಿರಬಹುದಾದ ಬಹು ದೊಡ್ಡ ಮನೆಯೊಂದು ಇದಿರಿಗೆ. "ಅದು ನಿಮ್ಮ ಮನೆಯೇ? ಅಷ್ಟು ದೊಡ್ಡದು!" ಎಂದಳು ಮಂಜುಳೆ. "ಹೂಂ" ಎಂದು ಹೇಳಿ ಒಳಗೆ ಧಾವಿಸಿದ ಮನೋಹರ. ಕಿರಿಯ ಪಂಚೆಗಳನ್ನುಟ್ಟ ಮೂವರು ಹುಡುಗರೂ, ಮಧ್ಯ ವಯಸ್ಸಿನ ತೆಳ್ಳಗಿನ ಶರೀರದ ಅನಂತ ಗೋಖಲೆಯವರೂ ಹೊರಗೆ ಬಂದರು. ಬಂದವರು ಮಕ್ಕಳೊಡನೆ, ತಮ್ಮಲ್ಲಿಗೆ ಅತಿಥಿಗಳಾಗಿ ಬಂದಿರುವ ಮೂವರು ಕಿರಿಯ ಮಹಿಳೆಯರನ್ನು ಸ್ವಾಗತಿಸಿದರು. ಮಾತಿನ ಎಡೆಯಲ್ಲೇ ತಂಬುಲ ಉಗಿದು ಬಂದು, ಬಂದವರಿಗೆ ಚಾಪೆ ಹಾಸಿದರು. ಮನೋಹರನ ತಾಯಿ, ಮಗನಿಂದ ಅವರು ಅವನ ಸಹಪಾಠಿಗಳೆಂದು ತಿಳಿದು, ಹೊರಗೆ ಬಂದು ಸ್ವಾಗತಿಸಿದಳು. ಕಾಫಿಯ ಗಿಂಡಿ, ಬಾಳೆಯ ಹಣ್ಣುಗಳು ಬಂದುವು. "ಇದು ಮೊದಲಾಗಲಿ, ಆ ಮೇಲೆ ಮಿಂದು ಊಟಮಾಡುವಿರಂತೆ" ಎಂದಂದಳು. ಆಕೆಯ ಉಪಚಾರ ತೀರ ಸ್ವಾಭಾವಿಕವಾಗಿತ್ತು; ಆಡಂಬರ ರಹಿತವಾಗಿತ್ತು. "ಎಷ್ಟು ಒಳ್ಳೆಯ ಸ್ಥಳಕ್ಕೆ ಬಂದೆವಲ್ಲ; ಆರು ಮೈಲಿನ ಕಾಡುದಾರಿ ತುಳಿದದ್ದು ವ್ಯರ್ಥವಾಗಲಿಲ್ಲ" ಎಂಬ ಭಾವನೆ ಹುಡುಗಿಯರಿಗಾಯಿತು. ಮನೋಹರ ಹೊರಗೆ ಬಂದು, ಅವರೊಡನೆ ಕಾಫಿಗೆ ಸೇರಿದ. "ಅಮ್ಮಾ, ಇವರೆಲ್ಲರೂ ನನ್ನ ಕ್ಲಾಸಿನವರು. ಇವಳು ಮಂಜುಳೆ–ಇವಳು ವಿನತೆ–ಇವಳು ಊರ್ವಶಿ" ಎಂದು ಅವರವರ ಹೆಸರಿನ ಪರಿಚಯವನ್ನು ತಾಯಿಗೆ ಮಾಡಿಸಿಕೊಟ್ಟ.

ತಾಯಿ "ಊರ್ವಶಿ! ಅಂಥ ಒಂದು ಹೆಸರೂ ಇದೆಯೋ" ಎಂದಾಗ,

ಅನಂತಯ್ಯ "ಯಾಕೆ–ಪುರಾಣಗಳಲ್ಲಿ ರಂಭೆ, ಊರ್ವಶಿ ಎಂದು ಹೇಳುವುದನ್ನು ಕೇಳಿಲ್ಲವೆ? ಚಂದವಾಗಿದ್ದಾಳೆ, ಊರ್ವಶಿ ಎಂದು ಹೆಸರಿಟ್ಟರು" ಎಂದು ಹುಡುಗಿಯರ ಕಡೆಗೆ ಮುಖಮಾಡಿ "ಅವಳಿಗೆ 'ಲಚ್ಚಿಗಿಚ್ಚಿ' ಎಂದರಿಸಿದ್ದರೆ ಚೆನ್ನಾಗಿಕಾಣುತಿತ್ತೋ ಏನೋ" ಎಂದು ಪರಿಹಾಸ್ಯಮಾಡಿದರು. ಅನಂತರ "ಬಾಳೆ ಎಲೆ ತಂದದ್ದಿದೆಯೇ? ನಮ್ಮಲ್ಲೆಲ್ಲ ಬೆಳ್ತಿಗೆ ಅನ್ನ ರೂಢಿ; ನಿಮಗೆ ಆಗಬಹುದಲ್ಲ" ಎಂದು ತಮ್ಮಷ್ಟಕ್ಕೆ ವಿಚಾರಿಸಿಕೊಂಡು ಹೊರಟುಹೋದರು.

ಮನೋಹರನ ತಮ್ಮಂದಿರು ಬಂದವರನ್ನೇ ಜುಳುಜುಳನೆ ನೋಡುತ್ತಿದ್ದರು. ಮಂಜುಳೆ ತನ್ನ ಕೈಯಲ್ಲಿದ್ದ ಬಾಳೆ ಹಣ್ಣುಗಳನ್ನು ತೆಗೆದು, ಕಂಬಕ್ಕೊರಗಿ ಇಣಿಕಿ ನೋಡುತ್ತಿದ್ದ ನಾಲ್ಕೈದು ವರ್ಷದ ಕಿರಿಯ ಗಂಡುಕೂಸಿನ ಬಳಿಗೆ ಹೋಗಿ, ಅವನಿಗದನ್ನು ಕೊಟ್ಟಳು. ಅವನನ್ನೆತ್ತಿಕೊಂಡು ಅಂಗಳಕ್ಕಿಳಿದಳು. ಇಳಿದು ನಾಲ್ಕು ಹೆಜ್ಜೆ ಸುತ್ತಾಡಿ, ಬಿಸಿಲಿಗೆ ಹರವಿದ ಅಡಿಕೆಯ ಮೇಲೆ ಕಾಲಿರಿಸಿ, ಜಾರಿ, ನೆಲವನ್ನೂ ಸೇರಿದಳು. ಆಗ ಎಲ್ಲರಿಗೊಂದು ನಗುವಿನ ಹಬ್ಬವಾಯಿತು.

"ಸ್ನಾನ?" ಎಂದು ಕೇಳಿದಳು ಮನೋಹರನ ತಾಯಿ. ತೋಟದಿಂದ ಬರುವಾಗಲೇ ಮರೆಯಿಲ್ಲದ ಒಂದು ಬಚ್ಚಲಿದ್ದುದನ್ನು ಕಂಡ ಊರ್ವಶಿಯು 'ಸ್ನಾ . . . ನ' ಎಂದು ರಾಗ ಮಾಡಿ ನಿಲ್ಲಿಸಿದಳು. ಮನೆಯೊಡತಿ ಅದಕ್ಕೆ "ಬನ್ನಿ, ಬಚ್ಚಲನ್ನು ತೋರಿಸುತ್ತೇನೆ" ಎಂದು ಮೂವರನ್ನೂ ಕರೆದುಕೊಂಡು ಒಂದು ಚಾವಡಿಯ ತುದಿಯಲ್ಲಿರುವ ದೊಡ್ಡದಾದ ಬಚ್ಚಲು ಮನೆ ತೋರಿಸಿ ಬಂದಳು. ಆಗ ಊರ್ವಶಿಗೆ ಧೈರ್ಯವಾಯಿತು. ಬಚ್ಚಲ ಕೋಣೆ ವಿಶಾಲವಾಗಿತ್ತು. ಕುದಿಯುವ ನೀರಿನ ಹಂಡೆಗಳು ಮತ್ತೂ ದೊಡ್ಡವು. ತಣ್ಣೀರಿನ ಹಂಡೆಯೂ ಅಲ್ಲಿಯೇ ಬಳಿಯಲ್ಲಿತ್ತು. ಮೊದಲು ತಾನು ಸ್ನಾನಮಾಡುತ್ತೇನೆ ಎಂದು ಅವಳು ಒಳಕ್ಕೆ ನುಗ್ಗಿ ಕದವನ್ನಿಕ್ಕಿಕೊಂಡಳು. ಬಚ್ಚಲ ಮನೆಯಲ್ಲಿ ಅಡಿಕೆ ಸಿಪ್ಪೆಯ ಉರಿಯಿಂದ ಉಂಟಾದ ಹೊಗೆಯು ಸಾಕಷ್ಟು ತುಂಬಿತ್ತು. ಬಚ್ಚಲು ದೊಡ್ಡದದ್ದರೇನು? ಅದರ ಕುಣಿಯಲ್ಲಿ ಕಾಲಿಟ್ಟಾಗ, ಕಾಲು ಜಾರಿತು. ಆಗ ತನ್ನಷ್ಟಕ್ಕೆ ನಕ್ಕಳು. ಅನಂತರ ಕುದಿಯುವ ನೀರನ್ನು ತಣಿಸಿ ಮೀಯುವುದರೊಳಗಾಗಿ ಹೊಗೆಯಿಂದ ಅವಳಿಗೆ ಸಾಕುಸಾಕಾಯಿತು. ಕ್ರಮವಾಗಿ ಮೂವರೂ ಸ್ನಾನ ಮುಗಿಸಿ ಹೊರಕ್ಕೆ ಬರುವಾಗ,

ಊಟಕ್ಕೆ ಸಿದ್ಧವಾಗಿತ್ತು. ಆ ದಿನದ ಉಪಚಾರ ವಿಶೇಷವಾಗಿತ್ತು. ಮನೋಹರ ಮಾತ್ರ ತನ್ನ ತಾಯಿಯೊಡನೆ ಅವರು ಮೂವರೂ ತಮ್ಮಂತೆ ಬ್ರಾಹ್ಮಣರು ಎಂದು ಸುಳ್ಳು ಹೇಳಿದ್ದ. ಇಲ್ಲದೆ ಹೋದರೆ ತನ್ನ ತಾಯಿಗೆ ಬೇಸರವಾದೀತೆಂಬ ಅಂಜಿಕೆ ಅವನಿಗೆ.

ಆ ಮಧ್ಯಾಹ್ನದಿಂದ, ಅವರೆಲ್ಲ ಕೂಡಿ ಮಾತನಾಡಿದುದು, ತಿರುಗಾಡಿದುದು, ತಿಂದುದು-ಒಂದಕ್ಕೂ ಮಿತಿಯಿರಲಿಲ್ಲ. ಮೊದಲ ಸಂಜೆ, ಮನೋಹರ ಅವರನ್ನು ತಮ್ಮ ಊರಿನ ನದಿಯ ತಡಿಗೆ ಕರೆದೊಯ್ದ. ಮಂಜುಳೆಯ ಬಗಲನ್ನು, ಮನೋಹರನ ತೀರ ಕಿರಿಯ ತನ್ನ ಗಣೇಶ, ಬಿಟ್ಟುದೆಂಬುದೇ ಇಲ್ಲ. ಅವನ ಮುದ್ದು ಮರಾಟಿ ಮಾತಿಗೆ ಪ್ರತಿಯಾಗಿ, ಇವಳು ನಕಲಿ ಮರಾಟಿ ಮಾತನಾಡುತ್ತಿದ್ದಳು. ಹೀಗೆ ಮಂಜುಳೆ ಗಣೇಶರಲ್ಲಿ ಕೊನೆ ಮೊದಲಿಲ್ಲದ ಮಾತುಕತೆ ನಡೆಯುತ್ತಲೇ ಇತ್ತು.

ನದಿ ಬರುತ್ತಲೇ "ಮೀಯುತ್ತೀರಾ?" ಎಂದು ಕೇಳಿದ ಮನೋಹರ. ಅವರು ನೀರನ್ನು ಮುಟ್ಟಿ 'ಈ ತಂಡಿಯಲ್ಲೇ?' ಎಂದು ಕೇಳಿದರು. ಅಲ್ಲಿಂದ ನೆಲದಲ್ಲಿ ಹರವಿದ ಉರುಟು ಕಲ್ಲುಗಳನ್ನು ಹೆಕ್ಕುವುದು, ಮರಳ ದಿನ್ನೆಯಲ್ಲಿ ಉರುಳಾಡುವುದು, ಬಂಡೆಗಳ ಮೇಲೆ ಕುಪ್ಪಳಿಸುವುದು —'ಎಷ್ಟು ಚಂದ; ಎಷ್ಟು ಚಂದ' ಎಂದು ಉದ್ಗರಿಸುವುದು–ಇವೇ ಅವರ ಕೆಲಸವಾಯಿತು. ಮನೋಹರನ ತಮ್ಮಂದರೂ ಅವರ ಜತೆಗೆ ಸೇರಿದರು. ಅವರೂ ಆಡಿದರು; ಅಟ್ಟಿಕೊಂಡು ಹೋದರು; ಕಲ್ಲಿನ ಮರೆಯಲ್ಲಿ ಅಡಗಿ ಕುಳಿತರು. 'ಕೂ ಕೂ' ಎಂದು ಕೂಗಿದರು. ಶೃಂಖಲೆ ಹರಿದ ಕೋತಿಗಳಂತೆ ಹಿಗ್ಗಿ, ಊರೆಲ್ಲ ಜಿಗಿದಾಡಿದರು. ಒಬ್ಬರು ಇನ್ನೊಬ್ಬರನ್ನು ಗಮನಿಸದೆ, ಸ್ವತಂತ್ರರಾಗಿ, ಮನಸ್ಸಿನ ಎಳೆತನದ ಹುಚ್ಚಾಟಗಳಿಗೆ ಎಡೆಕೊಟ್ಟರು. ನಿತ್ಯವೂ ಕಂಡ ಹೊಳೆಯಲ್ಲಿ, ತಾನೂ ಅವರೊಂದಿಗೆ ಆಡುವುದಕ್ಕೆ ಮನೋಹರನಿಗೆ ಮಾತ್ರ ಬೇಸರ. ಆತ ಒಬ್ಬನೇ, ಒಂದು ಎತ್ತರದ ಬಂಡೆಯ ಮೇಲೆ ಹೋಗಿ ಕುಳಿತುಕೊಂಡ. ಪಡುವಣ ಬಾನಿನಲ್ಲಿ ಮುಗಿಲಿನ ತೆರೆಯೊಂದು ಬಣ್ಣಗೊಂಡು, ವಿಚಿತ್ರ ಆಕಾರ, ಚೆಲುವು ತಾಳುತ್ತಿದ್ದುದನ್ನು ಕಾಣುತ್ತ ವಿನತೆಯೂ ಪ್ರಪಂಚವನ್ನು ಮರೆತವಳಂತೆ ದೂರದ ಬಂಡೆಯೊಂದರ ಮೇಲೆ ಕುಳಿತು ಹೊತ್ತು ಕಳೆಯತೊಡಗಿದಳು. ಬಾನಿನಿಂದ ಮೆಲ್ಲಗೆ ಅವಳ ಮನಸ್ಸು ಇಳಿದು ಆತ್ಮನಿರೀಕ್ಷಣೆ ಮಾಡತೊಡಗಿತು.

ವಿಶಾಲವಾದ ಹಾಸುಗಲ್ಲೊಂದರ ಮೇಲೆ-ಜಿಬಿಲಿ ಆಟದ ಗೆರೆಗಳನ್ನು ಯಾರೋ ಬರೆದಿಟ್ಟಿದ್ದರು. ಜಿಬಿಲಿ ಊರ್ವಶಿಯ ಬಾಲ್ಯದ ಮೆಚ್ಚಿನ ಆಟ. ತೆಳ್ಳಗಿನ ಚಪ್ಪಡಿ ಕಲ್ಲೊಂದನ್ನು ಅವಳು ಹೆಕ್ಕಿಕೊಂಡು, ಎಳೆಯರೊಡನೆ ಸೇರಿ ಆ ಆಟವನ್ನಾಡತೊಡಗಿದಳು. ಅದನ್ನು ನೋಡಿ ನಗುತ್ತ, ಮೆಲ್ಲಗೆ ಮಂಜುಳೆ ಗಣೇಶನನ್ನೆತ್ತಿಕೊಂಡು ಮನೋಹರನಿರುವಲ್ಲಿಗೆ ಹೋಗಿ ಕುಳಿತಳು. ಅವನೊಡನೆ ಮನಸ್ಸಿ ಮಾತನಾಡಬೇಕೆಂಬ ಚಪಲ ಅವಳದ್ದು. ಗಣೇಶನ ತುದಿ ಮೊದಲಿಲ್ಲದ ವಾಕ್ಸರಣಿಯೊಂದೇ ಅದಕ್ಕೆ ತಡೆ. "ಎಷ್ಟು ಚಂದ ನಿಮ್ಮೂರು! ಎಷ್ಟು ಚಂದ ನಿಮ್ಮ ಮನೆಯ ತೋಟ" ಎಂದು ಮಾತಿಗೆ ತೊಡಗಿದಳು.

"ನಿಜ, ಒಂದೆರಡು ದಿನಕ್ಕೆ ಬಂದವರಿಗೆ ಹಾಗೆ ಕಾಣುವುದು."

"ಚಂದ ಇಲ್ಲವೆನ್ನುತ್ತೀರಾ?"

"ಹಾಗಲ್ಲ, ಎಷ್ಟೆಂದರೂ ಇದು ಹಳ್ಳಿಯ ಊರಲ್ಲವೆ! ತುಂಬ ಬೇಸರ ಇಲ್ಲಿ. ನಮಗೆ ಬೇಕಾದಂಥ ಜತೆಗಾರರು ಯಾರಿದ್ದಾರೆ? ಇಲ್ಲಿಗೆಷ್ಟು ಮಂದಿ ಬರುತ್ತಾರೆ?"

"ಬರುವುದಕ್ಕೆ ಬರುತ್ತಿದ್ದರು-ಆದರೆ ತುಂಬ ದೂರ. ನಡೆಯಬೇಕಲ್ಲ" ಎಂದಳು. ಮುಂದೆ ತನ್ನ ಮನಸ್ಸಿನಲ್ಲೇ ನಗುತ್ತ "ಯಾರಾದರೂ ಬಂದರೆ?" ಎಂದು ಕೇಳಿದಳು.

"ಹಾಗೆ-ಯಾರು ಯಾವಾಗಲೂ ಇಲ್ಲಿಗೆ, ಈ ಹಳ್ಳಿಯ ಕೊಂಪೆಗೆ, ಬರುವವರು?"

"ಬಂದರೆ?"

"ಯಾರು ಬರುತ್ತಾರೆಂದು ಬೇಡವೋ?"

"ನಾನು.... ..." ಎಂದಳು. ಈ ಮಾತೆನ್ನುವಾಗ ಅವಳ ತುಟಿಗಳಲ್ಲಿ ನಗು ಮೂಡಿತ್ತು. ಮಾತು ಮುಗಿಯುವಾಗ, ಕಣ್ಣಲ್ಲಿ ತನ್ನ ಮಾತಿನ ಪ್ರತಿಕ್ರಿಯೆ ಮನೋಹರನಲ್ಲೇನಾಗುತ್ತದೆ ಎಂಬ ನಿರೀಕ್ಷಣೆ ಕೂಡಿತ್ತು. ತಲೆ ತಗ್ಗಿಸಿಕೊಂಡು, ಹುಬ್ಬನ್ನೆತ್ತಿ ಅವನನ್ನೇ ನೋಡಿದಳು.

"ನಿಜವೇ?"

"ನಿಜವಾದರೆ?"

ಅಲ್ಲಿಗೆ ಆ ಮಾತು ನಿಂತಿತು. ತುಸು ಹೊತ್ತು ಇಬ್ಬರೂ ಒಬ್ಬರನ್ನೊ

ಬ್ಬರು ನೋಡುತ್ತಲಿದ್ದರು. ಆತ್ಮಸಂತೋಷದಿಂದ ಹಿಗ್ಗಿದರು. ಮುಂದಿನ ಮೌನ ಪ್ರಶ್ನೆಗೆ ತಕ್ಕ ಉತ್ತರವನ್ನು ಸಲ್ಲಿಸಿದಂತೆಯೇ ಕಂಡಿತು. ತನ್ನ ಸ್ವಪ್ನ ಸುಸಾಧ್ಯವೆಂದು ಮಂಜುಳೆಗೆ ಅನಿಸಿತು. ತನ್ನಲ್ಲಿ ಹೊಳೆದ ಬಯಕೆಯನ್ನು ಬಾಯ್ಬಿಟ್ಟು ಕೇಳಬೇಕೆಂಬ ಆಸೆ ಅವಳಿಗಿದ್ದರೂ, ತುಟಿಯನ್ನೊತ್ತಿ ಹಿಡಿದ ಸಂಕೋಚವನ್ನು, ಈ ಚದುರೆ ಎಷ್ಟು ಉಪಾಯವಾಗಿ ಪರಿಹರಿಸಿದಳೆಂಬ ಹಿಗ್ಗು ಮನೋಹರನಿಗೂ ಉಂಟಾಯಿತು. ಹಾಗೆ ಮನಸ್ಸು ಹಿಗ್ಗಿತಾದರೂ, ಸಂಪ್ರದಾಯದಿಂದ ಬೆಳೆದು ಬಂದ ತಮ್ಮ ಮನೆಯವರ ಜೀವನದ ಬಗೆಯನ್ನು ಆತ ಮರೆಯಲಾರ. ತಂದೆ ತಾಯಿಗಳಿಬ್ಬರೂ ಅವನನ್ನು ಪ್ರೀತಿಸುತ್ತಿರುವರಾದರೂ ಸಂಪ್ರದಾಯವನ್ನು ಬಿಟ್ಟು ಹೋಗುವವರಲ್ಲ ಎಂಬುದನ್ನು ಬಲ್ಲ. ಹೀಗಾಗಿ ಆತನೂ ಸುಮ್ಮನಾದ. ತುಸು ಹೊತ್ತು ಗಣೇಶನೊಡನೆ ಅವರ ಸಂಭಾಷಣೆ ಮುಂದುವರಿಯಿತು. ಅದು ಮುಗಿದು ವಿಷಯವನ್ನು ತಿರುಗಿ ಬದಲಿಸಿ "ನಮ್ಮವರೆಲ್ಲ ಹಳ್ಳಿಯಲ್ಲೇ ಹುಟ್ಟಿ, ಅಲ್ಲೇ ಬೆಳೆದವರು. ಅವರ ದೃಷ್ಟಿಯೇ ಬೇರೆ. ನನಗೆ ಅಂಥ ಸಂಕುಚಿತ ಭಾವನೆಯಿಲ್ಲ. ನಾನು ಕಲಿತಾದ ಮೇಲೆ ಸ್ವತಂತ್ರನಾಗಿ ಬೇರೆಯೇ ಜೀವನ ಮಾಡಬೇಕೆಂದು ನನ್ನ ಮನಸ್ಸು" ಎಂದು ಆತ ವಿಷಯ ಮುಂದುವರಿಸುವಾಗ, ಅವರನ್ನೇ ಹೊಂಚು ಹಾಕಿ ನಿಂತಿದ್ದ ಊರ್ವಶಿಯು, ಜಿಬಿಲಿ ಆಟವನ್ನು ನಿಲ್ಲಿಸಿ, ನೆಟ್ಟಗೆ ಅಲ್ಲಿಗೇನೇ ಬಂದಳು. ಮುಂದಿನ ಅವರ ಮಾತಿಗೆ ಆತಂಕವಾದಳು. ಊರ್ವಶಿಯ ಮನಸ್ಸಿನಲ್ಲಿ, ಮನೋಹರನು ತನ್ನ ಮೇಲಿಗಿಂತಲೂ, ತನ್ನ ಗೆಳತಿಯಲ್ಲಿ ಆಸಕ್ತನಾಗಿರಬಹುದು ಎಂಬ ಅನುಮಾನ ಮೂಡಿತ್ತು. ಅವಳು ಪರಿಹಾಸ್ಯಕ್ಕೆ "ಏನು, ಮದುಮಗಳ ಹಾಗೆ ಮಂಜುಳೆ ತಲೆತಗ್ಗಿಸಿ ಕೂತಿದ್ದಾಳೆ; ಮಾತೇ ಆಡುವುದಿಲ್ಲ" ಎಂದಳು.

"ಇಷ್ಟರ ವರೆಗೂ ಅವಳು ಮಾತನಾಡುತ್ತಿದ್ದಳು" ಎಂದ ಮನೋಹರ.

"ಹಾಗಾದರೆ ನಾನು ಬಂದುದರಿಂದ ನಿಮಗೆ ತೊಂದರೆಯಾಗಲಿಲ್ಲವೇ?" ಎಂದಳು ಊರ್ವಶಿ, ಹುಬ್ಬು ಹಾರಿಸಿ.

"ಮಾತಿಗೆ ಸುಂಕ ಉಂಟೇ?" ಎಂದ ಮನೋಹರ. ಅಷ್ಟಕ್ಕೆ ಉಳಿದ ಮಕ್ಕಳೂ ಬಂದರು. ಕತ್ತಲು ಕವಿಯತೊಡಗಿತು. "ಮನೆಗೆ ಹೋಗೋಣವೇ? ಇವತ್ತು ಬೆಳುದಿಂಗಳಿದೆ; ಅಂಗಳದಲ್ಲಿ ಕುಳಿತುಕೊಂಡು ಹರಟೆಕೊಚ್ಚುವ" ಎಂದು ಅವರನ್ನೆಲ್ಲ ಕರೆದುಕೊಂಡು ಮನೋಹರ ಮನೆಗೆ ಹೊರಟ. ಆ

ರಾತ್ರಿ ಊಟ ಮುಗಿದು, ಎಷ್ಟೋ ಹೊತ್ತಿನ ತನಕ ವೇಳೆ ಕಳೆದರು—ಹಾಡುಗಳಾದುವು, ಹರಟೆಗಳಾದುವು; ಅಭಿನಯವಾಯಿತು; ಅಣಕವಾಡಗಳಾದುವು.

ಮರುದಿನ ಬೆಳಿಗ್ಗೆ ಸಮೀಪದ ಅಬ್ಬಿಯೊಂದನ್ನು ನೋಡುವ ಕಾರ್ಯಕ್ರಮ ಏರ್ಪಟ್ಟಿತು. "ಏನು 'ಅಬ್ಬಿ, ಅಬ್ಬಿ' ಅನ್ನುತ್ತೀಯಾ?" ಎಂದು ಊರ್ವಶಿ ಆ ಶಬ್ದವನ್ನು ಕುರಿತು ಪರಿಹಾಸ್ಯ ಮಾಡಿದಳು.

ಆ ಶಬ್ದವನ್ನೇ ಮೊದಲಿಸಿ "ನೋ ಮಿಸ್ಟರ್, ಅಬ್ಬಿ is waterfall" ಎಂದ ಮನೋಹರ. ಅಲ್ಲಿಂದ ಆ ಮೂರು ದಿನಗಳ ತನಕ ಮಿಸ್ ಊರ್ವಶಿಯು ಎಲ್ಲರ ಬಾಯಲ್ಲೂ ಮಿಸ್ಟರ್ ಊರ್ವಶಿಯಾದಳು. ಅವರೆಲ್ಲ ತಮ್ಮ ಬೆಳಗಿನ ಉಪಾಹಾರ ಮುಗಿಸಿದರು. ಅನಂತರ ನದಿಯ ದಂಡೆಗೆ ಹೋಗಿ ಅದರ ಉಗಮದ ಕಡೆಗೆ ಸಾಗತೊಡಗಿದರು. ಅದು ತುಸು ಕಷ್ಟದ ಕೆಲಸವಾಗಿತ್ತು. ಹಲವಾರು ದೊಡ್ಡ ಬಂಡೆಗಳನ್ನು ಹತ್ತಿ ಇಳಿಯಬೇಕಿತ್ತು. ನೀರನ್ನು, ಕೆಸರನ್ನು ತುಳಿಯಬೇಕು. ಗಿಡಮರಗಳ ಸಂದಿನಲ್ಲಿ ಜಾಗ್ರತೆಯಲ್ಲಿ ಮುಂದುವರಿಯಬೇಕು. ಒಂದು ಮೈಲಿನ ಪಯಣವಿತ್ತು. ಪಯಣ ಮುಗಿಯುವಾಗ ಊರ್ವಶಿ "ಮಿಸ್ ಮನೋಹರಿ, ದಿಸ್ ಅಬ್ಬಿ ಈಸ್ ಜೀವ ಟೇಕಿಂಗ್. ಟೈಗರ್ ಕಮ್ ಎಂಡ್ ಈಟ್ ಅಸ್--ನೋ ಬಡಿ ಲಿಸನ್" ಎಂದಳು. ಎಲ್ಲರೂ ಗೊಳ್ಳೆಂದು ನಕ್ಕರು. ಅಷ್ಟರಿಂದ ಊರ್ವಶಿಯ ಸೇಡು ತೀರಿತು. ಮನೋಹರನನ್ನು 'ಮಿಸ್' ಆಗಿ ಮಾಡಿದಳು ಅವಳು;. ಕೊನೆಯ ತನಕ ಅವಳೊಬ್ಬಳು ಹಾಗೆಯೇ ಅವನನ್ನು ಕರೆಯತೊಡಗಿದಳು.

ಅವಳು 'ಹುಲಿ' ಎಂದುದಕ್ಕೂ, ಯಾವುದೋ ಪ್ರಾಣಿಯ ಕೂಗು ಆಗ ಕೇಳಿಸತೊಡಗಿದ್ದಕ್ಕೂ ಸಮನಾಯಿತು. "ನಿಜಕ್ಕೂ ಹುಲಿಯೇ?" ಎಂದು ಕೇಳಿದಳು ವಿನತೆ. "ಅದು ನಮ್ಮ ಊರಿನ ಅಬ್ಬಿ ಯಾನೆ ವಾಟರ್ ಫೋಲ್" ಎಂದ ಮನೋಹರ.

ಹತ್ತು ಹೆಜ್ಜೆ ಸರಿದು ಅವರು ಮುಂದೆ ಹೋಗುವುದರೊಳಗೆ ಅದೇ ನದಿಯ ಸುಂದರ ಜಲಪಾತವೊಂದು ಕಣ್ಣಿದಿರಾಯಿತು. ಅಷ್ಟೊಂದು ಆಳವಾದ ಜಲಪಾತವಲ್ಲ. ವೇಗವಾಗಿ ಬರುತ್ತಿದ್ದ ತೊರೆಯ ನೀರು ನಾಲ್ವತ್ತು ಐವತ್ತು ಅಡಿ ದೂರದಲ್ಲಿ, ಹತ್ತಿಪ್ಪತ್ತು ಅಡಿಗಳ ಆಳಕ್ಕೆ, ಆರ್ಭಟೆಯಿಂದ ಧುಮುಕುತ್ತಿತ್ತು. ಅದನ್ನು ನೋಡಿ ಎಲ್ಲರ ಮನಸ್ಸು ಮುಗ್ಧವಾಯಿತು.

ಕಂದು, ಕಿತ್ತಳೆ, ಬೂದು ಬಣ್ಣದ, ನೀರಲ್ಲಿ ಅರ್ಧ ಮಿಂದು ನಿಂತ ಬಂಡೆಗಳು ಆಚೀಚೆ; ಮಲ್ಲಿಗೆಯ ಹೂವುಗಳನ್ನು ಬುಟ್ಟಿಬುಟ್ಟಿಗಳಲ್ಲಿ ತುಂಬಿಸಿ ಹಾರಿಸುವಂಥ ನೀರಿನ ಚೆಲ್ಲಾಟ ಎದುರಿಗೆ. ಊರ್ವಶಿ ಮರುಳೆಯಂತೆ ಎದುರಿನ ಬಂಡೆಯೊಂದನ್ನು ಹಾಗೂ ಹೀಗೂ ಹತ್ತಿ, ಏರಿ, ನಿಂತು, ಮೈಮರೆತು 'ಕೂ' ಎಂದು ಕಿರಿಚಿದಳು. ಆಚೀಚಿನ ಬೆಟ್ಟಗಳು ಅವಳ ಕೂಗನ್ನು ಮುಸುವುಗಳ ಕೂಗಿನಂತೆ ಪ್ರತಿಧ್ವನಿಸಿದವು. ಅನಂತರ "ಬನ್ನಿರೋ" ಎಂದು ರಾಗ ಮಾಡಿ ತನ್ನ ಗೆಳತಿಯರನ್ನು ಕರೆದಳು. ಅಲ್ಲಿಗೆ ಮಂಜುಳೆ ಧಾವಿಸಿದಳು. ಊರ್ವಶಿ ಏರಿದ ಬಂಡೆಯನ್ನು ಏರಿ ಹೋಗಲು ಅವಳಿಗೆ ಚುರುಕು ಸಾಲದಾಯಿತು. ಊವರ್ಶಿ ಕೈಕೊಟ್ಟಳು. ಮನೋಹರ ಅವಳನ್ನು ತಳ್ಳಿ ಮೇಲಕ್ಕೆ ಕಳುಹಿಸಬೇಕಾಯಿತು. ವಿನತೆ ಅದನ್ನು ಹತ್ತುವ ಪ್ರಯತ್ನಮಾಡಿ, ಆಗದೆಯೆ ಹಿಂದೆ ಬಂದಳು. ಮನೋಹರನ ಸಹಾಯವನ್ನು "ಬೇಡ, ನಾನು ಹೋಗುವುದಿಲ್ಲ" ಎಂದು ನಿರಾಕರಿಸಿದಳು. ಆತನೊಬ್ಬನೇ ಮೇಲಕ್ಕೇರಿ ಹೋದ. ಅಲ್ಲಿನ ನೋಟ ಇನ್ನಷ್ಟು ಚೆನ್ನಾಗಿತ್ತು. ಮೇಲಿಂದ ನೀರು ದುಮುಕುತ್ತಿದೆ. ಅದು ಹರಿದು ಬರುವ ನೀರಿನ ಹಾಳೆ ಕೊಳದಷ್ಟು ಶಾಂತವಾಗಿತ್ತು. ಮನೋಹರ ಅಲ್ಲಿಂದ ಇಳಿದ. ಆಚೀಚೆ ಹುಡುಕಿ, ಗಂಟು ಬಿದಿರಿನ ತುಂಡೊಂದನ್ನು ತಂದು, ಏಣಿಯಾಗಿ ನಿಲ್ಲಿಸಿದ. ಆ ಮೇಲೆ ವಿನತೆ ಆ ಬಿದಿರಿನ ಸಹಾಯದಿಂದ ಮೇಲಕ್ಕೇರಿದಳು. ವಿನತೆಯ ಮನಸ್ಸಿಗೆ ಆ ನದಿಯ ನೋಟ ವಿಚಿತ್ರ ಪರಿಣಾಮವನ್ನುಂಟುಮಾಡಿತು. ಹತ್ತು ಹೆಜ್ಜೆಗಳ ಆಚೆಗೆ ಅದೆಷ್ಟು ಶಾಂತಮುಖಿಯಾಗಿದೆ. ಆ ನದಿ, ಅದರ ನೀರಿನ ಹರಹು, ಆ ದಂಡೆಯಲ್ಲಿರುವ ಮರಬಿದಿರುಗಳನ್ನು ಎಷ್ಟು ಸುಂದರವಾಗಿ ಪ್ರತಿಬಿಂಬಿಸುತ್ತಿದೆ. ಅಲ್ಲಿಂದ ನಾಲ್ಕೇ ಹೆಜ್ಜೆ ಮುಂದುವರಿದರೆ ಅದೇ ನದಿಯ ರೂಪವೇ ಬೇರೆ! ರೌದ್ರವೇ ಬೇರೆ. ಅಲ್ಲಿನ ಪ್ರಪಾತದ ಸೊಗಸು ರೌದ್ರಸೌಂದರ್ಯವಾಗಿತ್ತು. ರೂಪಕ್ಕೆ ಸಮನಾದ ಆರ್ಭಟೆಯಿಂದಲೂ ಕೂಡಿಕೊಂಡಿತ್ತು. ಅವನ್ನೆಲ್ಲ ನೋಡಿ ಎಲ್ಲರೂ ಮೇಲಿಂದ ಕೆಳಗಿಳಿದು ಬಂದರು. ತುಸು ದೂರ ಹಿಂದಕ್ಕೆ ಸರಿದರು; ಆ ಪ್ರಪಾತದ ಚೆಲುವನ್ನು ನೋಡುತ್ತ ಕುಳಿತರು. ನೋಡನೋಡುತ್ತ ಊರ್ವಶಿಗೊಂದು ಹೊಸ ಯೋಚನೆ ಹೊಳೆಯಿತು: "ಮನು, ಅಲ್ಲ ಮಿಸಾ ಮನು, ನಾಳೆ ಇಲ್ಲಿ ಬಂದು ಒಂದು ಅಡುಗೆಮಾಡಿ ವನಭೋಜನ ಮಾಡೋಣವೇ? ಇವತ್ತು ನಿನ್ನ ತಮ್ಮಂದಿರನ್ನು ಬಿಟ್ಟು ಬಂದಿದ್ದೇವೆ. ನಾಳೆ ಅವ

ರನ್ನೂ ಜತೆಗೆ ಕರೆದುಕೊಂಡು ಬರುವ" ಎಂದು ಸೂಚಿಸಿದಳು. ಮಂಜು ಳೆಯ ಮನಸ್ಸಿನಲ್ಲಿ ಅದೇ ಆಸೆ ಸ್ಫುರಿಸಿತ್ತು. "ನಿನ್ನ ಮನೆಯವರು ಬಯ್ಯ ಲಿಕ್ಕಿಲ್ಲವಲ್ಲ" ಎಂದಳು ಅವಳು.

"ಬಯ್ಯಲಾರರು; ಆದರೆ 'ನಿಮಗೆ ಹುಚ್ಚು!' ಎಂದಾರು."

"ನಮಗೆ ಹುಚ್ಚೆಂದು ಅವರು ಹೇಳಬೇಕೇ?" ಎಂದಳು ಊರ್ವಶಿ. ಎಲ್ಲರೂ ನಕ್ಕರು. ವನ ಭೋಜನದ ಯೋಚನೆಯೇ ಮುಂದುವರಿಯಿತು. ಅಡುಗೆ ಮಾಡುವವರು ಯಾರು? ಕಟ್ಟಿಗೆ ತರುವವರು ಯಾರು? ಏನೇನು ಮಾಡಬೇಕು?—ಎಂದು ದೀರ್ಘ ಆಲೋಚನೆ ನಡೆಸಿದರು. ಮಾತು ಮುಗಿ ಯಿತು. ಬಿಸಿಲೇರುತಿದ್ದುದನ್ನು ಕಂಡ ಅವರು "ಇಲ್ಲಿಗೊಂದು ಸಮನಾದ ರಸ್ತೆ ಇಲ್ಲದೆ ಹೋಯಿತೇ" ಎಂದು ವಿಷಾದಿಸುತ್ತ ಮರಳಿದರು. "ಇವತ್ತಿನ ಸ್ನಾನ ಹೊಳೆಯಲ್ಲಿ" ಎಂದು ಸಂಕಲ್ಪಿಸಿದರು. ಆಗಬಹುದೆಂದು ಎಲ್ಲರಿಗೂ ಅನಿಸಿತು. "ಬಟ್ಟೆ ತರಲಿಲ್ಲವಲ್ಲ" ಎಂದು ಸೊರಗಿದಳು ಮಂಜುಳೆ. 'ನೀವಿಲ್ಲಿ ನಿಲ್ಲಿ' ಎಂದು ಹೇಳಿ ಮನೋಹರ ತನ್ನ ಮನೆಗೆ ನಾಗಲೋಟವನ್ನು ಹೂಡಿದ. ಅಲ್ಲಿಂದ ಅವರ ಚೀಲಗಳನ್ನೂ, ಸಾಬೂನನ್ನೂ ತಂದು ಒಪ್ಪಿಸಿದ. "ಇಲ್ಲಿ ಲ್ಲಿಯೂ ಹೆಚ್ಚಿಗೆ ನೀರಿಲ್ಲ; ನೀರಿನ ಸೆಳೆತವೂ ಇಲ್ಲ. ಬೇಕಷ್ಟು ಸ್ನಾನ ಮಾಡಿ"ಎಂದು ಹೇಳಿ, ತಾನೊಂದು ತುಂಡು ಸಾಬೂನನ್ನು ಹಿಡಿದುಕೊಂಡು ತುಸು ಕೆಳಕ್ಕೆ ಹೋಗಿ, ಸ್ನಾನ ಮಾಡತೊಡಗಿದ.

ಆ ಮೂವರು ಗೆಳತಿಯರು-ಶೀತವಾದ ನೀರನ್ನು ಮುಟ್ಟಿ, 'ಬೇಕೋ ಬೇಡವೋ' ಎಂದು ಯೋಚಿಸಿದರು. ಊರ್ವಶಿ, ನಿಂತು ಯೋಚಿಸಿದರೆ ಚಳಿ ಹೆಚ್ಚುತ್ತದೆಂದು ತೋರಿ ಒಡನೆ ನೀರಿಗೆ ದುಮುಕಿದಳು. ಬೊಗಸೆಯಿಂದ ನೀರೆತ್ತಿ ತನ್ನ ಗೆಳತಿಯರ ಕಡೆಗೆ ಎಸೆದಳು. ಅಲ್ಲಿಂದ ಮೂವರೂ ಜಲಕನ್ಯೆಯ ರಾದರು. ನೀರಲ್ಲಿ ಮುಳುಗಿದರು; ಈಜಿದರು; ಆಚೀಚೆ ನೀರನ್ನು ಚೆಲ್ಲಿದರು. ಅವರ ಹುಚ್ಚುತನ ನೋಡುವುದಕ್ಕೆ ಆ ಸಮೀಪದಲ್ಲಿ ಕೋತಿಗಳೂ ಇದ್ದಿರ ಲಿಲ್ಲ. ಬಹು ಹೊತ್ತು ಹಾಗೆಯೇ ಕಳೆಯಿತು. ಮನೋಹರನ ಸ್ನಾನ ಮುಗಿ ಯಿತು. ಆತ ಮೇಲಕ್ಕೆದ್ದು ಬಂದ. ತುಸು ದೂರದಲ್ಲಿಯೇ ಕ್ರೀಡಾಮಗ್ನ ರಾದ ಗೆಳತಿಯರು ಕಾಣಿಸಿದರು. ಹಿಂದೆಯೂ ಹೋಗದೆ, ಮುಂದೆಯೂ ಬಾರದೆ ಅಲ್ಲಿಂದಲೇ "ಹೊತ್ತಾಯಿತು!" ಎಂದು ಕೂಗಿ ಹೇಳಿದ. ಅವರಿಗೆ ಜ್ಞಾನೋದಯವಾಯಿತು. ಅವರು ಎದ್ದು ಮೇಲಕ್ಕೆ ಬಂದರು. ಮನೋಹರನ

ಎದುರಿಗೇನೇ ಆ ಬಯಲಂಗಣದಲ್ಲಿ, ಮೈಯನ್ನು ಉಜ್ಜಿಕೊಂಡು ಬಟ್ಟೆ ಬದಲಿಸುವುದಕ್ಕೆ ಸಂಕೋಚವಾಯಿತು. ನಿಂತು ಧ್ಯಾನಿಸಿದರು. ಮೈ ನಡುಗ ತೊಡಗಿತು. ಆತ ಅದನ್ನರಿತವರಂತೆ ಇನ್ನೊಂದು ದಿಕ್ಕಿಗೆ ಮುಖ ತಿರುಗಿಸಿ ಕೊಂಡು ಮರಳಿನ ದಿನ್ನೆಯಲ್ಲಿ ಕುಳಿತ. ಅವರ ಮನಸ್ಸೂ ಚಂಚಲಗೊಳ್ಳ ದಿರಲಿಲ್ಲ. ಅವರು ಬಟ್ಟೆಬದಲಿಸಿ ಅಲ್ಲಿಂದ ಹೊರಟರು. ನಾಲ್ವರೂ ಮನೆಯ ಕಡೆಗೆ ಸಾಗಿದರು.

ಆ ಸಂಜೆ ಮನೋಹರ ಅವರಿಗೆ ತನ್ನ ಊರಿನ ಗುಡ್ಡಗಾಡುಗಳನ್ನು ತೋರಿಸುತ್ತ ತನ್ನ ಹಳ್ಳಿಯ ಇನ್ನೊಂದು ಮುಖವನ್ನು ತೋರಿಸಿದ. ಹುಲಿ, ಚಿರತೆಗಳ ಹಾವಳಿಗಳ ಕತೆಗಳನ್ನು ಹೇಳಿದ. ಆರೆಂಟು ವರ್ಷಗಳಿಗೊಮ್ಮೆ 'ಆನೆಗಳ ಹಿಂಡೂ ಬರುವುದುಂಟು' ಎಂದು ಅದ್ಭುತ ಮಾಡಿ ತೋರಿಸಿದ. ಸಂಜೆಯ ಹೊತ್ತಿಗೆ ಅವರನ್ನು ಕೂಡಿಕೊಂಡು ತಿರುಗಿ ಮನೆಗೆ ಮರಳಿದ. ಬರುವ ದಾರಿಯಲ್ಲಿ ಮರವೊಂದರ ಮೇಲೆ ಬದನಿಕೆಯೊಂದು ಹೂಬಿಟ್ಟಿತ್ತು. ಅದನ್ನು ಕಂಡು 'ಎಷ್ಟು ಚಂದ' ಎಂದಳು ಮಂಜುಳೆ. ಅದನ್ನೇ ಕಾದು ಕುಳಿತವನಂತೆ, ಮನೋಹರ ಆ ಮರವನ್ನೇರಿದ. ಆ ಬದನಿಕೆಯ ಹೂವಿನ ಜೊಲ್ಲೆಯೊಂದನ್ನು ತಂದು, ಅವಳ ಕೈಗೆ ಒಪ್ಪಿಸಿದ. "ನನಗಿಲ್ಲವೇ? ಹೂವು" ಎಂದಳು ಊರ್ವಶಿ. ಮಂಜುಳೆ ಆ ಹೂವನ್ನು ಮೂಸಿದಳು. ಪರಿಮಳ ವಿದ್ದಿರಲಿಲ್ಲ. ಅನಂತರ ಜೊಂಕೆಯನ್ನು ಮೂರು ಪಾಲು ಮಾಡಿ, ಗೆಳತಿ ಯರಿಬ್ಬರಿಗೂ ಕೊಟ್ಟು, ಅವರಂತೆ ತಾನೂ ಮುಡಿದುಕೊಂಡಳು. ಅವರೆಲ್ಲ ಮನೆಯನ್ನು ಸೇರುವಾಗ ಕತ್ತಲಾಗಿತ್ತು. ಎಲ್ಲೆಲ್ಲೂ ಬೆಳುದಿಂಗಳು ನಲಿ ದಾಡುತಿತ್ತು.

ವಿನತೆಗೆ ಪಿಟೀಲುವಾದನ ಬರುತ್ತದೆ ಎಂದು ಅರಿತುಕೊಂಡಿದ್ದ ಮನೋಹರ, ಅವರನ್ನು ಮನೆಗೆ ಮುಟ್ಟಿಸಿದ ಬಳಿಕ, ತಮ್ಮ ಪಾಳೆಯವ ನ್ನೆಲ್ಲ ಸುತ್ತಿಕೊಂಡು ಬಂದು, ಹಳೆಯ ಪಿಟೀಲೊಂದನ್ನು ಸಂಗ್ರಹಿಸಿ ತಂದ. ಹಾರ್ಮೋನಿಯಮ್ ಅವನ ಮನೆಯಲ್ಲೇ ಇದ್ದಿತ್ತು. ಅದರಿಂದ ಸಾಕಷ್ಟು ಗದ್ದಲವನ್ನು ಅವನೂ ಹೊರಡಿಸಬಲ್ಲ. ಆದರೆ ವಿನತೆಯ ಸಂಗೀತ ಕೇಳುವ ಚಪಲ ಅವನಿಗೆ. "ಊಹೂಂ, ನನಗೇನೂ ಬರುವುದಲ್ಲ" ಅನ್ನುತ್ತಿದ್ದಳು ವಿನತೆ. ಮನೋಹರನ ತಾಯಿಗೆ ವಿನತೆಯ ಸೌಮ್ಯವಾದ ನಡೆ, ನುಡಿ, ಹಾವ ಭಾವ–ತುಂಬ ಮೆಚ್ಚುಗೆಯಾಗಿತ್ತು. ಅವಳು ಹಾಡಬಲ್ಲಳು ಎಂದು ಕೇಳಿದ

ಮೇಲೆ ಮತ್ತಷ್ಟು ಅಭಿಮಾನ ಉಂಟಾಯಿತು. ಅವಳೂ ಒತ್ತಾಯಮಾಡುದರಿಂದ, ವಿನತೆ ಆ ರಾತ್ರಿ ಪಿಟಿಲು ನುಡಿಸಿದಳು. ನಾಲ್ಕು ಹಾಡುಗಳನ್ನೂ ಹಾಡಿದಳು. ಉಳಿದವರ ಸರದಿಯೂ ಬಂದಿತು. "ನೀನು ಹಾಡಬೇಕು" ಎಂದು ಊರ್ವಶಿ, ಮಂಜುಳೆಯರ ಒತ್ತಾಯ ಮನೋಹರನಿಗೆ. ಆದಕ್ಕಾತ "ನಾಳೆ ನಮ್ಮ ಗಂಡುಸರ ಸಭೆಯೊಂದನ್ನು ಮಾಡುತ್ತೇವೆ. ನಮ್ಮೂರು ಕಡಿಮೆಯೆಂದು ತಿಳಿದೆಯೋ? ಇಲ್ಲಿ ಚೆನ್ನಾಗಿ ತಬಲೆ ಬಾರಿಸುವವರಿದ್ದಾರೆ. ಮರಿ ಗವಯಿಗಳಿದ್ದಾರೆ. ಹಿಂದುಸ್ಥಾನಿ ಸಂಗೀತ ಸಾಕಷ್ಟು ರೂಢಿ ಇದೆ. ಆದರೆ ಅವರನ್ನೆಲ್ಲ ಜಮಾಯಿಸುವುದು ಕಷ್ಟ" ಎಂದ. ಅನಂತ ಗೋಖಲೆಯವರ ಬೆಂಬಲ ಅದಕ್ಕಿತ್ತು. "ಹೌದು, ಮನು, ಸಂಗೀತ ಕೇಳದೆ ಬಹಳ ದಿನಗಳಾದವು. ವಿನಾಯಕ ಫಡಕೆಗೂ, ನಾರಾಯಣ ಗೋರೆಗೂ ಹೇಳಿ ಕಳುಹಿಸಿದರೆ ಬಂದಾರು" ಎಂದರು. ಹುಡುಗಿಯರ ಮುಂದೆ ಗೋರೆಯವರ ವಿದ್ವತ್ತನ್ನು ಬಣ್ಣಿಸಿದರು. "ಅವರು ಸಾಮಾನ್ಯ ಚಿಲ್ಲರೆಯವರಲ್ಲ. ಪುನೆಯ ಕಡೆ ಎಂಟು ವರ್ಷವಿದ್ದುವರ್ಝು ಬುವಾರಿಂದ ಶಾಸ್ತ್ರೋಕ್ತ ಸಂಗೀತ ಕಲಿತಿದ್ದಾರೆ; ತೋಟವಿದೆ, ಮನೆಯಿದೆ. ಜೀವನಕ್ಕಾಗಿ ಏನೂ ಯೋಚನೆ ಇಲ್ಲ. ಖುಶಿ ಕಂಡಾಗ ಇಷ್ಟು ಹಾಡುತ್ತಾರೆ. ನಾಟಕದಲ್ಲಿಯೂ ಪಾರ್ಟು ಮಾಡುತ್ತಾರೆ. ನಮ್ಮ ಮನೋಹರನಿಗೆ ಅವರಿಂದಾಗಿ ನಾಟಕ, ಸಂಗೀತಗಳ ಖ್ಯಾಲು ಹಿಡಿದದ್ದು" ಎಂದು ಅವರನ್ನು ಕುರಿತು ಹೊಗಳಿ ಮಾತಾಡಿದರು.

ಮನೋಹರ ಗೆಳತಿಯರಿಗೆ, ರಾಮಯ್ಯ ಮಾಸ್ತರರು ಶಾಲೆ ಮುಗಿದ ಮೇಲೆ ತಮ್ಮ ಮನೆಗೆ ನಾಲ್ಕು ದಿನ ಬಂದು, ಇದ್ದು ಹೋದ ಸಮಾಚಾರವನ್ನು ಹೇಳಿದ. ಆಗ ಮಂಜುಳೆ "ಅವರಿಲ್ಲಿ ಹಾಡಲಿಲ್ಲವೆ? ಅವರಿಗೆ ಸಂಗೀತ, ತಬಲೆ ಎಲ್ಲ ಬರುತ್ತದೆ" ಎಂದಳು.

ಹಿರಿಯ ಗೋಖಲೆಯವರು "ಎಲ್ಲಾ ಬರುತ್ತದೆ. ಆದರೆ ಯಾವುದೂ ಇಲ್ಲ. ಅದೇನು ಶಾಸ್ತ್ರೋಕ್ತ ಸಂಗೀತವೇ? ಅಲ್ಲ, ಇಲ್ಲಿ ನಾಟಕದ ಹಾಡುಗಳನ್ನಿಷ್ಟು ಕೇಳಿ ಕಲಿತಿದ್ದಾರೆ. ತಬಲೆ ಬಾರಿಸುವಾಗಲೂ ಗದ್ದಲ ಹೆಚ್ಚು. ನಮ್ಮ ಮನೋಹರನಿಗೆ ಮಾತ್ರ ಅವರ ಸಂಗೀತವೆಂದರೆ ಬಾರೀ ಖುಶಿ. ನನಗೆ ಅವರದು ಏನೇನೂ ಸಾಲದೆಂದು ಕಂಡಿತು. ಚೆನ್ನಾಗಿ ಹಾಡುವವರು ಬರಿಯ ಠೇಕಾ ಹಿಡಿದು ಕುಳಿತರೆ ಒಂದು ಚಂದ. ಇವರದ್ದು ಕಂಪೆನಿ ನಾಟಕಕ್ಕಾಗಬಹುದು" ಎಂದಾಗ ಮಂಜುಳೆ, ಊರ್ವಶಿಯರಿಬ್ಬರೂ ಆ

ಸರಳವಾದ, ತೀಕ್ಷ್ಣವಾದ ವಿಮರ್ಶೆಯನ್ನು ಕೇಳಿ ಅವಾಕ್ಕಾದರು. ವಿನತೆ ಮಾತನಾಡಲಿಲ್ಲ.

ಆ ದಿನ ಹಾಗೆಯೇ ಕಳೆಯಿತು. ಮರುದಿನ ಉದಯಿಸಿತು. ಬಂದಿದ್ದ ಮೂವರಿಗೂ ತಮ್ಮ ಮನೆಯ ಯೋಚನೆ, ಹಿರಿಯರ ಯೋಚನೆ, ಭಯ–ಇಷ್ಟಾದರೂ ಉಂಟಾಗಬೇಕೇ? ಬೆಳಗ್ಗೆಯೇ ಮನೋಹರ ವನಭೋಜನದ ಹಂಚಿಕೆ ಹೊರಡಿಸಿದ. ಮನೋಹರನ ತಾಯಿ "ಕಾಡಿನಲ್ಲೇ ಉಣ್ಣಬೇಕು ಎಂಬ ಆಸೆ ಇದ್ದರೆ, ನಾನು ಅಡಿಗೆ ಮಾಡಿ ಪಾತ್ರೆಯಲ್ಲಿ ತುಂಬಿಸಿಕೊಡುತ್ತೇನೆ; ಹೊತ್ತುಕೊಂಡು ಹೋಗಿ ಊಟಮಾಡಿ; ಆಗದೇ? ಮನೆಗೆ ಬಂದ ನೀವೇ ಕೈ ಮೈ ಮಸಿಮಾಡಿಕೊಳ್ಳುವುದಲ್ಲ. ಅಲ್ಲದೆ ನೀವು ಪೇಟೆಯ ಹುಡುಗಿಯರು. ಶಾಲೆಗೆ ಹೋಗುತ್ತಿರುವ ನೀವು– ಎಷ್ಟು ಅಡುಗೆ ಮಾಡಬಲ್ಲಿರಿ, ಏನು-ಎಂಬುದು ನನಗೂ ಗೊತ್ತು. ನಮ್ಮ ಮನೋಹರನಿಗೆ ಅಡಿಕೆ ತೋಟದ ಕೆಲಸ ಗೊತ್ತಿದ್ದಷ್ಟೆ ನಿಮಗೆ ಅಡಿಗೆಯ ಕೆಲಸ ಗೊತ್ತಿರುವುದು" ಎಂದು ಪರಿಹಾಸ್ಯಮಾಡಿ ಹೇಳಿದಳು. ಕೊನೆಗೂ ಹುಡುಗಿಯರ ಹಟವೇ ಗೆದ್ದಿತು. ಅವರೇ ಯೋಚಿಸಿ, ಏನೇನು ಸಾಮಾನುಗಳು ಬೇಕಾಗುತ್ತವೆ–ಎಂದು ಹೇಳಿದರು; ಆಕೆ ಅದನ್ನೆಲ್ಲ ತಂದಿರಿಸಿದಳು. ಪಾತ್ರೆ, ಎಲೆ, ಕತ್ತಿ, ಕಡ್ಡಿಪೆಟ್ಟಿಗೆ— ಇಂಥವನ್ನು ನೆನಪುಮಾಡಿ ಬುಟ್ಟಿಯಲ್ಲಿ ತುಂಬಿಸಿ, ಆಳಿನ ಮೂಲಕ ಹೊರೆಮಾಡಿ ಹೊರಿಸಿದರು. ಎಲ್ಲ ಹುಡುಗರೂ ಎದ್ದಾಗ–ತೀರ ಕಿರಿಯ ಗಣೇಶ ಬೇಡವೆಂದರೆ ಕೇಳುತ್ತಾನೆಯೇ? ಅವನೂ ಉಳಿದವರ ಜತೆಗೆ ಹೊರಟ. ಮಂಜುಳೆಯನ್ನು ಕಂಡರೆ ಅವನಿಗೆ ನದಿಗೆ ಮರವೆಯಾಗುತ್ತದೆ. ದಾರಿಯುದ್ದಕ್ಕೂ ಮುಳ್ಳು ತುಂಬಿಕೊಳ್ಳುತ್ತದೆ. ಇವರೆಲ್ಲರ ದಿಬ್ಬಣ ಹೊರಡುವಾಗ, "ನಾನು ಬರಬಹುದಲ್ಲ?" ಎಂದು ಪರಿಹಾಸ್ಯಮಾಡಿದರು ಹಿರಿಯ ಗೋಖಲೆಯವರು. "ಅವರ ಊಟವನ್ನು ನಂಬಿಯೇ? ಅವರೇ ಅರೆಹೊಟ್ಟೆ ಉಂಡು ಬರುವುದನ್ನು ನೋಡಿ ನೀವು" ಎಂದು ಭವಿಷ್ಯ ನುಡಿದಳು ಮನೋಹರನ ತಾಯಿ, ಘಂಡರಿ ಬಾಯಿ.

ಎಲ್ಲರೂ ಮುಂಚಿನ ದಿನ ನಡೆದ ಕಷ್ಟದ ದಾರಿಯನ್ನು ಇನ್ನೊಮ್ಮೆ ತುಳಿದು, ಜಲಪಾತದ ಸಮ್ಮುಖದಲ್ಲಿಯೇ ಒಂದು ತಾವನ್ನು ಅರಸಿದರು. ಅಲ್ಲಿ ತಮ್ಮ ಶಿಬಿರ ಹೂಡಿದರು. ಜತೆಗೆ ಹೊರೆಯನ್ನು ಹೊತ್ತುಬಂದಿದ್ದ ಆಳು ಕಟ್ಟಿಗೆಯನ್ನು ತಂದುಕೊಟ್ಟ. ಒಲೆಯನ್ನೂ ಹೂಡಿ ಕೊಟ್ಟ. ಕಣ್ಣುರಿಸಿ

ಕೊಂಡು ಬೆಂಕಿ ಹೊತ್ತಿಸುವ ಕೆಲಸವನ್ನು ಮನೋಹರ ಮಾಡಿದ. ಅನಂತರ ಮೂವರು ಮಹಾಮಹಿಳೆಯರ ಪಾಕ ಶಾಸ್ತ್ರ ಪಾಂಡಿತ್ಯ ಪ್ರದರ್ಶನ ಮುಂದುವರಿಯಿತು. ಅವರೊಬ್ಬೊಬ್ಬರೇ ಆಗಿದ್ದರೆ ಏನನ್ನಾದರೂ ಬೇಯಿಸುತ್ತಿದ್ದರು. ಈಗ ಮೂವರೂ ಸೇರಿದ್ದರಿಂದ ತಾಪತ್ರಯ. ಪದಾರ್ಥವೇನೆನ್ನುವುದರಲ್ಲಿಯೂ ಚರ್ಚೆ; ಯಾವುದನ್ನು ಎಷ್ಟು ಹಾಕಬೇಕೆನ್ನುವುದರಲ್ಲಿಯೂ ಚರ್ಚೆ. ಅಂತು ಮಹಾ ಸಾಹಸವೊಂದು ಪೂರ್ಣವಾಗಿ, ಸಮಾರಾಧನೆ ಜರುಗಿತು. ಬಂಡೆಯೊಂದರ ಮೇಲೆ ಊಟ ವಿಜೃಂಭಣೆಯಿಂದ ನಡೆಯಿತು. ಮುದ್ದೆ ಅನ್ನ ಬಡಿಸಿದರು. ಅದರ ಕಟ್ಟೆಯಲ್ಲಿ ನೀರಾದ ತೊವ್ವೆ ಬಡಿಸಿದರು. ಉಪ್ಪು ಹೆಚ್ಚಾದ ಪಲ್ಯ ಬಂದಿತು. ಸಾಕಷ್ಟು ಪ್ರಯಾಸದಿಂದಲೇ ಊಟ ಮುಗಿಸಿದರು. ಹಸಿವು ಚೆನ್ನಾಗಿದ್ದುದರಿಂದ ಊಟ ಚೆನ್ನಾಗಿರಬೇಕೆಂದು ಎಲ್ಲರೂ ಊಹಿಸಿಕೊಂಡರು. ಮನೋಹರನ ಇಬ್ಬರು ತಮ್ಮಂದಿರು ಮಾತ್ರ ಅಡುಗೆಯನ್ನು ಕುರಿತು ಕಟುವಾದ ವಿಮರ್ಶೆ ಮಾಡಿದರು. "ನಾವು ಈಗಲೆ ಓಡಿಹೋಗಿ ಮನೆಯಲ್ಲಿ ಇನ್ನೊಮ್ಮೆ ಊಟಮಾಡುವವರು" ಎಂದು ಉಂಡಮೇಲೆ, ಉಪಕಾರವಿಲ್ಲದಂತೆ ಮಾತನಾಡಿದರು. ಬಿಸಿಲೇರುತ್ತ ಬಂದಿತ್ತು. ಆಳು, ತಂದ ಪಾತ್ರೆಗಳನ್ನೆಲ್ಲ ತೊಳೆದು ಮನೆಗೆ ಸಾಗಿಸಿದ. ಅವನಿಗೂ ಅಡುಗೆಯ ರುಚಿ ಮುಟ್ಟಿತ್ತು. ಆತ ಧನಿಗಳ ಮನೆಗೆ ಹೋಗಿ, ಅಲ್ಲಿ ಅಡುಗೆಯ ಕತೆ ಬಣ್ಣಿಸಿದ: "ಅಮ್ಮಾ, ಒಳ್ಳೆಯ ಹುಡುಗಿಯರವರು! ಅವರ ಅಡುಗೆಯನ್ನು ನಂಬಿದ ಗಂಡಂದಿರಿಗೆ ಖಂಡಿತಕ್ಕೂ ಉಪವಾಸವೇ ಗತಿ. ಒಂದೊಂದು ಪದಾರ್ಥ ಒಂದೊಂದು ತೆರ—ಪಲ್ಯಕ್ಕೆ ಉಪ್ಪು ಹೆಚ್ಚು; ಸಾರು ಸಪ್ಪೆ; ನೀರು ಹೆಚ್ಚು. ನೀವಿಷ್ಟು ಉಪ್ಪಿನಕಾಯಿ ಕಟ್ಟಿ ಕೊಟ್ಟದಕ್ಕಾಯಿತು. ಅನ್ನಮಾಡಲಿಕ್ಕೂ ಅವರಿಗೆ ಬರುವುದಿಲ್ಲ. ಪಾತ್ರೆಯ ಬುಡ ಹೊತ್ತಿ ಒಂದಂಗುಲ ದಪ್ಪ ಕರಟಿಹೋಗಿತ್ತು. ಪೇಟೆಯ ಮಕ್ಕಳೇ ಹಾಗೆ" ಎಂದು ಉಳಿದವರಿಗಿಂತ ಮುಂಚಿತವಾಗಿ ವರ್ತಮಾನವನ್ನು ತಿಳಿಸಿದ.

ಅನಂತರ ಮನೋಹರನ ಮೂವರು ತಮ್ಮಂದಿರೂ ಮನೆಗೆ ಬಂದರು. ಅವರೂ ಅಡುಗೆಯನ್ನು ಬಣ್ಣಿಸಿದರು. ಉಳಿದ ನಾಲ್ವರು ಕಾಡಿನ ಮರದ ತಂಪಿನಲ್ಲಿ, ಬೇರುಗಳಿಗೆ ತಲೆಕೊಟ್ಟು ಮಲಗಿಕೊಂಡು ಆಯಾಸವನ್ನು ಕಳೆದರು. ಮನೋಹರನಿಗೂ ಆ ವನಭೋಜನ ವಿಚಿತ್ರವಾಗಿಯೇ ಕಂಡಿತು. ಮಾತಾಡಲು ವಿಷಯವಿಲ್ಲದ್ದಕ್ಕೆ ಆತ "ಪಲ್ಯ ಒಂದನ್ನು ಉಣ್ಣಬಹುದಿತ್ತು"

ಎಂದಾಗ, ಮಂಜುಳೆ 'ಅದನ್ನು ಮಾಡಿದವಳು ನಾನು' ಎಂದಳು. ಅದಕ್ಕೆ ಊರ್ವಶಿ "ಉಪ್ಪು ಹೆಚ್ಚು ಹಾಕಿ ರುಚಿ ಕೆಡಿಸಿದವಳು ನೀನು" ಎಂದಳು. ವಿನತೆ ನಗುತ್ತ "ಅಡಿಗೆಯ ಸುದ್ದಿಯೊಂದನ್ನು ಬಿಟ್ಟು ಇನ್ನೇನಾದರೂ ಮಾತ ನಾಡುವ" ಎಂದಳು. ಹೊತ್ತು ಹೋಗದುದಕ್ಕೆ, ತಮ್ಮ ನಾಟಕದ ಹಾಡು ಗಳನ್ನು ಹಾಡತೊಡಗಿ ಅಭಿನಯಿಸಿದರು. ಊರ್ವಶಿ ಮಂಜುಳೆಯ ಪಾತ್ರ ವನ್ನಣಕಿಸಿ ತೋರಿಸಿದಳು. ಮಂಜುಳೆ 'ನಾರದನನ್ನು' ಕುರಿತು ಚೇಷ್ಟೆ ಮಾಡಿದಳು. ವಿನತೆಯೂ ಧೈರ್ಯಮಾಡಿ ಕಮಲಾಕರನ ಅನುಕರಣೆಯನ್ನು ಮಾಡಿತೋರಿಸಿದಳು. ಮೆಲ್ಲಗೆ ಸಂಜೆಯಾಗತೊಡಗಿತು. ಕಾಫಿಯ ವೇಳೆಗೆ ಸಮನಾಗಿ ಮನೆಯನ್ನು ಸೇರುವ ಯೋಚನೆಮಾಡಿ, ಮನೆಗೆ ಧಾವಿಸಿ ದರು. ದಾರಿಯಲ್ಲಿ ತೋಟದಲ್ಲಿ ಕೆಲಸ ಮಾಡುತಿದ್ದ ಅನಂತಯ್ಯನವರು "ನಿಮ್ಮ ವನ ಭೋಜನಕ್ಕೆ ನನಗೆ ಬರಲಿಕ್ಕಾಗಲೇ ಇಲ್ಲವಲ್ಲ" ಎಂದರು.

"ಬಂದಿದ್ದರೆ ನಿಮಗೆ ಉಪವಾಸವೇ ಗತಿ"ಎಂದಳು ವಿನತೆ. ಅಲ್ಲಿಂದ ಎಲ್ಲರೂ ನಗುತ್ತ ಮನೆಯ ಚಾವಡಿಯನ್ನು ಸೇರಿದರು.

ಆ ರಾತ್ರಿ ಊಟವಾದ ಮೇಲೆ ಗೋರೆಯವರ ಸಂಗೀತವಿತ್ತು. ತಬಲೆಗೆ ಗಣೇಶ ಫಡಕೆ ಎಂಬವರು ಬಂದಿದ್ದರು. ಗೋರೆಯವರ ಹಾಡುಗಾರಿಕೆ ಯನ್ನು ಕೇಳಿ, ತಾನಾಗಿ ಉತ್ಸಾಹಗೊಂಡು ವಿನತೆ ಪಿಟೀಲು ಹಿಡಿದಳು. ಅವರಿಂದ ಚಿಂತೆಯಿಲ್ಲ ಎನಿಸಿಕೊಂಡಳು. ಅವಳಿಗೂ ಅವರ ಸಂಗೀತವನ್ನು ಕೇಳಿ,ಇಂಪಾದ ಕಂಠ ಕೇಳಿ, ತುಂಬ ಸಂತೋಷವಾಯಿತು. ಹೊರಡುವಾಗ ಗೋರೆಯವರು ಅವಳನ್ನು ತುಂಬ ಶ್ಲಾಘಿಸಿದರು: "ನಿಮ್ಮ ಕೈ ಚೆನ್ನಾಗಿದೆ. ಆದರೆ ಇನ್ನೂ ಅಭ್ಯಾಸಬೇಕು. ಕಲಿಯುವಿಕೆಯನ್ನು ಬಿಡಬೇಡಿ. ಸಂಗೀತ ವೆಂಬುದು ಒಂದು ಘನವಾದ ವಿದ್ಯೆ" ಎಂದು ಹೇಳಿ, ಹರಸಿ ಹೋದರು. ಅವಳ್ಯಾರೆಂದು ಮನೋಹರನೊಡನೆ ಕಿವಿಯಲ್ಲಿ ಅವರು ಕೇಳಿದಾಗ, ಅತ, ಗುಟ್ಟು ಬಿಡಲಿಲ್ಲ. ಬದಲು 'ನನ್ನ ಸಹಪಾಠಿ; ಯಾವುದೋ ಸಾಹುಕಾರರ ಮಗಳು' ಎಂದು ಹೇಳಿ ಪಾರಾದ. ಮತ್ತೇತಕ್ಕಲ್ಲ; ಮನೆಯವರ ಕಿವಿಗೆ ವಿನತೆಯ ಜಾತಿ ಕುಲಗಳನ್ನು ತಿಳಿಸಬಾರದೆಂದು. ಅವಳು ಅಲ್ಲಿರುವಾಗಲೇ ತನ್ನ ತಾಯಿಗೆ ಅವಳ ಜಾತಿ, ಕುಲಗಳ ವಿಚಾರವಾಗಿ ತಿಳಿದರೆ ಅಸಮಾಧಾನ ವಾದೀತೋ ಏನೋ, ಎಂಬ ಭಯ ಅವನಿಗಿತ್ತು. ಮರುದಿನವೂ ಅವರೆಲ್ಲ ಅಲ್ಲಿಯೇ ಇದ್ದರು; ಅನೇಕ ಹುಚ್ಚಾಟಗಳಲ್ಲಿ ಸಮಯವನ್ನು ಕಳೆದರು.

ಗೋಖಲೆಯವರ ಮನೆಯ ಜೋಡೆತ್ತಿನ ಗಾಡಿಯು, ಆ ರಾತ್ರಿ ಮುದ್ದೂರಿಗೆ ಹೋಗುವುದಕ್ಕಿತ್ತು. ಅವರೂ ಹೋಗುವವರಿದ್ದರು. "ಮನೂ, ನಾಳೆ ನಾಲ್ಕೈದು ಮೈಲು ನಡೆದು, ಮೋಟರಿನಲ್ಲಿ ಜಾಗ ಸಿಗದೆ ಇವರು ಒದ್ದಾಡುವುದು ಬೇಡ. ನಾನೂ ಮುದ್ದೂರಿಗೆ ಹೋಗುತ್ತೇನೆ. ರಾತ್ರಿ ಎಲ್ಲರೂ ಗಾಡಿಯಲ್ಲಿ ಸುಖವಾಗಿ ಕುಳಿತು ಹೋಗಬಹುದು. ಬೆಳಿಗ್ಗೆ ಪೇಟೆ ಸೇರುತ್ತೇವೆ. ನಿದ್ದೆ ಸ್ವಲ್ಪ ಕಡೆಗೆಟ್ಟೀತು. ಆದರೆ ಮೋಟರ್ ನಂಬಿ ಮೋಸ ಹೋಗುವುದಕ್ಕಿಂತ ಇದು ಒಳ್ಳೆಯದಲ್ಲವೆ" ಎಂದುದಕ್ಕೆ ಆತ ಒಪ್ಪಿದ. ಅವರನ್ನು ಕಳುಹಿಸಿಕೊಡಲು ತಾನೂ ಅವರ ಜೊತೆಗೆ ಹೋಗಬೇಕೆಂಬ ಅವನ ಆಸೆಯು ಹೀಗೆ ವ್ಯರ್ಥವಾಯಿತು. ಅದನ್ನು ತೋರಿಸಿಕೊಳ್ಳುವುದಕ್ಕಿರಲಿಲ್ಲ. ರಾತ್ರಿ ಊಟವಾದ ಮೇಲೆ, ಅವರೆಲ್ಲರು ಎತ್ತಿನ ಬಂಡಿಯಲ್ಲಿ ಕುಳಿತರು. "ಅಮ್ಮಾ, ಹೋಗಿ ಬರುತ್ತೇವೆ. ಮನು, ಹೋಗುತ್ತೇವೆ. ಗಣೇಶಾ, ಹೋಗಿ ಬರುತ್ತೇವೆ" ಎಂದಂದು ಆ ಕನಸಿನ ರಾಜ್ಯವನ್ನು ಬೀಳ್ಕೊಟ್ಟರು.

ಮುದ್ದೂರು ಸೇರುವ ತನಕವೂ ಮಂಜುಳೆಯ ಹೃದಯ ಚಡಪಡಿಸುತಿತ್ತು-ಸುಮಿತ್ರೆಗೆಲ್ಲಾದರೂ ತಾನು ಹಳ್ಳಿಗೆ ಹೋದ ಸಂಗತಿ ತಿಳಿಯುತ್ತದೋ ಎಂದು. ಭಯದಿಂದ ಅವಳು ಮನೆಯನ್ನು ಸೇರಿದಳು. ಮುಖ ಗಂಟಿಕ್ಕಿದ ಸುಮಿತ್ರೆಯ ಸ್ವಾಗತವಾಯಿತು. ಮಾತೇ ಆಡದ, ಮುನಿಸುಗೊಂಡ ಸಂಭಾವನೆ. ಅಷ್ಟಕ್ಕೇನೂ ಅವಳು ಅಂಜುವವಳಲ್ಲ.

ಮುಂದಣ ಆದಿತ್ಯವಾರ ಬಂದಿತು. ರತ್ನಾಕರ ರಾಯ ಮೊಕ್ಕಾಮಿನಿಂದ ಊರಿಗೆ ಬಂದನು. ಜತೆಗೆ ಸುಮಾರು ಇಪ್ಪತ್ತನಾಲ್ಕು ವಯಸ್ಸಿನ, ಒಬ್ಬ ತರುಣನನ್ನೂ ಕರೆದು ತಂದಿದ್ದ. ಆತ ದೂರದಿಂದ ಅವರ ಸಂಬಂಧದವನಂತೆ. ಅವನಿಗೆ ತನ್ನ ತಂಗಿಯನ್ನು ತೋರಿಸಿ ಲಗ್ನದ ಒಪ್ಪಿಗೆ ಪಡೆಯುವುದಕ್ಕೆಂದು ಕರೆದುಕೊಂಡು ಬಂದಿದ್ದ. ಸಂಭ್ರಮದ ಊಟ ಉಪಚಾರಗಳಾದವು. ಹುಡುಗಿಯನ್ನು ಹುಡುಗನೂ ನೋಡಿದ; ತೃಪ್ತನಾದ. ಮನಸ್ಸು ಒಪ್ಪಿತು. ಮಂಜುಳೆಯ ತಂದೆ ಇರಿಸಿದ ಐದು ಸಾವಿರ ರೂಪಾಯಿಗಳಿವೆ ಎಂದೂ ಆತ ಕೇಳಿದ್ದ. ಜಾತಕವೂ ಚೆನ್ನಾಗಿ ಕೂಡುತ್ತದೆಯಂತೆ. ಆದುದರಿಂದ ಎಲ್ಲವೂ ಕೈಗೂಡಿದಂತೆ ಎಂದು ತಿಳಿದ. ಸಂಜೆಯ ಬಸ್ಸಿಗೆ ಆತ ತನ್ನ ಊರಿಗೆ ಹೊರಟುಹೋದ. ಅವನೇನೋ ಮನಸ್ಸಿನಲ್ಲಿ ತುಂಬ ತೃಪ್ತಿಗೊಂಡೇ ತೆರಳಿದ.

ಆ ರಾತ್ರಿ ಊಟಕ್ಕೆ ಕುಳಿತಾಗ ರತ್ನಾಕರ ರಾಯ ಮನೆಗೆ ಬಂದವರ ವಿಚಾರವಾಗಿ ಮಂಜುಳೆಗೆ ಹೇಳಿದ: "ಅವನಿಗೆ ಇಂಟರ್ ಪರೀಕ್ಷೆ ಆಗಿದೆ. ಹಿರಿಯರು ಮಾಡಿಟ್ಟ ಸ್ವಲ್ಪ ಭೂಮಿ, ಕಾಣಿಕೆಗಳಿವೆ. ನನ್ನ ಹಾಗೆ ತಿರುಗಾಡುವ ಕೆಲಸವಲ್ಲ. ಕಾಸರಗೋಡಿನಲ್ಲಿ ಅವನಿಗೆ ಮನೆಯಿದೆ; ಬೇಂಕ್ ಒಂದರಲ್ಲಿ ಗುಮಾಸ್ತಿಕೆ ಕೆಲಸವಿದೆ. ಅದರಿಂದಲೂ ತಿಂಗಳಿಗೆ ಮೂವತ್ತು ನಾಲ್ವತ್ತು ರೂಪಾಯಿಗಳ ಸಂಬಳ ಬರುತ್ತದೆ. ಇಂಥ ಒಳ್ಳೆಯ ಸಂಬಂಧ ಸಿಗುವುದು ಒಂದು ಪುಣ್ಯ" ಎಂದರು.

ಮಂಜುಳೆ ಅದಕ್ಕೆ ಮಾತನಾಡಲಿಲ್ಲ. ತಲೆತಗ್ಗಿಸಿ ಉಣ್ಣುತ್ತಿದ್ದಳು.

"ಅವನಿಗೊಪ್ಪಿಗೆಯಾಗಿದೆ. ಮದುವೆ ನಿಶ್ಚಯಿಸಬಹುದಲ್ಲ"ಎಂದರು.

"ಯಾರಿಗೆ?" ಎಂದು ಬಂದಿತು ಉತ್ತರ.

"ಹಾಗೆಂದರೇನು? ಇಷ್ಟರ ತನಕ ನಾನು ಹೇಳಿದ್ದು ಯಾರಿಗೆ?"

"ನಾನೀಗಲೇ ಮದುವೆಯಾಗುವುದಿಲ್ಲ. ನನ್ನ ಇಂಟರ್,ಬಿ. ಎ. ಆಗಿ, ಆ ಮೇಲೆ ಮದುವೆ ಬೇಕು ಎಂದು ಕಂಡರೆ, ನಾನೇ ಹೇಳುತ್ತೇನೆ" ಎಂದು ಬಿಟ್ಟಳು ಅವಳು.

ಆ ತೆರನ ದಿಟ್ಟ ಉತ್ತರಕ್ಕೆ ಅವನು ಸಿದ್ಧನಾಗಿರಲಿಲ್ಲ. ವಿನಯದಿಂದ ತಂಗಿಯನ್ನು ಒಲಿಸಬಹುದು, ಸುಮಿತ್ರೆ ಹೇಳುವಷ್ಟು ದುಡುಕಿ ಅವಳಲ್ಲ– ಎಂದು ಎಣಿಸಿದ ಅವನಿಗೆ ಈ ಮಾತನ್ನು ಕೇಳಿ ವಿಸ್ಮಯವಾಯಿತು. ತಡೆಯದ್ದಕ್ಕೆ ಮನಸ್ಸಿನೀ ಬೈದರು: "ನಿನ್ನನ್ನು ಬಿ. ಎ, ಗಿ. ಎ ಮಾಡಿಸುವ ಯೋಗ್ಯತೆ ನನಗಿಲ್ಲ. ನಿನಗೆ ಪ್ರಾಯ ಬಂದ ಮೇಲೆ, ನಿನ್ನ ಹಣವನ್ನು ನಿನ್ನ ಕೈಮೇಲೆ ಹಾಕುತ್ತೇನೆ. ಏನು ಬೇಕೋ ಮಾಡಿಕೋ" ಎಂದೆದ್ದು ಹೊರಟುಹೋದ.

ಅಷ್ಟರೊಳಗೆ ಸುಮಿತ್ರೆಯ ಸಂಶೋಧನೆ ಪೂರ್ಣವಾಗಿತ್ತು. ಹೊಟೇಲಿನ ಅಜ್ಜಿ ಅವಳಿಗೂ ಗೊತ್ತಿದ್ದವಳು. ಮನೋಹರ ಅಲ್ಲಿಗೆ ಬಂದುದು, ಇವರಿಲ್ಲ ಅಲ್ಲಿಗೆ ಹೋದುದು, ಅಲ್ಲಿ ಕುಳಿತು ಅವನ ಊರಿಗೆ ಹೋಗುವ ಯೋಚನೆಮಾಡಿದ್ದು; ಅದಕ್ಕಿಂತ ಹಿಂದೆ ತಾನು ದೊರಕಿಸಿಕೊಂಡ ಕಾಗದ –ಅದರ ಭಾವಾರ್ಥಗಳನ್ನು ಸೇರಿಸಿ ಒಂದು ಕಥೆಯನ್ನೇ ಹೊಸೆದಳು. ಅದನ್ನು ಗಂಡನ ಕಿವಿಯಲ್ಲಿ ಬಿಸೆದಳು.

ರತ್ನಾಕರ ರಾಯನ ಪಾಲಿಗೆ, ತನ್ನ ತಂಗಿ ಮಂಜುಳೆ, ಬಿಸಿ ಅನ್ನದ ತುತ್ತಾದಳು. ಅದನ್ನು ನುಂಗುವುದಕ್ಕಿಲ್ಲ; ಉಗುಳುವುದಕ್ಕಿಲ್ಲ.

# ಐದನೆಯ ಅಧ್ಯಾಯ

ಜಿನರಾಜ ಅಜಿಲರದು ಆಸ್ತಿ,ಸಂಪತ್ತುಗಳಿಗೆ ಹೆಸರಾದಂಥ ಮನೆತನ. ಪೂರ್ವದ ಬಂಗರಸರ ಕಾಲದಲ್ಲಿ ಇವರ ಹಿರಿಯರು ಪ್ರಬಲ ಪಾಳೆಯಗಾರರಾಗಿದ್ದರಂತೆ. ಅರಸರಂತೆ ಪಟ್ಟಾಭಿಷಿಕ್ತರಾಗುವ ಪರಿಪಾಠವೂ ಅವರ ಪುರಾತನ ಮನೆಯಲ್ಲಿತ್ತು. ಆ ಮೇಲೆ ಸರಿದ ಶತಮಾನ, ಶತಮಾನಗಳಲ್ಲಿ ಕುಟುಂಬದ ಸಂಪತ್ತು, ಅಧಿಕಾರಗಳಲ್ಲಿ, ಏಳು ಬೀಳುಗಳಾದರೂ, ಅವರ ಕುಲದವರು ನಿಡುಗಲ್ಲಿಗೆ ಸಮೀಪವಾಗಿರುವ ಗ್ರಾಮಗಳಿಂದ, ಮೂಲೋತ್ಪಾಟನೆಗೊಳ್ಳಲಿಲ್ಲ. ಹಳೆಗಾಲದ ಅಜಿಲರ ಮನೆಯನ್ನು ನಾಲ್ಕೈದು ಬಾರಿ ಅಳಿದು ಕಟ್ಟಿದ್ದರೂ ಇಂದಿಗೂ ಅದು ಅಜಲರ ಮನೆಯಾಗಿಯೇ ಉಳಿದಿದೆ. ಜಿನರಾಜ ಅಜಿಲರು ಪಟ್ಟಾಭಿಷಿಕ್ತರಾಗಿಲ್ಲದದ್ದರೂ, ಆಸ್ತಿಗೆ ಸಂಪೂರ್ಣ ದೊರೆಗಳಾಗಿಯೇ ಉಳಿದಿದ್ದಾರೆ. ಈಗೇನಾದರೂ ಅವರಿಗೆ ಕಡಿಮೆ ಕಡಿಮೆ ಸಾವಿರ ಮುಡಿ ಅಕ್ಕಿ ಬರುವ ಜಮೀನಿದೆ; ಇಪ್ಪತ್ತು ಖಂಡಿಗಳಷ್ಟು ಅಡಿಕೆ ಬೆಳೆಯುವ ವಿಶಾಲವಾದ ತೋಟಗಳಿವೆ; ಸಾಕಷ್ಟು ತೆಂಗಿನಕಾಯಿಗಳೂ ಬರುತ್ತಿವೆ. ಮನೆಯಲ್ಲಿ ಅವರೇನೆ ಯಜಮಾನರು; ಇನ್ನು ಅವರ ತಂಗಿ, ತಂಗಿಯ ಮಕ್ಕಳು ಕೂಡಿದಂಥ ಸಣ್ಣ ಕುಟುಂಬ. ಆಳು, ತೈನಾತಿಗಳಿಂದ ಅವರ ಪರಿವಾರ ದೊಡ್ಡದೇ ಹೊರತು, ಖರ್ಚುವೆಚ್ಚಗಳ ದೃಷ್ಟಿಯಿಂದಲ್ಲ. ಮೂವತ್ತನೆಯ ವಯಸ್ಸಿನಲ್ಲಿ ಅವರು ಅಧಿಕಾರಕ್ಕೆ ಬಂದರು. ಅನಂತರ ಮೂವತ್ತು ವರ್ಷಗಳಲ್ಲಿ ಆಸ್ತಿಗೆ ಅಂಟಿದ್ದ ಸಾಲಗಳನ್ನು ತೀರಿಸಿ, ಹೊಸ ಆಸ್ತಿಗಳನ್ನು ಕೊಂಡು, ವಂಶದ ಮೂಲ ಸಂಪತ್ತನ್ನು ಬೆಳೆಸಿದರು. ಅವರಿಗೆ ಸ್ವಗೃಹಿಣಿಯಲ್ಲಿ ಸಂತತಿಯಿಲ್ಲ. ಅದು ತಲೆಮಾರಿನಿಂದ ಬಂದ ಶಾಪವಂತೆ. ಹೇಗೂ ನಾಳೆ ಅಳಿಯಂದಿರಿಗೆ ಅಧಿಕಾರ ಸಲ್ಲುತ್ತದೆಯಾದರೂ ಇವರಿರುವ ತನಕ ಪಟ್ಟಭದ್ರರು. ಅಷ್ಟೆಲ್ಲ ಸಂಪತ್ತಿರುವಾಗ, ಸಂಪತ್ತಿಗೆ ಸಮನಾದ ವಿಲಾಸಗಳೂ ಉಂಟು. ವರ್ಷಕ್ಕೊಂದೆರಡು ಕಂಬಳ, ಭೂತದ ನೇಮ, ವೇಣೂರಿನ ಸಮೀಪವಿರುವ, ಅವರ ಆಸ್ತಿಗೆ ಹೊಂದಿಕೊಂಡ ಬಸದಿಯಲ್ಲಿ ವಿಧಿಪೂರ್ವಕವಾದ ಉತ್ಸವ, ಇವುಗಳನ್ನೆಲ್ಲ ಅತಿ ವಿಜೃಂಭಣೆಯಿಂದ ನಡೆಯಿಸಿಕೊಂಡು ಬಂದಿದ್ದಾರೆ. ಹಾಗೆ ಅವರಿಗೆ ಮೂಡಬಿದರೆ, ಮಂಗಳೂರುಗಳಲ್ಲಿ ಬೇರೆ ಅರಸಿಯರೂ ಇದ್ದಾರೆ. ಮುದ್ದೂರಿಗೆ ಸಮೀಪವಾಗಿ

ಇನ್ನೊಂದಿಷ್ಟು ಭೂಮಿಯುಂಟು. ಹಿಂದೆ ಈ ಭೂಮಿಯ ಹುಟ್ಟುವಳಿಯನ್ನೆಲ್ಲ ಆನಂದ ನಾಯಕರು ಆಡಳಿತ ನೋಡಿಕೊಳ್ಳುತ್ತಿದ್ದರು; ಸ್ನೇಹಾಚಾರದಿಂದ ವರಮಾನವನ್ನು ತಂದು ಒಪ್ಪಿಸುತಿದ್ದರು. ಅವರು ತೀರಿಕೊಂಡ ಮೇಲೆ, ಅಜಿಲರು ತಾವಾಗಿಯೆ ಆ ಒಕ್ಕಲು ಮಕ್ಕಳನ್ನು ಕರೆಯಿಸಿ, ಗೇಣಿ ವಸೂಲು ಮಾಡತೊಡಗಿದರು.

ಹಿಂದಿನ ದಿನಗಳಲ್ಲಿ, ಈ ಕೆಲಸವನ್ನು, ನಾಯಕರು ವಿನತೆಯ ತಾಯಿ ಮಂಜರಿಯ ಮನೆಯಲ್ಲಿ ಕುಳಿತು ನಡೆಯಿಸುತ್ತಿದ್ದರು. ಸ್ನೇಹ, ಸಂಬಂಧದಂಥ ಅವರಿಗೆ ಸಮವಯಸ್ಕರಾದ ಅಜಿಲರೂ ಅಲ್ಲಿಗೆ ಹೋಗಿ, ಕುಳಿತುಕೊಂಡು, ಹರಟೆ ಮಾತುಗಳನ್ನಾಡುತ್ತ, ಹೊತ್ತು ಕಳೆಯುತ್ತಿದ್ದುದುಂಟು. ಹೀಗಾಗಿ ಅವರಿಗೂ ಮಂಜರಿಯ ಸ್ನೇಹ ಪೂರ್ವದ್ದೇ. ನಾಯಕರು ತೀರಿಕೊಂಡ ಮೇಲೆ, ಜೋಡೆತ್ತಿನ ಗಾಡಿಯನ್ನು ಕಟ್ಟಿಕೊಂಡು ಮಾದೂರಿನ ತನಕ ಪಯಣ ಬೆಳೆಯಿಸಿ, ಮಂಜರಿಗೆ ಸಮಾಧಾನ ಹೇಳಿಯೂ ಬಂದಿದ್ದರು. ತಮಗೆ ಇನ್ನೆರಡು ಅರಸಿಯರಿದ್ದರೂ, ಪರಿಚಿತಳಾದ ಮಂಜರಿಯೊಬ್ಬಳು ಹೆಚ್ಚೆನಿಸಲಿಲ್ಲ. ಉಳಿದವರಂತೆ ಅವಳನ್ನೂ ನಡೆಯಿಸಿಕೊಂಡು ಹೋಗುವ ಭಾರ ತಮ್ಮ ಕರ್ತವ್ಯವೆಂದು ತಿಳಿದರು. ಅವಳ ಮನೆಗೆ ತಿಂಗಳಿಗೊಮ್ಮೆಯಾದರೂ ಭೇಟಿ ಕೊಡತೊಡಗಿದರು. ಆ ಮನೆಗೆ ಬೇಕಾಗುವಷ್ಟು ಕಾಯಿ, ಹುಲ್ಲು, ಅಕ್ಕಿ ಮೊದಲಾದುವನ್ನು ತಮ್ಮ ಒಕ್ಕಲುಗಳಿಂದ ಒದಗಿಸಿ, ಉಳಿದುವನ್ನು ನಾಯಕರ ಅಂಗಡಿಗೆ ಹಾಕಿಸುತಿದ್ದರು. ನಗದು ವೆಚ್ಚಕ್ಕೂ ಹಣ ಕೊಟ್ಟವರೇ. ಆದರೆ ಅವರು ಆನಂದ ನಾಯಕರಷ್ಟು ಧಾರಾಳಿಗಳಲ್ಲ ಎಂಬ ಮಾತೇನೋ ನಿಜ. ಹೆಣ್ಣು ಅವರಿಗೆ ಬೇಕಾಗಿತ್ತು; ಆದರೆ ಹಣದ ಮೇಲಿನ ಮೋಹ ಅದಕ್ಕಿಂತ ಹೆಚ್ಚಾಗಿತ್ತು ಅನ್ನಬೇಕು.

ಹೀಗಾಗಿ ಮಂಜರಿಯು ಮೊದಲಿನಂತೆ ಬಾಳುವುದಕ್ಕಿರಲಿಲ್ಲ. ಅವಳ ಈಗಿನ ಸಂಸಾರ ಮೊದಲಿನದೂ ಅಲ್ಲ. ಮೊದಲು ವೆಚ್ಚಕ್ಕೆ ಎಂದೂ ಕಡಿಮೆ ಮಾಡಿದವಳಲ್ಲ; ಮೊದಲು ಅವಳ ಕೈಕಟ್ಟಿದ ದಿನಗಳೇ ಇರಲಿಲ್ಲ. ಚಿನ್ನಾಭರಣಗಳೂ ಸಾಕಷ್ಟು ಇದ್ದವು. ಆದರೆ ನೋವಿಲ್ಲದಂಥ ಬಾಳ್ವೆ ಅವಳದ್ದಲ್ಲ. ಹಡೆದ ಎಂಟು ಮಕ್ಕಳಲ್ಲಿ ಇಂದು ಉಳಿದುವು—ಒಂದು ಗಂಡು, ಒಂದು ಹೆಣ್ಣು ಮಾತ್ರ, ವಿನತೆ ಮತ್ತು ರಾಮಕೃಷ್ಣರು. ಅದರಿಂದಲೇ ಅವಳ ಜೀವನ ತತ್ತರಿಸಿತ್ತು. ಅನಂತರ ನಾಯಕರ ಮೃತ್ಯು ಅವಳನ್ನು ಕಂಗಾಲು

ಗೊಳಿಸಿತು. "ನಿನ್ನ ಹೆಸರಿಗೆ ಒಂದಷ್ಟು ಭೂಮಿಯನ್ನು ಮಾಡಿಸುತ್ತೇನೆ" ಎಂದು ಅವರು ನುಡಿದೇ ತೀರಿಕೊಂಡರು. ಹಾಗೆ ಮಾಡಿದ್ದಲ್ಲಿ, ಅವರ ಮೃತ್ಯುವಿನ ಬಳಿಕ, ಮಂಜರಿ ಪರಸ್ತ್ರೀಯಾಗುತ್ತಿರಲಿಲ್ಲ.

ಆದರೆ ಅದೃಷ್ಟ ಬೇರೊಂದೇ ಯೋಚಿಸಿತು. ತನ್ನ ಪಾಲಿಗೆ ಬಂದುದು ಪಂಚಾಮೃತವೆಂದು ತಿಳಿದು, ಅವಳು ಅನಂತರ ಅಜಿಲರ ಅರಸಿಯಾದಳು. ಬೇಡುವ ಮುಂಚೆಯೇ ಕೊಡುತ್ತಿದ್ದ ನಾಯಕರಿಗೂ, ಬೇಡಿ ಬಯಸಿದರೂ ಕಸಿವಿಸಿಯಿಂದ ಕೊಡುತ್ತಿದ್ದ ಅಜಿಲರಿಗೂ ಬಹು ಹೆಚ್ಚಿನ ಅಂತರವಿತ್ತು. ಆದರೆ ತನ್ನ ಅರಸಿತನದ ಹಕ್ಕನ್ನು ಮೆರೆಯಿಸಲು ಮಂಜರಿಗೆ ವಯಸ್ಸೂ ಅಲ್ಲ. ಇಂದವಳಿಗೆ ಐವತ್ತು ವರ್ಷ ಸಮೀಪಿಸಿದೆ; ತಲೆಗೂದಲು ಅರ್ಧ ನರೆತು, ಮುಖದಲ್ಲೂ ಸುಕ್ಕು ಕಾಣಿಸಿ, ಶೃಂಗಾರಕ್ಕೊಂದು ಉತ್ಸಾಹವಿಲ್ಲದ ಆಕೆ ಆ ಕೆಲಸವನ್ನೆಂದೂ ಮಾಡಲಾರಳು. ಹಾಗೆಂದು ಅವಳ, ಮೈ ತುಂಬ ತೊಟ್ಟು, ಕೈ ತುಂಬ ಉಂಡ ಬಾಳಿಗೆ ಬಂದೊದಗಿದ ಈ ವಿಪತ್ತನ್ನೂ ಸಹಿಸಲಾರಳು. "ಅಜಿಲರಿಗೆ ನಾನೊಬ್ಬಳೇ ಅಲ್ಲ" ಎಂದೆಣಿಸಿಕೊಂಡು, ಕೆಲವೊಮ್ಮೆ ಮನೆಗೆ ಬರುತ್ತಿದ್ದ ಪರಿಚಿತರು ಕೆಲವರೊಡನೆ ಸ್ನೇಹವಾಗಿಯೇ ಇದ್ದಳು. ಅದು ಅವಳ ಕುಲಧರ್ಮಕ್ಕೊಂದು ಅಪರಾಧವಲ್ಲ. ಅವಳಿಗೂ ಅದು ತಪ್ಪು ಅನಿಸುವಂತಿರಲಿಲ್ಲ. ಮಂಜರಿ ಅಜಿಲರೊಡನೆ "ನಮ್ಮ ವಿನು ಕಾಲೇಜಿಗೆ ಹೋಗಬೇಕೆನ್ನುತ್ತಾಳೆ; ಬೇಡ ಎಂದರೆ ಏನೇನೂ ಕೇಳುವುದಿಲ್ಲ. ನೀವು ಮನಸ್ಸು ಮಾಡಿದರೆ ಅದೊಂದು ದೊಡ್ಡದಲ್ಲ" ಎಂದಿದ್ದಳು. ಆದರೆ ಅವರು "ನಿನಗೆ ಭ್ರಮೆಯೇ? ಹೆಣ್ಣುಮಕ್ಕಳು ಓದಿ ಏನು ಮಾಡಬೇಕು? ನಾನೇ ನನ್ನ ಅಳಿಯಂದಿರನ್ನು ಶಾಲೆಗೆ ಕಳುಹಿಸಲಿಲ್ಲವಂತೆ. ಪೇಟೆಯ ದಾರಿಯನ್ನು ಹಿಡಿದ ಮಕ್ಕಳು ಮತ್ತೆ ಮನೆಗೆ ಬರುವುದಿಲ್ಲ. ನಿನ್ನ ವಿನುವಿಗೆ ದೇವರು ಚೆನ್ನಾದ ರೂಪು ಕೊಟ್ಟಿದ್ದಾನೆ; ಇನ್ನೇನು ಬೇಕು?" ಎಂದು ಬೋಧಿಸಿ, ಅವಳ ಆಸೆಯನ್ನು ಕಡಿದುಹಾಕಿದರು.

ವಿನತೆ, ತನ್ನ ಎಳೆತನದ ವರ್ಷಗಳನ್ನು ಚಿಂತೆಯಿಲ್ಲದೆ ಕಳೆದಳು. ಮನೆಯ ಆವರಣ ಆಗ ವಿಚಿತ್ರವಾಗಿಯೂ ಕಾಣಿಸಲಿಲ್ಲ. ಮನೆಗೆ ಬಂದು ಹೋಗುವ ಜನಗಳೊಡನೆ ಮಗುವಾಗಿ ಆಡಿದಳು. ಅನಂತರ—ಮೆಲ್ಲಗೆ ಮೈತುಂಬುತ್ತ ಬಂದಿತು; ಮನಸ್ಸು ಮಕ್ಕಳಾಟಿಕೆಯಿಂದ ದಾಟಿ ಸರಿದು ವಾಸ್ತವಿಕ ಪ್ರಪಂಚವನ್ನು ನೋಡತೊಡಗಿತು. ಸಹಪಾಠಿಗಳ ಸ್ನೇಹದಿಂದ

ಹರ್ಷಗೊಂಡಿತು; ಮೂದಲಿಕೆಯಿಂದ ನೊಂದಿತು. ಈ ಮೂದಲಿಕೆಯಲ್ಲದಿದ್ದರೆ, ಅವಳಲ್ಲಿ ಹೊಸ ಅಭಿಲಾಷೆ ಉಂಟಾಗುತ್ತಿರಲಿಲ್ಲ. ನಾಯಕರಿರುವಾಗ, ಅವರ ತೊಡೆಯ ಮೇಲೆ ಕುಳಿತು, "ಪಾಪಾ" ಎಂದು ಅವರ ಗಲ್ಲವನ್ನು ಸವರಿದ ಅವಳು, ಅವರ ಮೃತಿಗಾಗಿ ಅತ್ತಳು. ಆ ನೋವು ಬಹಳ ದಿನಗಳ ತನಕವೂ ಮರೆಯದಾಯಿತು. ಆದರೆ ಮುಂದೆ ಮಕ್ಕಳ ಚುಚ್ಚು ಮಾತುಗಳಿಂದ, "ಪಾಪ" ಎಂದರೆ ತಂದೆಯಲ್ಲ, ಅಪ್ಪನಲ್ಲ-ಎಂಬ ಜ್ಞಾನೋದಯವಾಯಿತು. ಹೇಳ ಹೆಸರಿಲ್ಲದ ತಂದೆ ತನಗಿದ್ದರೇನು ಇಲ್ಲದಿದ್ದರೇನು—ಎಂಬ ಆ ಒಂದು ನೋವು ಇಂದಿಗೂ ಉಳಿದುಕೊಂಡು ಬಂದಿದೆ; ಹೆಚ್ಚಿ ಬಂದಿದೆ. ಅದರಿಂದಾಗಿ ತಮ್ಮ ಮನೆಗೆ ಬರುವವರನ್ನು ಕಂಡು ಅವಳಿಗೆ ಅನಾದರವುಂಟಾಗತೊಡಗಿತು. ಅಚಲರು ಬಂದಾಗಲೂ ಮನಸ್ಸಿಗೆ ಅಸಹ್ಯವಾಗಿ ಕಾಣಿಸುತ್ತಿತ್ತು.

ಮನೋಹರನ ಮನೆಯಲ್ಲಷ್ಟೆ ಮೂರು ದಿವಸಗಳ ಕಾಲ ಅವಳು ಪ್ರಪಂಚವನ್ನು ಮರೆತು ನಲಿದಾಡಿದುದು. ಅಲ್ಲಿಗೂ ಮನೆಗೂ ವ್ಯತ್ಯಾಸ ತುಂಬ. ಅನಂತ ಗೋಖಲೆಯವರ ನಗುವಿನ ಸಂಸಾರ ಅವಳ ಅಂತರಂಗದ ಆಸೆಯನ್ನು ಹೆಚ್ಚಿಸಿದೆ. ಮರ್ಯಾದವಂತ ಜೀವನದ ಅಪೇಕ್ಷೆಯನ್ನು ಇನ್ನಷ್ಟು ಕೆರಳಿಸಿದೆ. ಆದರೆ ತನ್ನ ತಾಯಿ ಅದನ್ನು ತನಗಾಗಿ ಸಾಧ್ಯಮಾಡಿಕೊಟ್ಟಾಳೇ—ಎಂಬ ಭಯ ಮಾತ್ರ ಹೆಚ್ಚಿದೆ. ಅಲ್ಲಿಂದ ಬಂದ ಮೇಲೆಯೂ ತಾಯಿಯೊಡನೆ ಎರಡೆರಡು ಬಾರಿ, ಕಾಲೇಜು ವಿದ್ಯಾಭ್ಯಾಸದ ಮಾತನ್ನಾಡಿದಳು: "ಮಂಜುಳೆ ಕಾಲೇಜಿಗೆ ಹೋಗುತ್ತಾಳೆ; ಊರ್ವಶಿಯೂ ಹೋಗುತ್ತಾಳೆ" ಎಂದಂದಳು. ಆದರೆ ಅವಳಿಂದ "ನಿನಗೆ ಬುದ್ಧಿಯೇ ಇಲ್ಲವಲ್ಲ" ಎಂಬ ಪ್ರತ್ಯುತ್ತರ ಬಂದಿತು.

ಮನೋಹರನ ಆಮಂತ್ರಣದಿಂದಾಗಿ, ನಂದಿನಿಯ ಮದುವೆಯ ಅವಕಾಶ ಅಥವಾ ಹೋಗುವ ಸಂದಿಗ್ಧ, ಅವಳಿಗೆ ತಪ್ಪಿತ್ತು. ಅಲ್ಲಿಗೆ ಮಂಜರಿಯೇನೋ ಹೋಗಿಬಂದಿದ್ದಳು. ಮದುವೆಯ ಸಂಭ್ರಮವನ್ನು ಆಸೆಯಿಂದ ಕಂಡಿದ್ದಳು. ಅದರಿಂದ ತನ್ನ ಮಗಳ ವಿವಾಹದ ಯೋಚನೆ ಅಪ್ರಿಯವಾಗಿ ಕಾಣಿಸಲಿಲ್ಲವಾದರೂ, ತನ್ನ ಪಾಲಿಗೆ ಅದು ಕನಸಿನ ಮಾತು; ಅಲ್ಲದೆ ಸುಖಜೀವನದ ಮಾತಲ್ಲ—ಎಂದು ತೋರಿತ್ತು. ಅಚಲರೂ ಆ ಮದುವೆಗೆ ಬಂದಿದ್ದರು. ಬರಲೇ ಬೇಕಲ್ಲ—ಆಪ್ತರ ಮನೆಯ ಶುಭ ಸಂಭ್ರಮಕ್ಕೆ. ಹಾಗೆ

ಬಂದಾಗ ಎರಡು ದಿನಗಳ ಮೊಕ್ಕಾಮನ್ನು ಮಂಜರಿಯ ಮನೆಯಲ್ಲಿ ಹೂಡಿದ್ದರು. ಈ ಬಾರಿ ಬರುವಾಗ ಪರಮ ಸ್ನೇಹಿತರಾದ ಕೋಡಂಗಿ ನಾಗರಾಜ ಕೊಠಾರಿಗಳನ್ನೂ ತಮ್ಮ ಜತೆಗೆ ಕರೆದುಕೊಂಡು ಬಂದದ್ದರು.

ನಾಗರಾಜಯ್ಯ ಕಾರ್ಕಳಕ್ಕೆ ಸಮೀಪದ, ಕೋಡಂಗಿ ಎಂಬಲ್ಲಿನ ಒಬ್ಬ ಶ್ರೀಮಂತ. ಅವರಿಗೆ ಆಸ್ತಿ,ಸಂಪತ್ತುಗಳು ಧಾರಾಳವಾಗಿಯೇ ಇವೆ;ದುಂದುಗಾರಿಕೆಯೂ ಕಡಿಮೆ ಇರಲಿಲ್ಲ. ಬಹು ಶೋಕೀ ಜನ. ಅವರ ಮೈ ಬಣ್ಣ ಕಪ್ಪಾಗಿದ್ದರೂ ಪುಷ್ಟವಾದ ಶರೀರ; ಮೂವತ್ತೈದು ಸುಮಾರರ ವಯಸ್ಸು. ಮೈಮೇಲೆ ರೇಶ್ಮೆ ಶರಾಯಿ, ರೇಶ್ಮೆ ಶಾಲು ಇಲ್ಲದ ಗಳಿಗೆಯೇ ಇಲ್ಲ. ಕೈಗೆ ಚಿನ್ನದ ಗಡಿಯಾರವಿದೆ. ಕೊರಳಿಗೆ ಚಿನ್ನದ ಸರಪಣಿ. ಸುವಾಸನೆಯ ಎಣ್ಣೆಗಳಿಂದ ತಿದ್ದಿ ತೀಡಿದಂಥ ಕ್ರಾಪ್; ತುಂಡು ಪಾಳೆಯಗಾರರಂತೆ ಕಾಣಿಸುವ ಆತ್ಮಪ್ರತಿಷ್ಠೆ; ಠೀವಿ. ಹಿರಿಯರಿಂದ ಬಂದ ಸಂಪತ್ತಿಗೆ, ಅವರ ವೆಚ್ಚದ ಒಂದೇ ಮುಖವೆಂದರೆ ಶೃಂಗಾರ. ಮನೆತನದಿಂದಲೂ ಅಜಿಲರಿಗೆ ಅವರು ಗೊತ್ತಿದ್ದವರು;ನಾಲ್ಕೂರು ತಿರುಗುವವರು. ಹೀಗಾಗಿ ಅಜಿಲರ ಸ್ನೇಹದಿಂದ, ಹೊಸ ಗೆಳೆತನವನ್ನು ಸಂಪಾದಿಸುವ ಆಸೆಯಿಂದಲೇ ಬಂದಿದ್ದರು. ಕರ್ಮಧರ್ಮ ಸಂಯೋಗದಿಂದ ಆ ದಿನದ ಶಾಲೆಯ ವರ್ಧಂತಿ ಉತ್ಸವಕ್ಕೂ ಚಿತ್ತೈಸಿದ್ದರು. ಅಲ್ಲೇನೆ—ವಿನತೆಯ ಗಂಡು ಪಾತ್ರವನ್ನು ಕಂಡದ್ದು. ಅನಂತರ—ಹೆಣ್ಣಾಗಿ ದಾರಿಯಲ್ಲಿ ಅಡ್ಡಾಡಿದ ಅವಳನ್ನು ನೋಡಿ ಮರುಳಾದರು. ಆದರೆ ಸಮನಾದ ಪೂರ್ವಪೀಠಿಕೆಯಿಲ್ಲದೆ, ಮುಂದೊತ್ತುವ ಮೂರ್ಖರು ಅವರಲ್ಲ. ಇಂಥ ವಿಷಯಗಳಲ್ಲಿ ನುರಿತ ವ್ಯಕ್ತಿಯಾದ ಅವರು ಮಂಜರಿಯ ಮನೆಗೆ ಬಂದಾಗಲೇ, ಅವಳು ಅಜಿಲರೊಡನೆ ತನ್ನ ಮಗಳ ಅಪೇಕ್ಷೆಯನ್ನು ತಿಳಿಸಿದುದು; ಅವರು ಅವಳಿಗೆ "ನಿನಗೆ ಮರುಳು" ಎಂದದ್ದು. ನಾಗರಾಜಯ್ಯನವರು ಆ ಮಾತುಕತೆಗಳನ್ನು ಕೂಲಂಕಷವಾಗಿ ತಿಳಿದುಕೊಂಡು, ಮತ್ತೊಮ್ಮೆ ಅಲ್ಲಿಗೆ ಹೋಗುವ ನಿಶ್ಚಯ ಮಾಡಿದರು; ಹಾಗೂ ಹೋದರು. ಆ ದಿನ ವಿನತೆ ಮನೆಯಲ್ಲಿಲ್ಲದ ಕಾರಣ ತುಂಬ ನಿರಾಶೆಗೊಂಡು ಮರಳಬೇಕಾಯಿತು.

ವಿನತೆಗೆ, ತನ್ನ ಗೆಳತಿಯರೊಡನೆ, ಮನುವಿನ ಊರಿಗೆ ಹೋಗಿ ಮರಳಿ ಬಂದ ಮೇಲೆ ಹೊತ್ತೆಂಬುದು ಹೋಗುತ್ತಲಿಲ್ಲ. ಮನಸ್ಸಿನ ನಿರಾಶೆ ಕೊನೆಗಾಣುವುದಲ್ಲ. ಆಗಾಗ ಅವಳು ಮಂಜುಳೆಯ ಮನೆಗೆ ಹೋಗಿ ಬರು

ತ್ತಾಳೆ. ಮಾಧವಿಯ ಮನೆಗೆ ಹೋಗಿ ಬರುತ್ತಾಳೆ. ನಿರುತ್ಸಾಹದ ಹರಟೆಯಲ್ಲಿ ಕಾಲ ಕಳೆಯುತ್ತಾಳೆ. ಮನೆಗೆ ಬಂದಳೆಂದರೆ, ಪಿಟೀಲನ್ನು ಹಿಡಿದು ಏನನ್ನಾದರೂ ನುಡಿಸುತ್ತಾಳೆ. ಈಗ ಅಭ್ಯಾಸಕ್ಕೆ ಒಂದೆರಡು ಹೊಸ ಹಾಡುಗಳು ದೊರಕಿವೆ. ಗೋರಿಯವರು ಹಾಡಿದ ಒಂದೆರಡು ಕೃತಿಗಳು ಅವಳ ಮನವನ್ನು ಸೆಳೆದಿದ್ದವು. ನೆನಪಿನಿಂದ, ಹಾಡಿನ ಮಾತುಗಳನ್ನು ಸ್ಮರಿಸಿಕೊಂಡು ರಾಗ ವಿಸ್ತರಿಸುತ್ತಾಳೆ. ಅದರಲ್ಲಿಯೇ ಮನಸ್ಸನ್ನು ತುಂಬಿಸಿಕೊಂಡು ಘಂಟೆ ಘಂಟೆಗಳ ಕಾಲವನ್ನು ಕಳೆಯುತ್ತಾಳೆ. ಮಂಜರಿ, ತಾನು ಆಚೀಚೆ ಸರಿಯಬೇಕಿದ್ದರೆ, ಮಗಳನ್ನು ಕರೆದು ಒಲೆಯ ಮುಂದೆ ಕುಳ್ಳಿರಲು ಹೇಳಿ, ಹೋಗಬೇಕಾಗುತ್ತದೆ. ಮಂಜರಿಗೆ ದಿನವೆಲ್ಲ ಮನೆಯಲ್ಲಿಯೇ ಕುಳಿತು ಕಾಲ ಕಳೆಯುವ ಅಭ್ಯಾಸ ಸಲ್ಲದು. ನಾರ್ಣಸ್ವಯ್ಯನವರ ಮನೆಯಂಥ ಆಚೀಚಿನ ನಾಲ್ಕಾರು ನೆರೆಕರೆಯ ಮನೆಗಳಿಗೆ ಹೋಗಿ, ಹರಟೆಹೊಡೆದು ಬರುವವಳವಳು. ಅಂಥ ಮನೆಗಳಲ್ಲಿ ಒಂದು ಜೈನ ಕುಟುಂಬವೂ ಸೇರಿತ್ತು. ಒಂದು ದಿನ ಅಲ್ಲಿಗೆ ಹೋದಾಗ, ಆ ಮನೆ ಜಗುಲಿಯ ಮೇಲೆ ನಾಗರಾಜಯ್ಯನವರ ಸವಾರಿ ಒಡ್ಡೋಲಗ ಸಹಿತ ಕುಳಿತಿತ್ತು. ಜತೆಗೆ ಇಬ್ಬರು ಸಮವಯಸ್ಕಗೆಳೆಯರಿದ್ದರು. ತಾಂಬೂಲ ಮೆಲ್ಲುತ್ತ, ಲೋಕಾಭಿರಾಮವಾಗಿ ಮಾತುಕತೆ ನಡೆಸುತ್ತಿದ್ದರು. "ಯಾರು? ಮಂಜರಿಯೇ? ಬಾ" ಎಂದು ಅವರಾಗಿಯೇ ಕರೆದರು. "ವೀಳೆಯ ತಿನ್ನುತ್ತೀಯಾ?" ಎಂದು ಅವಳನ್ನು ಕೇಳಿದರು. ಅವರ ಮಾತಿಗೆ ಅನುಕೂಲಿಸಲೆಂದೋ ಏನೋ, "ನಾವೀಗ ಪೇಟೆಗೆ ಹೋಗಿ ಬರುತ್ತೇವೆ" ಎಂದು ಅಲ್ಲಿದ್ದ ಆ ಇಬ್ಬರು ಗೃಹಸ್ಥರು ಹೇಳಿ ಹೊರಟುಹೋದರು. ಆತ್ಮಾಭಿಮಾನದ ಮಾತಿಲ್ಲದೆಯೆ ನಾಗರಾಜಯ್ಯನವರಿಗೆ ಮಾತನಾಡಿಯೇ ಗೊತ್ತಿಲ್ಲ. ಮೂಪಲಿಕೆಯ ಮಾತಿಲ್ಲದೆಯೆ ಸ್ವಪ್ರತಿಷ್ಠೆಯ ಸಂಭಾಷಣೆಗಳು ಅಪೂರ್ಣ. "ಅಜಿಲರು ಬಂದಿದ್ದಾರೋ?" ಎಂದು ಮಾತಿಗೆ ತೊಡಗಿದರು. ಪರ್ಯಾಯವಾಗಿ ಅವರಿಗಿರುವ ಸಂಪತ್ತನ್ನು ಬಣ್ಣಿಸಿದರು: "ಸಾವಿರ ಮುಡಿ ಹುಟ್ಟುವಳಿ, ಆ ಮೇಲೆ ಇಪ್ಪತ್ತುಮೂವತ್ತು ಖಂಡಿ ಅಡಿಕೆಯೆಂದರೆ ಸ್ವಲ್ಪವಾಯಿತೇ? ನನಗೂ ಅಷ್ಟೇ ಇದೆ. ಆದರೆ ನಾನು ಸಂಪಾದನೆಯಲ್ಲಿ ಒಂದು ಕಾಸನ್ನೂ ಉಳಿಸಿದವನಲ್ಲ. ಅಜಿಲರು ವರ್ಷಂಪ್ರತಿ ಸಾವಿರದಲ್ಲಿ ಐನೂರು ಮುಡಿಗಳನ್ನಾದರೂ ಮಾರಿ, ದುಡ್ಡು ಕೂಡಿಸಿಡುತ್ತಿರಬೇಕು. ಯಾರಿಗಾಗಿ ಕೂಡಿಸುವುದೋ ದೇವರಿಗೆ ಗೊತ್ತು" ಎಂದು ಮಾತು ತೊಡಗಿ

ದರು. ಅದನ್ನು ಕೇಳಿ ಮಂಜರಿ ಅಜಿಲರನ್ನು ದೂರದಿದ್ದರೂ, ತನ್ನ ಸಂಸಾರದ ಕಷ್ಟನಿಷ್ಠುರ ಹೇಳಿಕೊಂಡಳು. ಮಗಳ ಮಾತೂ ಬಂದಿತು. ಅದೇ ಬೇಕಿತ್ತು ನಾಗರಾಜಯ್ಯನವರಿಗೆ. "ನಿನಗೆ ಹೇಗೆ ಕಾಣಿಸುತ್ತದೋ! ನೀನು ಯಾರಿಗೆ ಏನು ಮಾತು ಕೊಟ್ಟಿದ್ದೀಯೋ—ನನಗೆ ತಿಳಿಯದು. ಆದರೆ ತಿಂಗಳಿಗೊಂದು ಐವತ್ತು ನೂರು ರೂಪಾಯಿಗಳು ಖರ್ಚು ಅವಳಿಗಾಗಿ ಹೆಚ್ಚಿನದಲ್ಲ. ಕಲಿಯಲೇ ಬೇಕೆಂಬ ಹಟವಿದ್ದರೆ ಕಲಿಯಲಿ; ಬೇಕಾದರೆ ನೀನೂ ಮಗಳೂ ಸೇರಿಯೇ ಒಂದು ಸಣ್ಣ ಬಿಡಾರವನ್ನು ಮಂಗಳೂರಲ್ಲಿ ಮಾಡಿಕೊಂಡಿರಬಹುದು. ಒಬ್ಬಳೇ ಮಗಳಲ್ಲವೆ? ಆ ಮಗಳನ್ನು ಬಿಟ್ಟು ನೀನಾದರೂ ಹೇಗೆ ದಿನ ಕಳೆದೀಯ" ಎಂದರು. ಮಂಜರಿಗೆ ಆ ಮಾತುಗಳು ಆಪ್ಯಾಯಮಾನವಾಗಿ ಕೇಳಿಸಿದವು. ನಾಗರಾಜಯ್ಯನ ಯೌವನದ ಅಪೇಕ್ಷೆ ಸಾಕಷ್ಟು ಔದಾರ್ಯದಿಂದ ಕೂಡಿದ್ದಾಗಿ ಕಾಣಿಸಿತು.

"ನಿಮ್ಮಂತಹರು ದೊಡ್ಡ ಮನಸ್ಸನ್ನು ಮಾಡಿದರೆ, ಅದೊಂದು ಕಷ್ಟವಲ್ಲ. ನಾನೀಗ ಯಾತಕ್ಕೂ ಬಾರದ ಮುದುಕಿ. ಅಂತಹ ನಾನು ಮುದ್ದೂರಿನಲ್ಲಿ ಸತ್ತರೂ ಒಂದೇ; ಮಂಗಳೂರಿಗೆ ಹೋಗಿ ಸತ್ತರೂ ಒಂದೇ. ಇರುವ ನನ್ನ ಮಕ್ಕಳ ಜೀವನ ಸುಖವಾಗಿ ನಡೆದರೆ ಸಾಕು. ಆದರೆ...." ಎಂದು ತುಸು ಅನುಮಾನಿಸಿ "ನಮ್ಮ ವಿನು ಏನು ಹೇಳುತ್ತಾಳೋ" ಎಂದಳು.

"ವಿನು ಎಂದು ಅವಳ ಹೆಸರೋ?"

"ವಿನತೆ ಎಂದು ಹೆಸರಿರಿಸಿದ್ದು. ಅದೀಗ-ಕರೆದು ಕರೆದು ವಿನು ಆಗಿದೆ. ಅವಳ ಮನಸ್ಸೇ ಒಂದು ತರ. ನನಗೂ ಅವಳು ಕಲಿಯುವುದರಲ್ಲಿ, ಮಾಡುವುದರಲ್ಲಿ ಇಷ್ಟವಿಲ್ಲ. ಸಾಕಷ್ಟು ಸಂಗೀತವನ್ನು ಕಲಿತಿದ್ದಾಳೆ. ನನ್ನ ಮಾವನಿಂದ ನಾನು ಕಲಿತಷ್ಟನ್ನು ಅವಳಿಗೆ ಹೇಳಿಕೊಟ್ಟಿದ್ದೇನೆ. ಇನ್ನೇನಾಗಬೇಕು- ನಮ್ಮ ಹೆಣ್ಣುಮಕ್ಕಳಿಗೆ? ಅವಳಿಗೆ ಮಾತ್ರ ಇಂಗ್ಲಿಷ್ ಕಲಿಯಬೇಕು, ಚಾಕರಿ ಮಾಡಬೇಕು-ಎಂದು ಏನೇನೋ ಹುಚ್ಚು ಆಸೆಗಳೆಲ್ಲ ಇದೆ."

"ಇಂಗ್ಲಿಷ್ ಕಲಿಯುವುದಂತು ಸಮವೆ; ಅದರಿಂದೇನೂ ಬಾಧಕವಿಲ್ಲ. ಚಾಕರಿ ಗೀಕರಿ ಮಾಡುವುದರಲ್ಲಿ ಅರ್ಥವಿಲ್ಲ. ಸಮನಾದವರು ಸಿಕ್ಕಿದರೆ ಚಾಕರಿಗೆ ಯಾತಕ್ಕೆ ಸೇರಬೇಕು? ನೀನು ಹೀಗೆಯೇ ಎಂದು ನನಗೆ ಮಾತುಕೊಡಬೇಕಾಗಿಲ್ಲ. ಮಗಳನ್ನು ವಿಚಾರಿಸಿ ತಿಳಿದುಕೊ. ಕೋಡಂಗಿ ನಾಗರಾಜಯ್ಯ ಹ್ಯಾಗೆ ಏನು ಎಂದು ಊರವರನ್ನೂ ಕೇಳಿ ತಿಳಿದುಕೋ. ಆ

ಮೇಲೆ ನಿನಗಿ ಸಮನೆಂದು ಕಂಡರೆ ಅವಳಿಗೆ ಹೇಳು. ನಿನ್ನನ್ನು ಬಿಟ್ಟು ನಿನ್ನ ಮಗಳಿದ್ದಾಳೆಯೋ?" ಎಂದು ಉಪದೇಶಿಸಿದರು. ಮನೆಯೊಳಗಿಂದ ಹೆಂಗುಸೊಬ್ಬಳು ಆ ಹೊತ್ತಿಗೆ ಹೊರಕ್ಕೆ ಬಂದಳು. "ಏನು ಬಂದೆ ಮಂಜರಿ?" ಎಂದು ಅವಳು ನಡುವೆ ಬಾಯಿ ಹಾಕಿ, ಅವರ ಸಂಭಾಷಣೆಗೆ ಕೊನೆಯನ್ನು ತಂದಳು. ಆಗ ಮಂಜರಿ "ಪುರುಸೊತ್ತಿದ್ದಾಗ ನಮ್ಮ ಮನೆಗೂ ಬಂದು ಹೋಗಿ" ಎಂದು ತಾನಾಗಿ ಆಮಂತ್ರಣವನ್ನಿತ್ತು, ಆಶಾ ಸ್ವಪ್ನವನ್ನು ಕಟ್ಟಿಕೊಂಡು ಹೊರಟುಹೋದಳು. ನಾಗರಾಜಯ್ಯನವರು ತಮ್ಮಲ್ಲಿಗೆ ಎಂದು ಬರುತ್ತಾರೆಂದು ಮೊದಲೇ ವಿಚಾರಿಸಲಿಲ್ಲವಾದರೂ, ಅವರು ಬರುವುದಕ್ಕೆ ಮುಂಚಿತವಾಗಿ ವಿನತೆಯೊಡನೆ ಪೂರ್ವ ಪ್ರಸ್ತಾವನೆಯನ್ನು ಹೂಡಬೇಕೆಂಬ ಆಸೆಯಿಂದಲೇ ಅವಳು ಮನೆಗೆ ಹೋದಳು. ಆದರೆ ಆ ದಿನವೆಲ್ಲ, ಸಮನಾಗಿ ಕುಳಿತು, ಉಪಾಯವಾಗಿ ಮಾತನಾಡುವ, ಅವಕಾಶ ದೊರೆಯಲಿಲ್ಲ. ಅದಕ್ಕೆ ಮರುದಿನದ ತನಕ ಕಾಯ ಬೇಕಾಯಿತು.

ಎರಡನೆಯ ದಿನ ನಾಗರಾಜಯ್ಯನವರು ಒಬ್ಬ ಆಳಿನ ಮೂಲಕ "ಇವತ್ತು ಬರಲು ನನಗೆ ಪುರುಸೊತ್ತಿಲ್ಲ. ಮಂಗಳೂರಿಗೆ ಹೋಗಬೇಕಾಗಿದೆ. ನಾಳೆ, ನಾಡಿದು ಬರುತ್ತೇನೆ" ಎಂದು ಹೇಳಿ ಕಳುಹಿಸಿದುದಲ್ಲದೆ, ಸುಮಾರು ನೂರು ರೂಪಾಯಿ ಬೆಲೆ ಬಾಳುವ ಎಳೆನೀಲ ಬಣ್ಣದ, ಜರತಾರಿ ಸೀರೆಯೊಂದನ್ನು, ಮನೆಗೆ ಕಾಣಿಕೆಯಾಗಿ ಕಳುಹಿಸಿದರು. ಆಳು ಅದನ್ನು ತಂದಾಗ ವಿನತೆ ಮನೆಯಲ್ಲಿರಲಿಲ್ಲ. ಮಂಜರಿಯೆ ಅದನ್ನು ಸ್ವೀಕರಿಸಿದವಳು. ಒಡೆದು ನೋಡುವ ಮುಂಚೆಯೆ ಅದೇನೆಂಬ ಸೂಚನೆ ಅವಳಿಗಾಗಿತ್ತು. ನೋಡಿದಾಗ, ತನ್ನ ಜವ್ವನಿಕೆಯ ದಿನಗಳ ನೆನಪಾದುವು. ಅದೇ ಬಗೆಯ ಗೌರವ ಅವಳಿಗೂ ನಾಯಕರಿಂದ ಸಂದಿತ್ತು. ಮಗಳಿಗೆ ಅದನ್ನು ತೋರಿಸಿದರೆ, ಅದನ್ನು ಮೆಚ್ಚುವ ಬುದ್ಧಿ ಬಂದೀತೆಂದು ಎಣಿಸಿಕೊಂಡಳು. ಆದರೆ ವಿನತೆ ಮಾತ್ರ ಆ ದಿನ ಮನೆಗೆ ಬಂದವಳು, ಊಟ ಮುಗಿಸಿ, ಪಿಟೀಲನ್ನು ನುಡಿಸಲು ಕುಳಿತುಕೊಂಡವಳು, ತಾಯಿಯ ಬಳಿಗೆ ಹೋಗಲಿಲ್ಲ. ಆದುದರಿಂದ ತಾಯಿ ರಾಮಕೃಷ್ಣನ ಮೂಲಕ "ಇದನ್ನು ಅಕ್ಕನಿಗೆ ಕೊಡು" ಎಂದು ಕೊಟ್ಟು ಕಳುಹಿಸಿದಳು. ಅವಳ ಮನಸ್ಸಿನ ಅಳುಕೇ ಆ ಬಗೆಯ ರಾಯಭಾರಿತ್ವಕ್ಕೆ ಕಾರಣವಾಗಿತ್ತು. ವಿನತೆ ಅದನ್ನು ಬಿಡಿಸಿ ನೋಡಿದಳು. ಒಂದು ಬಾರಿ ಆಸೆಯಿಂದ ನೋಡಿ ನಕ್ಕಳು. ಮರುಕ್ಷಣ ಏನೋ ಹೊಳೆದು "ನನಗಿದೆಲ್ಲ ಬೇಡ; ಈ

ಸೀರೆಗೆ ಖರ್ಚು ಮಾಡುವುದಕ್ಕಿಂತ, ಕಾಲೇಜಿಗೆ ಓದಲು ದುಡ್ಡು ಕೊಟ್ಟರೆ ಸಾಕು" ಎಂದು ಹೇಳಿ "ಅಮ್ಮನ ಹತ್ತಿರ ಅದನ್ನು ಅಂಗಡಿಗೆ ಹಿಂದಕ್ಕೆ ಕೊಡಲು ಹೇಳು" ಎಂದು ಕಳುಹಿಸಿದಳು. ತಾಯಿ ಮಕ್ಕಳ ಸಂಭಾಷಣೆ ಬೆಳಗ್ಗೆ ಮುಂದುವರಿಯಿತು. "ಅದನ್ನು ನಾನು ದುಡ್ಡು ಕೊಟ್ಟುಕೊಂಡದ್ದಲ್ಲ. ಕೋಡಂಗಿ ನಾಗರಾಜಯ್ಯನವರು ಕಳುಹಿಸಿದ್ದು. ನೀನು ಕಾಲೇಜಿಗೆ ಹೋಗಬಹುದು. ಅವರು ಎಲ್ಲ ಖರ್ಚು ವಹಿಸುತ್ತಾರಂತೆ—ಮಂಗಳೂರಲ್ಲಿ ಬಿಡಾರ ಹೂಡುವುದಕ್ಕೂ ಅವರು ಸಿದ್ಧ" ಎಂದು ಆಶಾಪೂರಿತವಾದ ಸಂಭಾಷಣೆಗೆ ಕುಳಿತಳು. ಅವರ ಸಂಪತ್ತನ್ನು ಬಣ್ಣಿಸಿದಳು. ಅವರ ವಿಷಯವಾಗಿ ತಾನು ಕೇಳಿ ತಿಳಿದ ಸಮಾಚಾರಗಳನ್ನೆಲ್ಲ ಹೇಳಿದಳು. ಹೆಚ್ಚಿನ ಆಸೆಯಿಂದ ಮಗಳ ಪ್ರತ್ಯುತ್ತರವನ್ನು ನಿರೀಕ್ಷಿಸಿದಳು. "ಅಮ್ಮ, ನಾನು ಸುಖವಾಗಿರಬೇಕೆಂಬುದು ನಿನ್ನ ಇಷ್ಟವಲ್ಲ. ಮರ್ಯಾದೆಯಿಂದಿರಕೂಡದು ಎಂಬುದೇ ನಿನ್ನ ಅಪೇಕ್ಷೆ. ಏನೋ ದುರ್ದೈವದಿಂದ ನಿನ್ನ ಬಾಳು ಹಾಗಾಯಿತು. ಅಂಥ ಬಾಳು ನನಗೆ ಬೇಕಿಲ್ಲ; ನೀನು ನನ್ನ ಸುಖ ಅಪೇಕ್ಷಿಸುವಿಯಾದರೆ ಹೀಗೆ ಹೇಳಕೂಡದು" ಎಂದು ನುಡಿದು, ಖಿನ್ನ ಹೃದಯದಿಂದ ಮನೆಬಿಟ್ಟಳು. ಮಂಜುಳೆಯಲ್ಲಿಗೆ ಹೋದಳು. ಅಲ್ಲಿ ಹೋದರೂ ಅವಳ ಮನಸ್ಸು ಸಮಾಧಾನಗೊಳ್ಳಲಿಲ್ಲ. ಯಾವ ಹರಟೆಗೂ ಮನಸ್ಸು ಒಗ್ಗದಾಯಿತು. ತನ್ನ ದುಃಖವನ್ನು ತೋಡಿಕೊಳ್ಳಲಾರಳು. ಅಲ್ಲಿದ್ದು ಸಮಾಧಾನ ಬಾರದೆಯೆ, ತನ್ನ ಆಸೆ ತೀರಿಸುವುದಕ್ಕಾಗಿ ಮುಖ್ಯೋಪಾಧ್ಯಾಯರಲ್ಲಿಗೆ ಹೋದಳು. ಅವರು ತಮ್ಮ ಮನೆಯಲ್ಲಿ ವಿರಾಮಶೀಲರಾಗಿ ಕುಳಿತಿದ್ದರು; "ಏನು ಬಂದೆ?" ಎಂದು ವಿಚಾರಿಸಿದರು.

"ನಾನು ಪಾಸಾದೇನೆಯೇ?"

"ನಿನಗೂ ಅನುಮಾನವೇ? ಚೆನ್ನಾಗಿ ಮಾಡಿರಲಿಲ್ಲವೇ? ನೀನು ಪಾಸಾಗದಿದ್ದರೆ ಇನ್ಯಾರು ಆಗಬೇಕು?" ಎಂದರು ಭೀಮರಾಯರು.

"ಹಾಗಲ್ಲ, ಪಾಸಾದರೆ ಏನು ಮಾಡಬೇಕೆಂಬುದೇ ನನಗೆ ತಿಳಿಯುವುದಿಲ್ಲ. ಕಾಲೇಜಿಗೆ ಹೋಗುವ ಮನಸ್ಸು ನನಗೆ. ನನ್ನ ತಾಯಿ ಹಣವಿಲ್ಲ ಅನ್ನುತ್ತಾಳೆ; ಏನು ಮಾಡುವುದೆಂದು ತಿಳಿಯುವುದಿಲ್ಲ.

"ಕಲಿತರೆ ಒಳ್ಳೆಯದೇ ಅಲ್ಲವೆ? ಬಿ. ಎ. ತನಕ ಓದಿ ಒಬ್ಬ ಉಪಾಧ್ಯಾಯಿನಿ ಆಗಬಹುದು. ಫ್ರೀಶಿಪ್ ನಿನಗೆ ದೊರೆಯುವುದು ಕಷ್ಟವಾಗಲಾರದು. ಮಂಗಳೂರಿನಲ್ಲಿ ಊಟ, ಪುಸ್ತಕಗಳ ಬಗ್ಗೆ ಸ್ವಲ್ಪ ಹಣ ಬೇಕಾ

ದೀತು. ತಿಂಗಳಿಗೆ ನಾಲ್ಕೈದು ರೂಪಾಯಿಗಳಂತೆ ನಾನು ಕೊಟ್ಟೇನು."

"ತಿಂಗಳಿಗೊಂದು ಮೂವತ್ತು ನಾಲ್ವತ್ತು ರೂಪಾಯಿಗಳಷ್ಟಾದರೂ ಬೇಡವೇ? ಫ್ರೀಶಿಪ್ ಬಂದರಾಯಿತು; ಬಾರದಿದ್ದರೆ ಹೀಗೆ ಕಷ್ಟ."

"ಒಂದು ನಾಲ್ಕು ಮಂದಿಯಲ್ಲಿ ಸಹಾಯ ಕೇಳಿ, ಏನಾದರೂ ಮಾಡಬಹುದಲ್ಲ" ಎಂದು ಬೋಧಿಸಿದರು. ಆ ಬೋಧನೆಯನ್ನು ಕೇಳಿ ಆಗಷ್ಟೆ ಅವಳಿಗೆ ಸಮಾಧಾನವಾದರೂ, ಮನೆಗೆ ಬಂದಾಗ ಅದು ಅಸಾಧ್ಯದ ಮಾತೆನಿಸಿತು. ತಾನು ನಾಲ್ಕು ಜನರಲ್ಲಿ ಸಹಾಯ ಕೇಳಬಹುದು. ಆ ಜನರು ಹಣ ಕೊಡಲೂ ಬಹುದು. ಕೊಡುವವರ ಮನಸ್ಸು ಯಾವ ತೆರನದೋ? ಅದರಿಂದ ತಾನು ತುಂಬ ಕಷ್ಟಕ್ಕೆ ಗುರಿಯಾದೇನು. ಮದುವೆಯು ರಕ್ಷಣೆ ದೊರೆತು ತನಗೆ ಪಾರಾಗುವುದೊಂದೇ ದಾರಿ. ಓದಿನ ಹಂಬಲ ಬಿಡಬೇಕಾದೀತು—ಎಂದೆಲ್ಲ ತೋರಿತು. ತಾಯಿಯ ಸಹಾಯ ಅದಕ್ಕಿಲ್ಲ. ಹಿರಿಯ ನಾರ್ಣಪ್ಪಯ್ಯನವರು, ನಿನ್ನ "ಯೋಚನೆ ಒಳ್ಳೆಯದು" ಎನ್ನುತ್ತಾರೆಯೇ ಹೊರತು, ಮುಂದೇನೂ ಹೇಳುವುದಿಲ್ಲ. ಸಹಾಯಮಾಡಲಲ್ಲವರ ಪಾಡು ಹಾಗಾದರೆ ತಾನೊಬ್ಬಳೇ ಏನು ಮಾಡಿಯೇನು—ಎಂಬ ಭಯಕ್ಕೊಳಗಾದಳು.

ಆ ಸಂಜೆ ತುಂಬ ನಿರಾಶೆಯ ಮುಖಮಾಡಿಕೊಂಡು ಕೊಟಡಿಯಲ್ಲಿ ಕುಳಿತಿದ್ದಳು. ತನ್ನೆಲ್ಲ ದುಃಖಗಳಿಗೆ ತಮ್ಮ ರಾಮಕೃಷ್ಣನನ್ನು ಪಾಲುಗಾರನನ್ನಾಗಿ ಮಾಡಿಕೊಳ್ಳಲೇ? ಅವನಿಗೆ ಹೇಳಿ ಏನು ಪ್ರಯೋಜನ? ತನ್ನ ಚಿಂತೆ ಅವನ ಮೇಲೇಕೆ—ಎಂದೆಲ್ಲ ಯೋಚಿಸಿ ಮೂಕಳಾದಳು. ಆ ಗಳಿಗೆಯಲ್ಲಿ-ಬೀದಿಯ ಆಳೊಬ್ಬ ಒಂದು ಪೆಟ್ಟಿಗೆಯನ್ನೂ, ಹಾಸಿಗೆಯ ಹೊರೆಯನ್ನೂ ಹೊತ್ತು ತಂದು, ಅವರ ಮನೆಯ ಜಗುಲಿಯ ಮೇಲೆಯೇ ಇಳಿಸಿದ. ಜತೆಗೆ, ಬಂದ ಗಂಡಹೆಂಡಿರೆಂದು ಕಾಣುವ ಆ ಇಬ್ಬರೊಡನೆ "ಮಂಜರಿಯಮ್ಮನ ಮನೆ ಇದೇನೆ" ಎಂದು ಹೇಳಿ, ಕೂಲಿ ಇಸಕೊಂಡು ಹೊರಟುಹೋದ. ಬಂದವರು ಮುಖ ಮುಖ ನೋಡಿದರು. ಹೊರಗಡೆ ಯಾರೂ ಇದ್ದಿರಲಿಲ್ಲ. ಮನೆಯೊಡತಿ ಅಲೆದಾಟಕ್ಕೆ ಹೋಗಿದ್ದಳು. ರಾಮಕೃಷ್ಣ ಆಟಕ್ಕೆ ಹೋಗಿದ್ದ. ವಿನತೆಯ ಕಿವಿಗೆ ಅವರಾಡಿದ "ಹೌದೋ ಅಲ್ಲವೋ? ಅಜ್ಜಿಯ ಮನೆ ಇದು ಆಗಿದ್ದರೆ ಸರಿ—ಇಲ್ಲವಾದರೆ? ಇಲ್ಲವಾದರೆ ಇನ್ನೆಲ್ಲಿಗೆ ಹೋಗಬೇಕು?" ಎಂಬ ಮಾತು ಕೇಳಿಸಿತು. ಅವಳು ಧಾವಿಸಿ ಹೊರಕ್ಕೆ ಬಂದಳು. ಎದುರು ನಿಂತಿದ್ದವರು ಇಬ್ಬರೂ ಹೊಸಬರೇ; ಆ ಊರಿಗೇನೇ ಹೊಸಬರು. ಒಬ್ಬ ಸುಮಾರು

ಇಪ್ಪತ್ತೆಂಟು-ಮೂವತ್ತು ವಯಸ್ಸಿನ ತರುಣನಾಗಿದ್ದ. ಮೋಟರಿನ ಧೂಳಿಲ್ಲ ದಿದ್ದರೆ ತಕ್ಕಷ್ಟು ಸುಂದರನಾಗಿಯೇ ಕಾಣಿಸುತ್ತಿದ್ದ. ಹುಡುಗಿ ಅವನಷ್ಟೇ ಚೆಲುವೆ. ತೆಳ್ಳಗಿನ ಜೀವ; ಕೈಮೈಗಳ ತುಂಬ ಆಭರಣಗಳಿದ್ದವು. ವಿನತೆಗೆ ಅವರಾರೆಂದು ಹೊಳೆಯದೆಯೆ "ಯಾರು ಬೇಕು ನಿಮಗೆ? ಯಾರ ಮನೆ ಬೇಕಿತ್ತು?" ಎಂದು ವಿಚಾರಿಸಿದಳು.

"ಮಂಜರಿಯಮ್ಮನ ಮನೆ ಇದೇ ಅಲ್ಲವೆ?"

"ಹೂಂ, ಹೌದು. ನಿಮಗೆಲ್ಲಾಯಿತು?"

"ನೀನು ಅವಳ ಮಗಳೇ?" ಎಂದು ಆ ತರುಣ ಕೇಳಿದ. ಅವಳ 'ಅಹುದೆ'ಂಬ ಉತ್ತರ ಕೇಳಿ, ತನ್ನ ಮಡದಿಯನ್ನು ಸಂಬೋಧಿಸಿದ: "ರಾಜಿ, ಅಜ್ಜಿಯನ್ನೂ ನಾನು ಕಂಡಿಲ್ಲ. ಕಂಡಿದ್ದರೆ ಸಣ್ಣ ಮಗುವಾಗಿರುವಾಗ ಕಂಡಿ ದ್ದೇನೋ ಏನೋ. ಇವಳಿಗೂ ನನ್ನ ಗುರುತು ಸಿಗಲಾರದು" ಎಂದು, ವಿನತೆಯನ್ನು ನೋಡಿ "ನೀನು ನನಗೆ ಚಿಕ್ಕಮ್ಮನಾಗಬೇಕು"ಎಂದ. ಅವಳೂ ನಕ್ಕಳು, ಅವನೂ ನಕ್ಕ. "ಎಲ್ಲಾಯಿತು ನಿಮಗೆ?" ಎಂದು ತಿರುಗಿ ವಿನತೆ ಕೇಳಿದಳು. ಅವಳ ನೆನವರಿಕೆಯಲ್ಲಿ, ಯಾವ ಬಾದರಾಯಣ ಸಂಬಂಧದ ನೆನಪೂ ಅವಳಿಗೆ ಹೊಳೆಯದೆ ಹೋಯಿತು. ಹಾಗೆಂದು ಮಾತನಾಡು ವವನನ್ನು ನಿರಾಕರಿಸುವುದೇ? ಅವರನ್ನೇ ತಿರುಗಿ ಕೇಳಿದಳು. ಅಷ್ಟಕ್ಕೆ ಸುಮ್ಮನಿರುವುದು ಒಳ್ಳೆಯದಲ್ಲವೆಂದು, ಚಾಪೆ ಹಾಸಿದಳು; ಕಾಲು ತೊಳೆ ಯಲು ನೀರು ಕೊಟ್ಟಳು. 'ಬಾಯಾರಿಕೆ!' ಎಂದಳು. 'ಬೇಡ' ಎಂಬ ಉತ್ತರ ಬಂದಿತು. "ಅಮ್ಮ ಎಲ್ಲಿ ಹೋಗಿದ್ದಾಳೆಂದು ಗೊತ್ತಿಲ್ಲ. ತಿಳಿದಿದ್ದರೆ ಕರೆದು ತರುತ್ತಿದ್ದೆ" ಎಂದಳು. ಬಂದ ತರುಣ ಮಾತಿಗೆ ತೊಡಗಿದ: "ನಮಗೆ ಭಟ್ಕಳ ವಾಯಿತು. ನಮಗೆ ಎಂದರೆ ನನಗೆ; ಇವಳು ನನ್ನ ಹೆಂಡತಿ–ರಾಜೀವಿ. ಇವಳು ಕಾರವಾರದವಳು. ಕಳೆದ ತಿಂಗಳಷ್ಟೆ ನಮಗೆ ಮದುವೆಯಾದುದು. ನನ್ನ ತಾಯಿಯ ತಾಯಿ ಒಬ್ಬಳೇನೇ ಇರುವುದು ನನಗೆ; ಅವಳ ಒಬ್ಬಳೇ ತಂಗಿ ನಿನ್ನ ತಾಯಿಯಂತೆ. ಅಂದರೆ ನನ್ನ ಅಜ್ಜಿ ಹೇಳಿದ್ದು. ನಿಮ್ಮ ಮೂಲದ ಊರು ಮನೆ, ಭಟ್ಕಳವಲ್ಲವೇ?" ಎಂದ. ಆಗ ವಿನತೆಗೆ ಹಳೆಯ ನೆನಪೊಂದು ಸ್ಮರಣೆಗೆ ಬಂದಿತು. ಅವಳು ತಾಯಿಯ ಬಾಯಿಂದ "ತನಗೊಬ್ಬಳು ಅಕ್ಕ ನಿದ್ದಾಳೆ ಭಟ್ಕಳದಲ್ಲಿ; ಮಾವನ ಜತೆಗೆ ತನ್ನ ತಾಯಿ, ಎಳೆಯಳಾಗಿರುವಾಗ ಕುಂದಾಪುರಕ್ಕೆ ಬಂದಳು. ಅಲ್ಲಿಂದ ವಿಧಿಯು ಅವಳನ್ನು ಮುದ್ದೂರಿಗೆ ಕರೆ

ತಂದಿತು. ಈಗ ಅವಳಿಗಿಂತಲೂ ಹತ್ತಿಪ್ಪತ್ತು ವರ್ಷಗಳ ಅಂತರವಿರುವ ತನ್ನ ಅಕ್ಕ ಬದುಕಿದ್ದಾಳೆಯೋ ಇಲ್ಲವೋ ಎಂಬುದು ಸಹ ಗೊತ್ತಿಲ್ಲ' ಎಂದ ಕತೆ. ಎಂದೋ ಒಂದು ದಿವಸ ಮಂಜರಿ ಮಗಳೊಡನೆ ತನ್ನ ಪೂರ್ವಜರನ್ನು ಕುರಿತಾಡಿದ ಮಾತುಗಳು ವಿನತೆಯ ಸ್ಮರಣೆಗೆ ಬಂದುವು. ತನಗೆ ಬಂಧುಗಳಿಲ್ಲ ಎಂದು ಆಕೆ ನೆನೆದಾಗ ಈಗ ತನಗೆ 'ಮಗ'ನೊಬ್ಬನಿದ್ದಾನೆ; ದೊಡ್ಡಮ್ಮನೊಬ್ಬಳಿದ್ದಾಳೆ, ಆ 'ಮಗ' ಮದುವೆಯಾಗಿ ಬಂದಿದ್ದಾನೆ—ಎಂದು ತೋರಿ ಅದೆಲ್ಲ ಸ್ವಪ್ನಪ್ರಾಯವಾಗಿಯೇ ಕಾಣಿಸಿತು. ಆದರೂ ಅದು ಕಣ್ಣೆದುರಿಗೆ ಕಾಣಿಸುತ್ತಿರುವ ಚಿತ್ರ. ತುಸು ಮೊದಲು, ಮುಗ್ಗರಿಸಿ ಮುಬ್ಬಾದ ವಿನತೆಯ ಮನಸ್ಸು, ಈಗ ನೆರೆ ತುಂಬಿದ ಹಳ್ಳದಂತೆ ದಂಡೆ ಮೀರಿ ಹರಿಯತೊಡಗಿತು. ಹೋಗಿ ಆತನನ್ನು ತಬ್ಬಿದಳು. ಅತ್ತಿಗೆಯನ್ನೂ ತಬ್ಬಿಕೊಂಡಳು. ಕಣ್ಣಲ್ಲಿ ಹನಿಯುದುರಿತು. ಯಾವುದೋ ಒಂದು ಶುಭ, ಹೀಗೆ ಆಕಸ್ಮಿಕವಾಗಿ, ಅನಿರೀಕ್ಷಿತವಾಗಿ ತನ್ನ ಪಾಲಿಗೆ ಬಂದೊದಗಿದೆ ಎಂಬ ಭಾವನೆ ಅವಳಿಗುಂಟಾಯಿತು. ತನ್ನ ಹೆಸರನ್ನು ಅವರಿಗೆ ತಿಳಿಸಿದಳು. ರಾಜೀವಿಯನ್ನು ಒಳಕ್ಕೆ ಕರೆದೊಯ್ದಳು. ಉತ್ಸಾಹ ತುಂಬಿ 'ರಾಮಕೃಷ್ಣಾ' ಎಂದು ತಮ್ಮನನ್ನು ಕೂಗಿ ಕರೆದಳು. ಕೂಗಿಗೆ ಸಮನಾಗಿ ಆತನೂ ಬಂದ. ತಾಯಿಯನ್ನು ಹುಡುಕಿ ತರಲು ಅವನನ್ನು ಕಳುಹಿಸಿದಳು. ಅವಳು ಮನೆಗೆ ಬರುವುದರೊಳಗಾಗಿ, ಬಂದವರಿಗೆ ಕಾಫಿಯನ್ನು ಮಾಡಿಕೊಟ್ಟಳು. ಅವರ ಕಳವಳ, ಅನುಮಾನಗಳನ್ನು ಬಗೆಹರಿಸಿದಳು.

ಮುಂದೆ ಹತ್ತೆಂಟು ನಿಮಿಷಗಳಲ್ಲಿ ರಾಮಕೃಷ್ಣ ತನ್ನ ತಾಯಿಯನ್ನು ಕರೆದುಕೊಂಡು ಬಂದ. ಅವಳ ಪಾಲಿಗೂ ಅಷ್ಟೇ ಸಂತೋಷ, ಆಶ್ಚರ್ಯಗಳುಂಟಾದುವು. ಆ ರಾತ್ರಿ ಭೋಜನಾನಂತರ ಮಂಜರಿ ಅವರಿಗೆ—ತನ್ನ ಸಂಸಾರದ ದೋಣಿಯು ತೇಲಿ ಬಂದ ಕಥೆಯನ್ನು ವಿವರವಾಗಿ ಹೇಳಿದಳು. ತನ್ನ ಅಕ್ಕನ ಸಂಗತಿ ವಿಚಾರಿಸಿದಳು. 'ಅಕ್ಕ ಬದುಕಿದ್ದಾಳೆ; ಮುದುಕಿ; ಆದರೂ ಇನ್ನೂ ಜೀವ ಹಿಡಿದು ಬದುಕಿದ್ದಾಳೆ. ಈ ವೊಮ್ಮಗ ಮಂಜುನಾಥ ಕಣ್ಣೆದುರಿಗೆ ನಿಂತಿದ್ದಾನೆ' ಎಂದು ಕಂಡು ತುಂಬ ಹರ್ಷಪಟ್ಟಳು. ಅಕ್ಕನನ್ನು ಕುರಿತಾದ ಆಸೆ ತಳೆದಳು. "ನೀನವಳನ್ನು ಕರೆದುಕೊಂಡು ಬರಲಿಲ್ಲವೇಕೆ"ಂದು ಮಂಜುನಾಥನನ್ನು ಪ್ರಶ್ನಿಸಿದಳು. ಅವನ ಮದುವೆಯ ಕಥೆ ಕೇಳಿದಳು. 'ಅಕ್ಕ ಸಾಯುವುದರೊಳಗೆ ಅವಳನ್ನು ಹೋಗಿ ನೋಡುವೆ'

ನೆಂಬ ಭರವಸೆಯನ್ನೂ ಕೊಟ್ಟಳು. ಅವರೊಡನೆ ಏನೇನೋ ಹರಟಿದಳು. ಆ ದಿನ, ವಿನತೆಯೊಂದು ಕ್ಷಣಕ್ಕಾದರೂ ಬಂದವರನ್ನು ಬಿಟ್ಟು ಕದಲಲಿಲ್ಲ. ಅವಳಿಗೆ ಈ ತನಕ ತಿಳಿಯದ, ತನ್ನ ತಾಯಿಯ ಬಾಳಿನ ಇನ್ನೊಂದು ವಿಚಿತ್ರ ಇತಿಹಾಸ ಅವಳಿಂದಲೇ ವಿಶದವಾಗಿ ಕೇಳುವ ಅವಕಾಶ ದೊರೆಯಿತು.

ಮಂಜುನಾಥ ಮುಂಬಯಿಯಲ್ಲಿ ಒಬ್ಬ ನೌಕರನಾಗಿದ್ದಾನೆ. ನೌಕರಿಗೆ ಹೋದ ರಾಜೀವಿಯ ಗುರುತು ಅವನಿಗಾದುದು ಅಲ್ಲೇ. ಅವರಿಬ್ಬರೂ ಮೊನ್ನೆ ತಮ್ಮ ಊರಿಗೆ ಬಂದು ಲಗ್ನವಾದರು—ಎಂದು ತಿಳಿದಾಗ ತನಗೂ ಅದು ಸಾಧ್ಯ, ತಾನು ಹಾಗೆಯೇ ಮಾಡುವವಳು, ಬಾನು ಕಡಿದು ಬಿದ್ದರೂ ತಾನು ಬೇರೆ ದಾರಿ ಹಿಡಿಯುವವಳಲ್ಲ—ಎಂಬ ಆತ್ಮವಿಶ್ವಾಸ ವಿನತೆಗೂ ಉಂಟಾಯಿತು. ಆದುದರಿಂದಲೇ ಆ ಬಂಧುಗಳಿಬ್ಬರೂ ತಮ್ಮ ಮನೆಗೆ ಬಂದುದು ಒಂದು ಹೆಚ್ಚಿನ ಶುಭ ಶಕುನವಾಗಿ ಅವಳಿಗೆ ಕಾಣಿಸತೊಡಗಿತು. ಈ ತನಕ ಜೀವನದಲ್ಲಿ ಕವಿದಿದ್ದ ಯಾವುದೋ ಬಗೆಯ ಶೂನ್ಯ ಈ ಘಟನೆಯಿಂದ ಮುಚ್ಚಿಕೊಂಡಂತಾಯಿತು.

ಮಂಜುನಾಥ ತನ್ನ ಅಜ್ಜಿಯ ಅಪೇಕ್ಷೆಯನ್ನು ಪೂರೈಸುವುದಕ್ಕೇನೆ ಈ ಅನ್ವೇಷಣೆಗೆ ಹೊರಟವನು. ಆತ ಊರಿಗೆ ತನ್ನ ಮದುವೆಗಾಗಿ ಬಂದಿದ್ದ. ಬಂದೊಂದು ವಾರದಲ್ಲಿ ಮದುವೆಯಾಯಿತು. ಮೊದಲಿನಿಂದಲೂ ಅವನ ಅಜ್ಜಿಯು "ನನ್ನ ಮಂಜಿ ಬದುಕಿದ್ದಾಳೋ ಸತ್ತಿದ್ದಾಳೋ ಎಂದು ಹುಡುಕಲಾರದ ನೀವೆಲ್ಲರು ಗಂಡುಗಳು ಕುಲದಲ್ಲಿ ಇದ್ದರೇನು? ಇಲ್ಲದಿದ್ದರೇನು?" ಎಂದೆನ್ನುತ್ತಿದ್ದ ದುಃಖದ ಮಾತಿನ ನೆನಪಾಯಿತು. ಆತ ತನ್ನ ಮದುವಣಗಿತ್ತಿಯನ್ನು ಕಟ್ಟಿಕೊಂಡು ನಾಲ್ಕು ದಿನ ಸಂತೋಷದಲ್ಲಿ ಅಲೆದಾಡಬಹುದಿತ್ತು. ಆದರೆ ಅಜ್ಜಿಯ ಆಯುರ್ಮಾನ ಬಹು ದಿನದ್ದಲ್ಲ; ಇಷ್ಟಾದರೂ ಅವಳ ಆಸೆಯನ್ನು ಪೂರೈಸಿಕೊಡಬೇಕು ಎಂದು ತೋರಿತು. ಅವಳ ತಂಗಿಯ ಅನ್ವೇಷಣೆಗಾಗಿ ಹೊರಟ. ಕುಂದಾಪುರದಲ್ಲಿ ಅವರ ಕುಲವಂದಿಗರಿದ್ದರು. ಅಲ್ಲಿಗೆ ಬಂದ. ಅಲ್ಲಿನ ಹಳಬರಿಂದ, ತಂಗಿ ಅಜ್ಜಿಯು ಮುದ್ದೂರಿನಲ್ಲಿ ಇರುವಳೆಂದು ತಿಳಿಯಿತು. ಧಾವಿಸಿ ಬಂದ. ಅವನ ಅನ್ವೇಷಣೆ ಇಂದು ಸಾರ್ಥಕವಾಯಿತು. "ನನಗೆ ಇನ್ನು ನಾಲ್ಕು ದಿನಗಳ ಅವಕಾಶವೂ ಇಲ್ಲ. ನಾಳೆಗೇ ನಾನು ಊರಿಗೆ ಮರಳಬೇಕಾಗಿದೆ. ನನ್ನ ರಜೆಯು ಮುಗಿಯುತ್ತ ಬಂದಿತು. ಭಟ್ಕಳದಿಂದ ಹಡಗು ಹತ್ತಿ ಮುಂಬಯಿಗೆ ಹೋಗಬೇಕು" ಎಂದು ಅವನು ಬಂದ ಮರು

ದಿನವೇ ಹೊರಡುವ ಆತುರ ತೋರಿದ. ವಿನತೆ ತಮ್ಮ ಮನೆಗೆ ಬಂದ ಮಂಜುನಾಥನೊಡನೆಯೇ "ನೀನು ನಿನ್ನ ಅಕ್ಕನನ್ನು ನೋಡಲು ಹೋಗು" ಎಂದು ತನ್ನ ತಾಯಿಗೆ ಉಪದೇಶ ಮಾಡಿದಳು. ಆದರೆ ಅವಳು ಅನುಮಾನಿಸಿದಳು. "ಹೋಗುತ್ತೇನೆ; ಆದರೆ ಈ ತಿಂಗಳಲ್ಲಿ ಆಗುವುದಿಲ್ಲ" ಎಂದು ಯಾವುದೋ ನೆಪ ಹೇಳಿದಳು. ಅವಳಿಗೆ ನಾಗರಾಜಯ್ಯನಂಥ ಶ್ರೀಮಂತನನ್ನು ಅಳಿಯನನ್ನಾಗಿ ಮಾಡಿಕೊಳ್ಳುವ ಅಂತರಂಗದ ಆಸೆಯು ಇನ್ನೂ ಮನಸ್ಸಿಗೆ ಅಂಟಿಕೊಂಡಿದೆ. ಅದಕ್ಕೆ ಸಮನಾದ ದಾರಿ, ಉಪಾಯ ಹೊಳೆಯುವುದಲ್ಲ. ಅಷ್ಟೇ ಹೊರತು, ಗಂಡಿಗೊಲಿಯದ ಹೆಣ್ಣುಂಟೇ, ಎಂಬ ತರ್ಕಸರಣಿ ಅವಳದು.

ಬಂದ ಮಂಜುನಾಥನೂ ಅವನ ಮಡದಿ ರಾಜೀವಿಯೂ ಒಂದು ದಿನವೆಲ್ಲ ಅಲ್ಲಿದ್ದು, ಬಾಯಿ ತುಂಬ ಮಾತನಾಡಿ, ಆದರೋಪಚಾರಗಳನ್ನು ಸ್ವೀಕರಿಸಿ ಊರಿಗೆ ಮರಳಿದರು. ಇಷ್ಟೇ ಫಲ–ವಿನತೆಗಾಗಿ ಬಂದ ಆ ಸೀರೆ, ರಾಜೀವಿಗೆ ಉಡುಗೊರೆಯಾಯಿತು. ಅದನ್ನು ವಿನತೆಯೇ ಕೊಂಡಿದ್ದಾಳೆ, ತಿರಸ್ಕರಿಸಲಿಲ್ಲ–ಎಂಬ ನಾಟಕವನ್ನು ಮಾಡದೆಯೆ ಮಂಜರಿಗೆ ಗತ್ಯಂತರವಿದ್ದಿಲ್ಲ. ಹಾಗೆ ಮಾಡುತ್ತೇನೆಂದುಕೊಂಡಳು. ಇನ್ನಿಷ್ಟು ಚಿನ್ನಾಭರಣಗಳನ್ನು ಅವರಿಂದ ತರಿಸಿಕೊಂಡು, ವಿನತೆಯನ್ನು ಹಾದಿಗೆ ತರಬಹುದೆಂದು ಎಣಿಸಿದಳು.

ಮಿಂಚಿನಂತೆ ಬಂದು ಆದರಂತೆಯೆ ಮಾಯವಾದ ಮಂಜುನಾಥ, ರಾಜೀವಿಯರ ಉಲ್ಲಸಿತ ದಾಂಪತ್ಯ ವಿನತೆಯಲ್ಲಿ ಹರ್ಷವನ್ನು ತುಂಬಿತು. ಅವರಂತೆ ತಾನೂ ಆಗುವೆನೆಂಬ ಸ್ವಪ್ನರಾಜ್ಯದಲ್ಲಿ ಅವಳು ತೇಲಿದಳು. ಅವರು ಹೊರಟುಹೋದ ದಿನ ರಾತ್ರಿ ಆಕೆಗೆ ನಿದ್ದೆಯೆ ಬರಲೊಲ್ಲದು. ಈ ತನಕ ಕೊರಗಿನಲ್ಲಿಯೇ ಬಾಳು ಕಳೆದವಳಿಗೆ, ಈ ಸಂತೋಷದ ಸೆರಗು, ಬಹು ಮುಂದೆ ಸಾಗಿಸದೆ ಹೋಯಿತು. ಅವಳಿಗೆ ತನ್ನ ತಾಯಿಯ ಜೀವನ ಚರಿತ್ರೆಯ ನೆನಪಾಯಿತು–

'ಒಂದು ನಾಟಕವೇ ಅವಳ ಜೀವನದಲ್ಲಿ ಎಂಥ ಪ್ರಧಾನ ಪಾತ್ರ ವಹಿಸಿತು–ಎಂಬ ನೆನವರಿಕೆಯುಂಟಾಯಿತು. ಅವಳು ಹೇಳಿದ ಕತೆಯ ಮಾತುಗಳು ಒಂದೊಂದಾಗಿ ವಿನತೆಯ ಮನಸ್ಸಿನ ಮುಂದೆ ಉರುಳತೊಡಗಿದವು. ಮಂಜರಿಯ ಮಾವ ಮಂಜುನಾಥ ಹೆಸರಾದ ಕಲಾವಂತ. ಚೆನ್ನಾಗಿ ಹಾಡಬಲ್ಲ; ತಬಲೆ ಬಾರಿಸಬಲ್ಲ; ನರ್ತನ ಕಲಿಸಿಕೊಡಬಲ್ಲ. ಅವನ ಸೊಸೆ

ಯಾದ ಮಂಜರಿ ಆಗ ಹದಿನೆರಡು ವಯಸ್ಸಿನವಳು. ಮಾವ ಭಟ್ಕಳಕ್ಕೆ ಬಂದ ಒಂದು ನಾಟಕ ಕಂಪೆನಿಯವರ ಸಹಾಯಕನಾಗಿ ಸೇರಿಕೊಂಡ. ನಿತ್ಯವೂ ಅಲ್ಲಿಗೆ ತಬಲೆ ಬಾರಿಸುವುದಕ್ಕೆ ಹೋಗಿ ಬರುತ್ತಿದ್ದ. ಕ್ರಮೇಣ ಅವನ ಸೊಸೆ, ಎಳೆಯಳಾದ ಮಂಜರಿಯ ನರ್ತನಗಳು, ನಾಟಕದ ಅಂಗವಾಗಿ ಪ್ರದರ್ಶಿಸಲ್ಪಟ್ಟುವು. ಮಾವ ಆ ಕಂಪೆನಿಯ ಮಾಲಕ ಬಸವೇಗೌಡರ ಮಾತಿನ ಮಿರುಗಿಗೆ ಮೆಚ್ಚಿ, ಅವರ ಮಂಡಳಿಕನಾದ. ಮೂರು ವರ್ಷಗಳ ಕಾಲ ಅವರೊಡನೆ ಉತ್ತರ ಕನ್ನಡ, ಹುಬ್ಬಳ್ಳಿ, ಧಾರಾವಾಡದ ಊರುಗಳನ್ನು ಸುತ್ತಿದ. ಸೊಸೆ ಪ್ರಾಯಕ್ಕೆ ಬಂದಳು; ನಾಟಕದಲ್ಲಿ ಪಾತ್ರ ವಹಿಸುವ ಯೋಗ್ಯತೆಯನ್ನೂ ಪಡೆದಳು. ಆಗ ಮಂಜರಿಯು ತುಂಬು ಯೌವನಕ್ಕೆ ಸಮನಾದ ಮನ್ನಣೆ ದೊರೆಯತೊಡಗಿತು. ಅವಳ ಬಾಳು–ಬಸವೇಗೌಡರ ಚರಣಗಳಿಗೆ ಅರ್ಪಿತವಾಯಿತು. ಅದು ಪ್ರೀತಿಯಿಂದಲ್ಲ; ಸೌಂದರ್ಯ ಯೌವನಗಳಿಂದಲೂ ಅಲ್ಲ. ಮಂಜರಿಯ ಮಾವನಿಗೆ ಅಂಟಿಕೊಂಡಿದ್ದ ದುಡ್ಡಿನ ಗಿರದಿಂದ. ಆ ಮೇಲೊಂದು ದಿವಸ ಆ ನಾಟಕಮಂಡಳಿ ಕುಂದಾಪುರಕ್ಕೆ ಬಂದು ಬೀಡು ಬಿಟ್ಟಾಗ, ಮಾವ ಮಂಜುನಾಥ ಇದ್ದಕ್ಕಿದ್ದಂತೆಯೆ ಹೃದ್ರೋಗದಿಂದ ತೀರಿಕೊಂಡ. ಮಂಜರಿ ತಾಯಿಯ ಮನೆಗೆ ಹೋಗುವೆನೆಂದು ಹೊರಟಳು. ಆದರೆ ನಾಟಕ ಕಂಪೆನಿಯ ಬಾಳು, ಯೌವನೆಯಾದ ಅವಳ ಮನಸ್ಸನ್ನು ಸೆರೆಹಿಡಿದಿತ್ತು. ನಾಟಕದ ಕರಪತ್ರಗಳೆಲ್ಲ 'ಮಂಜರೀ ಬಾಯಿ ಮುಖ್ಯ ಪಾತ್ರ ವಹಿಸುವಳು' ಎಂದು ಪ್ರಕಟಿಸುತ್ತಿರುವಾಗ ಅವಳಿಗೆ ಬಸವೇಗೌಡರ ವಕ್ರಬುದ್ಧಿಯಾಗಲೀ, ಕುಳ್ಳು ಶರೀರವಾಗಲೀ ಹಿತವೆನಿಸದಿದ್ದರೂ, ಕೀರ್ತಿಯ ಚಾಪಲ್ಯ ಹೆಚ್ಚಿತು. ಅಹಂಕಾರವೂ ಬೆಳೆಯಿತು. ಹೀಗಾಗಿ ಅವಳು ಊರು ಮನೆಗೆ ಹೋಗದೆ ಕಂಪೆನಿಯೊಡನೆ ಉಳಿದುಕೊಂಡಳು.

ಗೌಡರು ಅವಳ ಮಟ್ಟಿಗಷ್ಟೇ ಒಳ್ಳೆಯವರಾಗಿದ್ದರು. ಆಗಿನ ದಿನಗಳಲ್ಲಿ ಅವರ ನಾಟಕಗಳಿಂದ ಹಣ ಸಂಪಾದನೆಯಾದರೂ, ಉಳಿದ ಕೆಲಸಗಾರರ ಸಂಬಳ ಮುಳುಗಿಸಲು ಕಲಿತವರು. ಆದರ ಪರಿಣಾಮವಾಗಿ, ಒಂದುದಿನ, ಸುದ್ದಿ ಹೇಳದೆಯೇ ನಟವರ್ಗದವರು ಹೊರಟುಹೋದರು. ಪರ್ಯಾಯಕ್ಕೆಂದು ಉಡುಪಿಗೆ ತಮ್ಮ ನಾಟಕ ಮಂಡಳಿಯ ಸಾಮಾನುಗಳನ್ನು ತಂದು ಹಾಕಿದರೆ, ಮುಖ್ಯ ಪಾತ್ರಧಾರಿಗಳೆಲ್ಲರೂ ಕಾಣೆಯಾದರು. 'ಯಾರಿಲ್ಲದಿದ್ದರೂ ಮಂಜರಿಯೊಬ್ಬಳಿದ್ದರೆ ಬೆಳಗಾಗುತ್ತದೆ' ಎಂದು ಯೋಚಿಸಿದ

ಬಸವೇಗೌಡರು ತಮ್ಮ ನಾಟಕಗಳನ್ನು ನಡೆಯಿಸಲಾರದೆ ದಿವಾಳಿಯಾದರು. ಅವರ ಸಾಲವು ಹೆಚ್ಚಿತು. ಆಗ ಮಂಜರಿಗೆ ಬರಿಯ ಹದಿನೇಳು ವಯಸ್ಸಿತ್ತು. ಅವಳು ತಾನು ಬರಿಯ ಗೌಡರನ್ನು ನಂಬಬೇಕೇ, ತನ್ನ ಅಕ್ಕನ ಮನೆಗೆ ಹೋಗಬೇಕೇ–ಇನ್ನೇನಾದರೂ ಮಾಡಬೇಕೇ–ಎಂದು ಯೋಚಿಸುವಂತಾಯಿತು. ಆ ವೇಳೆಗೆ ಮುದ್ದೂರಿಂದ ಉಡುಪಿಗೆ ಬಂದ ಆನಂದ ನಾಯಕರ ಆಸರೆ ದೊರೆಯಿತು. ಒಂದು ದಿನ ಗೌಡರು ಹುಬ್ಬಳ್ಳಿಗೆ ಅವಳನ್ನು ಕೂಡಿಕೊಂಡು ಹೊರಡುತ್ತೇನೆ. ಅಲ್ಲಿ ಇನ್ನೊಂದು ಕಂಪೆನಿಯನ್ನು ಕಟ್ಟುತ್ತೇನೆ-ಎಂದು ಎಣಿಸಿಕೊಂಡು ಕುಳಿತಿದ್ದರೆ, ಆಕೆ ಅವರನ್ನು ಬಿಟ್ಟು, ಆನಂದ ನಾಯಕರನ್ನು ಹಿಂಬಾಲಿಸಿ ಓಡಿದಳು. ನಾಯಕರ ಯೌವನ, ಶೋಕಿ, ವಜ್ರದ ಓಂಟಿಗಳು-ಅವಳನ್ನು ಆಕರ್ಷಿಸಿದುವು. ಹಾಗೆ ಮಾಡಿದುದಕ್ಕಾಗಿ ಅವಳಿಗೆ ಚಿಂತೆ ಉಂಟಾಗಲಿಲ್ಲ. ತಾನು ಚೆಲುವೆ, ಹಾಡುಗಾರ್ತಿ; ಲೋಕವೇ ತನ್ನನ್ನು ಮೋಹಿಸುತ್ತದೆ – ಎಂಬ ಹೆಮ್ಮೆಯನ್ನು ಸಾಧಿಸುವುದಕ್ಕೆ ಬಸವೇಗೌಡರ ಸ್ನೇಹಕ್ಕೆ ಅವಳು ಬಲಿಯಾದುದು ಮಾತ್ರ ಅವಳ ಜೀವನದಲ್ಲಿನ ಒಂದೇ ಒಂದು ಅತೃಪ್ತ ಭಾಗವಾಗಿತ್ತು. ಆಗಲೂ ಅವಳ ಶೃಂಗಾರಮಯ ಜೀವನಕ್ಕೊದಗಿದ, ಕದ್ದು ನೆರವಾದ ಕೆಲವು ನಟರಿದ್ದರು. ಹಾಗಿದ್ದಷ್ಟು ದಿನ, ಅವಳ ಮನಸ್ಸು ಅಲ್ಲೋಲಕಲ್ಲೋಲವಾಗಿತ್ತು. ಭಯಪೂರಿತವಾಗಿತ್ತು. ಗೌಡರು ಕುಡಿಕರು; ತೀರಸ್ವಾರ್ಥಿಗಳು. ತಮ್ಮ ಮುಪ್ಪನ್ನೂ ತಾರುಣ್ಯವಾಗಿಯೇ ತಿಳಿದುಕೊಂಡವರು. ಅವರಿಗೆ ತನ್ನ ನಿಜವಾದ ಸಂಗತಿ ತಿಳಿಯದಂತೆ ಮಂಜರಿ ಕಪಟ ನಾಟಕವಾಡಿದಳು. ಮನೆಗೆ ಬಂದ ಮೊಮ್ಮಗನ ಮುಂದೆ ಮಂಜರಿಯು ಈ ಕಥೆಯನ್ನು ಹೇಳುವಾಗ, ತನ್ನ ಮಾವನ ಮೃತ್ಯುವನ್ನು ಕುರಿತು, ಕಂಪೆನಿಯ ಕಲಹಗಳನ್ನು ಕುರಿತು, ತನಗೊದಗಿದ ಕಷ್ಟಗಳನ್ನು ಕುರಿತು ಬಣ್ಣಿಸಿದಳಾದರೂ–ತಾನು ಗೌಡರನ್ನು ವಂಚಿಸಿ ಜೀವಿಸಿದ ವಿಚಾರ ಹೇಳಲಿಲ್ಲ; ಹೇಳುವವಳೂ ಅಲ್ಲ.

ಆಕೆ ಹಿಂದೆ ಹೇಗೆಯೋ ಇದ್ದಿರಲಿ: ಆನಂದ ನಾಯಕರ ಆಶ್ರಯವನ್ನು ಪಡೆದ ಮೇಲೆ, ಕೇವಲ ಸದ್ಗೃಹಿಣಿಯಂತೆಯೇ ಬಾಳಿದಳು. ವಿಲಾಸಿಯಾದ ನಾಯಕರಲ್ಲಿದ್ದ ಅನೇಕ ಸದ್ಗುಣಗಳು ಅವಳ ಬದುಕಿನ ಮೇಲೆ ತಮ್ಮ ವರ್ಚಸ್ಸನ್ನು ಬೀರದೆ ಹೋಗಲಿಲ್ಲ. ಅವಳು ವೇಶ್ಯೆಯಾಗಿದ್ದರೂ, ಅವರ ಕುಲದಲ್ಲಿ "ಬಿಡುಸೂಳೆ" ಎಂಬ ಮಾತಿಗೆ ತುಂಬ ತಿರಸ್ಕಾರ ಅಂಟಿ

ಕೊಳ್ಳುತ್ತದೆ. ಮಂಜರಿಯ ಪೂರ್ವಜರೆಲ್ಲರೂ ಕಲಾವಂತರಾಗಿದ್ದರೂ, ಯಾವನಾದರೊಬ್ಬ ಪುರುಷನನ್ನು ನೆಚ್ಚಿಕೊಂಡು ಮಾನವಂತರಾಗಿಯೇ ಬಾಳಿದವರು.

ತನ್ನ ತಾಯಿಯ ನಾಟಕ ಕಂಪೆನಿಯ ಜೀವನವನ್ನು ನೆನೆದಾಗ, ವಿನತೆಗೆ, ನಾಟಕದಲ್ಲಿ ನಟಿಸಿ ತಾನೊಂದು ಪಾಪವನ್ನೇ ಮಾಡಿಬಿಟ್ಟೆ ಎಂದು ಅನಿಸಿತು ಒಮ್ಮೆ. ಆ ಯೋಚನೆಯು ಮುಂದುವರಿಯುವುದರೊಳಗಾಗಿ, ಕೋಡಂಗಿ ನಾಗರಾಜಯ್ಯನವರ ಹೆಸರು ನೆನಪಾಯಿತು. 'ಕೋಡಂಗಿ' ಎಂಬ ಪೂರ್ವಪದ ಕೇಳಿ ಭೀತಿಯಾಯಿತು. ಬಯಲಾಟದಲ್ಲಿ ಮೊದಲು ಬರುವ ಅರ್ಥವಿಲ್ಲದ ಕುಣಿತಕ್ಕೆ 'ಕೋಡಂಗಿಯ ಕುಣಿತ' ಎನ್ನುತ್ತಾರೆ. ತನ್ನ ಬಾಳು ಕೋಡಂಗಿ ಬಾಳು ಆಗಬಾರದು—ಎಂಬ ಆಸೆ ಅವಳಲ್ಲುಂಟಾಯಿತು.

ಮಂಜುನಾಥ ಹೊರಟುಹೋಗಿ ಈಗ ಮೂರು ದಿನಗಳು ಕಳೆದುವು. ನಾಲ್ಕನೆಯ ದಿನ ಮಧ್ಯಾಹ್ನ, ನಾಗರಾಜಯ್ಯ ಘನ ಗಂಭೀರ ನಡಿಗೆಯಿಂದ ಮಂಜರಿಯ ಮನೆಗೆ ಭೇಟಿಕೊಟ್ಟರು. ಮಂಜರಿ ಚಾಪೆಯನ್ನು ಹಾಸಿದಳು. ದಿಂಬನ್ನು ಸಂದರಿಸಿದಳು. ತಾಂಬೂಲದ ಹರಿವಾಣವನ್ನು ಮುಂದಕ್ಕಿಟ್ಟಳು. ವೀಳೆಯ ಮೆಲ್ಲುತ್ತ, ತಾವು ತಂದಿದ್ದ ಕೆಲವು ಚಿನ್ನಾಭರಣಗಳನ್ನು ಹೊರಕ್ಕೆ ತೆಗೆದು, ಮಂಜರಿಯ ಮುಂದಕ್ಕಿರಿಸಿದರು. ಆಸೆಯ ಕಣ್ಣುಗಳಿಂದ ಅವಳು ಅದನ್ನು ಎತ್ತಿಹಿಡಿದಳು. "ನಿನ್ನ ವಿನುವಿಗೆ ಅದು" ಎಂಬ ಅಪ್ಪಣೆಯಾಯಿತು. "ಅವಳಿಲ್ಲ; ಹೊರಗೆಲ್ಲೋ ಹೋಗಿದ್ದಾಳೆ. ಬಂದ ಕೂಡಲೆ ಕೊಡುತ್ತೇನೆ-ಸಾಕಲ್ಲ" ಎಂದಳು. ತಾನು ರಾತ್ರಿ ಬರುವೆನೆಂದು ಹೇಳಿ ಅವರೂ ಹೊರಟು ಹೋದರು. ಮಂಜರಿ ಆ ಚಿನ್ನಾಭರಣಗಳನ್ನು ತೆಗೆದುಕೊಂಡು, ತಿರುತಿರುಗಿ ನೋಡಿ, ಸಂತೋಷಪಟ್ಟಳು. ಆದರೂ ಮಗಳ ಭಯ ಅವಳಿಗೆ ಇದ್ದೇ ಇತ್ತು. 'ಅವಳೇನು ಮಾಡುತ್ತಾಳೋ' ಎಂಬ ಚಿಂತೆ ಇದ್ದೇ ಇತ್ತು.

ಸಂಜೆ ಊಟಮುಗಿಸಿ, ವಿನತೆ ತನ್ನ ಕೊಟಡಿಯಲ್ಲಿ ಹಾಡಿನ ಅಭ್ಯಾಸ ತೊಡಗಿದಳು. ಬಾಯ್ತೆರೆಯಲು ಮನಸ್ಸಾಗದಿದ್ದರೂ, ಪಿಟೀಲನ್ನು ನುಡಿಸುತ್ತ "ಕೌನನ ಶರನಹಿ ಆವೆ" ಎಂಬ ಕೃತಿಯನ್ನು ಜೀವನಪುರಿಯಲ್ಲಿ ವಿಸ್ತರಿಸ ತೊಡಗಿದಳು. ಅವಳ ಮನೋವೇದನೆಗೆ ಸಮನಾದ ದುಃಖದ ಮಾರ್ದನಿಯು ಪಿಟೀಲಿನ ತಂತಿಗಳಿಂದ ಹೊರಹೊಮ್ಮುತ್ತಿತ್ತು. ಅವಳು ತದೇಕಚಿತ್ತಳಾಗಿದ್ದಳು. ಅಲ್ಲಿಂದ ಭಾಗೇಶ್ರೀ ರಾಗಕ್ಕೆ ಮನಸ್ಸು ಹರಿಯಿತು. ಮೆಲು

ದನಿಯಿಂದ "ಪಿಯಾ ಬಿನ ಆವತ ನಹಿ ಚೈನ" ಎನ್ನತೊಡಗಿದಳು. ಆಗಲೇ ನಾಗರಾಜಯ್ಯ ಸಂತೋಷಚಿತ್ತರಾಗಿ ಅವರ ಮನೆಗೆ ಕಾಲಿರಿಸಿದರು. ಎದುರಿನ ಪಡಸಾಲೆಯಲ್ಲಿ ಕುಳಿತರು. ಮಂಜರಿ ಶಂದಿಟ್ಟ ವೀಳೆಯ ಮೆಲ್ಲತೊಡಗಿದರು. ಹಾಡಿಗೆ ಕಿವಿಗೊಡತೊಡಗಿದರು. "ಒಳಗೆ ಹೋಗಿ ಕೇಳಬಹುದಲ್ಲ." ಎಂದಳು ಮಂಜರಿ. "ಬೇಡ, ಇಲ್ಲಿಂದಲೇ ಕೇಳುವ" ಎಂದು ಆಲಿಸುತ್ತ ಕುಳಿತರು. ಆಕೆಗೆ ಚಿನ್ನಾಭರಣಗಳ ನೆನಪಾಗಿ, ಮಗಳ ಕೊಟಡಿಯನ್ನು ಮೆಲ್ಲಗೆ ಹೊಕ್ಕು, ಆಭರಣಗಳನ್ನು ಕೈಯಲ್ಲಿ ಬಿಡಿಸಿ ಹಿಡಿದು "ಇದನ್ನು ತಂದಿದ್ದಾರೆ; ಅವರೂ ಬಂದಿದ್ದಾರೆ. ಅವರನ್ನು ಹಾಡು ಕೇಳುವುದಕ್ಕೆ ಒಳಗೆ ಕರೆಯಲೇ?" ಎಂದಳು. ಆಗ ಗೀತಮನಸ್ಕಳಾದ ವಿನತೆಯ ಧ್ಯಾನಭಂಗವಾಯಿತು. ಕಣ್ಣೆದುರಿನ ಆಭರಣಗಳು ಕೆಂಡದಂತೆ ಕಾಣಿಸಿದುವು. ತಾಯ ಮುಖವನ್ನೊಮ್ಮೆ ಬಿರಬಿರನೆ ನೋಡಿದಳು; ಅಲ್ಲಿಂದೆದ್ದು ನಿಂತಳು. ವ್ಯಾಘ್ರಿಣಿಯಂತೆ ಕಣ್ಣರಳಿಸುತ್ತ "ನನ್ನನ್ನು ಏನು ಮಾಡಬೇಕೆಂದು ಇದ್ದೀಯಾ?" ಎಂದು ನುಡಿದವಳೇ, ಪಿಟೀಲನ್ನು ನೆಲಕ್ಕೆ ಕುಕ್ಕಿ, ಬಿಕ್ಕಿಬಿಕ್ಕಿ ಅಳತೊಡಗಿದಳು. ಆಭರಣ ನೆಲದಲ್ಲೇ. ಆಗ ತಾಯಿಯೂ ಅಷ್ಟೇ ಸಿಟ್ಟಾದಳು. "ನನ್ನನ್ನು ಅವಮಾನಿಸುತ್ತೀಯಾ? ನನ್ನ ಮಾತು ಮುರಿಯುವಂತೆ ಮಾಡುತ್ತೀಯಾ? ನೀನು ನನ್ನ ಮಗಳಲ್ಲ" ಎಂದು ಹೇಳಿ ಅವಳೂ ಹೊರಕ್ಕೆ ಬಂದಳು. ವಿನತೆ ಬಾಗಿಲ ತನಕ ಓಡಿ, ಕದವನ್ನಿಕ್ಕಿಕೊಂಡಳು. ಹೊರಗೇನಾಗುತ್ತದೆ, ಯಾರಿದ್ದಾರೆ—ಎಂಬ ಅರಿವಿಲ್ಲದೆ ಹುಚ್ಚಿಯಂತೆ ಗೋಡೆಗೆ ಒರಗಿ ಕುಳಿತು ಅಳತೊಡಗಿದಳು. ಹಿಂದಣ ಕೋಣೆಯಲ್ಲಿ ರಾಮಕೃಷ್ಣ ಭಯಭೀತಿಗಳಿಂದ ಈ ದುರಂತ ನಾಟಕದ ಮಾತುಗಳನ್ನು ಧ್ವನಿಯಿಂದಲೇ ತಿಳಿಯಲೆತ್ನಿಸುತ್ತಿದ್ದ.

ಬಂದವರು ಅವಮಾನಿತರಾಗಿ ಹೋದರೆ ತನ್ನ ಭವಿಷ್ಯವೇ ಮಣ್ಣುಗೂಡಿದಂತೆ ಎಂದು ಮಂಜರಿ ತಿಳಿದಳು. "ನೀನು ಗದಿಬಿದಿಯಾಗುವುದು ಬೇಡ. ಅದು ಮಕ್ಕಳ ಬುದ್ಧಿ" ಎಂದು ಅವಳಿಗೆ ನಾಗರಾಜಯ್ಯ ಬುದ್ಧಿ ಹೇಳಿದರು. ತಾವು ನೋವನ್ನು ತೋರಿಸಿಕೊಳ್ಳದೆ ಆ ದಿನ ಅಲ್ಲಿಂದ ಕಾಲ್ತೆಗೆದರು. ಮಂಜರಿ ಅಲ್ಲಿ ಕುಳಿತಿರಲಾರದೆ, ಆ ಹತ್ತು ಘಂಟೆಯ ಹೊತ್ತಿಗೆ ನಾರ್ಣಪ್ಪಯ್ಯನವರ ಮನೆಗೆ ಹೋಗಿ, ತನ್ನ ಗೋಳಿನ ಇತಿಹಾಸವನ್ನು ಅವರಿಗೆ ಹೇಳಿದಳು. ತಾಯಿ ಹೋದದ್ದನ್ನು ಕಂಡ ರಾಮಕೃಷ್ಣ, ತನಗೆ ತಿಳಿಯದಂತೆ ಅಳುತ್ತ ಅಕ್ಕನ ಕೊಟಡಿಗೆ ಬಂದು ಕೂಗಿದ. ಬಾಗಿಲ

ಕದವನ್ನು ತಳ್ಳುತ್ತ "ನಾನಕ್ಕ, ನಾನು; ಅವರು ಯಾರೂ ಇಲ್ಲಿಲ್ಲ. ಬಂದವರೂ ಹೋಗಿದ್ದಾರೆ; ಅಮ್ಮನೂ ಇಲ್ಲ" ಎಂದು ತಿಳಿಸಿ, ಧೈರ್ಯಕೊಟ್ಟು ಬಾಗಿಲು ತೆರೆಯಿಸಿದ. ತಾನು ಒಳಗೆ ಹೊಕ್ಕು ತಿರುಗಿ ಕದವಿಕ್ಕಿಕೊಂಡ. ಅಕ್ಕನಿಗೂ ತನಗೂ ಹಾಸುಗೆಗಳನ್ನು ಹಾಸಿದ. "ಬಾ ಅಕ್ಕ, ಮಲಗಿಕೋ; ಬರಿದೆ ಯಾಕೆ ಅಳುತ್ತೀಯಾ? ನಿನ್ನನ್ನು ಯಾರೇನು ಮಾಡುವಹಾಗಿದೆ?" ಎಂದು ಒತ್ತಾಯದಿಂದ ಅವಳನ್ನು ತನ್ನ ಬಳಿಯಲ್ಲಿ ಮಲಗಿಸಿಕೊಂಡ. ದೀಪ ಆರಿಸಿ ಬಂದದ್ದ. ಕತ್ತಲಲ್ಲಿ ಅಕ್ಕನ ಮುಖದ ಮೇಲೆ ಆತ ಕೈಯಿಟ್ಟಾಗ, ತೊಯ್ದ ಕಪೋಲಗಳ ಅರಿವಾಯಿತು. "ಯಾಕೆ ಅಳುತ್ತೀ?" ಎಂದು ತಿರುತಿರುಗಿ ಕೇಳಿದ.

ತುಸು ಹೊತ್ತು ವಿನತೆ ಮೂಕಳಾಗಿಯೇ ಇದ್ದಳು. ಆದರೆ ಅವನೊಡನೆ ಹೇಳದೆ, ಇನ್ನಾರೊಡನೆ ಹೇಳಲಿ–ಎಂದು ಎಣಿಸಿದಳು. ಮೂರು ಮೂರು ಬಾರಿ ತಮ್ಮನಿಂದ ಕೈಮೇಲೆ ಕೈ ಇರಿಸಿಕೊಂಡು, 'ಯಾರಿಗೂ ಹೇಳಬಾರದು' ಎಂದು ಆಣೆ ಹಾಕಿಸಿಕೊಂಡು, ತನ್ನ ದುಃಖವನ್ನು ಅವನ ಮುಂದೆ ವಿಸ್ತರಿಸಿ ಹೇಳಿದಳು. ಅವಳ ಮನಸ್ಸಿನ ತೀರ್ಮಾನ ಒಂದೇ ಆಗಿತ್ತು: "ನಾನು ಈ ಮನೆಯಲ್ಲಿ ಇರುವುದಿಲ್ಲ" ಎಂಬುದದು. ತನ್ನೆಲ್ಲ ಯೋಚನೆಗಳನ್ನು ಹೇಳಿದಳು. ಅದಕ್ಕೆ ಅವನ ಸಹಾಯವನ್ನು ಕೋರಿದಳು. ಅವನನ್ನು ರಹಸ್ಯಕ್ಕೆ ತೆಗೆದುಕೊಂಡಳು. ಅವನಿಂದ ಸಹಾಯದ ಭರವಸೆಯನ್ನು ಪಡೆದಳು. ದುಃಖದಿಂದ ಅತ್ತುಅತ್ತು ದಣಿದು ಬಳಿಕ ಆಯಾಸದಿಂದ ಮಲಗಿ ನಿದ್ದೆಹೋದಳು.

ಮರುದಿನದ ಅವಳ ಕೆಲಸವೆಂದರೆ, ಕೊಟಡಿಯಲ್ಲಿ ಇನ್ನೂ ಬಿದ್ದಿದ್ದ ಆಭರಣಗಳನ್ನು ಒಟ್ಟುಮಾಡಿ, ತನ್ನ ತಮ್ಮನಿಂದ ತಾಯಿಗೆ ಮುಟ್ಟಿಸಿ, ತನ್ನ ಗೆಳತಿಯರನ್ನು ನೋಡಿಕೊಂಡು ಬರುವುದಕ್ಕೆ ಹೋಗುವುದು. ದುಃಖವಿಲ್ಲದವರಂತೆ ನಟಿಸುವುದು ಅವಳಿಗೆ ಕಷ್ಟವಾಗಿದ್ದರೂ, ಸಂತೋಷದ ಸೋಗು ತಾಳಿದಳು. ಎಲ್ಲ ಗೆಳತಿಯರ ಮನೆಗೂ ಹೋಗಿ ಬಂದಳು. ಸರಸದ ಮಾತುಗಳನ್ನಾಡಿದಳು. ಗೆಳತಿ ಮಂಜುಳೆಯ ಭೇಟಿ ಹಿತ್ತಿಲ ಬಾಗಿಲಲ್ಲೇ ಆಯಿತು. ಅಲ್ಲೇ ನಿಂತು ಹರಟೆ ಹೊಡೆದಳು. ತಡೆಯದ್ದಕ್ಕೆ "ನಾಳೆ ನಾಡಿದ್ದು ರಿಸಲ್ಟ್ ಬರುತ್ತದೆಯಲ್ಲವೆ? ಆ ಮೇಲೆ ನೀನೆಲ್ಲೋ–ನಾನೆಲ್ಲೋ" ಎಂದಳು.

"ಯಾಕೆ? ನೀನು ಕಾಲೇಜಿಗೆ ಬರುವುದಿಲ್ಲವೆ? ನಮ್ಮಲ್ಲಿ ಊರ್ವಶಿ, ನಾನು–ಇಬ್ಬರಂತು ಹೋಗುವುದು ಖಂಡಿತ. ಅಣ್ಣ ಏನೂ ಹೇಳಲಿ–ನಾನು ಹೋಗುವವಳೇ."

"ನನ್ನ ಕಾಲೇಜಿನ ಆಸೆ ಮುಗಿಯಿತು. ಒಟ್ಟು ಹೇಗಾದರೂ ಬದುಕಿದರಾಯಿತು; ಬರುತ್ತೇನೆ" ಎಂದು ಹೇಳಿ ಹೊರಟಳು.

ಆ ರಾತ್ರಿ ತಮ್ಮನೊಡನೆ ವಿನತೆ ಎಷ್ಟು ಗುಸುಗುಟ್ಟಿದಳೆಂಬುದಕ್ಕಿಲ್ಲ. ಕಣ್ಣು ಬಾಡುವ ತನಕವೂ ಮೆಲುದನಿಯ ಮಾತುಕತೆಗಳಾದುವು. ಅವನನ್ನು ಮುದ್ದಿಸಿದಳು. "ನೀನೇನೂ ಯೋಚನೆ ಮಾಡಬೇಕಿಲ್ಲ; ಬದುಕಿ ಉಳಿದೆನಾದರೆ ನಾನೊಂದು ತಾವನ್ನು ಸೇರಿದ ಮೇಲೆ, ನಿನಗೆ ಕಾಗದ ಬರೆಯುತ್ತೇನೆ" ಎಂದು ಹೇಳಿ ಮಲಗಿಕೊಂಡಳು. ರಾಮಕೃಷ್ಣ ಬೆಳಕು ಹರಿಯುವ ಮುಂಚೆಯೆ, ಊರ ಹೊರಗೆ ಹೋಗಿ, ಅಕ್ಕನನ್ನು ಮಂಗಳೂರಿಗೆ ಹೋಗುವ ಬಸ್ಸೊಂದರಲ್ಲಿ ಕುಳ್ಳಿರಿಸಿ, ಅಳುವ ಕಣ್ಣುಗಳಿಂದ ಬೀಳ್ಕೊಟ್ಟು ಮರಳಿ ಬಂದ. ಅಕ್ಕನ ಅಲ್ಪ ಸ್ವಲ್ಪ ಆಭರಣಗಳನ್ನು ಹಿಂದಣ ದನವೇ ಒಯ್ದು, ಮಾರಿ, ಅವಳಿಗೆ ದುಡ್ಡನ್ನು ಒದಗಿಸಿಕೊಟ್ಟು ಅವಳ ಪಯಣಕ್ಕೆ ನೆರವಾಗಿದ್ದ. ಈಗ ಮನೆಗೆ ಬಂದು ತಿರುಗಿ ತನ್ನ ಹಾಸಿಗೆಯಲ್ಲಿ ವಿರಮಿಸಿದ. ಅವನ ಮನದಲ್ಲಿ ತುಂಬ ದುಃಖ ತುಂಬಿಕೊಂಡಿದ್ದರೂ, ಬೇರೆಯೇ ಮುಖ ತೊಟ್ಟು ಹೊರಕ್ಕೆ ಬಂದ.

ಆ ಬೆಳಗ್ಗೆ, ಮಧ್ಯಾಹ್ನ ವಿನತೆ ಮನೆಯಲಿಲ್ಲ; ಊಟಕ್ಕೂ ಬರಲಿಲ್ಲ. ಸಂಜೆಯ ಉಪಹಾರಕ್ಕೂ ಅವಳಿರಲಿಲ್ಲ. ರಾತ್ರಿ ಮಗಳು ಮನೆಗೆ ಬಾರದುದನ್ನು ಕಂಡು ಮಂಜರಿಯು ಚಿಂತೆಗೀಡಾದಳು. ಆಗ ರಾಮಕೃಷ್ಣ "ಇದು ಒಂದು ಕಾಗದ ಅಕ್ಕನ ಮೇಜಿನ ಮೇಲಿತ್ತು" ಎಂದು ಅದನ್ನು ಅವಳ ಮುಂದೆ ಓದ ಹೇಳಿದ. ಅದರಲ್ಲಿಷ್ಟೇ ಮಾತಿತ್ತು: "ನಾನು ನಿನ್ನ ಮಗಳಲ್ಲ; ನೀನು ನನ್ನ ತಾಯಲ್ಲ; ಆದುದರಿಂದಲೇ ಇನ್ನು ನಾನು ಮನೆಗೆ ಬರುವುದಿಲ್ಲ."

ಮಂಜರಿಯ ತಲೆಯ ಮೇಲೆ ಸಿಡಿಲೆರಗಿದಂತಾಯಿತು. "ಯಾವ ಕೆಟ್ಟ ಗಳಿಗೆಯಲ್ಲಿ ತಾನು ಆ ಮಾತನ್ನಾಡಿದೆ; ಮಗಳ ಮನಸ್ಸನ್ನು ನೋಯಿಸಿದೆ; ತನ್ನ ಕುಲಕ್ಕೇನೆ ಕೊಡಲಿ ಹಾಕಿದೆ!" ಎಂದು ಹೇಳಿ ಅಳತೊಡಗಿದಳು. ಅತ್ತುದಷ್ಟೇ ಬಂದಿತು. ಮಗಳ ಸುಳಿವು ಸಮಾಚಾರಗಳೊಂದೂ ತಿಳಿಯದಾಯಿತು; ಅವಳ ಬಾಳು ಕತ್ತಲಿನಿಂದ ತುಂಬಿಕೊಂಡಿತು. ತನಗೆ ತಿಳಿದಿರುವ ಸ್ವಲ್ಪ ಸತ್ಯವನ್ನು ರಾಮಕೃಷ್ಣ ಅವಳಿಗೂ ಹೇಳುವಂತಿರಲಿಲ್ಲ.

# ಆರನೆಯ ಅಧ್ಯಾಯ.

ವಿನತೆ ಊರು ಬಿಟ್ಟುಹೋದ ಸಂಗತಿಯು ಸುದ್ದಿಯ ಮುಖದಲ್ಲಿ ನಾನಾ ರೂಪಗಳನ್ನು ಪಡೆಯಿತು. 'ನಾಗರಾಜಯ್ಯನೊಂದಿಗೆ ಆಕೆ ಕೋಡಂಗಿಗೆ ಹೋದಳು' ಎಂದರು ಒಬ್ಬರು. 'ಯಾವುದೋ ಒಂದು ನಾಟಕ ಕಂಪೆನಿಯವರು ಬಂದು ಅವಳನ್ನು ಕರೆದುಕೊಂಡು ಹೋಗಿದ್ದಾರೆ' ಎಂದರು ಇನ್ನೊಬ್ಬರು. 'ಬಲಿತ ಹುಡುಗಿ. ತಾಯಿಯ ಕಣ್ಣಿಗೆ ಮಣ್ಣೆರಚಿ ಪರವೂರಿನ ಇನ್ನಾವನೋ ಒಬ್ಬನ ಹಿಂದೆ ಬಸ್ಸು ಹತ್ತಿ ಹೋದುದನ್ನು ನಾನು ಕಂಡಿದ್ದೇನೆ' ಎಂದ ಮೂರನೆಯವನೊಬ್ಬ. ಹೀಗೆ ಬಿಸಿ ಬಿಸಿಯಾಗಿ ಸುದ್ದಿಗಳು ಹರಡುತ್ತಿದ್ದಾಗಲೇ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವೂ ಬಂದಿತು. ಪರೀಕ್ಷೆಗೆ ಕುಳಿತ ಆರು ಮಂದಿ ಹುಡುಗಿಯರಲ್ಲಿ ನಂದಿನಿ, ಮಾಧವಿಯರಿಬ್ಬರೇ ಹಿಂದುಳಿದುಕೊಂಡರು. ವಿನತೆ ಶಾಲೆಯಲ್ಲಿಯೇ ಮೊದಲಿಗಳಾಗಿ ತೇರ್ಗಡೆಯಾಗಿದ್ದಳು. 'ಅಂತಹ ಹುಡುಗಿ, ನಾಲ್ಕು ದಿನಗಳ ಮೊದಲು ತನ್ನೊಡನೆ ಕಾಲೇಜಿನ ವಿಚಾರ ಮಾತನಾಡಿದವಳು, ಈಗ್ಗ ಯಾರೊ ಒಬ್ಬನ ಬೆನ್ನು ಹತ್ತಿ ಓಡಿಹೋದಳೆ'ಂಬ ಸುದ್ದಿ ಕೇಳಿದ ಹೆಡ್ಮಾಸ್ಟರ್ ಭೀಮರಾಯರಿಗೆ ತುಂಬ ವಿಷಾದವಾಯಿತು. ಪಾಸಾದ ಹಲವು ಹುಡುಗರಲ್ಲಿ ಮನೋಹರನೂ ಒಬ್ಬನಾಗಿದ್ದ. ಸುಧಾಕರ ಇನ್ನೊಬ್ಬ. ಮನೋಹರ ಸಾಮಾನ್ಯ ತರಗತಿಯಲ್ಲಿ ಪಾಸಾದವನಾಗಿದ್ದ.

ತನ್ನ ಅಣ್ಣನೊಡನೆ ಮಾತಿನ ಸಂಗ್ರಾಮ ಹೂಡಿ ಜಯಿಸಿದ ಮಂಜುಳೆ ಕಾಲೇಜನ್ನು ಸೇರಿದಳು. ಊರ್ವಶಿ ಅವಳ ಜತೆಗಾರ್ತಿಯಾದಳು. ಇಬ್ಬರೂ ವನಿತಾಶ್ರಮದಲ್ಲಿ ಉಳಿದುಕೊಳ್ಳುವುದಕ್ಕೆ ಏರ್ಪಾಟುಮಾಡಿಕೊಂಡರು. ಮನೋಹರ ತನ್ನ ತಾಯಿ ತಂದೆಯರನ್ನೊಪ್ಪಿಸಿ ಅದೇ ಕಾಲೇಜಿಗೇನೇ ವ್ಯಾಸಂಗಕ್ಕೆ ಬಂದ. ಅದರಿಂದಾಗಿ ಮಂಜುಳೆಯ ಸಂತೋಷಕ್ಕೆ ಪಾರವಿಲ್ಲ. ಕಾಲೇಜಿನ ಜೀವನ ಅವರೆಲ್ಲರಿಗೆ ಹೊಸತಾಗಿ ಕಂಡಿತು. ಎಲ್ಲರಿಗೂ ಹೆಚ್ಚಿನ ಸ್ವಾತಂತ್ರ್ಯವಿತ್ತು. ವಿರಾಮವಿದ್ದಂತೆ ಕಾಣಿಸಿತು. ಓದಿಗಿಂತಲೂ ಆಟಗಳಿಗೆ, ಚರ್ಚೆಗಳಿಗೆ ಹೆಚ್ಚಿನ ಅವಕಾಶ ದೊರೆತು, ತರುಣ ಮನಸ್ಸುಗಳಿಗೆ ಅದು ಸ್ವಪ್ನ ಸೀಮೆ ಎಂಬಷ್ಟು ಹಗುರಾಗಿ ಕಂಡಿತು. ಯೌವನದಲ್ಲಿ ಕಾಲಿಡುತ್ತಿರುವ ವಯಸ್ಸು; ಉಲ್ಲಾಸಕರ ಮನೋವೃತ್ತಿ; ಹಿರಿಯರ ಕಷ್ಟವರಿಯ

ಇಂಥ ಜೀವನ—ಒಂದಕ್ಕೊಂದು ಬೆಸೆದು ನಿಂತವು. ಹೈಸ್ಕೂಲಿನಲ್ಲಿದ್ದಂತೆ ಹುಡುಗರು ಬೇರೆ, ಹುಡುಗಿಯರು ಬೇರೆ—ಎಂಬ ಕಟ್ಟುನಿಟ್ಟಾದ ವರ್ಗೀಕರಣ ಆ ಹೊಸ ಆವರಣದಲ್ಲಿ ಕಾಣಿಸಲಿಲ್ಲ. ಪರಸ್ಪರ ಮಾತುಕತೆಗಳಿಗೆ ಎಡೆ ಹೆಚ್ಚಾಗಿತ್ತು. ತಮ್ಮ ಮನಸ್ಸು ಯಾವ ಮುಖವಾಗಿ ಹರಿಯುತ್ತದೆಯೆಂದು ತೋರಿಸುವುದಕ್ಕೆ ಕಾಲೇಜು ಪತ್ರಿಕೆಗಳುಂಟು. ಅದರಲ್ಲಿಯೂ "ಈ ತಿಂಗಳಿನ ಆರಾಧ್ಯ ದೇವತೆ" ಎಂಬ ಒಂದು ವಿಶೇಷವಾದ ಭಾಗವಿದೆ. ಯಾವುದೇ ಕಾರಣದಿಂದ, ತಮ್ಮ ಸಹಪಾಠಿಗಳ ಮೆಚ್ಚುಗೆಗೆ ಯಾರಾರು ಕಾರಣರಾಗುತ್ತಾರೋ, ಅವರನ್ನು ಕುರಿತು ಪ್ರಶಂಸೆಗಳೂ, ಅಭಿಮಾನದ ಮಾತುಗಳೂ ಆ ವಿಭಾಗದಲ್ಲಿ ಬರುತ್ತವೆ. ಲೇಖಕರು ಅವ್ಯಕ್ತನಾಮಧೇಯರಾಗಿ ಉಳಿದರೂ ಲೇಖನಕ್ಕೆ ಯಾರು ಗುರಿಯೆಂದು ತಿಳಿಯುವುದರಲ್ಲಿ ಪ್ರತಿಯೊಬ್ಬರಿಗೂ ಚಪಲವಿದ್ದೇ ಇರುತ್ತದೆ.

ಕಾಲೇಜಿಗೆ ಬಂದ ಮೂರು ತಿಂಗಳಲ್ಲಿಯೆ, ಹುಡುಗಿಯರಲ್ಲಿ ಎಲ್ಲರನ್ನೂ ಮೀರಿಸಿದ ಸ್ಥಾನ ಊರ್ವಶಿಗೆ ದೊರೆಯಿತು. ಅವಳ ಹಾಸ್ಯಪರತೆಯನ್ನು ಹೊಗಳಿದರು; ಚುರುಕುತನವನ್ನು ಹೊಗಳಿದರು; ಮಾತುಗಾರಿಕೆಯನ್ನು ಹೊಗಳಿದರು. ಈ ಹೊಗಳಿಕೆಯ ಅಮಲು ಅವಳ ಮನಸ್ಸಿನಲ್ಲೂ ಗಟ್ಟಿಯಾಗಿ ನಿಂತಿತು. ಹೈಸ್ಕೂಲಿನಲ್ಲಿದ್ದಾಗ ತನ್ನನ್ನು ಉಪಾಧ್ಯಾಯರೂ, ಗೆಳತಿಯರೂ, ಸಾಮಾನ್ಯಳಾಗಿಯೇ ತಿಳಿದಿದ್ದರು. ಇಲ್ಲಿ ತನ್ನ ನಿಜವಾದ ಯೋಗ್ಯತೆಯನ್ನು ಬಲ್ಲವರಿದ್ದಾರೆ—ಎಂಬ ಹೆಮ್ಮೆಯು ಆಕೆಗೆ ಸ್ವಾಭಾವಿಕವಾಗಿ ಉಂಟಾಯಿತು.

ಮನೋಹರ ಮಂಜುಳೆಯೊಡನೆ ಎರಡೆರಡು ಬಾರಿ 'ಮುಂದಿನ ತಿಂಗಳ ಆರಾಧ್ಯ ದೇವತೆ ನೀನಾಗುತ್ತೀಯ' ಎಂದು ಹೇಳಿ ಅವಳಲ್ಲೊಂದು ಬಗೆಯ ಆಸೆ ಮೂಡಿಸಿದ್ದ. ಮುಂದಿನ ತಿಂಗಳಲ್ಲ, ಮತ್ತೂ ಮೂರು ತಿಂಗಳು ಕಳೆದರೂ, ಯಾರಾರದೋ ಹೆಸರುಗಳು ಬಂದವು. ಮಂಜುಳೆಯ ಹೆಸರಿಲ್ಲ. ಮನೋಹರ ಸಿಟ್ಟಾದ; ಅವಳೊಡನೆ "ನಾನೇ ಒಂದು ಲೇಖನವನ್ನು ಬರೆದು ಕೊಟ್ಟಿದ್ದೆ. ನಿನಗೆ ಹೇಳಲಿಲ್ಲ ಮಾತ್ರ; ಆದರೆ ಪತ್ರಿಕೆಯ ಸಂಪಾದಕ ರಾಮರಾಯನಿಗೆ ಅವನದೇ ಪ್ರೀತಿಯವರಿದ್ದಾರೆ. ತುಂಬ ಪಕ್ಷಪಾತಿಯವನು. ನಾನು ಕೊಟ್ಟ ಲೇಖನವನ್ನು ಹಾಕಲೇ ಇಲ್ಲ" ಎಂದು ಹೇಳಬೇಕಾಯಿತು.

ಮನೋಹರ, ಸುಂದರ ಕಾಯನಾಗಿ, ವಿಲಾಸಿಯಾಗಿ ಎಲ್ಲರಲ್ಲಿಯೂ

ಬೆರೆಯುತ್ತಿದ್ದರೂ, ಓದು ಆಟಗಳೆರಡರಲ್ಲಿಯೂ ಅವನು ಹಿಂದೆಯೇ ಸರಿ. ಆದುದರಿಂದ ಅವನ ಹೆಸರನ್ನು ದೊಡ್ಡದು ಮಾಡಿ ಬಣ್ಣಿಸಿದವರಿಲ್ಲ. ಬದಲು ಪುಸ್ತಕದ ಕೀಟವಾಗಿದ್ದ ಸುಧಾಕರನಿಗೇ ಅಲ್ಲಿ ಹೆಚ್ಚಿನ ಹೆಸರು ಬಂದಿತು.

ಆರು ತಿಂಗಳ ಕಾಲ ಸರಿಯಿತು. ಹೊಸ ವರ್ಷ ಬಂದಿತು. ಕಾಲೇಜ್ ವಾರ್ಷಿಕೋತ್ಸವದ ಸಮಾರಂಭಗಳು ತೊಡಗಿದುವು. ನಾಟಕಗಳಿವೆ; ಸ್ಪರ್ಧೆಗಳಿವೆ. ವಿವಿಧ ರೀತಿಯ ಆಟ, ಓಟ ಮೊದಲಾದವು ಪ್ರಧಾನ ಸ್ಥಾನ ವಹಿಸಿವೆ. ಮನೋಹರ ಚರ್ಚೆಸ್ಪರ್ಧೆಗಳಲ್ಲಿ ಅಷ್ಟು ಬುದ್ಧಿವಂತನಲ್ಲ. ನಾಟಕದಲ್ಲಿ ಆಸಕ್ತಿ ಬಲವಾಗಿದ್ದುದರಿಂದ, ಆತ ಅದಕ್ಕೆ ದುಮುಕಿದ. ಅಲ್ಲಿಯೂ ಅವನು ಪ್ರಧಾನನಲ್ಲ. ಶೇಕ್ಸ್‌ಪಿಯರನ 'ಮರ್ಚೆಂಟ್ ಆಫ್ ವೇನೀಸ್' ನಾಟಕ ಆಡುವವರಿದ್ದರು. ಅದು ಇಂಗ್ಲಿಷ್ ನಾಟಕ. ಅದರಲ್ಲೊಂದು ಕಿರಿಯ ಪಾತ್ರವಷ್ಟೇ ಅವನಿಗಿತ್ತು. ಪೋರ್ಷಿಯಾಳ ಪ್ರಧಾನ ಪಾತ್ರ ಊರ್ವಶಿಗೆ ದೊರೆಯಿತು. ಸಾಮಾನ್ಯ ಪರಿಚಾರಿಕೆಯ ಪಾತ್ರ ಒಂದು ಮಂಜುಳೆಗಿತ್ತು. ನಾಟಕದ ದಿನ, ಹಿಂದಣ ದಿನದ ರಿಹರ್ಸಲನ್ನು ನೋಡಿದ ಪ್ರಿನ್ಸಿಪಾಲರು ಎಲ್ಲರ ಮುಂದೆಯೂ ಊರ್ವಶಿಯ ಬೆನ್ನನ್ನು ತಟ್ಟಿ "You will look grand" ಎಂದಾಗ, ಅವಳಿಗೆ ಅತ್ಯಂತ ಆನಂದವಾಯಿತು. ನಾಟಕದ ದಿನ ತನ್ನ ಭೂಮಿಕೆಯನ್ನು ಚೆನ್ನಾಗಿಯೇ ಆಡಿ ತೋರಿಸಿದಳು. ಭಾಷಣ ಸ್ಪರ್ಧೆಯಲ್ಲಿ ಅವಳು ಎರಡನೆಯ ಬಹುಮಾನವನ್ನು ದೊರಕಿಸಿಕೊಂಡಳು. ಹೀಗಾಗಿ ಶಾಲೆಯ ಪತ್ರಿಕೆಯಲ್ಲಿ ಎರಡನೆಯ ಬಾರಿಗೆ ಅವಳು ಆರಾಧ್ಯ ದೇವತೆಯೆನಿಸಿದಳು. ಅದನ್ನು ಕಂಡು "ಇಲ್ಲಿ ನಿಜವಾದ ಯೋಗ್ಯತೆಯನ್ನು ಗಣಿಸುವವರಿಲ್ಲ" ಎಂಬ ನೋವು ಮನೋಹರನಿಗಾಯಿತು. ಕನ್ನಡದಲ್ಲಿ ಸಾಕಷ್ಟು ಪರಿಶ್ರಮವುಳ್ಳ ಆತ, ತಮ್ಮ ಕನ್ನಡ ಪಂಡಿತರನ್ನು ಹಿಡಿದು "ಸರ್, ಕಾಲೇಜ್ ಡೇ ಎಂದರೆ ಎಂಥದಿದು? ನಮ್ಮ ಕನ್ನಡ ನಾಟಕಗಳಿಗೆ ಇಲ್ಲಿ ಸ್ಥಾನವೇ ಇಲ್ಲ. ಪ್ರಿನ್ಸಿಪಾಲರಿಗಂತು ಕನ್ನಡ ಬೇಕಾಗಿಯೇ ಇಲ್ಲ. ಆದರೆ ನಾವು ಕನ್ನಡದ ಕೈ ಬಿಡುವುದೇ? ನಮ್ಮ ಕರ್ನಾಟಕ ಸಂಘದ ದಿವಸವನ್ನು ಬೇರೆಯಾಗಿ ಆಚರಿಸೋಣ. ಆಗಲಾದರೂ ಒಂದು ಕನ್ನಡ ನಾಟಕ ಆಡಿ, ಕನ್ನಡಕ್ಕೊಂದು ಮರ್ಯಾದೆ ಬರುವಂತೆ ಮಾಡಬೇಕು ನಾವೆಲ್ಲ" ಎಂಬ ಹಂಬಲವನ್ನು ಸೂಚಿಸಿದ. ಮಂಜುಳೆ ಅವನ ಸೂಚನೆಯನ್ನು ಅನುಮೋದಿಸಿದಳು. ಸಾಕಷ್ಟು ಉತ್ಸಾಹಿಗಳಾದ ಇತರ ಹುಡುಗರು ಆ ಯೋಚನೆಗೆ

ಬೆಂಬಲವನ್ನು ಕೊಟ್ಟರು. ಆದರೆ ಪಂಡಿತರಿಗೆ ಆ ಪ್ರಸ್ತಾಪವನ್ನು ಪ್ರಿನ್ಸಿಪಾಲರೆದುರಿಗೆ ತಾವಾಗಿ ಇರಿಸಲು ಧೈರ್ಯ ಸಾಲದು. ಶ್ರೀಮಂತ ಸಂಸಾರದ ಮನೆಯಲ್ಲಿ ದೇವರ ಪೂಜೆಯ ಭಟ್ಟರ ಸ್ಥಾನ ತಮ್ಮ ಕನ್ನಡಕ್ಕೆ ಎಂದು ಅವರ ಅನುಭವವಾಗಿತ್ತು. ಅಂಥ ಸ್ಥಾನ ತನ್ನದು ಎಂದು ಅರಿತ ಅವರು 'ಪ್ರಿನ್ಸಿಪಾಲರ ಮನಸ್ಸನ್ನು ನೀವೇ ಹೋಗಿ ಒಲಿಸಬೇಕು' ಎಂದರು.

ಪ್ರಿನ್ಸಿಪಾಲರಿಗೆ ಕನ್ನಡ, ಮಲೆಯಾಳಿ, ಕೊಂಕಣಿ ಎಲ್ಲ ಭಾಷೆಗಳೂ ಒಂದೇ. ಅವರ ಮೆಚ್ಚಿಗೆಯ ಭಾಷೆ ಮಾತ್ರ ಇಂಗ್ಲಿಷ್. ಅವರ ಅಭಿಮಾನದ ಗ್ರಂಥಗಳು ಬರಿಯ ಇಂಗ್ಲಿಷ್ ಸಾಹಿತ್ಯ. ಆದರೆ ಹುಡುಗರ ಉತ್ಸಾಹಕ್ಕೆ ಯಾವಾಗಲೂ ಅಡ್ಡಿ ತರುವವರಲ್ಲ. "ನಾವೊಂದು ಕನ್ನಡ ಸಂಘದ ದಿನವನ್ನಾಚರಿಸುತ್ತೇವೆ. ಒಂದು ನಾಟಕವಾಡುತ್ತೇವೆ. ನಿಮ್ಮ ಆಶೀರ್ವಾದ ಬೇಕು" ಎಂದು ಮನೋಹರ ಹುಡುಗರನ್ನು ಕೂಡಿಕೊಂಡು ಹೋಗಿ ಕೇಳಿದಾಗ "ಯಾಕಾಗಬಾರದು?" ಎಂದು ಉತ್ತರಿಸಿದರು. ಅದರಿಂದ ಅವರ ಮುಂದಿನ ಕೆಲಸ ನಿರಾತಂಕವಾಯಿತು.

ಅಲ್ಲಿಂದ ಮುಂದೆ 'ಯಾವ ನಾಟಕ ಆಡಲಿ' ಎಂಬ ತಲೆಬೇನೆ ಪಂಡಿತರಿಗೆ ತೊಡಗಿತು. ಅವರು ವಿಹರಿಸಿದ್ದು ಸಂಸ್ಕೃತ ಮತ್ತು ಕನ್ನಡ ಕಾವ್ಯಗಳಲ್ಲಿ. ಹೊಸಗನ್ನಡ ಅವರಿಗೆ ತೀರ ಹೊಸತೇ. 'ಅದರಲ್ಲೇನಿದೆ?' ಎಂಬ ತಾತ್ಸಾರವೂ ಮೊದಲಿಂದ ಬಂದಿತ್ತು. ಆದರೆ ಅದಕ್ಕೆ ಮನ್ನಣೆಯನ್ನು ಕೊಡದೆ ಹೋದಲ್ಲಿ ಕನ್ನಡಕ್ಕಿರುವ ಮನ್ನಣೆ ಮಾಯವಾದೀತೆಂದು ಬಲ್ಲ ಅವರು "ಮನೋಹರ, ರಿಹರ್ಸಲಿಗೆ ಬೇಕಾದರೆ ನಾನು ಬರುತ್ತೇನೆ. ಹಾಗಲ್ಲ ಹೀಗೆ ಎಂದು ತಿಳಿದುದನ್ನು ಹೇಳುತ್ತೇನೆ. ಒಳ್ಳೆಯ ನಾಟಕವನ್ನು ನೀನೇ ಆರಿಸು" ಎಂದು ಅವನಿಗೇ ಹೊಣೆಯನ್ನೊಪ್ಪಿಸಿದಾಗ, ಅವನಿಗೆ ತುಂಬ ಸಂತೋಷವಾಯಿತು. ಹುಡುಗರಲ್ಲಿ ಸ್ವಾಭಾವಿಕವಾಗಿ–ಗದ್ಯ ನಾಟಕ, ಪದ್ಯ ನಾಟಕ, ಯಾವುದು ಬೇಕು, ಯಾವುದು ಬೇಡ–ಎಂಬ ಚರ್ಚೆ ತೊಡಗಿತು. ತಾನು ಈಗಾಗಲೇ ತಿಳಿದ 'ಸಾವಿತ್ರಿ–ಸತ್ಯವಾನ್' ನಾಟಕ ಆಗಬಹುದು ಎಂದು ಮನೋಹರನಿಗೆ ತೋರಿದರೆ, ನಾರಾಯಣ ರಾಯನೆಂಬ ಜತೆಯ ಇನ್ನೊಬ್ಬ ವಿದ್ಯಾರ್ಥಿ, "ಅಂಥ ಹಳೆಯ ಪುರಾಣವೇಕೆ? 'ಆಷಾಢ ಭೂತಿ' ನಾಟಕ ಚೆನ್ನಾಗಿದೆ. ಮೊಲಿಯರನದು; ಮೂರ್ತಿರಾಯರು ಚೆನ್ನಾಗಿ ಕನ್ನಡಿಸಿದ್ದಾರೆ. ಅಲ್ಲದೆ ಒಳ್ಳೆಯ ಕಾಮೆಡಿಯಾಗುತ್ತದೆ" ಎಂದು ವಾದಿಸಿದ. ಪಂಡಿತರ

ಮಧ್ಯಸ್ಥಿಕೆಯಿಂದ, ಆ ಎರಡೂ ನಾಟಕಗಳನ್ನು ಆಡುವುದೆಂದು ನಿರ್ಣಯವಾಯಿತು. ಅವರೇನೆ ಕುಳಿತು, ಅಭ್ಯಾಸದ ಮೇಲ್ವಿಚಾರಣೆ ನೋಡಿಕೊಳ್ಳತೊಡಗಿದರು.

"ಊರ್ವಶಿ, ನೀನೇನು ಪಾರ್ಟುಮಾಡುತ್ತೀಯಾ?" ಎಂದು ಕೇಳಿದಳು ಮಂಜುಳೆ. "ನಿನಗೆ ನಾರದನ ಪಾರ್ಟು ಗೊತ್ತಿದೆ. ನಾನು ಸಾವಿತ್ರಿ ಕಲಿತದ್ದೇ ಉಂಟು" ಎಂದರೆ "ಇಸ್ಸೀ, ಕನ್ನಡ ನಾಟಕದಲ್ಲಿ ಯಾರು ಪಾರ್ಟು ಮಾಡುತ್ತಾರೆ?" ಎಂದುಬಿಟ್ಟಳು ಅವಳು. ಕನ್ನಡದಿಂದ ತಾನು ಇಂಗ್ಲಿಷಿನ ಮೇಲ್ಮಟ್ಟಕ್ಕೆ ಬಂದಿದ್ದೇನೆ ಎಂಬ ತಿಳಿವು ಅವಳದ್ದು. ಆದರೂ ಮನೋಹರ ನಿರಾಶೆಗೊಳ್ಳಲಿಲ್ಲ. ತಾನು ಮುಂದಾಳಾದ; ಸತ್ಯವಾನನ ಪಾತ್ರ ವಹಿಸಿದ. ತಾನೇ ಇತರ ಭೂಮಿಕೆಗಳನ್ನು ಹಂಚಿಕೊಟ್ಟು ಹಾಡು, ಗದ್ಯಗಳನ್ನೆಲ್ಲ ಹೇಳಿಕೊಡತೊಡಗಿದ. ನಾರಾಯಣರಾಯನ ಸಹಕಾರ ಅವನಿಗೆ ಬೇಕೇ ಇತ್ತು. ಅವನು ಆರಿಸಿದ 'ಆಷಾಢ ಭೂತಿ' ನಾಟಕದಲ್ಲೂ ಒಂದು ಮುಖ್ಯ ಪಾತ್ರ ವಹಿಸಿದ. ಮಾರ್ಚಿ ತಿಂಗಳಲ್ಲೇ ತಮಗೆ ಪರೀಕ್ಷೆ ಬರುತ್ತದೆ-ಎಂಬುದರಿಂದ ಅದಕ್ಕಿಂತ ಕೆಲವು ದಿನ ಮುಂಚಿತವಾಗಿ ಇವರ ನಾಟಕ ಪ್ರದರ್ಶನದ ಏರ್ಪಾಟಾಯಿತು. ಆ ದಿವಸ ಊರ್ವಶಿ ಪ್ರೇಕ್ಷಕರ ಸಾಲಿನಲ್ಲಿ ಕುಳಿತಿದ್ದಳು. ಪ್ರಿನ್ಸಿಪಾಲರ ಮೆಚ್ಚಿನ ವಿದ್ಯಾರ್ಥಿನಿ ಅವಳು. ಮೊದಲು ಆಷಾಢ ಭೂತಿ ನಾಟಕವಾಯಿತು. ಮೈಸೂರಿನ ಕನ್ನಡ ಭಾಷೆ ನಟರಿಗೆ ಅಷ್ಟೊಂದು ಸಾಧಿಸದಿದ್ದರೂ ಅವರಲ್ಲಿ ಉತ್ಸಾಹ ತುಂಬಿಕೊಂಡಿತ್ತು. ಆ ನಾಟಕದಲ್ಲಿ ಹಾಸ್ಯಕ್ಕೂ, ಅಭಿನಯಕ್ಕೂ ಹೆಚ್ಚಿನ ಎಡೆಯಿತ್ತು. ನಾರಾಯಣ ರಾಯ, ಮನೋಹರರಿಬ್ಬರೂ ಗಂಡು ಪಾತ್ರ ವಹಿಸಿ, ತಮ್ಮ ವಿನೋದಪರ ಭೂಮಿಕೆಗಳಿಂದ ಸಭೆಯನ್ನು ಮರುಳುಗೊಳಿಸಿದರು.

ಅನಂತರ ರಾಮಯ್ಯ ಮಾಸ್ತರ್ ಪ್ರಣೀತವಾದ, 'ಸಾವಿತ್ರಿ ಸತ್ಯವಾನ್' ನಾಟಕ ನಡೆಯಿತು. ಆ ದಿನ ಪೆಟ್ಟಿಗೆ ಬಾರಿಸುವುದಕ್ಕೆ, ಮನೋಹರ ಪತ್ರ ಬರೆದು ಮುದ್ದೂರಿಂದ ರಾಮಯ್ಯ ಮಾಸ್ತರರನ್ನೇ ಕರೆಯಿಸಿದ್ದ: ಆ ನಾಟಕದ ಮಾತುಗಳು ಉದ್ದುದ್ದವಾಗಿದ್ದು, ಆಡಂಬರಯುತವಾಗಿದ್ದರೂ, ಕಥಾವಸ್ತು ಸ್ವಾಭಾವಿಕವಾಗಿ ಮನೋವೇಧಕವಾಗಿತ್ತು. ಅದರಲ್ಲಿ ಮನೋಹರನ ಸತ್ಯವಾನ್ ಪಾತ್ರವೂ, ಮಂಜುಳೆಯ ಸಾವಿತ್ರಿ ಭೂಮಿಕೆಯೂ ಆಕರ್ಷಕವಾಗಿದ್ದುವು. ನಾರದನ ಭೂಮಿಕೆಯನ್ನು ವಹಿಸಿದ ಶ್ರೀನಾಥನೆಂಬ

ಹುಡುಗ, ತನ್ನ ಮಧುರ ಕಂಠದಿಂದ ಆರೆಂಟು ಬಾರಿ 'ಒನ್ಸ್‌ಮೋರ್'ಗಳಿಸಿ ಕೊಂಡ. ಆ ನಾಟಕ ಮುಗಿದಾಗ ಕನ್ನಡ ಪಂಡಿತರು ಹೆಮ್ಮೆಯಿಂದ ತಾವೇ ನಾಟಕ ಆಡಿದವರಷ್ಟು ಬಾತುಕೊಂಡಿದ್ದರು. ಅರ್ಧಮರ್ಧ ಕನ್ನಡ ಭಾಷೆ ಯನ್ನು ಬಲ್ಲ ಪ್ರಿನ್ಸಿಪಾಲರ ಇನ್ನೊಂದು ಮಗ್ಗುಲಲ್ಲಿ ಅವರೇನೆ ಕುಳಿತಿದ್ದರು. ಇಂಗ್ಲಿಷ್ ನಾಟಕ ಪ್ರಿಯರಾಗಿದ್ದ ಪ್ರಿನ್ಸಿಪಾಲರು ಅವರೊಡನೆ "ನಮ್ಮ ಹುಡು ಗರು ತಮ್ಮ ಮಾತೃಭಾಷೆಯಲ್ಲಿ ನೀರಲ್ಲಿ ಮೀನು ಈಸಿದಷ್ಟು ಸುಲಭವಾಗಿ ಆಡುತ್ತಿದ್ದಾರಲ್ಲವೇ! ಇಂಗ್ಲಿಷ್ ಭಾಷೆ ಅವರಿಗೆ ಇನ್ನೂ ಪರಭಾಷೆಯಾಗಿಯೇ ಕಾಣಿಸುತ್ತದೆಯಲ್ಲವೆ" ಎಂದು ಅಭಿಪ್ರಾಯ ಹೇಳಿದರು. ಈಚೆ ತಿರುಗಿ, ಬಳಿಯಲ್ಲಿ ಕುಳಿತಿದ್ದ ಊರ್ವಶಿಯೊಡನೆ "ನೀನೊಂದು ಭೂಮಿಕೆಯನ್ನು ವಹಿಸಬಹುದಿತ್ತು. ಮಂಜುಳೆಗಿಂತ ನೀನು ಚೆನ್ನಾದ ಸಾವಿತ್ರಿಯಾಗುತ್ತಿದ್ದೆ" ಎಂದರು. ಆ ದಿನ ಮಂಜುಳೆಯ ಪಾತ್ರ ಚೆನ್ನಾಗಿ ಆಗಿಲ್ಲವೆಂಬುದರಿಂದಲ್ಲ; ಊರ್ವಶಿಯಲ್ಲಿ ಅವರಿಗೆ ಹೆಚ್ಚಿನ ಅಭಿಮಾನ ಇತ್ತೆಂಬುದರಿಂದ. ಊರ್ವಶಿ ತಾನು ಬೇಕೆಂದೇ ನಾಟಕದಲ್ಲಿ ಪಾತ್ರವನ್ನು ತಪ್ಪಿಸಿಕೊಂಡವಳೆಂದು ಹೇಳಲಿಲ್ಲ. "ಪರೀಕ್ಷೆ ತೀರ ಸಮೀಪಿಸಿತು. ಕಾಲೇಜ್ ಡೇಗೆ ತುಂಬ ಸಮಯ ಹೋಯಿತು. ಅದಕ್ಕೋಸ್ಕರ ಇದನ್ನು ಬಿಟ್ಟೆ" ಎಂದಳು. "ಅದೂ ಸಹ ಒಳ್ಳೆಯದೇ ಆಯಿತು" ಎಂದರು ಪ್ರಿನ್ಸಿಪಾಲರು.

ಆ ದಿನ ಕನ್ನಡ ಪಂಡಿತರಿಗಾದಷ್ಟೇ ಆನಂದ, ನಾಟಕದ ಎಲ್ಲ ಪಾತ್ರ ಧಾರಿಗಳಿಗೂ ಆಗಿತ್ತು. ಮನೋಹರ ಬೇಗ ಬೇಗನೆ ಬಣ್ಣ ಉಜ್ಜಿಕೊಂಡು, ಹೊರಕ್ಕೆ ಬಂದು, ಆ ನಾಟಕವನ್ನು ಬರೆದ ರಾಮಯ್ಯಮಾಸ್ತರರ ಪರಿಚಯ ವನ್ನು ತಮ್ಮ ಪ್ರಿನ್ಸಿಪಾಲರಿಗೆ ಮಾಡಿಸಿಕೊಡಬೇಕು—ಎಂದು ಅವಸರಿಸಿದ. ಅದು ಮಾತ್ರ ವ್ಯರ್ಥವಾಯಿತು. ಈತ ಹೊರಗೆ ಬರುವಷ್ಟರಲ್ಲಿ, ಅವರು ಹೊರಟುಹೋಗಿದ್ದರು. ಆತನಿಗೆ ಅದೊಂದೇ ಆ ದಿನದ ನಿರಾಶೆ.

* * * * *

ಕಾಲೇಜಿನ ಮೊದಲನೆಯ ವರ್ಷದ ಜೀವನದಲ್ಲಿ ಮಂಜುಳೆಯ ಮನಸ್ಸು ತುಂಬ ಉಲ್ಲಸಿತವಾಗಿತ್ತು. ಮನೋಹರ ತನ್ನವನು ಎಂಬ ಭಾವನೆ ಅವಳಲ್ಲಿ ಎಂದೇ ಮೂಡಿತ್ತು. ಅದರ ಸವಿಗನಸಿನಲ್ಲೇ ಅವಳು ತೇಲುತ್ತಿ ದ್ದಳು. ಕಾಲೇಜಿಗೆ ಬಂದಾಗ, ಮರಳುವಾಗ ಅವನಾಗಲೀ ಅವಳಾಗಲೀ ಏನಾದರೊಂದು ನೆಪವನ್ನು ಕಲ್ಪಿಸಿ, ಸೇರಿ, ಮಾತನಾಡುತ್ತಾರೆ. ಆದರೆ ಅಂತ

ರಿಕ ಸ್ವಪ್ನಗಳನ್ನು ತೋಡಿಕೊಳ್ಳುವುದಕ್ಕೆ ವಿಶೇಷ ಅವಕಾಶವಾಗುತ್ತಿದ್ದಿಲ್ಲ. ಎಷ್ಟೋ ಬಾರಿ ಮನೋಹರ ಸಂಜೆಯ ವೇಳೆಗೆ ಅವಳನ್ನು ವನಿತಾಶ್ರಮದ ಅರ್ಧ ಹಾದಿಯ ತನಕ ಬಿಟ್ಟು ಬರಲು ಹೋಗುವುದುಂಟು. ಮುದ್ದೂರಿನಲ್ಲಿ ಸಿನೆಮಾ ಇರಲಿಲ್ಲ. ಮಂಗಳೂರಿನಲ್ಲಿ ಅದೊಂದು ವಿಶೇಷವಾಗಿದೆ. ಮನೋಹರ ಸಾಮಾನ್ಯವಾಗಿ ಯಾವ ಸಿನೆಮಾವನ್ನೂ ಬಿಡುವವನಲ್ಲ. ಅವುಗಳ ಪ್ರಶಂಸೆಯನ್ನು ಕೇಳಿ ಕೇಳಿ, ಕೆಲವು ಬಾರಿ ಅವನ ಆಮಂತ್ರಣವನ್ನು ಮನ್ನಿಸಿ, ಮಂಜುಳೆ ಅವಕ್ಕೆ ಹೋದುದುಂಟು. ಅವನೇ ಅವಳಿಗಾಗಿ ಕಾದು ನಿಂತು, ಟಿಕೆಟ್ ತೆಗೆಯಿಸಿಕೊಡುತ್ತಾನೆ. ಮರಳಿ ಬರುವಾಗ ತಿರುಗಿ ಭೇಟಿಯಾಗಿ "ಹೇಗಿತ್ತು? ಚೆನ್ನಾಗಿಲ್ಲವೆ?" ಎಂದು ಪ್ರಶ್ನಿಸುತ್ತಾನೆ. "ಇದೆ ಸುಮಾರಾಗಿ" ಎನ್ನುವವಳು ಅವಳು. ಅವಳಿಗೆ ನಾಟಕಗಳು ಆಕರ್ಷಿಸಿದಷ್ಟು, ಆಗಷ್ಟೆ ಪರಿಚಯಕ್ಕೆ ಬಂದಿದ್ದ ಚಲಚ್ಚಿತ್ರಗಳು,ಅವುಗಳ ಅಸಂಬದ್ಧ ಕಥಾನಕಗಳು ರುಚಿಸುತ್ತಿರಲಿಲ್ಲ. ಇಲ್ಲಿಯೂ ಅವಳಿಗೆ ಆತ್ಮೀಯ ಸಂಭಾಷಣೆಗೆ ಅವಕಾಶ ಸಾಲದು. ಹಾಗಿದ್ದರೂ ಕೆಲವೊಂದು ಬಾರಿ ಅವಳ ಮಾತಿನ ಹಸಿವನ್ನು ತೀರಿಸಿಕೊಳ್ಳುವುದಕ್ಕೆ ಮನೋಹರ ಅವಕಾಶ ಕಲ್ಪಿಸಿಕೊಡುತ್ತಿದ್ದ. 'ಟ್ರಿಪ್ಪಿಗೆ ಬರುತ್ತೀಯಾ'ಎಂದು ಕೇಳಿ ಕರೆದೊಯ್ಯುತಿದ್ದ. ಬೆಳಗ್ಗೆ ರೈಲ್ ನಿಲ್ದಾಣದಲ್ಲಿ ಇಬ್ಬರೂ ಭೇಟಿಯಾಗುತಿದ್ದರು. ಬೇಕಾದ ತಿಂಡಿತೀರ್ಥಗಳನ್ನುಮನೋಹರ ಜತೆಗೆ ಕಟ್ಟಿಕೊಳ್ಳುತಿದ್ದ.ಅಲ್ಲಿಂದ ಕುಂಬಳೆಗೊಮ್ಮೆ,ಮಂಗಲ್ಪಾಡಿಗೊಮ್ಮೆ, ಮಂಜೇಶ್ವರದ ಕಡಲು ತೀರಕ್ಕೆ ಇನ್ನೊಮ್ಮೆ–ಹೀಗೆ ವಿಹಾರಕ್ಕೆ ಹೋದುದುಂಟು. ಕಡಲಪಂಡೆಯ ತೆಂಗಿನ ತೋಟಗಳ ತಂಪಿನಲ್ಲಿ ಹತ್ತಿರ ಕುಳಿತು, ಮಾತನಾಡುತ್ತ ವೇಳೆ ಕಳೆಯುತಿದ್ದರು. ನೆಪಕ್ಕೆ ಕೈಗಳಲ್ಲಿ ಪುಸ್ತಕಗಳನ್ನು ಹಿಡಿಯುತಿದ್ದರು. ಹಾಗೆ ಹೊತ್ತು ಕಳೆದು ಸಂಜೆಯ ರೈಲಿಗೆ ಮನೆಗೆ ಬರುತಿದ್ದರು. ಈ ಎಲ್ಲ ಅವಕಾಶಗಳಲ್ಲಿ ನಡೆದ ಸರಸ ಸಲ್ಲಾಪಗಳಿಂದ, ಮನೋಹರ ತನ್ನವನು ಎಂಬ ವಿಶ್ವಾಸ ಮಂಜುಳೆಗೆ. ಅವಳು ಮುಂದಿನ ಸುದಿನ ಕಾಯುತ್ತಿದ್ದಾಳೆ. ಅವನನ್ನೆ ಮದುವೆಯಾಗಬೇಕೆಂಬ ಹಿರಿಯಾಸೆ ಅವಳಿಗೆ. ಮನೋಹರನಿಗೆ ಇಪ್ಪತ್ತು ವರ್ಷ ನಡೆಯುತ್ತಿತ್ತು. ಇಪ್ಪತ್ತೊಂದು ವರ್ಷ ಕೊನೆಗೊಂಡರೆ ಅವನು ಸ್ವತಂತ್ರ. ಆದರೆ ಇಬ್ಬರಿಗೂ ಅಂತರ್ಜಾತೀಯವಾದ ಈ ವಿವಾಹದ ವಿಷಯದಲ್ಲಿ ಮನೆಯ ಹಿರಿಯರ ಬೆಂಬಲ ದೊರೆಯಲಾರದೆಂಬುದು ಗೊತ್ತು. ತಾನು ಪ್ರಾಯಕ್ಕೆ ಬಂದ ಮೇಲೆ, ಮದುವೆಯಾಗುವು

ದೊಂದು ಕಷ್ಟವಲ್ಲ-ಎಂದು ಮನೋಹರನಿಗೆ ಅನಿಸುತ್ತಿದ್ದರೂ, ತಂದೆ ತಾಯರಿಗೆ ವಿರುದ್ಧವಾಗಿ, ಆ ಕಾರ್ಯಕ್ಕೆ ದುಮುಕುವ ಸಾಹಸ ತನಗಿದೆಯೇ — ಎಂಬ ಪ್ರಶ್ನೆಯನ್ನು ತನಗೆ ತಾನೇ ಕೇಳಿಕೊಂಡವನಲ್ಲ. ಆ ಮದುವೆಯಾಗಿ, ತಾಯಿ ತಂದೆಗಳಿಗೆ ತಿಳಿಸಿದರೆ, ತಲೆಬಾಗುವಷ್ಟು ಬುದ್ಧಿ ಅವರಿಗಿದೆ ಎಂಬ ಮೊದ್ದು ಬುದ್ಧಿ ಅವನದು. ಆದರೆ ಮಂಜುಳೆಗೆ ಸ್ವಂತ ವಿಷಯದಲ್ಲಿ ಅಂಥ ಅನುಮಾನವಿಲ್ಲ. "ತಾನು ತನ್ನ ಅಣ್ಣ, ಅತ್ತಿಗೆಯರಿಂದ ದೂರವಾಗಬೇಕು. ಆದರೆ ಅವರಿಗೂ ಸಂತೋಷ; ತನಗೂ ಆನಂದವೇ" ಎಂದು ಅವಳು ತಿಳಿದಿದ್ದಾಳೆ. ಅವರಿಂದ ಆಕ್ಷೇಪ ಬಂದರೆ ಅದನ್ನೆಣಿಸುವ ಮನೋವೃತ್ತಿಯೂ ಅವಳದ್ದಲ್ಲ. ತಮ್ಮಿಬ್ಬರ ಈ ಆಪ್ತಸ್ನೇಹ,ಬೆಕ್ಕು ಕಣ್ಮುಚ್ಚಿ ಹಾಲು ಕುಡಿದಂತೆ, ತಮ್ಮಿಬ್ಬರಿಗೇನೇ ಗೊತ್ತು,ಎಂದು ಆ ಇಬ್ಬರು ತಿಳಿದಿದ್ದರೂ ಅವರ ಯುವಕ ಪ್ರಪಂಚ ಮಾತ್ರ ಆಷ್ಟು ಮೂಢ ಜಗತ್ತಲ್ಲ. ಅನೇಕ ಸಹಪಾಠಿಗಳು ತಂತಮ್ಮ ಮನೋನುರಾಗ ಬಲ್ಲವರು; ಕಾಲೇಜಿನ ಸುಲಭ ಆವರಣದಲ್ಲಿ ಗೆಳೆಯ ಗೆಳತಿಯರಿಗಾಗಿ ಹಾತೊರೆಯುತಿದ್ದವರು. ಇವರಂತೆಯೆ ಅವರೂ ಕನಸಿನ ಗೋಪುರಗಳನ್ನು ಕಟ್ಟುತಿದ್ದವರು. ಕಟ್ಟುವವರ ವಿಚಾರದಲ್ಲೂ, ಕಟ್ಟಿದವರ ವಿಚಾರದಲ್ಲೂ ಅನುಮಾನಗ್ರಸ್ತರಾಗಿ ನೋಡತಕ್ಕವರು. ಮನೋಹರ ಕಾಲೇಜಿನ ಪತ್ರಿಕೆಗೆ, ಮಂಜುಳೆಯನ್ನು ಆರಾಧ್ಯದೇವತೆಯನ್ನಾಗಿ ಮಾಡಿ ಬರೆದ ಲೇಖನ ಪ್ರಕಟವಾಗಲಿಲ್ಲವಾದರೂ, ಆತನ ರಾಣಿಯು ಮಂಜುಳೆ ಎಂಬ ಸುದ್ದಿಗೆ ಅವಕಾಶವನ್ನು ಕೊಟ್ಟಿತು. ಅವರಿಬ್ಬರೂ ಸೇರಿ ಮಾತನಾಡಿದರೆ ಇನ್ನಷ್ಟು ಅನುಮಾನ ಸೇರುತ್ತದೆ. ಅವರು ನಾಟಕದೊಳಗಣ 'ಸತ್ಯವಾನ್–ಸಾವಿತ್ರಿ'ಯರಾದ ಮೇಲೆ ಆ ವಾರ್ತೆ ಸುದ್ದಿಯಾಗುವುದು ಬಿಟ್ಟು, ಸತ್ಯವೆನಿಸುವಷ್ಟು ಪ್ರಬಲವಾಯಿತು.

ಮಂಜುಳೆಯು ತನ್ನ ಮನೋಹರನೊಡನೆ ಸಲುಗೆಯಾಗಿದ್ದುದರಲ್ಲಿ ಮುಚ್ಚುಮರೆ ಇರಲಿಲ್ಲ. ಹಾಗೆ ನೆಟ್ಟಗೆ ಪ್ರಶ್ನಿಸಿದರೆ "ಹೌದು. ನಾನು ಅವನನ್ನೇ ಮದುವೆಯಾಗುತ್ತೇನೆ. ಏನು ಮಾಡುತ್ತೀರಿ? ತಪ್ಪೇ?" ಎನ್ನುವ ಧೈರ್ಯವುಳ್ಳವಳವಳು. ಏಕ ಮನಸ್ಸಿನ ಭಕ್ತಿ ಅವಳದ್ದು. ಅವಳ ಗೆಳತಿಯರು ನಾಲ್ಕಾರು ಪ್ರಣಯಿಗಳ ಮುಂದೆ ಪತಂಗದಂತೆ ಹಾರಿದ ಹಾಗೆ ಅವಳೆಂದೂ ಹಾರಾಡಿದವಳಲ್ಲ. ಉಡುಗೆ ತೊಡುಗೆಗಳಲ್ಲಿ ತೀರ ಸರಳೆ. ಕೃತಕ ಸೌಂದರ್ಯೋಪಕರಣಗಳಾವುವೂ ಅವಳಿಗೆ ಮೆಚ್ಚವು. ಹೀಗಿದ್ದೂ ಒಂದು ದಿನ,

ಊರ್ವಶಿ ಪರಿಹಾಸ್ಯಕ್ಕೆ ಅವಳನ್ನು "ಹೌದೇ, ನಿನ್ನ ಮತ್ತು ಮನುವಿನ ಮದುವೆ ನಿಶ್ಚಯವಾಯಿತೇ? ಆಗಿದೆ ಎಂತಲ್ಲ" ಎಂದು ಕೇಳಿದಾಗ, ಮಂಜುಳೆ ಕಿಡಿ ಕಿಡಿಯಾದಳು.

ಊರ್ವಶಿ ತನ್ನ ಮೊದಲಿನ ಬಾಯಿತೀಟೆಯನ್ನು ಬಿಟ್ಟವಳಲ್ಲ. ಇತರರನ್ನು ಕಡಿಮೆಮಾಡಿ ಹಂಗಿಸುವುದರಲ್ಲಿ ಅವಳು ಅದ್ವಿತೀಯೆ. ಕಾಲೇಜಿಗೆ ಹೋದ ಮೇಲಂತು ತಾನು ತೀರ ಬುದ್ಧಿವಂತೆಯೆಂಬ ಹೆಮ್ಮೆ ಅವಳಲ್ಲಿ ಸೇರಿಕೊಂಡಿದೆ. ಮೊದಲಿಗಿಂತ ಎಷ್ಟೋ ಹೆಚ್ಚಿನ ಬೆಡಗುಗಾರ್ತಿಯಾಗಿದ್ದಾಳೆ. ಎಲ್ಲ ಕಣ್ಣುಗಳು ತನ್ನನ್ನೇ ನೋಡಬೇಕು ಎಂಬ ಚಪಲ ಅವಳ ಸ್ವಭಾವದಲ್ಲಿ ಕಂಡು ಬರುತ್ತಿದೆ. ಹೋದ ಮೊದಲಷ್ಟು ದಿನ, ಮಂಜುಳೆಯೊಡನೆ ಅಚ್ಚುಮೆಚ್ಚಾಗಿ ಸಮಯ ಕಳೆದಳು. ಕಾಲೇಜಿಗೆ ಬರುವಾಗ ಹೋಗುವಾಗ ಅವಳೇ ಜತೆಗೆ ಬೇಕಿತ್ತು. ಮನೋಹರ ಅವಳ ಪರಿಚಯ ಇಲ್ಲದಂತೆ ನಟಿಸತೊಡಗಿ, ಮಂಜುಳೆಯ ಮೇಲೆ ಹೆಚ್ಚು ಹೆಚ್ಚು ವಿಶ್ವಾಸ ತೋರತೊಡಗಿದ ಮೇಲೆ, ಅವಳ ಪ್ರತಿಕ್ರಿಯೆ ಆರಂಭವಾಯಿತು. ಮಂಜುಳೆಯು ಬೇಡವಾದಳು. ಕಾಲೇಜಿನಲ್ಲಿ ಹೆಸರುಗಳಿಸಿದ ಮೇಲೆ, ನಾಲ್ವರು ಗೆಳತಿಯರಲ್ಲಿ ಅವಳೇ ಪ್ರಧಾನ ವ್ಯಕ್ತಿಯಾದಳು. ಅಲ್ಲಿಂದ ಉಳಿದವರ ಶೃಂಗಾರ, ಮನೋಭಾವಗಳನ್ನು ಟೀಕಿಸ ತೊಡಗಿದಳು. ಅವಳ ಮನದ ಅಪೇಕ್ಷೆಗಳು ಯೌವನಕ್ಕೆ ಸಹಜವಾದ ಅಪೇಕ್ಷೆಗಳಾಗಿದ್ದರೂ, ಪರರ ನಿಂದೆಯ ಕವಚ ಅವಳ ಸುಪ್ತ ಆಸೆಗಳಿಗೊಂದು ಮರೆಯಾಗಿತ್ತು.

ನಿಜವಾಗಿ ಊರ್ವಶಿ ಎಂಥವಳು ಎಂದು ಮಂಜುಳೆಗೆ ಗೊತ್ತಾದುದು ಅದೊಂದು ದಿನ: ಮಾರ್ಚಿ ತಿಂಗಳು ಬಂದಿತ್ತು. ಅವರ ಪರೀಕ್ಷೆ ಕಳೆದಿತ್ತು. ನಾಳೆ ರಜೆ–ಎಂಬಾಗ, ಮುದ್ದೂರಿಗೆ ಹೋಗಬೇಕಲ್ಲ, ಎಂಬ ಚಿಂತೆ ಅವಳನ್ನು ಕಾಡತೊಡಗಿತು. ಮುಂಚಿನ ದಿನ ಮನೋಹರ ಅವಳನ್ನು ಕಾದು ನಿಂತಿದ್ದ. "ಸಾಯನ್ಸ್‌ನಲ್ಲಿ ಹೇಗೆ ಮಾಡಿದ್ದೀ" ಎಂದು ಸಂಭಾಷಣೆ ತೊಡಗಿದ. ಅನಂತರ "ರಜೆಯಲ್ಲೇನು ಮಾಡುತ್ತೀ ನೀನು?" ನಾನು ಒಮ್ಮೆ ಊರಿಗೆ ಹೋದರೆ, ಕಾಲೇಜ್ ಶುರುವಾಗುವ ತನಕ ಮನೆಯವರು ಬರಲು ಬಿಡುವಂತಿಲ್ಲ. ಅದಕ್ಕಾಗಿ ಊರಿಗೆ ಹೋಗುವ ಮುಂಚೆಯೇ ಮುಂಬಯಿಗೆ ಹೋಗಿ ಬರುವ ಯೋಚನೆ ಮಾಡಿದ್ದೇನೆ" ಎಂದ.

"ರಜೆಗೆ ಇಲ್ಲಿ ನಮ್ಮ ಆಶ್ರಮ ನಡೆಯುವುದಿಲ್ಲ. ಹೀಗಾಗಿ ಊರಿಗೆ

ಹೋಗದೆ ನನಗೆ ಗತಿ ಇಲ್ಲ."

"ನಾಳೆ?"

"ನಾಳೆಯೇ ಊರಿಗೆ ಹೊರಡಬೇಕು"

"ನಾಳೆ ಬೇಡ, ನಾಳೆ ಬೇಕಲಕ್ಕೆ ಹೋಗುವ; ಸಂಜೆ ಬರಬಹುದು. ಅನುಕೂಲವಾದ ರೈಲು ಬಂಡಿಯೂ ಇದೆ. ನಾಡಿದ್ದು ನೀನು ಮುದ್ದೂರಿಗೆ ಹೋಗು; ನಾನು ಮುಂಬಯಿಗೆ ಹೊರಡುತ್ತೇನೆ."

ಇನ್ನೆರಡು ತಿಂಗಳುಗಳ ತನಕ, ಮನೋಹರ ಕಣ್ಣಿಂದ ದೂರವಾಗುವದರಿಂದ, ಅವನ ಬಳಿಯಲ್ಲಿರುವ ಆ ಒಂದು ಸೊಗದ ದಿನವನ್ನು ಅವಳು ತಬ್ಬಿ ಹಿಡಿದಳು. ಇಬ್ಬರೂ ಮರುದಿವಸ ಬೆಳಗ್ಗೆ ರೈಲು ಬಂಡಿಯನ್ನೇರಿದರು. ಮಂಗಳೂರಿನಿಂದ ಹೊರಟು ಪಳ್ಳಿಕೆರೆ ನಿಲ್ದಾಣದಲ್ಲಿ ಇಳಿದರು: ಜನ ಶೂನ್ಯವಾಗಿದ್ದ ಕಡಲಿನ ಮರಳ ದಂಡೆಯನ್ನು ತುಳಿಯುತ್ತ, 'ಕೈ ಕೈ ಹಿಡಿದುಕೊಂಡು ಸಾಗಿದರು. ಹಾಗೆಯೆ ಮರಳು ದಂಡೆಯನ್ನು ತುಳಿದು, ಮುಂದೆ ಬೇಕಲ ಕೋಟೆಯ ಸುರಂಗ ಮಾರ್ಗವನ್ನು ಹೊಕ್ಕು, ಒಳಗಿದ್ದ ಅಂಗಣಕ್ಕೆ ಬಂದರು. ಬಂಗ್ಲೆಯೊಂದರ ಚಾವಡಿಯಲ್ಲಿ ಹಾಯಾಗಿ ಕುಳಿತುಕೊಂಡರು. ಹೊರಗೆ ಬೇಸಿಗೆಯ ಬಿಸಿಲು ನೆಲವನ್ನು ಸುಡುತಿತ್ತು. ತುಸು ತಡೆದು ಆ ಮೇಲೆ ತಿರುಗಾಡಲು ಹೋಗುವ ಎಂದು ಹೊರಗೆ ಬಂದಾಗ, ನೆಲ ಕಾದು ಹೋಗಿತ್ತು. ಅವರನ್ನು ಕಂಡು ಆ ಬಂಗ್ಲೆಯ ಮಾಲಿಯೂ ಬಂದ. "ಇಲ್ಲಿ ಉಳಿಯುತ್ತೀರಾ, ಬಾಗಿಲು ತೆರೆಯಬೇಕೇ?" ಎಂದು ಕೇಳಿದ. "ಇಲ್ಲ, ಸಂಜೆಗೆ ಹೋಗುವವರು ನಾವು" ಎಂಬ ಉತ್ತರ ಬಂದಿತು. "ಎಳನೀರು ಬೇಕೇ? ಬಾಳೆಯ ಹಣ್ಣನ್ನು ತರಬೇಕೇ? ಅಡುಗೆಗೆ ಅನುಕೂಲತೆ ಇಲ್ಲವಲ್ಲ" ಎಂದಾಗ, ಅವನಿಗಿಷ್ಟು ದುಡ್ಡನ್ನು ಕೊಟ್ಟು, ಹಣ್ಣುಹಂಪಲುಗಳನ್ನು ತರಹೇಳಿದರು. ಅನಂತರ—ನಿರರ್ಗಳವಾದ ಮಾತುಕತೆಗೆ ಆರಂಭಮಾಡಿದರು. ಮನೋಹರನ ಮಾತುಗಳಲ್ಲಿ ಸಿನೆಮ ತಾರೆಯರು, ಅವರ ರೂಪ, ಅಭಿನಯ ಇವೇನೇ ತುಂಬಿ ತುಳುಕುತ್ತಿದ್ದಂಥ ವಿಷಯಗಳಾಗಿದ್ದುವು. ಅವನಿಗೆ ಪ್ರಿಯವಾಗಿದ್ದ ವಿಷಯಗಳು ತನಗೂ ಪ್ರಿಯವೆಂದು ತೋರುವ ಆತುರವಷ್ಟೇ ಮಂಜುಳೆಗೆ.

ಮಾಲಿ ಅವರ ಉಪಹಾರಕ್ಕೆ ಸಿದ್ಧತೆಮಾಡಿಕೊಂಡು ಬಂದ; ಹಣ್ಣು ಬಂದಿತು, ಎಳನೀರು ಬಂದಿತು. ಮನೋಹರ ತನ್ನ ಜತೆಗೆ ತಂದಿದ್ದ ತಿಂಡಿ

ತಿನಸುಗಳಿದ್ದವು. ಅವನ್ನು ತಿಂದು ಕುಳಿತರು. ಮಾಲಿಗೆ ಕರುಣೆ ಕಂಡಿತು; ಬಂಗ್ಲೆಯ ಬಾಗಿಲನ್ನು ತೆರೆದಿರಿಸಿಹೋದ. ಇಬ್ಬರೂ ಒಳಗೆ ಹೋಗಿ ಆರಾಮ ಕುರ್ಚಿಗಳ ಮೇಲೆ ವಿರಮಿಸಿದರು. ಬಿಸಿಲಿನ ಬೇಗೆಗೆ ತೂಕಡಿಕೆಯೂ ಬಂದಿತು. ಅವರು ನಿದ್ದೆಯಿಂದ ಏಳುವಾಗ ಮನೋಹರನ ಕೈ ಗಡಿಯಾರದಲ್ಲಿ ಘಂಟೆ ನಾಲ್ಕಾಗಿತ್ತು. "ಮಂಜುಳಾ, ಐದೂವರೆಗೆ ರೈಲು ಬರುತ್ತದೆ. ಕಡಲು ನೋಡುವುದಕ್ಕೆ ಈಗಲೇ ಹೋಗೋಣ. ಬಿಸಿಲು ಇನ್ನೂ ತಗ್ಗಿಲ್ಲ. ಅದರೇನಂತೆ?" ಎಂದು ಇಬ್ಬರೂ ಕೈ ಕೈ ಹಿಡಿದು ಹೊರಟರು. ಏನೇನೂ ಬಿಸಿಯಾಗಿದ್ದ ಉಸುಬಿನ ದಂಡೆ ಬಂದಿತು. ನೀರಿನ ಅಂಚಿಗೆ ಹೋಗಿ ಅಲ್ಲಿ ನಿಂತು ಆಟವಾಡಿದರು. ಕಡಲ ಚಿಪ್ಪುಗಳನ್ನು ಹೆಕ್ಕಿದರು. ಅಲ್ಲಿಯೇ ಬಳಿಯಲ್ಲಿರುವ ಶಿಲೆಯೊಂದರ ಮೇಲೆ ಕುಳಿತರು; ಎದುರಿಗೆ ಅಪ್ಪಳಿಸುತ್ತಿದ್ದ ನೀರಿನ ಅಲೆಗಳನ್ನು ನೋಡತೊಡಗಿದರು. ಯಾವಾವುದೋ ಮಾತು, ಕತೆ, ನಗು, ಹಾಸ್ಯಗಳಲ್ಲಿ ಅವರಿಗೆ ಸಮಯ ಸರಿದುದೇ ಗೊತ್ತಾಗಲಿಲ್ಲ. "ಹೊತ್ತಾಯಿತ್ತೇನೋ" ಎಂದು ಮನೋಹರ ತನ್ನ ಕೈ ಗಡಿಯಾರವನ್ನು ನೋಡಿದ. ಆಗ ಗಡಿಯಾರ ನಿಂತಿತ್ತು. ಅದರಲ್ಲಿ ಇನ್ನೂ ನಾಲ್ಕೂ ಕಾಲು ಘಂಟೆ ಮಾತ್ರ. "ವಾಚಿಗೆ ಕೀ ಕೊಟ್ಟಿರಲೇ ಇಲ್ಲ. ನಿಂತುಬಿಟ್ಟಿದೆ. ರೈಲಿ ಹೊತ್ತಾಯಿತೋ ಏನೋ" ಎಂದು ಅವಳ ಕೈಯನ್ನು ಹಿಡಿದೆಳೆದು ನೂರು ಗಜದೂರ ಓಡುವುದರೊಳಗಾಗಿ, ರೈಲು ಬರುತ್ತಿರುವ ಧ್ವನಿ ಕೇಳಿಸಿತು. ಬಂಗ್ಲೆಯನ್ನು ಸೇರುವುದರೊಳಗಾಗಿ ಅದು ಹೊರಟುಹೋದ ಧ್ವನಿಯೂ ಕೇಳಿಸಿತು. ಒಮ್ಮೆ ಗಾಬರಿಯಾಯಿತು ಅವರಿಬ್ಬರಿಗೂ. "ರೈಲು ತಪ್ಪಿತಲ್ಲ, ಇನ್ನು ಇಲ್ಲಿಯೇ ಉಳಿಯಬೇಕಲ್ಲ" ಎಂದು ಉದ್ಗರಿಸಿದ ಮನೋಹರ.

"ನೀನ್ನ ಮೋಸವಿದು; ಬೇಕೆಂದೇ ನಿನ್ನ ಗಡಿಯಾರವನ್ನು ನಿಲ್ಲಿಸಿರಬೇಕು. ಹೀಗಾಗುತ್ತದೆಂದು ಗೊತ್ತಿದ್ದರೆ—ನಾನು ಬರುತ್ತಿರಲಿಲ್ಲ. ನಾಳೆ ನಮ್ಮ ವಾರ್ಡನ್‌ಳ ಬಾಯಲ್ಲಿ ಬಚಾಯಿಸಬೇಕಲ್ಲ."

"ಅದಕ್ಕೇನು ಕಷ್ಟ? ಮಂಗಳೂರಿನಲ್ಲಿ ಯಾರೂ ನಂಟರಿಲ್ಲವೆ ನಿನಗೆ? ಸ್ನೇಹಿತರಿಲ್ಲವೆ? ಅಲ್ಲಿ ನಿಲ್ಲುವುದಕ್ಕೆ ಒತ್ತಾಯಿಸಿದರು ಎನ್ನು" ಎಂದ.

ಒಂದೆರಡು ಕ್ಷಣಗಳ ಕಾಲ ಮಂಜುಳೆಯ ಮನಸ್ಸು ತಬ್ಬಿಬ್ಬಾಗಿತ್ತು. ಬಂಗ್ಲೆಯಿಂದೀಚೆಗೆ ಬಂದು, ಮೂಡಣ ಬಾನನ್ನು ನೋಡಿದರು. ತ್ರಯೋದಶಿಯ ಚಂದ್ರ ಕ್ಷೀಣ ಬೆಳಕಿನಿಂದ ಕಾಣಿಸುತ್ತಿದ್ದ. ಅಲ್ಲಿಂದ ತಿರುಗಿ

ಕಡಲನ್ನು ನೋಡುವುದಕ್ಕೆ ಹೋದರು. ಸಂಧ್ಯಾರಾಗದಲ್ಲಿ ಅವರ ಮನಸ್ಸು ಒಂದುಗೂಡಿತು. ಅಲ್ಲಿಂದ ಮರಳುವಾಗ ಕೋಟೆಯ ಅಂಗಣದಲ್ಲಿ ಬೆಳುದಿಂಗಳು ನಲಿದಾಡುತಿತ್ತು. ಮಾಲಿಯೂ ಬಂಗ್ಲೆಗೆ ಬಂದು ಕಾದಿದ್ದ.

"ರೈಲು ಬಂದದ್ದೇ ಗೊತ್ತಾಗಲಿಲ್ಲ" ಎಂದ ಮನೋಹರ.

"ಅದಕ್ಕೇನಾಯಿತಂತೆ; ಇಲ್ಲಿರಬಹುದಲ್ಲ. ಬಾಳೆಯಹಣ್ಣು, ಅವಲಕ್ಕಿಗಳನ್ನಾದರೂ ತಂದುಕೊಡುತ್ತೇನೆ. ನಿಮ್ಮಂಥ ಹೊಸ ಮದುಮಕ್ಕಳು ಇಲ್ಲಿಗೆ ಯಾವಾಗಲೂ ಬಂದು ಹೋಗುತ್ತಾರೆ" ಎಂದ. ಹಾಗೆ ತಾವು ಮದುಮಕ್ಕಳಾದುದು ನಿಜವೆಂದೇ ಕಂಡಿತವರಿಗೆ. ನಕ್ಕರು. ದೈವ ತಮ್ಮನ್ನೊಂದುಗೂಡಿಸಲು ಕರೆದು ತಂದ ಅವಕಾಶವದೆಂದು ಇಬ್ಬರಿಗೂ ಅನಿಸಿತು. ಮಾಲಿ ಹಣ್ಣು, ಅವಲಕ್ಕಿ, ಬೆಲ್ಲ ಮೊದಲಾದುವನ್ನು ತರುವುದಕ್ಕೆ ಹೊರಟುಹೋದ. ತಂದುದನ್ನು ಹೇಗೂ ತಿಂದು ಮುಗಿಸಬಹುದು. ಆದರೆ ರಾತ್ರಿಯನ್ನು ಅಲ್ಲಿ ಕಳೆಯುವುದು ಕಷ್ಟ ಎಂದು ಇಬ್ಬರಿಗೂ ತೋರಿತು. ಹೆಚ್ಚಿನ ಅರಿವೆಯ ಚೂರೊಂದನ್ನೂ ಅವರು ತಂದಿರಲಿಲ್ಲ. ತಾವು ಹಾಗೆ ಬರಿಗೈ ಬೀಸಿಕೊಂಡು ಬಂದುದು ತೀರ ತಪ್ಪಾಯಿತೆಂದು ಅವರಿಗೆ ಕಂಡಿತು.

ಮಾಲಿಯು ಕೊಟಡಿಯಲ್ಲೊಂದು ದೀಪವನ್ನು ಹೊತ್ತಿಸಿಟ್ಟು, ಹಣ್ಣು ಹಂಪಲುಗಳನ್ನು ತಂದುಕೊಟ್ಟ. "ಇಬ್ಬರಿಗೇ ಇರಲು ಹೆದರಿಕೆಯಾಗಲಿಕ್ಕಿಲ್ಲವಲ್ಲ" ಎಂದು ಕೇಳಿ, ಅಪ್ಪಣೆ ತೆಗೆದುಕೊಂಡು ಹೊರಟುಹೋದ. ಮಂಜುಳೆಯ ಭುಜದ ಮೇಲೆ ಕೈಯಿಟ್ಟು ಮನೋಹರ ಆಚೀಚೆ ಅಲೆದಾಡತೊಡಗಿದ. ಇಬ್ಬರೂ ಉಪಹಾರಮಾಡಿದರು. ಅನಂತರ ಒಳಗೆ ಕುಳಿತಿರೋಣವೆಂದು ಹೋದರು. ಅಲ್ಲಿಯ ತನಕ ತುಂಬ ಉತ್ಸಾಹವಾಗಿದ್ದ ಆ ಆವರಣ, ಬೆಳುದಿಂಗಳಿದ್ದರೂ, ರಾತ್ರಿ ಸರಿದಂತೆಲ್ಲ ಒಂದು ಬಗೆಯ ಆಂತರಿಕ ಭಯವನ್ನು ಅವರಲ್ಲಿ ಹುಟ್ಟಿಸತೊಡಗಿತು.

ಕುರ್ಚಿಯೊಂದರ ಮೇಲೆ ಮನೋಹರ ಅರ್ಧ ಒರಗಿಕೊಂಡು ಕುಳಿತ; ಅವನ ಮಗ್ಗುಲ ಬಳಿಯಲ್ಲಿ ಮಂಜುಳೆ ಕುಳಿತಿದ್ದಳು. ಅವನ ಕೈ ಅವಳ ಕೈಯನ್ನು ಸವರುತಿತ್ತು. ಅಷ್ಟಕ್ಕೆ ಮಂಜುಳೆ ಗಾಬರಿಗೊಂಡು "ಯಾರದೋ ಮಾತು ಕೇಳಿಸುತ್ತಿದೆ" ಎಂದಳು.

"ಇಲ್ಲಿಗೆ ಯಾರು ಬರುವವರು? ಭೂತವೇ" ಎಂದು ನಕ್ಕ ಮನೋಹರ. ಆದರೂ ಅವನ ಕಿವಿಗೂ ದೂರದಿಂದ ಬೀಸುವ ಗಾಳಿ ಏನೋ ಸ್ವರವನ್ನು

ಮುಟ್ಟಿಸುತ್ತಿತ್ತು. ಮಂಜುಳೆ ಆ ಸ್ವರವನ್ನು ಗುರುತಿಸಬಲ್ಲವಳಂತೆ ಕಿವಿಗೊಟ್ಟು ಕೇಳಿದಳು. "ಊರ್ವಶಿಯ ಸ್ವರವಲ್ಲವೇ!" ಎಂದು ಅಂಜಿಕೆಯನ್ನು ತೋರಿದಳು. ನೋಡಿಕೊಂಡು ಬರುತ್ತೇನೆಂದು ಮನೋಹರ ಅಲ್ಲಿಂದೆದ್ದು ಹೊರಟ. ಮೆಲ್ಲಗೆ ಕೋಟೆಯ ಅಂಗಳಕ್ಕಿಳಿದ; ಸ್ವರದ ದಿಕ್ಕನ್ನು ಹಿಂಬಾಲಿಸಿ ಮುಂದುವರಿದ. ದೂರದಲ್ಲಿ ಯಾರೋ ಸ್ತ್ರೀಪುರುಷರಿಬ್ಬರು ಮಾತನಾಡುತ್ತಿದ್ದುದು ಕೇಳಿಸಿತು. ಆ ಧ್ವನಿಯು ಊರ್ವಶಿಯದಿರಬಹುದೆಂಬ ಅನುಮಾನ ಅವನಿಗೂ ಆಯಿತು. ಬೇಗ ಬೇಗನೆ ಮರಳಿ ಮಂಜುಳೆಯ ಬಳಿಗೆ ಬಂದು 'ಯಾರೋ ಬೆಸ್ತರ ಸ್ವರ' ಎಂದು ಸುಳ್ಳು ಹೇಳಿ, ತನ್ನ ಭಯಕ್ಕಾಗಿ ಕದವನ್ನಿಕ್ಕಿಕೊಂಡ. ದೀಪವನ್ನಾರಿಸಿದ. ಗೆಳತಿಯೊಡನೆ ಬರಿದಾದ ಮಂಚವೊಂದರ ಮೇಲೆ ಹೋಗಿ ವಿರಮಿಸಿದ. ಅವರೆಷ್ಟು ಹೊತ್ತು ಹಾಗೆ ಕಳೆದರೋ ಏನೋ. ಮಧ್ಯರಾತ್ರಿ ಸರಿಯುವಾಗ ಅವರಿಬ್ಬರಿಗೂ ಎಚ್ಚರವಾಯಿತು. ಮಗ್ಗುಲು ಕೋಣೆಯಿಂದಲೇ-ಸ್ಪಷ್ಟವಾದ ಮಾತು, ಧನಿಗಳು ಕೇಳಿ ಬರುತ್ತಿದ್ದುವು. ಗುರುತು ಸಿಕ್ಕದ ಧ್ವನಿಗಳಲ್ಲ. ಭಯವಾಯಿತು ಮೊದಲಿಗೆ; ಊರ್ವಶಿಯ ಧ್ವನಿಯೊಂದು; ತಮ್ಮ ಕಾಲೇಜ್ ಪ್ರಸಿದ್ಧಿಯ ಭುಜಂಗನ ಸ್ವರ ಇನ್ನೊಂದು. ಅದನ್ನು ಕೇಳಿ ಗುರುತಿಸಿಯಾದ ಬಳಿಕ, ಅವರದು ಭಯಮಿಶ್ರಿತ ಧೈರ್ಯವಾಯಿತು.

ನೇಸರು ಹರಿಯುವ ಮುಂಚೆಯೇ, ಮೇಜಿನ ಮೇಲೆ ಬಂಗ್ಲೆಯ ಬಾಡಿಗೆ ಹಣ, ಮಾಲಿಗೆ ಇನಾಮಿನ ದುಡ್ಡನ್ನಿರಿಸಿ, ಗೆಳತಿಯೊಡನೆ ಮನೋಹರ ಹೊರಬಿದ್ದ. ಹಿಂದಣ ರಾತ್ರಿಯ ಅಪೂರ್ವ ಅನುಭವ ಅವರ ಮನದಲ್ಲಿ ತುಂಬಿಕೊಂಡಿದ್ದುವು. ಇನ್ನೂ ಕಳ್ಳತನದ ಅಂಜಿಕೆ ಎದೆಯಲ್ಲಿ ತುಂಬಿಕೊಂಡಿದ್ದವರಂತೆ ಹೊರಟರು. ಅಲ್ಲಿಂದ ರೈಲು ನಿಲ್ದಾಣಕ್ಕೆ ಬಂದರು. ಅಲ್ಲಿ ಬಂಡಿಗಾಗಿ ಕಾದು ಕುಳಿತರು. ಭುಜಂಗ ಊರ್ವಶಿಯರಿಬ್ಬರೂ ತುಸು ಸಮಯ ಸರಿದ ಮೇಲೆ, ಅಲ್ಲಿಗೆ ಬಂದಾಗ, ಎಲ್ಲರಿಗೂ ಅಷ್ಟೇ ಅಳುಕು, ಸಂದಿಗ್ಧ ಉಂಟಾಗಿರಬಹುದು. ಆದರೆ ಭುಜಂಗ ಧೈರ್ಯದಿಂದ "ಮನೋಹರ, ನೀನು ಬಂದುದು ನನಗೂ ಗೊತ್ತಾಗಿತ್ತು. ನಾನು ನಿಮ್ಮನ್ನು ಕೂಗಿ ಕರೆಯುತ್ತಿದ್ದೆ; ಯಾಕೆ ನಿಮಗೆ ತೊಂದರೆಕೊಡಲಿ ಎಂದು ಸುಮ್ಮನಾದೆ" ಎಂದ. ಊರ್ವಶಿಯ ಮುಖ ಮಾತ್ರ ಮಂಜುಳೆಯ ಸಮ್ಮುಖದಲ್ಲಿ ಸಪ್ಪಗಾಯಿತು. ತಾನು ವಿಶೇಷ ಸಂಭಾವಿತೆ ಎಂದು ತೋರಿಸಿಕೊಂಡ ತನ್ನ ನಾಟಕ ಬಯ

ಲಾಯಿತು ಎಂಬ ಭೀತಿ ಅವಳಿಗೆ. ಆದರೂ ಈ ಪ್ರಸಂಗ ಬಯಲಾಗಲಾರದು ಎಂಬ ವಿಶ್ವಾಸ ಇದ್ದೇ ಇತ್ತು. ರೈಲಿನಲ್ಲಿ ಕುಳಿತಾಗ, ಊರ್ವಶಿ ಮಂಜುಳೆಯನ್ನು ಬಹುವಾಗಿ ಉಪಚರಿಸತೊಡಗಿದಳು. ವನಿತಾಶ್ರಮದ ವಾರ್ಡನ್‌ಳನ್ನು ದೂರಿದಳು. ಮನೋಹರನನ್ನು ತುಂಬ ಹೊಗಳಿದಳು. ಅವರಿಬ್ಬರ ಸಾವಿತ್ರಿ ಸತ್ಯವಾನ್ ನಾಟಕ 'ಎಕ್ಸಲೆಂಟ್' ಆಗಿತ್ತು ಎಂದಳು. ಇತ್ತ ಅವಳ ಕನಸಿನಲ್ಲಿ 'ಭುಜಂಗ ಬಲಶಾಲಿಯಾದ ಭೀಮ: ಅದ್ವಿತೀಯನಾದ ಆಟಗಾರ, ರಸಿಕ. ತಾನು ನಿಜಕ್ಕೂ ಅವನ ಪ್ರೇಯಸಿಯಾಗುವವಳು' ಎಂಬ ವಿಶ್ವಾಸಮೂಡಿತ್ತು.

ಬಂಡಿ ಸಾಗಿತು; ಮಂಗಳೂರೂ ಬಂದಿತು. ಹರ್ಷ, ದುಃಖ ಸಮ್ಮಿಶ್ರಿತವಾದ ಅಗಲಿಕೆಯನ್ನು ಮಂಜುಳೆ ಮನೋಹರನಿಂದ ಪಡೆದಳು. ಅಲ್ಲಿಂದ ಬೆದರಿ ವನಿತಾಶ್ರಮಕ್ಕೆ ಹೋದಳು. ಆದರೆ ಅವಳು ಅಷ್ಟೊಂದು ಬೆದರಬೇಕಾದ ಕಾರಣವಿದ್ದಿರಲಿಲ್ಲ. ವಾಗ್ಮಿಯಾದ ಊರ್ವಶಿ, ಆಶ್ರಮದ ವಾರ್ಡನನ್ನು ಸಮೀಪಿಸಿ "ನಾನೂ ಮಂಜುಳೆಯೂ ನಮ್ಮ ಬಂಧುಗಳ ಮನೆಗೆ ಹೋಗಿದ್ದೆವು. ಅವಳನ್ನು ಒತ್ತಾಯಿಸಿ ಕರೆದುಕೊಂಡುಹೋದವಳು ನಾನು" ಎಂದು ಹಿಂದಣ ರಾತ್ರಿ ಬಾರದರಲು ನೆಪ ಹೇಳಿ, ಉಳಿಸಿದಳು.

ಮುಂದಣ ರಜೆಯಲ್ಲಿ ಮಂಜುಳೆ ಊರ್ವಶಿಯರು ಮೊದಲಿನಂತೆಯೆ ಗೆಳತಿಯರಾದರು. ಒಬ್ಬರ ರಕ್ಷೆಯ ಹೊಣೆ ಇನ್ನೊಬ್ಬರಿಗಿತ್ತು. ಇಬ್ಬರೂ ಮುದ್ದೂರಿನಲ್ಲಿ ರಜಾದಿನಗಳನ್ನು ಬಲು ಬೇಸರದಿಂದ ಕಳೆಯಬೇಕಾಗಿತ್ತು. "ಕಾಲೇಜು ಎಂದು ತೆರೆದೀತು; ತಮ್ಮ ಇನಿಯರ ಸಮಾಗಮ ಎಂದಾದೀತು" -ಎಂಬುದೇ ಅವರ ಚಿಂತೆಯಾಗಿತ್ತು. ಮಂಜುಳೆಯೊಮ್ಮೆ ವಿನತೆಯ ಮನೆಗೆ ಹೋಗಿದ್ದಳು; ಅವಳ ಸುದ್ದಿ ಇದೆಯೋ ಎಂದು ವಿಚಾರಿಸಿ ಬಂದಿದ್ದಳು; ಅವಳ ತಾಯಾಗಲೀ ತಮ್ಮನಾಗಲಿ-ಅವಳಿಗೆ ಯಾವ ಬಗೆಯ ಸುದ್ದಿಯನ್ನೂ ಕೊಡಲು ಶಕ್ತರಾಗಲಿಲ್ಲ.

ಊರಿನ ಮಳೆಗಾಲದ ಪ್ರಾರಂಭದೊಡನೆ ಕಾಲೇಜು ಪ್ರಾರಂಭವಾಯಿತು. ಒಣಗಿದ ಗುಡ್ಡ ಬಯಲುಗಳ ಕರಿಯ, ಕಂದು ಬಣ್ಣಗಳು ಮಾಸಿ, ಎಲ್ಲೆಲ್ಲಿಯೂ ಹೊಸ ಹಸಿರು ಚಿಗುರೊಡೆದು, ಗೆಳತಿಯರ ಮನಸ್ಸಿನಲ್ಲಿ ಹೊಸ ಸುಖದ ಕನಸುಗಳು ಕಾಣತೊಡಗಿದುವು. ಬೇಸಗೆಯ ರಜೆ ಮಂಜುಳೆಗೆ ತೀರ ಬೇಸರದ ರಜೆಯಾಗಿತ್ತು. ನಿತ್ಯವೂ ಮನೋಹರನ ಕನಸು

ಕಾಣುತ್ತಿದ್ದವಳವಳು. ಅವನೆಲ್ಲಿದ್ದಾನೆಂದೂ ತಿಳಿಯದು. ಆತ ಎಲ್ಲಿದ್ದರೂ ಕಾಗದ ಬರೆಯಬಹುದೆಂದು ಹಾರೈಸಿಕೊಂಡಿದ್ದುದೂ ವ್ಯರ್ಥವಾಯಿತು. ಆದರೆ ಚಿತ್ತ ಮಾತ್ರ ಅವನೊಡನೆ ವಿವಾಹದಲ್ಲೊಂದಾಗುವ ಧ್ಯಾನದಲ್ಲಿತ್ತು. ಮನಸ್ಸು ಬಹು ದಿನಗಳಿಂದ ಅವನಿಗಾಗಿ ಮರುಳುಗೊಂಡಿದ್ದುದರ ಜೊತೆಗೆ, ಮೈ ಅವನಿಗಾಗಿ ಮರುಳುಗೊಳುವ ಸಮಯವನ್ನು ಕಾಯುತಿತ್ತು. ಸಂಸಾರಿಕ ಜೀವನದ ಕನಸು, ಸತಿ ಪತಿತ್ವದ ಕನಸು, ನಿರಾತಂಕವಾದ ಯಾವ ಪ್ರಾಪಂಚಿಕ ಕಷ್ಟ ನಿಷ್ಠುರಗಳಿಲ್ಲದ ಸವಿಗನಸುಗಳು ಅವಳ ಪಾಲಿಗೆ. ಅವನಿಲ್ಲದ ಚಿಂತೆಯನ್ನು ಮುಖದಿಂದ ಅಡಗಿಸಿಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವಳಿಗೆ ವಿರಹ ಭಾವವನ್ನು ಮರೆಯುವುದೇ ಕಷ್ಟವಾಗಿತ್ತು. ಅದೆಲ್ಲ ಅವಳ ಅತ್ತಿಗೆಯ ಕುದೃಷ್ಟಿಗೆ ಸ್ವಷ್ಟಾರ್ಥವನ್ನು ಕೊಡುತಿತ್ತು. ಮಂಗಳೂರಿನಿಂದ ಪ್ರವಹಿಸಿ ಬಂದ ಕೆಲವು ಸುದ್ದಿಯ ತುಣುಕುಗಳು ಸುಮಿತ್ರೆಗೂ ತಿಳಿದಿದ್ದುವು. ಅವಳು ವಕ್ರೋಕ್ತಿಗಳಿಂದ ಅವನ್ನು ಪ್ರಕಟಪಡಿಸಿದಳು. ಆದರೆ ತನ್ನ ವಿಶ್ವಾಸದ ಒಡವೆ ತನ್ನಿಂದ ದೂರಾಗದು ಎಂಬ ಧೈರ್ಯವನ್ನು ಗಳಿಸಿದ ಮಂಜುಳೆ, ಅತ್ತಿಗೆಯ ಸ್ವಭಾವಕ್ಕೆ, ಮಾತುಗಳಿಗೆ ಅಂಜಲಿಲ್ಲ; ನಿಂದೆಗೂ ಕಿವಿಗೊಡಲಿಲ್ಲ. ತಮ್ಮ ಕಾಲೇಜು ತೆರೆದು, ಇನ್ನೊಮ್ಮೆ ತನಗೆ ಮನೋಹರನ ದರ್ಶನವಾಗಿ, "ರಜೆಯಲ್ಲೇನುಮಾಡಿದೆ? ಯಾಕೆ ಕಾಗದ ಬರೆಯಲಿಲ್ಲ" ಎಂದು ಕೇಳುವ ತನಕ, ಅವಳ ಆತುರ ಅಷ್ಟಿಷ್ಟಲ್ಲ.

"ಎಲ್ಲಿಗೆಂದು ಕಾಗದ ಬರೆಯಲಿ! ಹಿಂದೆ ಆದಂತೆ ನಿನ್ನ ಅತ್ತಿಗೆಯ ಕೈಗೆ ಅದು ಸಿಕ್ಕಿದರೆ!" ಎಂಬ ನೆಪವನ್ನು ಆತ ಹೇಳಿದ.

"ಸಿಕ್ಕಿದರೇನಾಯಿತಂತೆ! ನಾಳೆ ನಾವು ಮದುವೆಯಾಗಲಿರುವಾಗ.... ಕಾಗದ ಮುಟ್ಟುವುದೇನೋ ಕಷ್ಟವಿತ್ತು. ನಾನು ಆಗಾಗ ಪೇದೆ ಮಂಜಯ್ಯನನ್ನು ವಿಚಾರಿಸಿ ನಿರಾಶೆಗೊಂಡೆ" ಎಂದಳು. ಅನಂತರ ಮನು, ತಾನು ಒಂದು ತಿಂಗಳಕಾಲ ಪುನೆ, ಮುಂಬಯಿಗಳಲ್ಲಿ ತಿರುಗಾಡಿದ ಕತೆ, ತಾರೆಗಳ ಕತೆ ಉತ್ಸಾಹದಿಂದಲೇ ವರ್ಣಿಸಿದ. ಆತನ ಸಂತೋಷವೇ ತನ್ನ ಸಂತೋಷವೆಂದು ತಿಳಿದಳು ಆಕೆ.

ಊರ್ವಶಿಯ ರಜಾದಿನಗಳೂ ಕಳೆದವು; ಮಂಜುಳೆಯಷ್ಟು ಬರಡಾಗಿ ಅಲ್ಲ. ಅವಳು ನಾಲ್ಕಾರು ಬಾರಿ ತನ್ನ ಸ್ನೇಹಿತರನ್ನು ಭೇಟಿಯಾಗುವುದಕ್ಕೆ ಮಂಗಳೂರಿಗೆ ಹೋಗಿದ್ದಳು. ಭೇಟಿಯಾಗಿಯೂ ಬಂದಿದ್ದಳು. ಆ ಸುದ್ದಿ

ಗಳನ್ನಷ್ಟು ಗೆಳತಿಗೆ ಹೇಳಲಿಲ್ಲ. ಕಾಲೇಜಿನ ಪ್ರಾರಂಭದೊಡನೆ ಅವಳು, ತಿರುಗಿ ಮೊದಲಿನಂತಾದಳು. ಮೊದಲಿಗಿಂತಲೂ ಒಂದು ಬಣ್ಣ ಹೆಚ್ಚು. ಚೆನ್ನಾಗಿ ಮಾರ್ಕ್ಸ್ ಗಳಿಸಿ ಪಾಸಾಗಿದ್ದಾಳೆ. ತಾನು ಬುದ್ಧಿವಂತೆ ಎಂಬ ಪರಿಜ್ಞಾನವೂ ಇದೆ. ಆದರೆ ಮನಸ್ಸಿನ ದಾರಿ ಅಷ್ಟು ನೇರಾಗಿ ಹರಿಯತಕ್ಕದಲ್ಲ. ರಜೆಯಲ್ಲಿ ಮಂಜುಳೆಯನ್ನು ನೆರಳಿನಂತೆ ಹಿಂಬಾಲಿಸಿದ್ದರೂ, ಸ್ನೇಹಮಯವಾಗಿ ವರ್ತಿಸಿದ್ದರೂ, ತನ್ನಿಂದ ಮನೋಹರನನ್ನು ಕದ್ದವಳವಳು—ಎಂಬ ಒಂದು ಕೊಂಕು ಮಾತ್ರ ಅವಳನ್ನು ಕಾಡುತಿತ್ತು. ಇದಕ್ಕಾಗಿ ಮಂಜುಳೆಯನ್ನು ಅವಳು ಇನ್ನು ಕ್ಷಮಿಸುವಂತೆಯೂ ಇಲ್ಲ. ಅವಳ ಮನಸ್ಸು ಸೇಡನ್ನು ಹಂಬಲಿಸುವಷ್ಟು ಅಡ್ಡ ದಾರಿ ಹಿಡಿಯಿತು. ಅದಕ್ಕೇನೆ—ಒಮ್ಮೆ ಮನೋಹರನನ್ನು ಭೇಟಿಯಾದಾಗ, ತುಂಬ ಮಾತನಾಡಿಸಿದಳು. ಬೇಕಲದ ನೆನಪು ತಂದಳು. 'ಮುಂದಿನ ರಜೆಗೆ ನೀನು ಊರಿಗೆ ಹೋಗದೆ ಇದ್ದರೆ, ಹೋಗೋಣ ನಾವು ನಾಲ್ವರೂ ಕೂಡಿ' ಎಂದಳು. 'ನಿನ್ನ ಮಂಜುಳೆಯನ್ನು ಕರೆದು ತರುವ ಭಾರ ನನ್ನದು. ಹೊಸದುರ್ಗದಲ್ಲಿ ನಮಗೆ ನಂಟರಿದ್ದಾರೆ. ನಾವು ಅಲ್ಲಿಂದ ಬರುತ್ತೇವೆ; ನೀವು ಮಂಗಳೂರಿನಿಂದ ಬನ್ನಿ' ಎಂದಳು. ಮನೋಹರನಿಗೆ ಅದು ಇಷ್ಟವಾಗಿಯೇ ಕಾಣಿಸಿತು. ಆದರೆ ಹೊರಡಬೇಕಾಗಿದ್ದ ದಿನ, ಭುಜಂಗನಿಗೆ ಕ್ರಿಕೆಟ್ ಪಂದ್ಯಾಟವಿತ್ತು. ಊರ್ವಶಿ ಮಂಜುಳೆಗೆ ಹೇಳುತ್ತೇನೆಂದವಳು, ಉದ್ದೇಶಪೂರ್ವಕವಾಗಿ ಹೇಳಲೂ ಇಲ್ಲ. ಹೀಗಾಗಿ ನಿಶ್ಚಿತ ದಿನ ಬಂದಾಗ, ನಾಲ್ವರ ಬದಲು ಬೇಕಲದಲ್ಲಿ ಸೇರಿದವರು ಇಬ್ಬರೇ—ಊರ್ವಶಿ, ಮನೋಹರರು ಮಾತ್ರ. ಊರ್ವಶಿ, ಗೆಳತಿಯನ್ನು ಕರೆತಾರದ ಬಗ್ಗೆ ಕ್ಷಮಾಯಾಚನೆ ಮಾಡಿದಳು. ಅಷ್ಟೊಂದು ಬೇಕಿರಲಿಲ್ಲ. ಮನೋಹರನ ಯುವಕ ಮನಸ್ಸಿನಲ್ಲಿ ಪ್ರೇಮದ ಭರ, ಊರ್ವಶಿಯನ್ನು ಸೇರಿಸಿಕೊಳ್ಳುವಷ್ಟು ವಿಸ್ತಾರವಾಗಿಯೇ ಇತ್ತು. ಒಂದು ದಿನವೆಲ್ಲ ಕೂಡಿ, ನಲಿದಾಡಿ, ಊರ್ವಶಿ ಸರಸ ವಿನೋದಗಳಿಂದ ಮನುವನ್ನು ತಾನು ಕಿತ್ತುಕೊಂಡೆ—ಎಂಬ ಹೆಮ್ಮೆ ತಾಳುವಂತಾಯಿತು. ಒಂದಲ್ಲ ಎರಡು ದಿನ, ಮಂಜುಳೆಗೆ ತಿಳಿದು, ತನ್ನ ಸೇಡಿನ ಪ್ರತೀಕಾರ ಸಲಬೇಕೆಂಬುದೂ ಅವಳ ಇಷ್ಟ. ಆದರೆ ತುಂಬ ವಿಚಾರ ಮಾಡಿದಲ್ಲಿ ಆ ಸಂಗತಿ ಭಯವನ್ನು ಉಂಟುಮಾಡುತಿತ್ತು. ತನ್ನನ್ನು ಅದು ಕಷ್ಟಕೊಡ್ಡಬಹುದು—ಎಂಬ ಅಂಜಿಕೆಯನ್ನೂ ತರುತಿತ್ತು.

ಕಾಲೇಜಿನ ಮೊದಲಿನ ಐದಾರು ತಿಂಗಳಲ್ಲಿ, ಅದು ಎರಡನೆಯ

ವರ್ಷವಾಗಿದ್ದರೂ, ಪಾಠಗಳ ಭಾರ ಹೆಚ್ಚಿಸಲಿಲ್ಲ. ಸಿಲೆಕ್ಷನ್ ಪರೀಕ್ಷೆಯ
ಗಾಳಿ ಬೀಸಿದಾಗ, ಯಾರೊಬ್ಬರಿಗೂ ವ್ಯವಧಾನವಿರಲಿಲ್ಲ. ಮನೋಹರನಿಂದ
ಆದಿಯಾಗಿ ಊರ್ವಶಿ, ಮಂಜುಳೆ ಮೊದಲಾದವರು ಆಯ್ಕೆಗೊಂಡರು.
ಪಾಠ ಮುಂದುವರಿಸಿದರು. ನಾಟಕ ಮೊದಲಾದವುಗಳಲ್ಲಿ ಭಾಗವಹಿಸಿದರು.
ಈ ವರ್ಷದ ಹೆಚ್ಚಿನ ಸೋಜಿಗವೆಂದರೆ–ಕನ್ನಡ ನಾಟಕ 'ತೆನ್ನಾಲಿ ರಾಮ
ಕೃಷ್ಣ'ದಲ್ಲಿ ಗಂಡ ಹೆಂಡಿರ ಪಾತ್ರಗಳನ್ನು ಮನೋಹರ, ಊರ್ವಶಿಯರು
ವಹಿಸಿದುದು. ಇದು ಸಭಿಕರಿಂದ ಪ್ರಶಂಸೆಯನ್ನೇನೋ ತಂದಿತು. ಮಂಜುಳೆ
ಯಲ್ಲಿ ಬೆಳೆದು ಬಂದಿದ್ದ ಒಂದು ಬಗೆಯ ಅನುಮಾನವನ್ನೂ ಹೆಚ್ಚಿಸಿತು.
ಮುಂಬಯಿಯಿಂದ ಮರಳಿ ಬಂದ ಮೇಲೆ, ಮನೋಹರ ಮೊದಲಿನಷ್ಟು
ಸರಸ ಸಲ್ಲಾಪಿಯಾಗಿ ಅವಳಿಗೆ ಕಾಣಿಸುತ್ತಲಿಲ್ಲ. ನಾಲ್ಕಾರು ಬಾರಿ ಅವ
ಳನ್ನು ಹೊರಗೆ ತಿರುಗಾಟಕ್ಕೆ ಕರೆದೊಯ್ದಿದ್ದರೂ–ಅವನ ಸಂಭಾಷಣೆಗಳಲ್ಲಿ
ಪ್ರೇಮದ ಮಾತುಗಳಿಲ್ಲ. ಭೋಗದ ಬಯಕೆ ತೋರಿಸಿದರೂ, ಮದುವೆಯ
ವಿಚಾರ ಹೇಳಿದರೆ "ಯಾವುದಕ್ಕೂ ಪರೀಕ್ಷೆಯಾಗಲಿ; ನಿನಗೆ ಅನುಮಾನ
ಏಕೆ?"ಎಂದೆನ್ನುತ್ತಿದ್ದ. ಆತನ ಮಾತುಗಳೆಲ್ಲ ಕೇವಲ ಸಿನೆಮಾಲೋಕವನ್ನೇ
ಸುತ್ತುವರಿಯುತ್ತಿವೆ. ತಾನು ನಟನಾಗುವ ಯೋಚನೆ ಪ್ರಕಟಿಸುತ್ತಾನೆ. ತನ್ನ
ಭವಿಷ್ಯವೆಂಬುದೆಲ್ಲ 'ಸಿನೆಮಾ ಸ್ಟಾರ್' ಆಗುವುದು ಎಂಬ ಹುಚ್ಚು ಕಟ್ಟಿ
ಕೊಂಡಿರುವುದನ್ನು ಕಂಡರೆ ಅವಳಿಗೇಕೋ ಭಯ. 'ಹಾಗಾಗ ಕೂಡದು'
ಎನ್ನುವ ಧೈರ್ಯವಿಲ್ಲ. "ಮದುವೆಯಾಗಿ ಮುಂದೆ ಜತೆಯಲ್ಲಿ ಯೋಚಿಸುವ;
ನಿನ್ನ ಅಪೇಕ್ಷೆ ಬೇರೆ; ನನ್ನದು ಬೇರೆಯೇ?" ಎನ್ನುತಿದ್ದ, ಆತ ಮಾತಿನಲ್ಲಿ.
ಕನ್ನಡ ಸಂಘದ ಎರಡನೆಯ ವರ್ಧಂತಿಯು ಬಂದಾಗ, ತನಗಿಂತ ಹೆಚ್ಚಾಗಿ
ಊರ್ವಶಿಗೆ ಪ್ರಾಧಾನ್ಯ ದೊರಕಿದುದು ಮಂಜುಳೆಗೆ ತುಂಬ ನೋವನ್ನುಂಟು
ಮಾಡಿತು. ಸಾಲದುದಕ್ಕೆ ಒಂದು ದಿನ ಊರ್ವಶಿಯು "ನನಗೂ ಒಬ್ಬ
ನಾಟಕದ ಗಂಡ ಸಿಕ್ಕಿದ" ಎಂದು ಪರಿಹಾಸ್ಯವನ್ನೂ ಮಾಡಿದಳು. ಇದಕ್ಕೆಲ್ಲ
ಮಂಜುಳೆಯ ಅನುಮಾನಗ್ರಸ್ತ ದೃಷ್ಟಿ ಕಾರಣವೋ, ಮನೋಹರನ ಔದಾ
ಸೀನ್ಯ ಕಾರಣವೋ ಹೇಳುವುದಕ್ಕಿಲ್ಲ. ಆದರೆ ಮುಂಬಯಿಯಿಂದ ಬಂದಂದಿ
ನಿಂದ ಆತನಿಗೆ ಮಂಜುಳೆಯಲ್ಲಿ ಅಭಿಮಾನ ಕಡಿಮೆಯಾಗಿಲ್ಲವಾದರೂ,
ಅವನ ಮನಸ್ಸು ಹಂಚಿಹೋಗಿತ್ತು. ಓದನ ಮೇಲೆ ಇಷ್ಟವಿರಲಿಲ್ಲ. ಸಿನೆಮ
ತಾರೆಯರೊಡನೆ, ಸ್ಟುಡಿಯೋದವರೊಡನೆ ಪತ್ರವ್ಯವಹಾರ ಮಾಡುವುದು,

ಫೋಟೋ ವಿನಿಮಯ ಮಾಡುವುದು, ಈ ಹುಚ್ಚುತನ ಬೆಳೆದಿತ್ತು. ಅದನ್ನೆಲ್ಲ ಮಂಜುಳೆಗೂ ತೋರಿಸಿದ್ದ. ಅವನು ಮನಸ್ಸಿನಲ್ಲಿ 'ಈ ಪರೀಕ್ಷೆ ಮುಗಿದ ಮೇಲೆ, ಮಂಜುಳೆ ಬಂದರೆ, ಅವಳೊಡನೆ ಮುಂಬಯಿಗೆ ಹೋಗುತ್ತೇನೆ' ಎಂದೆಣಿಸಿಕೊಂಡಿದ್ದ. ಮದುವೆಯ ವಿಚಾರ ಹೊಳೆದಾಗಲಷ್ಟೆ, ಅವನಿಗೆ ಭಯ ಭೀತಿ. ಮಂಜುಳೆಗೆ ಮಾತುಕೊಟ್ಟಿದ್ದರೂ, ತಾರಾ ಲೋಕ ತನಗೆ ಸಮೀಪವಾಗುತ್ತಿರುವಾಗ, ಮಂಜುಳೆಯು ಸಣ್ಣ ವ್ಯಕ್ತಿಯಾಗಿ ಕಾಣಿಸುತ್ತಾಳೆ. ಸ್ವಪ್ರತಿಷ್ಠೆಗಿಂತ, ಪ್ರೇಮ ದೊಡ್ಡ ವಸ್ತುವಾಗಿ ಕಾಣಿಸುವುದಿಲ್ಲ.

ಅವರ ಇಂಟರ್ ಪರೀಕ್ಷೆ ಮುಗಿಯಿತು. ಮನೋಹರನನ್ನು ಕಾದು, ಹಂಬಲಿಸಿದ ಮಂಜುಳೆ 'ತಿರುಗಿ ನಾವು ಸೇರುವುದೆಂದು?' ಎಂದು ಕೇಳಿಯೂ ಕೇಳಿದಳು. "ಊರಿಗೊಮ್ಮೆ ಹೋಗಿ ಬರುತ್ತೇನೆ; ನೀನೇನೂ ಯೋಚಿಸಬೇಡ" ಎಂದು ಭರವಸೆಯನ್ನು ನೀಡಿ, ಮನೋಹರ ತನ್ನ ಊರಿಗೆ ಹೋದ. ತಂದೆಗೆ ತಿಳಿಸದೆಯೆ ಒಂದಿಷ್ಟು ಹಣವನ್ನು ತೆಗೆದುಕೊಂಡು, ಮಂಗಳೂರಿಗೆ ಹೋಗಿ ಬರುತ್ತೇನೆಂದು ಹೇಳಿ, ಊರಿನಿಂದ ಕಣ್ಮರೆಯಾದ. ಎಂಟು ದಿನ, ಸಂದಿತು; ಹದಿನೈದು ದಿನಗಳಾದವು; ಮತ್ತೂ ಒಂದು ತಿಂಗಳು ಕಳೆಯಿತು.

ಮುದ್ದೂರಿನಲ್ಲಿದ್ದಾಗ ಮಂಜುಳೆಯ ಕೈಯಲ್ಲಿ ಪೇದೆ ಮಂಜಯ್ಯ ಒಂದು ಕಾಗದ ತಂದಿರಿಸಿದ. ಅವಳು ತುಂಬ ಆಸೆಯಿಂದ ಅದನ್ನೊಡೆದು ನೋಡಿದಳು. ಲಾಹೋರಿನಿಂದ ಆ ಪತ್ರ ಬಂದಿತ್ತು. "ಮಂಜುಳಾ, ನಿನ್ನನ್ನು ನಾನು ಮರೆತಿಲ್ಲ; ಖಂಡಿತಕ್ಕೂ ಮರೆಯುವುದಿಲ್ಲ. ನಾನು ನನ್ನ ಉಜ್ವಲ ಭವಿಷ್ಯವನ್ನರಸಿಕೊಂಡು ಇಲ್ಲಿಗೆ ಬಂದು 'ಅನಾರ್ಕಲಿ ಮೂವಿಟೋನ್' ಕಂಪೆನಿಯಲ್ಲಿ ಸೇರಿದ್ದೇನೆ. ನಾನು ಒಬ್ಬ ಗಣ್ಯ ನಟನಾಗುವ ತನಕ ಮದುವೆಯ ಯೋಚನೆಯನ್ನು ಮುಂದುವರಿಸಬೇಕಾಗಿದೆ. ಅಲ್ಲಿಯ ತನಕ ನೀನು ಓದುತ್ತಿರು; ನನ್ನ ಮೇಲಿನ ವಿಶ್ವಾಸದಿಂದ ಕಾದಿರು. ಎಂದೆಂದಿಗೂ ನಾನು ನಿನ್ನವನೇ" ಎಂದು ಬರೆದಿತ್ತು; ಆದರೆ ಸಹಿಯಿಲ್ಲ. ಬರಹ ಮನೋಹರನದು; ವಿಳಾಸವೇನೋ ಇತ್ತು. ಮಂಜುಳೆಗೆ ಅದು ವಜ್ರಾಘಾತವಾಯಿತು; ವಿಶ್ವಾಸಘಾತವೂ ಎನಿಸಿತು. ಹಾಗೆ ತನ್ನನ್ನು ವಂಚಿಸಿ ಓಡುವ ಶಕ್ತಿ ತನ್ನ ಮನೋಹರನಲ್ಲಿತ್ತು; ಇದ್ದರೂ ವಂಚಿಸಬಹುದು—ಎಂದು ಅವಳು ಎಣಿಸಿರಲಿಲ್ಲ. ತನ್ನ ಪ್ರಿಯನನ್ನು ಕುರಿತಾದ ಯಾವುದೇ ತರನ ಸಂಶಯ, ದುರಭಿಪ್ರಾಯಗಳನ್ನು ಅವಳು ತಾಳಿದವಳೇ ಅಲ್ಲ.

# ಏಳನೆಯ ಅಧ್ಯಾಯ

ಮಗನಲ್ಲಿ ಅಖಂಡ ವಿಶ್ವಾಸವಿಟ್ಟವರು ಅನಂತಯ್ಯ ಗೋಖಲೆಯವರು. ತಮ್ಮ ನಾಲ್ಕು ಗಂಡುಮಕ್ಕಳಲ್ಲಿ ಸಮಾನ ವಿಶ್ವಾಸವುಳ್ಳವರಾಗಿದ್ದರೂ, ಹಿರಿಯ ಮಗನೆಂದರೆ ಯಾವ ತಂದೆಗೂ ಮುದ್ದು ಹೆಚ್ಚು. ಹಾಗಾಗಿ ಆತ ಹಾಯರ್ ಎಲಿಮೆಂಟರಿ ಶಾಲೆ ಮುಗಿಸಿ, ಮುದನ್ಕೂರಿಗೆ ಹೋಗುತ್ತೇನೆಂದಾಗ ಸಂತೋಷದಿಂದಲೇ ಒಪ್ಪಿದರು. ಹೈಸ್ಕೂಲಿನ ಮೂರು ವರ್ಷಗಳ ಕಾಲ, ಮನೋಹರ ತುಸು ಹೆಚ್ಚಾಗಿ ಹಣ ಕೇಳಿಕೊಂಡು ಹೋಗುತ್ತಿದ್ದರೂ ಅದನ್ನೆಣಿಸಿದವರಲ್ಲ. ಆತ ತಾನು ಕಾಲೇಜಿಗೆ ಹೋಗುತ್ತೇನೆ ಎಂದಾಗಲೂ 'ಆಗಲಿ' ಎಂದರು. ಅವರಿಗೆ ನಾಲ್ವರೂ ಗಂಡುಮಕ್ಕಳೇ. ಎಲ್ಲರೂ ಮನೆಯಲ್ಲಿ ಕುಳಿತು ತೋಟದ ಸಾಗುವಳಿ ಮಾಡುವುದರಲ್ಲಿ ಅರ್ಥವಿಲ್ಲ—ಎಂದು ತಿಳಿದರು. ಮಕ್ಕಳು ಬಯಸುವ ವಿದ್ಯಾಭ್ಯಾಸವನ್ನು ಕೊಡದಿರುವುದೂ ಉಚಿತವಲ್ಲ ಎಂದೆಣಿಸಿ, ಹಿರಿಯ ಮಗನನ್ನು ಕಾಲೇಜಿಗೆ ಕಳುಹಿಸಿದರು, ಎರಡನೆಯವನನ್ನು ಹೈಸ್ಕೂಲಿಗೆ ಹಾಕಿದರು. ಮನು ಮಂಗಳೂರಿಗೆ ಹೋದವನು ತುಂಬ ಹೆಚ್ಚಾಗಿಯೇ ಹಣ ಕೇಳುತ್ತಿದ್ದರೂ "ಅವನಿಗಲ್ಲದ ದುಡ್ಡು ಇನ್ನೇತಕ್ಕೆ?" ಎಂಬ ಯೋಚನೆ ಅವರದು. ಆತ ರಜೆಯಲ್ಲಿ, ಮನೆಗೆ ಬರುವ ಬದಲು, ಮುಂಬಯಿಗೆ ಹೋದುದು ಅವರಿಗೆ ತುಸು ಅಸಮಾಧಾನಕ್ಕೆ ಕಾರಣವಾಗಿದ್ದರೂ, ಮಗನು ಮನೆಗೆ ಬಂದಮೇಲೆ, ಅವನ ಮುಖನೋಡಿ ಆ ಬೇಸರವನ್ನು ಮರೆತರು. ತಾಯಿ ಪಂಡರಿ ಬಾಯಿಗೂ ಮನೋಹರನ ಮೇಲೆ ಅಷ್ಟು ಮಮತೆಯಿತ್ತು. ಅವನೆಷ್ಟು ಓದಿದರೂ ಓದಿಸಬೇಕು—ಎಂಬ ಹಟ ಅವಳದಿತ್ತು. ಈ ನಡುವೆ ಒಂದೆರಡು ಕೆಡುಕು ಸುದ್ದಿಗಳು, ತಮ್ಮ ಮನುವಿನ ವಿಚಾರದಲ್ಲಿ ಅವರ ಕಿವಿಯನ್ನು ಸೇರಿದುವು. 'ಮಂಗಳೂರಿನಿಂದ ಬಂದ ಸುದ್ದಿಗಳವು. ಯಾರಾರೋ ಹೇಳಿದ್ದು; ನಿಜವಿರಲೂ ಬಹುದು; ಬರಿಯ ಹೊಟ್ಟೆಕಿಚ್ಚಿನ ಮಾತೂ ಇರಬಹುದು. ಕಾಲೇಜಿನ ಹುಡುಗಿಯ ಕೊಡನೆ ಆತ ತುಂಬ ಸ್ನೇಹವಾಗಿದ್ದಾನೆ ಎಂದೊಡನೆ ಕೆಟ್ಟುದನ್ನೇ ಎಣಿಸಬೇಕಿಲ್ಲ. ಆತನ ಮನಸ್ಸು ಅಡ್ಡದಾರಿ ಹಿಡಿಯುವಂತಿದ್ದರೆ ಆತ ತನ್ನ ಗೆಳತಿಯರನ್ನು ಧೈರ್ಯವಾಗಿ ಮನೆಗೆ ಕರೆದುತರುತ್ತಿದ್ದನೇ? ನಮ್ಮ ಮನೆಗೇನೇ ಅವನ ಮೂವರು ಸಹಪಾಠಿಗಳು ಬಂದಿರಲಿಲ್ಲವೇ? ಮೂವರೂ ಚೆನ್ನಾದ

ಸ್ವಭಾವದ ಮಕ್ಕಳು. ಅದೆಲ್ಲ ಏನು ದೊಡ್ಡದು!' ಎಂದು ಮೊದಮೊದಲು ಎಣಿಸಿದ್ದರು. ಈಗ ಮಾತ್ರ ಆ ಕುರುಡು ನಂಬಿಕೆ ಹೊರಟುಹೋಗಿದೆ. ತಮ್ಮ ಹೊಟ್ಟೆಯ ಮಗ, ಒಂದು ಸುದ್ದಿಯನ್ನೂ ಹೇಳದೆ, ತಮಗೆ ಒಂದು ಪತ್ರವನ್ನೂ ಬರೆಯದೆ, ಊರು ಬಿಟ್ಟು ಹೋಗಿದ್ದಾನೆ-ಎಂದು ಎಣಿಸಬೇಕಾಯಿತು. ಹಾಗೆ ಅವನು ಓಡಿಹೋಗಿ ಒಂದಲ್ಲ ಇಂದಿಗೆ ಕೆಲವು ವರ್ಷಗಳೇ ಸಂದಿವೆ. ಯಾವ ತಂದೆ ತಾಯರ ಪ್ರೇಮಮಯ ಹೃದಯವನ್ನೂ ತತ್ತರಿಸುವ ವಿರಹ ಅದು.

ಅವನು ಹೋದ ಮೂರು ವರ್ಷಗಳ ಬಳಿಕ, ಲಾಹೋರಿನಿಂದ ಅವರಿಗೆ ಒಂದು ಪತ್ರ ಬಂದಿತ್ತು—"ತಾನೊಂದು ಚಾಕರಿಯಲ್ಲಿದ್ದೇನೆ, ಇನ್ನೂರು ರೂಪಾಯಿ ಸಂಬಳ ಸಿಗುತ್ತದೆ. ಆದರೆ ಇಲ್ಲಿನ ಹವೆ ಒಗ್ಗದೆ ನನ್ನ ಆರೋಗ್ಯ ಕೆಟ್ಟಿದೆ. ಇನ್ನು ಊರಿಗೆ ಬಂದಿರುತ್ತೇನೆ. ಊರಿಗೆ ಮರಳಿ ಬರಲು ವೆಚ್ಚಕ್ಕೆ, ಡಾಕ್ಟರರಲ್ಲಿ ಮಾಡಿದ ಸಾಲಕ್ಕೆ, ಐನೂರು ರೂಪಾಯಿಗಳು ಬೇಕು" ಎಂದು ಕಾಗದ ಬರೆದಿದ್ದ. ತಾಯಿ ಚಿಂತಿಸಿದಳು. "ಎಷ್ಟಾದರೂ ಕಳುಹಿಸಿಕೊಡಿ; ಅವನೊಮ್ಮೆ ಊರಿಗೆ ಬರಲಿ" ಎಂದಳು. ಅನಂತ ಗೋಖಲೆಯವರಿಗೆ, ಮಗ ಮೂರು ವರ್ಷ ಕಾಲ ಮೌನವಾಗಿದ್ದು, ಆಪತ್ತಿನಲ್ಲಿ ಮಾತ್ರ ತಮ್ಮನ್ನು ನೆನೆಯುತ್ತಾನೆ—ಎಂದು ತೋರದಿರಲಿಲ್ಲ. ಮಗನ ವಿಚಾರದಲ್ಲಿ ಅವರ ಮನಸ್ಸು ಮುರಿದಿತ್ತು. "ಆತ ಚೆನ್ನಾದ ಸ್ಥಿತಿಯಲ್ಲಿದ್ದರೆ, ತಮ್ಮ ಪ್ರೇಮದ ಸ್ಮರಣೆ ಸ್ವಲ್ಪವಾದರೂ ಉಳಿದವನಾಗಿದ್ದರೆ, ಹೀಗೆಂದೂ ಮಾಡುತ್ತಿರಲಿಲ್ಲ. ಚಾಕರಿ ಮಾಡಿಕೊಂಡಿರಲಿ. ಸ್ವತಂತ್ರನಾಗಿರುವ ಅಪೇಕ್ಷೆ ತಪ್ಪಲ್ಲ. ಆದರೆ ಕಾಗದವನ್ನೇ ಬರೆಯದಿರಲು ಕಾರಣವೇನಿರಬಹುದು? ಅದೇ ಅನುಮಾನಕ್ಕೆ ಎಡೆಕೊಡುತ್ತಿರುವ ವಿಚಾರ. ತಿಂಗಳಿಗೆ ಇನ್ನೂರು ರೂಪಾಯಿ ಸಂಪಾದನೆ ಮಾಡುತ್ತಿರುವ ಆತ ಇಷ್ಟರ ವರೆಗೆ ಏನೂ ಹಣ ಉಳಿಸಲಿಲ್ಲ—ಎಂದರೆ ಅದೂ ಆಶ್ಚರ್ಯ. ತಮ್ಮವರಲ್ಲದ ಯಾವುದೋ ಒಂದು ಮೂಲೆಯಲ್ಲಿ ಉಳಿತು, ಅಷ್ಟೆಲ್ಲ ಹಣ ವ್ಯಯಿಸುತ್ತಿರಬೇಕಾದರೆ ಆತನ ಚಾಳಿ ಒಳಿತಾಗಿರಲಾರದು. ತನ್ನದೇ ಮೂರ್ಖತನವಾಯಿತು; ಕಾಲೇಜಿನಲ್ಲಿರುವಾಗ ತಮ್ಮ ಕಿವಿಗಳಿಗೆ ಮುಟ್ಟಿದ ಸುದ್ದಿಗಳ ವಿಚಾರದಲ್ಲಿ ಸ್ವಲ್ಪವಾದರೂ ಶೋಧನೆಯ ಬುದ್ಧಿ ತೋರಿಸಿದ್ದರೆ, ಆಗಲೇ ಅವನನ್ನು ಕಾಲೇಜು ಬಿಡಿಸಿ ಮನೆಗೆ ಕರೆತರಬಹುದಿತ್ತು. ಈಗೆಲ್ಲವೂ ಕೈ ಮೀರಿದಂತೆಯೆ; ಇದು ಯೌವನ. ವಯಸ್ಸು

ಇಪ್ಪತ್ತೆರಡಾಗಿದೆ. ವಿೂಸೆ ಬರುವಾಗ ದೇಶ ಕಾಣಿಸುವುದಿಲ್ಲಂತೆ. ಇವನಿಗೆ ಹೇಗೆ ಕಂಡೀತು?' ಎಂಬ ವಿಚಾರ ಸರಣಿಯು ಅವರನ್ನು ಬಾಧಿಸಿತು.

ಆದರೂ ತಂದೆಯಾದವನ ಮನಸ್ಸದು;ಸುಮ್ಮನಿರಲೊಲ್ಲದು. ಪಂಡರಿ ಬಾಯಿಯ ಕಣ್ಣೀರೂ ಸುಮ್ಮನಿರಗೊಡಲೊಲ್ಲದು. ಅವರು ನೆಟ್ಟಗೆ ಮನೆಯಿಂದ ಹೊರಬಿದ್ದರು. 'ಇವು ರಜಾದಿನಗಳು; ಮುಂಡಾಜೆಯಲ್ಲಿ ಅವನ ಸಹಪಾಠಿಯಾದವನಿದ್ದಾನೆ — ವಿಶ್ವೇಶ್ವರ. ಆತ ನಮ್ಮ ಮನೋಹರನ ಜತೆಯಲ್ಲಿಯೇ ಇಂಟರ್ ಮಿೂಡಿಯಟ್ ಕಲಿತವನು. ಈಗ ಮಾತ್ರ ಬಿ. ಎ. ಮುಗಿಸಿ, ಎಫ್. ಎಲ್. ಓದುತ್ತಿದ್ದಾನೆ. 'ನೋಡುವ, ಇವನ ಸುದ್ದಿ, ಸಮಾಚಾರ ಅವನಿಗೇನಾದರೂ ತಿಳಿದಿದೆಯೆ'ಎಂದು ವಿಚಾರಿಸಲು ಧಾವಿಸಿದರು. ಕಾಡಿನ ಹಾದಿಯಲ್ಲಿ ನಾಲ್ಕೈದು ತಾಸು ನಡೆದು, ಸಂಜೆಯ ವೇಳೆಗೆ ಮುಂಡಾಜೆಯಲ್ಲಿನ ತಮ್ಮ ಬಂಧುಗಳ ಮನೆ ಸೇರಿದರು. ಆ ಬಂಧುಗಳೂ ಅವರನ್ನು ಕೇಳುವವರೇ: "ನಿಮ್ಮ ಮನುವಿನ ಸುದ್ದಿ ಏನಾದರೂ ಇದೆಯೇ?" ಎಂದು. ಏನೆನ್ನಬೇಕವರು? "ಸುದ್ದಿ ಇದೆ; ಬದುಕಿದ್ದಾನಂತೆ. ತಂದೆ ತಾಯಿಗಳಿಗೆ ಬೇಕಾದುದೂ ಅಷ್ಟೇ ಅಲ್ಲವೇ" ಎಂದು ಆ ಪ್ರಶ್ನೆಯನ್ನು ವ್ಯಂಗ್ಯ ವೈರಾಗ್ಯದಿಂದ ತೇಲಿಸಿಬಿಟ್ಟು, ಅಡಿಕೆಯ ದರ, ತೋಟದ ಬೇಸಾಯ, ಕೊಳೆರೋಗದ ಮದ್ದು-ಏನೇನೋ ಇಂತಹ ವಿಷಯಗಳನ್ನು ಕುರಿತು ಮಾತು ಸಾಗಿಸಿದರು. ರಾತ್ರಿಯೆಲ್ಲ ಬಂಧುಗಳ ಮನೆಯಲ್ಲಿದ್ದರು. ವಿಶ್ವೇಶ್ವರನನ್ನು ಭೇಟಿಯಾಗಿ ಮಾತನಾಡುವ ತನಕ ಅವರ ಮನಸ್ಸು ಇಷ್ಟುಹೊತ್ತು ನೆಮ್ಮದಿಯಲ್ಲಿರಲಿಲ್ಲ. ಅವನ ಮನೆಗೆಹೋದರು. ತಾನು ಇಂಥವ ಎಂದು ತಿಳಿಸಿದರು. ವಿಶ್ವೇಶ್ವರ ಹಸನ್ಮುಖಿ; ತೆಳ್ಳಗಿನ ಹುಡುಗ; ಎಲೆಯಾಕಾರದ ಮುಖ, ಮೊನಚು ಮೂಗು, ಸ್ಫುರಿಸುವ ಕಣ್ಣುಗಳು. "ನಮ್ಮ ಮನೋಹರನ ತಂದೆಯಲ್ಲವೇ ನೀವು; ಬಾಯಾರಿಕೆ ತರುತ್ತೇನೆ"ಎಂದು ಹೇಳಿದ. 'ಬೇಡ'ವೆಂದು ಉತ್ತರ ಬಂದರೂ ತಾಯಿಯೊಡನೆ ಕಾಫಿ ತಯಾರಿಸಲು ಹೇಳಿ, ಮಾತಿಗೆ ಕುಳಿತ. ಅವನು ಅವರನ್ನು ಕೇಳಿದ ಪ್ರಶ್ನೆಯೂ ಅದೇನೇ: "ಮನೋಹರನ ಸುದ್ದಿ ಏನಾದರೂ ಇದೆಯೇ?" ಎಂದು.

"ನಾನು ಅದನ್ನೇ ಕೇಳುವುದಕ್ಕೆ ಬಂದೆ. ನಿನಗೇನಾದರೂ ಗೊತ್ತಿರಬಹುದು; ಏನಾದರೂ ಬರೆದಿದ್ದಾನೆಯೆ? ಮೊನ್ನೆ ಅವನಿಂದ ಒಂದು ಪತ್ರ ಬಂದಿತ್ತು. ಅದೂ ಮೊದಲನೆಯ ಬಾರಿಗೆ" ಎಂದು ಪತ್ರದ ವಿಷಯವನ್ನು

ಹೇಳಿದರು. ವಿಶ್ವೇಶ್ವರ ಅವರ ಮುಖವನ್ನೇ ನೋಡಿದ. ಅವರ ನೊಂದ ಕಣ್ಣುಗಳು ಒಡಲ ಮರುಕವನ್ನೆಲ್ಲ ಸೂಸುತ್ತಿದ್ದವು. ತನ್ನ ಮನಸ್ಸಿನಲ್ಲಿರುವುದನ್ನು ಹೇಳಲೋ ಬೇಡವೋ ಎಂದು ಆತ ತುಸು ಅನುಮಾನಿಸಿದ, ತಡೆದು, ತಡೆದು ಕೊನೆಗೆ ಹೇಳಲು ಧೈರ್ಯಮಾಡಿದ.

"ನೀವೇನೇನೂ ತಿಳಿಯಬಾರದು. ಮಂಗಳೂರಿನಲ್ಲಿ ಕಾಲೇಜಿನಲ್ಲಿ ಇದ್ದಾಗಲಷ್ಟೇ ನನಗೂ ಅವನಿಗೂ ಸ್ನೇಹ. ಅನಂತರ ಅವನು ನನಗೂ ಕಾಗದವನ್ನು ಬರೆದಿಲ್ಲ. ಆಗಲೇ ನಿಮ್ಮ ಮನೆಯ ತನಕ ಬಂದು, ಒಂದೆರಡು ಮಾತುಗಳನ್ನು ಹೇಳುವ ಎಂದನಿಸಿತ್ತು-ನನಗೆ; ಧೈರ್ಯವಾಗಲಿಲ್ಲ. ಆಗಲೂ ಅವನ ವಿಷಯವಾಗಿ ಎಷ್ಟೋ ಕತೆಗಳನ್ನು ಕೇಳಿದ್ದೆ. ಅನಂತರ ಅವನು ಬೇರೆ ಸ್ನೇಹಿತರಿಗೆ ಬರೆದ ಪತ್ರಗಳಿಂದ ಕೇಳಿದ ಸುದ್ದಿಗಳನ್ನೂ ತಿಳಿದೆ. ಸತ್ಯವೋ, ಸುಳ್ಳೋ—ನಾನು ಹೇಳಲಾರೆ. ಕೇಳಿದುದರ ಮೇಲಿಂದ, ಅವನ ಆಸೆಯನ್ನು ನೀವು ಹಿಡಿಯುವುದು ವ್ಯರ್ಥ-ಎಂದು ಕಾಣುತ್ತದೆ. ಕಾಲೇಜಿನಲ್ಲಿದ್ದಾಗಲೇ ಅವನಿಗೆ ಹುಡುಗಿಯರ ನಂಟುತನ ಹೆಚ್ಚಾಗಿತ್ತು ಎಂಬ ಸುದ್ದಿಯಿತ್ತು. ನಿಮ್ಮಲ್ಲಿಗೆ ಬಂದು ನಾನು ಹೇಳುವುದದ್ದರೂ ಅದನ್ನೇ ಹೇಳುವುದಕ್ಕಿತ್ತು. ಆದರೆ ಅವೆಲ್ಲ ಕೇಳಿದ ಮಾತುಗಳು; ನಾನು ಕಣ್ಣಾರೆ ಕಂಡದ್ದಲ್ಲ—ನನಗೇಕೆ ಎಂದು ಅಂಜಿ ಸುಮ್ಮನಾದೆ.

"ಆ ಮೇಲಿನ ಕತೆ ಇನ್ನಷ್ಟು ಚೆನ್ನಾಗಿಲ್ಲ. ನಮ್ಮ ಸಹಪಾಠಿಯೊಬ್ಬಳಿದ್ದಳು. ಒಳ್ಳೆಯ ಹುಡುಗಿಯಾಗಿಯೇ ಕಾಣಿಸುತ್ತಿದ್ದಳು."

"ಯಾರು? ಮಂಜುಳೆ ಎಂದು ಹೆಸರೇ?"

"ನಿಮಗೂ ಗೊತ್ತಿದೆ—ನಾನೇನು ಹೇಳುವುದು!"

"ನನಗೂ ಕೇಳಿಯೇ ಗೊತ್ತು. ನಾನು ಅದನ್ನು ನಂಬಿರಲಿಲ್ಲ. ಆದರೆ ಅವಳನ್ನೊಮ್ಮೆ ನಮ್ಮ ಮನೆಗೂ ಕರೆದು ತಂದಿದ್ದ."

"ಅದನ್ನೂ ನಾನು ಕೇಳಿದ್ದೇನೆ."

"ನಾನಾಗ ಅದೊಂದು ದೊಡ್ಡ ಸಂಗತಿ ಎಂದು ತಿಳಿಯಲಿಲ್ಲ. ಮಕ್ಕಳ ನಿಷ್ಕಲ್ಮಶ ಸ್ನೇಹ; ಇಬ್ಬರೂ ಚಿಕ್ಕವರು—ಎಂದಷ್ಟೇ ತಿಳಿದಿದ್ದೆ. ಅದೇ ತಪ್ಪಾಯಿತೆಂದು ಕಾಣುತ್ತದೆ."

"ಅವಳ ವಿಷಯದಲ್ಲಿಯೂ ನಾವು ಬೇಕಾದ್ದು ಹೇಳಬಹುದು. ಆದರೆ ಕ್ಲಾಸಿನಲ್ಲಿ ಅವಳ ಸ್ವಭಾವ ನನಗೆ ಗೊತ್ತು. ಅವಳಷ್ಟು ಕೆಟ್ಟವಳಲ್ಲ. ಅವ

ಳನ್ನು ಮದುವೆಯಾಗುತ್ತೇನೆಂದು ಈತನೇ ಭರವಸೆ ಕೊಟ್ಟು, ವಂಚಿಸಿ, ನಿರಾಶೆಗೊಳಿಸಿ ಓಡಿಹೋದ. ಆದರೆ ಇವನ ಸ್ನೇಹ ಇನ್ನೂ ಇತರರಲ್ಲಿತ್ತು ಎಂದು ನಾನು ಆಗಲೇ ಕೇಳಿದ್ದೆ. ಆ ಹುಡುಗಿ ಇವನ ಹುಚ್ಚಿನಿಂದ ಮನೆಯವರ ನಿಷ್ಠುರವನ್ನು ಕಟ್ಟಿಕೊಂಡು, ಕೊನೆಗೆ ಎಲ್ಲವನ್ನೂ ಬಿಟ್ಟು ಮುಂಬಯಿಗೆ ಹೋಗಿ ಅಲ್ಲೆಲ್ಲೋ ಚಾಕರಿ ಮಾಡಿಕೊಂಡಿದ್ದಾಳಂತೆ. ಇವತ್ತಿನ ದಿನದಲ್ಲಿ ಅಂತರ್ಜಾತೀಯ ವಿವಾಹವಾಗುವುದಿಲ್ಲವೆಂದಲ್ಲ. ಆದರೆ ಯಾರೊಬ್ಬರ ವಿಶ್ವಾಸ ಮುರಿದು, ಬೇಕಾದಂತೆ ವರ್ತಿಸುವುದು ಮಾತ್ರ ತುಂಬ ಅನ್ಯಾಯ. ನಾನು ಅವನ ಜಾತಿಯವನು. ಅವನ ವಿಳಾಸ ನನಗೆ ತಿಳಿದಿರಬಹುದು— ಎಂದು ಊಹಿಸಿ ಆ ಹುಡುಗಿ ಮುಂಬಯಿಂದ "ನಿನಗೆ ಮನುವಿನ ವಿಳಾಸ ಗೊತ್ತೇ?" ಎಂದು ಕೇಳಿ ಬರೆದ ಕಾಗದ ಇನ್ನೂ ನನ್ನಲ್ಲಿದೆ; ಅದನ್ನೋದಿ 'ಅಯ್ಯೋ ಪಾಪ' ಎನಿಸಿತು ನನಗೆ. ಇವನು ಓಡಿಹೋದ, ಒಂದು ವರ್ಷದ ಬಳಿಕ, ಅವಳು ನನಗೆ ಬರೆದ ಕಾಗದವದು. 'ಅವಳ ಹೃದಯ ಹೇಗಾಗಿರಬಹುದು? ಬಾಳು ಹೇಗೆ ಕತ್ತಲಿಂದ ತುಂಬಿರಬಹುದು' ಎಂದು ಆ ಕಾಗದವೇ ಹೇಳುತ್ತದೆ. ನಾನವಳಿಗೆ ಪತ್ರ ಬರೆದಿದ್ದೆ—'ಅಂಥವನಿಗಾಗಿ ಯಾಕೆ ಚಿಂತೆ ಕಟ್ಟಿಕೊಳ್ಳುತ್ತೀಯೆ? ಅವನು ಬರಿಯ ನಿನ್ನೊಬ್ಬಳನ್ನು ವಂಚಿಸಿದವನೇ? ಹತ್ತು ಹೂವುಗಳೊಡನೆ ಹಾರಾಡುವ ಪತಂಗಕ್ಕೆ ಯಾವ ಹೂವು ಹೆಚ್ಚು, ಯಾವ ಹೂವು ಕಡಿಮೆ? ನಿನಗೆ ಬೇರೆ ಯಾರೂ ಯೋಗ್ಯರು ಸಿಗಲಾರರೇ? ನೀನು ಓದಿದವಳು. ದೇವರು ನಿನಗೆ ಅನುಕೂಲ ರೂಪವನ್ನೂ ಕೊಟ್ಟಿದ್ದಾನೆ. ಮದುವೆಯಾಗಿ ಸುಖವಾಗಿ ಬಾಳಬಾರದೇ?' ಎಂದು ಬರೆದಿದ್ದೆ. ಮುಂದೆ ಅವಳಿಂದ ಪತ್ರ ಬರಲಿಲ್ಲ. ನಾನು ಅವಳಿಗೆ ಬರೆದ ಕಾಗದಗಲ್ಲಿಯೂ ನಿಮ್ಮ ಮನುವಿನ ವಿಷಯವನ್ನು ತಿಳಿಸಲಿಲ್ಲ.

ಅನಂತ ಗೋಖಲೆಯವರು ತಲೆತಗ್ಗಿಸಿ ಕುಳಿತುಕೊಂಡು ಅವನಿಂದ ಮುಂದಿನ ಮಾತುಗಳನ್ನು ನಿರೀಕ್ಷಿಸುತ್ತಿದ್ದರು. ಅವು ಇನ್ನಷ್ಟು ಅಪ್ರಿಯವಾಗಿ ಕಾಣಿಸಬಹುದೆಂಬ ನಿರೀಕ್ಷೆ ಇದ್ದೇ ಇತ್ತು.

"ಆಮೇಲೆ ಅವನ ಒಬ್ಬಿಬ್ಬರು ಆಪ್ತ ಸ್ನೇಹಿತರು ನನಗೆ ಸಿಕ್ಕಿದ್ದರು. ಅವರನ್ನೂ ವಿಚಾರಿಸಿದೆ. ಅವರು ಏನೇನೋ ಹೇಳಿದರು. ಯಾವುದೂ ಸ್ವಾರಸ್ಯವಿಲ್ಲದ ಕಥೆ. ಮಂಗಳೂರಿನಲ್ಲಿರುವಾಗಲೇ ಸಿನೆಮಾದ ಹುಚ್ಚು ಅವನಿಗೆ ಹಿಡಿದಿತ್ತು. ಆ ಹುಚ್ಚಿನಿಂದ ಲಾಹೋರಿಗೆ ಹೋದನಂತೆ. ಒಂದು

ಕಂಪೆನಿಯನ್ನೂ ಸೇರಿದ. 'ತಾನು ಅಂಥ ಚಿತ್ರದಲ್ಲಿ ಪಾತ್ರ ವಹಿಸುತ್ತೇನೆ; ಇಂಥದರಲ್ಲಿ ವಹಿಸುತ್ತೇನೆ' ಎಂದು ಅವರಿಗೆ ಬರೆದಿದ್ದನಂತೆ. ನಾನೂ ಹುಡುಕಿ ಹುಡುಕಿ, ಆ ಚಿತ್ರಗಳು ಬರುವ ವೇಳೆ ಕಾದು ಹೋಗಿದ್ದೆ. ಯಾವುದಾದರೂ ಗುಂಪಿನಲ್ಲಿ ಅವನು ವೇಷಹಾಕಿ ನಿಂತಿರಬಹುದು–ಎಂದೆಣಿಸಿದ್ದೆ. ಆದರೆ ಯಾವ ಒಂದು ಚಿತ್ರದಲ್ಲೂ ಅವನ ಮುಖ ನನಗೆ ಕಾಣಿಸಿಗಲಿಲ್ಲ. ಒಂದೆರಡು ಚಿತ್ರ ನೋಡಿ, ಅವನ ಮುಖ ಅದರಲ್ಲಿ ಇರಬಹುದು ಎಂದು ಊಹಿಸಬೇಕಾಯಿತಷ್ಟೆ. ಈಗಿನ ಹುಡುಗ ಹುಡುಗಿಯರಿಗೆ ಈ ಸಿನೆಮ ಲೋಕದ್ದೇ ಭ್ರಮೆ. ಮದ್ರಾಸಿನಲ್ಲಿಯೂ ನೋಡುತ್ತಿದ್ದೇನಲ್ಲ-ಇದೇ ಹುಚ್ಚು ತುಂಬಿದೆ. ಒಟ್ಟಾರೆ ನನಗೆ ಅದು-ಬರಿಯ ಹೆಣ್ಣಿನ ಸಂಸಾರವಾಗಿ ಕಾಣುತ್ತದೆ. ಆದರೆ ಆ ಹುಚ್ಚು ಹಿಡಿದವರಿಗೆ ಹಾಗೆ ಕಾಣಿಸಬೇಕಲ್ಲ! ಚಿತ್ರಗಳಲ್ಲಿ ಮೆರೆಯಬೇಕೆಂಬ ಒಂದೇ ಭ್ರಮೆಯುಳ್ಳವರಿಗೆ ನೀತಿ, ಗೀತಿ, ಗಾಳಿಯಷ್ಟು ಹಗುರವಾಗಿ ಬಿಡುತ್ತದೆ."

ಆಗ ಅನಂತ ಗೋಖಲೆಯವರು "ಸಂಗತಿ ನೀನೆನ್ನುವಂತಿದ್ದರೆ ನನ್ನ ಯೋಚನೆಗಿಂತ ಅದು ಭಿನ್ನವಾಗಿಲ್ಲ. ನನಗೂ ಅದು ಕೈಬಿಟ್ಟ ವಸ್ತುವೆಂದೇ ಕಾಣುತ್ತದೆ; ಹಂಬಲಿಸಿ ಪ್ರಯೋಜನವಿಲ್ಲ. ಮನೆಗೆ ಬರುತ್ತೇನೆಂದು ಈಗ ಕಾಗದ ಬರೆದಿದ್ದಾನೆ. ಕಾಯಿಲೆಯಂತೆ; ಖರ್ಚಿಗೆ ಐನೂರು ರೂಪಾಯಿ ಬೇಕಂತೆ. ಅವನ ತಾಯಿ ಕಣ್ಣೀರಿಡುತ್ತಾಳೆ" ಎಂದರು.

"ಐನೂರು ರೂಪಾಯಿಯೆ? ಲಾಹೋರಿನಿಂದ ಇಲ್ಲಿಗೆ ಬರುವುದಕ್ಕೆ!" ಎಂದ ವಿಶ್ವೇಶ್ವರ. "ತುಸು ವಿಚಾರಮಾಡಿ. ಅವನು ಊರಿಗೆ ಬರುವ ಹಾಗಿದ್ದರೆ ಹಣ ಕಳುಹಿಸಬಹುದು; ಒಮ್ಮೆ ಪರೀಕ್ಷೆ ಮಾಡಿ ನೋಡಬಹುದು" ಎಂದು ಸಲಹೆಯನ್ನಿತ್ತ.

ಗೋಖಲೆಯವರು, ವಿಶ್ವೇಶ್ವರ ಬಹುವಾಗಿ ಒತ್ತಾಯಮಾಡಿದರೂ ಅಲ್ಲಿ ಊಟಕ್ಕೆ ನಿಲ್ಲದೆ, ಅಲ್ಲಿಂದೆದ್ದರು. ತಮ್ಮ ಊರಿಗೆ ಬೀಸುಗಾಲು ಹಾಕಿದರು. ನಡೆದೇ ಒಳದಾರಿಯಲ್ಲಿ ತಿರುಗಿ ನಾಲ್ಕೈದು ಘಂಟೆಗಳ ಕಾಲ ದಾರಿ ತುಳಿಯಬೇಕು. ಹಾಗೆ ನಡೆಯದವರಲ್ಲ. ದೂರ ಅವರಿಗೊಂದು ಹೆಚ್ಚಲ್ಲ. ಆದರೆ ಮನಸ್ಸಿನ ಭಾರವನ್ನು ಹೊತ್ತು ನಡೆದಷ್ಟು, ದಣಿವು ಹೆಚ್ಚಾಗಿ ಕಾಣುತಿತ್ತು. ನೆರಳಿನ ತಂಪು ಸಹ ದಾರಿಯಿಂದ ಮಾಯವಾಗುತಿತ್ತು. 'ಐನೂರು' ಎಂಬ ಸಂಖ್ಯೆಯು ಕಣ್ಣಿನ ಮುಂದೆ ಕುಣಿದಾಡುತಿತ್ತು. ಹೇಗೂ ಊರಿಗೆ

ಹೋದರು. ಹೆಂಡತಿಯೊಡನೆ "ಪಂಡರೀ, ನಾನು ಐನೂರು ರೂಪಾಯಿ ಕಳುಹಿಸುವುದಿಲ್ಲ. ಅಲ್ಲಿಂದ ಬರುವುದಕ್ಕೆ ನೂರು ರೂಪಾಯಿಗಳು ಧಾರಾಳ ಸಾಕು. ಅಲ್ಲ; ಮುನ್ನೂರು ಕಳುಹಿಸುತ್ತೇನೆ— ಅವನು ಬರಲಿ ಬಿಡಲಿ; ಎರಡೂ ಒಂದೇ ನನಗೆ" ಎಂದರು.

"ಬರಲಿ ಬಿಡಲಿ, ಅಂದರೆ?"

"ಅವನು ಬರುವುದಿಲ್ಲ; ನನಗೆ ಗೊತ್ತು" ಎಂದರು.

ಅವರೆಣಿಸಿದಂತೆಯೇ ಆಯಿತು. ಅವರು ಕಳುಹಿಸಿದ ಮುನ್ನೂರು ರೂಪಾಯಿಗಳು ಹೊರಟೇ ಹೋದುವು. ಮಗನಿಂದ ಮುಂದೆ ಸುದ್ದಿಯೇ ಬರಲಿಲ್ಲ. ಪತ್ರವೂ ಬರಲಿಲ್ಲ. ಹಣ ಪಾವತಿಯಾದ ಬಗ್ಗೆ, ದೊರೆತ ಮನಿಯಾರ್ಡರ್ ರಶೀದಿಯೊಂದೇ ಅವರಿಗೆ ತೃಪ್ತಿಕೊಡಬೇಕಾಯಿತು. ಮತ್ತೂ ಎರಡು ವರ್ಷಗಳು ಸಂದುವು. ಆ ರಶೀದಿ ಯಾವ ಮೂಲೆಯಲ್ಲಿದೆ–ಎಂದು ಹುಡುಕಿ ನೋಡುವುದಕ್ಕೆ. ಅವರ ಎರಡನೆಯ ಮಗ ಗೋಪಾಲನ ಮದುವೆಗೂ ಅವರು ಮಗನಿಗೆ ಬಾಯೆಂದು ಪತ್ರ ಬರೆಯಲಿಲ್ಲ. ಗೋಪಾಲ ಮೆಟ್ರಿಕ್ ಮುಗಿಸಿ ಮನೆಗೆ ಬಂದೊಂದು ವರ್ಷದಲ್ಲಿ, 'ಅಣ್ಣನ ಹಾದಿ ತಮ್ಮ ಹಿಡಿಯದಿರಲಿ' ಎಂಬ ಭೀತಿಯಿಂದ, ತಂದೆ ಅವನನ್ನು ಸಂಸಾರಿಯನ್ನಾಗ ಮಾಡಿದರು. ಸ್ವಜಾತಿಯವರಲ್ಲಿ ರೂಪವತಿಯರಾದ ಕನ್ಯೆಯರಿಗೆ ಬರಗಾಲ ವಿರಲಿಲ್ಲ. ಗೌರವಸ್ಥ ಮನೆಗಳೂ ಬೇಕಷ್ಟು ಇದ್ದವು. ಹಾಗಾಗಿ ಒಂದು ನಂಟುತನ ನಿಶ್ಚಯಮಾಡಿದರು. ಪಂಡರೀಬಾಯಿ 'ಅವನಿಗೆ ತಮ್ಮನ ಮದುವೆಗಾದರೂ ಬರುವುದಕ್ಕೆ ಕಾಗದ ಹಾಕಿ' ಎಂದರೂ, ಅವರು ಮಗನಿಗೆ ಪತ್ರ ಹಾಕಲಿಲ್ಲ. ಅವಳು ಯಜಮಾನರಿಗೆ ತಿಳಿಯದಂತೆ, ಗೋಪಾಲನಿಂದ ಮನುವಿಗೆ ಪತ್ರ ಹಾಕಿಸಿದಳು. ವೆಚ್ಚಕ್ಕೆ ನೂರು ರೂಪಾಯಿಗಳನ್ನು ಕದ್ದು ಕಳುಹಿಸಿದಳು. ಮದುವೆಯ ದಿಬ್ಬಣ ಹೊರಡುವ ಗಳಿಗೆಯ ತನಕವೂ 'ಮಗ ಬಂದಾನು' ಎಂದು ಎಣಿಸಿಕೊಂಡಿದ್ದಳು. ಆದರೂ ಬರಲಿಲ್ಲ–ಎಂಬುದು ಖಚಿತವಾದ ಮೇಲೆ, ಅವಳ ಮನಸ್ಸೂ ಕಲ್ಲಾಯಿತು. ಆಗರಲಿಲ್ಲ ಈ ತನಕ.

ಮತ್ತೊಂದು ವರ್ಷ ಕಾಲವೇ ಸಂದಿತು. ಪಂಡರೀ ಬಾಯಿ ವಾತದಿಂದ ಹಾಸುಗೆಯನ್ನು ಹಿಡಿದಳು. ಅದರ ಜತೆಗೆ ಜ್ವರವೂ ಸೇರಿಕೊಂಡಿತು. ಸಾಲದುದಕ್ಕೆ ಬಾಯಿ ರುಚಿ ಇದ್ದಿರಲಿಲ್ಲ. ತಿಂದ ಆಹಾರ ದಕ್ಕುವಂತಿಲ್ಲ. ಮೂರು ತಿಂಗಳ ಬೇನೆಯಿಂದ ಆಕೆಯು ನರಳಿ, ನರಳಿ ಎಲುಬು ಚರ್ಮ

ವಾದಳು. ತನ್ನ ದಿನ ಸಮೀಪಿಸಿತು ಎಂಬ ಭಾವನೆ ಅವಳಲ್ಲಿ ಮೂಡತೊಡಗಿತು. ಅನಂತಯ್ಯನವರು ಎಷ್ಟೆಷ್ಟೋ ಮದ್ದು ಮಾಡಿಸಿದರು. ಎಷ್ಟೋ ದಿನ ನಿದ್ದೆಗೆಟ್ಟರು. ಸತಿಯ ಪ್ರೇಮದ ಋಣವನ್ನೆಲ್ಲ—ಬಹುವಾದ ನಯ, ಪ್ರೀತಿಗಳಿಂದ ಸಲ್ಲಿಸಿದರು. ಆದರೆ ಆ ಬದುಕು ದೈವಕ್ಕೆ ಮರಳಿ ಸಲುವ ಯೋಗವಿತ್ತೋ ಏನೋ—ಎಂಬುದರಿಂದ, ಬೇನೆ ಮಾತ್ರ ಗುಣವಾಗಲಿಲ್ಲ; ಬದಲು ಇನ್ನಷ್ಟು ಕಂಗಾಲ ಸ್ಥಿತಿಗೆ ಮುಟ್ಟಿತು. ಅಂಥ ವೇಳೆಯಲ್ಲೊಂದು ದಿನ ಪಂಡರೀಬಾಯಿ ಪತಿಯನ್ನು ದೀನ ಸ್ವರದಿಂದ ಪ್ರಾರ್ಥಿಸಿದಳು: "ಇದು ನನ್ನ ಕೊನೆಯ ಆಸೆ; ಮನುವಿಗೊಂದು ತಂತಿಯನ್ನು ಬಿಡಿ. ಖರ್ಚಿಗೆ ಹಣ ಕಳುಹಿಸಿ. ಅವನಿಗೆ ನನ್ನ ಶ್ರಾದ್ಧ ಮಾಡುವ ಯೋಗವಿದ್ದರೆ ಊರಿಗೆ ಬರುತ್ತಾನೆ" ಎಂದು ಬೇಡಿದಳು. ವೃದ್ಧ ಗೋಖಲೆಯವರನ್ನು ಈ ಮಾತುಗಳು ಈಟಿಯಂತೆ ತಿವಿದವು. ಅವರು ಮರು ವಿಚಾರ ಮಾಡಲಿಲ್ಲ. ತಮ್ಮ ದಫ್ತರವನ್ನು ಅರಸಿದರು. ಹಳೆಯ ಮನಿಯಾರ್ಡರ್ ರಶೀದಿಯನ್ನು ಹುಡುಕಿ, ವಿಳಾಸ ನೋಡಿ, ಗೋಪಾಲನೊಡನೆ ಹಣವನ್ನು ಕೊಟ್ಟು, ದೂರದ ತಂತಿ ಆಫೀಸಿಗೆ ಓಡಿಸಿದರು.

ಪಂಡರೀಬಾಯಿ ತನ್ನ ಇಹ ಯಾತ್ರೆ ಮುಗಿಸುವುದಕ್ಕೆ ಮೂರು ದಿನ ಹೋಯಿತು. ಅವು ಪ್ರಾಯಶಃ ಮಗ ಬಂದಾನು ಎಂಬ ಆಸೆಯಿಂದ ತಳ್ಳಿದ ದಿನಗಳು. ಹೆಚ್ಚುಕಡಿಮೆ ಆಕೆಗೆ ಕೊನೆಯ ಗಳಿಗೆಯ ತನಕ ಪ್ರಜ್ಞೆಯಿದ್ದರೂ, ಅವಳು ಮಗನನ್ನು ದೂರಿದವಳಲ್ಲ. 'ಬಂದನೇ?' 'ಬಂದನೇ?' ಎಂದು ಕೇಳಿ ಕೇಳಿ ಬೇಸತ್ತು, ಪತಿಯ ಸಮ್ಮುಖದಲ್ಲಿ ಒಂದೇ ಆಸೆಯನ್ನು ತಿಳಿಸಿದಳು. "ಅವನು ಬಾರದಿದ್ದರೂ ಚಿಂತೆಯಿಲ್ಲ. ಅವನು ಎಲ್ಲಿಯಾದರೂ ಇರಲಿ. ಮರ್ಯಾದೆಯಿಂದ ಬದುಕಿದ್ದಾನೆಂದು ಕೇಳಿದರೆ ನನಗೆ ಬಂದಷ್ಟೇ ಸಂತೋಷವಾಗುತಿತ್ತು" ಎಂದು ನುಡಿದು, ಉಳಿದ ಮಕ್ಕಳನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು, ಕಾಣದಿರುವ ನಾಲ್ಕನೆಯ ತರುಣ ಮುಖವನ್ನು ನೆನೆದು, ದೈವಕ್ಕೆ ಸಂದಳು.

ಉತ್ತರಕ್ರಿಯೆಗಳು ನಡೆದುವು. ತಮ್ಮ ಸಹಚರಿಯನ್ನು ಕೊಂಡೊಯ್ದ ಚಿತೆಯ ಜ್ವಾಲೆಗಳಿಗಿಂತಲೂ ಹೆಚ್ಚಿನ ಉರಿ, ಅನಂತ ಗೋಖಲೆಯವರನ್ನು ಸುಡತೊಡಗಿತು. ಆದರೂ 'ತಂತಿ ಸಿಕ್ಕಿದರೂ ಮಗ ಬರಲಿಲ್ಲ' ಎಂದೆಣಿಸುವುದಕ್ಕೆ ಅವರ ಮನಸ್ಸು ಒಪ್ಪದು. 'ತಂತಿಯೇ ಸಿಗದೆ, ಅದೇನೆ ಹಿಂದಕ್ಕೆ

ಬರುತ್ತದೆ; ಅವನೆಲ್ಲಿ ಇದ್ದಾನೋ. ಎರಡು ವರ್ಷಗಳ ಹಿಂದಿನ ವಿಳಾಸಕ್ಕೆ ತಂತಿ ಕಳುಹಿಸಿದರೆ ಏನು ಪ್ರಯೋಜನ? ಅವನಿಗೆ ಋಣವಿಲ್ಲ; ಅವಳಿಗೂ ಋಣವಿಲ್ಲ' ಎಂದು ಯೋಚಿಸಿದರು. ವೈಕುಂಠ ಸಮಾರಾಧನೆಯ ದಿವಸ ಹಿರಿಯ ಮಗನಿಲ್ಲದೆಯೆ ಬಂಧುಗಳ ಮುಂದೆ ಮುಖ ತೋರಿಸುವುದಕ್ಕೆ ಅವರಿಗೆ ಧೈರ್ಯವಾಗಲಿಲ್ಲ. ಬಂದವರು ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳಲಾರರು. 'ತಮಗೆ ಇನ್ನೂ ಮೂವರು ಗಂಡುಮಕ್ಕಳಿದ್ದಾರೆ. ಗೋಪಾಲನೇ ಹಿರಿಯ. ತಮ್ಮ ಮಾನ ಅವರಿಂದ ರಕ್ಷಣೆಗೊಳ್ಳುತ್ತದೆ' ಎಂಬುದೊಂದೇ ಸಮಾಧಾನ ಅವರಿಗೆ. ಆ ದಿನ ಸರಿದು, ಮರುದಿನ ತಂತಿ ಮನಿಯಾರ್ಡರಿನ ರಶೀದಿ ಅವರ ಕೈಸೇರಿತು. ಅದು ಹೋದ ಮರುದಿನವೇ ಮನುವಿನ ಕೈಯನ್ನು ಸೇರಿತ್ತು. ಸರಿಯಾದ ವಿಳಾಸಕ್ಕೇನೇ ಹೋಗಿ ಸೇರಿತ್ತು. ಅವನ ಸಹಿಯನ್ನೂ ಪಡೆದು ಬಂದಿತ್ತು.

"ನಾನು ಸತ್ತಮೇಲೆ ಬರುತ್ತಾನೆ! ಪಿತ್ರಾರ್ಜಿತದ ಪಾಲೊಂದುಂಟಲ್ಲ. ನಾನು ದುಡಿದದ್ದಾಗಿದ್ದರೆ ಒಂದು ಅಂಗುಲ ನೆಲವನ್ನು ಅವನಿಗೆ ಸಿಗುವುದಕ್ಕೆ ಬಿಡುತ್ತಿರಲಿಲ್ಲ" ಎಂಬ ರೋಷದಿಂದ ಅನಂತಯ್ಯನವರು ಪರಿತಪ್ತರಾದರು.

ತಂದೆಯಿಂದ ಎರಡನೆಯ ಬಾರಿಗೆ ತಂತಿ ಮತ್ತು ಹಣಗಳು ಬಂದಾಗ ಮನೋಹರ, ಆ ಊರಿಂದ ಕದಲುವ ಸ್ಥಿತಿಯಲ್ಲಿರಲಿಲ್ಲ. ಆರು ವರ್ಷಗಳ ಕಾಲ, ಯಾವಾವುದೋ ಕನಸುಗಳನ್ನು ಹೂಡಿಕೊಂಡಿದ್ದು, ಕಷ್ಟ ನಿಷ್ಠುರಗಳನ್ನು ಅನುಭವಿಸಿ, ತನ್ನ ಕನಸುಗಳು ಕೈಗೂಡುವ ದಿನ ಒದಗಿವೆ— ತಾನು ಚಲಚ್ಚಿತ್ರವೊಂದರಲ್ಲಿ ನಾಯಕನೇ ಆಗಿ, ತನ್ನ ಅಭಿಮಾನದ ತಾರೆ ಚಾಂದನಿಯೊಡನೆ ನಟಿಸುವ ದಿನ ಬಂತು; ಬಂದಿದೆ—ಎನ್ನುವಾಗ 'ತನ್ನ ತಾಯಿ ಮೃತ್ಯುಶಯ್ಯೆಯಲ್ಲಿದ್ದಾಳೆ' ಎನ್ನುವ ಮಾತು ಸತ್ಯವಾಗಿ ಕಾಣಿಸಲಿಲ್ಲ. ತನ್ನನ್ನು ಬರಮಾಡಿಕೊಳ್ಳುವುದಕ್ಕೆ ತಂದೆಯು ಹೂಡಿದ ಉಪಾಯವದು. ತಾಯಿಯು ಕಾಯಿಲೆಯ ವಿಚಾರದಲ್ಲಿ ಮುಂಚಿತವಾಗಿ ಒಂದೂ ಪತ್ರವಿಲ್ಲದೆಯೆ, ಅಂಥ ತಂತಿ ಬಂದರೆ, ಏನರ್ಥ ಕಲ್ಪಿಸಬೇಕು! ಅವನಿಗೂ ಹೋಗುವ ಮನಸ್ಸಿರಲಿಲ್ಲ. ಹೋಗುವುದಾದರೂ ನಾಲ್ಕೈದು ದಿನಗಳು ಬೇಕು. ತಾಯಿ ಅಂಥ ಸ್ಥಿತಿಯಲ್ಲಿದ್ದರೆ, ಹೋಗಿ ನೋಡುವುದಕ್ಕೂ ಇಲ್ಲ. ಕಳಿತ ಫಲ ಕೈಯಲ್ಲಿ ಬರುತ್ತಿದೆ ಎಂದು ನೆನೆಯುತ್ತಿರುವಾಗ 'ತಿನ್ನಬೇಡ, ಬಿಟ್ಟು ಓಡು' ಎನ್ನುವಂತೆ ಕಾಣಿಸಿತು—ಅದೆಲ್ಲ. ಬಿಡಲಾರ ಅದನ್ನು.

ಅವನ ಮತ್ತು ಚಾಂದನಿಯ ಸ್ನೇಹ ಐದು ವರ್ಷಗಳಿಗೆ ಮಿಕ್ಕಿದುದು. 'ಮೂಕಿ'ಗಳ ಯುಗ ಹೋಗಿ, 'ಟಾಕಿ'ಗಳ ಯುಗ ಬಂದಾಗ ಉದಯಿಸಿದ ತಾರೆ ಚಾಂದನಿ. ಅವಳಿಗೆ ಮನೋಹರನ ಗುರುತಾಗುವಾಗ ತಾರೆಯಾಗಿರಲಿಲ್ಲ. ಮಧುರ ಕಂಠದ ತೀರ ಸಾಮಾನ್ಯ ಚೆಲುವೆಯಾಗಿದ್ದಳು. 'ಶಾರ್ದೂಲ ಚಿತ್ರ ಮಂಡಳ'ದ ಎರಡು ಐತಿಹಾಸಿಕ ಕಥಾನಕಗಳಲ್ಲಿ ಉಪ ಪಾತ್ರ ವಹಿಸಿದ್ದಳು. ಆಗಲೇ ಮನೋಹರ ಅವಳನ್ನು ತಾರೆಯಾಗಿ ಗುರುತಿಸಿದ್ದ. ಮಂಗಳೂರಿಗೆ ಅವಳು ನಟಿಸಿದ್ದ ಚಿತ್ರ ಬಂದಿತ್ತು. ಆದರ ಕಥಾ ವಿವರ ಕೊಂಡಿದ್ದ. ಆತ ಚಾಂದನಿಯ ಪುಟ್ಟ ಪಾತ್ರವನ್ನು ಆದರಲ್ಲಿ ನೋಡಿದ್ದ. ಅದು ಮುಖ್ಯ ನಾಯಿಕೆಗಿಂತ ಚೆನ್ನಾಗಿ ಇತ್ತೆಂದು ಅನಿಸಿತು; ಕಲಾ ಪ್ರೋತ್ಸಾಹಕನಂತೆ ಅವಳಿಗೆ ಪತ್ರ ಬರೆದಿದ್ದ. ಆಗಿನ ದಿನಗಳಲ್ಲೇ ಇವನ ಕಣ್ಣುಗಳಲ್ಲಿ ಅವಳು ಮಹಾತಾರೆಯಾಗಿ ಕಂಡಳು. ಸುಂದರ ಯೌವನ ಕಾಣಿಸಿತು. ರೂಪ ಸ್ಫುರದ್ರೂಪವಾಗಿತ್ತು. ಅಭಿನಯ ಹೆಚ್ಚಿನದೆನಿಸಿತು. ಅವಳಿಗೇನೇ, ಅಷ್ಟೆಲ್ಲ ರಂಜನೆಯ ಮಾತುಗಳಿಂದ ಬಣ್ಣಿಸಿ ಬರೆದನು; ಜತೆಗೆ ಚಿತ್ರ ನಿರ್ದೇಶಕನಾದ ಶಾರ್ದೂಲ ಸಿಂಗನನ್ನು ಹಳಿದೂ ಬರೆದಿದ್ದನು. "ನಿಮ್ಮಂಥ ಅಭಿನಯ ಕುಶಲೆಯೂ, ಚೆಲುವೆಯೂ ಪಾತ್ರಕ್ಕೆ ತಕ್ಕ ವಯಸ್ಸಿನವಳಿರುವಾಗ, ಬುದ್ಧಿಗೇಡಿಯಾದ ನಿಮ್ಮ ನಿರ್ದೇಶಕನು ತೀರ ಕಿರಿಯ ಪಾತ್ರವನ್ನಷ್ಟೆ ನಿಮಗೆ ಕೊಟ್ಟು, ಯಾವ ಯೋಗ್ಯತೆಯೂ ಇಲ್ಲದಂಥ ಮಾಸದ ಪೀಪೆ ಬೇಗಂ ಅಮೀರುನ್ನೀಸಳಿಗೆ ರಾಣಿಯ ಪಾತ್ರ ಕೊಟ್ಟುದು ತಪ್ಪಲ್ಲವೆ?" ಎಂದು ಕೇಳಿ ಬರೆದಿದ್ದ. ಆಗಲೇ ಅವಳಿಂದ ಅವನಿಗೂ ಪ್ರತ್ಯುತ್ತರ ಬಂದಿತ್ತು. ಅವಳ ಸಹಿಯುಳ್ಳ ಭಾವಚಿತ್ರವೂ ಬಂದಿತ್ತು. ಬಣ್ಣ ಸವರಿಕೊಂಡಿದ್ದ ತುಂಬುಗಣ್ಣಿನ ಆಕೆಯ ರೂಪು, ಅಂದಿನಿಂದ ಮಂಜುಳೆಯ ಮುಖಕ್ಕೆ ಅಡ್ಡವಾಗಿ ಬರತೊಡಗಿತು.

ಮುಂದಿನ ಪತ್ರ ವ್ಯವಹಾರಗಳ ಜತೆಗೆ, ಅದಕ್ಕಾಗಿಯೇ ತೆಗೆಯಿಸಿದ, ಮನುವಿನ ನಟನೆಯ ಭಾವಚಿತ್ರಗಳು ಹೋದುವು. ಪರಸ್ಪರ ಉಭಯ ಕುಶಲೋಪರಿಗಳಾದುವು. ಒಂದು ದಿನ ಅವನೇ ಲಾಹೋರಿಗೆ ಹೋಗುವಂತಾಯಿತು. ಅಲ್ಲಿ ನಿಲ್ದಾಣದಿಂದಿಳಿದವನು, ವಿಳಾಸ ಹುಡುಕಿಕೊಂಡು ಚಾಂದನಿ ದೇವಿಯ ಮನೆಗೇನೆ ಹೋದ. ಅದು ಬಂಗ್ಲೆಯಾಗಿದ್ದರಲಿಲ್ಲ. ಸಾಮಾನ್ಯ ಓಣಿಯೊಂದರಲ್ಲಿ ನೆಲೆಸಿದ್ದ ಉಪ್ಪರಿಗೆಯ ಮನೆಯೊಳಗಿನ ಎರಡುಮೂರು

ಕೊಟಡಿಗಳುಳ್ಳ ಸ್ಥಳ ಸಂಕೋಚದ ಜಾಗವಾಗಿತ್ತು. ಮನೆಯಲ್ಲಿದ್ದೊಬ್ಬ ಮುದುಕ ಕದವನ್ನು ತೆರೆದ. ಒಳಗಿಂದ ಈ ತರುಣನನ್ನು ಸ್ವಾಗತಿಸಲು, ಆಗಷ್ಟೆ ಮುಖಕ್ಕೆ ಪೌಡರ್ ಸವರಿಕೊಂಡು ಉಜ್ಜುತ್ತ ಬರುವ ತಾರೆ ಉದಯಿಸಿದಳು. ಅವಳದು ಪಂಜಾಬಿಯ ಉಡುಗೆ. ತುಸು ಕಂದಾದ ಬಣ್ಣ. ಚಿತ್ರದಲ್ಲಿ ಕಂಡ ಬಟ್ಟಲುಗಣ್ಣುಗಳಷ್ಟೇ ನಿಜ. ಫೋಟೋವಿನ ರೂಪಕ್ಕೂ ಎದುರಿಗೆ ನಿಂತ ಮೂರ್ತಿಗೂ ಎಷ್ಟೋ ಅಂತರವಿತ್ತು. ಇವನಷ್ಟು ಬಿಳಿಚೂ ಅಲ್ಲ ಅವಳು. ಈತ ಇಂಗ್ಲಿಷಿನಲ್ಲಿ ಮಾತು ತೊಡಗಿದ. ಆಕೆ ಇಂಗ್ಲಿಷಿನಲ್ಲಿ ಪತ್ರ ಬರೆಯಿಸಿದ್ದಳು—ಸಹಿ ಮಾತ್ರ ಅವಳದ್ದಿರಬೇಕೆಂದು ಈಗ ಅರಿವಾಯಿತು. ಈಗ ಅವನನ್ನಿದಿರಾದುದು ಹಿಂದುಸ್ಥಾನಿ ಭಾಷೆ. ಪತ್ರ ವ್ಯವಹಾರ ಮಾಡಿದ ಇವನ ನೆನಪು ಅವಳಿಗೂ ಉಂಟಾಯಿತು. ಇವನು ಕೇಳಿದ ಪ್ರಶ್ನೆಗಳ ಅರ್ಥ ಮಾತ್ರ ಆಗಲಿಲ್ಲ. ಆಗೇನೋ ಆತನಿಗೆ ಸಾಕಷ್ಟು ನಿರಾಶೆಯಾಯಿತು.

"ಅನಾರ್ಕಲಿ ಮೂವಿಟೋನ್ ಎಂಬುದೆಲ್ಲಿದೆ?" ಎಂದು ಕೇಳಿದ. ಅವಳು ಅದರ ವಿಳಾಸವಿರುವ ಒಂದು ಜಾಹೀರಾತನ್ನು ಹೊರಕ್ಕೆ ತೆಗೆದು, ಅದರಲ್ಲೇ ತನ್ನ ಸಹಿ ಮಾಡಿ ಕಳುಹಿಸಿಕೊಟ್ಟಳು.

ಚಾಂದನಿಯನ್ನು ಕಂಡಾಗ ಉಂಟಾದ ನಿರಾಶೆಯೇ, ಆ ಅನಾರ್ಕಲಿ ಮೂವಿಟೋನ್ ಕಚೇರಿ ನೋಡಿದಾಗಲೂ ಉಂಟಾಯಿತು. ಅದು ಸಾಮಾನ್ಯ ವ್ಯಾಪಾರದ ಮನೆಯಾಗಿತ್ತು. ಎರಡು ಕೊಟಡಿಗಳ ಒಂದು ಉಪ್ಪರಿಗೆಯಲ್ಲಿ ಒಬ್ಬ ಮಾರವಾಡಿ ಮುದುಕ ಕುಳಿತಿದ್ದ. ಅವನಿಗೂ ಇಂಗ್ಲಿಷ್ ಬಾರದು. ಒಂದು ಮೂಲೆಯಲ್ಲಿ ಹತ್ತೆಂಟು ಫಿಲ್ಮ್ ಡಬ್ಬಿಗಳು ಬಿದ್ದಿದ್ದವು. ಗೋಡೆಗೆ ಚಿತ್ರದ ಪೋಸ್ಟರುಗಳು ಅಂಟಿಸಿದ್ದುವು. ಅದರಿಂದಾಗಿ—ಅವರು ಚಲಚ್ಚಿತ್ರ ನಿರ್ಮಾಪಕರಲ್ಲ; ಬರಿಯ ಚಿತ್ರ ಹಂಚುವವರು—ಎಂದು ಗೊತ್ತಾಯಿತು. ಮನೋಹರನಿಗೆ ಆಗ ಏನು ಮಾಡುವುದೆಂದು ಗೊತ್ತಾಗಲಿಲ್ಲ. ಚಾಂದನಿಯ ಸಹಿ ಇರುವ ಆ ಕಾಗದವನ್ನು ಅವರಿಗೆ ಕೊಡಲೇ, ಬಿಡಲೇ ಎಂದು ಯೋಚಿಸಿದ. ಆದರೂ ಇಂಗ್ಲಿಷ್ ಅರಿಯದ ಆ ಮುದುಕನಿಗೆ ಕೊಟ್ಟು ಏನು ಪ್ರಯೋಜನ?—ಎನಿಸಿತು. ಆ ಮುದುಕನ ಮಗ, ಮೂವತ್ತು ವಯಸ್ಸಿನ ಸುಂದರ ಕಾಯನಾದ ಸಣ್ಣ ಸೇಠಜಿ ಬಂದ ಮೇಲೆ, ಮನು ಉಸಿರಾಡುವಂತಾಯಿತು.

ಅವರ ಅಂಗಡಿ ಸಣ್ಣದಾಗಿದ್ದರೂ, ಸೇಠ್ ರಮಣ್‌ಲಾಲ್ ಹಿಮ್ಮತ್‌ಲಾಲನ ವರ್ಚಸ್ಸು ಹೆಚ್ಚಿನದಿತ್ತು. ಚಿತ್ರ ನಿರ್ಮಾತೃಗಳಿಗೆ ಹಣ ಮುಂಗಡ ಕೊಟ್ಟು, ಚಿತ್ರಗಳನ್ನು ಕೊಂಡು ಹಂಚುವ ದೊಡ್ಡ ವ್ಯಾಪಾರ ಬೆಳೆಸಿದ್ದಾನೆ. ಮಾರಿ ಬಲೆ ಬೀಸಿದಂತಿತ್ತು ಅವನ ವ್ಯವಹಾರ. ಆದರೆ ಆ ಮುದುಕ ಸ್ವಂತವಾಗಿ ಚಿತ್ರಗಳ ಉತ್ಪನ್ನಕ್ಕೆ ಹೋದವನಲ್ಲ. ಯಾವುದಾದರೊಂದು ವಿಧದಲ್ಲಿ ಹಣದಾಸೆ ತೋರಿಸಿ, ಚಿತ್ರ ನಿರ್ಮಾಪಕರನ್ನು ತೊಂದರೆಗಿಳಿಸಿ, ಚಿತ್ರಗಳ ಸಂಪೂರ್ಣ ಹಕ್ಕನ್ನು ಬರೆಯಿಸಿಕೊಳ್ಳುವ ಚಾಣಾಕ್ಷತನವಷ್ಟೇ ಅವನದು. ಹಂಚುವಿಕೆ, ವ್ಯವಹಾರ, ಇಂಥ ರೀತಿಯ ಚಿತ್ರ ಮಾಡಿರಿ—ಎನ್ನುವ ಉಪದೇಶಗಳೆಲ್ಲ ಅವನ ಮಗನಾದ ಚಿಮಣ್‌ಲಾಲ್ ರಮಣ್‌ಲಾಲನದು. ಆತ ಇಂಗ್ಲಿಷ್ ಭಾಷೆ ಬಲ್ಲ. ಬಂದವನೇ ಮನೋಹರನನ್ನು ಏನು ಬಂದಿರೆಂದು ಕೇಳಿದ. ಛಾಂದನಿಯ ಸಹಿಯುಳ್ಳ ಕಾಗದವನ್ನು ನೋಡಿ ನಕ್ಕ. ಚಹ ತರಿಸಿಕೊಟ್ಟ. ವಿರಾಮದಲ್ಲಿ ಮನೋಹರನ ಆಸೆ, ಅಭಿಲಾಷೆಗಳನ್ನು ವಿಚಾರಿಸಿ ತಿಳಿದ.

ಚಿಮಣ್‌ಲಾಲ್ ವ್ಯವಹಾರ ಕುಶಲ. ಮನೋಹರನ ತರುಣ ಮುಖ, ಯೌವನಗಳು ಚಿತ್ರ ಜಗತ್ತಿನಲ್ಲಿ ಪ್ರಯೋಜನಕ್ಕೆ ಬಿದ್ದೀತು ಎಂದು ಊಹಿಸಬಲ್ಲ. ಆದರೆ ಈಗಷ್ಟೆ ಅಲ್ಲಿನ ಮನ್ವಂತರ ಬದಲಿಸಿದೆ. ಟಾಕಿಗಳು ಬಂದವೆ; ಅವು ನಿಂತಾವೇ ಹೋದಾವೇ-ಎಂಬ ವ್ಯವಹಾರದ ಅನುಮಾನವಿದೆ. ಸ್ವಂತ ಚಿತ್ರ ತಯಾರಿಸಬೇಕು ಎಂಬ ಅವನ ಹಂಬಲಕ್ಕೂ ಅಡಚಣೆಗಳು ನೂರಾರಿವೆ. ಅವನದೂ ಏನೇನೋ ಹಿರಿಯ ಕನಸುಗಳಿವೆ. ಆ ಕನಸುಗಳಲ್ಲಿ ಚಿತ್ರ ನಿರ್ಮಾಣದಷ್ಟೇ ಪ್ರಾಮುಖ್ಯ ವಸ್ತು, ತಾರೆಯರ ಸಂಗ್ರಹ. ಆದರೆ ಅವನಿಂದ ಮನೋಹರನಿಗೆ ಒಂದು ಪ್ರಯೋಜನವಾಯಿತು. ಅವರ ಮಹಡಿಯಲ್ಲೇ ಬಿಡಾರ ದೊರೆಯಿತು. ಅವನಲ್ಲಿ ತಾತ್ಕಾಲಿಕ ಗುಮಾಸ್ತಿಕೆ ಕೆಲಸ ದೊರೆಯಿತು. ಮುಂದೆ ಅವನು ಅನೇಕ ಸ್ಟುಡಿಯೋಗಳನ್ನು ಸುತ್ತಿ ಸುಳಿಯುವುದಕ್ಕೆ ಅನುಕೂಲವಾಗಿ, ವಿಳಾಸಕ್ಕೊಂದು ಗಟ್ಟಿ ಸ್ಥಳ ದೊರೆಯಿತು. ಮನೋಹರನ ತಂದೆಯ ಕೊನೆಯ ತಂತಿ ಬಂದು ಸೇರಿದದು ಅಲ್ಲಿಗೇನೆ. ಆ ತಿಂಗಳಿನಿಂದಷ್ಟೆ ಸೇಠಜಿ ಮತ್ತು ಮನೋಹರನ ಸ್ನೇಹ ಮುಗಿದು ಛಾಂದನಿಯ ಬೆನ್ನಿನ ಹಿಂದೆ ಮನೋಹರ ನಲಿದಾಡತೊಡಗಿದ್ದಾನೆ.

[redacted]ದ ಕತೆಯು ಒಂದು ದೀರ್ಘ ಪುರಾಣವಾಗಿದೆ.

ಮನೋಹರ, ಚಿಮನ್‌ಲಾಲ್‌ಸೇಠನು ಕೊಟ್ಟ ಪರಿಚಯ ಪತ್ರವನ್ನು ಹಿಡಿದುಕೊಂಡರೂ, ಅವರಿಗಷ್ಟು ವರ್ಚಸ್ಸಿದ್ದರೂ, ನಾಲ್ಕಾರು ಸಿನೆಮಾ ಸ್ಟುಡಿಯೋ ಸುತ್ತಬೇಕಾಯಿತು. ನಮ್ಮಲ್ಲಿ ಸಾವಿರ 'ಎಕ್ಸಟ್ರಾಸ್ ಇದ್ದಾರೆ' ಎನ್ನುವವರೇ ಎಲ್ಲರೂ. ಇವನಂತೆಯೆ ಅನೇಕ ಹುಡುಗರು, ಹುಡುಗಿಯರು, ಪೇಟೆಯಿಂದ ಮೇಲೆ ಉದ್ಯೋಗ ಹುಡುಕಿಕೊಂಡು ಬಂದು ನಿರಾಶೆಯಿಂದ ಮರಳಬೇಕಾಗುತ್ತಿತ್ತು. ತನ್ನ ಯೋಗ್ಯತೆಯ ಮೇಲೆ ಭರವಸೆಯಿಟ್ಟು ಬಂದ ಆತನಿಗೆ, ಸ್ಟುಡಿಯೋವಿನ ಮಾಲಿಕರನ್ನೋ ಡೈರೆಕ್ಟರರನ್ನೋ ಕಾಣುವುದಕ್ಕೇ ಎಷ್ಟು ವಿಘ್ನ! ಆ ದೃಷ್ಟಿಯಿಂದ, ಹೆಣ್ಣು ಜನ್ಮವೇ ಎಷ್ಟೋ ಲೇಸು ಎನಿಸಿತು. ಇನ್ನು ಭೇಟಿಯಾದಾಗಲೂ "ನಿನ್ನ ಎತ್ತರ ಸಾಲದು, ಗಾತ್ರ ಸಾಲದು, ಇನ್ನೂ ಹುಡುಗನಾಗಿ ಕಾಣಿಸುತ್ತೀಯಾ. ಇದು ಪಂಜಾಬ್ ದೇಶ" ಎನ್ನುತ್ತಾರೆ ಅವನನ್ನು ನೋಡಿ. ನಿಜ! ಪಂಜಾಬಿನ ಆ ತಾರಾಲೋಕದವರು, ಸಿನೆಮಾ ಕೆಲಸಗಾರರು, ಏನಿಲ್ಲವಾದರೂ ಆಳು ಭರ್ತಿಯಾಗಿರುತ್ತಾರೆ. ಇವನಂಥ ಬಡ ಜೀವಿಗಳಲ್ಲ.

ಇನ್ನು ಅವರು ಕೇಳುತ್ತಿರುವ ಪ್ರಶ್ನೆಗಳೋ! ಅವೂ ವಿಚಿತ್ರವಾಗಿವೆ. "ನಿನ್ನಿಂದೇನಾದೀತು? ಕುದರೆ ಸವಾರಿ ಬರುತ್ತದೆಯೋ? ಕಸರತ್ ಮಾಡುತ್ತೀಯಾ? ಫೆನ್ಸಿಂಗ್ ಕಲಿತಿದ್ದೀಯಾ?" ಎಂದೆಲ್ಲ ಕೇಳುತ್ತಾರೆ. "ಹಾಡುವುದಕ್ಕೆ ಬರುತ್ತದೆ, ನಟಿಸುವುದಕ್ಕೆ ಬರುತ್ತದೆ" ಅಂದರೆ "ನಿನ್ನನ್ನು ಯಾರು ಸ್ಟಾರ್ ಮಾಡುತ್ತಾರೆ? ಒಂದು ಎಕ್ಸ್ಟ್ರಾ ಆಗಿರುವುದಕ್ಕೆ ಸ್ವಲ್ಪ ಏನಾದರೂ ಗೊತ್ತಿರಬೇಕು ಇದೆಲ್ಲ" ಎಂದು ಅವನ ಅಭಿಮಾನವನ್ನು ಕುಕ್ಕುತ್ತಾರೆ. ಹಾಗೂ ಹೀಗೂ ಆತ ಜಿಗಣೆಯಂತೆ ಅಂಟಿಕೊಂಡು, ಒಂದು ಎಕ್ಸ್ಟ್ರಾ ಪದವಿ ದೊರಕಿಸಿಕೊಂಡ. ಕೆಲಸವಿರಲಿ,ಇಲ್ಲವಿರಲಿ-ಸ್ಟುಡಿಯೋ ಸುತ್ತಾಡುವುದು, ಹತ್ತು ಜನಗಳೊಡನೆ ಯಾವಾಗಲೂ ವೇಷ ತೊಟ್ಟುಕೊಳ್ಳುವುದು, ಅವರ 'ಟೈಫೂನ್ ಮೈಲ್' 'ಪಂಜಾಬ್ ಮೈಲ್'ಗಳಲ್ಲಿ ಗೂಂಡಾ ಸಮುದಾಯದ ಜನವಾಗುವುದು—ಇಷ್ಟು ಅವನ ನಿತ್ಯದ ಭಾಗ್ಯವಾಯಿತು. ಅವನು ಸೇರಿದ ಎರಡು ವರ್ಷಗಳ ತನಕ ಅವನಿಗೆ ಹೊಟ್ಟೆ ಬಟ್ಟೆಗೂ ಕಷ್ಟವಿತ್ತು. ಆದರೆ ಏನೋ ಒಂದು ವಿಚಿತ್ರವಾದ ಮೋಹ, ಸುತ್ತಲಿನ ಜನಗಳೊಡನೆ ಮೆರೆಯುವ ಆಸೆ, ಅವನದ್ದು. ಅವಕಾಶವಿಲ್ಲದಲ್ಲಿ ಅವಕಾಶವನ್ನೆಣಿಸುತ್ತದೆ ಮನಸ್ಸು. ಆದರೆ ಪರಿಚಯಕ್ಕೆ ತುಂಬ ಅವಕಾಶವುಳ್ಳ ಆ ಸ್ಟುಡಿಯೋಗಳಲ್ಲಿ ಸುತ್ತಿ

ಸುಳಿಯುವಾಗ, ಚಿಲ್ಲರೆ ನಾಯಕಿಯೊಡನೆ ಸಲ್ಲಪಿಸಬಹುದು; ಸ್ನೇಹವಾಗಿರಬಹುದು. ಅಂತಹ ಮಬ್ಬು ಮನುವನ್ನು ಆವರಿಸಿದ್ದೊಂದು ವಿಶೇಷವಲ್ಲ. ಅಲ್ಲದೆ ಚಾಂದನಿಯೊಬ್ಬಳಿರುವ ತನಕ ಆ ಲೋಕ ತೀರ ಪ್ರಿಯವಾಗಿತ್ತು.

ಚಾಂದನಿಯು ಈ ಐದು ವರ್ಷಗಳಲ್ಲಿ ಮೂರು ಕಂಪೆನಿಗಳನ್ನು ಸೇರಿದಳು; ಬಿಟ್ಟಳು. ಮೂರನೆಯ ಚಿತ್ರಮಂಡಳಿದಲ್ಲಿ ಮೂರು ವರ್ಷಗಳ ಕಾಲ ಇದ್ದಳು. ಸಾಮಾನ್ಯ ಗಣ್ಯಸ್ಥಾನ ದೊರೆಯುವ ಸ್ಥಿತಿಗೆ ಬರುವಾಗ ಅದನ್ನೂ ಬಿಟ್ಟಳು. ಅವಳು ಪಂಜಾಬಿನ ಪಟ್ಟಣವೊಂದರಲ್ಲಿ ಹುಟ್ಟಿ ಬೆಳೆದ ಅವಿದ್ಯಾವಂತ ಹುಡುಗಿ; ಹಾಡುವುದಕ್ಕೇನೋ ಬರುತ್ತಿತ್ತು. ಆದುದರಿಂದ ಚಿತ್ರಗಳಲ್ಲಿ ಅವಕಾಶ ದೊರೆಯಿತು. ಅವಳ ನಿಜವಾದ ಹೆಸರು ಚಾಂದನಿ ಆಗಿರಲಿಲ್ಲ; 'ಬೇಬಿ ಅಮೀನಾ' ಅವಳು; ಕುಲದಲ್ಲಿ ವೇಶ್ಯೆ. ತಕ್ಕ ಯೌವ್ವನವಿತ್ತು; ಸಾಮಾನ್ಯವಾದ ಕಂಠವಿತ್ತು. ಚಿತ್ರಗಳಲ್ಲಿ ಪ್ರಧಾನ ಪಾತ್ರಗಳಲ್ಲದಿದ್ದರೂ ಸಾಮಾನ್ಯ ವೇತನ, ಸಾಮಾನ್ಯ ಪಾತ್ರ ದೊರೆಯತೊಡಗಿತು. ಲಾಹೋರಿಗೆ ತಾನು ಬಂದಂದಿನಿಂದಲೂ ಮನೋಹರ ಅವಳನ್ನು ಮೆಚ್ಚುವುದಕ್ಕೆ ಕಲಿತ. ಅವಳ ಅಭಿನಯವನ್ನು ಮೊದಲಿನಿಂದಲೂ ಹೊಗಳುತಿದ್ದ. ಅವಳ ಜತೆಯಲ್ಲಿ ತಾನು ಅಭಿನಯಿಸಬೇಕು—ಎಂಬ ಅವನ ಆಸೆ ಮಾತ್ರ ಬಹಳ ದೂರ ಉಳಿಯಿತು. ಅಮೀನಾ ಚಾಂದನಿಯಾದದ್ದೇ ಒಂದು ಯೋಗ; ಡಿರೆಕ್ಟರರನ್ನು ಮೆಚ್ಚಿಸಿ ಆದಳು. ಆದರೆ ಆ ನಿರ್ದೇಶಕನನ್ನು ಮೀರಿದ ಮಹಾನುಭಾವರು ಚಿತ್ರ ಜಗತ್ತಿನಲ್ಲಿದ್ದಾರೆ. ಕೇಳಿದಷ್ಟು ಹಣ ಒದಗಿಸುವ ಸೇಠಜಿಯವರು 'ಇಂಥವಳು ತಾರೆಯಾದರೆ ಹಣ ಕೊಡುವವ ನಾನು' ಎಂದೆನ್ನಬಹುದು. ಚಾಂದನಿಯ ಯೋಗ್ಯತೆಯನ್ನು ನೋಡಿ ಚಲಚ್ಚಿತ್ರ ಪಂದ್ಯಾಟದಲ್ಲಿ, ಪಣ ಕಟ್ಟುವಂಥ ಭಟರು ಬಹಳ ಮಂದ ಇರಲಿಲ್ಲ. ಕಾಲಾಂತರದಲ್ಲಿ ಚಿಮಣ್ ಲಾಲ್, ತನ್ನ ತಂದೆಗೆ ತಿಳಿಸದೆಯೆ, ಆ ಕೆಲಸವನ್ನು ಮಾಡಿದ.

ಮನೋಹರನ ಜೀವನದ ಹೋರಾಟದ ಜತೆಗೆ, ನಟನೆಯ ಅಭಿಲಾಷೆ ಎರಡು ಮೂರು ವರ್ಷಗಳಲ್ಲಿ ಅಸಂತೃಪ್ತಿಯ ರೂಪ ತಾಳಿತು. ಆತನಂತೆ ಇಂಗ್ಲಿಷ್ ಬಲ್ಲವರು ಕಡಿಮೆ. ಸುತ್ತಲಿನ ಹುಂಬರನ್ನು ಕೂಡಿಸಿ ತಮ್ಮಂತಹ ತುಂಡು ನಟರ ಗುಂಪೊಂದನ್ನು ರಚಿಸಲಿಕ್ಕೆ ಅವನಿಗೆ ಅದರಿಂದ ಸಾಧ್ಯವಾಯಿತು. ಮೆಲ್ಲಗೆ ಎಲ್ಲ ಸ್ಟುಡಿಯೋಗಳಿಗು ಪಸರಿಸಿದ 'ತುಂಡು ನಟರ ಯೂನಿಯನ್' ಒಂದು ಸ್ಥಾಪನೆಯಾಯಿತು. ಅದರ ಕಾರ್ಯಕಲಾಪಗಳೆಲ್ಲ, ಚಟು

ವಟಿಕೆಗಳೆಲ್ಲ ಗುಪ್ತವಾಗಿಯೇ ನಡೆಯುತ್ತಿದ್ದವು. ಬಹಿರಂಗ ಚಟುವಟಿಕೆಯೊಂದೂ ಇಲ್ಲ. ಅಪೂರ್ವ ಸನ್ನಿವೇಶಗಳಲ್ಲಿ-ಇಪ್ಪತ್ತು ಮೂವತ್ತು ಜನರು ನಿಶ್ಚಿತ ದಿನಕ್ಕೆ, ನೂರಾರು ರೂಪಾಯಿ ವೆಚ್ಚಮಾಡಿದಂಥ ಒಂದು ದೃಶ್ಯದ ಮುಂದೆ ಕುಣಿಯಬೇಕಾಗುತ್ತದೆ, ನಾಲ್ಕು ದಿನಗಳಲ್ಲಿ ಸ್ಟುಡಿಯೋ ಕರಾರು ಮುಗಿಯುತ್ತದೆ—ಎನ್ನುವ ಸಂದಿಗ್ಧ ಪ್ರಸಂಗದಲ್ಲಿ, ಆ ನಾಲ್ಕೈದು ದಿನವೂ ಒಬ್ಬ ತುಂಡು ನಟನೂ ಕಣ್ಣಿಗೆ ಬೀಳುವುದಿಲ್ಲ. ಇಂಥ ಮುಷ್ಕರಗಳಿಂದ ಲಾಹೋರಿನ ಚಿತ್ರ ನಿರ್ಮಾಪಕರು ಕಣ್ಣು ತೆರೆಯುವಂತಾಯಿತು. ತುಂಡು ನಟರನ್ನು ಕಸವಾಗಿ ಕಾಣುವ ದಿನಗಳು ಹೋದುವು. ಕೆಲಸಕ್ಕೆ ನಿಶ್ಚಿತ ವೇಳೆ; ಅದು-ಮೀರಿದಲ್ಲಿ ಹೆಚ್ಚಿನ ವೇತನ, ಇತರ ಸೌಕರ್ಯಗಳು—ಅದರಿಂದಾಗಿ ಅವರಿಗೆ ದೊರೆಯತೊಡಗಿದವು. "ಮುಖ್ಯ ಪಾತ್ರ ಇಂಥವರಿಗೇನೇ ಕೊಟ್ಟರೆ ಬರುತ್ತೇವೆ, ಇಲ್ಲವಾದರೆ ಇಲ್ಲ" ಎನ್ನುವ ಕೊನೆಯ ಹಂತವನ್ನಷ್ಟೆ ಏರಲಿಲ್ಲ. ಇದಕ್ಕೆಲ್ಲ ಬೇಕಾದ ವ್ಯವಸ್ಥೆ, ಮಂತ್ರಾಲೋಚನೆ, ಮನೋಹರನಿಂದಲೇ ಬಂದುವು.

ಒಂದು ದಿನ, ಚಾಂದನಿ ಹೊಸತಾಗಿ ಬಾಡಿಗೆಗೆ ಕೊಂಡ ಬಂಗ್ಲೆಯಲ್ಲಿ ಮನೋಹರ ಅವಳ ಮುಂದಕ್ಕೆ ಕುಳಿತು ತನ್ನ ಸಾಮರ್ಥ್ಯವನ್ನು ಕೊಚ್ಚಿಕೊಳ್ಳುತಿದ್ದ. "ಯಾವುದಕ್ಕೂ ಅವರ ಸಂಯೋಗಿತ ಚಿತ್ರದ ಶೂಟಿಂಗ್ ತೊಡಗಲಿ! ಆ ದಿನ ನೀನು ಚಿತ್ರ ನಾಯಕಿಯಾಗುತ್ತೀ; ಸುಲ್ತಾನಾ ಎಂದೂ ಆಗುವಂತಿಲ್ಲ" ಎಂದು ಭವಿಷ್ಯ ನುಡಿದ.

ಚಾಂದನಿಯನ್ನು 'ನೀನು' ಎಂದು ಸಲಿಗೆಯಿಂದ ಕರೆಯುವ ಭಾಗ್ಯ ಮನೋಹರನದ್ದಾಗಿದೆ. ಆತ ತನ್ನ ನಿಸ್ಸೀಮ ಭಕ್ತ ಎಂದು ಅವಳೂ ಬಲ್ಲಳು. ಅವಳಿಗೆ ಬರುವ ಪತ್ರ ವ್ಯವಹಾರಗಳಿಗೆಲ್ಲ ಉತ್ತರಗಳನ್ನು ಚಮತ್ಕಾರಿಕವಾಗಿ ಬರೆದುಕೊಡುವವನು ಅವನೇ. ಅವಳೀಗ ಹಿಮಾಲಯ ಪ್ರೊಡಕ್ಷನಿನವರ 'ಸಂಯೋಗೀತಾ' ಚಿತ್ರದಲ್ಲಿ, ಕರಾರಿನ ಮೇಲೆ ಕೆಲಸ ಮಾಡುತ್ತಿದ್ದಾಳೆ. ಮೂರು ತಿಂಗಳ ಕೆಲಸಕ್ಕೆ ಆರು ಸಾವಿರ ರೂಪಾಯಿಗಳ ಗುತ್ತಿಗೆ; ಕಡಿಮೆ ಹಣವಲ್ಲ. ಇನ್ನೂ ಒಂದೆರಡು ಅಂಥ ಚಿತ್ರಗಳ ಕರಾರಿದೆ. ಹೆಚ್ಚು ಕಡಿಮೆ-ಒಂದೇ ಊರಿನಲ್ಲಿ ಅವು ತೆಗೆಯುವ ಚಿತ್ರಗಳಾದುದರಿಂದ, ಒಂದೇ ಸಮಯದಲ್ಲಿ ದೊರಕುವ ಸಂಪಾದನೆಗಳಾಗಿದ್ದುವು-ಅವೆಲ್ಲ. ಈಗೊಂದು ಹೊಸ ಮೋಟರ್ ಕಾರನ್ನೂ ಕೊಂಡಿದ್ದಾಳೆ. "ನೀನು ನನ್ನ ಕಾರ್ಯದರ್ಶಿ

ಯಾಗು” ಎಂದು ಮನೋಹರನನ್ನು ಕೇಳುತ್ತಿದ್ದಾಳೆ. ಆದರೆ ಮನೋಹರನಿಗೆ ಚಿತ್ರಗಳಲ್ಲಿ ದೊಡ್ಡ ಪಾತ್ರ ದೊರಕಿಸಿಕೊಡುವ ಶಕ್ತಿಮಾತ್ರ ಅವಳಿಗಿಲ್ಲ. ಬದಲು ಆತನೇ ಅವಳಿಗೆ ಮುಖ್ಯ ಪಾತ್ರ ಕೊಡಿಸುವುದಕ್ಕೆ ಹೊರಟಿದ್ದಾನೆ.

“ಸಂಯೋಗೀತಾ ಸುಲ್ತಾನಾ ಆಗುವುದೆಂದು ಎಲ್ಲರೂ ಒಪ್ಪಿ ಕರಾರಾಗಿದೆ. ಚಿಮಣ್‌ಲಾಲರು ನನ್ನ ಹೆಸರನ್ನು ಸೂಚಿಸಿದರಂತೆ. ಆದರೆ ಡಿರೆಕ್ಟರ್ ನಂದ, ಕೆಮರಾಮೇನ್, ಚಿತ್ರನಿರ್ಮಿಸುವವರು ಎಲ್ಲರೂ ಒಂದು ಕಡೆ. ಚಿಮಣ್‌ಲಾಲ್ ಕೊಡುವ ಇಪ್ಪತ್ತುಸಾವಿರ ರೂಪಾಯಿಗಳ ಸಾಲಕ್ಕೆ ಅವರು ನನ್ನನ್ನು ಆ ಸ್ಥಾನದಲ್ಲಿ ಹಾಕುತ್ತಾರೆಯೇ!” ಎಂದಳು ಅವಳು.

ಮನೋಹರ “ಡೈರೆಕ್ಟರು, ಪ್ರೊಪ್ರಾಯಿಟರು ಎಲ್ಲರನ್ನೂ ಸೇರಿ ಬಗ್ಗಿಸಬಹುದು. ನಮ್ಮಲ್ಲಿ ಒಬ್ಬರಿಗೂ ಸುಲ್ತಾನಳನ್ನು ನೋಡಿದರೆ ಆಗುವುದಿಲ್ಲ. ಅವಳ ಜಂಬ ಸಹಿಸುವುದಿಲ್ಲ. ನಿತ್ಯವೂ ಅವಳ ಉದ್ಧಟ ಮಾತುಗಳನ್ನು ಕೇಳಿ ಸಾಕಾದವರಿದ್ದಾರೆ. ಯಾವುದಕ್ಕೂ ಸೆಟ್ ತಯಾರಾಗಲಿ, ಶೂಟಿಂಗ್ ಶುರುವಾಗಲಿ; ಅವಳೊಡನೆ ಜಗಳವಾಡಿ ‘ನಾವೆಲ್ಲ ಅವಳನ್ನು ತೆಗೆದು ಹಾಕುವ ತನಕ ಮರ್ಯಾದೆ ಕಳೆದುಕೊಂಡು ಇಲ್ಲಿ ಕೆಲಸಮಾಡಲಾರೆವು’ ಎಂದು ಸಂಪು ಹೂಡುತ್ತೇವೆ. ಅಷ್ಟು ಒಗ್ಗಟ್ಟು ನಮ್ಮಲ್ಲಿದೆ. ಕೆಮರಾಮೇನ್, ಸೌಂಡ್ ಎಂಜಿನಿಯರ್ ಇವರಿಬ್ಬರೂ ನಮ್ಮ ಗುಂಪಿಗೆ ಸೇರಿದವರಲ್ಲ. ಅವರೂ ಸೇರುವಂಥ ದಿನಗಳು ದೂರವಿಲ್ಲ. ಯಾವುದಕ್ಕೂ ನೀನು ನೋಡುತ್ತಾ ಇರು” ಎಂದ.

ಆ ಆಸೆಯನ್ನೇನೋ ಚಾಂದನಿ ತಬ್ಬಿಹಿಡಿದರೂ ಅದು ಸಂಭವನೀಯ; ತನಗೆ ಅದರಿಂದಾಗಿ ಸಂಯೋಗಿತೆಯ ಭೂಮಿಕೆ ದೊರೆತೀತು--ಎನ್ನುವ ಸಂಪೂರ್ಣ ಧೈರ್ಯ ಅವಳಿಗಿಲ್ಲ. ಹಾಗೆ ಆಗುವಂಥ ಘಟನೆ ಒಂದು ದಿನ ನೆರವೇರಿತು. ಊರ ಹೊರಗೆ, ದಪ್ಪನಾದ ತಾರೆ ಸುಲ್ತಾನಾ, ಅಶ್ವಾರೋಹಣದ ಅಭ್ಯಾಸ ನಡೆಸುತ್ತಿದ್ದಳು. ಲಾಲಚಂದ್ ಎಂಬವ ‘ಪ್ರಥ್ವೀರಾಜ’. ಅವನಿಗೆ ಬೇಕಾದಂತೆ ಒಮ್ಮೆಗೇ ಜನಸಂದಣಿಯಲ್ಲಿ ನುಗ್ಗಿ, ಭಾರವಾದ ಸುಲ್ತಾನಳನ್ನು ಕಂಕುಳಲ್ಲಿ ತುರುಕಿಸಿಕೊಂಡು, ಕುದುರೆ ಏರುವ ತಾಕತ್ತು ಬೇಕು. ಅದು ಈ ಲಾಲನಲ್ಲಿ ಇರಲಿಲ್ಲ. ಕುಳಿತು, ನಿಂತು, ಕಣ್ಣು ಮಿಟುಕಿಸಿ, ಉಢಾಳ ವಿಟನಂತೆ ನಟಿಸಿ, ಬೆಡಗು ಮಾಡಬಲ್ಲ ನಟ ಅವನು. ತುಂಡು ನಟರನ್ನು ಕೂಡಿಕೊಂಡು ಅವರ ನಡುವಣದಿಂದ, ನಾಳಿನ ‘ಸಂ

ಯೋಗಿತೆ'ಯನ್ನು ಅಪಹರಿಸಿ, ಕಂಕುಳಲ್ಲಿ ಚಚ್ಚಿಕೊಂಡು ಕುದುರೆಯ ಮೇಲೆ ಹಾರಿ ಕುಳಿತು, ಬೆನ್ನು ತೋರಿಸಿ ಧಾವಿಸುವಂಥ ಪ್ರಥ್ವೀರಾಜನ ಭೂಮಿಕೆಯನ್ನು ಆ ಲಾಲಚಂದ್ ಮಾಡಬೇಕಾಗಿದ್ದುದನ್ನು, ಮರಾಟಿಗ 'ಪೈಲ್ವಾನ್ ಬಾಬು' ಎಂಬವ ಮಾಡಬೇಕಾಗಿತ್ತು. ಊರ ಹೊರಗೆ ಆ ದೃಶ್ಯದ ತರಬೇತಿ ನಡೆಯುತಿತ್ತು. ಆತ ಧಾಂಡಿಗ. ಸುಲ್ತಾನಳನ್ನು ಚಚ್ಚಿಕೊಂಡು ಆತ ಕುದುರೆಯನ್ನು ಜಿಗಿದೇರಿದಾಗ, ಆ ಕುದುರೆ ಮೊದಲೇನೆ ಜಿಗಿಯಿತು. ಸುಲ್ತಾನಾ ಅವನ ಕೈ ತಪ್ಪಿಬಿದ್ದಳು. ಬಾಬು ತುಸು ದೂರಕ್ಕೆ ಹೋಗಿ ಕೈಯ್ಯೂರಿ, ಮೈಉರುಳಿ ಬಿದ್ದು, ಎದ್ದು, ನಿಂತ. ಹಾಹಾಕಾರವಾಯಿತು. ಆಕೆಯನ್ನು ಹೊತ್ತು ಆಸ್ಪತ್ರೆಗೆ ಹಾಗೆ ಸಾಗಿಸಿದರು. ಹಾಗೆ ಸಾಗಿಸಿ ತಿಂಗಳೊಂದಾಯಿತು. ಆಕೆಯ ಕಾಲು ಮುರಿಯಿತು. ಅದನ್ನು ಜೋಡಿಸಿ, ಅಂಟಿಸಿದ ಪ್ಲೇಸ್ಟರ್ ಕಳಚಿಲ್ಲ. ತಿರುಗಿ ಅವಳು ಅಭಿನಯಿಸುವ ಧೈರ್ಯವಿರಲಿಲ್ಲ. ಸ್ಟುಡಿಯೋದವರೊಡನೆ, ಉಳಿದ ಕೆಲವು ನಟರೊಡನೆ, ತಿಂಗಳ ಕಾಲ ಕರಾರು ಮುರಿದುದರಿಂದ ಆದ ನಷ್ಟ ಸಾಕಿತ್ತು. ಚಿಮಣ್‌ಲಾಲ್ ಈ ನಡುವೆ ಕೈಹಾಕಿದ. 'ನೀವೆಲ್ಲರೂ ಸೇರಿ ಸುಲ್ತಾನಳ ನೆಪ ಹೇಳಿ, ಪೂರ್ಣ ಹಣ ಮುಳುಗಿಸುವ ಯೋಚನೆಯಲ್ಲಿದ್ದೀರಿ' ಎಂದು ಆತುರ ತೋರತೊಡಗಿದ. ಸುಲ್ತಾನಳು ತಿರುಗಿ ನಟಿಸುವ ಆಸೆಯನ್ನು ಉಳಿದವರು ಬಿಡಬೇಕಾಯಿತು. ಪೈಲ್ವಾನ್ ಬಾಬುವಿನ ಅಜಾಗ್ರತೆಗಾಗಿ ಅವನನ್ನು ತಳ್ಳಿಹಾಕಬೇಕೆಂದು ಒಬ್ಬ ಮಾಲಕ ಎಣಿಸಿದರೆ, "ಕುದುರೆಯ ತಪ್ಪಿಗೆ ಅವನನ್ನು ತಳ್ಳಿಹಾಕಿದರೆ, ನಾವು ಯಾರೂ ಕೆಲಸಕ್ಕಿಲ್ಲ" ಎಂಬ ಬೆದರಿಕೆ ಕೊಟ್ಟರು ಸಣ್ಣ ಕೆಲಸಗಾರರು. ಚಿತ್ರ ಮುಂದುವರಿಯುವ ಧೈರ್ಯವೇ ಹೋಯಿತು. ಕಂಗಾಲ ಸ್ಥಿತಿ ಬಂದೊದಗಿತು.

ಈ ಸಮಯದಲ್ಲಿ ಚಿಮಣ್‌ಲಾಲ್ "ನೀವು ಚಾಂದನಿಯನ್ನು ತೆಗೆದುಕೊಂಡು, ಈ ಚಿತ್ರವನ್ನು ಎರಡು ತಿಂಗಳಲ್ಲಿ ಮುಗಿಸಿಬಿಡಿ; ಇನ್ನೂ ಹತ್ತು ಸಾವಿರ ಕಡಿಮೆ ಬಿದ್ದರೆ ನಾನು ಕೊಡುತ್ತೇನೆ. ಇಲ್ಲವೆ ನನ್ನ ಇಪ್ಪತ್ತು ಸಾವಿರ ಹಿಂದಕ್ಕೆ ಕೊಡಿ. ನಮ್ಮ ನಿಮ್ಮ ಸಂಬಂಧ ಕಡಿದು, ಎರಡು ತಿಂಗಳೊಳಗೆ ನಾನೇ ಹೊಸ ಸಂಯೋಗಿತಾ ಚಿತ್ರ ಹೊರಡಿಸುತ್ತೇನೆ" ಎಂದ. ಉಳಿದ ಪಾಲುಗಾರರು ಅದರಿಂದ ಜಗ್ಗಿದರು. ಚಿಮಣ್‌ಲಾಲನ ಅಪೇಕ್ಷೆಯಂತೆ ಅವಳನ್ನೇ ನಾಯಿಕೆಯನ್ನಾಗಿ ಮಾಡಿ ಚಿತ್ರ ತಯಾರಾಯಿತು. ಆ ಚಿತ್ರದಲ್ಲಿ ಸುಲ್ತಾನ

ಳಿಗೆ ಅದೇ ಪಾತ್ರ ಕೊಟ್ಟಿದ್ದರೆ ಎಷ್ಟು ಚೆನ್ನಾಗಬಹುದಿತ್ತೋ, ಅದಕ್ಕಿಂತ ಕಡಿಮೆ ಚೆನ್ನಾಗಿರಲಿಲ್ಲ. ಈ ಯಶಸ್ಸಿನ ಪಾಲುಗಾರ ಮನೋಹರ, ತಾನೇ ಎಂದು ತಿಳಿದ. ಇಂಥದೇ ಆಸೆ ಅವನ ಮನಸ್ಸಿನಲ್ಲಿತ್ತು. ಹೇಗೇನಾದರೂ ಮಾಡಬೇಕು—ಎಂದು ಬಾಯಿತೀಟೆ ತೀರಿಸಿಕೊಂಡವನು ಅವನು. ಅಲ್ಲದೆ ತುಂಡು ನಟರ ಯೂನಿಯನ್ನಿನ ಕಾರ್ಯದರ್ಶಿಯಾದ ಅವನಿಗೂ ಪೈಲ್ವಾನ್ ಬಾಬುವಿಗೂ ಸ್ನೇಹವಿತ್ತು. "ಸರಿಯಾದ ಕೆಲಸಮಾಡಿದೆ!" ಎಂದು ನಾಲ್ಕು ದಿನಗಳ ಮೇಲೆ ಆತ ಬಾಬುವಿನ ಬೆನ್ನು ಚಪ್ಪರಿಸಿದ್ದ. ಪೈಲ್ವಾನ್ ಬಾಬು ಮಾತ್ರ, ಗುಟ್ಟಿನಲ್ಲಿ ಸಾವಿರ ರೂಪಾಯಿಗಳ ಬಹುಮಾನವನ್ನು ಚಾಂದನಿಯಿಂದಲೇ ಪಡೆದಿದ್ದ.

ಸಂಯೋಗಿತಾ—ಹಿಮಾಲಯ ಪ್ರೊಡಕ್ಷನ್ಸಿನವರ ಪ್ರಥಮ ಯಶಸ್ವೀ ಚಿತ್ರ. ಉದಯಿಸುವ ತಾರೆ ಚಾಂದನಿಯನ್ನು ಮುಖ್ಯ ನಾಯಿಕೆಯನ್ನಾಗಿ ಮಾಡಿಕೊಂಡು, ಅದು ತೆರೆಯ ಮೇಲೆ ಬರುವ ದಿನ ವಿಶೇಷ ಸಮಾರಂಭ ಏರ್ಪಟ್ಟಿತ್ತು. ಹೈಕೋರ್ಟಿನ ಒಬ್ಬ ನ್ಯಾಯಾಧೀಶರೇ ಅಧ್ಯಕ್ಷರಾಗಿ, ಅದರ ಪ್ರಥಮ ದೇಖಾವೆಯನ್ನು ಹರಸಿ ಹೋದರು. ವಿಶೇಷವಾದ ಜಾಹೀರಾತು, ಪ್ರಚಾರ ಕಾರ್ಯ ಮೊದಲಾದುವುಗಳಿಂದ, ಹಳೆಯ ಚಿತ್ರಗಳಿಗಿಂತ ಹೊಸ ಚಿತ್ರಗಳು ಮತ್ತಷ್ಟು ಉಜ್ವಲವಾಗಬೇಕಾದದ್ದು ಸಹಜವಷ್ಟೆ. ಹಾಗಾಗಿ ಚಾಂದನಿ 'ಸಂಯೋಗಿತೆ' ಎಂಬ ಉಜ್ವಲ ಚಿತ್ರದ 'ಉಜ್ವಲ' ತಾರೆಯಾದಳು. ಇತರ ಆರೆಂಟು ನಟರ ಜತೆಯಲ್ಲಿ ಮನೋಹರ ಪಾತ್ರ ವಹಿಸಿದ್ದರೂ, ಅವನ ಹೆಸರು ಪ್ರಕಾಶಕ್ಕೆ ಬರಲಿಲ್ಲ. ಗಂಡು ತಾರೆಯರ ಭವಿಷ್ಯ ಹೆಣ್ಣು ತಾರೆಯರಿಗಿಂತ ಮತ್ತಷ್ಟು ಅನಿರ್ದಿಷ್ಟ—ಎಂದು ಅವನಿಗನಿಸದಿರಲಿಲ್ಲ. ಆದರೆ ಚಾಂದನಿಗೆ ಬೇಕಾದವನಾಗಿ ಇರುವಷ್ಟು ದಿನ, ತನ್ನ ಆಸೆ ಅಸಾಧ್ಯವಲ್ಲ. ನಾಳೆ ತನ್ನ ಜತೆಯಲ್ಲಿ ನಟಿಸುವವರಾರೆಂದು ಆರಿಸುವ ಹಕ್ಕು ಚಾಂದನಿಗೆ ಬಂದೀತು ಎಂದು ಎಣಿಸಿದ್ದ. ಅಂಥ ವಚನವನ್ನು ಅವಳೂ ಅವನಿಗೆ ಕೊಟ್ಟಿದ್ದಳು.

ಈ ಪ್ರಸಂಗದಲ್ಲಿ ಚಿಮಣ್‌ಲಾಲನಿಗೆ ತುಂಬ ಸಂತೋಷವಾಯಿತು. ತಾನೊಬ್ಬ ಚಿತ್ರ ನಿರ್ಮಾಪಕ ಆಗುತ್ತಿದ್ದೇನೆ; ಬರಿಯ ಬಂಡವಳಗಾರನಲ್ಲ ಎಂಬ ಹೆಮ್ಮೆಯುಂಟಾಯಿತು. ಆತಗೆ ದಿನಕ್ಕೊಂದು ಬಾರಿ ಚಾಂದನಿಯ ಮುಖ ನೋಡುವ ಭಾಗ್ಯ ಪ್ರಾಪಿಸಿತು. ವಿಶೇಷ ಕಷ್ಟವಿಲ್ಲದೆ ಅವಳ

ಸ್ನೇಹ ದೊರಕಿಸಿಕೊಂಡ ಆತ, ಅವಳೊಡನೆ ಮುಂದಿನ ಮೂರು ಚಿತ್ರಗಳಿಗೆ ಹತ್ತು, ಹತ್ತು ಸಾವಿರ ರೂಪಾಯಿಗಳಂತೆ ಕರಾರುಮಾಡಿದ. ಆ ಕರಾರು ಭದ್ರವಾದ ಮೇಲೆ, ಇನ್ನೊಂದು ಕೆಲಸವನ್ನು ಮಾಡಿದ. ತನ್ನವಳಾಗುತ್ತಿರುವ ಅಥವಾ ಆದ ಚಾಂದನಿಗೂ, ತಾನು ಆಶ್ರಯಕೊಟ್ಟ ಮನೋಹರನಿಗೂ ಸ್ನೇಹ, ಸಂಬಂಧವಿದೆ ಎಂಬ ಅನುಮಾನ ಅವನಿಗೆ ನಾಟಿತು. ತುಂಡು ನಟರ ಗುಂಪಿನಲ್ಲಿ ಅವನ ಕೈವಾಡವಿದೆ–ಎಂಬ ಸುದ್ದಿಯೂ ತಿಳಿದಿತ್ತು. ಆತ ಜಗಳದ ನೆಪ ಹುಡುಕಿ "ನಮ್ಮ ಆಫೀಸಿನಲ್ಲಿ ಜಾಗ ದಿನದಿನಕ್ಕೂ ಇಕ್ಕಟ್ಟು ಆಗುತ್ತಿದೆ; ಈ ಚಿತ್ರ ಬಂದ ಮೇಲಂತು ಜಾಹೀರಾತುಗಳನ್ನು ಇರಿಸುವುದಕ್ಕೂ ಜಾಗವಿಲ್ಲ. ನಿನಗೆ ಬೇರೆ ಮನೆಯನ್ನು ಗೊತ್ತುಮಾಡಿಕೊಳ್ಳಲು ಬರಲಾರದೇ?" ಎಂದು ವಿನಂತಿ ಮಾಡಿದ. ಆತ ಮುನಿಸು ತೋರದೆ 'ಆಗಲಿ, ಅದಕ್ಕೇನು' ಎಂದು ಹೊರಟವನು, ಹೋಗಿ ನೆಲಸಿದ್ದೇ ಚಾಂದನಿಯ ಮನೆಯಲ್ಲಿ. ಅಲ್ಲಿಂದ 'ಚಾಂದನಿಗೂ ತನಗೂ ಆದ ಕರಾರಿನ ಗತಿಯೇನು' ಎಂದು ಚಿಮಣ್‌ಲಾಲ್ ಚಿಂತಿಸಬೇಕಾಯಿತು.

ಈಗ ಪ್ರಥಮ ವರ್ಗದ ತಾರೆಯಾದಳು ಚಾಂದನಿ. ತನ್ನ ಬೆಲೆ, ಶರ್ತಗಳನ್ನು ಹೇಳುವ ಯೋಗ್ಯತೆಯನ್ನು ಪಡೆದಳು. ದಿನ ಹೋಗುತ್ತ ಅವಳು ಅತಿಭೋಜನ, ಆಲಸ್ಯಗಳಿಂದ ಕೊಬ್ಬು ತುಂಬಿದವಳಾಗುತ್ತಿದ್ದರೂ, ಅವಳಿಗೆ ತನ್ನ ಚೆಲುವಿನ ಹೆಮ್ಮೆಯೇನೋ ಸಾಕಷ್ಟಿತ್ತು. ಚಿತ್ರಗಳಲ್ಲಿ ಬಣ್ಣ ಸವರಿಕೊಳ್ಳುತ್ತಿದ್ದಂತೆಯೇ, ಉಳಿದ ವೇಳೆಯೂ ಮುಖಕ್ಕೆ ಸ್ವಲ್ಪ ಪಾಟಲವರ್ಣದ ಲೇಪವನ್ನು ಹಚ್ಚಿಕೊಂಡು, ಕೆಂದುಟಿ ಕಿರಿಯ ಹುಬ್ಬುಗಳನ್ನು ತೀಡಿಕೊಂಡು, ಮೆರೆಯತೊಡಗಿದಳು. ಅವಳಿಗೆ ಬಡತಿಯಾದಂತೆ ಅವಳ ಆಪ್ತ ಕಾರ್ಯದರ್ಶಿ ಮನೋಹರನಿಗೂ ಬಡತಿಯಾದಂತೆಯೇ. ಅವನ ಸ್ವಂತಕ್ಕೆ ಸಂಬಳ ಕಡಮೆ ಇದ್ದರೂ, ಅವಳ ಅನುಗ್ರಹವಿದೆ. ತನಗಿಂತ ಕಡಮೆ ವಯಸ್ಸಿನವನಾದ ಮನೋಹರ ತನಗೆ ಯೋಗ್ಯ ಕಾರ್ಯದರ್ಶಿ, ನಿಸ್ಸೀಮ ಭಕ್ತ, ಅವನನ್ನು ನಂಬಿ ಏನೂ ಮಾಡಬಹುದು-ಎಂಬ ವಿಶ್ವಾಸ ಅವಳಿಗಿತ್ತು. ತನ್ನ ಮೋಹದ ಬಲೆಗೆ ಸಿಲುಕಿದವನಾದುದರಿಂದ ಅವನನ್ನು ನಂಬಿ ತಾನು ನನ್ನ ಕೀರ್ತಿ ಸಾಮ್ರಾಜ್ಯ ಕಟ್ಟುವುದಕ್ಕಡ್ಡಿಯಿಲ್ಲ ಎಂಬ ನಂಬಿಕೆ ಅವಳಿಗೆ. ಈ ಎಲ್ಲ ಸ್ಥಿತಿಗಳಿಂದ-ಚಿಮಣ್‌ಲಾಲನಿಗೆ, ತನ್ನ ಕರಾರು ಏನಾಗುತ್ತದೋ, ಏನು ವಿಘ್ನ ಬರುತ್ತದೋ; ಮನೋಹರನ ಸಂಬಂಧ ಕಡಿದರೆ ಮುಕ್ತಿ

ಕಷ್ಟವಲ್ಲವೆ-ಎಂದೂ ಕಂಡಿತು. ಆ ಕರಾರನ್ನು ಮುಗಿಸುವ ಆತುರ ಅವನಿಗೆ. ಆತ ಮೊದಲನೆಯ ಚಿತ್ರದ ಪಾಯ ಹಾಕಿದ್ದರೂ, ಒಂದು ಚಿತ್ರಕ್ಕೆ ತಾನೇ ಸಿನೇರಿಯೋ ಬರೆಯುತ್ತೇನೆಂದು ಮನೋಹರ ಮುಂದಾದ. ಅದರಲ್ಲೂ ಛಳಕ ತೋರಿ; ಚಾಂದನಿಯನ್ನು ಸುತ್ತುವರಿಯುವ ಒಂದು ಕಥೆಯನ್ನು ಹಾಗೂ ಹೀಗೂ ಪೂರೈಸಿದ. ಅವಳ ಕಿವಿಯನ್ನು ಮೆಚ್ಚಿಸಿದ. ಮನೋಹರ ಕೊಟ್ಟ ಕಥೆಯೇ ಯಾಕಾಗಬಾರದೆಂದು ಅವಳಿಂದಲೇ ಚಿಮನ್‌ಲಾಲನಿಗೆ ಕೇಳಿಸಿದ. ಇಂಥ ತಂತ್ರೋಪತಂತ್ರಗಳಿಂದ ಅವನು ಚಾಂದನಿಗೆ ನೆರವಾಗಬೇಕಾಗಿದ್ದ ಗಳಿಗೆಯಲ್ಲಿಯೆ 'ಊರಿಗೆ ಬಾ' ಎಂದು, ಅವನ ತಂದೆ ಕರೆದರು. ಇಲ್ಲಿ ಚಾಂದನಿಯನ್ನು ಚಿಮನ್‌ಲಾಲನಂತಹ ಚತುರ ಮಾರ್ವಾಡಿಯ ಕೈಯಲ್ಲಿ ಬಿಟ್ಟು ಹೋಗುವುದು ಅನ್ಯಾಯ ಎಂದು ಮನೋಹರನಿಗೆ ತೋರಿತು.

ಅವನ ತಮ್ಮ ಗೋಪಾಲ, ತಾಯಿ ತೀರಿಹೋದ ವಿಚಾರವಾಗಿ ಪತ್ರ ಬರೆದ; ಹೋದ ದಿನವನ್ನು ತಿಳಿಸಿದ. ಅದನ್ನು ಕಂಡಾಗ ಆತನಿಗೆ 'ನಾನು ಹೊರಟಿದ್ದರೂ ಪ್ರಯೋಜನವಾಗುತ್ತಿರಲಿಲ್ಲ. ನಾನು ಊರು ಸೇರುವ ಮುಂಚೆಯೇ ಅವಳು ಮಾಯವಾಗಿದ್ದಳು' ಎಂದಂದುಕೊಂಡ. ಕ್ರಮೇಣ ಮನೋಹರ ಸುಲಭವಾಗಿ ಎಲ್ಲವನ್ನೂ ಮರೆತುಬಿಟ್ಟ.

# ಎಂಟನೆಯ ಅಧ್ಯಾಯ.

ಮನೋಹರನಿಗೆ ಅಭಿಲಾಷೆಗಳು ಬಹಳ; ಹಾಗೆ ಕನಸುಗಳೂ ಬಹಳ. ಅವನ ಮನಸ್ಸಿನ ಓಡಾಟಕ್ಕೆ ಸಮನಾಗಿ ಅದೃಷ್ಟವೋ ಇನ್ನೇನೋ ಬೆಂಬಲ ಕೊಡದಿದ್ದುದೊಂದೇ ಅವುಗಳ ಸಿದ್ಧಿಗೆ ಬಂದ ತೊಡಕು. ಚಿಮನ್‌ಲಾಲ್ ಕರಾರು ಮಾಡಿಕೊಂಡ ಮೊದಲನೆಯ ಚಿತ್ರ ಹೇಗೂ ಮುಗಿಯಿತು. ಆ ಆರು ತಿಂಗಳಿನ ಅವಧಿಯಲ್ಲಿ ಮನೋಹರ ಚಾಂದನಿಯ ಕಿವಿಯಲ್ಲಿ ಹೊಗಳಿಕೆಯನ್ನೆಲ್ಲ ವೆಚ್ಚಮಾಡಿ "ನೀನು ಸ್ವತಂತ್ರ ಚಿತ್ರಗಳನ್ನು ಉತ್ಪನ್ನ ಮಾಡಬಲ್ಲ ಯೋಗ್ಯತೆಯಿರುವವಳು. ಏತಕ್ಕೆ ಆ ಮಾರ್ವಾಡಿಯ ಕೈಯಲ್ಲಿ ಸಿಕ್ಕಿದ್ದೀಯ? ಅವನಿಗೆ ಚಿತ್ರವೊಂದರ ಒಂದು ಲಕ್ಷ ರೂಪಾಯಿಗಳ ಮುನಾಫೆ ಸಿಗುತ್ತಿರುವಾಗ, ನೀನು ಬರಿಯ ಹತ್ತು ಸಾವಿರ ಪಡೆದು ಕುಳಿತರೆ ಏನಾದ ಹಾಗಾಯಿತು? ಮೂರು ಚಿತ್ರಗಳಿಗೆ ನೀನು ಒಪ್ಪಿದ್ದಂತು ಸರಿಯೆ. ಅವನು ನನ್ನ ಕಥೆಯನ್ನು ಸ್ವೀಕರಿಸಲಿಲ್ಲ ಎಂಬ ಬೇಸರ ನನಗಿಲ್ಲ. ನಾನು ಬರೆದ ಪ್ಲಾಟುಗಳಿಗೆ ನೂರಾರು ಗಿರಾಕಿಗಳಿದ್ದಾರೆ. ನೀನಾದರೂ ನಿನ್ನ ಯೋಗ್ಯತೆಯನ್ನು ತಿಳಿದುಕೊಳ್ಳಬೇಡವೆ? ಸಂಯೋಗಿತೆ ಚಿತ್ರದಿಂದ ನಿನಗೆ ಬಂದುದು ಮೂರುಸಾವಿರ ರೂಪಾಯಿಗಳು ಮಾತ್ರ. ಈ ಆರು ತಿಂಗಳಿಂದ ಲಾಹೋರಿನಲ್ಲಿ ಅದು ನಡೆಯುತ್ತ ಬಂದಿದೆ. ಇಡೀ ಭರತ ಖಂಡದ ಹಕ್ಕು ಅವನಿಗಿದೆ. ಮುತ್ತಿನ ಮಳೆ ಅವನಿಗೆ. ಬೆವರು ಸುರಿಸಿದವಳು ನೀನು" ಎಂದು ಮೊದಲಾಗಿ ಉಪದೇಶ ಮಾಡಿದ. 'ತನ್ನದು ಬೆಳೆಯುತ್ತಿರುವ ಕೀರ್ತಿ. ಮನೋಹರ ಹೇಳುತ್ತಿರುವುದು ನಿಜವಾದ ಮಾತುಗಳು' ಎಂದು ಅವಳೂ ತಿಳಿದವಳೇ. ಆದರೆ ಅಂಥ ಕಿವಿಯ ಉಪದೇಶಕ್ಕೂ, ವ್ಯವಹಾರದಲ್ಲಿ ಹಣದ ಚೀಲಕ್ಕೂ, ವರ್ಚಸ್ಸಿಗೂ ಇರುವ ಅಂತರಗಳನ್ನು ಅವಳು ಬಲ್ಲಳು. ಮೆಲ್ಲಗೆ ತಾನು ಸ್ವತಂತ್ರಳಾಗಬೇಕು. ಉಪಾಯದಿಂದ ಕರಾರಿನ ವಾಯಿದೆಯನ್ನು ಮೀರಿಸಿ ಹಣ ಸಂಪಾದಿಸಬೇಕು; ತಾನೇ ಅದನ್ನು ಮುರಿದವಳಂತೆ ತೋರಿಸಿಕೊಳ್ಳಕೂಡದು' ಎಂಬುದು ಅವಳ ವಿಚಾರಸರಣಿಯಾಗಿತ್ತು.

ಪ್ರಾರಂಭದಲ್ಲಿ ಅವಳ ಮನಸ್ಸಿನ ಓಟ ಹೀಗಿತ್ತಾದರೂ, ಒಂದು ಚಿತ್ರ ಮುಗಿಯುವುದರೊಳಗೆ, ಚಿಮನ್‌ಲಾಲ್ ತನಗೆ ದುಡ್ಡು ತರುವ ಯಜಮಾನನೂ ಹೌದು, ತನ್ನ ಸೌಂದರ್ಯಕ್ಕೆ ಮರುಳಾದ ಭಕ್ತನೂ

ಹೌದು ಎಂಬ ಅರಿವು ಅವಳಿಗೂ ಆಯಿತು. ತನಗಾಗಿ ಬೇಕಷ್ಟು ವ್ಯಯಿಸುವ ಬುದ್ಧಿ ಅವನಲ್ಲಿ ಮೂಡಿರುವುದನ್ನು ಕಂಡಾಗ, ತಾನು ಅವನೊಡನೆ ಒಳಿತಾಗಿರುವುದೇ ಲೇಸು ಹೊರತು, ಬರಿ ಬಾಯಿಮಾತಿನ ಭಕ್ತನನ್ನು ನಂಬಿಕೊಂಡರೆ ಪ್ರಯೋಜನವಿಲ್ಲ—ಎಂದು ಯೋಚಿಸಿದಳು. ಅವಳ ಎರಡನೆಯ ಚಿತ್ರಕ್ಕೆ 'ಪ್ರೇಮ ಕಾಶ್ಮೀರ' ಎಂಬ ಬಿರುದು ಇಟ್ಟಿದ್ದರು. ಚಿಮನ್‌ಲಾಲ್ ಅವಳನ್ನು ಕಟ್ಟಿಕೊಂಡು ಮೂರು ತಿಂಗಳ ಕಾಲವನ್ನು ಕಾಶ್ಮೀರದಲ್ಲಿ ಕಳೆದು ಚಿತ್ರದ ಬಹಿರಂಗಗಳನ್ನೆಲ್ಲ ಮುಗಿಸಿ ಬಂದ. ಅಂತರಂಗದಲ್ಲಿಯೂ ಚಾಂದನಿಯನ್ನು ಒಲಿಸಿದ. ಚಾಂದನಿಯ ಕಿವಿಯನ್ನೂದುತ್ತಿರುವ ಮನೋಹರ ಅಂಥ ದೊಡ್ಡ ನಟನೂ ಅಲ್ಲ. ವರ್ಚಸ್ವೀ ವ್ಯಕ್ತಿಯೂ ಅಲ್ಲ. ಆದರೆ ತುಂಡು ನಟರ ಯೂನಿಯನ್ ಮುಖಂಡ ಆಗಿರುವಷ್ಟು ದಿನ, ಎಲ್ಲಿದ್ದರೂ ಅವನಿಂದ ಪಿಕಲಾಟ ಬರಬಹುದು. ಆದುದರಿಂದ ಅವನನ್ನು ಓಡಿಸುವುದೂ ಚಾಂದನಿಯ ಸ್ನೇಹ ಭದ್ರಪಡಿಸುವುದೂ ಅವನ ಮುಂದಿನ ಗುರಿಯಾಯಿತು. ವ್ಯವಹಾರ ಕುಶಲನಾದ ಆತ, ಉಪಾಯವಾಗಿ ತುಂಡು ನಟರ ಮನಸ್ಸಿನಲ್ಲಿಯೂ, ಸ್ಟುಡಿಯೋ ಕೆಲಸಗಾರರ ಮನಸ್ಸಿನಲ್ಲಿಯೂ 'ಆ ಉತ್ತರ ಹಿಂದುಸ್ಥಾನದ ನಟರ, ಕೆಲಸಗಾರರ ಸಾಮ್ರಾಜ್ಯದಲ್ಲಿ, ಒಬ್ಬ ದಕ್ಷಿಣಿ ಮೂರ್ಖನ ಕಾರ್ಯದರ್ಶಿತ್ವ ನಿಮಗೆ ಅಪಮಾನವಲ್ಲವೆ?' ಎಂಬ ವಿಚಾರಸರಣಿಯನ್ನು ಬಿತ್ತಿದ. ಅದರ ಪ್ರಧಾನ ಸ್ಥಾನದಲ್ಲಿರುವವರಿಗೆ ಲಂಚವನ್ನೂ ಕೊಟ್ಟ. ಅದರಿಂದಾಗಿ ಮುಂದಿನ ಯೂನಿಯನ್ ವಾರ್ಷಿಕ ಚುನಾವಣೆಯಲ್ಲಿ ಮನೋಹರನಿಗೆ ಯಾವ ಸ್ಥಾನವೂ ದೊರೆಯದೇ ಹೋಯಿತು. ಅವನು ಒಂದು ದಿನ ಸ್ಟುಡಿಯೋ ಕೆಲಸಕ್ಕೆ ಹೋಗದ ತಪ್ಪಿಗಾಗಿ, ಕೆಲಸದಿಂದಲೂ ಉಚ್ಚಾಟನೆಗೊಂಡ. ಇನ್ನುಳಿದುದು ಚಾಂದನಿಯ ಕಾರ್ಯದರ್ಶಿತ್ವ ಒಂದೇ. 'ಪ್ರೇಮ ಕಾಶ್ಮೀರ' ಚಿತ್ರ ಪ್ರದರ್ಶನದ ಮೊದಲ ದಿನ ಅವಳಿಗೆ ದೊರೆತ ಸನ್ಮಾನ, ಚಿಮನ್‌ಲಾಲ್ ಏರ್ಪಡಿಸಿದ ಪ್ರಚಾರ, ಅಭಿನಂದನ ಸಭೆ—ಎಲ್ಲ ಅವಳ ದಿಗ್ವಿಜಯಕ್ಕೆ ನೆರವಾದವು. ತನ್ನ ಅದೃಷ್ಟವನ್ನು ಮುಂದಿನ ಮೆಟ್ಟಿಲು ಏರುವ ತನಕ, ಹಣ ತೆರುವ ಧನಿಗೆ ಮೀಸಲಾಗಿಡುವುದು ಒಳಿತೆಂದು ಚಾಂದನಿ ಯೋಚಿಸಿದಳು. ಒಂದು ದಿನ ಅವಳೂ ಮನುವೂ ಕುಳಿತು ಮಾತನಾಡುತ್ತಿದ್ದಾಗ ಮೆಲ್ಲಗೆ "ಮನೋಹರ್, ನಿನ್ನ ಮೇಲೆ ನನಗೆ ಅಭಿಮಾನ ಕಡಿಮೆ ಎಂದು ತಿಳಿಯಬೇಡ. ಆದರೆ ನೀನು ನನ್ನ ಜತೆಯಲ್ಲಿರುವುದು ನಮ್ಮ

ಸೇಠಜಿಗೆ ಏನೇನೂ ಸಮಾಧಾನವಿಲ್ಲ. ಉಳಿದ ಕೆಲಸಗಾರರಿಗೂ ಅದರಿಂದ ಸಮಾಧಾನವಿಲ್ಲ. ಅಲ್ಲದೆ ನನಗೆ ಇನ್ನಷ್ಟು ನುರಿತ ಕಾರ್ಯದರ್ಶಿಯೂ ಬೇಕಾಗಿದೆ" ಎಂದಳು.

ಚಿಮಣ್‌ಲಾಲನ ಸೆರೆಯಲ್ಲಿ ಅವಳು ಸಿಕ್ಕಿದ್ದಾಳೆಂದು ಅವನಿಗೆ ಮನವರಿಕೆಯಾಗಿತ್ತು. ಅವಳು ತಾರೆಯಾದರೂ, ಅವಳ ಪ್ರಸಿದ್ಧಿಗಾಗಿ ತಾನಷ್ಟು ಶ್ರಮಿಸಿದ್ದರೂ, ಮೂಲತಃ ಅವಳು ಹೀನ ಕುಲದವಳು, ಆ ಬುದ್ಧಿ ಹೋಗಲಾರದು—ಎಂದು ತೋರಿತು. ಆದರೆ ಅಷ್ಟು ಶಾಂತವಾಗಿ, ಉಪಾಯವಾಗಿ 'ನೀನು ಹೊರಟುಹೋಗು'—ಎಂದು ಹೇಳಬಹುದು ಎಂದು ಅವನು ಎಣಿಸಿರಲಿಲ್ಲ. ಈಗ ಹೇಳಿದಳು. ಅದರಿಂದ ತಡೆಯಲಾರದ ಸಿಟ್ಟು ಬಂದಿತು. ಮನಸ್ವೀ ಬೈದ; ಹೊರಟುಹೋದ.

ಲಾಹೋರ್ ನಗರ ಬಿಡುವುದಕ್ಕೆ ಅವನಿಗೆ ಮನಸ್ಸಿರಲಿಲ್ಲ. ಗುರುತಿನ ಊರಾಗಿದೆ; ಸ್ಟುಡಿಯೋ ಗಾಳಿ ಬೀಸದಿದ್ದರೆ ಆತ ಬದುಕುವುದೇ ಕಷ್ಟ. ಏನಾದರೂ ಉಪಾಯಮಾಡಿ, ತಿರುಗ ತುಂಡು ನಟರನ್ನು ಒಂದುಗೂಡಿಸಿ ಅವರಲ್ಲಿ ಕೆಲಸಗಾರರಾದ ತಾವೇ ಧನಿಗಳಾಗಬೇಕೆಂಬ ಬಯಕೆ ಮೂಡಿಸುವ ಯೋಚನೆಮಾಡಿದ. ತಾರೆಯರಿಗೆ ಪ್ರಾಧಾನ್ಯವಿಲ್ಲದ ಚಿತ್ರಲೋಕ ನಿರ್ಮಿಸುತ್ತೇನೆಂದು ಹೊರಟ. ಆರು ತಿಂಗಳ ಕಾಲ ಅದಕ್ಕಾಗಿ ಒದ್ದಾಡಿದ. ಆದರೆ ತಾವು ಒಂದುಗೂಡಿ, ಯಜಮಾನರನ್ನು ಉಪಾಯವಾಗಿ ಹಿಂಡುತ್ತ ಹಣ ಸಂಪಾದಿಸುವ ದಾರಿಗಿಂತ, ಮನೋಹರನ ದಾರಿ ಒಳಿತೆಂದು ಉಳಿದವರಿಗೆ ತೋರಿಬರಲಿಲ್ಲ. ನಿಂತರೆ, ಕುಳಿತರೆ ಸಾವಿರ, ಲಕ್ಷ ರೂಪಾಯಿ ಬರಿದಾಗುವ ಆ ಉದ್ಯಮ ಕೇವಲ ಭಾಂಡವಳುಗಾರರ ಆಟ ಎಂದು ಅವರಿಗೂ ಗೊತ್ತಾಗುತಿತ್ತು. ಹತ್ತು ಭಾಂಡವಳಗಾರರು ಮುಳುಗಿದಲ್ಲಿ, ಒಬ್ಬ ಎದ್ದು ಈಜಾಡುವುದು, ಮೆರೆಯುವುದು ಕಾಣುತಿತ್ತು. ಹೀಗಾಗಿ ಮನೋಹರನ ಈ ಆಶೆಯೂ ಮಣ್ಣುಗೂಡಿತು.

ಕೈಗೂಡಲಾರದ ಈ ಕನಸಿನ ಲೋಕದಲ್ಲಿ—ತೇಲಾಡುತ್ತ ಸೋತಂತೆಯೆ ಅವನು. ಚಾಂದನಿ ಈಗ ಮೂರು ಚಿತ್ರಗಳ ಕರಾರು ಮುಗಿಸಿ ನಾಲ್ಕನೆಯ ಚಿತ್ರಕ್ಕೆ ಬಂದಿದ್ದಾಳೆ. ಈತ ಲಾಹೋರಿನಲ್ಲಿ ಕುಳಿತು ಸ್ವಂತ ಬದುಕು ಹಾಳುಮಾಡಿಕೊಂಡು, ಎಂಟುವರ್ಷಗಳನ್ನು ಕಳೆದಿದ್ದರೂ ಯಾವ ಆಸೆಯೂ ಫಲಿಸಲಿಲ್ಲ. ಇತ್ತ ಕಿಸೆಯೂ ತುಂಬಲಿಲ್ಲ. ಈಗಂತು ತೀರ ಬಡತನ. ನಟರಂತೆ

ಜೂಲುಗೂದಲಿನ ಕ್ರಾಪು, ಕಿರಿ ಮೀಸೆ, ಕಿವಿಯ ಕೆಳಗಿನ ಮುಖಕ್ಷೌರ ಇಷ್ಟೆ-ಅವನ ಸಂಪತ್ತುಗಳು. ತೊಡುವ ಬಟ್ಟೆಗಳೂ ಕೊಳೆಯಾಗಿದ್ದವು. ಕುಳಿತಿರುವುದಕ್ಕೆ ಸಮನಾದ ತಾವಿರಲಿಲ್ಲ. ತನ್ನಂತಿರುವ ಒಬ್ಬ ತುಂಡು ನಟನ ಕೋಣೆಯೊಂದರ ಹೊರ ಚಾವಡಿಯಲ್ಲಿ ಬಿಡಾರ. ಆದರೂ ಮನಸ್ಸು ಕೇಳಲೊಲ್ಲದು—ಕಾಗದಗಳನ್ನು ತುಂಬಿಸಿ ಕತೆಗಳನ್ನು ಬರೆಯುತ್ತಿದ್ದಾನೆ; ಸಿನಾರಿಯೋ ಗೀಚುತ್ತಿದ್ದಾನೆ. ತಾನೇ ಕೇಂದ್ರ ವ್ಯಕ್ತಿಯಾಗಬಲ್ಲ ಕಲ್ಪನಾ ಪುರಾಣಗಳನ್ನು ಸೃಷ್ಟಿಸುತಿದ್ದಾನೆ. ಅವನ್ನೆಲ್ಲ ಕೇಳುವುದಕ್ಕೆ, ತುಂಡು ನಟಿಯರಾಗಿ ದುಡಿಯುವ, ತಿಂಗಳಲ್ಲಿ ಇಪ್ಪತ್ತು ದಿನ ಕೆಲಸವಿಲ್ಲದಿರುವ, ಯೌವನ ತುಂಬಿದ, ಕಳೆದ, ಅನಾಮಧೇಯ ಹೆಂಗಳೆಯರಿದ್ದಾರೆ. ಹೊಸತಾಗಿ ಅಲ್ಲಿಗೆ ಬಂದ ತರುಣರಿದ್ದಾರೆ. ಅವರ ಕೈಗೆ ನಾಲ್ಕು ಕಾಸುಗಳು ಬರುವಷ್ಟು ದಿನ—ಇವನ ಗಂಟಲಿಗೆ ಒಂದಲ್ಲ ಒಂದು ಬಗೆಯ ಸಾರಾಯಿ ಬೀಳುತ್ತದೆ. ಅದರಿಂದಲೇ ತನ್ನ ನಿರಾಶೆಗಳನ್ನು ಆತ ಮುಳುಗಿಸಬೇಕು.

ಆದರೂ ಇನ್ನೂ ಕನಸು ಹೆಣೆಯುವವನವನು—"ಏನಿಲ್ಲ, ಕೈಯಲ್ಲಿ ಇಪ್ಪತ್ತು ಇಪ್ಪತ್ತೈದು ಸಿನಾರಿಯೋಗಳಿವೆ. ಒಮ್ಮೆ ನಾನು ದಕ್ಷಿಣ ದೇಶಕ್ಕೆ ಹೋಗುತ್ತೇನೆ. ಮುಂಬಯಿ, ಕಲ್ಕತ್ತ, ಇವೆಲ್ಲ ಭಂಡವಳಗಾರರು ಹಾವಳಿಯೆಬ್ಬಿಸಿದ ಊರುಗಳು. ಅವು ನನಗೆ ಬೇಕೇ ಇಲ್ಲ. ಹೊಸ ಊರುಗಳನ್ನು ನೋಡಬೇಕು. ಕನ್ನಡದಲ್ಲಿ ಚಲಚ್ಚಿತ್ರಗಳಾಗಿಯೇ ಇಲ್ಲ. ಆದ ಒಂದೆರಡು ಚಿತ್ರಗಳು ತೀರ ವ್ಯರ್ಥವೆಂದು ಓದಿ ತಿಳಿದಿದ್ದೇನೆ. ಕರ್ನಾಟಕಕ್ಕೆ ಹೋಗಿ ನನ್ನ ಯೋಗ್ಯತೆಯನ್ನು ಮೆರೆಯಿಸುವಷ್ಟು ಸುಲಭ ಇಲ್ಲಲ್ಲ. ದಕ್ಷಿಣದವರನ್ನು ನೋಡಿದರೇನೆ ಹೊಟ್ಟೆ ಸಂಕಟ ಪಡುವ ಈ ಊರಿನಲ್ಲಿರುವವರೆಲ್ಲರೂ ಕೃತಘ್ನರು. ನಾನೇ ನಮ್ಮ ಜಿಲ್ಲೆಯಲ್ಲೋ, ಅದರ ಸುತ್ತುಮುತ್ತಲೂ ಅಲೆದಾಡಿದರೆ ಅಗ್ಗಕ್ಕೆ ನಟನಟಿಯರನ್ನು ಕೂಡಿಸಿ ಹಾಕಬಹುದು. ಅವರನ್ನು ನನ್ನ ಕೈಯಲ್ಲಿರಿಸಿಕೊಂಡರೆ, ಹಣವನ್ನು ಯಾವ ಮಾರವಾಡಿಯೂ ಕೊಟ್ಟಾನು. ಚೆನ್ನಾಗಿ ಬುದ್ಧಿಯನ್ನುಪಯೋಗಿಸಿ ಮಾಡಿದ ಚಿತ್ರಕ್ಕೆ—ದುಡ್ಡು ಕಟ್ಟಿಟ್ಟದ್ದು. ಬಿತ್ತಿದ ಒಂದು ರೂಪಾಯಿಗೆ, ಕನಿಷ್ಟ ಹತ್ತರಂತೆ ಬೆಳೆಯುವ ಬೇರಾವ ಉದ್ಯೋಗವೂ ಇಲ್ಲ"-ಎಂದು ಯೋಚಿಸುತ್ತ, ಆತ ಲಾಹೋರಿಗೆ ಶರಣುಹೊಡೆದ. ಸ್ವದೇಶಕ್ಕೆ ಹೋಗುವುದಕ್ಕೆ ಬೇಕಾಗುವ ನೂರು ರುಪಾಯಿಗಳೂ ಅವನಲ್ಲಿರಲಿಲ್ಲ. ತನ್ನ ಗೆಳೆಯನೊಬ್ಬನ ಕೈಗಡಿಯಾರವನ್ನು 'ಒಮ್ಮೆ

ನೋಡೋಣ'ವೆಂದು ಕಟ್ಟಿಕೊಂಡು ತಿರುಗಾಟಕ್ಕೆ ಹೋಗಿ, ಅದನ್ನೇ ಮಾರಿ, ನಾಗಪುರ ಹೈದರಾಬಾದುಗಳ ಹಾದಿಯಾಗಿ ಬೆಂಗಳೂರನ್ನು ಸೇರಿಕೊಂಡ. ಪುಣ್ಯಕ್ಕೆ ಆತ ಕನ್ನಡ ಮರೆತಿರಲಿಲ್ಲ. ತಮ್ಮ ಜನಗಳಿರುವ ಊರದು—ಎಂಬ ಧೈರ್ಯದಿಂದ ಬಾಳಿದ ಅಂಥವನಿಗೆ ನಾಲ್ಕು ಜನ ಹೊಸ ಬೆಂಬಲಿಗರನ್ನೂ, ಪೂಜಾರಿಗಳನ್ನೂ ದೊರಕಿಸಿಕೊಳ್ಳುವುದು ಸುಲಭವಾಯಿತು. ಈಗ ಆತ 'ಡೈರೆಕ್ಟರ್, ಕಥೆಗಾರ, ನಟ ಇತ್ಯಾದಿ ಇತ್ಯಾದಿ;' 'ಚಾಂದನಿಯನ್ನು ಬೆಳಕಿಗೆ ತಂದ ವೀರನೇ ಅವನು.' 'ಪ್ರೇಮ ಕಾಶ್ಮೀರ ಕಥೆ ಅವನದೇ!' 'ಅದರ ಸಿನಾರಿಯೋವನ್ನು ಕದ್ದು ಚಿಮನ್‌ಲಾಲ್ ಬದಲಿಸಿ, ವಂಚಿಸಿದ!' 'ಅವನು ಬರೆದ ಕಥಾನಕಗಳೂ, ಆತ ನಟಿಸಿದ ಚಿತ್ರಗಳು ಯಾವುವೂ ದಕ್ಷಿಣಕ್ಕೆ ಬಾರದಿದ್ದುದು ವಿಷಾದಕರ' ಎಂಬಿಂಥವೇ ಸುದ್ದಿಗಳನ್ನು ತನ್ನ ಗೆಳೆಯರ ಕಿವಿಯಲ್ಲಿ ಪ್ರಚಾರ ಮಾಡಿದ. ಇತ್ತ ಅವನ ಕೈಯಲ್ಲಿರುವ ಅನೇಕ ಫೋಟೋಗಳಲ್ಲಿ ಅವನ ಅಭಿನಯ ಕಾಣಬಹುದಾಗಿದೆ. ಚಿತ್ರತಾರೆ ಚಾಂದನಿಯೊಡನೆ ಆತ ತೆಗೆಯಿಸಿಕೊಂಡ ಚಿತ್ರಗಳ ದಪ್ತರವೂ ದೊಡ್ಡದಿದ್ದುದರಿಂದ, ಆ ದಾಖಲೆಗಳ ಜೊತೆಯಲ್ಲಿ ಇನ್ನು ಹತ್ತು ಸುಳ್ಳುಗಳನ್ನು ಬೆರೆಸಿದರೂ ಹಿಡಿಯುವಂತಾಯಿತು.

"ಕನ್ನಡದಲ್ಲಿ ಒಳ್ಳೆಯ ಚಿತ್ರಗಳೇ ಆಗಿಲ್ಲ. ನಾನು ನನ್ನ ಆಯುಷ್ಯವನ್ನು ಈ ಬುದ್ಧಿಯಿಲ್ಲದ ಹಿಂದೀ ಜನಗಳಿಗಾಗಿ ಕಳೆಯುವ ಬದಲು, ಕನ್ನಡದಲ್ಲೇ ಕಲಾಸೇವೆ ಮಾಡಬೇಕೆಂದಿದ್ದೇನೆ" ಎಂಬ ಜಂಬದ ಮಾತುಗಳನ್ನಾಡಿ ತಿರುಗಾಡತೊಡಗಿದ. ಅಪಕ್ವ ಮನಸೋತ ನಾಲ್ಕಾರು ಭಕ್ತರನ್ನು ಗಳಿಸಿಕೊಂಡು, ಊಟ ಉಪಚಾರದ ತಾಪತ್ರಯವನ್ನು ಗೆಳೆಯರ ಮೇಲೆ ಹೊರಿಸಿ, ಸುಖವಾಗಿರತೊಡಗಿದ. ಅವನ ಚಿತ್ರ ನಿರ್ಮಾಣದ ಪ್ರಯತ್ನ; ಭಾಂಡವಳದ ಯೋಚನೆ—ದಿನ ನಿತ್ಯವೂ ನಡೆಯುತ್ತಿತ್ತು.

ಲಾಹೋರಿನಲ್ಲಿ ಎಂಟು ವರ್ಷಗಳ ಕಾಲ ಚಲಚ್ಚಿತ್ರ ರಂಗದ ವಾತಾವರಣದಲ್ಲಿ ತೇಲಾಡಿದ ಅವನ ಆಯುಷ್ಯ, ಅವನಿಗೆ ಯಶಸ್ಸನ್ನು ದೊರಕಿಸಿಕೊಡದಿದ್ದರೂ, ಅನುಭವವನ್ನು ತಂದುಕೊಟ್ಟಿತ್ತು. ಪ್ರಚಾರದ ಬಗೆಯನ್ನು ಕಲಿಸಿತ್ತು. ಚಿತ್ರತೆಗೆಯುವುದರಲ್ಲಿ, ನಿರ್ದೇಶನದಲ್ಲಿ ಸ್ವಲ್ಪವಾದರೂ ಕಲಿತುಕೊಂಡಿದ್ದಾನೆ. ಎಲ್ಲವನ್ನು ತುಂಬಿಸಿಕೊಳ್ಳಬಲ್ಲ ಹೋಲ್ಡಾಲ್ ಇದ್ದ ಹಾಗೆ ವಿವಿಧ ರಂಗಗಳಲ್ಲಿ ಅನುಭವವುಳ್ಳ ಸಮರ್ಥ ತಾನು—ಎನ್ನುವುದಕ್ಕೆ

ಬೇಕಾದ ಸಂಗ್ರಹಗಳೆಲ್ಲ ಅವನಲ್ಲಿತ್ತು. ಬೆಂಗಳೂರಿಗೆ ಬಂದ ಕೆಲವಷ್ಟು ದಿನ, ದೇಹಲಿ ಲಾಹೋರುಗಳ ತಾರೆಯರು, ನಿರ್ದೇಶಕರು, ಭಾಂಡವಳಗಾರರು—ಇಂಥವರ ವಿಚಾರಗಳನ್ನೆಲ್ಲ ಆಕರ್ಷಕವಾಗಿ ಕನ್ನಡ ಪತ್ರಿಕೆಗಳಿಗೆ ಬರೆಯತೊಡಗಿದ. ಅವು ಸಾಕಷ್ಟು ನಿಕಟವಾದ ಅನುಭವದಿಂದ ಬರೆದ ಲೇಖನಗಳಾದುದರಿಂದ, ಚೆನ್ನಾಗಿಯೂ ಇದ್ದುವು. ಬಿಟ್ಟಿಯಾಗಿ ಬರೆಯುತ್ತಿದ್ದ ಈ ಮಹಾನುಭಾವನ ವಿಚಾರದಲ್ಲಿ, ಸಂಪಾದಕರುಗಳು ಮರುಪ್ರಶಂಸೆಮಾಡತೊಡಗಿದರು. "ಕನ್ನಡದಲ್ಲಿ ಚಲಚ್ಚಿತ್ರ ಉದ್ಯಮ ಬೆಳೆಯಲೇ ಬೇಕಾಗಿದೆ. ನಮ್ಮ ಹಣ ಸಂಪೂರ್ಣವಾಗಿ ತಮಿಳು, ಹಿಂದೀ ಚಿತ್ರಗಳಿಗಾಗಿ ದಂಡವಾಗುವುದು ತೀರ ಅನ್ಯಾಯ. ಕನ್ನಡದಲ್ಲಿ ಭಾಂಡವಳುಗಾರರಿಲ್ಲವೇ? ಅವರು ಸಹ ಮದ್ರಾಸು ನಗರಕ್ಕೆ ಹೋಗಿ ತಮಿಳು, ತೆಲುಗು ಚಿತ್ರಗಳಿಗೆ ದುಡ್ಡು ಸುರಿಯುವ ಅಗತ್ಯವೇನು? ನಾವು ಅಷ್ಟು ಅಭಿಮಾನ ಶೂನ್ಯರೇ? ಕನ್ನಡದಲ್ಲಿ ನಟರಾಗಬಲ್ಲವರಿಲ್ಲವೆ? ತಾರೆಯರಿಲ್ಲವೆ? ವಿಖ್ಯಾತ ನಿರ್ದೇಶಕರಾದ ಮನೋಹರನಂಥ ಪ್ರತಿಭಾಶಾಲಿಗಳಾದವರಿಲ್ಲವೇ!" ಎಂದು ಪ್ರಶಂಸೆಯ ಕಾರ್ಯತೊಡಗಿದರು.

ಹೀಗಾಗಿ ಬೆಂಗಳೂರಲ್ಲಿ ಮನೋಹರ ಸುಲಭವಾಗಿ ಪತ್ರಿಕೆಗಳ ಮೂಲಕ ಖ್ಯಾತಿ ಗಳಿಸಿದ. ಕಾಲೇಜು ವಿದ್ಯಾರ್ಥಿಗಳ ಗೆಳೆತನದಲ್ಲಿ ಮೆರೆದಾಡಿದ. ಅವರಲ್ಲಿ ಅನೇಕ ಕಥಾನಾಯಕರುಗಳನ್ನು ಗುರುತಿಸಿದ. ಸಾಕಷ್ಟು ಚಾಣಕ್ಯದಿಂದ, ಚಂದ್ರೋದಯ ಎಂಬ ವಾರಪತ್ರಿಕೆಯ ಸಂಪಾದಕನನ್ನು ಹಿಡಿದು, ನಿಡುಸಾನಿಡಿ ಲಚ್ಚಯ್ಯಸೆಟ್ಟಿ ಎಂಬವರ ಗುರುತುಮಾಡಿಕೊಂಡ. ಲಚ್ಚಯ್ಯನವರು ಬೆಂಗಳೂರಿನ ಒಬ್ಬ ಪ್ರಸಿದ್ಧ ವ್ಯಾಪಾರಿಗಳು. ಅವರಿಗೆ ಧಾನ್ಯದ ವ್ಯಾಪಾರವಿದೆ. ಎಣ್ಣೆ ಕಾಳುಗಳ ವ್ಯಾಪಾರವಿದೆ. ಯುದ್ಧ ತೊಡಗಿದಂದಿನಿಂದ ಕಳ್ಳ ಸಂತೆಯಿಂದಲೂ ಬೇಕಷ್ಟು ದುಡ್ಡು ಬಂದಿದೆ. ಅದರಲ್ಲಿ ಸ್ವಲ್ಪ ಹಣವನ್ನು ತಮಿಳು, ತೆಲುಗು ಚಿತ್ರಗಳಿಗೆ ಅವರು ಸಾಲವಾಗಿ ಕೊಟ್ಟಿದ್ದಾರೆ. ತಿಂಗಳಿಗೊಂದೆರಡು ಬಾರಿ ಮದ್ರಾಸಿನ ಸ್ಟುಡಿಯೋಗಳ ದರ್ಶನ ಮಾಡಿಕೊಂಡು ಬರುತ್ತಿದ್ದಾರೆ. ತಾವು ಕೊಟ್ಟ ಹಣ-ಯಾವ ರೂಪುಗೊಳ್ಳುತ್ತಿದೆ ಎಂಬ ಎಚ್ಚರ ವಹಿಸಿ ಬರುತ್ತಿದ್ದಾರೆ. ಮನೋಹರನಿಗೆ ಲಾಹೋರಿನಲ್ಲಿ ಚಿಮಣ್‌ಲಾಲ್ ಇದಿರಾಗಿದ್ದನಷ್ಟೆ. ಇಲ್ಲಿ ಅವನೆಷ್ಟು ಚಾಣಾಕ್ಷರಲ್ಲವೆಂದು ಕಾಣಿಸುವ ಲಚ್ಚಯ್ಯ ಸೆಟ್ಟರು ಗುರುತಾದರು.

ಚಂದ್ರೋದಯ ಪತ್ರಿಕೆಯ ಸಂಪಾದಕ ಸುಬ್ಬರಾಯ ತುಂಬ ಮಾತನಾಡಬಲ್ಲಂಥ ಚತುರ. ಸಂಪಾದಕೀಯ ಬಹುವಚನ ಒಂದು ಗಳಿಗೆಗೂ ಅವನ ನಾಲಗೆಯನ್ನು ಬಿಟ್ಟಿದ್ದಿಲ್ಲ. ಆತ ಹುಟ್ಟಿದ್ದು ತಾಳಗುಪ್ಪೆಯಂಥಹ ಹಳ್ಳಿಯ ಊರಾಗಿದ್ದರೂ, ಬೆಂಗಳೂರಿನಲ್ಲಿ ಯಶಸ್ವೀ ವಾರಪತ್ರಿಕೆಯಾದ ಚಂದ್ರೋದಯದ ಸಂಪಾದಕ 'ಟಿ.ಜಿ. ಸುಬ್ಬರಾವ್' ಎಂಬ ಖ್ಯಾತಿ ಅವನಿಗೆ. ಅವನ ಮಾತಿನ ಕೃಪೆ, ಸಿನೆಮಾ ಪ್ರಚಾರ ಬಯಸುವ ಭಾಂಡವಳುಗಾರರಿಗೆ ಬೇಕು. ಅವರ ಜಾಹೀರಾತುಗಳ ಕೃಪೆ ಸುಬ್ಬರಾಯರಂಥವರಿಗೂ ಬೇಕು. ಹೀಗಾಗಿ ಲಚ್ಚಯ್ಯನವರು ಸುಬ್ಬರಾಯರ ಮಾತನ್ನು ಕೇಳುವುದಕ್ಕೆ ಮುಂದಾದರು. ಸುಬ್ಬರಾಯರು ಮನೋಹರನ ವಿಚಾರವಾಗಿ ಹೇಳುತ್ತ 'ನಾನು ಅವರ ಅನೇಕ ಸಿನಾರಿಯೋಗಳನ್ನು ಓದಿದ್ದೇನೆ. ಅವರು ಹಾಡಬಲ್ಲರು, ಬರೆಯುತ್ತಾರೆ; ಫೊಟೋಗ್ರಾಫಿ ಬಲ್ಲರು, ಎಂಟು ವರ್ಷ ಕಾಲ ಲಾಹೋರಿನಲ್ಲಿ ಹೆಸರಾದ ಡೈರೆಕ್ಟರುಗಳ ಸಹಾಯಕರಾಗಿ ಕೆಲಸಮಾಡಿದ್ದಾರೆ. ಇಷ್ಟು ವಿಶೇಷವಾದ ಅನುಭವ ನಮ್ಮ ಕನ್ನಡ ಜನಕ್ಕಿರುವಾಗ, ಒಂದು ಕನ್ನಡ ಚಿತ್ರವನ್ನು ನೀವು ಮಾಡಲೇಬೇಕು; ದುಡ್ಡಿನ ಮಳೆ ಬರುತ್ತದೆ" ಎಂದು ಸುಬ್ಬರಾಯರು ಅವರೊಡನೆ ಪೀಠಿಕೆ ಹಾಕಿದರು.

ಮುಂದೆ ಸೆಟ್ಟರ ಮತ್ತು ಮನೋಹರನ ಮುಲಾಖತ್ತು ನಡೆಯಿತು. ಸುಬ್ಬರಾಯರೂ ಸಂಗಡ ಇದ್ದರು. "ಚಿತ್ರಗಿತ್ರ ಯಾವುದೂ ಮಾಡಬಹುದು. ಕಥೆ ಪೌರಾಣಿಕವಾದರೆ ಉತ್ತಮ. ಮುಖ್ಯವಾಗಿ 'ಸ್ಟಾರು'ಗಳು ಚಂದವಾಗಿದ್ದರೆ ಹಾಕಿದ ದುಡ್ಡು ಗಿಟ್ಟುತ್ತೆ– ಹಾಕಿದ ದುಡ್ಡಿಗೆ ತಕ್ಕ ಲಾಭ ನಮಗೂ ಬರುತ್ತೆ" ಎಂಬ ಅಭಿಪ್ರಾಯ ಲಚ್ಚಯ್ಯ ಸೆಟ್ಟರದು.

"ಆ ಮಾತು ನನ್ನ ಅನುಭವಕ್ಕೂ ಬಂದಿದೆ. ನಾನೇ ಚಾಂದನಿ ದೇವಿಯನ್ನು ಸಂಯೋಗಿತೆಯಲ್ಲಿ ಮುಖ್ಯ ಪಾತ್ರ ಮಾಡುವುದಕ್ಕೆ ಒತ್ತಾಯಿಸಿದವನು. ಅವಳನ್ನು ಕಸದ ಮೂಲೆಗೆ ತಳ್ಳಿದ್ದರು. ಆದರೆ ಹಾಗೆ ಮಾಡಿದ್ದೇ ತಡ, ಚಿಮಣ್‌ಲಾಲನಿಗೆ ದುಡ್ಡಿನ ಮಳೆ ಬಂದಿತು.. ದುಡ್ಡಿನ ಅಮಲಿನಿಂದ ಅವರು ನನಗೆ ದ್ರೋಹ ಬಗೆದರು–ಆ ಮಾತು ಬೇರೆ" ಎಂದು ಅಲ್ಲಿನ ಅನುಭವ ಹೇಳಿ "ಸ್ಟಾರಿನ ವಿಚಾರ ಬಿಡಿ. ದಕ್ಷಿಣ ಕನ್ನಡ, ಉತ್ತರ ಕನ್ನಡ– ಈ ಎರಡು ಜಿಲ್ಲೆಗಳಲ್ಲಿ ಸ್ಟಾರಿನ ಮಾಲೆ ಮಾಡುವಷ್ಟು ಸುಂದರ ವ್ಯಕ್ತಿಗಳಿದ್ದಾರೆ" ಎಂದು ಹೇಳಿದ. "ಮಂಗಳೂರು, ಕಾರವಾರಗಳ ಕಡೆ ಹೇಳು

ತ್ತೀರಾ? ನಾನೂ ಕೇಳಿದ್ದೀನೆ" ಎಂದರು ಸೆಟ್ಟರು.

ಸಂಪಾದಕ ಸುಬ್ಬರಾಯರು, ಮುಂಬಯಿ ಸೇರಿದ ನಾಲ್ಕು ಕನ್ನಡ ತಾರೆಗಳ ಹೆಸರುಗಳನ್ನು ಹೇಳಿ, 'ಇವರೆಲ್ಲ ಆ ಕಡೆಯವರು. ಮನೋಹರ ರಾಯರು ಮನಸ್ಸು ಮಾಡಿದರೆ ನಮಗೆ ಬೇಕಾದ ಸ್ಟಾರುಗಳನ್ನು ಅಗ್ಗ ವಾಗಿ, ಮುಂದೆ ಅವರು ಕೊಬ್ಬಿ ಬೆಳೆದು ಎಷ್ಟೇ ಸಂಬಳ ಬೇಡಲಿ, ಈಗಿನ ಮಟ್ಟಿಗೆ ಅಗ್ಗವಾಗಿ, ಸಂಪಾದಿಸಿ ತಂದಾರು" ಎಂದರು.

ಇನ್ನೂ ನಾಲ್ಕಾರು ಮುಲಾಖತ್ತುಗಳಾದವು. ಮನೋಹರನ ಚಲಾಕಿಯ ಮಾತುಗಳು, ಸುಬ್ಬರಾಯರ ಒಗ್ಗರಣೆ-ಎರಡೂ ಕೂಡಿ ಕೆಲಸಮಾಡಿದವು. ಮೂವರೂ ಸೇರಿದರು. ಮೊದಲ ಚಿತ್ರ ಯಾವುದೆಂದು ತಲೆ ತುರಿಸಿಕೊಂಡು ಬಹಳ ವಿಚಾರ ಮಾಡಿದರು ಸೆಟ್ಟರು. ತಾವು ಕಂಡ ಯಶಸ್ವಿ ಚಿತ್ರಗಳ ಹೆಸರನ್ನು ಹೇಳುತ್ತಾರೆ. ಮನೋಹರ ತನಗೆ ಪ್ರಧಾನ ಪಾತ್ರ ಬರುವ ಚಿತ್ರವನ್ನು ಯೋಚಿಸುತ್ತಾನೆ. ಒಳ್ಳೆಯ ರೂಪ, ಹಾಡುಗಾರಿಕೆಯುಳ್ಳ ನಟಿ ಸಿಕ್ಕಿದರೆ, ಯಾವನಾದರೊಬ್ಬ ಭಕ್ತನ ಚಿತ್ರ-ಅಂಬರೀಷ, ರುಕ್ಮಾಂಗದದಂಥ ಚಿತ್ರ ಆಗಬಹುದೆಂಬುದು ಸೆಟ್ಟರ ಅಭಿಪ್ರಾಯ. ಏಕಾದಶಿ ಮಹಾತ್ಮ್ಯೆ, ವರಲಕ್ಷ್ಮೀ ವ್ರತ—ಇಂಥಹ ಚಿತ್ರಗಳಲ್ಲಿಯೆ ಸೆಟ್ಟರ ದೃಷ್ಟಿ. ಕೊನೆಗೆ 'ವರಲಕ್ಷ್ಮೀ ವ್ರತ'ವೇ ಆಗಬಹುದೆಂದು ತೀರ್ಮಾನವಾಗ ಮನೋಹರ ಎರಡೇ ಎರಡು ದಿನಗಳಲ್ಲಿ ಕಥಾಸಾರಾಂಶ ಗೀಚಿದ. ಪಾತ್ರವರ್ಗದ ಪಟ್ಟಿಮಾಡಿದ. ಸೆಟ್ಟರಿಂದ ಸ್ವಲ್ಪ ಹಣವನ್ನು ಇಸುಕೊಂಡು ಉತ್ತರ ಕನ್ನಡ ಜಿಲ್ಲೆಗೆ ಪಯಣ ಬೆಳೆಸಿದ. ಮಂಗಳೂರಿಗೆ ಹೋಗುವುದಕ್ಕೆ ಯಾಕೋ ಅವನಿಗೆ ಧೈರ್ಯ ಸಾಲದು. ಅಂತು ಸುಬ್ಬರಾಯನೂ ಅವನೂ ಸೇರಿ, ಸಾಹಸಪಟ್ಟು ನಾಲ್ಕು ಮಂದಿ ತರುಣ ವೇಶ್ಯೆಯರನ್ನು, ಸುಂದರ ಗಾಯಕರನ್ನು--ಕರೆದುಕೊಂಡೂ ಬಂದರು. ಸಂಗೀತದ ಅಭ್ಯಾಸ ಮೊದಲು ಪ್ರಾರಂಭವಾಯಿತು. ಸೆಟ್ಟರು ಮದ್ರಾಸಿನ ಸ್ಟುಡಿಯೋಗಳಿಗೆ ಬಿಡುವಿಲ್ಲದುದರಿಂದ, ಸೇಲಮ್‌ಗೆ ಹೋಗಿ ಸ್ಟುಡಿಯೋ ಗೊತ್ತುಮಾಡಿಕೊಂಡು ಬಂದರು. ಫಿಲ್ಮುಗಳ ಅಭಾವದ ಕಾಲದಲ್ಲಿ, ಸೆಟ್ಟರ ದುಡ್ಡಿನ ಬಲದಿಂದ ಅದು ದೊರೆಯಿತು. ಚಿತ್ರಹುಟ್ಟುವ ಮುಂಚೆಯೇ 'ಚಂದ್ರೋದಯ'ದಲ್ಲಿ ಅದರ ಪ್ರಚಾರ ಕಾರ್ಯ ಬಿರುಸಿಂದ ಸಾಗಿತು. ಈ ನಡುವೆ ಮನೋಹರನ ತಮ್ಮ ಗೋಪಾಲ, ಪತ್ರಿಕೆಗಳಿಂದ ತಮ್ಮ ಅಣ್ಣ ಬೆಂಗಳೂರಲ್ಲಿರುವುದನ್ನು ತಿಳಿದುಕೊಂಡು, "ನೀನು ಒಮ್ಮೆ

ಊರಿಗೆ ಬಂದು ಹೋಗು; ತಂದೆಯವರಿಗೆ ತುಂಬ ಅಸಮಾಧಾನವಾಗಿದೆ; ವಯಸ್ಸೂ ಆಗಿದೆಯಲ್ಲ. ಅವರು ಹೆಚ್ಚಿಗೆ ಓಡಾಡುತ್ತಲಿಲ್ಲ. ಯಾಕೆ ಅವರನ್ನು ಬೇಸರಪಡಿಸುತ್ತೀಯ?" ಎಂದು ದೀರ್ಘಪತ್ರ ಬರೆದಿದ್ದ. "ಈಗ ನನಗೆ ಇಷ್ಟಿಷ್ಟೂ ಬಿಡುವಿಲ್ಲ. ವರಲಕ್ಷ್ಮಿ ಎಂಬ ಚಿತ್ರದ ತಯಾರಿಕೆಯಲ್ಲಿ ನಿರತನಾಗಿದ್ದೇನೆ. ಸ್ವಲ್ಪ ಬಿಡುವಾದೊಡನೆಯೆ ಊರಿಗೆ ಬರುತ್ತೇನೆ" ಎಂದು ಮನೋಹರ ತಮ್ಮನಿಗೆ ಮರು ಓಲೆ ಬರೆದ.

ಆ ಚಿತ್ರ ಮುಗಿಯುವುದರೊಳಗಾಗಿ ಮನೋಹರ ಊರಿಗೆ ಹೋಗಬೇಕಾದ ಪ್ರಮೇಯವೇ ಬಂದೊದಗಿತು. ಅನಂತ ಗೋಖಲೆಯವರು ಅಸ್ವಸ್ಥರಾದರು. ತಿರುಗಿ ಮನೋಹರನಿಗೆ ತಮ್ಮನಿಂದ ಪತ್ರಗಳು ಬರತೊಡಗಿದುವು. ತಂದೆಗೆ, ಮಗನು ಮನೆಗೆ ಬರುವುದು ಇಷ್ಟವಾಗಿಲ್ಲವಾದರೂ, ತಮ್ಮನ ಒತ್ತಾಯದಿಂದ ಆತ ಊರಿಗೆ ಬರಲೇಬೇಕಾಯಿತು. ಹಾಗೆ ಬಂದುದರಿಂದ ಅವನ ತಿಂಗಳ ಕಾಲವೇ ವ್ಯರ್ಥವಾಯಿತು. ಲಚ್ಚಯ್ಯ ಸೆಟ್ಟರಿಗೆ ಅದರಿಂದ ಸ್ವಲ್ಪ ನಷ್ಟವೂ ಆಯಿತಂತೆ. ಆದರೆ ಮನೋಹರನ ತಂದೆ ತೀರಿಕೊಂಡುದರಿಂದ ಲಚ್ಚಯ್ಯ ಸೆಟ್ಟರು 'ಆತ ಮೋಸಮಾಡಿದ್ದಾನೆ, ಕರಾರಿನ ಅವಧಿ ಬೆಳೆಸಿ ತಮಗೆ ನಷ್ಟಮಾಡಿದ್ದಾನೆ' ಎನ್ನುವುದಕ್ಕಿರಲಿಲ್ಲ. ತನ್ನ ತಂದೆಯ ಉತ್ತರ ಕ್ರಿಯೆ ಮುಗಿಸಿ, ನೇರಾಗಿ ಬೆಂಗಳೂರಿಗೆ ಧಾವಿಸಿ ಬಂದು, ಚಿತ್ರವನ್ನು ಮನೋಹರ ಮುಗಿಸಿಕೊಟ್ಟ. ಚಂದ್ರೋದಯದ ಸಂಪಾದಕರ ಪೂರ್ವ ಪರಿಚಯದ ಲೇಖನಗಳಿಂದ, ಅದೊಂದು ಅದ್ಭುತ ಚಿತ್ರವೆನಿಸಬೇಕಾಗಿತ್ತು. 'ನಟಶ್ರೇಷ್ಠ, ನಿರ್ದೇಶಕ ಶ್ರೇಷ್ಠ ಮನೋಹರರಾವ್ ಇವರ ಪರಿಪಕ್ವ ಕಲಾನಿರ್ಮಾಣವಂತೆ' ಅದು. ಅದರಲ್ಲಿ—ಮುಖ್ಯಪಾತ್ರ ವಹಿಸಿದ ಕನ್ನಡ ಉದಿತೋದಿತ ತಾರೆ ಕಲಾವತಿ, ಭಾರತೀಯ ತಾರಾ ರತ್ನಗಳಲ್ಲಿ ಒಬ್ಬಳು ಆಗಿದ್ದಳು. ಆ ಚಿತ್ರವನ್ನು ಮುಗಿಸಿದ ಉದಿತೋದಿತ ತಾರೆಗೆ ಸೇಲಂ ನಗರದ ಗಾಳಿ ಬೀಸಿ, ಅವಳು ಅಲ್ಲಿದ್ದ ವೇಳೆಯಲ್ಲೇ ತಮಿಳು ಚಿತ್ರವೊಂದರಲ್ಲಿ ನಟಿಸುವ ಗುತ್ತಿಗೆಯನ್ನು ಪಡೆದೂ ಆಯಿತು. ಲಚ್ಚಯ್ಯ ಶೆಟ್ಟರು ತೆತ್ತ ಒಂವೆರಡು ಸಾವಿರ ರೂಪಾಯಿಗಳಿಗೆ ತಕ್ಕ ಕೃತಜ್ಞತೆಯನ್ನು ಆಕೆ ತೋರಿಸಲಿಲ್ಲ.

ಅಂತು ಅವರ ಚಿತ್ರ ರಜತ ಪರದೆಯ ಮೇಲೆ ಬಂದಿತು. ಬೆಂಗಳೂರು, ಮದ್ರಾಸು, ಕೊಯಂಬುತ್ತೂರು ನಗರಗಳಲ್ಲಿ ಒಂದೇ ಕಾಲದಲ್ಲಿ ದೇಖಾವೆ

ಗಳು ನಡೆದುವು. ಯಾವ ಕಾರಣದಿಂದಲೋ ಏನೋ, ಪೂರ್ವ ನಿರೀಕ್ಷೆಯಷ್ಟು ಆ ಚಿತ್ರ ಯಶಸ್ವಿಯಾಗಲಿಲ್ಲ. ಕೊಯಂಬುತ್ತೂರು, ಮದ್ರಾಸುಗಳಲ್ಲಿ ಮೆರೆದಾಡಿದ ತಮಿಳು ತಾರೆಯರ ಸರಿಸಮಕ್ಕೆ 'ಕಲಾವತಿ' ಬರಲಿಲ್ಲ ಎನ್ನುತ್ತಾರೆ. 'ಮನೋಹರನ ಚಿತ್ರ ನಿರ್ದೇಶನ ಏನೇನೂ ಸಾಲದು' ಎನ್ನುತ್ತಾರೆ. ಚೆಲುವಿನ ಹುಡುಗಿಯರಿದ್ದರೂ, ಬಯಲು ಶೃಂಗಾರ, ರೋಮಾಂಚಕಾರಿ ಘಟನೆಗಳು ಇವಾವುವೂ ಇಲ್ಲದೆಯೆ ಚಿತ್ರ ನಿರ್ಜೀವವಾಗಿದೆ' ಎನ್ನುತ್ತಾರೆ. ಬೆಂಗಳೂರಲ್ಲಿ ಆ ಚಿತ್ರ ಒಂದು ತಿಂಗಳ ಕಾಲ ಪೂರ ನಡೆಯಲಿಲ್ಲ. 'ಕನ್ನಡ ಜನಕ್ಕೆ ಅಭಿಮಾನ ಸಾಲದು' ಎಂಬುದು ಟಿ. ಜಿ. ಸುಬ್ಬರಾಯರವರ ವಿಮರ್ಶೆಯಾಗಿತ್ತು. ಮನೋಹರನನ್ನು ಕೈಬಿಡದವರಲ್ಲಿ ಅವರೊಬ್ಬರೇ ಒಬ್ಬರು. ಮುಖ್ಯವಾಗಿ ಸೆಟ್ಟರು 'ತಮಿಳು ಚಿತ್ರ ಕೊಡುವ ದುಡ್ಡನ್ನು ಕನ್ನಡ ಚಿತ್ರಗಳು ಕೊಡಲಾರವು. ದುಡ್ಡು ಬಾರದ ಒಣ ಅಭಿಮಾನ ನನಗೇತಕ್ಕೆ' ಎಂಬ ತೀರ್ಮಾನಕ್ಕೆ ಬಂದರು. ಹೀಗೆ ಇದ್ದ ಬೆಂಬಲ ಹೊರಟುಹೋಯಿತು. ಮನೋಹರನ ಶ್ರಮ ವ್ಯರ್ಥವಾಯಿತು. ಸೆಟ್ಟರು ಲಾಭದಲ್ಲಿ ಸೇಕಡ ಇಂತಿಷ್ಟರ ಪಾಲು ಕೊಡುತ್ತೇನೆ-ಎಂದವರು ಅವನ ಖರ್ಚಿಗೆ ಮಾತ್ರ ಹಣ ಕೊಟ್ಟು--ಕೊನೆಗೆ 'ಮೂಲ ಧನದಲ್ಲೇ ಇಪ್ಪತ್ತು ಸಾವಿರ ನಷ್ಟವಾಯಿತು' ಎಂದು ನೆಪ ಹೇಳಿ, ಆ ಚಿತ್ರದ ಹಕ್ಕನ್ನು ಇನ್ನಾರಿಗೋ ವಿಕ್ರಯಿಸಿ ತಾವು ಪಾರಾದರು. ಮನೋಹರನ ಆಕಾಂಕ್ಷೆಯನ್ನು ಮಣ್ಣುಗೂಡಿಸಿದರು.

ಆದರೇನು? ಮನೋಹರನ ಧೈರ್ಯ ಮತ್ತೂ ಹೆಚ್ಚು. ಮನಸ್ಸು ಮತ್ತೂ ಗಟ್ಟಿ. ಕಾರವಾರ ಜಿಲ್ಲೆಯಿಂದ ಸಂಪಾದಿಸಿಕೊಂಡು ಬಂದ ನಾಲ್ಕು ತಾರೆಯರಲ್ಲಿ ಮೂವರು ಅವನ ಮಾತಿಗೋ ಮತ್ತೇತಕ್ಕೋ ಮನಸೋತು, ಅವನೊಡನೆ ತಮ್ಮ ಅದೃಷ್ಟ ತೂಗಿಸಿಕೊಂಡು ನಿಂತರು. ನಾಲ್ವತ್ತು ವಯಸ್ಸಿನ ಕಾಮಾಕ್ಷಿ; ಮನೋಹರನ ಸಮ ವಯಸ್ಸಿನ ಇಂದಿರಾ; ಇಪ್ಪತ್ತು ವರ್ಷದ ಬೇಬಿ ತಾರೆ ಕುಸುಮಾ--ಇಷ್ಟು ಮಂದಿಯೂ ಈಗ ಅವನ ಬಳಗದವರಾಗಿದ್ದಾರೆ. ಬೇಬಿ ಕುಸುಮಳಿಗೆ ಭರತ ನಾಟ್ಯ, ಮಣಿಪುರಿ, ಕಥಕ್ ಮೊದಲಾದವುಗಳ ಅಭ್ಯಾಸ ನಡೆಸುತಿದ್ದಾನೆ. ತರುಣ ಗೀತಗಾರರ ಗುಂಪೊಂದನ್ನು ಕಟ್ಟಿಕೊಂಡು ಆರ್ಕೆಸ್ಟ್ರಾ ಕೂಡಿಸಿ ಹಾಕುತಿದ್ದಾನೆ. ಇನ್ನೊಂದು ಐತಿಹಾಸಿಕ ಕಥಾನಕದ ಕನಸನ್ನು ಜತೆಗೇ ಕಾಣುತ್ತಿದ್ದಾನೆ. ಅವನ ಮೇಜಿನಲ್ಲಿ ಸಿವೆಲನ 'ಫೊರ್‌ಗಾಟನ್ ಎಂಪಾಯರ್' ಎಂಬ ಗ್ರಂಥ ಅರ್ಧ ನುಗ್ಗಾಗಿ

ಬಿದ್ದಿದೆ. ಸುಬ್ಬರಾಯರನ್ನು ಕಟ್ಟಿಕೊಂಡು-ಹಂಪಿ, ಹಳೆಬೀಡು, ಬೇಲೂರು, ಸೋಮನಾಥಪುರ ಮೊದಲಾದ ಊರುಗಳನ್ನೆಲ್ಲ ನೋಡಿಕೊಂಡು ಬಂದಿದ್ದಾನೆ. ಅವನ ಮುಂದಿನ ಚಿತ್ರ 'ತೌಳವ ದೊರೆ ಕೃಷ್ಣದೇವರಾಯ' ನದಂತೆ. ಅದು ಸಾಧ್ಯವಾದಲ್ಲಿ, ತೆಲುಗು ಭಾಷೆಯಲ್ಲಿಯೂ ಆಗಬೇಕೆಂಬ ಸಂಕಲ್ಪ ಅವನದು. 'ಮೈಸೂರಿನಲ್ಲೇ ಇದ್ದು ಅದನ್ನು ಮಾಡುವುದು ಸುಲಭ. ಯಾರನ್ನಾದರೂ ಹಿಡಿದರೆ ಅರಮನೆಗಳ ಆನೆ, ಕುದುರೆಗಳ ಬೆಂಬಲ ಸಿಗಬಹುದು. ಹಳೆಬೀಡು, ಬೇಲೂರು, ಹಂಪಿಗಳಲ್ಲಿ ಶೂಟಿಂಗ್ ನಡೆಯಿಸಬಹುದು. ಅಂಥ ಒಂದು ಕಥೆಯನ್ನು ಕೊಟ್ಟದ್ದಾದರೆ, ಕನ್ನಡ ಸಾಮ್ರಾಜ್ಯವನ್ನೇ ಕಟ್ಟಿದಂತಾಗುತ್ತದೆ'-ಎಂಬ ಏನೇನೋ ಕನಸುಗಳು ಅವನವು. ಅವನಿಗೆ ಇರುವ ಮುಖ್ಯ ಅಡಚಣೆ ಎಂದರೆ ಬರಿಯ ಹಣದ್ದಷ್ಟೆ. ಆ ಪ್ರಯತ್ನ ಅಹೋರಾತ್ರಿಯೂ ನಡೆದಿದೆ. ಸರಕಾರಿ ಕಂಟ್ರಾಕ್ಟುಗಳಲ್ಲಿ, ಇನ್ನೊಂದರಲ್ಲಿ, ದುಡ್ಡು ಗಳಿಸಿದ ಜನ, ತಮ್ಮ ದುಡ್ಡನ್ನು ಹೇಗೆ ವಿನಿಯೋಗಿಸಬೇಕು ಎಂದು ದಾರಿಗಾಣದ ಜನ, ಬೇಕಷ್ಟು ಇದ್ದಾರೆ-ಎಂಬುದು ಸುಬ್ಬರಾಯರ ಹೇಳಿಕೆ. ಬೆಂಗಳೂರು ಮೈಸೂರುಗಳಲ್ಲಿ ಹೊಸ ಹೊಸ ಕನ್ನಡ ಚಿತ್ರಗಳ ಕನಸನ್ನು ಕಾಣುತ್ತಿದ್ದ ಮಹಾನುಭಾವರು ಬಹು ಮಂದಿ ಇದ್ದರು. ಸಾಲದುದಕ್ಕೆ ಮೈಸೂರಿನಲ್ಲಿಯೇ ಒಂದು ಹೊಸ ಸ್ಟುಡಿಯೋ ಆಗಿತ್ತು. ಹೊಸಬರಿಗೆ ಕಚ್ಚಾ ಫಿಲ್ಮ್ ಸಿಗುವುದೊಂದೇ ಕಷ್ಟ--ಎಂಬುದೊಂದೇ ತೊಡಕು. ಈ ಚಿತ್ರದ ಕನಸು ಮೊದಲಿನ ಇತರ ಕನಸುಗಳಷ್ಟೇ ಸುಂದರವಾಗಿಯೂ ಆಶಾದಾಯಕವಾಗಿಯೂ ತೋಡಗಿತಾದರೂ, ಮನೋಹರನ ಗೆಳೆಯ ಸುಬ್ಬರಾಯನಿಗೆ ಹಣಗಾರರಲ್ಲಿ ವರ್ಚಸ್ಸು ಸಾಲದು. ಮನೋಹರನಿಗೆ ಇನ್ನೂ ಅಲ್ಲಿನ ಭಾಂಡವಳುಗಾರರ ಗುಟ್ಟೂ ತಿಳಿಯದು. ಪರಿಚಯವೂ ಸಾಲದು. ತಿಂಗಳು ಆರು ತಿಂಗಳು ಕಳೆದರೂ ಹಣವಿಲ್ಲವೆಯೆ, ಅವನ ಕನಸು ಕನಸಾಗಿಯೇ ಉಳಿದಿದೆ. 'ಏನು ಮಾಡಲಿ, ಯಾರನ್ನು ತನ್ನ ಬಲೆಗೆ ಹಾಕಿಕೊಳ್ಳಲಿ?' ಎಂಬ ಚಿಂತೆಯೇ ಚಿಂತೆ.

ಮನೋಹರನಿಗನಿಸುತ್ತಿತ್ತು-ತಾನೆಷ್ಟು ಕಸಿವಿಸಿಯಿಂದ ಚಿತ್ರ ತಯಾರಿಕೆ ತೊಡಗುವುದಾದರೂ, ಒಂದು ಲಕ್ಷ ರೂಪಾಯಿ ಬೇಕಾಗಬಹುದಾದ ಆ ಕೆಲಸ ತನ್ನಿಂದಾದೀತೇ-ಎಂಬ ಅನುಮಾನ ಬರತೊಡಗಿತು. "ಹೋಗಲಿ, ಐತಿಹಾಸಿಕ ಚಿತ್ರ ಕಷ್ಟದ್ದು. ತುಂಬ ಹಣ ನುಂಗುವಂಥದು. ಸಾಮಾಜಿಕ

ಚಿತ್ರ ತೆಗೆಯಬಹುದಲ್ಲ. ಬೇರೆಯೇ ಕಥೆಯನ್ನು ಬರೆದರಾಯಿತು. ತನ್ನ ಪ್ರೇಯಸಿಯಾದ ಬೇಬಿ ಕುಸುಮಾ ದಿನ ದಿನಕ್ಕೆ ಮನಸೆಳೆಯುವ ಮೋಹಕ ತರುಣಿಯಾಗುತ್ತಿದ್ದಾಳೆ. ನೃತ್ಯ,ಗೀತೆ,ಅಭಿನಯ ಎಲ್ಲದರಲ್ಲೂ ಚದುರೆ. ಅವಳನ್ನು ಸುತ್ತುವರಿಯುವ ಒಂದು ಸಾಮಾಜಿಕ ಕಥೆಯನ್ನು ಬರೆಯುತ್ತೇನೆ. ತಾನಿದ್ದೇನೆ; ಬರಿಯ ಹೆಸರಿಗಾಗಿಯೇ ಒಂದು ದುಡಿಯುವ ಕಾಲೇಜಿನ ವಿದ್ಯಾರ್ಥಿಯಾದ ರುದ್ರಯ್ಯ, ಮುನಿಸ್ವಾಮಿ, ಕೃಷ್ಣಮೂರ್ತಿ ಮೊದಲಾದ ತರುಣರಿದ್ದಾರೆ. ಸಾಲ್ವತ್ತು ಸಾವಿರದೊಳಗೆ, ಒಂದು ಚಿತ್ರಪ್ರತಿಯಾದರೂ ಕೈಗೆ ಬರುವಂಥ ಚಿತ್ರ ನಿರ್ಮಿಸುವುದೊಂದು ಕಷ್ಟವಲ್ಲ. ತ್ರೌಳನ ದೊರೆ ಕೃಷ್ಣ ದೇವರಾಯನ ಚಿತ್ರವನ್ನು ಅನಂತರ ಮಾಡಬಹುದು. ಇದರ ಹಣ ಅದಕ್ಕೆ” ಎಂದು ಯೋಚಿಸತೊಡಗಿದ. ಆರು ತಿಂಗಳ ತನಕ ಕಾಲ ಹಾಕಿ, ಮುಂದಿನ ದಾರಿ ಇನ್ನಷ್ಟು ಕಷ್ಟವಾದುದು ಎಂದರಿತುಕೊಂಡ ಅವನ ಕಾಮಾಕ್ಷಿ, ಇಂದಿರೆಯರು 'ತಾವು ಊರಿಗೆ ಒಮ್ಮೆ ಹೋಗಿಬರುತ್ತೇವೆ' ಎಂದು ಹೇಳಿ ಹೊರಟುಹೋದರು. ತತ್ಕಾಲಕ್ಕೆ ಅವರ ಪೋಷಣೆಯ ಭಾರ ತಪ್ಪಿದರೆ ಅದೂ ಒಳಿತೆಂದು ಅವನಿಗೆ ತೋರಿತು. ಕುಸುಮಾ ದೇವಿ ಮತ್ತು ಆತ ಇಬ್ಬರೇ ಬೆಂಗಳೂರಿನ ಉದ್ಯಾನ, ಚಿತ್ರ ಮಂಟಪಗಳಲ್ಲಿ ಮೆರೆದಾಡ ತೊಡಗಿದರು. ಅವಳೊಬ್ಬಳ ಮೇಲೆಯೇ ತನ್ನ ಭವಿಷ್ಯ ನಿಂತಿದೆ ಎಂದು ಮನೋಹರ ಯೋಚಿಸಿದ. "ಇದಕ್ಕೆಲ್ಲ ತನ್ನದೇ ಹಣವಿಲ್ಲದೆ ಕೆಲಸ ಮುಂದುವರಿಯುವುದು ಕಷ್ಟ. ಊರಿಗೆ ಹೋಗಿ ತನ್ನ ಪಾಲಿನ ಆಸ್ತಿಯನ್ನು ಅಡವು ಮಾಡಿ, ಹಣ ದೊರಕಿಸುತ್ತೇನೆ” ಎಂದು ಯೋಚಿಸಿದ. ಅದಕ್ಕೊಂದೆರಡು ತಿಂಗಳ ಕಾಲ ಹಿಡಿಯಬಹುದು. ಅಲ್ಲಿಯ ತನಕ—ಕುಸುಮೆಯನ್ನೇನು ಮಾಡಬೇಕು? ಬೆಂಗಳೂರಿನಲ್ಲಿ ಬಿಡಲೇ; ಜತೆಗೆ ಕರೆದೊಯ್ಯಲೇ–ಎಂದು ವಿಚಾರ ಮಾಡಬೇಕಾಯಿತು. ಒಮ್ಮೆ ಊರಿಗೆ ಹೋಗಿ ಬರುವ ನಿಶ್ಚಯ ಮಾಡಿ ಹೊರಟ; ಕುಸುಮೆ ಬೆಂಗಳೂರಲ್ಲೇ ಇರುವುದೆಂದಾಯಿತು.

ತುಂಬ ಉಲ್ಲಾಸದಿಂದಲೇ ಆತ ತನ್ನ ಊರನ್ನು ಸೇರಿದ. ಅಣ್ಣ ಬಂದದ್ದು ಗೋಪಾಲನಿಗೆ ತುಂಬ ಸಂತೋಷಕ್ಕೆ ಕಾರಣವಾಯಿತು. ಆದರೆ ಆತ, ತನ್ನ ಹಿಸೆಯನ್ನು ಅಡವುಮಾಡಿ ಸಾಲ ಪಡೆಯುವ ಯೋಚನೆ ಮಾಡಿದ್ದಾನೆಂದು ತಿಳಿದ ಮೇಲೆ, ಗಾಬರಿಗೊಂಡು ತನ್ನ ಮಾವನಲ್ಲಿಗೆ ಓಡಿದ. ಅವರಲ್ಲಿ ತೀರ ಕಿರಿಯನಾದ ಗಣೇಶಗೆ ಹದಿನೈದು ಹದಿನಾರು ವಯಸ್ಸೀಗ.

ಆತ ಅಪ್ರಾಯಸ್ಥ. ಆದರೂ ನಾಲ್ಕು ಜನರ ಸಮ್ಮುಖದಲ್ಲಿ ತಾವು ಹಿಸೆಮಾಡಿಕೊಂಡು, ಅಣ್ಣನ ಹಿಸೆಯನ್ನು ಬಿಟ್ಟುಕೊಟ್ಟು, ನಿಶ್ಚಿಂತರಾಗುವುದೊಳಿತೆಂದು ಮಾವ ಉಪದೇಶಿಸಿದರು. ಅವರೇ ಮನೆಗೆ ಬಂದು, ಅಂಥ ಪಾಲುಪಟ್ಟಿಮಾಡಿ, ಮುಂದೆ ತೊಂದರೆ ಬಂದರೂ, ಹೊರಗಿನಿಂದ ತೊಂದರೆ ಆಗದಿರಲಿ–ಎಂಬುದರಿಂದ, ತಾವೇ ಹತ್ತು ಸಾವಿರ ರೂಪಾಯಿಗಳಿಗೆ ಭೋಗ್ಯಮಾಡಿಕೊಂಡು, ಮನೋಹರನ ಪಾಲು ಬರೆಯಿಸಿಕೊಂಡರು. ಮನೋಹರ ಆಚೀಚೆ ಭೂಮಿಗಳ ಬೆಲೆ ವಿಚಾರಿಸಿದ. ತನ್ನ ಪಾಲಿನ ಅಂಶಕ್ಕೆ ಅದಕ್ಕಿಂತ ಹೆಚ್ಚಿನ ಹಣ ಬರಲಾರದೆಂದು ತಿಳಿದ ಮೇಲೆ, ಬಂದಷ್ಟು ಹಣ ಹಿಡಿದುಕೊಂಡು ಬೆಂಗಳೂರಿಗೆ ಧಾಪಿಸಿದ. ಇದಕ್ಕೇನೆ ಎರಡುಮೂರು ತಿಂಗಳ ಕಾಲ ವ್ಯಯವಾಯಿತು. ಕುಸುಮೆಯಿಂದ "ನಿಮ್ಮನ್ನೇ ದಾರಿ ಕಾಯುತ್ತಿದ್ದೇನೆ" ಎಂಬ ಪತ್ರ ಬಾರದಿದ್ದರೆ, ಅವನು ಅಷ್ಟು ಸಮಯ ಊರಲ್ಲಿರುತ್ತಿರಲಿಲ್ಲ. ಅಂತು ಇಷ್ಟಾರ್ಥ ಪೂರ್ತಿಯಾಗಿ ಬೆಂಗಳೂರಿಗೆ ಧಾವಿಸಿದ.

ಕೈಯಲ್ಲಿರುವ ಹತ್ತು ಸಾವಿರ ರೂಪಾಯಿಗಳನ್ನು ನಂಬಿ, ಮೈಸೂರಿಗೆ ಹೋದ; ಸ್ಟುಡಿಯೋ ಬಾಡಿಗೆ ಗೊತ್ತು ಮಾಡಿದ. ತರುಣ ಮಿತ್ರರನ್ನು ಕೂಡಿಸಿದ. ಅಭ್ಯಾಸ ಹೂಡಿದ. ಬಹುಮಂದಿಗೆ ನಾಳಿನ ಲಾಭದ ಭರವಸೆ, ಕೀರ್ತಿಯ ಭರವಸೆಗಳನ್ನು ಹೇಳಿ ಕೆಲಸ ಮುಂದುವರಿಸಿದ. ಆ ವೇಳೆಗೆ, ಮೂರು ವರ್ಷಗಳಿಂದ ಮನೆಬಿಟ್ಟು ಹೋದ ತನ್ನ ತಂಗಿ, ಕುಸುಮೆಯನ್ನು ಕಾಣುವುದಕ್ಕೆ, ತಮ್ಮ ಊರಿಗೆ ಕರೆದೊಯ್ಯುವುದಕ್ಕೆಂದು, ಅವಳ ಅಣ್ಣ ನಾಗೇಂದ್ರ ಬಂದಿದ್ದ. ಬಂದು, ಭಾವನಾಗಿ ಅವನ ಮನೆಯಲ್ಲೇ ಬಿಡಾರ ಹೂಡಿದ. ಆರೇಳು ದಿನ ಏನೂ ಸುದ್ದಿ ಎತ್ತಲಿಲ್ಲ. ಸ್ಥಿತಿ ಗತಿ ವಿಚಾರಿಸಿಕೊಳ್ಳುತ್ತಲಿದ್ದ. ಅವನಿಗೆ ನಿರಾಶೆಯಾಗಿ ಕಂಡ ಸಂಗತಿಯೆಂದರೆ–ಮೂರು ವರ್ಷಕಾಲ ದುಡಿದೂ ತನ್ನ ತಂಗಿಯ ಕೈ ಮೈಗಳು ಬರಿದಾಗಿರುವುದು. ಈ ಹುಡುಗಿ ಮನೋಹರನ ಮೇಲಿನ ಹುಚ್ಚಿನಿಂದ, ಅವನಿಗೇ ಅಂಟಿಕೊಂಡಿದ್ದಾಳೆ. 'ನಮಗೆ ಪ್ರಯೋಜನವಿಲ್ಲದ ಅಂಥ ಸ್ನೇಹ ವ್ಯರ್ಥ' ಎಂದು ಅವಳ ಕಿವಿಯನ್ನು ಊದತೊಡಗಿದ. ಒಂದು ದಿನ ತಾನಾಗಿ ಮನೋಹರನೊಡನೆ "ನಮ್ಮ ಕುಸುಮ ನಿಮ್ಮನ್ನು ನಂಬಿ ಬಂದು, ಇದ್ದು ವರ್ಷ ಮೂರಾದುವು. ಅವಳನ್ನು ನೀವು ಊರಿಗೆ ಕಳುಹಿಸಿಕೊಟ್ಟದ್ದೂ ಇಲ್ಲ. ಅವಳ ಕೈಯಲ್ಲಿ ಕಾಸೂ ಕೊಟ್ಟದ್ದೂ ಇಲ್ಲ. ಬೇರೆಯೇ ಸಮಯವಾಗಿದ್ದರೆ ನಾನು ನಿಮ್ಮನ್ನು

ಕಾಡುತ್ತಿರಲಿಲ್ಲ. ಈಗ ಅಂಥ ಕಷ್ಟದ ವೇಳೆ ಬಂದದೆ ನೋಡಿ. ನಮ್ಮ ಮನೆ ಅಡವಾದದ್ದನ್ನು ಬಿಡಿಸಿಕೊಳ್ಳಬೇಕಾಗಿದೆ. ಬಡ್ಡಿ ಕೂಡಿಸಿ, ನಾವು ನಮ್ಮ ಸಾಲಗಾರರಿಗೆ ನಾಲ್ಕು ಸಾವಿರ ಕೊಡದಿದ್ದರೆ ಮನೆ ಹೋಗುತ್ತದೆ. ಅವಳ ಮೂರು ವರ್ಷದ ದುಡಿಮೆಯಲ್ಲಿ ನೀವು ಅಷ್ಟಾದರೂ ಕೊಟ್ಟರೆ ಒಂದು ಲೆಕ್ಕ" ಎಂದು ವಾದಿಸಿದ. ಕುಸುಮ ತನ್ನ ಕೈ ತಪ್ಪುವುದು ಅವನ ಕನಸಿಗೂ ಸಹಿಸದ ಮಾತು. 'ಬಡ್ಡಿಯ ಹಣ ಎಷ್ಟಾಗುತ್ತದೋ ಅದನ್ನೀಗ ಕೊಡು ತ್ತೇನೆ. ಮುಂದೆ ಅಸಲು ಹಣವನ್ನೂ ಕೊಡುತ್ತೇನೆ; ಬೇಕಾದರೆ ಕುಸುಮಳ ಹೆಸರಿಗೆ ನೋಟನ್ನು ಬರೆದುಕೊಡುತ್ತೇನೆ' ಎಂದು ಏನೇನೋ ಉಪಾಯಾಂತರ ಹೇಳಿದ. ಪ್ರಪಂಚವನ್ನು ಬಲ್ಲ ನಾಗೇಂದ್ರ ಅದಕ್ಕೆಲ್ಲ ಮರುಳಾಗಲಿಲ್ಲ. ಆತ ತನ್ನ ತಂಗಿಯನ್ನು ಕರೆದೊಯ್ಯಲು ಸಿದ್ಧನಾದ. ಅವಳೂ ಹೋಗುವ ಒಲವನ್ನು ತೋರಿದಳು.

"ನೀವು ಏನೇನೂ ಕೊಡಬೇಕಾಗಿಲ್ಲ. ಅವಳು ಇಷ್ಟು ಸಮಯ ಬಿಟ್ಟಿ ದುಡಿದದ್ದು ಮಾಫಿ. ನಿಮ್ಮಿಂದ ಕಾಸು ಸಿಗಲಾರದೆಂದು ನನಗೆ ಬರುವಾಗಲೇ ಕಾಮಾಕ್ಷಿ ಹೇಳಿದ್ದಳು. ಆದರೆ ಕುಸುಮೆಗೆ ರೂಪವಿದೆ; ಯೌವನ ವಿದೆ— ಯಾವ ಪುಣ್ಯಾತ್ಮನಾದರೂ ನಾಲ್ಕು ಸಾವಿರ ಕೊಟ್ಟಾನು" ಎಂಬ ಬೆದರಿಕೆ ಹುಟ್ಟಿಸಿದ.

ಈ ಹಂಚಿಕೆಯಿಂದಾಗಿ, ಮನೋಹರನ ಕೈಯಿಂದ ನಾಲ್ಕು ಸಾವಿರ ರೂಪಾಯಿಗಳು ತಪ್ಪಿದವು. ನಾಗೇಂದ್ರ ತೊಲಗಿದ; ಕುಸುಮ ಉಳಿದಳು. ಅವರದೇ ಊಟ, ವಸತಿ, ಬಾಡಿಗೆ–ಇವುಗಳೆಲ್ಲ ಸೇರಿ ಇನ್ನೊಂದು ಸಾವಿರ ತಿಂದಾಗಿತ್ತು. ಮೈಸೂರಿಗೆ ಹೋಗಿ ಐದು ಸಾವಿರ ತೆತ್ತು, ಚಿತ್ರವನ್ನೇನೋ ತೊಡಗಿದ. ಹದಿನೈದು ದಿನಗಳ ಆಟ ನಡೆಯಿತು. ಅಲ್ಲಿಂದ ಬೆಂಗಳೂರಿಗೆ ಮರಳಿ ಬಂದ. ನಾಲ್ಕು ಜನಕ್ಕೆ ಚಿತ್ರದ ಸ್ಟಿಲ್ಸ್ ತೋರಿಸಿದ. ಕುಸುಮೆಯ ನರ್ತನದ ಫಿಲ್ಮ್ ಚೂರು ತೋರಿಸಿದ. ಲಚ್ಚಯ್ಯ ಸೆಟ್ಟರಿಗೇನೆ ಇನ್ನೊಮ್ಮೆ ಶರಣು ಹೋದ. ಅವರು ಆ ಚಿತ್ರದ ಮುಖ್ಯ ಹಕ್ಕನ್ನು ಕಾದಿರಿಸಿಕೊಂಡರು. ಕೆಲವು ಅಸ್ಪಷ್ಟ ಶರ್ತಗಳನ್ನು ಸೇರಿಸಿದರು. ಮೈಸೂರಿಗೆ ಅವರೂ ಬಂದು ಅವನ ಜತೆಗೆ ಬಂದು ಬಿಡಾರಹೂಡಿದರು. ಚಿತ್ರ ಮುಗಿಯುವ ತನಕ– ಬರಿಯ ವೆಚ್ಚಕ್ಕೆ ತಕ್ಕ ದುಡ್ಡು ಕೊಟ್ಟರು. ಮನೋಹರ ಮನಸ್ಸಿಲ್ಲದೆಯೆ ಕುಸುಮೆಯನ್ನು ನಾಲ್ಕೆಂಟು ಬಾರಿ ಸೆಟ್ಟರ ಜತೆಗೆ ಬೃಂದಾವನಕ್ಕೂ ಕಳುಹಿಸ

ಬೇಕಾಯಿತು. ಅಂತು ತೊಡಗಿದ ಚಿತ್ರ ಮುಗಿಯಿತು. ಆ ವೇಳೆಯಲ್ಲಿ ಕುಸುಮೆ ಮಾತ್ರ ಎರಡು ಮೂರು ಸಾವಿರ ರೂಪಾಯಿಗಳಷ್ಟು ಹಣವನ್ನು ಸೆಟ್ಟರಿಂದ ಸೆಳೆದುಕೊಂಡು ತನ್ನ ಊರಿಗೆ ಕಳುಹಿಸಿದಳು.

ಈ ಚಿತ್ರ ಮುಗಿಯುವುದರೊಳಗಾಗಿ, ಮನೋಹರ, ಸುಬ್ಬರಾಯನ ಮೂಲಕ, ಅವನ ಹೊಸ ಸಾಮಾಜಿಕ ಚಿತ್ರವಾದ 'ಬೆಳದಿಂಗಳ ರಾತ್ರಿ'ಯ ಪ್ರಚಾರ ಕಾರ್ಯ ಬಿರುಸಿಂದ ನಡೆಯಿಸಿದ. ಕುಸುಮೆಯನ್ನು ಸ್ವರ್ಗಕ್ಕೇರಿಸಿದ. ನಿರ್ದೇಶಕ, ನಟನಾದ ಮನೋಹರ ನವಿಚಾರದಲ್ಲೂ ಲೇಖನಗಳು ಬಂದುವು. ರಜತ ಪರದೆಯಲ್ಲಿ ಬಾರದಿದ್ದ ಒಂದೇ ಒಂದು ವಸ್ತುವೆಂದರೆ –ಅವನ ಚಿತ್ರ ಮಾತ್ರ. ಯಾಕೆ ಹಾಗಾಯಿತು? ಏನಾಯಿತು ಎಂದು ಒಬ್ಬರೂ ಹೇಳುವವರಿಲ್ಲ. ಸೆಟ್ಟರ ಅಸೂಯೆಯೇ ಅದಕ್ಕೆ ಕಾರಣ ಎನ್ನುತ್ತಾನೆ ಮನೋಹರ. ಆ ಚಿತ್ರ ಅವನ ಕೈಬಿಟ್ಟರೂ ನಟಿ ಕುಸುಮಾ ಅವನ ಕೈ ಬಿಡಲಿಲ್ಲ. ಕೈ ಹಿಡಿದೇ ತನ್ನ ಪ್ರೇಮದ ಋಣವನ್ನೆಲ್ಲ ಸಲ್ಲಿಸಿದಳು.

ಚಿತ್ರ ಮುಗಿಯುತ್ತ ಬಂದಂತೆ ಕುಸುಮೆಯ ಆರೋಗ್ಯವೂ ಕೆಡುತ್ತ ಬಂದಿತು. ಆಗಾಗ ಕೆಮ್ಮ ತೊಡಗಿದಳು. ಮೆಲ್ಲಗಿನ ಜ್ವರ ಅವಳನ್ನು ಬಾಧಿಸತೊಡಗಿತು. ಕೃಶಳಾಗುತ್ತ ಬಂದಳು. ಚಿತ್ರದ ಕೆಲಸ ಮುಗಿದ ಮೇಲಂತು, ಆಕೆ ಸಂಪೂರ್ಣ ಹಾಸಿಗೆಯನ್ನು ಹಿಡಿಯುವಂತಾಯಿತು. ಮನೋಹರ ಕಂಗಾಲಾಗಿ ಅವಳನ್ನು ಬೆಂಗಳೂರಿಗೆ ಕರೆದುತಂದು ಬಿಡಾರ ಮಾಡಿದ. ಕೆಮ್ಮಿನೊಡನೆ ರಕ್ತ ಬರುವುದನ್ನು ಕಂಡು ತೀರ ಗಾಬರಿಯಾದ. ವೈದ್ಯರನ್ನು ಕರೆದು ತಂದ. ಎಕ್ಸ್-ರೇ ಆಯಿತು. "ಇದು ಉಲ್ಬಣಿಸುತ್ತಿರುವ ಕ್ಷಯ" ಎಂಬ ಎಚ್ಚರಿಕೆಯನ್ನು ವೈದ್ಯರು ಕೊಟ್ಟರು. ಯಾರಾರ ಕಾಲುಗಳನ್ನು ಹಿಡಿದು ಅವಳನ್ನು ಕ್ಷಯರೋಗಿಗಳ ಆಸ್ಪತ್ರೆಗೆ ಸೇರಿಸಿದ್ದಾಯಿತು. 'ನಾಗೇಂದ್ರನಿಗೆ ತಿಳಿಸ ಬೇಕೇ ಬೇಡವೆ?' ಎಂಬ ಭಯ ಮನೋಹರನಿಗೆ. ತಿಳಿಸಿದರೆ 'ತನ್ನ ತಂಗಿಯನ್ನು ವೇಳೆ ಮೀರಿ ದುಡಿಸಿ, ಈ ಆಪತ್ತನ್ನು ತಂದು ಕೊಟ್ಟವರು ನೀವೇ' ಎಂದರೇನು ಗತಿ! ಈ ಭಯದಿಂದ ಹದಿನೈದು ದಿನಗಳ ಕಾಲ ಸುಮ್ಮನೆ ಕುಳಿತ. ರೋಗಿಯ ಸ್ಥಿತಿ ಸುಧಾರಿಸಲಿಲ್ಲ. ಕ್ಷಯ ರೋಗದಿಂದ ಅವಳು ನರಳುತ್ತಿದ್ದಂತೆ, ಮನೋಹರನ ಭವರೋಗಗಳೂ ಅವಳಿಗೆ ಪ್ರಾಪ್ತವಾಗಿದ್ದವು. ಒಂದು ತಿಂಗಳು ಸರಿಯಿತು. ಕುಸುಮೆ ತಾನಾಗಿ ತನ್ನ ಅಣ್ಣನ ಬರವನ್ನು ಅಪೇಕ್ಷಿಸಿದಳು. ತಂತಿಕೊಟ್ಟ ಆತ

ಅವನನ್ನು ಕರೆಯಿಸಬೇಕಾಯಿತು. ಅದರಿಂದಾದ ಲಾಭವೆಂದರೆ— ತನ್ನ ಚಿಂತೆಯ ಜತೆಯಲ್ಲಿ ಮನೋಹರ, ನಾಗೇಂದ್ರನ ಬೈಗುಳನ್ನೂ, ನಿಂದೆಯ ಮಾತುಗಳನ್ನೂ ಕೇಳಬೇಕಾದುದು! ಒಂದೆರಡು ತಿಂಗಳುಗಳ ಕಾಲ, ಶ್ರಮದಿಂದ ಉಸಿರೆಳೆದುಕೊಂಡು, ಕುಸುಮ ಆಸ್ಪತ್ರೆಯಲ್ಲಿಯೇ ಕಾಲವಾದಳು. ಅವನ ಕೈಹಿಡಿದುಕೊಂಡೇ ಸತ್ತಳು. ಮನೋಹರನಿಗೆ ತನ್ನ ತಾಯಿಯ ಮೃತ್ಯುವಿನ ಕಾಲವಲ್ಲಿ ನೆರವಾಗದಿದ್ದರೂ, ಪ್ರೇಯಸಿಯ ಅಂತಿಮ ಗಳಿಗೆಯ ನೋವನ್ನು ಕಂಡು ನರಳುವ ಭಾಗ್ಯವೇನೋ ಸಂಪೂರ್ಣ ದೊರೆಯಿತು. ಆ ದುಃಖ ಅವನನ್ನು ತಲ್ಲಣಿಸದಿರಲಿಲ್ಲ. ಆದರೆ ಅದೇ ವೇಳೆಗೆ ತಂಗಿಯನ್ನು ಕಳೆದುಕೊಂಡ ನಾಗೇಂದ್ರ ಕಾರಿದ ನಂಜು, ಉರಿಗಳು— ಮನೋಹರನ ಮನಸ್ಸನ್ನು ಬೇಯಿಸದಿರಲಿಲ್ಲ. ಆತನೇ ಕುಸುಮೆಯ ಅಂತಿಮ ಯಾತ್ರೆಗೆ ಬೇಕಾದ ಕಾಸನ್ನು ಯಾರಾರದೋ ಕಾಲು ಹಿಡಿದು, ತರಬೇಕಾಯಿತು. ಮೇಲೆ, 'ತಂಗಿಯ ದುಡಿಮೆಯ ವೇತನ ಇಂತಿಷ್ಟು ತನಗೆ ಕೊಡು' ಎಂದು ಯಮನಂತೆ ಬೆನ್ನಟ್ಟಿ ಬರುತ್ತಿದ್ದ ನಾಗೇಂದ್ರನ ಪೀಡೆ ಸಹಿಸದಾಯಿತು. ಮನೋಹರನಿಗೆ ಏನು ಮಾಡುವುದಕ್ಕೂ ತೋರಲಿಲ್ಲ. ಗೆಳೆಯ ಸುಬ್ಬರಾಯನಲ್ಲಿಗೆ ಓಡಿದ. ತನ್ನ ಮಿತ್ರನ ವಿಷಯದಲ್ಲಿ ಅವನಿಗೆ ಮರುಕವಾದರೂ, ಆತ ಆರ್ಥಿಕ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ಒಂದು ಉಪಾಯ ಹೇಳಿದ. "ನಾಳೆ ಲಚ್ಚಯ್ಯ ಸೆಟ್ಟರಿಂದ ಹಣ ಬರುತ್ತದೆ; ಅವಳ ಲೆಕ್ಕದ ಋಣ ಮುಗಿಸುತ್ತೇನೆ–ಅನ್ನು. ಇವತ್ತು ರಾತ್ರಿ ಗುಂತಕಲ್ಲಿನ ಗಾಡಿಯನ್ನು ಹಿಡಿದು ಬಿಡು" ಎಂದು ಆತ ಉಪದೇಶ ಮಾಡಿದ.

ರಾತ್ರಿ ಒಂಬತ್ತು ಘಂಟೆಗೆ ನಾಗೇಂದ್ರ ಮನೋಹರನ ಕೋಣೆಗೆ ಬಂದು ಕಾವಲು ಕುಳಿತುಕೊಂಡ. ರಾತ್ರಿ ಸರಿದು ಬೆಳಗಾಯಿತು. ಬೆಳಗು ಸರಿದು ತಿರುಗಿ ಸಂಜೆಯಾಯಿತು. ಸಂಜೆ ಸರಿದು ತಿರುಗಿ ರಾತ್ರಿಯಾಗುತ್ತದೆ ಎಂದು ಗೊತ್ತು. ಅಷ್ಟಾಗುತ್ತಲೆ 'ಮನೋಹರ ಊರು ಬಿಟ್ಟು ಓಡಿದ್ದಾನೆ' ಎಂಬುದು ಅವನಿಗೆ ಖಚಿತವಾಯಿತು. ಆಗವನು ತನ್ನಂತೆ ಊರಿನ ಹಾದಿಯನ್ನು ಹಿಡಿಯಬೇಕಾಯಿತು.

ರೈಲಿನಲ್ಲಿ ತಲೆ ಮರೆಸಿಕೊಂಡು ಹೊರಟ ಮನೋಹರ, ತನ್ನನ್ನು ತಾನು ಮರೆಯುವುದು ಮಾತ್ರ ಶಕ್ಯವಲ್ಲದ ಮಾತು. ಸಾವು ಸೋಲುಗಳೆರಡೂ ಅವನನ್ನು ಕವಿಯುತ್ತಿದ್ದವು. ಮೂಕರಂತೆ ಮೂರನೆಯ ವರ್ಗದ

ಪಯಣಿಗರೆಡೆಯಲ್ಲಿ, ಆ ಸಿಗ್ಗು, ಗದ್ದಲದಲ್ಲಿ ಕುಳಿತಿದ್ದ. ಕುಳಿತಿರುವುದಕ್ಕೆ ಜಾಗ ಸಾಲದ ಇಕ್ಕಟ್ಟು ಅಂದಿನದು. ಜನಗಳೆಡೆಯಲ್ಲಿ ಕುಳಿತು, ಮೈಗೂ ನೆಮ್ಮದಿಯಿಲ್ಲದೆ, ಮನಸ್ಸಿಗೂ ಶಾಂತಿಯಿಲ್ಲದೆ ಒದ್ದಾಡುತ್ತಿದ್ದ. ಆಚೀಚಿನ ಜನಗಳ ಪರವೆಯಿರಲಿಲ್ಲ. ಯಾರ ಮಾತುಕತೆಗಳೂ ಬೇಡವಾಗಿದ್ದುವು.

ಕತ್ತಲು ಹೊರಟ ಬಂಡಿಯಲ್ಲಿ ಅವನಿಗೆ ನಿದ್ರೆ ಬರುವಂತಿರಲಿಲ್ಲ. ನಿದ್ರೆಯ ಬದಲು ಯೋಚನಾ ತರಂಗಗಳು ಕುಣಿದಾಡುತಿದ್ದುವು. ಕುಸುಮಳ ಚಿತ್ರವನ್ನು ಎಂದೂ ಮರೆಯಲೊಲ್ಲ. ಅವಳ ಚೆಲುವನ್ನೆಲ್ಲ ತಾನು ಹೀರಿಯೋ ಕೊಂಡೆ--ಎಂಬ ಪಶ್ಚಾತ್ತಾಪ ಬರುತಿತ್ತು. ಆದರೂ ಅವಳು ಅವನಿಗಾಗಿ ದುಡಿದಳು; ಬಾಳಿದಳು. ಅಣ್ಣನ ಒತ್ತಾಯಕ್ಕಷ್ಟೇ ಅವನೊಡನೆ ಹಣಕ್ಕಾಗಿ ಕಾಡಿದಳು. ಅದನ್ನು ಬಾಯಿಬಿಟ್ಟೂ ಹೇಳಿದ್ದಳು. ಅಂಥವಳು ತನ್ನ ಕಣ್ಣೆ ದುರಿಗೆ ಕಡ್ಡಿಯಂತೆ ಕೃಶವಾದ ಚಿತ್ರವು ಅವನ ಮುಂದೆ ಸುಳಿದಾಡಿತು. ಅವಳನ್ನು ಕುರಿತು ಚಿತ್ರಿಸಿಯೋ ಒಂದು ಕತೆ ಮಾಡುತ್ತೇನೆ-ಅವಳ ಸ್ವಾಮಿ ಭಕ್ತಿ, ತ್ಯಾಗಗಳನ್ನು ಅಮರವನ್ನಾಗಿ ಮಾಡುತ್ತೇನೆ-ಎಂದು ಯೋಚಿಸಿದ.

ಅದರಿಂದಾಗಿ, ಅವಳು ನಟಿಸಿದ, ಅದೂ ತನ್ನ ಪ್ರೇಯಸಿಯಾಗಿ ನಟಿಸಿದ, "ಬೆಳುದಿಂಗಳ ರಾತ್ರಿ"ಯು ನೆನಪಾಯಿತು. ಶೆಟ್ಟರು ಏನು ಮಾಡಿದರು ಆ ಚಿತ್ರವನ್ನು? ತಾವೆಲ್ಲ ಅದರ ಖಾಸಗಿ ಪ್ರಯೋಗವನ್ನು ಕಂಡು ಹಿಗ್ಗಿದವರಲ್ಲವೆ! ಅದೊಂದು ಕೀರ್ತಿ ತರುವ ಚಿತ್ರವಾಗಿತ್ತು. ಆದರೆ ಅದಕ್ಕೆ ದುಡ್ಡು ಚೆಲ್ಲಿದ ಶೆಟ್ಟರು ಆ ಸುದ್ದಿಯನ್ನೆತ್ತದೆ ತಣ್ಣಗಿರುವ ಕಾರಣವೇನು? ಅದೇ ಅವನಿಗೆ ಅರ್ಥವಾಗಲೊಲ್ಲದು. ಅದು ಮುಂದೊಂದು ದಿನ ಬೆಳಕಿಗೆ ಬೀಳದಿರಲಾರದೇ---ತಾನೂ, ಕುಸುಮೆಯೂ ನಟಿಸಿದ ಚಿತ್ರ ಜನರನ್ನು ಮುಗ್ಧಗೊಳಿಸಿ-ತಾನೊಬ್ಬ ನಟ, ನಿರ್ದೇಶಕನೆಂದು ಜಗತ್ತಿಗೆ ಸಾರಲಾರದೇ-ಮಾಡಿದ್ದೆಲ್ಲ ಹೀಗೆ ಮಣ್ಣುಗೂಡುತ್ತಿರಲು ತಾನು ಮಾಡಿದ ಅಪರಾಧವೇನು? ಪ್ರಾಮಾಣಿಕವಾಗಿ ಕಲಾಸೇವೆಗಾಗಿ ದುಡಿದುದು ತಪ್ಪೇ-ಎಂದು ಏನೇನೋ ಚಿಂತಿಸತೊಡಗಿದ.

ಅಲ್ಲಿಂದ ಬರಿದಾದ ತನ್ನ ಕಿಸೆಯು ನೆನಪಾಯಿತು. ದಾರಿಯ ಖರ್ಚಿಗಷ್ಟು ಸುಬ್ಬರಾಯ, ಎಲ್ಲಿಂದಲೋ ಸಾಲಮಾಡಿ ಅವನಿಗೆ ಹಣ ಒದಗಿಸಿ ಪಾರುಮಾಡಿದ್ದ. ಅವನ ಪಯಣ ಮುಂಬಯಿಗೆ ಸಾಗುತ್ತಿದೆ. ಮುಂಬಯಿಯೋ - ದೊಡ್ಡ ನಗರ. ಅಲ್ಲಿಗೆ ಹೋಗಿ ಬರಿಗೈಯಿಂದ ಇಳಿಯುವು

ದೆಂತು? ತನ್ನನ್ನು ಅಲ್ಲಿ ಸಾಕುವವರಾರು, ಗುರುತಿಸುವವರಾರು— ಎಂಬ ಒಂದೊಂದೇ ನಿರಾಶೆಯ ಚಿತ್ರ ಕಟ್ಟತೊಡಗಿತು. ಆದರೂ ಆ ಜನರಲ್ಲಿ ಒಬ್ಬನಾದರೂ ಗುರುತಿನವ ಸಿಗಬಹುದು ಎಂದು ಸ್ಮೃತಿಪಟಲದಲ್ಲಿ ದೊರೆತ ಮಿತ್ರರನ್ನೆಲ್ಲ ಹುಡುಕಿದ. ಅವರನ್ನು ಮುಂಬಯಿಯಲ್ಲಿ ಕಾಣಲು ಬಯಸಿದ.

ಅಲ್ಲಿಂದ ಮುಂದಕ್ಕೆ ಜೀವನ ಹೇಗೆ? ಇದೇ ಚಲಚ್ಚಿತ್ರ ರಾಜ್ಯವೇ- ಎನ್ನುವ ಪ್ರಶ್ನೆ ಬರುತ್ತಲೇ, ಮನಸ್ಸು ತಿರುಗಿ ತತ್ತರಿಸಿತು. ಲಾಹೋರು, ಬೆಂಗಳೂರು — ಎರಡು ನಗರಗಳ ಅನುಭವವಾಗಿತ್ತು. ಮುಂಬಯಿಯಲ್ಲಿ ಅವನನ್ನು ಮೀರಿಸುವವರಿದ್ದಾರೆ. ಘಟಾನುಘಟಿಗಳೇ ಅಲ್ಲಿನ ಸಿನೆಮಾ ರಾಜ್ಯದಲ್ಲಿದ್ದಾರೆ; ತಾರೆಯರ ಬೆಲೆ ಅತ್ಯಧಿಕ; ನಿರ್ದೇಶಕರ ಜಂಬ ತುಂಬ. ಅಲ್ಲಿ ಹೊಸಬನಾದ ತಾನು ಬದುಕುವ ಭರವಸೆಯಿಲ್ಲ- ಎಂದು ತೋರಿ ಮನಸ್ಸು ಇನ್ನೆಲ್ಲಿಗೋ ಹರಿಯಿತು.

ತನಗೆ ಇಷ್ಟೆಲ್ಲ ವಿದ್ಯೆಗಳು ಬರುತ್ತ ತಾನು ಜೀವನ ಸಾಗಿಸಲಾರೆನೇ- ಅಷ್ಟು ನಿರಾಶೆಯಾಗಬೇಕೇ ಎಂದು-ಅನಿಸಿತು. ಚಿತ್ರದಿಂದ ನಾಟ್ಯಕ್ಕೆ ಮನ ಸರಿಯಿತು. 'ಅದರ ಅಭ್ಯಾಸವೂ ತನಗಾಗಿದೆ-- ಇನ್ನೇನು ಭಯ? ತನ್ನದೇ ಒಂದು ಗುಂಪು ರಚಿಸಿದರೆ, ನಾಲ್ಕು ಸ್ಟುಡಿಯೋಗಳಿಂದ ಕರೆ ಬಂದೇ ಬರುತ್ತದೆ-ಎನಿಸಿತು. ಆದರೆ ಮುಂಬಯಿ ವ್ಯವಹಾರೀ ಲೋಕ. ಅದಕ್ಕೆ ತಕ್ಕಂತಿರಬೇಕು. ಹಿಮ್ಮೇಳ ಕೂಡಿಸುವುದು ಕಷ್ಟವಾದರೂ, ಚೆಲುವಿನ ನರ್ತಕಿಯರ ಗುಂಪಿಲ್ಲದೆ ನರ್ತನ ಕಾಣುವವರಿಲ್ಲ ಎಂದು ತೋರಿತು. ಆಗ ತಿರುಗಿ ಮನಸ್ಸು ಹಿಂದಣ ಸ್ನೇಹಿತರನ್ನು ನೆನವರಿಸಿತು. ಕುಸುಮ ಇಲ್ಲ; ಕಾಮಾಕ್ಷಿ ತಕ್ಕವಳಲ್ಲ. ಬಂದರೆ 'ಇಂದಿರಾ ಆಗಬಹುದು; ಅವಳು ಕುಣಿತ ಬಲ್ಲವಳು. ಸಿನೆಮಾ ಗತ್ತಿಗೆ ಅವಳನ್ನು ತಿರುಗಿಸಿಕೊಳ್ಳಬೇಕು. ರೂಪ, ಯೌವನ— ಎರಡೂ ಇವೆ. ಮುಂಬಯಿ ಸೇರಿ, ಒಂದು ಜಾಗ ಹಿಡಿದು, ಪೂರ್ವಪೀಠಿಕೆ ಮಾಡಿದ ಬಳಿಕ- ಅವಳನ್ನು ಕರೆಸುತ್ತೇನೆ. ದುಡ್ಡು ಕೊಟ್ಟರೆ ಬರುವವಳೇ. ಅವಳ ಗುರುತಿಂದಾಗಿ ಇನ್ನೊಬ್ಬಿಬ್ಬರೂ ಸಿಗಬಹುದು; ಹಾಗೆ ಮುಂಬಯಿಯಲ್ಲಿ ತರುಣ ಉಮೇದುವಾರರೂ ದೊರೆಯಬಹುದು. ಏನಿಲ್ಲದೆ ಹೋದರೆ, ಕಾಮಿನಿ ಸಂಪತ್ತು ಕೈಯಲ್ಲಿರುವ ತನಕ, ಜೀವನ ಕಷ್ಟಸಾಧ್ಯವಲ್ಲ ಎಂದು ತೋರಿತು. ಅದೇ ನೆನವರಿಕೆಯನ್ನು ಹೊರುತ್ತ ಪಯಣ ಮುಂದುವರಿಸಿದ.

ಅವನ ಮನಸ್ಸು ಇನ್ನೂ ಮೆರೆದಾಡುವ ಆಸಕ್ತಿಯಲ್ಲಿತ್ತು; ತನ್ನನ್ನು ಜಗತ್ತು ಮರೆತರೂ ಉತ್ತಮ ಕಲಾವಿದ ತಾನು ಎಂದೇ ಹೇಳುತಿತ್ತು. ಜೀವನದ ಸಮಸ್ಯೆ ಬಂತೆಂದರೆ "ಸ್ತ್ರೀ ಸಂಪತ್ತು ಸಹಾಯವಾದೀತು, ಆದರಲ್ಲಿ ನಾಚಿಕೆಯೇನಿಲ್ಲ"–ಎಂಬಷ್ಟು ನಯಭಾವ ವಿರಹಿತವಾಗಿತ್ತು.

ಅಂಥವ ಬಾಳಲಾರದೆ ಇನ್ನಾರು ಬದುಕಬೇಕು? ಬದುಕುವ ಅವನ ಹಟ ಮಾತ್ರ ಅಚಲ; ದಾರಿಯಷ್ಟು ಮುಖ್ಯವೆನಿಸಲಿಲ್ಲ; ಎನಿಸಿರಲೂ ಇಲ್ಲ.

# ಒಂಬತ್ತನೆಯ ಅಧ್ಯಾಯ

ಮನೋಹರನನ್ನು ಕಳೆದುಕೊಂಡ ಮಂಜುಳೆಗೆ ಪ್ರತಿಕ್ಷಣವೂ ಕಣ್ಣೆದುರಿಗೆ ಅವನ ಮುಖವೇ ನಲಿದಾಡುವುದು ಕಾಣಿಸುತಿತ್ತು; ಕಿವಿಗಳಿಗೆ ಅವನ ಸವಿಮಾತುಗಳು ಕೇಳಿಸಿದಂತೆ ಆಗುತ್ತಿತ್ತು. ಅವನು ತನ್ನಿಂದ ದೂರವಾಗಿದ್ದಾನೆ ಎಂಬುದನ್ನು ನಂಬುವುದಕ್ಕೇ ಆಗುತ್ತಿರಲಿಲ್ಲ. ಬೇಸಗೆಯ ರಜೆ ಕಳೆಯುವ ತನಕ ಅವಳು ತನ್ನ ಮನಸ್ಸಿನಲ್ಲಿ ಅವನನ್ನೇ ತುಂಬಿಸಿಕೊಂಡಿದ್ದಳು. ಲಾಹೋರಿನ ಸಿನೆಮಾ ರಾಜ್ಯದಿಂದ ಬಂದ ಅವನ ಪತ್ರ ನಿಜವೆಂದು ನಂಬುವುದಕ್ಕೂ ಅವಳಿಗೆ ಕಷ್ಟವಾಯಿತು. ತುಂಬ ನಿರಾಶೆಗೊಂಡಳು. ಇತ್ತ ಅವಳ ಅಣ್ಣ ರತ್ನಾಕರ, ಅವಳ ವಿಚಾರದಲ್ಲಿ ಹಬ್ಬಿದ ಸುದ್ದಿಗಳನ್ನು ಕೇಳಿ, ಅವಳ ಮೇಲೆ ಮದುವೆಯ ಒತ್ತಾಯವನ್ನು ಹೊರಿಸದಿದ್ದರೆ ತನಗೊಂದು ಕಳಂಕ ಬರುತ್ತದೆಂದು ಊಹಿಸಿದ. ಆ ಪ್ರಯತ್ನಮಾಡುವುದಕ್ಕೆ ಹೋದರೆ–ಹಬ್ಬಿದ ಸುದ್ದಿ, ಅವನ ಪ್ರಯತ್ನಗಳಿಗೂ ಅಡ್ಡಿಯನ್ನು ತಂದೊಡ್ಡಿತು. ಅವಳನ್ನು ಏನು ಮಾಡುವುದಕ್ಕೂ ಇರಲಿಲ್ಲ. ಆಕೆ ಇಂಟರ್ ಪಾಸಾದಳು. ತಾನು ಮಂಗಳೂರಿನಲ್ಲಿ ಕಾಲೇಜ್ ಶಿಕ್ಷಣ ಮುಂದುವರಿಸುತ್ತೇನೆಂದು ಹಟ ತೊಟ್ಟಳು. ಅದಕ್ಕಾಗಿ ಹಣ ಸುರಿಸಲು ಅಣ್ಣ ಸಿದ್ಧನಾಗಲಿಲ್ಲ. ಅವಳ ಅತ್ತಿಗೆಯೂ ಒಡಂಬಡಲಿಲ್ಲ. "ನಿನ್ನಿಂದ ಜನಗಳ ಬಾಯಿಂದ ಕೇಳುವ ಈ ಎಲ್ಲ ಅಪವಾದಗಳನ್ನು ಸಹಿಸುವುದಕ್ಕಾಗುವುದಿಲ್ಲ. ನಿನ್ನ ಮನಸ್ಸೇನೆಂದೇ ನಮಗೆ ಗೊತ್ತಾಗುವುದಿಲ್ಲ. ಮದುವೆ ಬೇಡೆನ್ನುವ ನೀನು ವಿಚಿತ್ರವಾದ ರೀತಿಯಲ್ಲಿ ಯಾರ್ಯಾರ ಸ್ನೇಹಮಾಡಿ ನಮ್ಮ ಕುಲದ ಮರ್ಯಾದೆ ಕಳೆಯುವ ಹಾಗಿದೆ" ಎಂದು ಸ್ಪಷ್ಟವಾಗಿ ನುಡಿದರು. ಮೊದಲೇ ಮುರಿದಿದ್ದ ಮನಸ್ಸನ್ನು ಸಂಪೂರ್ಣ ಮುರಿದುಕೊಳ್ಳುವಂತಾಯಿತು. ಮಂಜುಳೆಗೆ ಅತ್ತ ಮನೋಹರನ ಚಿಂತೆಯೂ, ಇತ್ತ ತನ್ನ ಭವಿಷ್ಯದ ಚಿಂತೆಯೂ ಒಂದುಗೂಡಿದುವು. ವಿನತೆಯ ದಾರಿಯನ್ನು ತಾನು ಹಿಡಿದರೇನು? ಮನೆಯಿಂದ ಮರೆಯಾದರೇನು–ಎಂಬ ಯೋಚನೆ ಮಾಡಿದಳು. 'ಕಲಿತ ತಾನು ಸ್ವತಂತ್ರ ಜೀವನ ನಡೆಯಿಸಬಲ್ಲೆ. ಪರರ ಹಂಗಿನ ಅನ್ನ ಬೇಡ' ಎಂದು ತನ್ನಷ್ಟಕ್ಕೆ ಅಂದುಕೊಂಡಳು.

ಮತ್ತೊಂದು ಆರು ತಿಂಗಳುಗಳ ಕಾಲ ಮುದ್ದೂರಿನಲ್ಲಿ ಬರಿದೆ ಕಾಲ

ಹಾಕಿದಳು. ಶಾರ್ಟ್‌ಹ್ಯಾಂಡ್, ಟೈಪ್‌ರೈಟಿಂಗ್‌ಗಳ ಅಭ್ಯಾಸ ನಡೆಯತೊಡಗಿತು. ಅಭ್ಯಾಸದಲ್ಲಿ ಔದಾಸೀನ್ಯ ತೋರಿಸಲಿಲ್ಲವಾದರೂ ಅವಳ ಮನಸ್ಸು ಶಾಂತಿ ತಾಳಿರಲಿಲ್ಲ. ಅವಳಲ್ಲಿ ಮನೋಹರನ ವಿಚಾರದಲ್ಲಿ ಸಂಪೂರ್ಣ ನಿರಾಶೆಯ ಜತೆಗೆ ಕೋಪವೂ ಉಂಟಾಗಿತ್ತು. ಆತ ನೋಡುವುದಕ್ಕೆ ಮಾತ್ರ ಸವಿಗಾರ, ಸತ್ಯವಂತ: ಎಂದೂ ಪ್ರಾಮಾಣಿಕನಲ್ಲ. ತನ್ನನ್ನು ಮೋಹದ ಬಲೆಯಲ್ಲಿ ಕೆಡೆದು, ಉಪಾಯವಾಗಿ ಶರೀರ ಸುಖವನ್ನು ಉಂಡು, ಇಷ್ಟು ನಿಷ್ಠುರವಾಗಿ, ನಿರ್ದಾಕ್ಷಿಣ್ಯವಾಗಿ ವಂಚಿಸಿ ಹೋಗಬೇಕಾದರೆ ಆತನ ಒಂದೊಂದು ನಗುವೂ ಕುಹಕದ ನಗುವಾಗಿತ್ತು--- ಎಂದೆಂದುಕೊಂಡಳು. ಮನೋಹರ ತನ್ನೊಬ್ಬಳೊಡನೆ ಹಾಗೆ ವರ್ತಿಸಿದ್ದಲ್ಲದೆ, ಇನ್ನೂ ಒಬ್ಬಿಬ್ಬರನ್ನು ವಂಚಿಸಿದ್ದಾನೆ — ಎಂಬ ಸುದ್ದಿಯನ್ನು ಯಾರಿಂದಲೋ ಕೇಳಿದಳು. ಅದೂ ನಿಜವಾಗಿರಬೇಕೆಂದು ನೆನೆದಳು. ತನ್ನ ಅವನ ಮಾನಸಿಕ ಸಂಬಂಧವನ್ನು ತೊಡೆದು ಹಾಕುವ ಪ್ರಯತ್ನ ಮಾಡಿದಳು. 'ಅಷ್ಟೊಂದರ ಮಟ್ಟಿಗೆ ತಾನು ಗೆದ್ದೆ; ಹಾಗಾದೆ ಒಬ್ಬ ವಂಚಕನ ಮಡದಿಯಾಗಿ ಬಾಳುವ ದುರ್ದೈವವಾದರೂ ತಪ್ಪಿತು' ಎಂದು ಸಂತೋಷಗೊಂಡಳು.

ಅದು ವಿರಹಗೊಂಡ ಮನಸ್ಸಿನ ಒಂದು ಪ್ರವಾಹವಾಗಿತ್ತು. ಆದರೆ ಅವಳಲ್ಲಿ ಸರಸ, ಸ್ನೇಹಗಳ ಸೌಖ್ಯವನ್ನುಂಡ ಶರೀರದ ಬಯಕೆ ಕೆರಳಿತ್ತು. ಅದು ದಿನೇ ದಿನೇ ಆ ಬಗೆಯ ಸುಖವನ್ನು ಕೋರುತ್ತಲೇ ಇತ್ತು. ತಾನು ಇನ್ನೊಮ್ಮೆ ವಂಚಿತಳಾಗಬಾರದೆಂಬ ಭಯವೊಂದಲ್ಲದಿದ್ದರೆ ಅವಳು ಸುಲಭವಾಗಿ ಇನ್ನಾವನ ಕಾಮದ ಕಣ್ಣಿಗೆ ಬಲಿಯಾಗುತಿದ್ದಳು.

ನಿಷ್ಠುರದ ಮನೆಯಲ್ಲಿ ಬೆಳೆದ ಅವಳು, ಒಂದು ದಿನ ಅಣ್ಣನೊಡನೆ "ನಾನು ಮುಂಬಯಿಗೆ ಹೋಗುತ್ತೇನೆ. ನನ್ನ ಜೀವನ ನಾನು ನಡೆಸಬಲ್ಲೆ. ನನ್ನ ಚಿಂತೆಯನ್ನು ನೀವು ಹೊರಬೇಕಾದುದಿಲ್ಲ. ನಮ್ಮ ತಂದೆ ನನಗಾಗಿ ಬಿಟ್ಟು ಹೋದುದನ್ನು ಕೊಡುವ ಇಚ್ಛೆ ಇದ್ದರೆ ಕೊಡು; ಇಲ್ಲವಾದರೆ ಬಿಡು" ಎಂದು ತನ್ನ ಪೆಟ್ಟಿಗೆಯನ್ನು ಕಟ್ಟಿದಳು.

ರತ್ನಾಕರ ಆ ಹಣವನ್ನು ಮುಳುಗಿಸುವ ಯೋಚನೆ ಮಾಡಿರಲಿಲ್ಲವಾದರೂ ಅದನ್ನು ನಿಡುವಾಯಿದೆಯ ಸಾಲವಾಗಿ ಯಾರಿಗೋ ಕೊಟ್ಟಿದ್ದ. ತಂಗಿಗೆ ಇಪ್ಪತ್ತೊಂದು ವಯಸ್ಸು ಮುಗಿಯುವ ಮೊದಲೇ ಅದನ್ನು ಕೊಟ್ಟನಾದರೆ, ಮುಂದೆ ತನಗೆ ತೊಂದರೆ ಬಂದೀತು. ಅವಳು ಪ್ರಾಯಭರಿತಳಾದ

ಮೇಲೆ ಏನೂ ಮಾಡಲಿ–ಎಂದು ಆತ ಯೋಚಿಸಿದ್ದ. ಅದನ್ನೇ ಸ್ಪಷ್ಟವಾಗಿ ಹೇಳಿದ.

"ಹೋಗುವ ಖರ್ಚಿಗೆ ನೂರು ರೂಪಾಯಿ ಕೊಡು. ಅಮ್ಮನ ಚಿನ್ನಾಭರಣಗಳನ್ನು ಕೊಡು" ಎಂದು ಮಂಜುಳೆ ಕೇಳಿದಾಗ, ಸುಮಿತ್ರೆ ಒಡಂಬಡದಿದ್ದರೂ, ಈತ ತಾನು ತಾಯಿಗೆ ಕೊಟ್ಟ ವಚನವನ್ನು ನೆನೆದು ಸುಮಿತ್ರೆಯಿಂದ ಹಳೆಯ ಆಭರಣಗಳನ್ನು ತೆಗೆದು, ಎಣಿಸಿಕೊಟ್ಟ. ಬುದ್ಧಿಗೇಡಿಯಾದ ತಂಗಿಯನ್ನು ಪೂರ್ಣ ತಬ್ಬಲಿಯನ್ನಾಗಿ ಮಾಡಬಾರದು ಎಂಬ ಸದ್ಭಾವನೆಯಿಂದ ತಾನು ರಜೆಯನ್ನು ಪಡೆದು ಅವಳನ್ನು ಮುಂಬಯಿಯ ತನಕ ಮುಟ್ಟಿಸಿಯೂ ಬಂದ. ತನ್ನ ದೂರದ ಸಂಬಂಧಿಕರೊಬ್ಬರಲ್ಲಿ, ಅವಳಿಗೆ ಇರುವುದಕ್ಕೆ ಅನುಕೂಲಿಸಿ ಕೊಟ್ಟ–"ಏನಾದರೊಂದು ಚಾಕರಿ ಹಿಡಿ. ಇವರು ನಮ್ಮ ಬಂಧುಗಳೇ. ಹುಚ್ಚು ದಾರಿ ಹಿಡಿಯಬೇಡ. ಇವರ ಮಾತುಗಳನ್ನು ಕೇಳಿಕೊಂಡಿರು. ದೇವರು ನಿನಗೆ ಮದುವೆಯಾಗುವ ಬುದ್ಧಿ ಕೊಟ್ಟರೆ ಆಗಲಾದರೂ ತಿಳಿಸು. ನೀನೇ ಯೋಗ್ಯ ವರನನ್ನು ಆರಿಸುವುದಾದರೂ ನನಗೆ ಸಂತೋಷ. ಮಂಗಳೂರಿನಲ್ಲಿ ಮಾಡಿದ ಹಾಗೆ ಮರ್ಯಾದೆ ಕಳೆದುಕೊಂಡ ಬಾಳು ನಡೆಸಿ, ನಿನ್ನ ಭವಿಷ್ಯವನ್ನು ಹಾಳುಮಾಡಿಕೊಳ್ಳಬೇಡ" ಎಂದು ಹಿತ ನುಡಿದ. ಮಂಗಳೂರಿನ ನೆನಪುಗಳು, ತನ್ನನ್ನೆ ಚುಚ್ಚಿದಂತೆ ಎಂದು ಮಂಜುಳೆ ಎಣಿಸಿದಳು. 'ನಾನು ಅಂಥವಳೆಂದು ನಿಮಗೆಲ್ಲ ಖಂಡಿತವಾಗಿ ತಿಳಿದ ಮೇಲೆ ಏನಾದರೇನಂತೆ ಎಂದು' ಆಕೆ ಮೂದಲಿಸಿಯೇ ಉತ್ತರ ಕೊಟ್ಟಳು. ಭಾರವಾದ ಮನಸ್ಸಿನಿಂದ ರತ್ನಾಕರ ಊರಿಗೆ ಮರಳಬೇಕಾಯಿತು. ತಾಯಿಗೆ ಕೊಟ್ಟ ತನ್ನ ಮಾತು ವ್ಯರ್ಥವಾಗುತ್ತದೆ ಎಂಬುದನ್ನರಿತುಕೊಂಡೇ ಆತ ಮನೆಗೆ ಮರಳಿದ. 'ತನ್ನ ಕೆಲಸ ತಾನು ಮಾಡಿದ್ದೇನೆ, ಆಕೆಗೆ ಒಳ್ಳೆಯದಾಗುವ ಯೋಗವಿದ್ದರೆ ಆಗುತ್ತಾಳೆ. ಅವರವರ ಹಣೆಯ ಬರಹ' ಎಂದು ಆತ ನಿಶ್ಚಿಂತನಾಗಬೇಕಾಯಿತು.

ಮಂಜುಳೆ ಮುಂಬಯಿಯಲ್ಲಿದ್ದ ಎರಡು ವರ್ಷಗಳ ತನಕವೂ ಅಣ್ಣನಿಗೆ ಪತ್ರ ಬರೆಯಲಿಲ್ಲ. ತಾನು ಬದುಕಿದ್ದೇನೋ ಸತ್ತಿದ್ದೇನೋ-- ಎಂದೂ ತಿಳಿಸಲಿಲ್ಲ. ಅವಳು ಎಲ್ಲದಕ್ಕೂ ತಿಲಾಂಜಲಿಯನ್ನಿತ್ತು ಬಂದವಳು. ಅಣ್ಣನ ಮೇಲೆ ಮಮತೆ ಉಳಿದಿದ್ದರಲ್ಲವೆ ಪತ್ರ ಬರೆಯುವುದು? ಅಲ್ಲದೆ ಸ್ವತಂತ್ರಳಾದ ಅವಳಿಗೆ ಮುಂಬಯಿ ನಗರ ಸ್ವೇಚ್ಛಾವಿಹಾರದ ನಂದನ ವನ

ವಾಗಿ ಕಂಡಿತು. ಅಲ್ಲಿ ಎಂಥೆಲ್ಲ ಆಕರ್ಷಣೆಗಳಿದ್ದವು! ಬೆಡಗಿನ ಜೀವನ ನಡೆಸ ಬಹುದು. ಅವಳ ಮನಸ್ಸಿನ ಹುಚ್ಚು ಪ್ರವಾಹಕ್ಕೆ ಹೆರವರ ಯಾವ ಹತೋಟಿಯೂ ಇದ್ದಿರಲಿಲ್ಲ. ಒಂದೆರಡು ತಿಂಗಳು ಕೆಲಸ ದೊರಕಿಸುವ ಪ್ರಯತ್ನದಲ್ಲಿಯೇ ಅವಳ ಸಮಯ ಸರಿಯಿತು. ಇನ್ಶೂರೆನ್ಸ್ ಕಂಪೆನಿಯೊಂದರಲ್ಲಿ—ತಿಂಗಳಿಗೆ ನೂರು ರೂಪಾಯಿ ವೇತನದ ಒಂದು ಚಾಕರಿಯನ್ನು ದೊರಕಿಸಿಕೊಂಡಳು. ಅವಳ ಮನಸ್ಸಿಗೊಪ್ಪುವ ಸ್ನೇಹಿತರೂ ದೊರೆತರು. ನಿತ್ಯವೂ ಆಫೀಸ್ ಉದ್ಯೋಗ, ಅನಂತರ ವಿಹಾರ, ಸಿನೆಮ, ಮೊದಲಾದ ವಿನೋದಗಳಲ್ಲಿ ವೇಳೆ ಕಳೆಯತೊಡಗಿದಳು. ತನಗೆ ಆಶ್ರಯ ಕೊಟ್ಟ ದೂರದ ಸಂಬಂಧಿಗಳಲ್ಲಿ ಅನುಕೂಲತೆ ಸಾಲದುದಕ್ಕಾಗಿ ಗೊಣಗಿದಳು. ಅವರೋ, ಬಡ ಸಂಸಾರಿಗಳು! ಇವಳಂತೆಯೇ ಆ ಮನೆಯ ಯಜಮಾನನೂ ಒಬ್ಬ ಸಾಮಾನ್ಯ ನೌಕರ. ಯಜಮಾನ ಶಂಕರ ರಾಯನಿಗೆ ಸಾಕುವುದಕ್ಕೆ ಸ್ವಂತದ ನಾಲ್ವರು ಮಕ್ಕಳಿದ್ದಾರೆ; ತಾಯಿ ಇದ್ದಾಳೆ; ಅಶಕ್ತ ಪತ್ನಿಯೂ ಇದ್ದಾಳೆ. ಅದರಲ್ಲಿಯೂ ಎರಡು ತಿಂಗಳ ಕಾಲ ಧರ್ಮಾರ್ಥ ಊಟವನ್ನು ಮಂಜುಳೆಗೆ ಕೊಟ್ಟ. ಮುಂದೆ ಅವಳು ತಿಂಗಳಿಗೆ ಮೂವತ್ತು ರೂಪಾಯಿಗಳಂತೆ ಹಣವನ್ನೇನೋ ತೆರತೊಡಗಿದಳು. ಶಂಕರ ರಾಯನಿಗೆ ಆ ಹಣ ಕಡಿಮೆ ಎಂದು ತೋರಲಿಲ್ಲವಾದರೂ—ಬೆಳಗ್ಗೆ ತಿರುಗಾಟ, ಸಂಜೆ ತಿರುಗಾಟ, ರಾತ್ರೆ ಮನೆಗೆ ಬರುವುದು ಎಂದೋ ಏನೋ—ಇವನ್ನೆಲ್ಲ ಕಂಡು ಬೇಸರವಾಯಿತು. ಅವನ ಹೆಂಡತಿ ರಾತ್ರಿ ಒಂಬತ್ತು ಹತ್ತು ಘಂಟೆಯ ತನಕ ಇವಳಿಗಾಗಿ ಕಾದು, ಅನ್ನ ಬಡಿಸಿ, ಮನೆಗೆಲಸ ಮುಗಿಸುವುದು ಕಷ್ಟವಾಗಿತ್ತು. ಶಂಕರ ರಾಯ ಬುದ್ಧಿ ಹೇಳಿ ನೋಡಿದ. ತಮ್ಮ ಅಡಚಣೆ ತೋಡಿಕೊಂಡ. ಅವನ ಹೆಂಡತಿ ಪ್ರತ್ಯಕ್ಷದಲ್ಲೂ ಗೊಣಗಿದಳು. ಆದರೆ ಮಂಜುಳೆಯ ಆಗಮನ ನಿರ್ಗಮನಗಳಲ್ಲಿ ವ್ಯತ್ಯಾಸವಾಗಲಿಲ್ಲ. ಅವನು ರತ್ನಾಕರ ರಾಯನಿಗೆ ಪತ್ರ ಬರೆದ. ಪತ್ರಕ್ಕೆ ಉತ್ತರವಾಗಿ ಅವನಿಂದ ವ್ಯಥೆ ತುಂಬಿದ ಕಾಗದವೂ ಬಂದಿತು. ಇವಳಿಗೂ ಆತ ಬರೆದ "ಹಾಗೆಲ್ಲ ಮಾಡಬೇಡ. ನಮ್ಮವರೆಂದು ಅವರು ಆಶ್ರಯ ಕೊಟ್ಟಿರುವಾಗ ಅವರ ಸುಖದುಃಖಗಳನ್ನು ನಾವೆಣಿಸದೆ ಹೋದರೆ ಹೇಗೆ?" ಎಂದು ಉಪದೇಶಿಸಿ ಬರೆದ. ಆ ಪತ್ರವು ಅವಳ ಕೈಗೆ ಸಿಗುವ ಮುಂಚೆಯೆ ಮಂಜುಳೆ ತನ್ನ ಬಿಡಾರ ಬದಲಿಸಿದ್ದಳು. ತನ್ನಂತೆಯೆ ಸ್ವತಂತ್ರರಾಗಿರುವ ನಾಲ್ವರು ಗೆಳತಿಯರನ್ನು ಕೂಡಿಕೊಂಡು ಒಂದು ಬಿಡಾರವನ್ನು

ದಾದರಿನಲ್ಲಿ ಹೂಡಿದಳು. ಅಲ್ಲಿಗೆ ಹೊಟೇಲಿನ ಊಟ ತರಿಸುವುದಕ್ಕೆ ಒಬ್ಬ ಆಳನ್ನೂ ನೇಮಿಸಿಕೊಂಡರು. ಬಂಧುಬಾಂಧವರಿಂದ ಸಂಪೂರ್ಣವಾದ ಸ್ವಾತಂತ್ರ್ಯ ದೊರಕಿಸಿಕೊಂಡಳು. ಅಲ್ಲಿಂದ ಮುಂದೆ ರತ್ನಾಕರ ರಾಯನಿಗೆ ತಂಗಿಯ ವಿಚಾರದ ಸುದ್ದಿಗಳು ಬರುವುದೇ ನಿಂತಿತು. ಮುಂಬಯಿಯಿಂದ ಮುದ್ದೂರಿಗೆ ಬರುವ ಯಾರಾದರೂ ಅವಳನ್ನು ಕಂಡ ಸುದ್ದಿ ಹೇಳುತ್ತಾರೆ. 'ಯಾರೊಡನೆ ಕಂಡೆ' ಎಂದು ಹೇಳುತ್ತಾರೆ. ಅಂಥ ವಾರ್ತೆಗಳಿಂದ 'ಇದು ಕೈ ತಪ್ಪಿದ ಬದುಕು' ಎಂಬ ಅನುಮಾನ ಅವನಿಗೆ ಇನ್ನಷ್ಟು ಸ್ಪಷ್ಟವಾಯಿತು. ಅವಳಿಂದಾಗಿ ಕುಲಕ್ಕೆ ಕೆಟ್ಟ ಹೆಸರು ಬಾರದಿದ್ದರೆ ಸಾಕು, ಎಂಬುದಷ್ಟೇ ಅವನ ಪ್ರಾರ್ಥನೆ. ಸುಮಾರು ಎರಡು ಮೂರು ವರ್ಷಗಳ ಬಳಿಕ, ರತ್ನಾಕರ ರಾಯ ನಿರೀಕ್ಷಿಸಿದಂಥ ಪತ್ರವೇ ಅವನಿಗೆ ಬಂದಿತು. ಮಂಜುಳೆ "ನನಗೆ ಹಣದ ಅಡಚಣೆ ತುಂಬಾ ಇದೆ. ನಾನು ಯಾರನ್ನೋ ಮದುವೆಯಾಗುವ ನಿಶ್ಚಯಮಾಡಿದ್ದೇನೆ. ಮದುವೆಯ ವೆಚ್ಚಕ್ಕೆ ಹಣಬೇಕಾಗಿದೆ. ಅದು ಜಾತಿಯೊಳಗಿನ ಸಂಬಂಧವಲ್ಲವಾದುದರಿಂದ, ನೀವಾರೂ ಬರಲಾರಿರಿ ಎಂಬುದು ನನಗೆ ಗೊತ್ತು. ಹಣವನ್ನು ಕಳುಹಿಸಿದರೆ ಸಾಕು" ಎಂದಷ್ಟೆ ಬರೆದಿದ್ದಳು.

ತಿರುಗಿ ಅವನು ಯೋಚನೆಗೀಡಾಗಬೇಕಾಯಿತು. "ಮದುವೆಯಾಗುವುದಾದರೆ ಆಗಲಿ. ಯಾರನ್ನು ಬೇಕಾದರೂ ಆಗಲಿ. ಸುಖವಾಗಿ ಇರಲಿ. ಆದರೆ ಒಡಹುಟ್ಟಿದ ಅಣ್ಣನೊಡನೆ ಒಂದಿಷ್ಟು ಸುದ್ದಿಯನ್ನು ಬರೆಯಲಾಗದ ಹಾಗೆ 'ಮದುವೆ' ಎಂಬ ಸುದ್ದಿಯನ್ನು ಹೇಳಿದರೆ ನಂಬುವುದಕ್ಕಾಗುವುದಿಲ್ಲ. ಒಟ್ಟಾರೆ ಶೋಕಿಮಾಡಿ ಈ ಹಣ ಹಾಳು ಮಾಡುತ್ತಾಳೆ. ಕಳುಹಿಸಲೇ, ಬೇಡವೇ" ಎಂದು ಎಷ್ಟೆಷ್ಟೋ ಯೋಚಿಸಿದ; ಮುಂದಿನ ದಾರಿ ತೋರಲಿಲ್ಲ. "ಅವಳ ಹಣವದು; ಅವಳಿಗೀಗ ಪ್ರಾಯ ಬಂದಿದೆ. ನಾನು ಅದನ್ನು ಇರಿಸಿಕೊಂಡರೂ ತಪ್ಪು" ಎಂದು ದುಃಖದ ಮನಸ್ಸಿನಿಂದಲೇ ಐದು ಸಾವಿರ ರೂಪಾಯಿಗಳಿಗೂ ಡ್ರಾಫ್ಟ್ ತರಿಸಿಕೊಂಡು 'ನನ್ನ ಋಣ ಸಂದಿತು' ಎಂದು ತಿಳಿದು ಕಳುಹಿಸಿಕೊಟ್ಟ. ಹಣ ಮುಟ್ಟಿದ್ದಕ್ಕೆ ಪಾವತಿ ರಶೀದಿಯೇನೋ ಬಂದಿತು. ಮುಂದೆ ಮದುವೆಯ ಆಮಂತ್ರಣ ಪತ್ರವೂ ಅವನಿಗೆ ಬರಲಿಲ್ಲ. ಅವಳು ಮದುವೆ ಆಗಿದ್ದಾಳೆ—ಎಂದು ತಿಳಿಸಬಲ್ಲ ಮಹಾನುಭಾವರೂ ಅವನಿಗೆ ದೊರೆಯಲಿಲ್ಲ.

* * * * *

ಮಂಜುಳೆಗೆ ತನ್ನದೇ ಪ್ರಪಂಚ ತನಗೆ ಎಂದು ಹೇಳಬೇಕಾಗಿರಲಿಲ್ಲ. ಸ್ವಸುಖದ ಕಲ್ಪನೆಗಳನ್ನು ಬೆಳೆಯಿಸುವುದಕ್ಕೆ ಮುಂಬಯಿಯಂಥ ಆವರಣ ತುಂಬ ಅನುಕೂಲವಾಗಿತ್ತು. ಸ್ನೇಹ, ವಿನೋದ, ಉತ್ಸಾಹ, ಆನಂದಗಳಿಗೆ ಹಿತಕರವಾಗಿತ್ತು. ಅವಳು ಚಾಕರಿಯನ್ನು ದೊರಕಿಸಿಕೊಳ್ಳುವಷ್ಟು ಸಮಯ, ನಗರದ ಹಾದಿ ಬೀದಿಗಳ, ಕಟ್ಟಡಗಳ, ರೈಲುಗಳ, ಟ್ರಾಮುಗಳ ಗುರುತು ಆಗುವಷ್ಟು ಸಮಯ, ನೀರಿಂದ ತಪ್ಪಿ ದಡಕ್ಕೆ ಬಿದ್ದ ಮೀನಿನಂತಾಗಿದ್ದಳು. ನಿಜ; ಆ ಜನ ಸಂದಣಿಯಲ್ಲಿ ದಾರಿತಪ್ಪಿ ಎಲ್ಲೆಲ್ಲಿಗೋ ಹೋಗುವ ಭಯವಿತ್ತು. ಆದರೆ ಊರ ಜನ ಮೂಕರಲ್ಲ. ದಿಕ್ಕು ತೋರಿಸುವವರು. ಯಾವ ಸ್ಥಳ ಎಲ್ಲಿ ಎಂದು ಕೇಳುವುದಕ್ಕೆ ಇಂಗ್ಲಿಷ್ ಬಲ್ಲ ಆಕೆಗೆ ಕಠಿಣವಾಗಿರಲಿಲ್ಲ. ಅವರ ಬಿಡಾರದ ಮನೆಯೇನೋ ಸಂಕೋಚವಾಗಿತ್ತು. ದೂರದ ಸಂಬಂಧಿ ಶಂಕರ ರಾಯರು ಬಹು ದೂರದವರು. ಅವರು ಸ್ವಜಾತಿಯ ಜನರಾದರೂ, ಅವರೊಡನೆ ಹೆಚ್ಚು ಸಲ್ಲಪಿಸುವುದಕ್ಕೆ ಇಷ್ಟವಾಗುತ್ತಿರಲಿಲ್ಲ. ತಮ್ಮದೇ ಸಂಸಾರಿಕ ವಿಷಯಗಳಲ್ಲಿ ಅವರ ಸಂಭಾಷಣೆಯ ವಸ್ತುಗಳು ಮಿತಿಗೊಳ್ಳುತ್ತಿದ್ದುದರಿಂದ, ಇವಳಿಗೆ ಅದು ಒಗ್ಗುವ ವಿಷಯವಾಗಿರಲಿಲ್ಲ.

ಇನ್ಶೂರೆನ್ಸ್ ಕಂಪೆನಿಯೊಂದರಿಂದ ಅವಳಿಗೆ ಭೇಟಿಗೆ ಕರೆ ಬಂದಿತು. ಅವಳು ಕಲಿತ ಶಾರ್ಟ್‌ಹ್ಯಾಂಡ್ ಟೈಪ್‌ರೈಟಿಂಗ್ ವಿದ್ಯೆ ಪ್ರಯೋಜನಕಾರಿಯಾಯಿತು. ಭೇಟಿಗೆ ಹೋದವಳ ಕಣ್ಣಿಗೆ ಆರೇಳು ಮಂದಿ ಸ್ತ್ರೀ ಕೆಲಸಗಾರರು ಅಲ್ಲಿ ಕೆಲಸ ಮಾಡುತ್ತಿರುವುದೂ ಕಾಣಿಸಿತು. ಇಬ್ಬರು ಗೋವಾನಿಯರೂ ಮತ್ತು ನಾಲ್ವರು ಹಿಂದೂ ಮಹಿಳೆಯರೂ ಇದ್ದರು. ಹೆಚ್ಚು ಕಡಿಮೆ ಅವರೆಲ್ಲ ಯೌವನೆಯರೇ. ಮಂಜುಳೆ ಮೆನೇಜರನನ್ನು ಭೇಟಿಮಾಡಿ ನಗುವಿನ ಮುಖದಿಂದ ಹೊರಗೆ ಬಂದಾಗ, 'ಇವಳು ತಮ್ಮ ಬಳಗದವಳಾಗುತ್ತಾಳೆ'... ಎಂದು ಅವರಿಗೂ ಅನಿಸಿತು.

ಸರಿ. ಇನ್ಶೂರೆನ್ಸ್ ಕಾರ್ಯಾಲಯದ ಕರಣಿಕರ ಸಮೂಹದಲ್ಲಿ ಅವಳೂ ಒಬ್ಬಳಾದಳು. ಏನೇನೋ ಲೇಖ ಬರೆದುಕೊಳ್ಳುವುದು; ಅದನ್ನು ಟೈಪ್‌ರೈಟರನಲ್ಲಿ ಒತ್ತಿಕೊಡುವುದು-ಇಷ್ಟು ಅವಳ ಕೆಲಸ. ತಮ್ಮ ಶಾಖೆಯ ಮೆನೇಜರ್ ಕರೆದಾಗ ಅವನೆದುರಿಗೆ ಹೋಗಿ ಕುಳಿತುಕೊಳ್ಳುವುದು. ಅವನ

ಹತ್ತು ಮಾತುಗಳೆಡೆಯಲ್ಲಿ, ಅವನು ಹೇಳುತ್ತಿದ್ದ ಪತ್ರವನ್ನು ಬರೆದುಕೊಳ್ಳುವುದು; ತಿರುಗಿ ಅದನ್ನು ಟೈಪ್ ಮಾಡಿ ತಂದೊಪ್ಪಿಸುವುದು. ದಿನ, ತಿಂಗಳು, ವರ್ಷ- ಉದ್ದಕ್ಕೂ ಒಂದೇ ಕೆಲಸ. ಮನಸ್ಸಿಗೆ ಉತ್ಸಾಹ ಕೊಡುವ ವೃತ್ತಿಯೇನೂ ಅದಲ್ಲ. ಕೆಲಸ ಕಡಿಮೆಯಾದಾಗ, ಮಧ್ಯಾಹ್ನ ವಿರಾಮ ದೊರೆತಾಗ, ಹರಟೆಗೆ ಅವಕಾಶವಿರುತ್ತಿತ್ತು. ಗೆಳತಿಯರನ್ನು ಕೂಡಿ ಮಾತನಾಡುವ ಲವಲವಿಕೆ ಅವಳಿಗೆ. ಒಬ್ಬೊಬ್ಬರ ಸ್ನೇಹವಾಗುತ್ತ ಬಂದಿತು. ಒಬ್ಬೊಬ್ಬರು ಒಂದೊಂದು ಉಡುಗೆಯವರು; ಒಂದೊಂದು ಆಕಾರದವರು; ಒಂದೊಂದು ಸ್ವಭಾವದವರು. ಮುಂಬಯಿಯ ದಶದಿಸೆಗಳಿಂದ–ದಿನದ ಕೆಲಸಕ್ಕೆ ಅಲ್ಲಿಗೆ ಬಂದು, ಸಂಜೆಯ ತನಕ ಆಫೀಸ್ ಗಡಿಯಾರವನ್ನು ನೋಡಿಕೊಂಡಿದ್ದು ಕಣ್ಮರೆಯಾಗುವವರು. ಕಂದು ಬಣ್ಣದ ಗೋವಾನಿ ಹುಡುಗಿಯರಾದ ಲೂಸಿ ಮತ್ತು ಗ್ರೇಸಿಯರು ಬರಿಯ ಇಂಗ್ಲಿಷನ್ನೇ ಆಡುತ್ತಿದ್ದರು. ದೊರೆಸಾನಿಯರಂತೆ ವಿಚಿತ್ರ ಉಡುಗೆ ತೊಟ್ಟು, ದಿನವೆಲ್ಲ ತುಟಿಯ ಬಣ್ಣ, ಮುಖದ ಪೌಡರ್ -ಇವನ್ನು ಸರಿಮಾಡಿಕೊಳ್ಳುವುದರಲ್ಲೇ ವೇಳೆ ಕಳೆಯುವವರು. ಅವರಿಗೆ ಆಫೀಸ್ ತರುಣರಲ್ಲಿ ಯಾರು ಗುರುತಿನವರು, ಯಾರು ಗುರುತಿನವರಲ್ಲ-ಎಂದು ಹೇಳುವುದೇ ಕಷ್ಟವಾಗಿತ್ತು. ಇನ್ನಿಬ್ಬರು ಗೆಳತಿಯರು ಮಹಾರಾಷ್ಟ್ರದ ಕನ್ಯೆಯರು: ಜೀವನಕ್ಕೆ ಬೇರೆ ನಿರ್ವಾಹವಿಲ್ಲವೆಂದು ಬಂದು ಸೇರಿದವರು; ದಿನದ ಕೆಲಸವನ್ನು ಮುಗಿಸಿಕೊಂಡು, ತಮ್ಮ ಮಕ್ಕಳನ್ನು ಕೂಡಿಕೊಂಡು ಜೀವನಸಾಗಿಸಬೇಕಲ್ಲ ಎಂದು ಚಿಂತಿಸುವವರು. ಐದನೆಯ ವ್ಯಕ್ತಿ ವತ್ಸಲೆ. ಒಂದೊಂದು ಸಾರಿ ಒಂದೊಂದು ಊರು ತನ್ನದೆಂದು ಹೇಳುತ್ತಾಳೆ; ಆಕೆಯೂ ತರುಣ ವಯಸ್ಕೆ. ಕೆಲಸದಲ್ಲಿ ಅವಳಷ್ಟು ಚುರುಕೂ ಅಲ್ಲ. ಮಾತು ಮಾತ್ರ ಹೆಚ್ಚು. ಇನ್ನೊಬ್ಬಳೆಂದರೆ ಅಂಜಲಿ. ಅವಳಾದರೆ-ತೋರಿಕೆಗೆ ಮಂಜುಳೆಯ ಸಮ ವಯಸ್ಕಳು. ಮಂಜುಳೆಯಲ್ಲಿ ಸ್ನೇಹಪರತೆಯನ್ನೂ ತೋರಿಸಿದ್ದಾಳೆ; ಅವಳ ಜತೆಗೆ ನಿತ್ಯ ತಿರುಗಾಟಕ್ಕೂ ಹೋಗುತ್ತಾಳೆ. ಎಷ್ಟೋ ಬಾರಿ "ಈ ವೇಳೆಗೆ ಬರುತ್ತೇನೆ; ಇಂಥಲ್ಲಿ ಸಿಗುತ್ತೇನೆ" ಎಂದು ಹೇಳಿ ಮಾಯವೂ ಆಗುತ್ತಾಳೆ. ಅವಳನ್ನು ನೋಡಿದಾಗಲೆಲ್ಲ ಮಂಜುಳೆಗೆ ಮನೋಹರನ ನೆನಪಾಗುತ್ತದೆ. ಅದಕ್ಕೆ ಕಾರಣವೆಂದರೆ–ಅವಳ ಬಾಯಲ್ಲಿರುವ ಸಿನೆಮಾ ಸಮಾಚಾರಗಳು; ಸಿನೆಮಾ ರಾಣಿಯರ ಮತ್ತು ನಟರ ಸುದ್ದಿಸೂರುಗಳು. ಒಂದೊಂದು ದಿನ ಒಂದೊಂದು ಬಗೆಯ ಉಡುಗೆ ಉಟ್ಟುಕೊಂಡು ಆಫೀಸಿಗೆ

ಬರುತ್ತಾಳೆ. ಒಂದೊಂದು ರೀತಿಯಲ್ಲಿ ಬಳೆ ತೊಡುತ್ತಾಳೆ; ಕಿವಿಗೆ ಆಭರಣ ಹಾಕುತ್ತಾಳೆ. ಇನ್ನು ಕೆಲವು ದಿನ ಮಹಾಂಕಾಳಿಯಂತೆ ಕೂದಲು ಕೆದರಿಕೊಂಡು ಆಫೀಸ್ ತುಂಬ ಅಡ್ಡಾಡುತ್ತ 'ಇದೇ ಲೇಟೆಸ್ಟ್ ಫೇಶನ್' ಎನ್ನುತ್ತಾಳೆ. ಅಂಜಲಿ, ಬೇರೆ ನಾಲ್ವರು ಗೆಳತಿಯರನ್ನು ಕೂಡಿಕೊಂಡು ಸ್ವಂತ ಬಿಡಾರವನ್ನು ದಾದರ್ ಹಿಂದು ಕಾಲೊನಿಯಲ್ಲಿ ಹೂಡಿದ್ದಳು. ಮಂಜುಳೆಯೂ ಅವಳ ವಸತಿಗೃಹವನ್ನು ಸೇರಿಕೊಂಡಳು. ಅಂಜಲಿಯ ವಿಚಾರದಲ್ಲಿ ಮಂಜುಳೆಗೂ ಕೆಲವೊಮ್ಮೆ ಬೇಸರ ಬರುವುದುಂಟು. ಯಾವುದಕ್ಕೂ ಅಳತೆಯಿಲ್ಲದ ತರುಣಿಯವಳು. ಯಾರೂ ಜತೆಗೆ ಸಿಕ್ಕದಿದ್ದರೆ ಮಂಜುಳೆಯೊಡನೆ ಸ್ನೇಹಿತಳಂತೆ ಇರುತ್ತಾಳೆ. ತನ್ನ ವಸತಿಗೃಹದಲ್ಲಿ ಮಾತ್ರ ಮಂಜುಳೆಯೊಡನೆ ಎಷ್ಟು ಮಾತಾಡಿದರೂ ಅವಳಿಗೆ ಮುಗಿಯದು. ಆಫೀಸಿನ ಗಂಡು ಆವರಣದಲ್ಲಿಷ್ಟು ಅವಳ ಸ್ವಭಾವ ಬದಲು. ಅವಳೊಡನೆ ಸ್ನೇಹ ಸಂಭಾಷಣೆಗಳಿಗಾಗಿ ಹಾತೊರೆಯುವ ನಾಲ್ಕಾರು ಮಂದಿ ಅದೇ ಆಫೀಸಿನ ಕೆಲಸಗಾರರಿರುವಾಗ ಆ ವೇಳೆಯನ್ನು ಮಂಜುಳೆಯೊಡನೆ ವ್ಯರ್ಥವಾಗಿ ಅವಳು ಕಳೆಯುವುದಿಲ್ಲ. ಮಧ್ಯಾಹ್ನ ಉಪಹಾರದ ವೇಳೆಯಾಯಿತು ಎಂದರೆ,ಅವಳನ್ನು ಉಪಹಾರಕ್ಕೆ ಕರೆದೊಯ್ಯುವುದಕ್ಕೆ ನಾಟಸ್ಕರ್ ಇದ್ದಾನೆ; ಪಲೂಸ್ಕರ್ ಇದ್ದಾನೆ; ರಾಘವನ್ ಇದ್ದಾನೆ. ಹೀಗೆ ಯಾರಾದರೂ ಒಬ್ಬರು ಇದ್ದೇ ಇದ್ದಾರೆ. ಹೀಗಾಗಿ ಆಕೆ ಮಂಜುಳೆಯ ಕೈಯಲ್ಲಿದ್ದಂತೆಯೂ ಅಲ್ಲ; ಇಲ್ಲದಂತೆಯೂ ಅಲ್ಲ.

ವರ್ಷ ಸರಿಯುವುದರೊಳಗೆ ಈ ನೂತನ ಸಾಮಾಜಿಕ ಆವರಣದಲ್ಲಿ ತಾನೊಬ್ಬಳು ಗೊಡ್ಡು ಹಳ್ಳಿಯ ಹುಡುಗಿಯಾಗಿ ಬಾಳಬಾರದು — ಎಂಬ ಭಾವನೆ ಮಂಜುಳೆಯಲ್ಲೂ ಉಂಟಾಯಿತು. ಏನಿಲ್ಲದೆ ಹೋದರೆ—ಅಂಜಲಿ ಒಂದು ಸೀರೆ ಕೊಂಡರೆ, ಇವಳೊಂದನ್ನು ಕೊಳ್ಳಬೇಕು. ಅವಳು ಒಂದು ಲೋಲಕ್ ಕೊಂಡರೆ ಇವಳೂ ಒಂದು ಕೊಳ್ಳಬೇಕು. ಅವಳು 'ಶೂ'ಬದಲಿಸಿದರೆ ಇವಳೂ ಬದಲಿಸಬೇಕು. ಇವಳನ್ನೂ ಸ್ನೇಹಪರ ದೃಷ್ಟಿಯಿಂದ ಕಾಣುವವರು, ಚಹಕ್ಕೆ ಕರೆಯುವವರು, ತಿರುಗಾಟಕ್ಕೆ ಕರೆಯುವವರು ಅದೇ ಕಚೇರಿಯಲ್ಲಿದ್ದರು. ಆದರೆ ಆಮಂತ್ರಿಸಿದಾತ ಇವಳ ಜತೆಗೆ ಲೂಸಿಯನ್ನೋ ಗ್ರೇಸಿಯನ್ನೋ ಅಂಜಲಿಯನ್ನೋ ಕರೆದಲ್ಲಿ ಇವಳೆಂದೂ ಹೋಗಲಾರಳು. ಅಂಥವರ ವಿಷಯದಲ್ಲಿ ಮಂಜುಳೆಗೆ ಅಷ್ಟು ಅಭಿಮಾನವುಂಟಾಗುತ್ತಿರಲಿಲ್ಲ.

ಒಬ್ಬ ಮನೋಹರನನ್ನು ಕಳೆದುಕೊಂಡಿದ್ದ ಮಂಜುಳೆ, ಇನ್ನೊಬ್ಬ

ನಾಯಕನನ್ನು ದೊರಕಿಸಬೇಕೆಂದು ಬಯಸುವುದು ಸ್ವಾಭಾವಿಕ. ಅವಳ ಮನಸ್ಸು ಅದಕ್ಕಾಗಿ ಬೇಡುತ್ತಿದೆ. ಮೈಯೂ ಬೇಡುತ್ತಿದೆ. ಆದರೆ ಮೊದಲಿನಂತೆಯೆ ಆದರೆ–ಎಂಬ ಭಯವೂ ಉಂಟಾಗುತ್ತದೆ. ಸಮನಾಗಿ ಪರಿಚಯವಾಗುವ ತನಕ, ಆ ವ್ಯಕ್ತಿಯ ಸ್ವಭಾವ ತನಗೆ ತಿಳಿಯುವ ತನಕ, ತಾನು ಅಂಜಲಿಯಂತೆ ಸಿಕ್ಕಿದವರೊಡನೆ ತಿರುಗಾಡುವ ಸಾಹಸವನ್ನು ಮಾಡಲೊಲ್ಲಳು. ಅನುರೂಪನಾದ ಯಾವನಾದರೊಬ್ಬನನ್ನು ತನ್ನವನನ್ನಾಗಿ ಮಾಡಿಕೊಳ್ಳಬೇಕು; ಈ ಆಫೀಸಿನ ನೀರಸವಾದ ಉದ್ಯೋಗ ತನಗೆ ಸಲ್ಲದು; ಮುಂದಿನ ದಾಂಪತ್ಯ ಜೀವನಕ್ಕೆ ಇದೊಂದು ಪರಿಚಯದ ಆವರಣ ಎಂದಷ್ಟೆ ಅವಳು ತಿಳಿದುಕೊಂಡಿದ್ದಳು.

ಬಹುವಾಗಿ ಎಲ್ಲರೊಡನೆಯೂ ಸರಸ ಸಲ್ಲಾಪ ಮಾಡುವ ತರುಣರ ವಿಷಯದಲ್ಲಿ ಅವಳಿಗೆ ಅಭಿಮಾನವಿರಲಿಲ್ಲ. ಅಂಥವರ ಜತೆಗೆ ಹೋಗುವುದು ಲಜ್ಜೆಗೇಡಿ ಕೆಲಸವೆಂದು ಅವಳು ತಿಳಿಯುತ್ತಾಳೆ. ಅವಳ ಇಲಾಖೆಯ 'ಬಾಸ್'–ಆತನೂ ಒಬ್ಬ ನೌಕರನೇ, ಮಂಜುಳೆಯೊಡನೆ ತುಂಬ ಸಲಿಗೆಯಿಂದ ಮಾತನಾಡುತ್ತಾನೆ. ಎಷ್ಟೋ ಬಾರಿ ತಾನು ಚಹ ತರಿಸಿ ಕುಡಿಯುವಾಗ, ಅವಳಿಗೂ ಚಹ ತರಿಸಿ ಕೊಟ್ಟಿದ್ದಾನೆ. ಅವಳನ್ನು ಕಂಡರೆ ಅವನಿಗೆ ತುಂಬ ಇಷ್ಟ–ಎಂಬ ಭಾವನೆ ಅವಳಿಗೂ ಆಗಿದೆ. ಆತನ ಹೆಸರು ಗಾಂವಕರ್ ಎಂದು. ಆತ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದವ. ಇವಳಿಗೆ ಕೊಂಕಣಿ ಬರುತ್ತದೆಂದು ತಿಳಿದು ಆತ ಇವಳೊಡನೆ ಕೊಂಕಣಿ ಮಾತಿನಲ್ಲಿ ಸಂಭಾಷಿಸುವುದುಂಟು. ಆತ ಎಷ್ಟೋ ಉಪಾಯವಾಗಿ "ನೀನು ರಜಾದಿನಗಳನ್ನು ಹೇಗೆ ಕಳೆಯುತ್ತೀಯಾ? ಇಂತಹ ಸಿನೆಮಾ ನೋಡಿದ್ದೀಯಾ? ನಾಳೆ ಹೋಗೋಣವೇ?" ಎಂದು ಆಮಂತ್ರಿಸಿದ್ದನಾದರೂ ಆಕೆ ಹೋದವಳಲ್ಲ. ಸುಮಾರು ನಾಲ್ವತ್ತರ ವಯಸ್ಸು ಅವನದು. ಈಗಾಗಲೇ ಅರ್ಧ ಬಿಳುಪುಗೊಂಡ ಅವನ ತಲೆಗೂದಲು ಅವಳನ್ನಾಕರ್ಷಿಸುವುದಿಲ್ಲ. ಬರಿಯ ಪ್ರೇಮ ಹಂಬಲ ಮಾತ್ರ ಮಂಜುಳೆಯದಲ್ಲ; ತಾನು ಮದುವೆಯಾಗಬೇಕು; ತನ್ನ ಪತಿಯೊಡನೆ ಚಿತ್ರ ತೆಗೆಯಿಸಿಕೊಂಡು ಸುಮಿತ್ರೆಗೆ ಕಳುಹಿಸಿ, "ನೀವು ನನ್ನ ಕೈಬಿಟ್ಟರೂ ದೇವರು ಕೈಬಿಡಲಿಲ್ಲ" ಎಂದು ಬರೆಯುವ ಮನಸ್ಸು ಅವಳದು. ಒಂದು ಬಗೆಯ ಪ್ರತೀಕಾರ ಬುದ್ಧಿಯು ಅವಳದು. ಅಂಥ ನೆನವರಿಕೆಯಾದಾಗ, ಮನೋಹರನ ವಿಳಾಸ ಎಂದಾದರೊಂದು ದಿನ ಸಿಕ್ಕಿದರೆ, ತನ

ಭಾವಚಿತ್ರದ ಪ್ರತಿಯನ್ನು ಅವನಿಗೂ ಕಳುಹಿಸಿಕೊಡುತ್ತೇನೆ–ಎಂದಂದು ಕೊಳ್ಳುತ್ತಿದ್ದಳು.

ಅಂಜಲಿಯಂತಹ ಹುಚ್ಚು ಹುಡುಗಿ ಸಂಜೆಯ ತಿರುಗಾಟಕ್ಕೆ ಸಿಕ್ಕಿದ ಳೆಂದರೆ, ಅವಳ ಜತೆಯಲ್ಲಿ ಸಿನೆಮಾ ನೋಡಿಕೊಂಡು ಮನೆಗೆ ಬರುವಾಗ ತುಂಬ ವೇಳೆಯಾಗುತ್ತಿತ್ತು. ಸಜ; ಅದರಿಂದಾಗಿ ಅವಳು ಬಂಧುಗಳ ಮನೆ ಯನ್ನು ಬಿಡಬೇಕಾಯಿತು. ಅನಂತರ ಅಂಜಲಿಯ ವಸತಿಗೃಹದ ಆಶ್ರಯ ವನ್ನು ಪಡೆಯಬೇಕಾಯಿತು.

ಮುಂಬಯಿಗೆ ಹೋದ ಒಂದು ಒಂದೂವರೆ ವರ್ಷಕಾಲ, ಕನಸನ್ನು ಕಟ್ಟುವುದರಲ್ಲೇ ಅವಳ ವೇಳೆ ಸರಿಯಿತು. ಈಗೀಗ ಚಲಚ್ಚಿತ್ರಗಳು ಅವಳ ಮನಸ್ಸನ್ನು ಆಕರ್ಷಿಸತೊಡಗಿವೆ. ಅಲ್ಲಿನ ಚಿತ್ರ ನಾಯಕರೆಲ್ಲ ಅಷ್ಟೊಂದು ಸುಲಭ ಸಾಧ್ಯರು; ಪ್ರಥಮ ದೃಷ್ಟಿಗೆ ಪ್ರೀತಿಸುವವರು; ನೋಡಿದಂದಿನಿಂದಲೆ ಜೀವದಾನಕ್ಕೆ ಸಿದ್ಧರಾಗಿದ್ದ ಮಹಾವ್ಯಕ್ತಿಗಳಾಗಿ ಕಾಣಿಸುತ್ತಿದ್ದರು. ಆದರೆ ವಾಸ್ತವಿಕ ಜೀವನದಲ್ಲಿ ಅವಳ ಪರಿಚಯಕ್ಕೊದಗಿದ ತರುಣರು ಮಾತ್ರ ಅಂಥ ಆದರ್ಶ ವ್ಯಕ್ತಿಗಳಾಗಿ ಕಾಣಿಸಲಿಲ್ಲ. ಅದೇನೆ ಬಂದ ತೊಡಕು. ಒಂದೊಂದು ದಿನ ಒಬ್ಬೊಬ್ಬರೊಡನೆ ಚಹ ಕುಡಿಯುವ, ಸಿನೆಮಾ ಗೃಹಕ್ಕೆ ಹೋಗುವ ನಾಯಕರುಗಳು, ತನ್ನನ್ನೇನು ಮಾಡುತ್ತಾರೋ ಎಂಬ ಭಯ ಅವಳಿಗಾಗುತ್ತಿತ್ತು. ಗೆಳತಿ ಅಂಜಲಿ ಆ ವಿಷಯಗಳಲ್ಲಿ ಎಷ್ಟು ಅಳುಕಿಲ್ಲ ದವಳೋ, ಇವಳು ಅಷ್ಟು ಅಳುಕುಳ್ಳವಳು. ಇವಳನ್ನಾಕೆ "ನೀನು ಇಂದಿನ ಸಮಾಜಕ್ಕೆ ಹೇಳಿಸಿದವಳಲ್ಲ" ಎಂದು ಮೂದಲಿಸಿದ್ದೊಂದೇ ಬಂತು.

ಪ್ರಿಯವಾದ ಉದ್ಯೋಗವಿಲ್ಲದಿರುವಾಗ, ಸಾಕಷ್ಟು ವಿರಾಮ, ಅವ ಕಾಶಗಳು ಮುಂದೆ ಚೆಲ್ಲಿರುವಾಗ, ಮಂಜುಳೆಯ ಮನಸ್ಸು ಜಡವಾಗಿರ ಲೊಲ್ಲದು. ಅಂಜಲಿಯಂತೆ, ತಾನೂ ತನಗೆ ಯೋಗ್ಯ ಕಂಡವರನ್ನು ಸೆಳೆದು ಕೊಳ್ಳುವುದು ಆವಶ್ಯಕವೆಂದೇ ಅನಿಸಿತು.

ಒಂದು ದಿನ ಮಧ್ಯಾಹ್ನ ಚರ್ಚ್‌ಗೇಟಿನ ಸ್ಪೆಶಲ್ ಕಾಫಿ ಹೌಸಿನಲ್ಲಿ ಅವಳೊಬ್ಬಳೇ ಕಾಫಿ, ಸೇಂಡ್‌ವಿಚ್ ತರಿಸಿಕೊಂಡು ಮೆಲ್ಲುತ್ತ ಕುಳಿತಿ ದ್ದಳು. ಆಚೀಚಿನ ಕುರ್ಚಿಗಳೆಲ್ಲ ತುಂಬಿದ್ದವು. ಅಲ್ಲಲ್ಲಿ ರಸಿಕರು ಕುಳಿತು ಮಾತನಾಡುತ್ತಿದ್ದರು; ಉಪಹಾರ ಸ್ವೀಕರಿಸುತ್ತಿದ್ದರು. ಇವಳೆದುರಿನ ಖಾಲಿ ಕುರ್ಚಿಯಲ್ಲಿ ಒಬ್ಬ ಸುಂದರ ತರುಣ ಬಂದು ಕುಳಿತ. ಇವಳನ್ನು ವಂದಿಸಿದ.

ತನಗೆ ಬೇಕಾದ ಉಪಹಾರ ಹೇಳಿದ. "ನಿಮ್ಮದು ಜಯಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿ ಅಲ್ಲವೆ?" ಎಂದೂ ಕೇಳಿದ.

"ಹೂಂ" ಎಂದಳು ಮಂಜುಳೆ, ಉದಾಸೀನವಾಗಿ.

"ಗಾಂವಕರರಿದ್ದಲ್ಲಿಗೆ ನಾನೆಷ್ಟೋ ಬಾರಿ ಬಂದಿದ್ದೇನಲ್ಲ. ನಿಮಗೆ ನೋಡಿದ ನೆನಪಿಲ್ಲವೆ? ನಾನೂ ನಿಮ್ಮದೇ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಹೊರಗಿನ ಬ್ರಾಂಚುಗಳ ಸುತ್ತಾಟ ನನಗೆ. ದೊರೆಸಾಮಿ ಎಂದು ನನ್ನ ಹೆಸರು" ಎಂದ. ಇನ್ನೂ ಏನೇನೋ ಕೇಳಿದ. ಈಕೆ ಒಂದೆರಡು ಉತ್ತರ ಹೇಳಿದಳು. ಅವನನ್ನು ಕಂಡ ನೆನಪನ್ನು ಸ್ಮರಿಸಿದಳು. ಆ ನೆನಪು ನಿಜ. ಮಂಜುಳೆಗೆ ಬಿಲ್ ಬಂದಾಗ ಆತ ಅದನ್ನು ಕಿತ್ತುಕೊಂಡು, ಅವಳ ಹಣ ಕೊಟ್ಟುದೂ ಅಲ್ಲದೆ "ಜಯಲಕ್ಷ್ಮಿ ಇನ್ಸೂರೆನ್ಸಿಗೆ ಅಲ್ಲವೆ? ನನಗೂ ಅಲ್ಲಿಯೆ ಕೆಲಸವಿದೆ; ಹೋಗೋಣ" ಎಂದು ಅವಳ ಜತೆಯಲ್ಲಿಯೇ ಹೊರಟ. ಆ ಕಟ್ಟಡದ ತನಕ ನಡೆದು ಬಂದು, ಇವಳೊಡನೆ ಲಿಫ್ಟಿಗಾಗಿ ಕಾದು ನಿಂತಾಗ "ನೀವೆಲ್ಲಿರುತ್ತೀರಿ? ನನ್ನ ಬಿಡಾರವೇನೊ ದಾದರಿನಲ್ಲಿದೆ. ಆದರೆ ತಿಂಗಳಿಗೆ ಹದಿನೈದು ದಿನವಾದರೂ ನಾನು ಹೊರಗಿರಬೇಕಾಗುತ್ತದೆ" ಎಂದ. ಈಕೆ ತನ್ನ ವಿಳಾಸವನ್ನು ಅವನಿಗೂ ಹೇಳಿದಳು. ಅಲ್ಲಿಗೆ ಅವರ ಆ ದಿನದ ಅವರ ಸಂಭಾಷಣೆ ಮುಗಿಯಿತು.

ಮುಂದೆ ಆತ, ಮೇಲಕ್ಕೆ ಹತ್ತಿ, ಗಾಂವಕರರೊಡನೆ ಸಂಭಾಷಿಸಿ ಹೊರಡುತ್ತ, ಅವಳಿಗೂ ಗಾಂವಕರರಿಗೂ ವಂದಿಸಿಯೇ ಹೊರಟುಹೋದ.

ಗಾಂವಕರ್ ಮಂಜುಳೆಯೊಡನೆ "ನಿನಗೆ ದೊರೆಸಾಮಿಯು ಗುರುತೇ?" ಎಂದು ಕೇಳಿದ.

"ಇಲ್ಲ, ಈಗಷ್ಟೆ ಕಾಫಿ ಹೌಸಿನಲ್ಲಿ ಭೇಟಿಯಾಗಿದ್ದರು. ಇಲ್ಲಿಗೆ ಜತೆಯಲ್ಲಿಯೆ ಬಂದೆವು" ಎಂದಳು ಆಕೆ. ಗಾಂವಕರ್ ಕೆಲಸಕ್ಕೆ ತೊಡಗುವ ಮುಂಚೆ, ದೊರೆಸಾಮಿಯ ವಿಚಾರದಲ್ಲಿ ನಾಲ್ಕು ಪ್ರಶಂಸೆಯ ಮಾತುಗಳನ್ನಾಡಿ, ಅನಂತರ ಅವಳಿಗೇನೋ ಪತ್ರವನ್ನು ಹೇಳತೊಡಗಿದ.

ದೊರೆಸಾಮಿ--ಸುಮಾರು ಮೂವತ್ತು ವಯಸ್ಸಿನ ತರುಣ. ಕನ್ನಡ ಪ್ರಾಂತದ ಹುಡುಗ. ಅವನದು ಹದವಾದ ಎತ್ತರ. ಕಾಂತಿಯುತವಾದ ಬಿಳಿಯ ಮುಖ. ತುಂಬ ಬುದ್ಧಿವಂತನೂ ಚುರುಕಿನವನೂ ಆಗಿ ಕಾಣಿಸುತ್ತಿದ್ದ. ಮಂಜುಳೆ ತನ್ನ ಕಚೇರಿಯ ಕೆಲಸ ಮುಗಿಸಿಕೊಂಡು ಮನೆಗೆ ಹೋದಳು.

ಆ ಮಧ್ಯಾಹ್ನ ಭೇಟಿಯಾದ ಆತನ ಮುಖವನ್ನು ಮರೆಯಲು ಅವಳಿಂದ ಶಕ್ಯವಾಗಲಿಲ್ಲ. ಮೇಲಿಂದ ಮೇಲೆ ಆ ಮುಖದಿಂದ ಹೊರಟ ಧ್ವನಿಯ ನೆನಪಾಗುತಿತ್ತು ಅವಳಿಗೆ. ಅದಕ್ಕಿಂತಲೂ ಹೆಚ್ಚಾಗಿ ತನ್ನ 'ಬಾಸ್' ಆತನ ವಿಷಯದಲ್ಲಿ ಹೇಳಿದ ಪ್ರಶಂಸೆಯ ಮಾತುಗಳು, ಅವನನ್ನು ತಿಳಿಯುವ ಮುಂಚೆಯೇ, ಅವನ ವಿಷಯದಲ್ಲಿ ಅಭಿಮಾನವನ್ನು ಹುಟ್ಟಿಸಿದವು.

ಮಂಜುಳೆ ಮತ್ತು ದೊರೆಸ್ವಾಮಿಯರ ಎರಡನೆಯ ಭೇಟಿ ಇನ್ನೊಮ್ಮೆ ಹದಿನೈದು ದಿವಸಗಳ ಬಳಿಕ ನಡೆಯಿತು. ಆತ ಗಾಂವಕರ್‌ನೊಡನೆ ತಿರುಗಿ ಮಾತನಾಡಲು ಬಂದಿದ್ದ. ಬೆಳಗಿನ ಕಚೇರಿಯ ವೇಳೆ ಮುಗಿದು, ಕೆಳಗಿಳಿಯುತ್ತ, ತನ್ನಂತೆಯೇ ಕೆಳಕ್ಕೆ ಇಳಿದು ಬರುತ್ತಿರುವ ಮಂಜುಳೆಯನ್ನು ಕಂಡು ವಂದಿಸಿದ. "ಉಪಹಾರಕ್ಕೇನು? ನನ್ನ ಸಂಗಾತ ಬರಬಹುದೇ? ಆಕ್ಷೇಪವಿಲ್ಲದಿದ್ದರೆ ಬನ್ನಿ. ನನಗೆ ಸಂತೋಷವಾಗುತಿತ್ತು" ಎಂದು ಸವಿಯಾದ ಮಾತಿನಿಂದ ಪ್ರಾರ್ಥಿಸಿದ. ಉಳಿದ ಪರಿಚಿತರಂತೆ, ಆಕೆ ಬಂದೇ ಬರುತ್ತಾಳೆಂದು, ಕೇಳಿದಂಥ ಅನುಮಾನರಹಿತ ಮಾತಲ್ಲ. ಆತನೂ ದಾಕ್ಷಿಣ್ಯಪರ; ಅವಳೂ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಆಮಂತ್ರಣ ಮನ್ನಿಸಿ, ಅವನ ಜತೆಯಲ್ಲಿ ಉಪಹಾರ ಮಂದಿರಕ್ಕೆ ಹೋದಳು. ಇಬ್ಬರೂ ಜತೆಗೆ ಕುಳಿತು ಉಪಹಾರ ಸ್ವೀಕರಿಸಿದರು. ಕುಳಿತಾಗ ಆತ ತನ್ನ ಕಾವ್ಯಾಭಿರುಚಿಯನ್ನು ಕುರಿತು ತುಂಬ ಮಾತನಾಡಿದ. 'ಈ ಪುಸ್ತಕ ಓದಿದ್ದೀರಾ? ಅದನ್ನು ಓದಿದ್ದೀರಾ?" ಎಂದು ಮೊದಲಾಗಿ ಪ್ರಶ್ನಿಸಿದ. ಯಾವ ಮಾತಿನಲ್ಲೂ 'ನೀವು' ಅನ್ನುತ್ತಿದ್ದನೇ ವಿನಾ 'ನೀನು' ಅನ್ನುತ್ತಿರಲಿಲ್ಲ. ಅವಳನ್ನು ಬೀಳ್ಕೊಡುವ ಮುನ್ನ 'ಇನ್ನೊಮ್ಮೆ ಎಂದು ಭೇಟಿ? ನಿಮ್ಮ ಮನೆಯ ಹೆಸರನ್ನು ಹೇಳಿದ್ದಿರಿ; ನೆನಪಿದೆ. ಆದರೂ ಅಲ್ಲಿಗೆ ಬರುವುದಕ್ಕೆ ಸಂಕೋಚ. ನನಗೆ ವಿರಾಮವೂ ಕಡಿಮೆ. ಬೇಕಾದರೆ ನಾನು ಹೇಳಿದ ಒಂದೆರಡು ಪುಸ್ತಕಗಳನ್ನು ನಿಮಗೆ ತಂದು ಮುಟ್ಟಿಸುತ್ತೇನೆ. ನಾನು ಸಾಮಾನ್ಯವಾಗಿ ಆದಿತ್ಯವಾರ ಮಾತ್ರ ಮನೆಯಲ್ಲಿರುವುದು. ಉಳಿದ ದಿನ ಎಲ್ಲೆಲ್ಲಿಗೋ ಸಂಚಾರವಿರುತ್ತದೆ. ಆದುದರಿಂದ ನಾನೇ ಬಂದು ಪುಸ್ತಕವನ್ನು ಕೊಡುತ್ತೇನೆ" ಎಂದು ಹೇಳಿ, ತನ್ನ ಮನೆಯ ವಿಳಾಸವನ್ನು ಬರೆದುಕೊಟ್ಟು, ಮರುಮಾತಿಲ್ಲದೆ ಹೊರಟುಹೋದ. ಅಲ್ಲಿಂದ ನಾಲ್ಕೈದು ದಿನಗಳ ತನಕ ಮಂಜುಳೆಯ ಮನಸ್ಸಿನಲ್ಲಿ ದೊರೆಸ್ವಾಮಿಯ ಚಿತ್ರ ಕೆತ್ತಿ ನಟ್ಟಂತಾಯಿತು. ಆತ ಕಣ್ಣಿಗೆ ಒಳ್ಳೆಯವನಾಗಿ ಕಾಣಿಸುತ್ತಾನೆ;

ತುಂಬ ಓದಿ ತಿಳಿದುಕೊಂಡಂತಿದೆ. ಮಾತಿನಲ್ಲೂ ಹಾಳು ಹರಟೆ ಕಡಿಮೆ- ಎಂದು ನೆನೆಯುತ್ತಿದ್ದಳು. ಆದಿತ್ಯವಾರ ಬಂದಿತು. ಆತನಿರುವುದು ದಾದರಿನ ಒಂದು ತುದಿಯಲ್ಲಿ; ಅವಳಿರುವುದು ಅದರ ಮತ್ತೊಂದು ತುದಿಯಲ್ಲಿ. 'ಆತ ಪುಸ್ತಕ ತಂದುಕೊಟ್ಟರೆ ಓದಬಹುದಿತ್ತು; ಇಲ್ಲಿಗೆ ತಂದುಕೊಟ್ಟರೆ ಮನೆಯ ಸ್ನೇಹಿತರು, ಅದರಲ್ಲಿಯೂ ಅಂಜಲಿಯಂಥ ಬಿರುಗಾಳಿಗಳು, ತನ್ನನ್ನು ಪರಿಹಾಸ್ಯಮಾಡುವುದಕ್ಕೊಂದು ಎಡೆಕೊಟ್ಟಂತಾಗುತ್ತದೆ. ಆತ ತನ್ನ ವಿಳಾಸ ಕೊಟ್ಟಿದ್ದಾನೆ. ಅವನಲ್ಲಿಗೆ ತಾನೇ ಹೋಗಲೇ' ಎಂದು ಯೋಚಿಸಿದಳು. 'ಯಾಕೆ ಹೋಗಬಾರದು?' ಎಂದೂ ತೋರಿತು. ದಿನವೆಲ್ಲ ರಜೆ. ಸ್ವಲ್ಪ ಸಮಯ ಸಂತೋಷದಿಂದ ವೇಳೆ ಕಳೆಯುವುದಕ್ಕೂ ಆಯಿತು— ಎಂದು ಎಣಿಸಿ, ತಾನಾಗಿ ದಾದರಿನ ಒಂದು ಮಗ್ಗುಲಿಂದ ಇನ್ನೊಂದು ತುದಿಗೆ ನಡೆದು ಬಂದು, ಶಿವಾಜಿ ಪಾರ್ಕಿನ ಬಳಿಯ ಒಂದು ಮನೆಯ ಕೆಳಗಿನ ಕೋಣೆಯ ಬಾಗಿಲ ಮುಂದಕ್ಕೆ ಹೋಗಿ ನಿಂತಳು. ಬಾಗಿಲ ಮೇಲೆ 'ದೊರೆಸ್ವಾಮಿ' ಎಂದು ಹೆಸರು ಬರೆದಿತ್ತು. ಜತೆಗೆ 'ಎಮ್. ಎ.' ಎಂದೂ ಹಾಕಿತ್ತು. ತಮ್ಮ ಜಯಲಕ್ಷ್ಮಿ ಇನ್ಸೂರೆನ್ಸ್ ಕಂಪೆನಿಯ ಆರ್ಗನೈಸರ್ ಕೆಲಸ ಆತಗೆ ಎಂದೂ ಸಮಾಧಿಸಿತ್ತು. ಅದು ಸಾಕಷ್ಟು ವೇತನ ಬರುವ ಜವಾಬ್ದಾರಿಯ ಕೆಲಸ —ಎಂದು ಹೊಳೆಯದೆ ಹೋಗಲಿಲ್ಲ. ಅಳುಕಿ, ಅಳುಕಿ ಗಂಟೆ ಒತ್ತಿದಳು. ಆಗ ಬಾಗಿಲನ್ನು ತೆರೆದವನೇ ದೊರೆಸ್ವಾಮಿ. ನಕ್ಕು ಅವಳನ್ನು ಸ್ವಾಗತಿಸಿದ. "ನೀವು ಬರುತ್ತೀರೋ ಇಲ್ಲವೋ ಎಂದು ಅನುಮಾನಿಸಿದ್ದೆ. ಬಂದಿರಲ್ಲ; ತುಂಬ ಸಂತೋಷ. ನನಗೂ ಚಹ ಆಗಿಲ್ಲ. ಇಲ್ಲಿಯೆ ಕುಳಿತು ಚಹ ತೆಗೆದುಕೊಳ್ಳಬಹುದಲ್ಲ. ಪುಸ್ತಕಗಳನ್ನು ತಂದಿರಿಸಿದ್ದೇನೆ. ನೀವು ಬಾರದಿದ್ದರೆ, ನಿಮ್ಮಲ್ಲಿಗೆ ಅವನ್ನು ತಂದು ಮುಟ್ಟಿಸುತ್ತಿದ್ದೆ" ಎಂದ. ಅವಳ ಮನಸ್ಸು ಹಗುರವಾಯಿತು. ಅಳುಕು ನಿಂತಿತು. ಅಲ್ಲೇ ಕುಳಿತುಕೊಂಡಳು. ಆತ ಕಾಫಿ ತಯಾರಿಸಿಕೊಂಡು, ಅವಳ ಮುಂದೆ ಟೀಪಾಯ್ ಇರಿಸಿ—ಬ್ರೆಡ್, ಬೆಣ್ಣೆಗಳನ್ನು ತಂದಿರಿಸಿದ. "ಕಾಫಿ; ಮತ್ತೇನಿಲ್ಲ—ಸಪ್ಪೆ ಬ್ರೆಡ್, ಬೆಣ್ಣೆ. ನಾನೊಬ್ಬನೇ ಇರುವುದು; ಊಟಕ್ಕೆ ಹೋಟೇಲಿಗೆ ಹೋಗುತ್ತಿದ್ದೇನೆ" ಎಂದು ನುಡಿದು, ಮೊದಲು ತಾನು ಅವಳಿಗಾಗಿಯೆ ತಂದ ಎರಡು ಪುಸ್ತಕಗಳನ್ನು ಮೇಜಿನ ಮೇಲಿರಿಸಿ, ಅವಳನ್ನೇ ನೋಡುತ್ತ ಕುಳಿತ. ಅವಳ ಮುಖದಲ್ಲಿ ಸಂತೋಷ ತುಂಬಿತ್ತೇ ಹೊರತು ಬಾಯಿಂದ ಮಾತು ಹೊರಡುತ್ತಿರಲಿಲ್ಲ.

ಆತನೇ ಸಂಭಾಷಣೆ ಆರಂಭಿಸಿದ: "ನಿಮ್ಮೂರಾವುದು? ಯಾರೊಡನಿದ್ದೀರಿ? ನೌಕರಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಇಲ್ಲಿಗೆ ಬಂದಿರೀ?" ಎಂದು ಆತನೇ ವಿಚಾರಿಸಿದ. ಈಕೆ ತಮ್ಮ ಮನೆಯ ತೊಡಕುಗಳನ್ನು ಹೇಳಿ "ಏನೋ ಬರ ಬೇಕಾಯಿತು; ಹಂಗಿನ ಜೀವನ ಬೇಡವೆನಿಸಿತು. ಇಲ್ಲಿಗೆ ಬಂದರೂ ಈ ಕಚೇರಿಯ ಕೆಲಸ ರುಚಿಕಟ್ಟಿಲ್ಲದ ದುಡಿಮೆಯಾಗಿ ಕಾಣುತ್ತದೆ" ಎಂದಳು.

"ನಾನೇನು ಇದರಲ್ಲಿ ಆಸಕ್ತನೆಂದು ತಿಳಿದಿದ್ದೀರಾ? ನನಗೆ ಇಂಗ್ಲಿಷ್ ಕಾವ್ಯಾಭಿರುಚಿ ಇಲ್ಲದಿದ್ದರೆ ಸಮಯ ಕೊಲ್ಲುವುದೇ ಕಷ್ಟವಾಗುತ್ತಿತ್ತು. ಇಲ್ಲಿಯ ಜೀವನ ನನಗೂ ಬೇಸರವೇ; ಯಾಂತ್ರಿಕ ಜೀವನ ಇದು. ಅದನ್ನು ಬೆಳಗಿಸುವುದಕ್ಕೆ ಇದೊಂದೇ ದಾರಿ" ಎಂದು ತಂದಿರಿಸಿದ ಗ್ರಂಥಗಳ ವಿಚಾರದಲ್ಲಿ ನಾಲ್ಕು ಮಾತನ್ನಾಡಿದ. ಅವುಗಳಲ್ಲಿನ ಒಂದು ಕಾದಂಬರಿಯ ಕಥನವನ್ನೇ ತೊಡಗಿದ. ಮಂಜುಳೆಯ ಕುತೂಹಲ ಕೆರಳುವಷ್ಟರಲ್ಲಿ, ಮಾತು ನಿಲ್ಲಿಸಿ "ತಪ್ಪಾಯಿತು; ಓದುವ ಮೊದಲೇ ನಿಮಗೆ ಕಥೆ ಹೇಳಿದರೆ ಇದ್ದ ಸ್ವಾರಸ್ಯ ಕೆಡುತ್ತದೆ" ಎಂದ. "ಇಲ್ಲ, ಅದು ಹೆಚ್ಚಲೂ ಬಹುದು. ನಾನು ಓದಿದ್ದು ಕಡಿಮೆ; ನೀವು ಹೇಳುವ ಹಾಗೆ ಓದಿಸಿದ್ದ ಮನಸ್ಸಿನ ಬೇಸರ ಹೋಗುವುದಾದರೆ ಎಷ್ಟೋ ಚೆನ್ನಾಗಿರುತ್ತಿತ್ತು" ಎಂದಳು ಅವಳು. ಸುಮಾರು ಒಂದು ತಾಸಿನ ಸಮಯ ಆಕೆ ಅಲ್ಲಿ ಕುಳಿತಳು. ಹೆಚ್ಚಿಗೆ ಕುಳಿತಿರುವುದು ಸರಿಯಲ್ಲ ಎಂದು ತೋರಿ ಎದ್ದರೂ, ಮನಸ್ಸು ಆತನ ಮಾತಿನ ಸವಿಯನ್ನು ನೆನೆಯುತ್ತಿತ್ತು. ಹೊರಡುವುದಕ್ಕೆಂದು ಎದ್ದಳು. "ನಿಮ್ಮದೂ ಹೊಟೇಲಿನ ಊಟವೆಂದ ಮೇಲೆ ರುಚಿ ಬದಲಿಸುವುದಕ್ಕೆ ಇವತ್ತು ಇಲ್ಲಿಯೇ ಊಟ ಮಾಡಬಹುದಲ್ಲ" ಎಂದು ಆತ ಪ್ರಾರ್ಥಿಸಿದ. "ಬೇಡ, ಗೆಳತಿಯರು ಕಾದಿರುತ್ತಾರೆ. ನಾನು ಹೇಳಿಯೂ ಬಂದಿರಲಿಲ್ಲ. ಇನ್ನೊಮ್ಮೆ ಬರುತ್ತೇನೆ" ಎಂದು ಹೇಳಿ ಹೊರಟಳು. ಆತ ಕದವನ್ನು ತೆರೆದ. "ಆದಿತ್ಯವಾರ ಯಾವಾಗಲೂ ಇಲ್ಲಿರುತ್ತೇನೆ. ನನಗೆ ವಿರಾಮವಿರುವ ದಿನ ಅದೊಂದೇ. ಸಂಜೆಯ ಐದು ಘಂಟೆಯ ಸಮಯವಷ್ಟೆ, ಊರಲ್ಲಿದ್ದಾಗ ಎದುರಿನ ಜಿಮಖಾನದಲ್ಲಿ ಟೆನ್ನಿಸ್ ಆಡುವುದಕ್ಕೆ ಹೋಗುತ್ತೇನೆ" ಎಂದ. ಮಂಜುಳೆ ಕೃತಜ್ಞತಾಪೂರ್ಣ ಕಣ್ಣುಗಳಿಂದ ಆತನನ್ನು ಬೀಳ್ಕೊಂಡಳು.

ಮುಂದಿನ ವಾರವೆಲ್ಲ ಆ ಕಾದಂಬರಿಗಳ ಪಠಣದಲ್ಲಿ ಅವಳು ಮಗ್ನಳಾಗಿದ್ದಳು. ಆ ಎರಡು ಕಾದಂಬರಿಯ ವಿಷಯಗಳು—ಸಂಸಾರಿಕ ಜೀವನದ

ಪ್ರೇಮಕ್ಕೆ ಸಂಬಂಧಿಸಿದವು. ಒಲುಮೆ, ಶೃಂಗಾರಗಳ ನೆಲೆ, ಬೆಲೆ, ವಿಸ್ತಾರಗಳನ್ನು ಹೇಳುವಂಥವು. ತೃಪ್ತ ಜೀವನಕ್ಕೆ ಮಾನವನ ಸ್ವಾಭಾವಿಕವಾದ ಲೈಂಗಿಕ ತೃಪ್ತಿಯೂ ಅವಶ್ಯಕವೆಂದು ಹೇಳುವ, ಸುಂದರವಾಗಿ ಚಿತ್ರಿಸಿದ, ಕಥಾನಕಗಳವು. ಇವುಗಳ ಪಠಣದಿಂದ ಅವಳ ಸುಪ್ತ ಮತ್ತು ಜಾಗೃತ ಬಯಕೆಗಳನ್ನು ಕೆರಳಿಸಿದಂತೆಯೂ, ದಾಂಪತ್ಯದ ಜತೆಗಾರಿಕೆಯ ಕನಸನ್ನು ಪ್ರೇರಿಸುವಂತಾದುವು. ಅವಳ ಆಂತರಿಕ ಬಯಕೆಗಳು, ಓದುತ್ತ ತನ್ನನ್ನೇ ಕಥಾನಾಯಕಿಯನ್ನಾಗಿಯೂ, ದೊರೆಸ್ವಾಮಿಯಂಥ ಚೆಲುವ ಸರಸ ಸಂಭಾಷಿಯನ್ನು ನಾಯಕನನ್ನಾಗಿಯೂ ಸ್ಥಾಪಿಸುವುದಕ್ಕೆ ಶಕ್ತವಾಗಿದ್ದುವು. ಅವಳ ಮನಸ್ಸೆಲ್ಲ ಕಾದಂಬರೀಮಯವಾಗಿತ್ತು. ಆ ಒಂದು ವಾರ 'ಈ ಗ್ರಂಥಗಳನ್ನು ತನಗೆ ಕೊಡುವುದಕ್ಕೆ, ದೊರೆಸ್ವಾಮಿಗೆ ಒಂದು ಉದ್ದೇಶವಿರಬೇಕು. ತಾನೇ ಆ ಉದ್ದೇಶವಾಗಿದ್ದಲ್ಲಿ ಎಷ್ಟು ಚೆನ್ನಾಗಿರುತ್ತಿತ್ತು' ಎಂಬ ಅಭಿಲಾಷೆ ಅವಳಲ್ಲಿ ಮೂಡಿತ್ತು. 'ಆತ ತನಗೆ ಸಾಧ್ಯನೇ? ಅಷ್ಟೊಂದು ಓದಿದವ' ಎಂದು ಚಿಂತಿಸಿದಾಗ ಜತೆಗೆ ಅನುಮಾನವೂ ಮೂಡುತ್ತಿತ್ತು. ಆತ ಮನೆಯಲ್ಲಿ ಒಂಟಿಯಾಗಿದ್ದಂತೆ ಕಾಣಿಸುತ್ತಿತ್ತು. ಬದಲು ಇಷ್ಟರೊಳಗೆ ಮದುವೆಯಾದವನಾಗಿದ್ದರೆ ತಾನು ವ್ಯರ್ಥ ಹಂಬಲಿಸಿದಂತಾಗುತ್ತದೆ--ಎಂಬ ನಿರಾಶೆಯೂ ಬರುತ್ತಿತ್ತು. 'ಆತ ತನ್ನಂತೆ ಅವಿವಾಹಿತನಾಗಿದ್ದರೆ ಎಷ್ಟು ಚೆನ್ನ!' ಎಂದು ಮನಸ್ಸು ಕೋರುತ್ತಿತ್ತು. ತನ್ನ ಮನಸ್ಸನ್ನು ಪ್ರಕಟಿಸುವ ಮುಂಚೆ ಅವನ್ನೆಲ್ಲ ತಿಳಿದರೆ ಲೇಸಿತ್ತು ಎಂದು ಯೋಚಿಸಿದಳು. ಅದೇ ಯೋಚನೆಯಿಂದಾಗಿ, ಮುಂದಣ ಶನಿವಾರ ರಾತ್ರಿ, ಅವಳು ಚೆನ್ನಾಗಿ ನಿದ್ರಿಸಿದ್ದೆಂಬುದಕ್ಕೂ ಇಲ್ಲ.

ವಾರದ ಆರು ದಿನಗಳೂ ದೊರೆಸ್ವಾಮಿಗಾಗಿ ಕಾದು, ಅವಳು ಬಯಸಿದ ಆದಿತ್ಯವಾರ ಬರುವಂತೆ ಬಂದಿತಾದರೂ, ಮಂಜುಳೆಯ ಮನಸ್ಸಿಗೆ ಅದು ತೀರ ಮೆಲ್ಲಗೆ ಬಂದಂತೆ ಕಾಣಿಸಿತು. ಮನೆಯಿಂದ ಹೊರಡುವ ಮುಂಚೆ- ತುಂಬ ಆಕರ್ಷಕವಾಗಿ ಉಡುಗೆಯುಟ್ಟು, ಓದಿ ಮುಗಿಸಿದ ಕಾದಂಬರಿಗಳನ್ನು ಹಿಡಿದುಕೊಂಡು ಹೊರಟಳು. ಅಂಜಲಿ ವಿವರಿಸಿದ 'ಬೋರಿವ್ಲಿ' ವಿಹಾರಕ್ಕೆ ಹೋಗಲಿಲ್ಲ. ಅವಳ ಚೇಷ್ಟೆಯ ಮಾತುಗಳನ್ನು ಕೇಳಿಯೂ, ಶಿವಾಜಿ ಪಾರ್ಕಿಗೆ ಹೊರಟಳು. ಈ ಬಾರಿ ಅಳುಕಿನ ಬದಲು ಮನಸ್ಸಿನಲ್ಲಿ ಸಂತೋಷ, ನಿರೀಕ್ಷೆಗಳು ಕುಣಿದಾಡುತ್ತಿದ್ದವು. ದೊರೆಸ್ವಾಮಿ ಮೊದಲಿನಂತೆ ಅವಳನ್ನು ಸ್ವಾಗತಿಸಿದ. ಉಪಹಾರಕಾಗಿ--ಕಾಫಿಯ ಜತೆಗೆ

ಬಿಸ್ಕಿಟು, ಹಣ್ಣುಗಳನ್ನು ತಂದಿರಿಸಿದ್ದ. ಅನಂತರ ಅವಳೊಡನೆ ಸಂಭಾಷಣೆಗೆ ತೊಡಗಿದ. ಮಂಜುಳೆಯ ಬಾಯಿಂದ ಕಾದಂಬರಿಯ ವಿಮರ್ಶೆಯನ್ನು ಕೇಳಿದ; ಹಿಗ್ಗಿದ. ಇನ್ನೊಂದು ಗ್ರಂಥವನ್ನು ಅವಳ ಮುಂದೆ ತಂದಿರಿಸಿದ. ಅವನ ಒತ್ತಾಯಕ್ಕೆ ಮಂಜುಳೆಯೂ ಬಹು ಹೊತ್ತು ಅಲ್ಲಿಯೇ ಕುಳಿತಳು. ಇಬ್ಬರೂ ಜತೆಗೇನೆ ಮಧ್ಯಾಹ್ನ, ಡಬ್ಬಿಯ ಊಟ ತರಿಸಿ ತಿಂದು ಮುಗಿಸಿದರು. ಅನೇಕ ವಿಷಯಗಳೆಡೆಯಲ್ಲಿ, ಮಂಜುಳೆ, ದೊರೆಸಾಮಿಯ ಊರು, ಮನೆ, ಬಂಧು ಬಾಂಧವರನ್ನು ಕುರಿತು ಪ್ರಶ್ನೆ ಕೇಳುವುದಕ್ಕೆ ಹಿಂಜರಿಯಲಿಲ್ಲ. ದೊರೆಸಾಮಿ ಉತ್ತರಿಸುವುದಕ್ಕೂ ಹಿಂಜರಿಯಲಿಲ್ಲ. ತಾನಾಗಿ ಒಮ್ಮೆ "ನನಗೆ ಮುನ್ನೂರು ರೂಪಾಯಿಗಳಷ್ಟು ಸಂಬಳ ಕೈಗೆ ಬರುತ್ತಿದೆ. ಆದರೆ ಅದರಲ್ಲಿ ಉಳಿಯುವುದೇನೂ ಇಲ್ಲ. ಊರಲ್ಲಿ ತಾಯಿ ಇದ್ದಾಳೆ; ಓದುವ ತಮ್ಮಂದಿರಿದ್ದಾರೆ; ಅಲ್ಲದೆ ಮದುವೆಗೆ ನೆರೆದ ತಂಗಿಯೊಬ್ಬಳಿದ್ದಾಳೆ. ನಮ್ಮಲ್ಲಿ ಒಂದು ಮದುವೆ ಎಂದರೆ ಒಂದು ಸಾಲವನ್ನೇ ಹೊತ್ತಂತೆ. ತಂದೆ ಮಾಡಿಟ್ಟ ಒಂದು ಸಾಲ ಮುಗಿಯುವುದರೊಳಗೆ ಇನ್ನೊಂದು ಸಾಲ ಮಾಡಬೇಕು" ಎಂದು ತನ್ನ ಲೌಕಿಕ ಪ್ರಪಂಚವನ್ನು ಕುರಿತು ಆತ ಬಣ್ಣಿಸಿದ್ದ.

"ಹಾಗಾದರೆ ಮದುವೆಮಾಡಿಕೊಂಡೇ ಇಲ್ಲ ಇನ್ನೂ ತನಕ?" ಎಂದು ಕೇಳಿದಳು ಮಂಜುಳೆ. ಅದನ್ನು ಕೇಳಬೇಕೆಂದೇ, ಬೆಳಗಿನಿಂದ ಅವಳು ಕಾದು ಕುಳಿತಿದ್ದಳು. ಈಗ ಆ ಅವಕಾಶ ದೊರೆಯಿತು. ಆತ ತುಸು ನಿಧಾನಿಸಿ "ಮದುವೆಯಾಗಬೇಕಾದ್ದೇನೋ ಇದೆ. ನೀವು ಆ ಕಾದಂಬರಿಯಲ್ಲಿ ಓದಿದ ಹಾಗೆ, ಮನಸ್ಸಿಗೆ ತಕ್ಕವರು ದೊರೆತರೆ, ಒಂದು ಲೆಕ್ಕ. ಇಲ್ಲವಾದರೆ ಸಂಸಾರವೆಂದರೆ ಆಮರಣ ಪರ್ಯಂತ ಒಂದು ಬಂಧನ" ಎಂದು ಉತ್ತರಿಸಿದ.

"ಅದು ನಿಜ. ಆದರೆ ಆ ತಕ್ಕವರು ಎಂಥವರಾಗಿರಬೇಕು?" ಎಂದು ತುಂಟ ನಗುವಿನೊಡನೆ ಕೇಳಿದಳು.

"ಅದನ್ನು ಬಾಯ್ಬಿಟ್ಟು ಬಣ್ಣಿಸುವುದಕ್ಕಾಗುತ್ತೆಯೇ ಅಥವಾ ಬಯಸಿದ್ದೆಲ್ಲ ಕೈಯ ಮೇಲೆ ಬಂದು ಬೀಳುತ್ತದೆಯೆ? ಮೆಲ್ಲಗೆ ಅಂಥವರನ್ನು ಹುಡುಕಬೇಕು. ಮನಸ್ಸಿಗೆ ಸಮಾಧಾನ ಬರಬೇಕು. ಅನಂತರ ಆಲೋಚನೆ."

"ಅಂಥವರಿನ್ನೂ ಸಿಕ್ಕಿಲ್ಲ?"

"ಅದು ಸ್ವಯಂ ಸ್ಪಷ್ಟ."

"ಸಿಕ್ಕಿದರೆ ಆಗುತ್ತೀರಾ?" ಎಂದಳು; ನಕ್ಕಳು. ಎದುರಿಗೆ ಕುಳಿತಿದ್ದ

ದೊರೆಸ್ವಾಮಿ ಅವಳ ಕೈಯನ್ನೊಮ್ಮೆ ಒತ್ತಿ ಹಿಡಿದು "ನೀವು ಬಹಳ ತುಂಟ ಸ್ವಭಾವದವರು" ಎಂದ. ಆ ಸಂಜೆ ಆತ ಟೆನ್ನಿಸಿಗೆ ಹೋಗಲಿಲ್ಲ. ಬದಲು ಕಡಲು ತೀರಕ್ಕೆ ಮಂಜುಳೆಯೊಡನೆ ಹೋಗಿ ಮಾತನಾಡುತ್ತ ವೇಳೆ ಕಳೆದು, ಕತ್ತಲಾಗುವ ವೇಳೆಗೆ, ದಾದರಿನ ಹಿಂದೂ ಕಾಲೊನಿಯ ತನಕ ಹೋಗಿ, ಅವಳನ್ನು ಬಿಟ್ಟು ಬಂದ.

ಆ ದಿನ ದೊರೆಸ್ವಾಮಿ ಮಂಜುಳೆಯನ್ನು ಗೆದ್ದದೇನೋ ನಿಜ; ಅವಳು ತಾನೇ ಗೆದ್ದಂತೆ ತಿಳಿದುದೂ ನಿಜ. ಆದರೆ ಮುಂದಣ ಭವಿಷ್ಯ ಅವಳ ಕೈಯಲ್ಲಿರಲಿಲ್ಲ. ಅವಳು ಪ್ರತಿ ಆದಿತ್ಯವಾರವೂ ದೊರೆಸ್ವಾಮಿಯ ಕೊಟಡಿಗೆ ಹೋಗಿ ಬರತೊಡಗಿದಳು. ಅವನೊಡನೆ ಸರಸಸಲ್ಲಾಪಗಳಲ್ಲಿ ವೇಳೆ ಕಳೆಯುತ್ತಿದ್ದಳು. ಮೆಲ್ಲಮೆಲ್ಲಗೆ ಆತನಿಂದ ಮದುವೆಯಾಗುವೆನೆಂಬ ವಚನವನ್ನೂ ಪಡೆದಳು. ಅನಂತರ ತನ್ನ ಇಷ್ಟ ಕಾಮನೆಗಾಗಿ ಅವನೊಡನೆ ಪ್ರತಿ ವಾರವೂ ರಾತ್ರಿಯನ್ನು ನಿರಾತಂಕವಾಗಿ ಕಳೆಯತೊಡಗಿದಳು. ಮದುವೆಯ ಮಾತನ್ನು ಆಗಾಗ ಅವನೊಡನೆ ಎತ್ತುತ್ತಿದ್ದಳು. "ಈ ವರ್ಷ ತಂಗಿಯ ಮದುವೆಯೊಂದನ್ನು ನಾನು ಮುಗಿಸಿದರೆ ಮುಂದೆ ಪಾರಾಗುತ್ತೇನೆ. ಅದಕ್ಕೆ ನಾಲ್ಕು ತಿಂಗಳು ತಡೆಯಲಾರೆಯಾ? ನನ್ನಲ್ಲಿ ಅಪನಂಬಿಗೆಯೆ?" ಎಂದು ಆತ ಬೇಡುತ್ತಿದ್ದ. 'ದೊರೆಸ್ವಾಮಿಯನ್ನು ನಂಬದೆ ಇನ್ನಾರನ್ನು ನಂಬಬೇಕು?' ಎಂದು ಅವಳಿಗೂ ಕಾಣುತ್ತಿದೆ. ಆ ನಂಬಿಕೆಯ ಪರಿಣಾಮ, ಅವಳನ್ನು ಬಹು ದಿನಗಳ ತನಕ ಶಾಂತವಾಗಿರಗೊಡಲಿಲ್ಲ. ಅವಳ ನಿರಾತಂಕ ಸ್ನೇಹ, ಆರು ತಿಂಗಳ ತನಕವೂ ನಡೆದು, ಅನಂತರ ಅವಳು ಕಣ್ತೆರೆಯುವಂತೆ ಮಾಡಿತು. 'ಮದುವೆಯಾಗೋಣ; ಮುಂದುವರಿಸಬಾರದು' ಎಂದು ಆತನನ್ನು ಅವಳು ಬೇಡತೊಡಗಿದಳು. ಯಾವುದೋ ಭಯ ಅವಳನ್ನು ಒತ್ತಾಯಿಸುತಿತ್ತು.

ಗಂಡುಸಾದ ದೊರೆಸ್ವಾಮಿಗೆ ತಾತ್ಕಾಲಿಕವಾದ ಯಾವ ಭಯವೂ ಇದ್ದಿರಲಿಲ್ಲ. ಮದುವೆಯಾಗುವ ಉತ್ಕಟ ಇಚ್ಛೆಯೂ ಅವನಲ್ಲಿತ್ತು. ಅದಕ್ಕೆ ಉಪಾಯವನ್ನು ಆತ ಎಣಿಸುತ್ತಿದ್ದ. ಆ ಉಪಾಯವೆಂದರೆ– ಈ ಮೊದಲೇ ಅವನ ಕೈ ಹಿಡಿದು ಮೂರು ಮಕ್ಕಳ ತಾಯಿಯಾಗಿದ್ದ, ಅವನ ಮಡದಿ ಜಯಳನ್ನು ರಂಗೂನಿಂದ ಮರಳಿ ಕರೆಯಿಸದೆ ಇರುವುದು. ಬರ್ಮಾದಲ್ಲಿ ದೊರೆಸ್ವಾಮಿಯ ಮಾವ ಉದ್ಯೋಗದಲ್ಲಿದ್ದಾನೆ. ಆತ ಹೇರಳ ಸಂಪತ್ತು ಗಳಿಸಿದ್ದಾನೆ. ಅವರಿಗೆ ಭಾರತಕ್ಕೆ ಬರುವ ಬಿಡುವಿಲ್ಲದುದರಿಂದ, ಈತನೇ

ಹೆಂಡತಿಯನ್ನು ಮಕ್ಕಳೊಡನೆ ಮಾವನ ಮನೆಗೆ ಕಳುಹಿಸಿದ್ದಾನೆ. ಒಂದು ವರ್ಷಕಾಲ ಅವಳು ತಿರುಗಿ ಮುಂಬಯಿಗೆ ಬರಲಾರಳೆಂದೆಣಿಕೆ. ಮಾವನೊಡನೆ ಜಗಳ ಕಾದು, ಸಾಲ ಕೇಳಿ, ನೆಪವಿಲ್ಲದ ನೆಪ ಹೂಡಿ, ಹೆಂಡತಿಯನ್ನು ದೂರಮಾಡುವ ಮನಸ್ಸೂ ಅವನಿಗೆ ಉಂಟಾಗಿದೆ. ಅಷ್ಟೆಲ್ಲ ಸಾಧ್ಯವಾದರೆ ಮಾತ್ರ ಮಂಜುಳೆಯೊಡನೆ ಮದುವೆ ಸಾಧ್ಯ. ಬದಲು ಅದಕ್ಕಿಂತ ಮುಂಚಿತವಾಗಿ ಅವನ ಹೆಂಡತಿ ಜಯ ತನ್ನ ಮಕ್ಕಳನ್ನು ಕಟ್ಟಿಕೊಂಡು ತಾನಾಗಿ ಹದ್ದಿನಂತೆ ಬಂದೆರಗಿದರೆ, ಮಂಜುಳೆ ಎಲ್ಲೋ ಅವನೆಲ್ಲೋ! ಈ ಪರಿಸ್ಥಿತಿಯ ಒಂದು ಸುಳಿವನ್ನೂ ತನ್ನ ಮುಗ್ಧ ಪ್ರೇಯಸಿಗೆ ದೊರೆಸಾಮಿ ಕೊಡಲಿಲ್ಲ.

ಅವಳು ಅವನನ್ನು ಅಖಂಡವಾಗಿ ನಂಬಿದ್ದಳು. ಮದುವೆಯ ಸುದಿನವನ್ನು ನೆನೆದುಕೊಂಡೆ ಅವಳು ಭಾವೀ ಪತಿಗೆ ಶರೀರವನ್ನರ್ಪಿಸಿದ್ದಳು. ಅದರ ಫಲವಾಗಿ ತಾನು ತಾಯಿಯಾಗುತ್ತಿರುವೆನೆಂಬ ಅರಿವನ್ನೂ ತಂದುಕೊಂಡಳು. ಅಲ್ಲಿಂದ ಅಡಿಗಡಿಗೂ ಅವಳಿಗೆ ಭಯವೇ. ಭಯದಿಂದ ಅವಳು ದೊರೆಸಾಮಿಯನ್ನು ಯಾಚಿಸುವಂತಾಯಿತು. 'ತನ್ನನ್ನು ಅನಾಥಳನ್ನಾಗಿ ಮಾಡಬೇಡ' ಎಂದು ಬೇಡುವಂತಾಯಿತು. ತನ್ನ ಮೈ, ಪೂರ್ವಜೀವನದ ಕಥೆಯನ್ನು ಹೇಳುವಷ್ಟು ಗಾತ್ರವನ್ನು ಹೊಂದುತ್ತಿದೆ—ಎಂಬ ಅರಿವಾದಾಗ, ಆಕೆ ದೊರೆಸಾಮಿಯೊಡನೆ ನಿಷ್ಠುರವಾಗಿ ಮಾತನಾಡುವ ಪ್ರಸಂಗ ಒದಗಿತು. ಆತ ಅದರಿಂದಲೂ ಕೆರಳಲಿಲ್ಲ. ಅವಳಿಗೆ ಧೈರ್ಯದ ಮಾತುಗಳನ್ನೇ ಹೇಳುತ್ತಿದ್ದ. 'ನಾನು ಬದುಕಿದ್ದರೆ ನಿನ್ನನ್ನು ಮದುವೆಯಾಗುವುದು ನಿಜ' ಎಂಬ ಭಾಷೆಯನ್ನೂ ಕೊಟ್ಟ. ತನ್ನ ಗೆಳತಿಯ ಭಯದ ಕಾರಣವನ್ನು ನಿವಾರಿಸುವ ಹಂಚಿಕೆ ಹೂಡಿದ. ಅವಳನ್ನು ಚೆಲುವಿನ ಮಾತುಗಳಿಂದ ಒಲಿಸಿ, ಅಂಧೇರಿಯಲ್ಲಿರುವ—ಡಾಕ್ಟರ್ ನಾರಿಯಲ್‌ವಾಲನ ಮೆಟರ್ನಿಟಿ ಗೃಹಕ್ಕೆ ಸೇರಿಸಿದ.

ಅಲ್ಲಿ ಮಂಜುಳೆ ತಿಂಗಳ ಕಾಲವನ್ನು ಕಳೆದಳು. ಒದಗುವ ತಾಯ್ತನ ಕಳೆದುಕೊಂಡಳು. ಅದರಿಂದ ಬಂದ ಜ್ವರ ಅಶಕ್ತಿಗಳನ್ನು ಅನುಭವಿಸಿದಳು. ತಿಂಗಳ ತನಕ—ಮನಸ್ಸಿನಲ್ಲಿ ಯಮಯಾತನೆಗಳನ್ನನುಭವಿಸಿದಳು. ಅವಳು ಯಾತನೆಗಳನ್ನನುಭವಿಸುತ್ತಿದ್ದಷ್ಟು ಕಾಲ ದೊರೆಸಾಮಿಗೆ ಅವಳನ್ನು ಭೇಟಿಯಾಗುವ ಸಾಹಸವೂ ಬರಲಿಲ್ಲ. ಮುಂದೆ ಅದು ಬರಲೂ ಇಲ್ಲ. ತನ್ನ

ಸವಿಗಾರ ಪ್ರಣಯಿ ಮನೋಹರನಿಗಿಂತಲೂ ಈತ ಹೆಚ್ಚು ಕೃತಘ್ನ ಎಂಬ ಭಾವನೆ, ಮಂಜುಳೆಯಲ್ಲಿ ಮೂಡಿತು. ಅದನ್ನು ಅವನಿಗೆ ಹೇಳುತ್ತೇನೆ-ಎಂಬ ದುಃಖಪೂರಿತ ರೋಷದಿಂದ ತುಂಬಿ ತುಳುಕಿದಳು. ತನ್ನ ಅವಮಾನಿತ ದೇಹವನ್ನು ಹೊತ್ತುಕೊಂಡು, ತನ್ನ ವಸತಿಗೃಹಕ್ಕೆ ಮರಳಿಬಂದಳು. ಅಲ್ಲಿ ಅಂಜಲಿಯು ಅವಳಿಗೆ ಚುಚ್ಚುಮಾತುಗಳನ್ನಾಡಿದಳು. ಆಗ ಮಂಜುಳೆಯ ಧೈರ್ಯ ಕುಸಿಯಿತು. ಇವಳು ಬಿಕ್ಕಿ ಬಿಕ್ಕಿ ಅಳುವುದನ್ನು ಕಂಡು ಅವಳೇ ಅನುತಾಪದಿಂದ "ನಿನ್ನನ್ನು ನೋಯಿಸುವುದಕ್ಕೆ ನಾನು ಹಾಗೆ ಹೇಳಲಿಲ್ಲ. ಇಂಥದು ಪ್ರತಿಯೊಬ್ಬರ ಜೀವನದಲ್ಲೂ ಆಗುತ್ತದೆ. ಅದೇನು ದೊಡ್ಡದು! ನೀನು ಒಂದು ಸಾರಿ ಆಸ್ಪತ್ರೆಗೆ ಹೋಗಿದ್ದರೆ ನಾನು ಮೂರು ಸಾರಿ ಹೋಗಿದ್ದೇನೆ" ಎಂದು ಅವಳು ಹೆಮ್ಮೆಯಿಂದ ನುಡಿದಳು. ಅಂಥ ಹೆಮ್ಮೆ ಮಂಜುಳೆಗೆ ಮಾತ್ರ ಬರಲಿಲ್ಲ. ಅವಳ ಮಾನಸಿಕ ಯಾತನೆಗಳನ್ನು ಅದು ಕಡಿಮೆ ಮಾಡಲೂ ಇಲ್ಲ.

ಮುಂದಿನ ಆದಿತ್ಯವಾರ ಬಂದಿತು. ಮಂಜುಳೆ ತನ್ನ ಸೇಡನ್ನು ತೀರಿಸಲು, ಕಾದ ಸರ್ಪಿಣಿಯಂತೆ-ಶಿವಾಜಿ ಪಾರ್ಕಿನ ಗೆಳೆಯನ ಮನೆಗೆ ಹೋದಳು. ಆ ದಿನ ಅವಳು ಮನೆಯ ಬಾಗಿಲ ಗುಂಡಿಯನ್ನು ಒತ್ತಿದ ರೀತಿಯೂ ಅಷ್ಟು ತೀಕ್ಷ್ಣವಾಗಿತ್ತು. ಆದರೆ ಬಾಗಿಲನ್ನು ತೆರೆದದ್ದು ದೊರೆಸಾನಿಯಲ್ಲ; ಬದಲು ಅವನ ಮಡದಿ ಜಯ. ಮಂಜುಳೆಗೆ ಸಿಡಿಲೆರಗಿದಂತಾಯಿತು. "ಕ್ಷಮಿಸಿ, ಈ ಮನೆಯಲ್ಲ. ತಪ್ಪಿ ಗುಂಡಿಯನ್ನೊತ್ತಿದೆ. ಕೋಪಿಸಿಕೊಳ್ಳಬೇಡಿ" ಎಂದು ಬಡಬಡಿಸಿ, ಮಂಜುಳೆ ಅಲ್ಲಿಂದ ಧಾವಿಸಿಬಿಟ್ಟಳು.

# ಹತ್ತನೆಯ ಅಧ್ಯಾಯ.

ಗೀತೆಯು ಮನೋಹರನೊಡನೆ ಪುಟ್ಟ ನೌಕೆಯೊಂದರಲ್ಲಿ ಕುಳಿತು, ಸರಸ್ಸಿನಲ್ಲಿ ಪ್ರೇಮಯಾತ್ರೆಗೆ ಹೊರಟ ಪಯಣಿಗಳು ಮಂಜುಳೆ. ಪಯಣ ಹೊರಟ ದಿನ ಆ ಸರಸ್ಸು ಶಾಂತವಾಗಿ ಕಾಣಿಸಿತ್ತು. ಅದರ ನೀಲಜಲ ಮನಮೋಹಕವಾಗಿತ್ತು. ಸುತ್ತಲಿನ ದಂಡೆ ಸಮೀಪವಾಗಿತ್ತು. ಅಲ್ಲಿ ಎಂದೆಂದಿಗೂ ಹೀಗೆಯೇ ತೇಲುತ್ತಿರೋಣ ಎಂಬ ಆಸೆಯಾಗಿತ್ತು. ದೂರದ ದಂಡೆಯಲ್ಲಿ ನಿಂತ ಜನವರ್ಗವು, ತನಗೆ ದೋಣಿ ಸಾಗಿಸಲು ಬಾರದು, ಎಂದು ತಿಳಿದರೂ ತಾನು ನಿಸ್ಸಹಾಯಳಲ್ಲ; ಮಾರ್ಗದರ್ಶಕನಾಗಬಲ್ಲಂಥ ಜತೆಗಾರನಿದ್ದಾನೆ--ಎಂಬ ಭಾವನೆ ಅವಳಲ್ಲಿ ಉಂಟಾಗಿತ್ತು. ಆ ಶಾಂತ ಸರಸ್ಸಿನಲ್ಲೂ ತೆರೆಗಳೇಳಬಲ್ಲವು, ತನ್ನ ಜತೆಗಾರನನ್ನು ದೋಣಿಯಿಂದ ಕಿತ್ತುಕೊಂಡು ಒಬ್ಬಂಟಿಗಳನ್ನಾಗಿ ಮಾಡಿ ತನ್ನನ್ನು ಅಪಹಾಸ್ಯಕ್ಕೆ ಗುರಿಮಾಡಬಲ್ಲವು --ಎಂದು ಅವಳು ತಿಳಿದಿರಲಿಲ್ಲ. ಅದನ್ನು ಅನಂತರ ತಿಳಿದುಕೊಂಡಳು.

ಆ ಗೀತೆಯು ಸಾಹಸವಾದರೇನು? ತಾನು ದೋಣಿಯನ್ನು ನಡೆಸಬಲ್ಲೆ. ಆ ಸಾಹಸ ತನಗಿದೆ. ಇಷ್ಟೇ ತೀರದಕು ಸುತ್ತಲಿನ ದಂಡೆಯಲ್ಲಿ ನೋಡುವ ಕಡುಗಣ್ಣುಗಳು ತನ್ನನ್ನು ಅಪಹಾಸ್ಯಮಾಡದಂತೆ ತೇಲುವುದು ಮುಖ್ಯ. ಅದರಿಂದಾಗಿ-- ದೋಣಿಯಲ್ಲಿ ಸಂಚರಿಸುತ್ತ ದಂಡೆಯಲ್ಲಿನ ಬಿರುಕೊಂದನ್ನು ಕಂಡು, ಇದು ಸರಸ್ಸಲ್ಲ, ಸಾಗರದ ಒಂದು ಭಾಗ. ಅದನ್ನು ಸೇರಿ ದಂಡೆಗಿಂತ ದೂರಾಗಿ, ತೇಲುವುದು ಸುಲಭ--ಎಂದು ಮುಂಬಯಿಗೆ ಪಯಣ ಹೊರಟಳು. ಆಗ ಬಾಳಿನ ಕಡಲು ಇನ್ನಷ್ಟು ವಿಸ್ತಾರವಾಯಿತು. ಕಣ್ಣೆದುರಿನ ಸೌಂದರ್ಯ ಇನ್ನಷ್ಟು ಚೆಲುವುಗೊಂಡಿತು. ದಂಡೆಯನ್ನು ಬಿಟ್ಟು ಸರಿದರೆ ದಿಗಂತವೇ ಮೇರೆ ಎಂದು ಕಾಣಿಸಿತು. ತನ್ನಂತೆಯೇ ಪುಟ್ಟ ಪುಟ್ಟ ನೌಕೆಗಳಲ್ಲಿ ಕುಳಿತು ವಿಹರಿಸುತಿದ್ದವರೆಷ್ಟೋ ಮಂದಿ! ಎಲ್ಲರೂ ನಗುವವರೇ! ಎಲ್ಲರೂ ಆತ್ಮಸಂತೋಷ ತಾಳಿದವರೇ. ಆ ಕಡಲು ಎಷ್ಟು ನೀಲ! ಆ ನೀಲವರ್ಣವೆಷ್ಟು ಅನಂತ. ಮೇಲೆ ನೋಡಿದರೆ ಇನ್ನೂ ನೀಲವಾದ ಆಗಸ. ಅಲ್ಲಿ ತನ್ನಂತೆ ಪ್ರಣಯ ನೌಕೆಗಳನ್ನೇರಿ ಚಲಿಸುತ್ತಿರುವ ತಾರೆಗಳು ಅಸಂಖ್ಯಾತ. ಆದರೂ ಒಬ್ಬಳೇ ದೋಣಿಯಲ್ಲಿ ಸಾಗಲು ಬೇಸರ. ಹಾಗೆಂದು ಇನ್ನೊಂದು ನೌಕೆಯಲ್ಲಿ ಕುಳಿತ ದೊರೆಸಾಮಿಯನ್ನು ತನ್ನವನನ್ನಾಗಿ ಮಾಡಿಕೊಂಡಳು.

ಸವಿ ಪಯಣ ತೊಡಗಿದಳು. ಶಾಂತವಾಗಿ ಕಾಣುವ ಆ ನೀಲಿಮೆಯ ವಿಸ್ತಾರದಲ್ಲಿಯೂ ತೆರೆಗಳೇಳಬಹುದು; ಉಕ್ಕಿ ಉರುಳಬಹುದು; ಆ ನೀಲ ಜಲದ ಕೆಳಗೆ ಬಂಡೆಗಳು ಹುದುಗಿರಬಹುದು. ಅವು ತನ್ನ ನೌಕೆಯನ್ನು ಮುಣುಗಿಸಬಹುದು. ಎಲ್ಲಿಯೂ ಕಾಣಿಸದಂಥ ಬಿರುಗಾಳಿಯೊಂದು ಇದ್ದಕ್ಕಿದ್ದಂತೆ ಹುಟ್ಟಿ, ಪ್ರಳಯಸ್ವರೂಪಿಯಾಗಿ ತನ್ನ ಜೀವನವನ್ನೇ ಅದು ತಳಮಳಗೊಳಿಸಬಹುದು; ನುಂಗಬಹುದು—ಎಂಬ ಅರಿವು ಮಾತ್ರ ಆ ನಾವಿಕಳಿಗಿರಲಿಲ್ಲ. ಸರಸ್ಸಿನ ಕಿರುಪಯಣದಲ್ಲಾದ ಆಕಸ್ಮಿಕ ಘಟನೆಯೂ ಮರವೆಯಾಗಿತ್ತೋ ಏನೋ. ಈಗ ಎರಡನೆಯ ಬಾರಿಗೆ ಬಿರುಗಾಳಿ ಕಾಣಿಸಿತು. ಅವಳ ದೋಣಿ ಮುಕ್ಕಾಗೊಂಡಿತು. ಜತೆಯಲ್ಲಿದ್ದ ಪಯಣಿಗ ಉರುಳಿಬಿದ್ದ. ಅವಳು ತಿರುಗೊಮ್ಮೆ ಒಂಟಿಯಾದಳು. 'ಇನ್ನೇನು ತನ್ನ ಮುಂದಣ ಗತಿ!" ಎಂಬ ವಿಚಾರ ಉದಯಿಸಿತು. ಬಾಳ ನೌಕೆ ಗುರಿ ಇಲ್ಲದೆ ತೇಲಿತು. ವಿಕ್ಕ್ರಪಿಲ್ಲದೆ ಗುರಿಯನ್ನು ಅದು ಸೇರಲಾರದು ಎಂಬ ಅನುಭವ ಅವಳಿಗೆ ಹೇಗಾಗಬೇಕು? ತನ್ನಂತೆಯೆ—ಕಂಡ, ಕಂಡ ದೋಣಿಯಲ್ಲಿ ತೇಲುತ್ತಿರುವ ಅಂಜಲಿಯೇ ಅವಳಿಗೆ ಧೈರ್ಯವನ್ನು ಕೊಡಬೇಕು. ಅವಳೇನೋ ಅಂಥ ಧೈರ್ಯ ಕೊಡುತ್ತಿದ್ದಾಳೆ.

ಅಂಧೇರಿಯ ಆಸ್ಪತ್ರೆಯಿಂದ ಹೊರಬಿದ್ದು, ಅಣ್ಣನಿಗೆ ಪತ್ರ ಬರೆದು ಹಣ ತರಿಸಿಕೊಂಡಳು. ಅಪಾರ ದಂಡ ತೆತ್ತು ಒಮ್ಮೆಗೆ ಬದುಕಿಬಂದಳು. ತನ್ನನ್ನು ತೊರೆದ, ಅಥವ ಮೋಸಕ್ಕೀಡುಮಾಡಿದ ಪ್ರಣಯಿಯನ್ನು ಶಪಿಸಿದರೂ, ಸೇಡು ತೀರಿಸುವುದಾಗಲಿಲ್ಲ. ಅವನ ಮಡದಿಮಕ್ಕಳನ್ನು ಒಂದು ಕ್ಷಣ ಕಂಡಾಗ 'ನಾನು ಪಾರಾದುದೇ ಒಳಿತು; ವಿಶ್ವಾಸಘಾತಕಿಯಾಗಬಲ್ಲ ಜತೆಗಾರನನ್ನು ತಿಳಿದದ್ದೇ ಒಳಿತು' ಎಂದಂದುಕೊಂಡಳು. ತನ್ನ ಮನಸ್ಸು ತಡೆಯದ್ದಕ್ಕೆ, ದೀರ್ಘವಾದೊಂದು ಪತ್ರವನ್ನು ಅವನಿಗೆ ಬರೆದಳು: 'ಕಪಟವರಿಯದ ತನ್ನನ್ನು ವಂಚನೆಗೆ ಗುರಿಮಾಡಿದಿಯಲ್ಲ' ಎಂದು ದೂಷಿಸಿದಳು. ಅನಂತರವೂ ಒಂದೆರಡು ಬಾರಿ ಗಾಂವಕರ್ ಇರುವಲ್ಲಿಗೆ ಆ ದೊರೆಸಾಮಿ ಬಂದಿದ್ದ. ಅವಳನ್ನು ಕಂಡೂ ಕಾಣದಂತೆ ಸರಿದುಹೋಗಿದ್ದ. ಮಾರೋಲೆ ಬರೆಯುವ ಸಾಹಸವು ಆ ಹೇಡಿಗೆಂತು ಬಂದೀತು—ಎಂದು ಮಂಜುಳೆ ಯೋಚಿಸಿದಳು.

ಆದರೂ ಸಹಿಯಿಲ್ಲದ ಮಾರೋಲೆಯೊಂದು ಅವಳಿಗೆ ಬಂದೇ

ಬಂದಿತು. ಅದು ಅಚ್ಚಕ್ಷರಗಳಲ್ಲಿದ್ದಿತ್ತು. ದೊರೆಸ್ವಾಮಿ ಆ ಪತ್ರದಲ್ಲಿ ಕ್ಷಮಾ ಯಾಚನೆ ಮಾಡಿದ್ದ. ಅದರಲ್ಲಿ–ಮಂಜುಳೆಗೆ ತಾನು ಕೊಟ್ಟ ಕಾದಂಬರಿಯ ಸನ್ನಿವೇಶಗಳನ್ನು ಉದಹರಿಸಿದ್ದ. ತನ್ನ ಬಾಳು ಅಸಂತೃಪ್ತವಾಗಿತ್ತು; ತಾನು ಮೊದಲಿನಾಕೆಯನ್ನು ಉಪಾಯಾಂತರವಾಗಿ ತ್ಯಜಿಸಿಬಿಡುವ ಯೋಚನೆ ಯನ್ನೂ ಮಾಡಿದ್ದೆ. ಮಂಜುಳೆಯಲ್ಲಿ ಕಪಟವನ್ನೆಣಿಸಿರಲಿಲ್ಲ. ಇನ್ನಾದರೂ ಎಣಿಸುವವನಲ್ಲ. ಅವಳು ಕ್ಷಮೆಯನ್ನೂ ತಾಳ್ಮೆಯನ್ನೂ ತೋರಿದ್ದಾದರೆ, ತನ್ನ ಪ್ರೇಮ ಎಷ್ಟು ನಿಷ್ಕಳಂಕವಾದುದೆಂದು ಇನ್ನೂ ತೋರಿಸಬಲ್ಲೆ-ಎಂದು ಬರೆದಿದ್ದ. ಅದನ್ನು ಕಂಡಾಗ, ತಾನೋದಿದ ಕಾದಂಬರಿಯು ನೆನಪಾಯಿತು ಮಂಜುಳೆಗೆ. ಮೊದಲೊಂದು ಮದುವೆಯಾಗಿ, ಹೆಂಡತಿಯೊಡನೆ ಸಂಸಾರ ಸಾಗದೆ, ಮನೋಧರ್ಮ ಹೊಂದದೆ, ಕಷ್ಟ ಪರಂಪರೆಗಳಿಗೀಡಾದ ಕಥಾ ನಾಯಕನ ವಿಚಾರದಲ್ಲಿ ಅನುತಾಪವೇನೋ ಅವಳಿಗೆ ಹುಟ್ಟಿತ್ತು. ಆದರೆ ಅದು ಕಥೆ; ಕಥೆಗಳಲ್ಲಿ ದುಃಖಿಗಳಾದವರಿಗೆ ಸಮಾಧಾನ ಹೇಳುವುದೂ ಸುಲಭ. ವಾಸ್ತವ ಲೋಕದಲ್ಲಿ ದುಃಖತಪ್ತಳಾದವಳನ್ನು ಅಂಥ ಪತ್ರವಾಗಲಿ, ಕಾದಂಬರಿಯಾಗಲಿ ಸಮಾಧಾನಗೊಳಿಸಲಾರದು. ಅಲ್ಲದೆ—ಇನ್ನೊಂದು ಜೀವಕ್ಕೆ ಸಲ್ಲುವ ವಸ್ತುವನ್ನು ತಾನು ಅಪಹರಿಸಿದಲ್ಲಿ, ಆ ಜೀವದ ಗತಿ ಯೇನು? ಅಥವಾ ತಾನು ಅಪಹರಿಸಿದರೂ, ಆ ವಸ್ತು ಮೂಲನೆಯ ಕಡೆಗೆ ತಿರುಗಿ ಧಾವಿಸದೆಂದೇನು ಗೊತ್ತು–ಎಂದೆಲ್ಲ ಯೋಚಿಸಿದಳು. ಪತ್ರವನ್ನು ಹರಿಯುತ್ತೇನೆ ಎಂದಳು. ಆದರೂ ತನ್ನ ಗೆಳತಿಗೆ ತಿಳಿಯಲಿ ಎಂದು, ಅದನ್ನು ಅಂಜಲಿಗೆ ಓದುವುದಕ್ಕೆ ಕೊಟ್ಟಳು.

ನಗುಮೊಗದ ವಿಲಾಸಿನಿ ಅಂಜಲಿ, ಕಾಗದವನ್ನೇನೋ ಓದಿದಳು. ತನ್ನ ಗೆಳತಿಯ ಮನಸ್ಸಿನಲ್ಲಾಗುತ್ತಿದ್ದ ಹೊಯ್ದಾಟಗಳನ್ನು ಊಹಿಸಿಕೊಂಡಳು. ಅದಕ್ಕೆ ತನ್ನ ಮನಸ್ಸಿನ ತೀರ್ಮಾನವನ್ನೂ ಉತ್ತರವಾಗಿ ಸಲ್ಲಿಸಿದಳು. "ನೀನು ಮಂಜುಳಾ, ಪೇಟೆಗೆ ಬಂದರೂ ಹಳ್ಳಿಯವಳೇ. ಸಂತೋಷಪಡುವ ಕಾಲದಲ್ಲಿ ಪಡಬೇಕು; ಪಡುವಷ್ಟು ಪಡಬೇಕು. ಯೌವನದಲ್ಲಿ ದೊರಕಿಸ ಬಹುದಾದ ಆನಂದ ಮುಪ್ಪಿನಲ್ಲಿ ದೊರೆಯುವುದಿಲ್ಲ. ಬದುಕಿಗೆ ಆನಂದವೇ ಮುಖ್ಯ ವಸ್ತುವಾಗಿರುವಾಗ, ಯಾರಿಂದ ಅದು ದೊರಕಿದರೇನು? ಮದು ವೆಯ ಕಟ್ಟಿನಲ್ಲಿ ಸಿಲುಕಿ, ಒಬ್ಬ ಗಂಡನೆಂಬ ಪದಾರ್ಥಕ್ಕೆ ಮಾರುಹೋಗ ಬೇಕೇ? ನಮ್ಮ ಕಚೇರಿಯಲ್ಲೇ ಎಷ್ಟು ಜನರು ಮದುವೆಯಾದವರಿಲ್ಲ?

ಅವರೆಲ್ಲ ಸುಲಭ ಪ್ರೇಮಿಗಳಾಗಿಲ್ಲವೆ? ಹಾಗೆಂದು ತಮ್ಮ ಮಡದಿಯರ ವಿಷಯದಲ್ಲಿ ಹುಲಿಯ ಕಣ್ಣುಗಳಿಂದ ಕಾದಿರುವಂಥ ಸ್ವಾರ್ಥಿಗಳಲ್ಲವೆ ಅವರು? ಲೋಕವೇ ಹಾಗಿದೆ. ತಮಗೆ ಎಲ್ಲವೂ ಬೇಕು; ತಾವು ಯಾರಿಗೂ ಕೊಡಲಾರರು. ಅವರಾಡುವ ಮಾತುಗಳಿಗೆ ಬೆಲೆಯೇ ಇಲ್ಲ. ಅಂಥ ಒಬ್ಬೊಬ್ಬರಿಗೆ ನಾವು ಕಟ್ಟುಬೀಳುವುದೂ ತಪ್ಪು. ಗಂಡುಸರಿಗೆ ಸ್ವಾತಂತ್ರ್ಯ ಬೇಕಾದಂತೆ, ನಮಗೆ ಬೇಡವೇ? ನೀನು ಆ ಹಕ್ಕನ್ನೇ ಮದುವೆಯಿಂದ ಮಾರಿಕೊಳ್ಳಬೇಕೆನ್ನುತ್ತೀಯಲ್ಲ!" ಎಂದಂದಳು.

ಇನ್ನೂ ಮಂಜುಳೆ ಅಂಥ ಮನೋವಿಲಾಸವನ್ನು ತಾಳಿದವಳಲ್ಲ. 'ಬಾಳು ಪ್ರೇಮಮಯವಾಗಿರಬೇಕು. ಸುಖ, ಉಲ್ಲಾಸಗಳಿಂದ ಅದು ತುಂಬಿರಬೇಕೆ'ಂದು ಅವಳು ಬಯಸಿದ್ದರೂ, 'ಹೇಗೂ ಅದು ದೊರಕದಿರಾದೀತು'ಎಂದು ಅವಳ ಮನೋಧರ್ಮ ನುಡಿಯುತ್ತಲಿಲ್ಲ. ತನ್ನದೆನ್ನುವ ಸ್ವಾರ್ಥ ಅದಕ್ಕೂ ಬಂದಿದೆ. ಆ ಸ್ವಾರ್ಥವನ್ನು ಅವಳೂ ಬಿಡಲೊಲ್ಲಳು. ಚಿಕ್ಕಂದಿನಲ್ಲಿ ಬಹು ದಿನಗಳ ತನಕ ಗೊಂಬೆಗಳೊಡನೆ ಸಂಸಾರ ಹೂಡಿ, ತಾಯ್ತನದ ಮೋಹ ತೋರಿಸಿದ ಮನಸ್ಸು ಅವಳದು. ಆದರಿಂದ ಆಚೆ, ಮನಸ್ಸು ಬೆಳೆದ ಮೇಲೆ, ಆಚೀಚಿನ ಮಕ್ಕಳನ್ನು ಸಿಂಗರಿಸಿ ಹೊತ್ತುತಿರುಗಿದವಳು ಅವಳು. ಅತ್ತಿಗೆ ಸುಮಿತ್ರೆಯು ಅವಳಿಗೆ ಕಡು ಕ್ರೂರಿಯಾಗಿ ಕಂಡರೂ, ಅವಳ ಮಕ್ಕಳನ್ನು ತನ್ನದೆಂಬ ಭ್ರಮೆಯಿಂದ ಆಡಿಸಿ ನಲಿದಾಡಿಸಿದವಳವಳು. ಆ ತಾಯ್ತನದ ಮಾನಸಿಕ ಪ್ರವಾಹ, ಹೆಣ್ಣಾಗಿ ಹುಟ್ಟಿದ ಅವಳ ಜೀವನ ಪ್ರವಾಹದಲ್ಲಿ ಬೆರೆತುಕೊಂಡಿತ್ತು. ಕಣ್ಣಿಗೆ ಕಾಣದಂತಾದರೂ ಆಳದಲ್ಲಿ ಅದು ಹುದುಗಿಕೊಂಡಿತ್ತು.

ಆದುದರಿಂದಲೇ, ಆಸ್ಪತ್ರೆಯನ್ನು ಸೇರಿದಾಗ ಅವಳು ನರಕಯಾತನೆಯನ್ನನುಭವಿಸಿದಳು. ತಾಯಿಯಾಗುತ್ತೇನೆ ಎಂಬ ಅರಿವಾದಾಗ ಅವಳಿಗೆ ಸಂತೋಷವಾಯಿತು; ಆದರೆ ಸಂತೋಷಕ್ಕೆ ಮೀರಿದ ಭೀತಿಯೂ ಆಯಿತು. ಕೇವಲ ಮರ್ಯಾದೆಗಾಗಿ, ಇಷ್ಟವಿಲ್ಲದ ಮನಸ್ಸಿನಿಂದ,ತನ್ನ ತಾಯ್ತನವನ್ನು ಕಳೆದುಕೊಂಡರೂ ಅವಳ ನಿದ್ರೆಯಲ್ಲಿ ಯಾವುದೋ ಒಂದು ಕೂಸು ಬಂದು 'ನನ್ನನ್ನು ಕಿತ್ತೆಸೆದೆಯಾ? ನೀನು ತಾಯಲ್ಲವೆ?' ಎಂದು ಅವಳನ್ನು ಕೇಳುತಿತ್ತು. ಆ ಸ್ವಪ್ನಗಳು ನಿಜಕ್ಕಿಂತ ಹೆಚ್ಚಿನ ಭೀಕರ ರೂಪ ತಾಳುತಿದ್ದವು. ಅವಳನ್ನು ತಲ್ಲಣಗೊಳಿಸುತ್ತಿದ್ದವು. ಒಂದು ವರ್ಷಕಾಲ—ಯಾವ ನಗು

ಉತ್ಸಾಹಗಳೂ ಇಲ್ಲದೆ ಅವಳು ಚಿಂತೆಯಿಂದ ಸಮಯ ಕಳೆದಳೆನ್ನಬೇಕು. ಅಂಜಲಿಯ ಧೈರ್ಯವನ್ನು ಅವಳು ಮೆಚ್ಚುತ್ತಿದ್ದಳು. ಅವಳ ಗುರಿ ಸ್ಪಷ್ಟ ಎನ್ನುವುದನ್ನರಿತಿದ್ದಳು. ಆದರೆ ತಾನೂ ಆ ದಾರಿಯನ್ನು ತುಳಿಯುವುದಕ್ಕೆ ಇಚ್ಛಿಸುತ್ತಲಿಲ್ಲ. ಕಚೇರಿಯನ್ನು ಬಿಟ್ಟರೆ ಅವಳಿಗೆ ಸಮಯವೇ ಸರಿಯುವುದಿಲ್ಲ. ಯಾರ ಸ್ನೇಹವೂ ಬೇಕೆನಿಸುವುದಿಲ್ಲ. ತಾನು ಕಾಣುವ ಚಲಚ್ಚಿತ್ರಗಳು ವಾಸ್ತವಿಕ ಲೋಕದ್ದಲ್ಲ; ಕಲ್ಪನಾಲೋಕದವು. ಸತ್ಯಕ್ಕಂಜುವ ಪುಕ್ಕರು ಸ್ವಪ್ನಸುಖ ಸಾಧನೆಗೆ ಚಾಚುತ್ತಿರುವ ಕೈಗಳಂತೆ ಆ ಕೃತಿಗಳು ಅವಳಿಗೆ ಕಾಣಿಸುತ್ತವೆ. ದೊರೆಸ್ವಾಮಿ ಇನ್ನೇನು ಮಾಡದಿದ್ದರೂ ಸಾಹಿತ್ಯದ ಅಭಿರುಚಿಯನ್ನವಳಲ್ಲಿ ಉಂಟುಮಾಡಿದ್ದ. ಆದದ್ದರಿಂದಾಗಿ, ಸಿಕ್ಕಿಸಿಕ್ಕಿದ ಕಾದಂಬರಿಗಳನ್ನೋದತೊಡಗಿದಳು. ಅವುಗಳಲ್ಲಿಯೂ ಅನೇಕ ಬರಹಗಳು ಬರಿಯ ಕನಸುಗಳಾಗಿದ್ದವು. ಅವೂ ಚಲಚ್ಚಿತ್ರಗಳಂತೆಯೆ ಇದ್ದವು. ಕೆಲವು ಮಾತ್ರ, ಮನಸ್ಸನ್ನು ಸೆಳೆದುವು. ಸಂಸಾರಕ್ಕೊಂದು ಸವಿಯಾದ ಅರ್ಥವೂ ಇದೆ—ಎಂದು ತೋರಿಸಿಕೊಟ್ಟುವು. ಅಂಥ ಗಳಿಗೆಯೊಂದರಲ್ಲಿ, ಮನೋಹರನ ನೆನಪಾಯಿತು. ಆಗ ಅವನ ಗೆಳೆಯನೊಬ್ಬನಿಗೆ ಪತ್ರ ಬರೆದು ವಿಳಾಸ ತಿಳಿದುಕೊಳ್ಳುವ ಪ್ರಯತ್ನ ಮಾಡಿದಳು. ಅವನನ್ನೇ ಇನ್ನೊಮ್ಮೆ ಗೆಲ್ಲುವ ಆತುರ ಅವಳಿಗೆ ಉಂಟಾಯಿತು. ಆದರೆ ಅವನ ಪತ್ರವೇ ದೊರೆಯಲಿಲ್ಲ. 'ಆತನೂ ಒಬ್ಬ ದೊರೆಸ್ವಾಮಿ; ತಾನು ಅವನನ್ನು ಹಂಬಲಿಸುವುದು ವ್ಯರ್ಥ' ಎಂದು ಭಾವಿಸಿಕೊಂಡಳು. ಮುಂದಿನ ಎರಡು ವರ್ಷಗಳ ಕಾಲ, ಅಂಜಲಿಯ ಜತೆಗೆ ಹಾಗೂ ಹೀಗೂ ಅವಳು ತೇಲಿದಳು. ಅವಳ ಮನಸ್ಸು ಸಂಪೂರ್ಣ ಅವಳದ್ದಾಗಿರಲಿಲ್ಲ. ಮನಸ್ಸಿನ ಬಯಕೆಗಳನ್ನು ಸಾಧಿಸಲು ಪ್ರಯತ್ನಿಸುತ್ತಿರುವಳಾದರೂ, ಮೈಯ ಬಯಕೆಯನ್ನು ಅದುಮಿ ಹಿಡಿಯುವ ಶಕ್ತಿ ಅವಳಿಗಿರಲಿಲ್ಲ. ಯೌವನದಲ್ಲಿ, ಸರಸಮಯ ಆವರಣದಲ್ಲಿ-ಅದು ತನ್ನ ಪಾಲನ್ನು ಬೇಡಿದರೆ, ಆಕೆಯೇನು ಮಾಡಬಲ್ಲಳು? ಅವಳನ್ನು ಕಾಯುವ, ಬಯಸುವ ಗೆಳೆಯರಿದ್ದರು. ಅಂಜಲಿಯೊಡನೆಯೂ, ಒಂಟಿಯಾಗಿಯೂ, ಇನ್ನಿತರ ಗೆಳೆಯರನ್ನು ಕೂಡಿಕೊಂಡೂ ರಜಾದಿನದಲ್ಲಿ ವಿಹಾರಕ್ಕೆ ಹೋಗುತ್ತಿದ್ದಳು. ಕಾನೇರಿ ಗುಹೆಗಳಿವೆ! ಜೋಗೇಶ್ವರಿಯ ಜಲಕುಂಡವಿದೆ. ಜುಹೂವಿನ ಕಡಲು ತಡಿಯಿದೆ. ಎಲಿಫೆಂಟಾದಂಥ ಸುಂದರ ದ್ವೀಪವಿದೆ. ನಗರದಲ್ಲಿಯೆ ಸುಂದರ ಉದ್ಯಾನಗಳಿವೆ. ನಿಶ್ಚಿತ ಗುರಿಯಿಲ್ಲವವಳಂತೆ ತನಗೊಪ್ಪಿದ

ತರುಣರೊಂದಿಗೆ ಅವಳೂ ಅಲೆದಾಡುತ್ತಾಳೆ. ಪ್ರೇಮದ ಬಯಕೆಯಿಂದ ಉದ್ರೇಕಗೊಳ್ಳುತ್ತಾಳೆ. ಶೃಂಗಾರ ವಿಲಾಸಗಳಿಂದ ಮರುಳುಗೊಳ್ಳುತ್ತಾಳೆ; ಮರುಳುಗೊಳಿಸುತ್ತಾಳೆ. 'ಈ ವಸ್ತು ತನ್ನದಾದೀತು' ಎಂದು ಬಯಸುತ್ತಾಳೆ. ಹಾಗೆ ಬಯಸಿದ ನಾಲ್ಕು ದಿವಸಗಳಲ್ಲಿ, ಅದೇ ಪ್ರಣಯಿ ಗ್ರೇಸಿಯೊಂದಿಗೋ ಲೂಸಿಯೊಂದಿಗೋ ಅಂಜಲಿಯೊಂದಿಗೋ ಅಚ್ಚುಮೆಚ್ಚಿನಿಂದ ಅಲೆದಾಡುವುದನ್ನು ಕಂಡಾಗ, "ಮದುವೆಯಾಗುತ್ತೀಯಾ ಎಂದು ಕೇಳುತ್ತಿದ್ದೆ. ಹಾಗೆ ಕೇಳಿದ್ದರೆ ಎಂಥ ಮೂರ್ಖತನವಾಗುತ್ತಿತ್ತು' ಎಂದು ತನ್ನಷ್ಟಕ್ಕೆ ಪರಿತಪಿಸುತ್ತಾಳೆ. ಆ ಪರಿತಾಪ ಕ್ಷಣದ್ದು. ಬದುಕು ನಿತ್ಯದ್ದು. ಇದರಿಂದಾಗಿ ಅವಳ ಮನೋದೌರ್ಬಲ್ಯ ಇನ್ನೆರಡು ಬಾರಿ ಅವಳನ್ನು ಡಾಕ್ಟರ್ ನಾರಿಯಲ್‌ವಾಲನ ಆಶ್ರಮಕ್ಕೆ ಕರೆದೊಯ್ದಿತು. ಅವಳು ಮುಂಬಯಿಗೆ ಬಂದು ಐದು ವರ್ಷಗಳಾದವು. ಮನೆಯಿಂದ ಕೊಂಡು ಬಂದ ಆಭರಣ, ಅಣ್ಣನಿಂದ ತರಿಸಿಕೊಂಡ ಹಣ, ಉಡುಗೆ ಅಲಂಕಾರಗಳಿಗೆ, ತನ್ನ ಕಾಮನೆಗಳಿಂದುಂಟಾದ ವಿಪತ್ತುಗಳ ಪರಿಹಾರಕ್ಕೆ ವ್ಯಯವಾದುವು. ತನ್ನ ಪ್ರೇಮಕ್ಕೊಡಗಿದವರು-ಬಾಯ್ಬಿಟ್ಟು, ಲಜ್ಜೆ ಕಳೆದು, ಆರ್ತಿಯಾಗಿ ತನ್ನನ್ನು ಮದುವೆಯಾಗೆಂದು ಕೇಳಿದರೂ-ನೆಪ ಹೇಳುವವರು; ಧೈರ್ಯವಿಲ್ಲದಂಥ ಪುಕ್ಕರು; ಎರಡೆರಡು ಮನಸ್ಸಿನವರು; ಬರಿಯ ಮಾತಿನವರು——ಎಂದು ಅವಳಿಗೆ ಅರಿವಾದಾಗ "ನಾನೇ ಮೂರ್ಖೆ. ಅಂಜಲಿಯೇ ಬಲ್ಲವಳು. ಅವಳಿಗೆ ಮನುಷ್ಯರ ತೂಕ ಗೊತ್ತಿದೆ. ಸಾಧ್ಯಾಸಾಧ್ಯ ತಿಳಿದಿದೆ. ಇದ್ದುದನ್ನೊಪ್ಪಿ ಅವಳು ಸುಲಭದಲ್ಲಿ ತೇಲುತ್ತಿದ್ದಾಳೆ. ಇಲ್ಲದುದನ್ನು ಬಯಸಿ— ನನ್ನಂತೆ ಚಿಂತೆಗೆ ಗುರಿಯಾಗಿಲ್ಲ." ಎನ್ನುವ ಮತಿತಾರ್ಥಕ್ಕೆ ಅವಳೂ ಬರುವಂತಾಯಿತು.

ಈಗಲೋ, ಅವಳು ಮೊದಲಿನಂತಿಲ್ಲ. ರೂಪದಲ್ಲಿಯೂ ಹಾಗೆ; ಮನಸ್ಸಿನಲ್ಲಿಯೂ ಹಾಗೆ. ತರುಣಿಯಾಗಿದ್ದವಳು, ಲಲಿತ ಲಾವಣ್ಯವಿದ್ದವಳು, ದಿನೇ ದಿನೇ ಸ್ಥೂಲಕಾಯಳಾಗುತ್ತಿದ್ದಾಳೆ. ವಯಸ್ಸು ಹೆಚ್ಚಾಗಿಲ್ಲವಾದರೂ ಪೂರ್ವದ ಸೌಂದರ್ಯವಿಲ್ಲ. ಅಂಜಲಿಯೇ ಅವಳಿಗುಪದೇಶಿಸುತ್ತಾಳೆ: "ನಿನಗೆಷ್ಟು ಪ್ರಾಯವೀಗ? ಇಪ್ಪತ್ತೈದು ಇರಬಹುದಷ್ಟೆ. ನಾನು ನಿನಗಿಂತ ನಾಲ್ಕು ವರ್ಷಕ್ಕೆ ದೊಡ್ಡವಳು-ಗೊತ್ತೇ? ಹೇಗೆ ಟ್ರಿಮ್ ಆಗಿದ್ದೇನೆ. ತಿನ್ನುವುದರಲ್ಲಿ, ಉಣ್ಣುವುದರಲ್ಲಿ ಜಾಗ್ರತೆ ಇರಬೇಕು. ಪಿಷ್ಟ ವಸ್ತುಗಳನ್ನು, ಕೊಬ್ಬನ್ನು ಮುಟ್ಟಲೇ ಕೂಡದು. ನೀನು ಹೀಗೆ ಹಂದಿ ಮರಿಯ ಹಾಗೆ

ಬೆಳೆಯುತ್ತ ಹೋದರೆ ಚೆನ್ನಲ್ಲ" ಎಂದು ಆಹಾರದ ವಿಷಯದಲ್ಲಿ ಅವಳಿಗೆ ಬೋಧಿಸುತ್ತಿದ್ದಾಳೆ.

ಅವರ ಬಿಡಾರದಲ್ಲಿ ವಾರಕ್ಕೊಂದು ದಿವಸ ಸ್ವಂತ ಅಡುಗೆ; ಅದೂ ಗೆಳತಿಯರಿಗೆ ಮನಸ್ಸು ಬಂದು, ಹೊರಗೆ ತಿರುಗಾಟಕ್ಕೆ ಹೋಗದ ದಿನ ಮಾತ್ರ. ಉಳಿದ ದಿನ ಹೊಟೇಲಿನ ಅನ್ನವನ್ನು ತರಿಸುತ್ತಿದ್ದ ಅವರು ಮನ ಬಂದಂತೆ ತಿನ್ನುವ ಬದಲು, ಹಸಿವು ಹಿಂಗಿಸಿಕೊಳ್ಳುವುದಕ್ಕೇ ಕಷ್ಟವಾಗಿತ್ತು. 'ತಾನು ತಿನ್ನುವುದೇನು ಹೆಚ್ಚಲ್ಲ. ತನ್ನ ಶರೀರದ ಸ್ವಭಾವವೇ ಹಾಗಿರಬೇಕು' ಎಂದು ಉತ್ತರಿಸಿ ಮಂಜುಳೆ ನಗುತ್ತಾಳೆ. "ಅಂಜಲಿ, ಕೆಲವರ ಯೋಗ್ಯತೆ ಒಳ್ಳೆಯದು. ಈಜಿಪ್ಷಿಯನ್ ಮಮ್ಮಿಗಳ ಹಾಗೆ, ಅವರಿಗೆ ತಿಂದರೂ ಕೊಬ್ಬು ಬರುವುದಿಲ್ಲ. ನ್ಯಾಯವಾಗಿ ನೀನೂ ದಪ್ಪನಾಗಬೇಕಿತ್ತು. ನಿನ್ನದೂ ನನ್ನಂತೆ ಕುಳ್ಳು ದೇಹ. ಆದರೆ ನಾನು ಕಂಡಂದಿನಿಂದಲೂ ಒಂದು ತೊಲೆ ಕಡಿಮೆಯಾಗಿಲ್ಲ; ಹೆಚ್ಚಾಗಿಲ್ಲ. ನಿನ್ನ ಅದೃಷ್ಟ" ಎಂದು ಮಂಜುಳೆ ಅಂಜಲಿಯನ್ನು ಪರಿಹಾಸ್ಯಮಾಡುತ್ತಾಳೆ.

ಈ ನಡುವೆ ಅಂಜಲಿ ಒಂದು ಹೊಸ ಸುದ್ದಿಯನ್ನು ತಂದಳು: "ನಮ್ಮ ಬಾಸ್‌ಗೆ ಡಿಲ್ಲಿಗೆ ವರ್ಗವಾಗುತ್ತದೆ. ಕಂಪೆನಿಯವರು ಅಲ್ಲಿ ಒಂದು ಬ್ರಾಂಚ್ ಆಫೀಸ್ ತೆರೆಯುತ್ತಾರಂತೆ. ಇವರು ಬಡತಿಗೊಂಡು ಅಲ್ಲಿನ ಮೆನೇಜರರಾಗಿ ಹೋಗುತ್ತಾರೆ. ಎಷ್ಟೆಂದರೂ ಗಾಂವಕರ್ ಬಹು ಒಳ್ಳೆಯ ಮನುಷ್ಯ. ಇನ್ನು ಅವರ ಬದಲಿಗೆ ಬರುವ ಪ್ರಾಣಿ ಎಂಥದೋ, ಏನೋ. ನಾವೆಲ್ಲ ಅವರಿಗೆ ಒಂದು ಡಿನ್ನರ್ ಪಾರ್ಟಿ ಕೊಡೋಣವೇ? ನನಗೂ ಮುಂಬಯಿ ಹಳಸಿದೆ. ಏನಿದೆ ಇಲ್ಲಿ? ಕಂಡದ್ದನ್ನೇ ಕಾಣುವುದು. ಡಿಲ್ಲಿಗೆ ವರ್ಗಮಾಡಿದರೆ ಹೋಗಬಹುದಿತ್ತು. ಆ ನೆಪದಿಂದ ಡಿಲ್ಲಿ, ಆಗ್ರಾ, ಸಿಮ್ಲಾ-ಎಲ್ಲ ನೋಡಿಕೊಂಡು ಬರಬಹುದು. ಕೆಲಸ ಮಾಡಿ ಜೀವಿಸುವವರಿಗೆ ಎಲ್ಲಿಯಾದರೇನು? ಆದರೆ ಅವರು ಪ್ರಮೋಶನ್ ಕೊಡಬೇಕು. ಈ ಯುದ್ಧದ ದಿನಗಳಲ್ಲಿ ಇವರ ಡಿಯರ್‌ನೆಸ್ ಎಲೊವೆನ್ಸ್ ಕೂಡಿ ನೂರೈವತ್ತು ರೂಪಾಯಿಗಳನ್ನು ಕೊಟ್ಟರೆ, ಯಾವ ಮೂಲೆಗೂ ಬರುವುದಿಲ್ಲ" ಎಂದಳು.

"ಹೌದು ಅಂಜಲಿ, ಮೊದಲಷ್ಟು ದಿನ ನನ್ನದೇ ಹಣ ಇದ್ದಿತು. ದಿನ ಹೋದದ್ದು ನನಗೂ ಗೊತ್ತಾಗಲಿಲ್ಲ. ಈಗ ನನ್ನ ನೂರನಾಲ್ವತ್ತು ಎಂದರೆ— ಯಾವುದಕ್ಕೂ ಸಾಕಾಗುವುದಿಲ್ಲ. ಬಟ್ಟೆಗೆ ಎಷ್ಟು ಬೆಲೆ! ಶೂಸಿಗೆ ಎಷ್ಟು

ಬೆಲೆ! ಹೊಟೇಲು ಕಾಫಿಗಳಿಗಂತೂ ಒಂದಕ್ಕೆ ಮೂರು ಕೊಡಬೇಕು."

"ಇಲ್ಲಿದ್ದರೆ ಹೀಗೆಯೇ ನರಳಿ ಸಾಯಬೇಕು ನಾವು. ನಮ್ಮ ಕಂಪೆನಿಯ ಡೈರೆಕ್ಟರರು ಶುದ್ಧ ಪೂರವಾಡಿಗಳು. ಸ್ಟಾಫಿಗೆ ಸಮನಾದ ಇಂಕ್ರಿಮೆಂಟು, ಎಲೊವೆನ್ಸು, ಬೋನಸ್ಸು ಒಂದನ್ನೂ ಕೊಡುವ ಯೋಚನೆಯಿಲ್ಲ. ಯಾಕೆ ನಾವೂ ಒಂದು ಪುರಸ್ಕರ ಹೂಡಬಾರದು ಎಂದು ನನಗೆ ತೋರುತ್ತದೆ. ಇವರಲ್ಲವಾದರೆ ಇನ್ನೊಂದು ಕಡೆ ಸೇರಿಕೊಂಡ. ದುಡಿಯುವ ಶಕ್ತಿ ಇದ್ದಾಗ ಯಾರ ಅಂಜಿಕೆ ಏನು?" ಎಂದಳು ಅಂಜಲಿ.

ಈ ಮಾತುಗಳನ್ನೆಲ್ಲ ಕೇಳುತ್ತ ಮಂಜುಳೆಗೆ, ತನ್ನ ಆಪ್ತ ಗೆಳತಿ ಅಂಜಲಿ ಊರುಬಿಟ್ಟು ಹೋಗುವುದಾದರೆ, ತನಗೂ ತುಂಬ ಕಷ್ಟವಾದೀತು ಎನಿಸ ತೊಡಗಿತು. ಎಷ್ಟೋ ಬಾರಿ ಅವಳ ಮನಸ್ಸಿನ ಚಿಂತೆಗಳಿಗೆ ಸಮಾಧಾನ ಹೇಳುವುದಕ್ಕೋ, ಬೇಸರ ಕಳೆಯುವುದಕ್ಕೋ ಅಂಜಲಿ ಅವಳಿಗೆ ನೆರವಾಗುತ್ತಿದ್ದಳು. ಯಾರಿಗೂ ಅವಳು ಮುಂದೆಯೇ—ತನ್ನ ದುಡ್ಡು ಬೇರೆ, ಇತರರದ್ದು ಬೇರೆ—ಎಂದೆಣಿಸುವ ಸ್ವಭಾವದವಳಲ್ಲ. ಅವಳ ನಡೆನುಡಿಗಳೆಲ್ಲವೂ ಮಂಜುಳೆಗೆ ಒಪ್ಪುತ್ತಿವೆ ಎಂದರ್ಥವಲ್ಲ. ಅಭಿರುಚಿಗಳಲ್ಲೂ ತುಂಬ ವ್ಯತ್ಯಾಸಗಳುಂಟು. ಆಕೆ ಆಗಿಗಾಗಿಗೆ ಸಿಡುಕು ತೋರುವುದೂ ಉಂಟು. ಆದರೆ ವಂಚನೆಯಿಲ್ಲದ ಅವಳ ವರ್ತನೆಯನ್ನು ಎಷ್ಟಕ್ಕೂ ನಂಬಬಹುದಾಗಿದೆ. ಮನಸ್ಸಿನಲ್ಲೊಂದು, ಮಾತಿನಲ್ಲೊಂದು, ಎಂದೂ ತೋರಿದವಳಲ್ಲ. ಹಾಗೆ ಮನಸ್ಸನ್ನು ಕಸ್ಸಡಿಸುವ ಮಾತುಳ್ಳವರು ಬಹು ವಿರಳ. ಅದರಿಂದಾಗಿ ಮಂಜುಳೆಗೆ ಈಗೀಗಲಂತು ಅವಳು ತೀರ ಬೇಕಾದವಳಾಗಿದ್ದಾಳೆ. ಅವಳ ಸ್ನೇಹಿತರಲ್ಲಿ ಎಷ್ಟೋ ಮಂದಿಯರನ್ನು ಕಂಡರೆ, ಮಂಜುಳೆಗೆ ಆಗವೇ ಆಗದು. ಆದರೆ ಅವಳು ಮಾತ್ರ ಬೇಕು.

ವಿಮಾ ಕಂಪೆನಿಯ ಶಾಖೆಯೊಂದು ದೇಹಲಿಗೆ ಹೋಗುವ ಸುದ್ದಿ ಖಂಡಿತವಾಯಿತು. ಗಾಂವಕರರೇ ಹೋಗಿ ಕಚೇರಿಯ ಸ್ಥಳವನ್ನು ಗೊತ್ತುಪಡಿಸಿಕೊಂಡೂ ಬಂದರು. ನವದೇಹಲಿಯ ಕೇಂದ್ರ ಸ್ಥಳವಾದ 'ಕನಾಟ್ ಸರ್ಕಸ್'ನಲ್ಲಿ ಒಂದು ಉತ್ತಮ ಕಟ್ಟಡವನ್ನು ಬಾಡಿಗೆಗೆ ಹಿಡಿದು, ಅವರು ಮುಂಬಯಿಗೆ ಮರಳಿ ಬಂದರು. 'ಹೊಸ ಕಾರ್ಯಾಲಯ; ತನ್ನ ಹೊಣೆ ಹೆಚ್ಚು. ಕೆಲಸದ ಪರಿಚಯವಿಲ್ಲದ ಹೊಸ ಜನಗಳನ್ನು ಕೂಡಿಕೊಂಡು ಕೆಲಸ ನಡೆಸುವುದು ಸಾಧ್ಯವಿಲ್ಲ'ದುದರಿಂದ—ಕಂಪೆನಿಯವರಿಗೆ, ಆರಂಭ

ಕ್ಕಾದರೂ ಇಲ್ಲಿಂದ ನಾಲ್ಕೈದು ಮಂದಿ ಸಹಾಯಕರನ್ನೊದಗಿಸಬೇಕೆಂದು ಕೇಳಿಕೊಂಡರು. ಅವರೇನೋ ಬಡತಿಗೊಂಡು ಹೋಗುತ್ತಾರೆ. ಅವರ ಸಹಚರರೂ ಸ್ನೇಹಿತರೂ ಅವರಿಗಾಗಿ ವಿದಾಯಕೂಟವನ್ನು ಏರ್ಪಡಿಸಿದ್ದಾರೆ. ಅದೇ ವೇಳೆಗೆ ಅವರ ಜತೆಯಲ್ಲಿ ದೇಹಲಿಗೆ ಹೋಗಲು ಆರೆಂಟು ಮಂದಿ ಆಫೀಸ್ ಕೆಲಸಗಾರರೂ ಬೇಕೆಂಬ ಪ್ರಕಟಣೆ ಹೊರಟಿತು. ಯುದ್ಧ ಕಾಲ ನಡೆದಿದೆ. ದಿಲ್ಲಿಯ ವೆಚ್ಚ ಇನ್ನಷ್ಟು ಹೆಚ್ಚು—ಎಂಬುದರಿಂದ ಮುಂಬಯಿಯಲ್ಲಿ ದೊರೆಯುವ ವೇತನಕ್ಕಿಂತ, ಐವತ್ತು ಅರುವತ್ತು ರೂಪಾಯಿಗಳ ಹೆಚ್ಚಿನ ಸಂಬಳದ ಆಸೆಯನ್ನೂ ತೋರಿಸಿದರು. ಬಡತಿಯ ಆಸೆ ಅನೇಕರಿಗಿತ್ತಾದರೂ ದಿಲ್ಲಿಯಲ್ಲಿ ಬಿಡಾರಗಳು ಸಿಗುವುದು ಕಷ್ಟ. ಮುಂಬಯಿಯಲ್ಲೊಂದು ಬಿಡಾರ; ದಿಲ್ಲಿಯಲ್ಲಿ ಇನ್ನೊಂದು ಮಾಡಿಕೊಳ್ಳುವುದಾದರೆ ಇಮ್ಮಡಿ ಸಂಬಳಕೊಟ್ಟರೂ ಪ್ರಯೋಜನವಿಲ್ಲ—ಎಂಬುದರಿಂದ, ಸಂಸಾರವಂದಿಗರು ಅಲ್ಲಿಗೆ ಹೋಗಲು ಹಿಂಜರಿದರು. ಅಂಜಲಿ ಮಾತ್ರ ಹೋಗುವುದಕ್ಕೆ ಮುಂದಾದಳು. ಮದುವೆಯಾಗಿದ್ದರೂ ಆಗಿಲ್ಲದಂತೆ ವರ್ತಿಸುತ್ತಿದ್ದ ರಾಘವನ್ 'ಹೊಸ ಊರು-ನೋಡುವ; ಇಲ್ಲಿಗೂ ಬಿಡಾರ ತಂದಿಲ್ಲ; ಅಲ್ಲಿಗೂ ತರುವುದು ಬೇಡ' ಎಂದು ಯೋಚಿಸಿ ಹೊರಟ. ಅವನ ಮನಸ್ಸಿನಲ್ಲಿ ದಿಲ್ಲಿಗೆ ಹೋಗುವುದೊಂದು ನೆಪ. ಯುದ್ಧದಿಂದಾಗಿ ಅಲ್ಲಿ ಹೊಸ ಕಚೇರಿಗಳು ಹುಟ್ಟುತ್ತಲೇ ಇವೆ; ಕಂಪೆನಿಯ ವೆಚ್ಚದಲ್ಲಿ ಇಲ್ಲಿಂದ ಅಲ್ಲಿಗೆ ಹೋಗಿ ಅನಂತರ ಮತ್ತೊಂದು ಅನುಕೂಲವಾದ ಚಾಕರಿ ದೊರೆತರೆ, ಈ ಕಂಪೆನಿಯನ್ನು ಬಿಟ್ಟುಬಿಡುವ ಯೋಚನೆ ಅವನಿಗೆ. ಅಂತೂ ಅವನಂತಹ ಅಥವಾ ಹೊಣೆ ಕಡಿಮೆಯುಳ್ಳ ನಾಲ್ಕಾರು ಮಂದಿ ದಿಲ್ಲಿಗೆ ಹೋಗಲು ಸಿದ್ಧರಾದರು. ಇನ್ನೂ ಇಬ್ಬರು ಬೇಕಾಗಿತ್ತು. ಗಾಂವಕರರು ಮಂಜುಳೆಗೆ ಯಾವುದೋ ಪತ್ರವನ್ನು ಹೇಳಿ ಬರೆಯಿಸುತ್ತಿದ್ದ ಕಾಲದಲ್ಲಿ "ನಿಮಗೆ ಯಾರಿದ್ದಾರೆ ಇಲ್ಲಿ? ದಿಲ್ಲಿಯಾದರೇನು? ಮುಂಬಯಿಯಾದರೇನು? ಹೊಸ ಕಾರ್ಯಾಲಯ. ಚೆನ್ನಾಗಿ ಕೆಲಸ ಸಾಗಿದರೆ ನಿಮಗೆ ಬಡತಿಕೊಡಬೇಕು ಎನ್ನುವ ಹೊಣೆ ನನ್ನದು. ನನ್ನಲ್ಲಿ ವಿಶ್ವಾಸವಿದ್ದರೆ ನೀವೂ ಬರಬಹುದಲ್ಲ" ಎಂದು ಸೂಚಿಸಿದರು. ಅಂಜಲಿ ಹೋಗುವುದಾದರೆ ತಾನೇಕೆ ಹೋಗಬಾರದು—ಎಂಬ ವಿಚಾರಸರಣಿ ಅವಳಲ್ಲೂ ಮೂಡಿತು. 'ಯೋಚಿಸಿ ಹೇಳುತ್ತೇನೆ' ಎಂದಳು.

ಗಾಂವಕರರಿಗೆ ಕಂಪೆನಿಯವರಿಂದಲೂ, ಸಹ ಉದ್ಯೋಗಿಗಳಿಂದಲೂ ಸತ್ಕಾರ ಸಮಾರಂಭಗಳು ನಡೆದುವು. ಆ ಕೂಟದಲ್ಲಿ ಬಹು ಜನ ಅವರನ್ನು ಹೊಗಳಿ ಮಾತನಾಡಿದರು. ಶುಭಾಶಯವನ್ನು ಕೋರಿದರು. ಅವರ ಜತೆಯಲ್ಲಿ ಹೊರಡಲಿರುವವರ ಹೆಸರನ್ನೂ ಸ್ಮರಿಸಿದರು. ಆ ಮೊದಲ ಪಟ್ಟಿಯಲ್ಲಿ ಮಂಜುಳೆ ಇದ್ದಿರಲಿಲ್ಲ. ಯಾಕೋ ಅವಳ ಮನಸ್ಸು ಅವಳನ್ನು ತಡೆಯುತಿತ್ತು. ಕೂಟ ಮುಗಿದು, ಗಾಂವಕರರು ಹೊರಕ್ಕೆ ಬರುವಾಗ ಅಂಜಲಿಯೂ ಜತೆಗಿದ್ದಳು. ಮಂಜುಳೆಯೂ ಇದ್ದಳು. ಗಾಂವಕರರು ಮಂಜುಳೆಯೊಡನೆ ಕೇಳಿದರು "ಏನು, ನೀನು ಮನಸ್ಸು ಮಾಡಲಿಲ್ಲವೆ?" ಎಂದು.

"ನಾನೂ ಅವಳಿಗೆ ಬಹಳವಾಗಿ ಹೇಳಿದೆ. ಅರ್ಧ ಮನಸ್ಸಿನಲ್ಲಿದ್ದಾಳೆ" ಎಂದಳು ಅಂಜಲಿ.

"ಇನ್ನೂ ಎರಡು ಸ್ಥಾನಗಳು ಖಾಲಿ ಇವೆ. ಸ್ಟೆನೊಗ್ರಾಫರ್ ಹೇಗೂ ಬೇಕೇ ಬೇಕು."

"ಮತ್ತೇನಿಲ್ಲ. ಗಂಡುಸರು ಎಲ್ಲಿಗೂ ಹೋಗಬಹುದು. ಅಲ್ಲಿ ವಾಸಕ್ಕೆ ಸ್ಥಳ ಸಿಗುವುದು ಕಷ್ಟ ಎನ್ನುತ್ತಾರೆ. ಹೊಟೇಲಿನಲ್ಲಿ ನಾನಿರಲಾರೆ".

"ಅಷ್ಟೇಯೆ? ನೋಡು, ನಾನು ಒಂದು ವರ್ಷದ ತನಕ ನನ್ನ ಬಿಡಾರ ಒಯ್ಯುವುದಿಲ್ಲ ಎಂದು ನಿಶ್ಚಯಮಾಡಿದ್ದೇನೆ. ಮಕ್ಕಳ ವಿದ್ಯಾಭ್ಯಾಸಕ್ಕೆಲ್ಲ ತೊಡಕು. ನನಗೂ ಅಲ್ಲಿ ಊಟಕ್ಕೆ ಹೋಟೆಲೇ ಗತಿ. ಅವರೆ ಕಂಪೆನಿಯವರು ಆಫೀಸಿನ ಬಳಿಯಲ್ಲೇ ದೊಡ್ಡ ನಾಲ್ಕು ಕೋಣೆಗಳನ್ನು ಒದಗಿಸಿದ್ದಾರೆ. ಒಂದರಲ್ಲಿ ನೀನೂ ಅಂಜಲಿಯೂ ಕೂಡಿ ಇರಬಹುದಲ್ಲ. ನನ್ನ ಬಿಡಾರ ಬಂದ ಮೇಲಲ್ಲವೆ ತೊಂದರೆ. ಆಗ ನಿಮಗೆ ಬೇರೊಂದು ಯೋಗ್ಯ ಸ್ಥಳವನ್ನು ಹುಡುಕಿಕೊಡುವ ಹೊಣೆ ನನ್ನದು. ಅಥವಾ ಅಲ್ಲಿನ ಹವೆಯೇ ಒಗ್ಗಲಿಲ್ಲ; ದಿಲ್ಲಿ ಬೇಡ ಎಂದು ಕಾಣಿಸಿತು — ಮುಂಬಯಿಯಲ್ಲಿ ನಿಮ್ಮ ಸ್ಥಾನ ಇದ್ದೇ ಇದೆ. ನೋಡು, ಯೋಚನೆ ಮಾಡಿ ನಾಳೆ ಹೇಳಿದರೆ ಸಾಕು" ಎಂದು ತಿಳಿಸಿ ಹೋದರು. ಮಂಜುಳೆ ಅಂಜಲಿಯನ್ನು ಕಟ್ಟಿಕೊಂಡು ದಾದರಿಗೆ ಬಂದಳು. ಸಂಜೆ ನಡೆದು ಕಡಲು ತೀರಕ್ಕೆ ಹೋದರು. ಏನೇನೋ ಮಾತಾಡಿದರು. ಮಂಜುಳೆಯಾಗ "ನೀನು ಹೋಗುವುದೆಂದಾದ ಮೇಲೆ ನಾನೂ ಬರುತ್ತೇನೆ. ಜತೆಗೆ ನೀನಿದ್ದೀಯಲ್ಲ. ಅದೇ ಧೈರ್ಯ. ಗಾಂವಕರರೂ ಒಳ್ಳೆಯ ಬಾಸ್" ಎಂದಳು. ಅಂಜಲಿ ಅವರನ್ನು ಪ್ರಶಂಸಿಸಿ ನಾಲ್ಕು ಮಾತುಗಳನ್ನಾಡಿದಳು.

"ಎಲ್ಲರಂತಲ್ಲ ನಮ್ಮ ಗಾಂವಕರ್. ತನ್ನ ಬಡಾಯಿಯೆಂಬುದು ಅವರಿಗಿಲ್ಲ. ಅಧಿಕಾರದ ಹೆಮ್ಮೆಯಿಲ್ಲ. ಕೆಲಸದಲ್ಲಿ ತಪ್ಪಾದರೂ 'ಹಾಗಲ್ಲ ಹೀಗೆ' ಎಂದು ಹೇಳಿಕೊಡುತ್ತಾರೆ; ಗದರಿಸುವುದಿಲ್ಲ. ಯಾಕೋ ಅವರು ಉತ್ಸಾಹವಾಗಿರುವುದಿಲ್ಲ. ತಮಗೊಂದು ಸಂಸಾರವಿದೆ ಎಂದು ಹೇಳಿದ್ದು ಇವತ್ತಷ್ಟೆ. ಯಾವಾಗಲೂ ಅವರು ತಮ್ಮ ಮನೆಯ ಸುದ್ದಿಯನ್ನು ತೆಗೆದುದಿಲ್ಲ."

ಅಲ್ಲಿಂದ ಮುಂದೆ ಗಾಂವಕರರ ವಿಚಾರದಲ್ಲಿ ತಾನು ಕೇಳಿ ತಿಳಿದಂಥ ನಾಲ್ಕೆಂಟು ಮಾತುಗಳನ್ನು ಹೇಳಿದಳು. ದೂರದ ಮಾಲಾಡಿನಲ್ಲಿ ಅವರ ಮನೆ ಇದೆಯಂತೆ. ನಿತ್ಯವೂ ಅಲ್ಲಿಂದಿಲ್ಲಿಗೆ ಬಂದು ಹೋಗುತ್ತಾರೆ. ಸಂಸಾರದಲ್ಲಿ ತುಂಬ ಕಷ್ಟ ಸಹಿಸಿದ್ದಾರಂತೆ. ಮೊದಲಿನ ಹೆಂಡತಿ ಇದ್ದಾಗ ತುಂಬ ಸಂತೋಷವಾಗಿದ್ದರಂತೆ. ಅವಳು ಬಾಣಂತಿತನದಲ್ಲಿ ತೀರಿಕೊಂಡಳಂತೆ. ಅದರಿಂದಲೇ ಬಹು ಸೊರಗಿಹೋದರಂತೆ. ವಯಸ್ಸು ಅವರಿಗೆ ಹೆಚ್ಚಿಗಿಲ್ಲ. ಈಗ ಎರಡನೆಯ ಲಗ್ನವನ್ನೇನೋ ಆಗಿದ್ದಾರಂತೆ. ಆದರೆ ಸ್ನೇಹಿತರೆನ್ನುತ್ತಾರೆ: 'ಮೊದಲನೆಯ ಹೆಂಡತಿಯ ಸುದ್ದಿ ಮಾತನಾಡಿದಷ್ಟು ಇವಳ ಸುದ್ದಿ ಇಲ್ಲವೆಂದು. ಎರಡನೆಯವಳಲ್ಲಿಯೂ ಮೂರು ನಾಲ್ಕು ಮಕ್ಕಳಿರಬೇಕು. ಮೊದಲನೆಯವಳಲ್ಲಿಯೂ ಎರಡು ಮಕ್ಕಳಿರಬೇಕು. ಆದರೂ ಮನೆಯ ಮಾತು, ಮಕ್ಕಳ ಮಾತು ಅವರು ಆಡಿದ್ದೆಂಬುದಿಲ್ಲ. ಖಾಸಗಿ ಮಾತುಕತೆಯಲ್ಲಿ ಅಂಥ ಮಾತಿಲ್ಲ. ಪ್ರಾಯಶಃ ಎರಡನೆಯ ಸಂಸಾರದಲ್ಲಿ ಸುಖ ದೊರಕಿಲ್ಲ ಎಂದೇ ಕಾಣುತ್ತದೆ. ಅವರು ಎರಡನೆಯ ಮದುವೆಯಾದುದೇ ಹುಚ್ಚುತನವಾಯಿತು."

"ಅದರಲ್ಲೇನು ತಪ್ಪು? ನೀನೊಬ್ಬಳು. ಬಾಲ ಹೋದ ನರಿಯ ಹಾಗೆ. ತನಗೂ ಬಾಲವಿಲ್ಲ; ಇನ್ನಾರಿಗೂ ಬೇಡ ಎನ್ನುವವಳು."

"ಹಾಗಾದರೆ ನಿನಗೆ ಇನ್ನೂ ಬಾಲ ಕಟ್ಟಿಕೊಳ್ಳುವ ಯೋಚನೆ ಇದೆ. ಕಟ್ಟಿಕೊಂಡ ಮೇಲೆ, ಅದು ಬಾಲವಾಗುವುದಿಲ್ಲ. ಗಾಂವಕರರಿದ್ದಾಗ ಹಾಗೆ ಕೊರಳಿಗೆ ಕಟ್ಟಿಕೊಂಡ ಕುಂಟೆಯಾಗುತ್ತದೆ. ಅವರಿಗೆ ಎಸ್ಟ್ರಾಲಜಿಯಲ್ಲಿ ಬಹಳ ವಿಶ್ವಾಸ. ಅದನ್ನು ನೋಡಿ ನೋಡಿ ಮದುವೆಯಾದರು. ನನಗೆ ಚೆನ್ನಾಗಿ ಗೊತ್ತಿಲ್ಲ; ರಾಘವನ್ ಹೇಳಿದ ಕತೆ–ಅವರು ಎಸ್ಟ್ರಾಲಜಿ ನಂಬಿಯೇ ಮೋಸ ಹೋದವರೆಂದು. ಜಾತಕ ನೋಡಿ, ಗ್ರಹ ಬಲ ನೋಡಿ, ಕುದುರೆ ಜೂಜುಗಳಲ್ಲಿ ಅವರು ಕಳೆದುಕೊಂಡ ಹಣಕ್ಕೆ ಮಿತಿಯಿಲ್ಲವಂತೆ.

ಹಾಗೆ ಹಣ ಕಳೆದುಕೊಳ್ಳುವ ಬದಲು, ನನಗಾದರೂ ಕೊಟ್ಟಿದ್ದರೆ ಶೋಕ್ ಮಾಡಿ ತಿರುಗುತ್ತಿದ್ದೆ" ಎಂದಳು. ಅಲ್ಲಿಗೆ ದಿನದ ಹರಟೆ ಮುಗಿದು, ಮನೆಗೆ ಮರಳಿದರು.

ಮುಂದಿನ ತಿಂಗಳ ಆರಂಭದಲ್ಲಿ ಅವರು ಡಿಲ್ಲಿಯನ್ನು ಸೇರಿಯಾಗಿತ್ತು. ಮಂಜುಳೆ ಮುಂಬಯಿಗೆ ಬಂದು ಏಳು ವರ್ಷಗಳ ವನವಾಸ ಕಳೆದಿತ್ತು. ವನವಾಸವಲ್ಲ; ಋಣವಾಸ. ಮನಸ್ಸಿನ ಅಭಿಲಾಷೆಗಳ ವಿಚಾರದಲ್ಲಿ ನಿರಾಶೆ ತಾಳಬೇಕಾಗಿದ್ದ ನೀರಸವಾದ ಕಾಲವದು. ಈ ನಡುವೆ ಅವಳ ಅಣ್ಣನ ಮಗಳು ಅರುಂಧತಿಗೆ ಲಗ್ನ ನಿಶ್ಚಯವಾಯಿತು; ಅಣ್ಣ 'ಬಾ' ಎಂದು ಕಾಗದ ಬರೆದಿದ್ದರೂ ಈಕೆ ಅದಕ್ಕೆ ಹೋಗಲಿಲ್ಲ. ಒಂದು ಒಳ್ಳೆಯ ಸೀರೆಯನ್ನು ಕೊಂಡು ಉಡುಗೊರೆ ಕಳುಹಿಸಿದ್ದಳು. ಅಷ್ಟೆಲ್ಲ ಮಾಡುವಾಗ- ಅಣ್ಣ ತನಗಾಗಿ ಲಗ್ನದ ಪ್ರಯತ್ನ ಮಾಡಿದುದರ ನೆನಪಾಯಿತು. ತನಗೂ ಮದುವೆಯಾಗಿದ್ದರೆ ಅಂದೇ ಆಗಿ ಹೋಗುತಿತ್ತೋ ಏನೋ. ತನ್ನನ್ನು ನೋಡಲು ಬಂದ ವರನೂ ಚೆನ್ನಾಗಿದ್ದ. ಮನೋಹರನ ಹುಚ್ಚು ತನ್ನ ಅಂದಿನ ಆಯ್ಕೆಗೆ ಅಡ್ಡವಾಯಿತು. ಒಂದು ಸಂದರ್ಭ ಕಳೆಯಿತು-ಎಂದು ನಿಟ್ಟುಸಿರನ್ನು ತಳೆದಿದ್ದಳು. ಮರುಗಳಿಗೆಗೆ 'ಮದುವೆಯಾದುದರಿಂದಲೇ ಆತ ನನ್ನವನಾಗುತ್ತಾನೆ ಎಂಬ ಹುಚ್ಚೇತಕ್ಕೆ?'' ಎಂಬ ಸಮಾಧಾನವೂ ಆಯಿತು.

* * * * *

ಈಗ ಅವಳು ಅಂಜಲಿಯೊಡನೆ ಡಿಲ್ಲಿಗೆ ಬಂದಿದ್ದಾಳೆ. ಕನಾಟ್ ಸರ್ಕಸ್‌ನಲ್ಲೇ ಮನೆ. ಅಲ್ಲೇ ಕಚೇರಿ. ದೊಡ್ಡ ರಾಜಧಾನಿ. ಜನರು, ಮುಂಬಯಿಯ ಜನಗಳಷ್ಟು ನಾಗರಿಕರಾಗಿ ಕಾಣಿಸದಿದ್ದರೂ, ಬೆಡಗಿಗೆ, ಸಂತೋಷಕ್ಕೆ, ಐಶ್ವರ್ಯಕ್ಕೆ ಆ ನಗರದಲ್ಲಿ ಕೊರತೆ ಕಾಣಿಸುತ್ತಿರಲಿಲ್ಲ. ಕಚೇರಿ ಮುಗಿದ ಮೇಲೆ ರಜೆಯ ವೇಳೆಯಲ್ಲಿ ಗಾಂವಕರರೊಡನೆ ಎಲ್ಲಿಗಂದರಲ್ಲಿಗೆ ಹೋಗಬಹುದು. ಹಲವಾರು ಸಿನೆಮ ಮಂದಿರಗಳಿಗೂ ಹೋಗಬಹುದು; ಹೋಗುತಿದ್ದಾರೆ. ಗಾಂವಕರರು ಅಂಜಲಿ, ಮಂಜುಳೆಯರನ್ನು ಕುಳ್ಳಿರಿಸಿಕೊಂಡು ಲಘು ಮನಸ್ಸಿನಿಂದ ಹರಟುತ್ತಾರೆ. ಡಿಲ್ಲಿಗೆ ಬಂದ ಮೇಲೆ ಅವರ ಉತ್ಸಾಹವೂ ಹೆಚ್ಚಿದಂತೆ ಕಾಣುತ್ತದೆ. ಮುಂಬಯಿಗೇನೋ ಹಣ ಕಳುಹಿಸುತ್ತಿದ್ದಾರಂತೆ. ಒಂದು ವರ್ಷ ಸಂದಿತಾದರೂ ಬಿಡಾರ ತರುವ ಸುದ್ದಿ ಮಾತನಾಡುತ್ತಲಿಲ್ಲ. ಸ್ಪಷ್ಟವಾಗಿ "ನಿಮ್ಮ ಜತೆಯಲ್ಲೇ ನಾನು ಸುಖವಾಗಿ

ದ್ದೇನೆ. ಬಿಡಾರದ ಅವಾಂತರ ಬೇಡ” ಎಂದು ಇಬ್ಬರಿಗೂ ನಗುತ್ತ ಹೇಳುತಿದ್ದರು. ಒಮ್ಮೆ ಎಂಟು ದಿನ ರಜೆ ತೆಗೆದುಕೊಂಡು, ಅವರನ್ನು ಸುಂದರವಾದ ಸಿಮ್ಲಾಕ್ಕೂ ಕರೆದೊಯ್ದಿದ್ದರು. ಮಂಜುಳೆ ಅಂಜಲಿಯರಿಬ್ಬರೂ ಆ ಸ್ವರ್ಗ ರಾಜ್ಯದಲ್ಲಿ ಸಂತೋಷಪಟ್ಟು ಮರಳಿದರು. ಇನ್ನೊಮ್ಮೆ ಅವರನ್ನು ಆಗ್ರಾಕ್ಕೆ ಕರೆದೊಯ್ದಿದ್ದರು. ಅವರೆಲ್ಲರೂ ಕೂಡಿ ತಿಂಗಳು ಬೆಳಕಿನಲ್ಲಿ ತಾಜಮಹಲಿನ ಸೌಂದರ್ಯ ನೋಡಿ ಆನಂದಿಸಿದರು. ಅವರು ಬಳಿಯಲ್ಲಿರುವಷ್ಟು ದಿನ ತಿಂಗಳ ಸಂಬಳ ವೆಚ್ಚವಾದರೂ ಯಾವ ಫೀತಿಯೂ ಇರಲಿಲ್ಲ; ಆತುರವೂ ಇಲ್ಲ. ಆದರೂ ಈ ಸುಖಕ್ಕೂ ಒಂದು ದಿನ ಕೊನೆ ಬಂದಿತು. ಒಂದು ದಿನ ಸಂಜೆ ಅಂಜಲಿ, ಮಂಜುಳೆ, ಗಾಂವಕರರು ಕೈ ಕೈ ಹಿಡಿದುಕೊಂಡು ಕನಾಟ್ ಸರ್ಕಸ್ಸಿನಿಂದ ವಿಹಾರಕ್ಕೆ ಹೊರಟರು. ಸಫ್ದರ್‌ಜಂಗಿನ ಕಡೆಗೆ ಮೆಲ್ಲಗೆ ಸಾಗಿದರು. ವಿರಾಮವಾಗಿ, ಮನಸ್ಸನ್ನೆಲ್ಲ ಹರಿಯಗೊಟ್ಟು, ಮಾತಿನಲ್ಲಿ ಮೈಮರೆತುಬಿಟ್ಟಿದ್ದ ಅಂಜಲಿ, ಮಂಜುಳೆಯರಿಗೆ ಗಾಂವಕರರು ತಮ್ಮ ಕೈಯಿಂದ ಸಿಡಿದು ನೆಲಕ್ಕುರುಳಿದುದು ಕಂಡಿತು. ಒಮ್ಮೆಗೇ ಭಯದಿಂದ ಚೀರಿದರು. ಅತ್ತ ದಾರಿಯಿಂದ ಬರುತ್ತಿದ್ದ ಮಿಲಿಟರಿ ವಾಹನವೊಂದು, ಬಿದ್ದವರ ಕಾಲಿನ ಮೇಲೆಯೇ ಸಾಗಿ ಐವತ್ತು ಗಜ ಮುಂದೆ ಹೋಗಿ ತುರುಬಿ ನಿಂತಿತು. ಹಿಂದಿನಿಂದ ಇನ್ನಷ್ಟು ವಾಹನಗಳು ಬಂದುವು. ಜನರು ಗುಂಪುಗೂಡಿದರು. ವಿಸ್ಮೃತಿಗೊಂಡ ಅವರನ್ನೂ, ರಕ್ತವನ್ನೂ ಕಾಣಲಾರದ ಅಂಜಲಿ ಮಂಜುಳೆಯರು ಹಿಂದಕ್ಕೆ ಸರಿದರು. ಅವರ ಮುಖ ಭಯ ದುಃಖಗಳಿಂದ ವಿವರ್ಣವಾಗಿತ್ತು; ಏನು ಮಾಡುವುದಕ್ಕೂ ತೋಚಲಿಲ್ಲ. ಆ ಗದ್ದಲದಲ್ಲಿ ನೆರೆದವರು ಏನು ಮಾಡುತ್ತಾರೆಂದೂ ಅವರಿಗೆ ಗೊತ್ತಾಗಲಿಲ್ಲ. ನಿಂತ ವಾಹನ ಸಂಚಾರ, ತಿರುಗಿ ತೊಡಗುವಾಗ, ಗಾಂವಕರರನ್ನು ಎಂಬುಲೆನ್ಸ ಗಾಡಿಯಲ್ಲಿ ಹಾಕಿ ಆಸ್ಪತ್ರೆಗೆ ಸಾಗಿಸಿಯೂ ಆಗಿತ್ತು. ಮನೆಯ ಕೀಲಿಯು ಕೈಗಳಲ್ಲಿ ಒಂದು ಕೀಲಿ ಅಂಜಲಿಯಲ್ಲಿತ್ತು. ಅವಳು ಗೆಳತಿಯೊಡನೆ ಮನೆಗೆ ಓಡಿದಳು. ಅಲ್ಲಿಂದ ಮುಂಬಯಿಯ ಕಚೇರಿಗೆ ಟ್ರಂಕ್ ಟೆಲಿಫೋನ್ ಮಾಡಿ ಸುದ್ದಿ ತಿಳಿಸಿದಳು. ಆ ರಾತ್ರಿಯೆಲ್ಲ ಇಬ್ಬರೂ ಕಣ್ಣು ಮುಚ್ಚಲಿಲ್ಲ. ಮಾತನಾಡುತ್ತಿದ್ದರು. ಗಾಂವಕರರಿಗೇನಾಗುತ್ತದೋ ಎಂದು ದುಃಖಿಸುತಿದ್ದರು. ಬೆಳಗಿನ ದಿನ ಪತ್ರಿಕೆಯಲ್ಲಿ, ಹಿಂದಣ ದಿನದ ಅವಘಡದ ಕಥೆ ಪ್ರಕಟವಾಗಿ ಬಂದಿತ್ತು. “ಜಯಲಕ್ಷ್ಮಿ ವಿಮಾ ಕಂಪೆನಿಯ ಮೆನೇಜರರಾದ ಗಾಂವಕರರ

ಬಲಗಾಲಿನ ಮೇಲೆ ಮೋಟರ್ ಹರಿದುಹೋಯಿತೆಂದೂ, ಅದು ಮಿಲಿಟರಿ ವಾಹನವೆಂದೂ, ಕಾಲನ್ನು ತುಂಡುಮಾಡಿದ್ದಾರೆ—ಆದರೂ ಜೀವಕ್ಕೆ ಭಯವಿಲ್ಲ" ಎಂದೂ ತಿಳಿಸಿತ್ತಲ್ಲದೆ ಅವರನ್ನು ಮಲಗಿಸಿದ ಆಸ್ಪತ್ರೆಯ ಹೆಸರನ್ನೂ ಕೊಟ್ಟಿದ್ದರು.

ತಮ್ಮ ಕರ್ತವ್ಯವೆಂದು ತಿಳಿದು, ಮರುದಿನ ಇಬ್ಬರೂ ಒಂದು ಮೈಲು ದೂರವಿರುವ ಆ ಆಸ್ಪತ್ರೆಗೆ ಧಾವಿಸಿದರು. ಕಾಲನ್ನು ಕಳೆದುಕೊಂಡ ಗಾಂವಕರರು ಒಪರೇಷನ್ ಕಾಲದಲ್ಲಿ ಕೊಟ್ಟ ಕ್ಲೋರೋಫಾರ್ಮ್ ದೆಸೆಯಿಂದ ಇನ್ನೂ ನಿದ್ರಿಸುತ್ತಿದ್ದರು. ಆ ಸಂಜೆಯೂ ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಮಾರುದಿನವೂ ಹಾಗೆಯೆ. ಮೂರನೆಯ ದಿನ ಇವರು ಹೋದಾಗ ಇವರನ್ನೇ ಅವರು ನಿರೀಕ್ಷಿಸಿಕೊಂಡಂತಿತ್ತು. ಇಬ್ಬರೂ ಹೋಗಿ ಬಳಿಯಲ್ಲಿ ನಿಂತುಕೊಂಡರು. ತಮ್ಮ ದುಃಖವನ್ನೆಲ್ಲ ತೋಡಿಕೊಂಡರು. ಅವರ ಮುಖವೂ ದುಃಖಪೂರಿತವಾಗಿತ್ತು. ಅಂಜಲಿ ಆಗ 'ನಿಮ್ಮ ಮನೆಯವರ ವಿಳಾಸ ಹೇಳಿದರೆ ತಂತಿಕೊಡುತ್ತೇವೆ; ಆಗಬಹುದಲ್ಲ?' ಎಂದಳು. 'ಬೇಡ' ಎಂದರವರು. 'ಇದೆಲ್ಲ ತಿಳಿಯದಿರುವುದೊಳಿತು. ಸದ್ಯಕ್ಕೆ ಬೇಡ' ಎಂದರು. ಅಂಜಲಿಗೆ 'ಹೆಂಡತಿಯೊಡನೆ ಗಾಂವಕರರಿಗಿದ್ದ ಮುನಿಸೇ ಇದಕ್ಕೆ ಕಾರಣ' ಎಂಬ ಅರ್ಥವಾಯಿತು. ಮಂಜುಳೆಗೆ ಅವರ ನಡತೆಯ ಅರ್ಥವೇ ಆಗಲಿಲ್ಲ. ಗಾಂವಕರರ ಮನೆಯ ವಿಚಾರಕ್ಕಿಂತಲೂ ಹೆಚ್ಚಾಗಿ, ಅವರಿಗಾದ ಅಪಾಯವನ್ನು ನೋಡುವ ಕಣ್ಣು ಅವಳದು. ಅವರ ಒಂದು ಕಾಲನ್ನು ಮೊಣಗಂಟಿನಿಂದ ಮೇಲಕ್ಕೆ ತುಂಡುಮಾಡಿ ಕಟ್ಟಿದ್ದರು. ಇನ್ನೊಂದು ಪಾದಕ್ಕೆ ಬೇಂಡೇಜ್ ಹೊದ್ದಿಸಿದ್ದರು.

"ಆ ಕಾಲಿಗೂ ತುಂಬ ಅಪಾಯವಾಗಿದೆಯೇ!" ಎಂದು ಕೇಳಿದಳು.

"ನನಗೆ ತಿಳಿಯದು. ತುಂಬ ನೋವುಂಟು. ಅನುಭವಿಸುವ ಕಾಲ ಬಂದಿದೆ. ಇಷ್ಟೇ—ಪುಣ್ಯಕ್ಕೆ ನೀವೂ ಜತೆಯಲ್ಲಿದ್ದಿರಿ; ನನಗೆ ಹಾಗಾಗುವ ಬದಲು ನನ್ನನ್ನು ನಂಬಿ ಬಂದ ನಿಮಗೆ ಏನಾದರೂ ಆಗಿದ್ದರೆ ಎಂಥ ದೊಡ್ಡ ವಿಪತ್ತಾಗುತಿತ್ತು" ಎಂದರು.

ತಮ್ಮ ವಿಪತ್ತಿನಲ್ಲೂ ಅಂಥ ಒಂದು ವಿಚಾರಸರಣಿ ಹೊಳೆದುದನ್ನು ಕಂಡು ಅವಳಿಗೆ ಆಶ್ಚರ್ಯವಾಯಿತು. ಮನೆಗೆ ಮರಳುತ್ತ ಅವಳು ಅಂಜಲಿಯೊಡನೆ "ಅವರು ಬೇಡವೆನ್ನಲಿ. ನಮ್ಮ ಕರ್ತವ್ಯ ನಾವು ಮಾಡಬೇಡವೆ?

ಒಂದು ಕಾಗದವನ್ನಾದರೂ ಅವರ ಮನೆಯವರಿಗೆ ಬರೆಯುವ. ಗಾಂವಕರರಿಗೆ ತಿಳಿಸಬೇಕಾಗಿಲ್ಲ. ನಾವು ಹೆಂಗಸರಾಗಿದ್ದು ಅಷ್ಟನ್ನು ಮಾಡದಿದ್ದರೆ ತುಂಬ ಅನ್ಯಾಯವಾಗುತ್ತದೆ ಎಂದಳು."

"ನೀನು ಹೇಳುವುದೇನೋ ಸರಿ. ಆದರೆ ಅವರ ಹೆಂಡತಿಯ ವಿಳಾಸ ನನಗೆ ಗೊತ್ತಿಲ್ಲ. ಅವರಿಗೆ ತಿಳಿಸದೆ ಹಾಗೆ ಮಾಡಿದರೆ,ಅವರೂ ಸಿಟ್ಟಾದಾರು. ನೋಡುವ; ನಾಲ್ಕು ದಿನಗಳು ಹೋಗಲಿ. ಅವರೇ ಬರೆಯುವುದಕ್ಕೆ ಹೇಳಿಯಾರು" ಎಂದುಕೊಂಡು ಇಬ್ಬರೂ ಮನೆಗೆ ಹೋದರು.

ಮುಂಬಯಿಂದ, ಕಚೇರಿಯ ಪಟ್ಟಕ್ಕೆ ಬದಲೊಬ್ಬ ಮೆನೇಜರನು ಬಂದನು. ಆತ ಆಫೀಸಿಗೆ ಸಂಬಂಧಿಸಿದ ಮನೆಯ ಒಂದು ಕೋಣೆಯನ್ನು ಹಿಡಿಸಿಕೊಂಡು, ತನ್ನ ಬಿಡಾರವನ್ನು ಹೂಡಿದ. ಅಂಜಲಿ, ಮಂಜುಳೆಯರಿಗೆ ಅಲ್ಲಿರುವುದಕ್ಕೆ ಸಂಕೋಚವಾಗತೊಡಗಿತು. ಗಾಂವಕರರು ಹುಷಾರಾಗಿ ಮರಳಿ ಬಂದಾರೆಂದೆನಿಸಲಿಲ್ಲ. ಇನ್ನು ಅವರ ದುಡಿಯುವ ಜೀವನವೇ ಕೊನೆಗಂಡಿತೆಂದು ತಿಳಿದುಕೊಂಡರು. ಒಂದು ಕಾಲು ಕುಂಟಾಗಿದೆ. ಇನ್ನೊಂದರ ಮೂರು ಬೆರಳುಗಳು ಪುಡಿಯಾಗಿವೆಯಂತೆ. ಆಸ್ಪತ್ರೆಯಿಂದ ಅವರನ್ನು ಮನೆಗೆ ಸಾಗಿಸಿ ತಂದ ಒಂದೆರಡು ದಿನಗಳ ಕಾಲ ಅಂಜಲಿ ಮಂಜುಳೆಯರಿಬ್ಬರೂ ದುಃಖಪೂರಿತರಾಗಿ ಅವರಿಗೆ ಸೇವೆ ಸಲ್ಲಿಸಿದರು. ಅವರನ್ನು ರೈಲಿನಲ್ಲಿ ಮಲಗಿಸಿ ಮುಂಬಯಿಗೆ ಕಳುಹಿಸುವ ಏರ್ಪಾಟಾಯಿತು. ಕಳುಹಿಸಿಕೊಡುವುದಕ್ಕೆ ಕಚೇರಿಯ ಎಲ್ಲರೂ ಹೋಗಿದ್ದರು. ಅವರು ಕುಳಿತ ಮೋಟರ್ ವಾಹನದಲ್ಲಿಯೆ ಅಂಜಲಿ ಮಂಜುಳೆಯರು ಕುಳಿತಿದ್ದರು. ಆ ವೇಳೆ ಗಾಂವಕರರು ಒಂದು ಮಾತನ್ನಾಡಿದರು. "ನಿಮ್ಮನ್ನು ಇಲ್ಲಿ ತಂದು ಹಾಕಿದೆ; ನಾನು ಮಾತ್ರ ಮುಂಬಯಿಗೆ ಹೋಗುತ್ತಿದ್ದೇನೆ. ನನ್ನ ಭವಿಷ್ಯತೀರ ಕತ್ತಲು ತುಂಬಿದ ಹಾಗೆಯೇ ಇದೆ. ಸ್ವರ್ಗದಿಂದ ನರಕಕ್ಕೆ ಹೊರಟವನ ಪಾಡು ನನ್ನದು" ಎಂದಂದರು. ಅವರನ್ನು ಬೀಳ್ಕೊಡುವ ತನಕ ಇಬ್ಬರೂ ಶೋಕದಿಂದ ಅಳುತಿದ್ದರು. ಉಜ್ಜಿಕೊಂಡಷ್ಟು ಕಣ್ಣೀರು ತಿರುಗಿ ಬರುತಿತ್ತು. ಬೀಳ್ಕೊಡುವಾಗ ಅವರು ತಮ್ಮ ಮುಂಬಯಿ ವಿಳಾಸವನ್ನು ತಿಳಿಸಿದರು. 'ಕಾಗದವನ್ನಾದರೂ ಬರೆಯುತ್ತಿರಿ. ಈ ಕುಂಟನಿಂದ ಏನಾದರೂ ಸಹಾಯಬೇಕಾದರೆ ತಿಳಿಸಿ' ಎಂದಂದು ಹೋದರು. ರೈಲು ಸರಿದು ಹೋಯಿತು. ಗೆಳತಿಯರು ಮನೆಗೆ ಬಂದರು. ಆ ವಾರವೆಲ್ಲ ಮಂಜುಳೆಯ

ಅಂತರಂಗವು ಪರಿತಪಿಸುತಿತ್ತು. 'ತನ್ನ ಸುಖಕ್ಕೆ ದೊರಕಿದ ಪ್ರತಿಯೊಂದು ವಸ್ತುವೂ ಹೀಗೆ ಕೈಯಿಂದ ಅಪಹೃತವಾಗುತ್ತಿದೆಯಲ್ಲ. ಕೆಲವು ವಂಚನೆಯಿಂದ; ಕೆಲವು ದೈವ ವಿಲಾಸದಿಂದ' ಎಂದು ತೋರತೊಡಗಿತು.

ಹೊಸತಾಗಿ ಬಂದ ಅವರ ಕಚೇರಿಯ ಅಧಿಕಾರಿ ದರ್ಪಶೀಲ; ಅಲ್ಲದೆ ತಾನು ಅಲ್ಲಿಗೇನೆ ಬಿಡಾರ ತಂದರೆ ತನ್ನ ಹಕ್ಕು ಇನ್ನಷ್ಟು ಭದ್ರವಾಗುತ್ತದೆಂದು ಯೋಚಿಸಿ ಇವರೊಡನೆ "ನೀವು ಬೇರೊಂದು ಮನೆಯನ್ನು ಹುಡುಕಿ; ಇಲ್ಲಿಗೆ ನನ್ನ ಬಿಡಾರ ಬರುತ್ತದೆ. ಗಾಂವಕರರ ಹಾಗೆ ನಾನಲ್ಲ. ಆಫೀಸಿನ ಕೆಲಸವೆಲ್ಲ ಹಾಗೆಯೇ ಬಾಕಿ ಉಳಿದಿದೆ. ಅವರೂ ನೀವೂ ಕೂಡಿಯೆ ಮಜಾ ಮಾಡಿ ದಿನ ಕಳೆದ ಹಾಗೆ ಕಾಣಿಸುತ್ತದೆ" ಎಂದು ಚುಚ್ಚಿ ನುಡಿದ. ಅವರ ಷ್ಟನ್ನು ಹೇಳಬೇಕಿರಲಿಲ್ಲ. ವಾತಾವರಣ ಬದಲಿಸಿತೆಂದು ಗೆಳತಿಯರಿಬ್ಬರಿಗೂ ಗೊತ್ತು. ಈ ಹೊಸ ಕಟುಕನ ಕೆಳಗೆ ತಾವು ಕೆಲಸ ಮಾಡುವುದು ಉಚಿತವಲ್ಲವೆಂದು ಅವರು ಮೊದಲೇ ನಿರ್ಣಯಿಸಿದ್ದರು. ಅದು ಯುದ್ಧ ಕಾಲದ ದಿಲ್ಲಿ. ಕೆಚ್ಚುಳ್ಳ, ಉತ್ಸಾಹವುಳ್ಳ ಯಾವನಿಗೂ ಪ್ರೋತ್ಸಾಹಕೊಡುವ ಸ್ಥಳ. ಅಂಜಲಿ ಮಂಜುಳೆಯರಿಬ್ಬರೂ ಬಿಡಾರ ಬಿಡುವ ಜತೆಯಲ್ಲಿಯೇ, ತಮ್ಮ ರಾಜಿನಾಮೆ ಅರ್ಜಿಗಳನ್ನೂ ಹೊಸ ಮೆನೇಜರನಿಗೆ ಸಲ್ಲಿಸಿದರು.

ಮೆನೆಜರ್ ಗಾಡ್ಗೀಳ "ನಾನು ನಿಮಗೆ ಮನೆ ಬಿಡಲು ಹೇಳಿದೆನಷ್ಟೆ. ಕೆಲಸವನ್ನು ಬಿಡಲು ಹೇಳಲಿಲ್ಲ. ಯಾಕೆ ತಪ್ಪು ತಿಳಿದುಕೊಳ್ಳುತ್ತೀರಿ?" ಎಂದು ಕೇಳಿದ.

"ಅಲ್ಲದಿದ್ದರೂ ನಾವು ಬಿಡುವವರೆ. W A. C. ಟ್ರೈನಿಂಗಿಗೆ ನಮ್ಮ ನ್ನಾರಿಸಿದ್ದಾರೆ. ನಾವು ಹೋಗುತ್ತೇವೆ" ಎಂದು ಹೇಳಿ ಹೊರಟರು. ರಾಘವನ್ ಮೊದಲೇನೇ ಯುದ್ಧದ ಚಾಕರಿಗೆ ಸೇರಿ, ಇವರಿಗೆ ದಾರಿ ತೋರಿಸಿದ್ದ. ಇಂದು ಇವರೂ ಹೊರಟರು.

"ಗುಡ್ ಲಕ್" ಎಂದು ಹೇಳಿ ಗಾಡ್ಗೀಳ ಬೀಳ್ಕೊಟ್ಟ. ಅಂಜಲಿ ಹೊರ ಬರುತ್ತ "ಈ ಗೂಬೆ ನಮಗೆ ಗುಡ್ ಲಕ್ ಹೇಳಬೇಕಾಗಿರಲಿಲ್ಲ. ಅದೃಷ್ಟ ಅವರವರ ಹಣೆಯಲ್ಲಿ ಬರೆದಂತಾಗುತ್ತದೆ" ಎಂದು ಜಂಬದಿಂದ ಹೇಳುತ್ತ, ಗೆಳತಿಯನ್ನು ಕರೆದುಕೊಂಡು ಹೊರಕ್ಕೆ ಬಂದಳು.

* * * * *

ಪ್ರಪಂಚದಲ್ಲೇ ಬೀಸಿದ ಯುದ್ಧದ ಬಿರುಗಾಳಿ, ಈಗ ತನ್ನ ಸೆಳೆತದಲ್ಲಿ

ಅಂಜಲಿ, ಮಂಜುಳೆಯರಿಬ್ಬರನ್ನೂ ಸಿಲುಕಿಸಿಕೊಂಡಂತಾಯಿತು. ಇಬ್ಬರೂ W A. C. ಟ್ರೈನಿಂಗ್ ಪಡೆದು ಅಧಿಕಾರಿಗಳಾಗಿ ಎಲ್ಲೆಲ್ಲಿಯೋ ಅಡ್ಡಾಡತೊಡಗಿದರು. ಅಂಜಲಿಯ ಮನಸ್ಸಿಗೆ ಈ ಹೊಸವೃತ್ತಿ ಪ್ರಿಯವಾದ ಗಂಡುಗೆಲಸವಾಯಿತು. ತನ್ನ ಹೆಣ್ಣುತನ ಅನಿವಾರ್ಯವಾಗಿ ತಂದೊಡ್ಡಿದ ಸಂಕೋಚವನ್ನು ಮನಸ್ಸಿನಿಂದ ತೊಡೆದು ಹಾಕುವುದಕ್ಕೆ ಅದು ಅನುಕೂಲವಾಯಿತು. ನಾಲ್ಕು ದಿನಗಳ ಕಾಲ W. A. C. ಸಮರೂಪ ಅವಳ ಹೆಮ್ಮೆಯ ಉಡುಗೆಯಾಯಿತಾದರೂ, ಕಾಲಕ್ರಮೇಣ ಉಡುಗೆ ಆಭರಣಗಳ ಮೋಹ, ತಿರುಗಿ ಅವಳಲ್ಲಿ ಸೀರೆ ಕುಪ್ಪಸಗಳ ಹಂಬಲವನ್ನು ಮೂಡಿಸಿದುವು. ಮಂಜುಳೆಗೆ ಸ್ವಾಭಾವಿಕವಾಗಿ, ಗಂಡಸಾಗುವ ಆಸೆಯೇ ಇರಲಿಲ್ಲ. ಜೀವನದಲ್ಲೊದಗಿದ ನಿರಾಶೆಗಳು, ಈ ನೂತನ ಉದ್ಯೋಗಕ್ಕೆ ಅವಳನ್ನು ತಳ್ಳಿದ್ದುವು. ಅದರಿಂದಾಗಿ ಅವಳಿಗೆ ಹೊಸ ಉಡುಗೆಯ ಜತೆಗೆ ಸ್ವಾಭಾವಿಕವಾಗಿ ಬೆಳೆಸಿಕೊಂಡು ಬಂದಿದ್ದ ಲಜ್ಜೆಯೂ ಮಾಯವಾಯಿತು. ಸುತ್ತ ಕಲೆಯುತಿದ್ದ ಜನಗಳ ಸಂಪರ್ಕ ಇನ್ನಷ್ಟು ವಿಚಿತ್ರವಾಗಿತ್ತು. ಸಂಸಾರದಿಂದ ದೂರವಾದ ಸೈನಿಕರು, ಸೇನಾಧಿಕಾರಿಗಳು, ವೈಮಾನಿಕರು ಎಲ್ಲರೂ ಕಾಳಗದಲ್ಲಿ ಕಠಿಣ ಮನಸ್ಕರಾಗಿ ಕಾಣಿಸಿದರೂ, ಹೆಣ್ಣೆಂಬ ಒಡವೆಯ ವಿಚಾರದಲ್ಲಿ, ಮೃದು ಮನಸ್ಸಿನವರಾಗಿಯೇ ಇದ್ದರು. ಆ ಮಿದುತನ ಮನಸ್ಸಿಗೆ ಸೇರಿದುದು; ಮಾತಿಗಲ್ಲ. ಆ ಆವರಣದಲ್ಲಿ ಕಲಿತವರು, ಕಲಿಯದವರು ಬಳಿಯಲ್ಲಿ ಗಂಡಸರಿರಲಿ, ಹೆಂಗುಸರಿರಲಿ ಅಶ್ಲೀಲ ಮಾತುಗಳನ್ನು ಹೊಸ ನಾಗರಿಕತೆಯ ಚಿಹ್ನೆ ಎಂದು ತಿಳಿಯುವಂತೆಯೆ ಕಾಣಿಸುತಿತ್ತು. ಆರಂಭದಲ್ಲಿ ಮಂಜುಳೆಗೆ ಈ ಆವರಣ ಏನೇನೂ ಪ್ರಿಯವಾಗಿ ಕಾಣಿಸಲಿಲ್ಲ. ತಾನು ಮಾಡುವ ಕೆಲಸದಲ್ಲೇನೋ ಒಂದು ಬಗೆಯ ಪ್ರೀತಿ ಉಂಟಾಗಿತ್ತು. ಅದು ವಿಮಾ ಕಂಪೆನಿಯ ಕೆಲಸದಷ್ಟು ನಿಸ್ಸಾರವಾದ ಕೆಲಸವಾಗಿರಲಿಲ್ಲ. ಹಲವು ಬಾರಿ ಗಾಯಗೊಂಡು ನರಳುತ್ತಿರುವವರ ಶುಶ್ರೂಷೆ ಮಾಡುವ ಕೆಲಸ ಅವಳ ಸ್ವಭಾವಕ್ಕೆ ಒಪ್ಪುತಿತ್ತು. ಗಾಂವಕರರ ಚೀತ್ಕಾರವನ್ನು ಕೇಳಿ, ಚೆಲ್ಲಿದ ರಕ್ತವನ್ನು ನೋಡಿ ಘಾವಿಸಿ ಹೋದ ಅವಳೇನೆ–ಗಾಯ, ರಕ್ತ, ಅಂಗ ವಿಕಲತೆ, ನರಳುವಿಕೆಗಳನ್ನು ಮುಂದಿನ ಜೀವನದಲ್ಲಿ ಆಗಾಗ ಕಾಣಬೇಕಾಯಿತು.

ಅವಳು ದೊರಕಿಸಿಕೊಂಡ ಉದ್ಯೋಗ-ವಿಶ್ರಾಂತಿಕೊಡುವ ಉದ್ಯೋ

ಗವಾಗಲಿಲ್ಲ. ಇರುವುದಕ್ಕೆ ಒಂದು ನಿಶ್ಚಿತವಾದ ತಾವಿರಲಿಲ್ಲ. ಒಂದು ನಿಶ್ಚಿತ ಊರಲ್ಲ. ಸದಾ ಶಿಬಿರವಾಸ. ಇಂದು ಅಂಬಾಲಾ, ನಾಳೆ ದಿಲ್ಲಿ, ನಾಡಿದು ಕಾನ್ಪುರ; ಮತ್ತೊಂದು ದಿನ ಕಲ್ಕತ್ತ ಇಲ್ಲವೆ ಇಂಫಾಲ. ದಕ್ಷಿಣದ ತಿರುಚಿನಾಪಳ್ಳಿಯಿಂದ ಸಿಕಂದರಾಬಾದ್ ತನಕ-ಔರಂಗಾಬಾದಿನಿಂದ ಜಬ್ಬಲ್‌ಪುರದ ತನಕ-ಹೀಗೆ ನೋಡದ ಊರಿಲ್ಲ; ಕಾಣದ ಜನವಿಲ್ಲ. ಜನ ಜಂಗುಳಿಯಲ್ಲೇ ನಲಿದಾಡಬೇಕು. ಅವಳ ಪಾಲಿಗೆ ನಿರಾಕರ್ಷಕವಾದ ಸಮರೂಪ ಧರಿಸುವವರನ್ನೇ ನೋಡಬೇಕು. ಆದರೆ ಇದಕ್ಕೆಲ್ಲ ಹೊರಗಿನ ಬಣ್ಣವಿಲ್ಲದಿದ್ದರೂ, ಒಳಗಿಂದ ಒಂದು ಮಾನಸಿಕ ಬಣ್ಣವಿದ್ದಿತ್ತು. ಅವಳ ಬೆಳೆದ ಹೆಣ್ಣುತನದ ಶರೀರ ಕಾಮನೆಗಳಿಗೆ ಅನುಕೂಲ ವಾತಾವರಣ ಎಲ್ಲೆಲ್ಲೂ ಕಾಣಿಸುತಿತ್ತು. ಅದರ ತೃಪ್ತಿಯು ಒಂದು ಹೇಯ ಕೆಲಸ ಎಂಬ ಭಾವನೆಯು ಎಂದೆಂದೂ ಮೂಡದಂಥ ವಾತಾವರಣ ಅದು. ಆ ವಾತಾವರಣದಲ್ಲಿ ಮದುವೆಯಾದವರು, ಆಗದವರು ಎಲ್ಲರೂ ವಿರಹಿಗಳೇ. ಅಂಥಲ್ಲಿ ಇನ್ನೊಂದು ಮಾನವೀ ಜೀವನದ ಮುಖ ವ್ಯಕ್ತವಾಗುತ್ತದೆ. ನಿಸರ್ಗದಲ್ಲಿ ಪ್ರಾಣಿಯಾಗಿ ಹುಟ್ಟಿದ ಅವನ ಒಂದು ಸ್ವಭಾವ ತನ್ನ ಹಕ್ಕನ್ನೆಲ್ಲ ಬೇಡುತ್ತದೆ. ವಿಚಿತ್ರ ಸನ್ನಿವೇಶಗಳಲ್ಲಿ ನಲಿದಾಡಿ, ಗಾಯಗೊಂಡು, ಸಾಹಸ ತೋರಿಸಿ, ಅಥವ ಬೆದರಿ ಹಿಂದೋಡಿ ಬಂದು, ಹುಚ್ಚು ಹಿಡಿದಿರುತ್ತದೆ ಒಮ್ಮೊಮ್ಮೆ ಮನಸ್ಸಿಗೆ. ಮನಸ್ಸೇ ತಮ್ಮ ಕೈಯಲ್ಲಿರುವುದಿಲ್ಲ. ಎಂದಂದರೆ ಅಂದು ಸಾವಿನೊಡನೆ ಹೋರಿ ಕಾದಾಡಬೇಕಾದ ಅವರ ಜೀವಕ್ಕೆ ಒಂದಿಷ್ಟು ಬಿಡುವು ದೊರೆತಾಗ ಮನಸ್ಸು ಲಘುವಾಗುತ್ತದೆ. ಆಗ ಎಂಥೆಂಥ ಆಸೆಗಳುಂಟಾದಾವು—ಎಂಬುದನ್ನು ಪೇಟೆ ಪಟ್ಟಣಗಳಲ್ಲಿ ಸಂಸಾರದೊಂದಿಗೆ ಕುಳಿತ ಜನರು ಊಹಿಸಿ ತಿಳಿಯಲಾರರು. ಅದನ್ನು ನಿಕಟವಾಗಿ, ಅರ್ಥಪೂರ್ಣವಾಗಿ ತಿಳಿಯುವ ಅವಕಾಶ ಮಂಜುಳೆಗೆ ದೊರಕಿತೆಂದರೆ ಆಶ್ಚರ್ಯವಿಲ್ಲ. ಅವಳಿಂದು ಹೇಗೆ ಹೇಗೋ ಬಾಳುತಿದ್ದಾಳೆ. ತನ್ನ ಕೆಲಸದಲ್ಲಿ ಉತ್ಸಾಹ ತೋರುತ್ತಿದ್ದಾಳೆ; ನಟಿಸುತ್ತಲಿಲ್ಲ. ತಾನು ಎಂಥವಳಿದ್ದವಳು ಎಂಥವಳಾಗಿದ್ದೇನೆ ಎಂಬ ಸಂಪೂರ್ಣ ಗ್ರಹಿಕೆಯುಳ್ಳವಳಾಗಿದ್ದಾಳೆ. ಸುಖಪಡುವುದಕ್ಕೆ ತಾನು ಹುಟ್ಟಿಲ್ಲವೋ ಎಂಬ ಅನುಮಾನವೂ ಅವಳಿಗೊಮ್ಮೊಮ್ಮೆ ಬರುತ್ತದೆ. 'ಪಡುತ್ತಿರುವುದು ಸುಖವಲ್ಲವೆ?' ಎಂದು ಕೇಳಿದರೆ, ಅದನ್ನು ಅವಳು ಉತ್ತರಿಸಲಾರಳು.

ಮುಂಬಯಿಯಲ್ಲಿ, ದಿಲ್ಲಿಯಲ್ಲಿ ಜೀವಿಸುತ್ತಿದ್ದಾಗ ಆಕೆ ಪರಾಜಯ

ಗೊಂಡಿದ್ದರೂ, ಅವಳು ಸ್ನೇಹವೆಂಬುದನ್ನು ಅರಿತಿದ್ದಳು. ಮನಸ್ಸು, ಮೈ ಗಳೆರಡೂ ಏಕತ್ರಗೊಳ್ಳುವ ಆನಂದದ ಕೆಲವು ಕ್ಷಣಗಳನ್ನಾದರೂ ತಿಳಿದಿದ್ದಳು. ಮನಸ್ಸಿನ ಪ್ರಭಾವವಿಲ್ಲದ ಸುಖ ಅದು ಎಂದೆನಿಸುತ್ತಿರಲಿಲ್ಲ. ಅನಂತರದ ಬಾಳು ಹಾಗಿತ್ತೇ?-ಎಂದರೆ, ಉತ್ತರಿಸುವ ಧೈರ್ಯ ಅವಳಿಗೂ ಬಾರದಾಗಿದೆ. ಅದು ಯಾಂತ್ರಿಕ ಜೀವನ. ಮನಸ್ಸು ಬೇರೆ; ಮೈ ಬೇರೆ. ಕಾಮ ಬೇರೆ; ಪ್ರೇಮ ಬೇರೆ. ಹೀಗೆ ನಡುವೆ ಅಡ್ಡ ಗೋಡೆಗಳಿರುವ ವಿಚಿತ್ರ ಬಾಳು ಅದು.

ಆರು ತಿಂಗಳಿಗೋ ವರ್ಷಕ್ಕೋ ಒಮ್ಮೆ ಏನಾದರೊಂದು ಕಾರಣದಿಂದ,ತನ್ನ ಮನಸ್ಸನ್ನೇ ಅಕೆ ಪ್ರಶ್ನಿಸುತ್ತಿದ್ದುದುಂಟು. ವರ್ಗಾವರ್ಗಿಯಿಂದ ಅವಳ ಗೆಳತಿ ಅಂಜಲಿ ದೂರವಾದ ಮೇಲೆ, ಇಂಥ ಮಾನಸಿಕ ಪ್ರಶ್ನೆಗಳನ್ನು ಚರ್ಚಿಸುವುದಕ್ಕೂ ಅವಳು ಹಿಂಜರಿಯುತ್ತಾಳೆ. ಪ್ರತ್ಯುತ್ತರ ಶೂನ್ಯವಾದ ಪ್ರಶ್ನೆಗಳವು.

ಯುದ್ಧ ಮುಗಿದಾಗ, ಅವಳಿಗೂ ಈ ಜೀವನ ಸಾಕು ಸಾಕಾಗಿತ್ತು. ಉನ್ನತ ಪದವಿ ಬಂದರೂ ತನಗೆ ಬೇಡ. ಬರಿಯ ಹೆಣ್ಣಾಗಿ ತಾನು ಬಾಳಿದರೆ ಸಾಕು — ಎಂದು ಅವಳ ಮನಸ್ಸಿಗೂ ಅನಿಸತೊಡಗಿತು. ಕೊಬ್ಬಿದ ಅವಳ ಮೈಯ ಸುಖಕ್ಕೆ ಕೊರತೆ ಬಂದಿಲ್ಲವಾದರೂ, ಒಂದು ಹಸಿವೇನೋ ಮಾಸಿಹೋಗುವ ಬದಲು, ಬೃಹದಾಕಾರವನ್ನು ತಾಳುತ್ತ ಬಂದಿತು. 'ತಾನು ತಾಯಾಗದೆ ಹೋದೆನಲ್ಲ!' ಎಂಬ ಕೊರಿಕೆ ಅದು.

ತಮ್ಮ ಸಂಗಡದ ವಿಸರ್ಜನೆಯಾಗುತ್ತದೆ. ಯುದ್ಧ ಮುಗಿಯಿತು. ಇನ್ನು ಅದರ ಕಸವರಿಕೆಗಳೂ ಬೇಡ. ಈ ನಿರಾಕರ್ಷಕವಾದ ಲಂಗ, ಖಾಕೀ ತೊಡುಗೆ, ಓರೆ ಟೊಪ್ಪಿ, ಕತ್ತರಿಸಿದ ಜುಲ್ಪು–ಇವುಗಳನ್ನು ಬಿಡುವ ಕಾಲ ಬಂದನೆ–ಎಂದಾಗ 'ಮುಂದೇನು?' ಎಂಬ ಪ್ರಶ್ನೆಗಿಂತ ತಾನಿವನ್ನು ಬಿಟ್ಟು ಪಾರಾಗುತಿದ್ದೇನೆ ಎಂಬ ಹಿಗ್ಗು ಉಂಟಾಗಿತ್ತು. ಕೂಡಿಸಿಟ್ಟ ಹಣವಿತ್ತು. ಒಂದೆರಡು ವರ್ಷ ಕಾಲ ನಿಶ್ಚಿಂತೆಯಿಂದ ವಿರಮಿಸುತ್ತೇನೆ ಎಂದು ಯೋಚಿಸಿದಳು. ಸಿಕಂದರಾಬಾದನಲ್ಲಿರುವಾಗ ಅವಳ ಕೆಲಸ ಮುಕ್ತಾಯಗೊಂಡಿತು. ಅಲ್ಲಿಂದ ಅವಳು ಮುಂಬಯಿಗೆ ಹೋದಳು. ಅಲ್ಲೊಂದು ತಿಂಗಳ ಕಾಲವಿದ್ದಳು. ಅಲ್ಲಿ ಪ್ರಕೃತಿಯೊಂದೂ ಹೊಸತಾಗಿ ಕಾಣಿಸಿತು. ಹಳೆಯ ಗೆಳತಿಯರ ಭೇಟಿಯಾದಳು. ಅವರೂ ಹೊಸಬರಾಗಿಯೇ ಕಾಣಿಸಿದರು. ಆಗ–ತಾನೇ

ಎಷ್ಟು ಬದಲಾದೆ-ಎಂದು ಅವಳಿಗೆ ತೋರದಿರಲಿಲ್ಲ. ಏನೋ ಅನಿಸಿ, ಒಂದು ದಿನ ಅಣ್ಣ ರತ್ನಾಕರನಿಗೆ "ನಾನು W. A. C. ವೃತ್ತಿಯಲ್ಲಿದ್ದು ಈಗ ಬಿಡುಗಡೆಗೊಂಡಿದ್ದೇನೆ. ಬೇರಾವ ಹೊಸ ಉದ್ಯೋಗವನ್ನು ಇನ್ನೂ ಕೈಕೊಂಡಿಲ್ಲ. ಏನೆಂದು ಹೊಳೆಯುವುದಿಲ್ಲ. ಹೀಗೆ ಕಾಲಯಾಪನೆ ಮಾಡುತ್ತೇನೆ ಸ್ವಲ್ಪ ದಿನ. ನಿಮ್ಮನ್ನೆಲ್ಲ ನೋಡದೆ ಬಹು ದಿನಗಳಾದವು. ಎಲ್ಲರೂ ಕ್ಷೇಮವೇ?" ಎಂದು ಬರೆದಳು. ಅಣ್ಣನಿಂದ ಪ್ರತ್ಯುತ್ತರ ಬರಲಾರದು ಎಂದೆಣಿಸಿಕೊಂಡ ಅವಳಿಗೆ "ಯಾಕೆ ನೀನೊಮ್ಮೆ ಊರಿಗೆ ಬರಬಾರದು? ಒಡಹುಟ್ಟಿದ ಒಬ್ಬ ಅಣ್ಣನಿದ್ದಾನೆ ಎಂದು ಒಂದು ಗಳಿಗೆಯೂ ನಿನಗನಿಸುವುದಿಲ್ಲವೆ" ಎಂಬ ಪತ್ರ ಬಂದಿತು. ಅರ್ಥವೊಂಡಾದ ಕೂದಲುಗಳನ್ನು, ತನ್ನ ವೈರಿ ಸುಮಿತ್ರೆಗೆ ತೋರಿಸುವುದಕ್ಕೆ ನಾಚಿಕೆಯಾದರೂ, ಅಣ್ಣನನ್ನು ಕಾಣಬೇಕೆಂಬ ಉತ್ಕಟ ಅಪೇಕ್ಷೆ ಅವಳಲ್ಲಿ ಉಂಟಾದುದರಿಂದ ಮುದ್ದೂರಿಗೆ ಧಾವಿಸಿದಳು. ಆಕೆ ಬಂದ ದಿನ ಅಣ್ಣ ಊರಲ್ಲಿ ಇದ್ದಿರಲಿಲ್ಲ; ಅವಳನ್ನು ಕಂಡಾಗ ಅತ್ತಿಗೆಗೆ ಅವಳ ಗುರುತೂ ಸಿಗಲಿಲ್ಲ. ಗುರುತು ಸಿಕ್ಕಿದ ಮೇಲೆ, ತಾತ್ಸಾರ ತೋರಿಸಿದಂತೆ ನಟಿಸಿದಳು. ಅವಳಿದ್ದಾಗಲೇ-ಅವಳ ಸೊಸೆ ಅರುಂಧತಿ ತನ್ನ ಮಗುವನ್ನು ಕಟ್ಟಿಕೊಂಡು ಆ ಮನೆಗೆ ಬಂದಳು. ಅಣ್ಣ ರತ್ನಾಕರನೂ ಬಂದ. ಅರುಂಧತಿಯ ಮೂರು ವರ್ಷದ ಮುದ್ದು ಕೂಸನ್ನು ನೋಡಿದಾಗ ಮಂಜುಳೆಯ ಮನಸ್ಸಿಗೆ ಹುಚ್ಚೇ ಹಿಡಿಯಿತು. ಆ ಮಗುವನ್ನೆಷ್ಟು ತಬ್ಬಿದಳು, ಹೊತ್ತು ಅಲೆದಾಡಿದಳು ಎನ್ನುದಕ್ಕಿಲ್ಲ. ದಿನವೆಲ್ಲವೂ ಅದನ್ನು ಮಾತನಾಡಿಸಿದಳು. ಅದಕ್ಕೆ ಬಟ್ಟೆ ಮಾಡಿಸಿದಳು. ಚಿನ್ನದ ಸರವನ್ನು ತೊಡಿಸಿದಳು. ಅಷ್ಟು ಮಾಡಿದರೂ ಅವಳ ಅಂತರಂಗ 'ಅದು ನಿನ್ನದಲ್ಲ' ಎನ್ನುತಿತ್ತು. ಅರುಂಧತಿ, ತನ್ನ ಮಗುವನ್ನು ಕಟ್ಟಿಕೊಂಡು ಗಂಡನ ಮನೆಗೆ ಹೊರಟಾಗ, ಆ ಮಗುವಿನೊಡನಾದ ಎಂಟು ದಿನಗಳ ಸ್ನೇಹ, ಯುಗಮಾನದ ಸ್ನೇಹವಾಗಿ ಅವಳಿಗೆ ಕಾಣಿಸಿತು. ಅದು ಕಣ್ಣಿಂದ ಮರೆಯಾಗುತ್ತದೆಂದಾಗ ಕಪೋಲಗಳು ತೊಯ್ದುವು. ಅದನ್ನು ಅಣ್ಣ ನೋಡುತ್ತಲೇ ಇದ್ದ. "ಇವತ್ತು ಹೋಗುವುದು ಬೇಡ. ನಿನ್ನ ಅತ್ತಿಗೆ ಬೇಸರವಾಗುತ್ತಿದೆ. ನಾಳೆ ಹೋಗು" ಎಂದ. ಅವಳು "ಆಗಲಿ" ಎಂದಳು. "ನಾಳೆಯಾದರೂ ಹೊರಡಬೇಕಲ್ಲ. ಅವಳಿಲ್ಲಿ ಶಾಶ್ವತವೇ? ನಾನಿಲ್ಲಿ ಶಾಶ್ವತವೇ?" ಎಂದಳು ಮಂಜುಳೆ.

ಅದರಲ್ಲೇ ಒಂದು ದಿನ ವಿನತೆಯ ನೆನಪಾಯಿತು. ಅವಳ ಮನೆಗೆ

ಧಾವಿಸಿದಳು. ವಿನತೆಯ ತಾಯಿ ಹಣ್ಣು ಮುದುಕಿಯಾಗಿದ್ದಾಳೆ. ರಾಮಕೃಷ್ಣನು ಮದುವೆಯಾಗಿ ಅವಳನ್ನು ನೋಡಿಕೊಳ್ಳುತ್ತಿದ್ದಾನೆ. 'ವಿನತೆಯ ಸುದ್ದಿ ಉಂಟೇ?' ಎಂದು ಅವಳು ಕೇಳಿದಾಗ, ಎದೆ ತತ್ತರಿಸುವ ಇನ್ನೊಂದು ಕಥೆಯನ್ನು ರಾಮಕೃಷ್ಣನಿಂದ ಕೇಳಿದಳು. "ಅಕ್ಕ ಮುಂಬಯಿಯಲ್ಲಿದ್ದಾಳೆ. ಮೊದಲಾದಿನಲ್ಲಿ; ಒಂದು ಬಾರಿ ಮಾತ್ರ ಮಕ್ಕಳನ್ನು ಕಟ್ಟಿಕೊಂಡು ಊರಿಗೆ ಬಂದಿದ್ದಳು" ಎಂದ.

"ಚೆನ್ನಾಗಿದ್ದಾಳಲ್ಲ.ಮುಂಬಯಿಯ ವಿಳಾಸವನ್ನು ಕೊಟ್ಟರೆ, ಹೋಗಿ ನೋಡುತ್ತೇನೆ. ಅವಳನ್ನು ಕಾಣದೆ ಯುಗವಾಯಿತು."

"ಚೆನ್ನಾಗಿ ಅಂದರೇನು? ಹಂಬಲಿಸಿ ಹಂಬಲಿಸಿ ಮದುವೆಯಾದಳು. ಮರುಮದುವೆಯ ಗಂಡ. ಆದರೂ ಚಿಂತೆಯಿದ್ದಿರಲಿಲ್ಲ. ಮುಂದೆ ಏನೇನೋ ಆಯಿತು ಅವಳ ಸಂಸಾರ. ಈಗ ಅವಳಿಗೆ ನಾಲ್ಕು ಮಕ್ಕಳಿದ್ದಾರೆ. ಅವಳೇ ದುಡಿದು ಅವರನ್ನೂ ಸಾಕಬೇಕು, ಗಂಡನನ್ನೂ ಸಾಕಬೇಕು."

"ಗಂಡನನ್ನು ಸಾಕಬೇಕೆಂದರೆ? ವೃದ್ಧನೇ?"

"ಅಷ್ಟೊಂದು ಪ್ರಾಯವಲ್ಲ. ಆತ ದಿಲ್ಲಿಯಲ್ಲೋ ಎಲ್ಲೋ ಇದ್ದಾಗ ಮಿಲಿಟರಿ ಮೋಟರಿನ ಕೆಳಗೆ ಬಿದ್ದು ಕಾಲು ಕಳೆದುಕೊಂಡ. ಅನಂತರ ಮನೆ ಸೇರಿದ್ದು ಮನೆಯೇ." ಆ ಘಟನೆಯನ್ನು ಕೇಳಿದೊಡನೆ ಮಂಜುಳೆಗೆ ಸಿಡಿಲು ಬಡಿದಂತಾಯಿತು. "ಏನು ಹೆಸರು?" ಎಂದು ಕೇಳಿದಳು.

"ಶ್ರೀಧರ ಗಾಂವಕರ್ ಎಂದು ಹೆಸರು. ಹೋಗಲಿ, ಅದನ್ನೇನು ಕೇಳುತ್ತೀರಿ? ಕಟುಕನ ಕೈಗೆ ಸಂದ ದನದಂತಾಯಿತು ನನ್ನ ಅಕ್ಕನ ಪಾಡು. ಅವಳು ಬಯಸಿದ್ದೇನೋ? ಪಡೆದದ್ದೇನೊ" ಎಂದು ಕಣ್ಣೀರುಜ್ಜಿಕೊಂಡು, ಮುಖ ತಿರುಗಿಸಿದ-ರಾಮಕೃಷ್ಣ. ಅಕ್ಕನ ಬಾಳನ್ನು ಬಣ್ಣಿಸುವ ಪ್ರಸಂಗ ಅವಶ್ಯವೆಂದು ಅವನಿಗನಿಸಲಿಲ್ಲ. ಮಂಜುಳೆಗೆ ಅದನ್ನು ಕೆದಕಿ ಕೇಳುವ ಧೈರ್ಯವೂ ಬರಲಿಲ್ಲ.

## ಹನ್ನೊಂದನೆಯ ಅಧ್ಯಾಯ

ವಿನತೆಯ ಬಾಳಿನಲ್ಲಿ ಸುಖದ ಹನಿಯೊಂದೊಂದಕ್ಕೆ ಪ್ರತಿಯಾಗಿ ದುಃಖದ ಹೊಳೆಗಳು ಹತ್ತು ಹತ್ತು ಇದಿರಾಗುತ್ತಿದ್ದುವು. ಯಾವ ಸುಖವನ್ನು ಕಾಣುವೆನೆಂದು ಅವಳು ಮನೆಯನ್ನು ಬಿಟ್ಟು ಹೊರಟಳೋ, ಅದಕ್ಕಾಗಿ ಅವಳು ತೆತ್ತ ದಂಡ ಅಷ್ಟಿಷ್ಟಲ್ಲ. ತೆರುವುದಕ್ಕೇನೋ ಅವಳು ಸಿದ್ಧಳೇ; ತೆರುತ್ತಲೇ ಬಂದಿದ್ದಾಳೆ. ಹಿಂದಿನ ದುಃಖಗಳನ್ನು ಮರೆತು ಎದೆಯನ್ನು ಕಲ್ಲು ಮಾಡಿಕೊಂಡು ಮುಂದಿನ ಬಾಳನ್ನು ಎದುರಿಸುತಿದ್ದಾಳೆ-ಅಪೂರ್ವ ವೀರ ನಾರಿಯಂತೆ. ಅಂಥ ಹೆಮ್ಮೆಯೂ ಇಲ್ಲ. ಬಹು ಮುಂದಿನ ನಾಳೆಗಳನ್ನು ಕುರಿತು ಯೋಚಿಸದೆಯೆ ಇಂದನ್ನು ಎದುರಿಸುವುದರಲ್ಲಿಯೇ ಅವಳ ಶಕ್ತಿಗಳೆಲ್ಲ ವ್ಯಯವಾಗುತ್ತಿವೆ. ಅವಳಿಂದ ತಾಯಿಗೆ ಪತ್ರಗಳು ಬರುತ್ತಿವೆ ಯಾದರೂ ತನ್ನ ದುಃಖಗಳೊಂದನ್ನೂ ಅದರಲ್ಲಿ ಕಾಣಗೊಡಿಸುವುದಿಲ್ಲ. ಅದರೊಮ್ಮೆಗೆ-ಅವಳ ಮನೆಗೇನೆ ಬಂದ ತಮ್ಮ, ರಾಮಕೃಷ್ಣ, ಅವನ್ನೆಲ್ಲ ಕಣ್ಣಾರೆ ಕಂಡಿದ್ದಾನೆ. "ಅಕ್ಕಾ, ಊರಿಗೆ ಬಾ; ಇಲ್ಲೇಕೆ ಕುಳಿತು ಒದ್ದಾಡುತ್ತೀಯಾ" ಎಂದು ಅವಳನ್ನು ಬೇಡಿದ್ದಾನೆ. ಅದಕ್ಕೆ ಅವಳ ಉತ್ತರವಿಷ್ಟೆ: "ನಾನು ಸೋಲುವುದಕ್ಕೆ ಬಂದವಳಲ್ಲ. ಈ ಊರಲ್ಲಿಯೇ ನನ್ನ ಸಮಾಧಿಯಾದರೂ ಚಿಂತೆಯಿಲ್ಲ. ಸೋತು ಊರಿಗೆ ಮರಳುವುದಿಲ್ಲ. ನೀನು ಊರಿಗೆ ಹೋಗು" ಎಂದಿದ್ದಾಳೆ. ಅನಂತರ ರಾಮಕೃಷ್ಣ ಅಕ್ಕನ ವಿಷಯದಲ್ಲಿ ಏನು ತಿಳಿದುಕೊಂಡಿದ್ದರೂ ಅದು ಅವಳಪತ್ರಗಳಿಂದಲ್ಲ; ಮಾತಿನಿಂದಲ್ಲ. ಬಂಧು ಮಂಜುನಾಥನ ಕಾಗದಗಳಿಂದ. ಅವನೂ, ಅವನ ಹೆಂಡತಿಯೂ ತಿಳಿಸುತಿದ್ದ ಸಂಗತಿಗಳಿಂದ. ಅಂತೂ ವಿನತೆಯ ಜೀವನ ಪ್ರವಾಹವು ಹರಿದ ಬಗೆಯೇ ವಿಚಿತ್ರ. ಸಾಗರವನ್ನು ಸೇರುವ ಉತ್ಕಟ ಇಚ್ಛೆಯಿಂದ ಹೊರಟ ಬುಗ್ಗೆಯ ನೀರಿನ ಕಿರು ಸೆಲೆಯಂತೆ ಅದು ಹೊರಟಿತು. ದಾರಿಯ ಪಯಣದಲ್ಲಿ, ಅದರ ಉತ್ಸಾಹದ ನೀರನ್ನೆಲ್ಲ ಬತ್ತಿಸಿ ಹಿಂಗಿಸಬೇಕೆಂಬ ಮರುಭೂಮಿಯೇ ಅದಕ್ಕೆ ಇದಿರಾಯಿತು. ಆ ನದಿ ಅಂತ್ಯದಲ್ಲಿ ಕಡಲು ಸೇರುತ್ತದೋ, ಮಹಾನದಿ ಸರಸ್ವತಿಯಂತೆ ಅರ್ಧದಲ್ಲೇ ಕಣ್ಮರೆಯಾಗುತ್ತದೋ ಯಾರು ಬಲ್ಲರು? ಇನ್ನೂ ಯೌವನ ಅವಳದು; ಮುಂದಿನದನ್ನು ನಿರೀಕ್ಷಿಸ ಬಲ್ಲವರಾರು?

*     *     *     *     *

ಸುಮಾರು ಹದಿನೈದು ವರ್ಷಗಳ ಹಿಂದೆ, ತಮ್ಮನನ್ನು ಮುದ್ದಿಸಿ, ಬಸ್ಸನ್ನೇರಿ, ಒಂಟಿಯಾಗಿ ಉತ್ತರ ದಿಕ್ಕನ್ನು ನಂಬಿ ಮುದ್ದೂರಿನಿಂದ ಪಯಣ ಹೊರಟಳು. ಆ ದಿನವೆಲ್ಲವೂ ಬಸ್ಸಿನ ಪಯಣ, ಧೂಳಿನ ಸ್ನಾನ. ಮಾತಿಗೆ ಮನಸ್ಸಿರಲಿಲ್ಲ. ಅವಳ ಮನದಲ್ಲಿ ಚಿಂತೆ ಕೊರೆಯುತಿತ್ತು. ಕಟ್ಟಿಕೊಂಡು ಹೊರಟ ಗಂಟಿಗಿಂತ, ಭವಿಷ್ಯದ ಕಗ್ಗಂಟು ಅವಳಿಗೆ ಭಾರವಾಗಿ ಕಾಣಿಸುತಿತ್ತು. ಅವಳ ಚೆಲುವಿನ ರೂಪ ಇತರರನ್ನು ಆಕರ್ಷಿಸಬಾರದೆಂದೋ ಏನೋ, ದಾರಿಯ ಧೂಳೆಲ್ಲವು ಅವಳ ಮುಖವನ್ನು ಮುತ್ತಿತ್ತು—ಸಮಾಜದ ಧೂಳು ಅವಳ ಹೆಬ್ಬಯಕೆಯನ್ನು ಮುತ್ತಿ ಕವಿದಂತೆ. ಕುಂದಾಪುರವನ್ನು ಬಸ್ಸು ಸೇರುವಾಗಲೇ ಸಂಜೆಯಾಗಿತ್ತು. ಮುಂದೆ ಸಾಗುವ ಒಬ್ಬಿಬ್ಬರು ಗುರುತಿಲ್ಲದ ಪಯಣಿಗರೊಡನೆ ಗಂಗೊಳ್ಳಿ ಹೊಳೆಯನ್ನು ದಾಟಿದಳು. ಕತ್ತಲು ಕವಿದಾಗ ಗಂಗೊಳ್ಳಿ ಊರನ್ನು ಸೇರಿದಳು. ದಿನವೆಲ್ಲ ಉಪವಾಸ. ಹೊಳೆಯ ಉಪ್ಪು ನೀರಿನಲ್ಲೇ ಮುಖ ತೊಳೆದುಕೊಂಡು, ತಲೆಕೂದಲನ್ನು ಸವರಿಕೊಂಡು, ಭಟ್ಕಳಕ್ಕೆ ಹೋಗುವ ಒಬ್ಬಿಬ್ಬರು ಹೆಂಗುಸರೊಡನೆ, ಕಡವಿನ ಮನೆಯ ಧೂಳು ತುಂಬಿದ ನೆಲದ ಮೇಲೆ ಮಲಗಿಕೊಂಡು ರಾತ್ರಿಯನ್ನು ಕಳೆದಳು. ನಸುಕು ಹರಿಯುವ ಮುಂಚೆ, ಇನ್ನೊಂದು ಬಸ್ಸನ್ನು ಹತ್ತಿ ಭಟ್ಕಳದ ದೊಡ್ಡಮ್ಮನ ಮನೆಗೆಂದು ಹೊರಟಳು. ಬೆಳಗಿನ ಹತ್ತು ಘಂಟೆಯಾಗಿತ್ತು- ಆಕೆ ಆ ಊರನ್ನು ಸೇರುವಾಗ. ಬಸ್ಸಿನಿಂದಿಳಿದು, ಆಚೀಚಿನವರನ್ನು ವಿಚಾರಿಸಿಕೊಂಡು ಬೀದಿಯ ಸಂದೊಂದರಲ್ಲಿರುವ ದೊಡ್ಡಮ್ಮನ ಮುರುಕು ಮನೆಯನ್ನು ಸೇರಿದಳು. ಪೂರ್ಣ ಕಣ್ಣು ಕಾಣದಂಥ ಮುದುಕಿಯೊಬ್ಬಳು ಆ ಮನೆಯಲ್ಲಿದ್ದಳು. ನೆರವಿಗೆ, ಇನ್ನೊಬ್ಬಳು ಅರೆ ಮುದುಕಿ ಅವಳೊಡನೆ ವಾಸವಾಗಿದ್ದಳು. ಗಂಡು ಹುಳುವಿಲ್ಲದ ಮನೆಯದು. ವಿನತೆಗೆ ತನ್ನ ತಾಯ ಮುಖ ಚಹರೆ, ದೊಡ್ಡಮ್ಮನಲ್ಲಿ ಚೆನ್ನಾಗಿ ಕಾಣಿಸಿತು. "ದೊಡ್ಡಮ್ಮ ನಾನು ಬಂದಿದ್ದೇನೆ–ವಿನತೆ; ನಿನ್ನ ತಂಗಿಯ ಮಗಳು. ಮಂಜುನಾಥ ಎಲ್ಲವನ್ನು ಹೇಳಿರಬೇಕು ನಿನಗೆ" ಎಂದು ಮಾತಿನ ಪೀಠಿಕೆಯನ್ನು ಹಾಕಿದಾಗ "ನೀನೊಬ್ಬಳೇ ಬಂದೆಯಾ ಮಗು. ಅಮ್ಮನನ್ನೂ ತಮ್ಮನನ್ನೂ ಕರೆದುಕೊಂಡು ಬರಬಹುದಿತ್ತಲ್ಲ. ನಾನವರನ್ನೆಲ್ಲ ಕಾಣಬೇಡವೇ . . . ಕಾಣುವ ಕಣ್ಣನ್ನು ಅವನೇ ಕುರುಡುಮಾಡಿದ್ದಾನೆ. ಮುಸುಕುಮುಸುಕಾಗಿ, ಹೌದು

ಅಲ್ಲ ಎಂದು, ಮುಖಭಾವವಷ್ಟೇ ತಿಳಿಯುತ್ತದೆ. ಆದರೂ ಬಂದೆಯಲ್ಲ, ಮಗಳೇ. ನಿನ್ನೊಬ್ಬಳಿಗಾದರೂ ದೊಡ್ಡಮ್ಮನ ನೆನಪಾಯಿತಲ್ಲ" ಎಂದು ವಿನತೆಗೆ ಕಂಬನಿಯ ಸ್ವಾಗತವಮಾಡಿದಳು. ಆ ದಿನವೂ ಮುಂದಣ ದಿನಗಳಲ್ಲೂ, ಆ ಮುದುಕಿಯು ಅವಳೊಡನೆ ಆಡಿದ ಮಾತುಗಳಿಗೆ ಕೊನೆ ಮೊದಲಿರಲಿಲ್ಲ; ತೋರಿದ ಪ್ರೇಮಕ್ಕೆ ಮಿತಿಯಿರಲಿಲ್ಲ.

ಅವಳ ನೆರವಿಗೆ ಬಂದ ಮುದುಕಿ ಕಾವೇರಿ ಸಹ ವಿನತೆಯ ಸರಳ ಸ್ವಭಾವವನ್ನೂ, ಚೆಲುವನ್ನೂ, ನಯವಾದ ಮಾತುಗಾರಿಕೆಯನ್ನೂ ಮೆಚ್ಚಿದಳು. "ಅಜ್ಜಮ್ಮ, ನಿಮ್ಮ ವಿನುವಿಗೊಂದು ಒಳ್ಳೆಯ ಗಂಡ ಸಿಕ್ಕಿದ್ದರೆ ಎಷ್ಟು ಚೆನ್ನಾಗುತಿತ್ತು. ಗರತಿಯಾಗುವ ಲಕ್ಷಣಗಳೆಲ್ಲ ಅವಳಲ್ಲಿದೆ. ಮಂಜುನಾಥನಿಗೆ ಹೇಳಿದರೆ ಒಂದು ನಂಟುತನ ನೋಡಿಯಾನೋ ಏನೋ" ಎಂದು ಅವಳೂ ತನ್ನ ಆಸೆಯನ್ನು ಹೇಳಿದಳು. ವಿನತೆಗೆ ದೊಡ್ಡಮ್ಮನನ್ನು ನೋಡುವ ಆತುರವಿಲ್ಲವೆಂದಲ್ಲ; ಎಂದಾದರೊಂದು ದಿನ ಅವಳನ್ನು ನೋಡಿಕೊಂಡು ಬರುತಿದ್ದಳು. ಆದರೆ ಅವಳನ್ನಲ್ಲಿಗೆ ವಿಧಿಯು ಸೆಳೆದು ತಂದ ಕಾರಣ ಈ ಗರತಿಯಾಗುವ ಆಸೆ! ಅದನ್ನು ಆ ಕಾವೇರಿ ಹೇಗೆ ತಿಳಿದಳೋ? ಎರಡು ತಿಂಗಳ ಕಾಲ ದೊಡ್ಡಮ್ಮನ ಸುಧಾಮ ಆತಿಥ್ಯದಲ್ಲಿ ವಿನತೆ ದಿನ ಕಳೆದಳು. ತಾನು ಬಂದ ಆಸೆಯನ್ನು ಆಕೆಯೊಡನೆಯೂ ತೋಡಿಕೊಂಡಳು. ದೊಡ್ಡಮ್ಮನ ಹೆಸರಿನಲ್ಲಿ—ತನ್ನ ಅಪೇಕ್ಷೆಯನ್ನೆಲ್ಲ ತಿಳಿಸಿ, ಮಂಜುನಾಥನಿಗೆ ಕಾಗದವನ್ನು ಬರೆದಳು. ಆತನಿಗೆ ವಿನತೆಯು ತಮ್ಮ ಊರಾದ ಭಟ್ಕಳಕ್ಕೆ ಬಂದುದಕ್ಕೆ ಸಂತೋಷವೂ ಆಯಿತು. ಅವಳಿಗಾಗಿ ಸಂಬಂಧ ಹುಡುಕುವ ಪ್ರಯತ್ನ ಮಾಡುತ್ತೇನೆಂಬುದಾಗಿ ಬರೆದನು.

ವಿನತೆಯಿಂದ ಅವನಿಗೆ ಎರಡನೆಯ ಪತ್ರವೂ ಹೋಯಿತು. ಅದಕ್ಕೆ ಅವನು ಅವಳನ್ನು ಮುಂಬಯಿಗೆ ಬರಲು ಆಮಂತ್ರಿಸಿದ. ಹೀಗೆಂದು ಬರೆದು "ನಮ್ಮದು ಚಿಕ್ಕದಾದ ಮನೆ, ಬರಿಯ ಹಕ್ಕಿಯ ಗೂಡಿನಂತಿದೆ. ಇಬ್ಬರಿಗೇನೇ ಸಾಲದು. ಆದರೂ ನೀನು ಬಾ—ಬಂದ ಮೇಲೆ ನಿನ್ನ ಕೆಲಸ ಸುಲಭವಾದೀತು. ಯಾರಾದರೂ ಮದುವೆಮಾಡಿಕೊಳ್ಳುವವರು, ಹುಡುಗಿ ನೋಡಬೇಕೆಂದು ಹೇಳದಿರುತ್ತಾರೆಯೆ?" ಎಂದು ಪತ್ರದಲ್ಲಿ ತಿಳಿಸಿದ್ದ. ಮಳೆಗಾಲವು ನಾಡಿನ ಮೇಲೆ ಮುಗ್ಗರಿಸಿ ಬೀಳುತ್ತಿರುವಾಗ, ಮುಂಬಯಿಗೆ ಪಯಣ ಕಠಿಣ. ಅದು ಕಳೆಯಲು ಇನ್ನೆರಡು ತಿಂಗಳು ಕಾಯಬೇಕು. ಕಾಯು

ವುದಕ್ಕೆ ವಿನತೆಯ ಆತುರ ಒಪ್ಪಲೊಲ್ಲದು. ದೊಡ್ಡಮ್ಮನ ಪ್ರಯತ್ನದಿಂದ, ಭಟ್ಕಳದಿಂದ ಮುಂಬಯಿಗೆ ಹೋಗುವ ನೆರೆಕರೆಯ ಕುಟುಂಬವೊಂದರೊಡನೆ ಅವಳೂ ಹೊರಟಳು. ಬಸ್ಸನ್ನೇರಿದಳು. ಕುಮಟೆಯ ಮಾರ್ಗವಾಗಿ ಹುಬ್ಬಳಿಯನ್ನು ಸೇರಿದಳು. ಅವಳನ್ನು ಕರೆದೊಯ್ದವರ ಉಪಚಾರವೂ ಚೆನ್ನಾಗಿತ್ತು. ಮಳೆಗಾಲವಾದುದರಿಂದ ಬಸ್ಸಿನ ಪಯಣ ಶ್ರಮದಾಯಕವಾಗಿರಲಿಲ್ಲ. ಆದರೆ ಕುಮಟೆಯಲ್ಲಿ ಅವರ ಬಸ್ಸನ್ನು ಏರಿದ, ಹಿಂದೆಯೆ ಕುಳಿತ, ಇಬ್ಬರು ತರುಣರ ಮಾತು ಮಾತ್ರ ವಿನತೆಗೆ ಕೇಳುವುದು ಕಠಿಣವಾಗಿತ್ತು. ಅಸ್ಪಷ್ಟವಾಗಿ ಕೇಳಿಸಿದ್ದರೂ, ಅವು ತನ್ನ ಕುರಿತಾದ ಮಾತುಗಳೇ ಎಂಬುದು ಅವಳಿಗೆ ಹೊಳೆಯದಿರಲಿಲ್ಲ. ‘ಭಟ್ಕಳದವಳಿರಬೇಕು. ನೋಡುವಾಗಲೇ ಸಂಪಾದನೆಗೆ ಮುಂಬಯಿಗೆ ಹೊರಟ ಆಸಾಮಿಯಾಗಿ ಕಾಣಿಸುತ್ತದೆ” ಎಂದಂದರು. ಆ ಒಂದೇ ಮಾತು ಶೂಲಪ್ರಾಯವಾಗಿ ಅವಳ ಹೃದಯವನ್ನು ತಿವಿಯತೊಡಗಿತು. ತಾನು ಊರುಮನೆಗಳನ್ನು ಬಿಟ್ಟುಬಂದರೂ, ಕುಲದ ದುರ್ದೈವ ತನ್ನ ಬೆನ್ನನ್ನು ಬಿಡಲಿಲ್ಲವಲ್ಲ--ಎಂಬ ನೋವು ಚುಚ್ಚುತಿತ್ತು. ಅಂತು ಮುಂಬಯಿಯನ್ನು ಸೇರಿದಳು. ಮಂಜುನಾಥ ರಾಜೀವಿಯರ ಬಿಡಾರದ ಗೂಡನ್ನು ಹೊಕ್ಕಮೇಲೆ, ಅವಳ ಮನಸ್ಸಿಗೆ ಸಮಾಧಾನ ಬಂದಿತು. ತಾನೊಮ್ಮೆಗೆ ಪಾರಾದೆ ಎನಿಸತೊಡಗಿತು.

ರಾಜೀವಿ, ಮಂಜುನಾಥರ ಬಿಡಾರ ಪರೇಲಿನ ಸಂದಿನಲ್ಲಿ ಯಾವುದೋ ಜನ ನಿಬಿಡವಾದ ಒಂದು ಚಾಲಿನ ನಾಲ್ಕನೆಯ ಮಹಡಿಯಲ್ಲೊಂದು ಕೊಟಡಿ. ಸುದೈವಕ್ಕೆ ಅದು ನಾಲ್ಕನೆಯ ಮಹಡಿ. ಇನ್ನು ಮೂರು ಮಹಡಿಯ ಮನೆಗಳ ಜನಗಳ ಕಣ್ಣಿಂದ ಅಚೀಚೆ ಸರಿಯುವಾಗ ಕುಕ್ಕಿಸಿಕೊಳ್ಳಬೇಕಿರಲಿಲ್ಲ. ಮಂಜುನಾಥನಿಗೆ ನೂರು ರೂಪಾಯಿಗಳಷ್ಟು ಸಂಬಳ ಬರುತ್ತಿತ್ತು. ಅವನ ಹೆಂಡತಿ ಸಹ ಯಾವುದೋ ಒಂದು ಸಂಸ್ಥೆಯಲ್ಲಿ ಎಪ್ಪತ್ತು ರೂಪಾಯಿ ಬರುವ ಚಾಕರಿಯನ್ನು ಹಿಡಿದಿದ್ದಾಳೆ. ಇಬ್ಬರ ದುಡಿಮೆಯಿಂದಾಗಿ ಸಂಸಾರ ರಥ ಸಾಗಿಸಲು ತೊಡಕಿರಲಿಲ್ಲ. ಇಬ್ಬರೂ ಕೂಡಿ ಸಂತೋಷವಾಗಿದ್ದಾರೆ. ಚಿಕ್ಕ ಗೂಡಿನಲ್ಲಿ ಬದುಕಿದ್ದರೂ, ಎಣೆವಕ್ಕಿಗಳಂತೆ ಬಾಳುತಿದ್ದಾರೆ. ವಿನತೆ ಬಂದುದು ಅವರಿಗೂ ಸಂತೋಷವೇ. ಆದರೆ ವಾಸವಾಗಿದ್ದ ಜಾಗ ಮಾತ್ರ ತುಂಬ ಇಕ್ಕಟ್ಟು-ಒಂದೇ ಕೊಟಡಿ. ಅದರಲ್ಲೇ ಬಚ್ಚಲು; ಅಡುಗೆಯ ಮನೆ. ಗಂಡ ಹೆಂಡಿರ ಸುಖ ಜೀವನಕ್ಕೆ ತಾನೊಂದು

ಆತಂಕ ಎನಿಸುತಿತ್ತು—ವಿನತೆಗೆ. ಆದರೆ ಅವಳಿಂದ ಅವರಿಗೂ ತುಂಬ ಸಹಾಯವಾಯಿತು. ಮನೆಯನ್ನು ನೋಡಿಕೊಂಡಿರುವುದಕ್ಕೆ ವಿನತೆ ಒದಗಿದಳು; ಕೆಲಸಕ್ಕೆ ಸಹಾಯವಾದಳು; ಅವರೊಡನೆ ಅನ್ಯೋನ್ಯವಾಗಿ ಬೆರೆತುಕೊಂಡಳು.

ಮಂಜುನಾಥ ಅವಳಿಗಾಗಿ ಗಂಡನನ್ನು ಹುಡುಕಲು ಪ್ರಯತ್ನಿಸತೊಡಗಿದ. ತಮ್ಮ ಜನಗಳಲ್ಲಿ ಸಂಬಂಧ ದೊರೆಯುವುದು ಕಷ್ಟವೆಂದೇ ಅವನಿಗೆ ಕಾಣಿಸುತಿತ್ತು. ಗುರುತಿನ ಕೆಲಕೆಲವು ತರುಣರಿದ್ದರು. ಬೇಜವಾಬ್ದಾರಿಯ ಅವರ ಸ್ವಭಾವ ಅವನಿಗೆ ಹಿಡಿಸಲೊಲ್ಲದು. ಆತ ರಾಜಸ್ಥಾನ ವಿಮಾ ಕಂಪೆನಿಯ ನೌಕರನಾಗಿದ್ದ. ಗಾಂವಕರರೆಂಬವರು ಅದರಲ್ಲಿಯೇ ಕೆಲಸದಲ್ಲಿದ್ದ ಇನ್ನೊಬ್ಬ ನೌಕರರು. ಇಬ್ಬರಿಗೂ ಗುರುತು. ಅವರು ಯಲ್ಲಾಪುರದವರು; ಈತ ಅದೇ ಜಿಲ್ಲೆಯ ಭಟ್ಕಳದವ. ಹೀಗಾಗಿ ಅವರು ತಮ್ಮ ಜಿಲ್ಲೆಯವರೆಂಬ ಅಭಿಮಾನ. ಗಾಂವಕರರ ಮೊದಲ ಹೆಂಡತಿ ತೀರಿಹೋಗಿ ಒಂದು ವರ್ಷವಾಗಿತ್ತು. ಅವರಿಗೆ ಇಬ್ಬರು ಎಳೆಯ ಮಕ್ಕಳಿದ್ದರು. ಮುಂಬಯಿಯಲ್ಲಿ ಅವರ ದುಃಖಕ್ಕೆ ಬಂದೊದಗುವಂಥ ಬೇರೆ ಬಂಧು ಬಳಗವಿರಲಿಲ್ಲ. ಎಷ್ಟೋ ಬಾರಿ, ಆದಿತ್ಯವಾರ, ಈತನ ಮನೆಗೆ ಮಕ್ಕಳೊಡನೆ ಬಂದು, ಇದ್ದು ಹೋಗುತ್ತಿದ್ದರು. ವಿನತೆಯು ಇಲ್ಲಿಗೆ ಬಂದು ಆರು ತಿಂಗಳಾದುವು. ಎಂಟು ತಿಂಗಳಾದುವು. ಮಂಜುನಾಥನ ವರಾನ್ವೇಷಣೆಯು ಕಾರ್ಯ ಇನ್ನೂ ಸಫಲವಾಗಲಿಲ್ಲ. ಗಾಂವಕರರು ವಿನತೆಯನ್ನು ಕಂಡಿದ್ದಾರೆ. ವಿನತೆಯ ವಯಸ್ಸಿಗೂ ಅವರ ವಯಸ್ಸಿಗೂ ಸಾಕಷ್ಟು ಅಂತರವಿದೆ. ಆದರೂ ಅವರನ್ನು ಕೇಳೋಣವೆ? ಎಂದು ಹಂಬಲಿಸುವುದಕ್ಕೆ ಒಂದೇ ಆತಂಕ–ವಯಸ್ಸಿನಿಂದ ಅವರು ಸರಿಯಾದ ಗಂಡನಲ್ಲ; ಮರು ಮದುವೆ ಬೇರೆ; ಇಬ್ಬರು ಮಕ್ಕಳೂ ಇದ್ದಾರೆ–ಎಂಬ ಚಿಂತೆಯ ಜತೆಗೆ–ಅವರು ಕುಲೀನರು, ತಾನು ಅವರನ್ನು ಕೇಳುವುದಾದರೂ ಹೇಗೆ? ಸ್ನೇಹದಿಂದ ಅವರು ತಮ್ಮ ಮನೆಗೆ ಬಂದು ಹೋಗುತ್ತಿದ್ದಾರೆ-ಎಂದ ಮಾತ್ರಕ್ಕೆ, ಇಂಥ ಪ್ರಶ್ನೆಯನ್ನು ಕೇಳಿ ಅವಮಾನಮಾಡುತ್ತಿದ್ದಾನೆ ಎಂದು ತಿಳಿದರೆ ಮತ್ತೂ ಕಷ್ಟವಲ್ಲವೇ? ಈ ಭಯದಿಂದಲೇ ಆತ ಸುಮ್ಮನೆ ಕುಳಿತಿರಬೇಕಾಯಿತು.

ವಿನತೆಗೆ ತಾನು ಬಂದು ಒಂದು ವರ್ಷವಾಗುತ್ತಿದ್ದರೂ, ಬರಿಯ ಹೊರೆಯಾಗಿ ಮಂಜುನಾಥನ ಮೇಲೆ ಕುಳಿತಿದ್ದೇನೆಯೆ ಹೊರತು, ತಾನು

ಬಂದ ಕೆಲಸವಾಗಲಿಲ್ಲ ಎಂಬ ನಿರಾಶೆ ಮೂಡತೊಡಗಿತ್ತು. ಮಂಜುನಾಥನ ಮನೆಗೆ ಬರುತ್ತಿದ್ದ ಗಾಂವಕರರು ವಿನತೆಯನ್ನು ನಕ್ಕು ಮಾತನಾಡಿಸುತ್ತಿದ್ದಾಗ, ವಿನತೆ ತಲೆ ತಗ್ಗಿಸಿಕೊಂಡೇ ಅವರನ್ನು ಉತ್ತರಿಸುತಿದ್ದುದನ್ನು ಆತ ಕಾಣುತ್ತಲೇ ಇದ್ದ. ಕೊನೆಗೆ ಒಂದು ದಿನ ವಿನತೆಯೊಡನೆ "ಇದೊಂದು ಪ್ರಯತ್ನ ಮಾಡಬಹುದೇ? ಗಾಂವಕರರ ವಯಸ್ಸು ಹೆಚ್ಚು; ಮಕ್ಕಳಿದ್ದಾರೆ –ಅವರೂ ಒಪ್ಪುವುದು ಕಷ್ಟ– ಒಪ್ಪಿದರಾಗಬಹುದೇ?" ಎಂದು ಕೇಳಿದಾಗ ವಿನತೆಗೆ ಏನು ಉತ್ತರ ಹೇಳುವುದೆಂದೇ ತೋಚಲಿಲ್ಲ.

ಗಾಂವಕರರು ಅಯೋಗ್ಯರೆಂದು ಅವಳಿಗೆ ಕಾಣಿಸಲಿಲ್ಲ. ತೋರಿಕೆಗಂತು ಸೌಜನ್ಯಶೀಲರಾಗಿಯೇ ಕಾಣಿಸುತಿದ್ದರು. ಆದರೂ ಅವರ ವಯಸ್ಸು ಕಣ್ಣಿದಿರಿಗೆ ಬರುತಿತ್ತು. ಎರಡನೆಯ ಮದುವೆಯಲ್ಲವೆ–ಎಂಬ ಭೀತಿಯಾಗುತಿತ್ತು. ತುಂಬ ಯೋಚಿಸಿ, ಯೋಚಿಸಿ ಅವಳು ಒಂದು ದಿನ ಮಂಜುನಾಥನೊಡನೆ "ನೀನು ಆಗಬಹುದೆಂದರೆ ಆಗುತ್ತೇನೆ" ಎಂದಳು. ವಯಸ್ಸು, ಇನ್ನೊಂದು, ವಿಧಿಯ ಪಾಲಿಗೆ ಬಿಟ್ಟುದು– ಎಂಬ ಒಂದು ಬಗೆಯ ನಿರಾಶೆಯಿಂದ ಪ್ರಾಪ್ತವಾದ ವೈರಾಗ್ಯ ಬುದ್ಧಿ ಅವಳಿಗೂ ಉಂಟಾಗಿತ್ತು. ಮಂಜುನಾಥ ಬೇರೆ ಎಲ್ಲೆಲ್ಲೋ ಸಂಬಂಧ ಹುಡುಕಿದ. ಎಲ್ಲಿಯೂ ಅನುಕೂಲ ಸಂಬಂಧ ಕಾಣಿಸಲೊಲ್ಲದು–ಎಂದು ಖಂಡಿತವಾದ ಮೇಲೆ, ಮೂರನೆಯ ಒಬ್ಬ ಮಿತ್ರರಿಂದ ಗಾಂವಕರರನ್ನು ಮಾತನಾಡಿಸಿ ನೋಡಿದ. ಅನಂತರ ಅವರೇನೇ ಅವನೊಡನೆ ಸಂಧಾನ ಜರುಗಿಸಿದರು. ಒಂದು ದಿನ ವಿನತೆ ಅವರ ಹೆಂಡತಿಯಾದಳು.

ಗಾಂವಕರರು ಹೆಚ್ಚು ಕಡಿಮೆ, ಮುಂಬಯಿಗೆ ಬಂದಂದಿನಿಂದಲೂ, ನಗರಕ್ಕೆ ತುಸು ದೂರವಾಗಿದ್ದ ಮಾಲಾಡಿನಲ್ಲಿ ಒಂದು ಬಾಡಿಗೆಯ ಮನೆಯಲ್ಲಿ ವಾಸಿಸುತ್ತ ಬಂದಿದ್ದರು. ಬಾಡಿಗೆ ಕಡಿಮೆ; ಶಾಂತವಾದ ಆವರಣ; ಸುತ್ತುಮುತ್ತು ಅಷ್ಟೊಂದು ಚೊಕ್ಕವಾಗಿಲ್ಲವಾದರೂ ನಾಲ್ಕು ಕೊಟಡಿಗಳಿರುವ ಮನೆ. ವಿನತೆ ಮದುವೆಯಾದ ಬಳಿಕ ಅಲ್ಲಿಗೆ ಹೋಗಿ ತನ್ನ ಯಜಮಾನರ ಪೂರ್ವ ಪತ್ನಿಯ ಮಕ್ಕಳಾದ ಮೋಹನ, ಮಾಲತಿಯರಿಗೆ ಮಲತಾಯಿಯಾದಳು. ಆದರೆ ಅವಳೆಂದೂ ಮಲತಾಯಿಯೆಂದು ತೋರಿಸಿಕೊಳ್ಳಲಿಲ್ಲ. ಹತ್ತು ವರ್ಷದ ಮೋಹನನಾಗಲೀ, ಎಂಟು ವರ್ಷದ ಮಾಲತಿಯಾಗಲೀ ಅವಳನ್ನು ಮಲತಾಯಿಯಾಗಿಯೂ ತಿಳಿಯಲಿಲ್ಲ. ತಾನೇ

ತಾಯಿಯಾಗುವ ಮುಂಚೆ, ಇಬ್ಬರು ಮಕ್ಕಳಿಂದ 'ಅಯೀ' 'ಆಯೀ' ಎಂದು ಕರೆಯಿಸಿಕೊಳ್ಳುವ ಭಾಗ್ಯ ಅವಳದ್ದಾಯಿತು. ಗಾಂವಕರರು ತಮ್ಮ ಉದ್ಯೋಗದ ದೆಸೆಯಿಂದ ದಿನವೆಲ್ಲ ಮುಂಬಯಿಗೆ ಹೋಗಿ ಇರುತಿದ್ದರು. ರಾತ್ರಿ ಎಂಟು ಘಂಟೆಯಿಂದ ಬೆಳಗಿನ ಎಂಟು ಘಂಟೆಯ ತನಕವಷ್ಟೇ ಅವರು ಮನೆಯಲ್ಲಿರುವುದು. ಆ ವೇಳೆಯನ್ನು ಪತಿಯ ಮನಸ್ಸನ್ನು ಒಲಿಸುವುದರಲ್ಲಿ ಕಳೆದರೆ, ದಿನದ ಉಳಿದ ವೇಳೆಯಲ್ಲಿ ಬೇಕಷ್ಟು ಮನೆಗೆಲಸವಿರುತಿತ್ತು. ಮಕ್ಕಳ ಉಪಚಾರವಿರುತ್ತಿತ್ತು. ಅಂತು ಅವಳ ಮನಸ್ಸು ತುಂಬಿಕೊಂಡಿತು. ತನ್ನ ತಪಸ್ಸು ಸಾರ್ಥಕವಾಯಿತೆಂಬ ವಿಶೇಷ ಉತ್ಸಾಹ ಅವಳಲ್ಲಿ ಮೂಡಿತು. ಅವರ ಮದುವೆಯ ಓಲೆ ತಾಯಿಗೆ ಹೋಗಿತ್ತಾದರೂ, ಆಕೆ ಮುನಿಸಿನಿಂದ ಬಂದಿರಲಿಲ್ಲ. ಆದರೆ ಅವಳ ಸೋದರ ರಾಮಕೃಷ್ಣ ಬಂದು, ಸಂತೋಷಗೊಂಡು ಹೋಗಿದ್ದ. ಆತ ಮನೆಗೆ ಹೋದವನು ತನ್ನ ತಾಯಿಯೊಡನೆ ಅಕ್ಕನ ಭಾಗ್ಯವನ್ನು ಕುರಿತು ಉತ್ಸಾಹಪೂರ್ಣವಾದ ಮಾತುಗಳನ್ನು ಹೇಳಿದ್ದ. ತಾಯ ಪ್ರಶ್ನೆಯೇ ಬೇರೆಯಾಗಿತ್ತು. "ಏನು ಚಿನ್ನ ಹಾಕಿದ್ದಾರೆ?; ಏನು ಸೀರೆ ಕೊಟ್ಟಿದ್ದಾರೆ?" ಅದಕ್ಕೆ ಸಮರ್ಪಕವಾದ ಉತ್ತರ ದೊರೆಯಲಿಲ್ಲ. "ಚಿನ್ನಾಭರಣ ಏನೂ ಹಾಕಿದಂತೆ ಕಾಣಿಸಲಿಲ್ಲ" ಎಂದು ಆತ ಮಾತನ್ನು ತೇಲಿಸುತ್ತ "ಗಂಡನೇ ಒಂದು ಚಿನ್ನ ಅಲ್ಲವೇ" ಎಂದು ಉತ್ತರ ಕೊಟ್ಟ. ಕೇಳಿ ಮಂಜರಿ ಸಿಡಿಮಿಡಿಗೊಂಡಳು. "ಹೌದು, ಪ್ರಾಯ ಸಂದು ಹೋದ ಒಂದು ಕೊರಡು ನಿಜವಾಗಿಯೂ ಚಿನ್ನವೆ! ನಾಗರಾಜಯ್ಯ ದುಡ್ಡಿನ ಅಭಿಷೇಕ ಮಾಡಿಸುತಿದ್ದರು ಇವಳಿಗೆ. ಯಾರೇನು ಮಾಡಲಿ? ಅವರವರ ಅದೃಷ್ಟ; ಮಲತಾಯಿಯಾಗುವುದು ಇವಳ ಅದೃಷ್ಟದಲ್ಲಿತ್ತು" ಎಂದು ತನ್ನ ಅಸಮಾಧಾನವನ್ನು ತೋರಿದಳು. ತನ್ನ ತಾಯಿಯ ಸ್ವಭಾವವಾಗಲಿ, ಇಂಥ ಮಾತುಗಳಾಗಲಿ ರಾಮಕೃಷ್ಣನಿಗೆ ರುಚಿಸುತ್ತಿರಲಿಲ್ಲ. ಆದರೆ ಎಳೆಯನಾದ ಅವನು ಅವಳನ್ನು ಬದಲಿಸಬಲ್ಲನೇ? ಕೆಟ್ಟದ್ದಕ್ಕೂ ಅವಳೇ ತಾಯಿ; ಒಳ್ಳೆಯದಕ್ಕೂ ಅವಳೇನೆ ತಾಯಿ. ಆ ಮಾತುಗಳನ್ನು ಕೇಳಿ ಸುಮ್ಮನಿದ್ದ.

ವಿನತೆಯ ಜೀವನದಲ್ಲಿ ಮದುವೆಯಾದ ಹೊಸತರಲ್ಲಿ ಆರೆಂಟು ತಿಂಗಳ ಕಾಲ ನಿಡಿದಾದ ಒಂದೇ ಹುಣ್ಣಿಮೆ ಎನಿಸುತಿತ್ತು. ಒಡವೆ ವಸ್ತುಗಳಿಂದ ಅವಳನ್ನು ತೃಪ್ತಿಪಡಿಸಿದವರಲ್ಲ; ನಿಜ. ಅವಳೂ ಅವನ್ನು ಬಯಸಿದವಳಲ್ಲ. ತಾನು ಕೊನೆಗೂ ಪತಿಯನ್ನು ಗಳಿಸಿಕೊಂಡೆ. ವಯಸ್ಸಿನಲ್ಲಲ್ಲ

ದಿದ್ದರೂ, ಮನಸ್ಸಿಗೊಪ್ಪಿದ ಗಂಡ ದೊರಕಿದ—ಎಂಬ ಸಂತೋಷ ಅವಳಲ್ಲಿ ತುಳುಕಾಡುತಿತ್ತು. ಅದಕ್ಕೆ ಕೊನೆಯನ್ನು ತಂದ ಘಟನೆಯನ್ನು ನೆನೆದಾಗ ಮಾತ್ರ, 'ತಾನು ಮೂರ್ಖಳಾದೆನೇ? ಅಥವ ವಿಧಿ ತನ್ನಿಂದ ಹಾಗೆ ಮಾಡಿಸಿತೇ?' ಎಂದು ಬಹುದಿನಗಳ ತನಕ ಆಕೆ ತುಟಿ ಕಚ್ಚಿಕೊಳ್ಳುವಂತೆ ಮಾಡಿತು.

ತಮ್ಮ ದಾಂಪತ್ಯ ಜೀವನದಲ್ಲಿ ವಿರಸಕ್ಕೆ ಕಾರಣವಾದ ಸಂಭಾಷಣೆಯೊಂದು ನಡೆಯುವ ಮೊದಲು, ಅವಳೆಷ್ಟು ಸುಖಿಯಾಗಿರಲಿಲ್ಲ! ಪತಿಯು ಮನೆಗೆ ಬಂದು, ಮಕ್ಕಳೊಡನೆಯೂ ಅವನೊಡನೆಯೂ ಸಂತೋಷವಾಗಿರುತಿದ್ದ ಸ್ವಲ್ಪ ಕಾಲದಲ್ಲಿಯೇ, ಅವಳು ಗರ್ಭಿಣಿಯೂ ಆದಳು. ಆ ಕಲ್ಪನೆ ಮನಸ್ಸಿನಲ್ಲಿ ಮೂಡಿದಂದಿನಿಂದ, ದಿನ ರಾತ್ರಿ ಸುಖ ಸ್ವಪ್ನಗಳಲ್ಲಿ ತೇಲತೊಡಗಿದಳು. ಶಿಶು ಹೊಟ್ಟೆಯಲ್ಲಿ ಬೆಳೆದಂತೆ ಅವಳ ಭಾವಸ್ವರ್ಗವೂ ಬೆಳೆಯುತ್ತ ಹೋಯಿತು. ಆರು ತಿಂಗಳು ಕಳೆದವು. ಆ ಕಾಲದ ಸ್ವಭಾವ ಸಹಜವಾದ ಶರೀರದ ಕಾಯಿಲೆಗಳೂ ಮಾಯವಾದವು. ಮನಸ್ಸು ಉಲ್ಲಸಿತವಾಗಿತ್ತು. ಬಯಕೆ ಬೆಳೆಯುತ್ತ ಬಂದಿತು. ಬಟ್ಟೆಬರೆಗಳ ಆಸೆ, ಒಡವೆಗಳ ಆಸೆ, ಹೆಚ್ಚಾಗತೊಡಗಿತು. ಅದಕ್ಕಿಂತಲೂ 'ಅದನ್ನು ತಿನ್ನಬೇಕು, ಇದನ್ನು ತಿನ್ನಬೇಕು' ಎಂಬ ಅಪೇಕ್ಷೆ ಸ್ವಾಭಾವಿಕವಾಗಿ ಮೂಡತೊಡಗಿತು. ಬೆಳೆಯುವ ಈ ಅಪೇಕ್ಷೆಗಳಿಗೆ ಸಮವಾದ ಗೃಹಕೃತ್ಯದ ಅನುಕೂಲತೆಗಳು ಮನೆಯಲ್ಲಿ ಕಾಣಿಸುತ್ತಿರಲಿಲ್ಲ. ಗಂಡನಿಗೆ ತಿಂಗಳಿಗೆ ಇನ್ನೂರೈವತ್ತು ರೂಪಾಯಿಗಳ ವರಮಾನವಿದೆ–ಎಂದು ಅವಳು ತಿಳಿದುಕೊಂಡಿದ್ದವಳಾದರೂ ಅವಳಾಗಿಯೇ ಅದರಲ್ಲಿ ಪಾಲು ಬೇಡಿದವಳಲ್ಲ. ತನಗೆ ಅದನ್ನು ಕೊಡಿ, ಇದನ್ನು ಕೊಡಿ ಎಂದವಳಲ್ಲ. ಕೊಟ್ಟುದರಲ್ಲಿ ಮನೆಯ ಖರ್ಚುವೆಚ್ಚ ಮುಗಿಸಿ, ತಣ್ಣಗಿರುತಿದ್ದಳು. ವೆಚ್ಚಕ್ಕೆ ಸಂಕೋಚ ಕಾಣಿಸುತಿತ್ತು. ಒಂದು ದಿನವಾದರೂ 'ನಿಮಗೆ ಅಷ್ಟು ಸಂಬಳ ಬರುತ್ತದಂತೆ. ಮನೆಗೆ ನೂರು ರೂಪಾಯಿಗಳನ್ನಾದರೂ ಕೊಡದಿದ್ದರೆ ಹೇಗೆ' ಎನ್ನುವ ಸಾಹಸ ಮಾಡಲಿಲ್ಲ. 'ಅವರಿಗೇನು ತೊಂದರೆಯೋ, ಎಷ್ಟು ಸಾಲವೋ. ನಾನೇಕೆ ಪೀಡೆ ಕೊಡಬೇಕು' ಎಂಬುದು ಅವಳ ಮನಸ್ಸು. ಕೇಳುವ ಆಸೆ ಮೂಡಿದ್ದರೂ ನಾಲಗೆಯನ್ನು ಬಿಗಿ ಹಿಡಿದಿದ್ದಳು. ಏನಾದರೊಂದು ವಸ್ತುವನ್ನು ಬೇಯಿಸಿ ತಿನ್ನುವ ಚಪಲವಾದರೆ, ಅನುಕೂಲತೆ ಕಾಣಿಸಿದಾಗ ಮಂಜುನಾಥನ ಮನೆಗೆ ಓಡುತ್ತಾಳೆ. ರಾಜೀವಿ

ಯೊಡನೆ 'ಅದನ್ನು ಮಾಡಿಕೊಡುತ್ತೀಯಾ; ಇದನ್ನು ಮಾಡಿಕೊಡುತ್ತೀಯಾ' ಎಂದು ಬೇಡುತ್ತಾಳೆ. ಎರಡು ಮೂರು ಬಾರಿ ಆಕೆ ಹೀಗೂ ಮಾಡಿದ್ದಾಯಿತು. ಇನ್ನೂ ಇನ್ನೂ ಬೇಡುವುದೆಂದರೆ ಅವಳಿಗೂ ನಾಚಿಕೆ. ತಮಗಿಂತಲೂ ಅವರು ಉತ್ತಮ ಸ್ಥಿತಿಯಲ್ಲಿಲ್ಲ ಎಂಬುದು ಗೊತ್ತಿತ್ತು.

ಹಾಗೆ ಅಲ್ಲಿಗೆ ಹೋದಾಗ ರಾಜೀವಿ ಅವಳೊಡನೆ ಮುಂದಿನ ಬಾಣಂತಿತನದ ವಿಚಾರವಾಗಿ ಕೇಳುತ್ತಾಳೆ. ನೀನು 'ಊರಿಗೆ ಹೋಗುತ್ತೀಯಾ? ಇಲ್ಲೇ ಹೆರಿಗೆಯೇ? ಅದರ ಯೋಚನೆಯನ್ನೆ ಮಾಡಿಲ್ಲವೆ? ಈ ಸಮಯದಲ್ಲಿ ಸ್ವಲ್ಪ ಹೆಚ್ಚಾಗಿ ಹಾಲು ತೆಗೆದುಕೊಳ್ಳುತ್ತಿದ್ದೀಯಲ್ಲ? ಗಂಡ ಯಾವುದಾದರೂ ಡಾಕ್ಟರ್ ಬಳಿಗೆ ಕರೆದೊಯ್ದಿದ್ದಾರೆಯೋ? ಏನಾದರೂ ಟಾನಿಕ್ ಗೀನಿಕ್ ತೆಗೆದುಕೊಂಡರೆ ಒಳ್ಳೆಯದಲ್ಲವೆ" ಎಂಬ ಹೆಣ್ಣು ಪ್ರಪಂಚದ ನೂರಾರು ಪ್ರಶ್ನೆಗಳನ್ನು ಕೇಳುತ್ತಾಳೆ. ಅವಕ್ಕೆ ಸಮಾಧಾನಕರವಾದ ಉತ್ತರ ಕೊಡುವುದಕ್ಕೆ ವಿನತೆಗೆ ಬರಲೊಲ್ಲದು. "ಬಾಣಂತಿತನ ಇಲ್ಲೇ ಎಂದು ಕಾಣುತ್ತದೆ. ಊರಿಗೆ ಯಾರು ಹೋಗುತ್ತಾರೆ! ಅಮ್ಮನಿಗೂ ನನ್ನ ಮೇಲೆ ಅಷ್ಟಕಷ್ಟೆ. ಅಲ್ಲದೆ ಆ ಎರಡು ಮಕ್ಕಳನ್ನು ಬಿಟ್ಟು ನಾನು ಹೋದರೆ ಅವರೇನು ಮಾಡಿಯಾರು?"

"ಅದೇನು ದೊಡ್ಡ ಮಾತು? ನೀನು ಬರುವುದಕ್ಕೆ ಮೊದಲು ಅವರು ಅವನ್ನು ನೋಡಿಕೊಂಡಿರಲಿಲ್ಲವೆ! ಬಾಣಂತಿತನಕ್ಕೆ ಈ ಊರೇ ಒಳ್ಳೆಯದು --ನಿಜ. ಅಲ್ಲಲ್ಲಿ ಹೆರಿಗೆಯ ಆಸ್ಪತ್ರೆಗಳಿವೆ. ಆಸ್ಪತ್ರೆಗೆ ಹೋಗುವುದೇ ಒಳ್ಳೆಯದು. ಆದರೆ ಮುಂದೆ ನಿನ್ನಿಂದ ಮನೆಯ ಕೆಲಸ ಆಗಲಾರದು. ಕೆಲಸಕ್ಕೆ ಒಬ್ಬ ಹುಡುಗನನ್ನು ಇರಿಸಿಕೊಳ್ಳದೆ ನೀನೇ ತೀರ ದಣಿಯಬೇಡ. ಒಂದು ಆಳನ್ನು ಇರಿಸಿಕೊಳ್ಳುವ ತ್ರಾಣವಿಲ್ಲವೆ ನಿನಗೆ?"

ಸಹಜವಾಗಿ ಕೇಳಿದ ಆ ಮಾತಿಗೆ ವಿನತೆ, ತನ್ನ ಹಣಕಾಸಿನ ಅಡಚಣೆಯನ್ನು ಹೇಳಿಕೊಳ್ಳುವಂತಾಯಿತು. "ಅವರು ತಿಂಗಳಿಗೆ ಎಪ್ಪತ್ತು ಕೊಟ್ಟರೂ ಕೊಟ್ಟರೇ. ಅದಕ್ಕೂ ಕಡಿಮೆಯಾಗಿ ಕೊಟ್ಟರೂ ಕೊಟ್ಟರೇ. ದುಡ್ಡು ಏನು ಮಾಡುತ್ತಾರೋ ಗೊತ್ತಿಲ್ಲ. ನಾನಾಗಿ ಅವರನ್ನು ಕೇಳಲಿಲ್ಲ; ಅವರಾಗಿ ಹೇಳುವುದಿಲ್ಲ. ನನಗೆ ಕೇಳುವ ಧೈರ್ಯವೂ ಇಲ್ಲ" ಎಂದಂದಳು.

ಮಂಜುನಾಥನು ಆ ಮಾತುಗಳನ್ನು ಕೇಳಿದ. ಮಲಗಿ ಓದುತಿದ್ದವ, ಪುಸ್ತಕವನ್ನು ಕೆಳಕ್ಕಿರಿಸಿ "ವಿನೂ, ಒಂದು ಸಂಗತಿ ನಿನ್ನಲ್ಲಿ ಹೇಳಬೇಕೆಂ

ದಿದ್ದೆ. ನಾನು ಹೊರಗಿಂದ ಕೇಳಿದ ಮಾತು. ನಿಜವೋ ಸುಳ್ಳೋ ಗೊತ್ತಿಲ್ಲ; ಕೇಳಿದ ಮೇಲೆ ನಿನಗೆ ಹೇಳುವುದು ಒಳ್ಳೆಯದು ಎಂದು ತೋರುತ್ತದೆ. ಗಾಂವಕರರು ಉಳಿದ ರೀತಿಯಲ್ಲೆಲ್ಲ ಸರಿಯೆ. ಯಾರೋ ಅಂದರು-ಆತ ಒಂದೂ ರೇಸನ್ನು ಬಿಡುವುದಿಲ್ಲ—ಎಂದು. ಇನ್ನೂರೈವತ್ತು ರೂಪಾಯಿ ಸುಮಾರು ಸಂಬಳ ಸಿಗುತ್ತಿರುವಾಗ ಹಣವೆಲ್ಲಿಗೆ ಹೋಗಬೇಕು? ಅದು ನಿಜವೋ ಏನೋ. ಅವರು ಒಳ್ಳೆಯ ಗಳಿಗೆಯಲ್ಲಿರುವುದನ್ನು ನೋಡಿ, ನಾಲ್ಕು ಬುದ್ಧಿಯ ಮಾತುಗಳನ್ನು ನೀನು ಹೇಳಬೇಕು. ಜುಗಾರಿಗೆ ಕೈಹಾಕಿದ ಮನುಷ್ಯ ಹಣದ ಸಂಕಷ್ಟದಿಂದ ಪಾರಾಗುವುದು ಸಾಧ್ಯವೇ? ನಾಳೆಗೆ ನೀನೂ ಕಷ್ಟಪಡಬೇಕಾದೀತು" ಎಂದು ಎಚ್ಚರಿಸಿದ. ಆ ಮಾತುಗಳನ್ನು ಕೇಳಿ ವಿನತೆಯ ಮನಸ್ಸು ಕ್ಷುಬ್ಧವಾಯಿತು. ತುಂಬ ಚಿಂತೆಯಿಂದಲೇ ಅವಳು ಮನೆಗೆ ಮರಳಿದಳು. ಆದರೆ ತನ್ನನ್ನು ಗಂಡ ಅಷ್ಟು ಪ್ರೀತಿಸುತ್ತಿರುವಾಗ, ತನ್ನ ಮಾತನ್ನು ಕೇಳಬಹುದು—ಎಂದು, ಹೇಳುವುದಕ್ಕೆ ಸುಮುಹೂರ್ತವನ್ನಷ್ಟೆ ಹುಡುಕುತ್ತಿದ್ದಳು. ಒಂದು ಆದಿತ್ಯವಾರ ಬಂದಿತು. ಬೆಳಗ್ಗೆ ಗಾಂವಕರರು ಹೊರಗೆ ಹೋದವರು ಸಂಜೆಯ ತನಕವೂ ಮರಳಲಿಲ್ಲ. ಆ ದಿನ ಬೆಳಗಿನ ಪೀಠಿಕೆಯಾಗಿ "ಆಯೀ, ನನಗೆ ಬೇರೆ ನಿಕ್ಕರ್ ಬೇಕು" ಎಂದಿದ್ದ ಮೋಹನ. "ಇದೇ ಹರಕು ಅಂಗಿಯಲ್ಲಿ ನಾನು ಶಾಲೆಗೆ ಹೋಗುವುದೇ" ಎಂದಂದಳು ಮಾಲತಿ. ಮಧ್ಯಾಹ್ನ ಧೋಬಿಯು ಮನೆಗೆ ಬಂದು "ಏನಮ್ಮ, ಮೂರು ತಿಂಗಳಿಂದಲೂ ಮಡಿಮಾಡಿದ ಅರಿವೆಯ ದುಡ್ಡು ಕೊಡದಿದ್ದರೆ, ನಾನು ಸಂಸಾರ ಸಾಗಿಸುವುದು ಹೇಗೆ?" ಎಂದು ಹೇಳಿ ಹೋಗಿದ್ದ. ಸಂಜೆ ಮಕ್ಕಳನ್ನು ಕಟ್ಟಿಕೊಂಡು ಸಮೀಪದ ತೋಟವೊಂದಕ್ಕೆ ತಿರುಗಾಡುತ್ತೇನೆಂದು ಹೊರಟರೆ, ಹೊರಡುವ ಮುಂಚೆ "ಗಾಂವಕರ್ ಸಾಹೇಬರೆಲ್ಲಿ?" ಎಂದು ಅವರನ್ನು ಹುಡುಕಿಕೊಂಡು ಬಂದಿದ್ದ, ಬಾಡಿಗೆಯ ಬನಿಯ. ಕೆಲವು ತಿಂಗಳಿಂದಲೂ ಅವನ ಲೆಕ್ಕಾಚಾರ ಬಾಕಿಯಂತೆ. ವಿನತೆಯ ಉಲ್ಲಾಸವೆಲ್ಲ ಅಡಗಿತು. ಆದರೂ ಮಕ್ಕಳನ್ನು ಕಟ್ಟಿಕೊಂಡು ಅಲೆದಾಟಕ್ಕೆ ಹೋಗಿ ಬಂದಳು. ರಾತ್ರೆ ಸಿಗಡಿ ಹೊತ್ತಿಸಿ, ಅಡುಗೆ ಮಾಡಿದಳು. ಒಂಬತ್ತು ಘಂಟೆಗೆ ಬಂದ ಗಂಡನಿಗೆ ಊಟ ಬಡಿಸಿದಳು. ಎಲ್ಲ ಕೆಲಸ ಮುಗಿಸಿ, ಅವನ ಸಮ್ಮುಖದಲ್ಲಿ ಹೋಗಿ ಕುಳಿತಳು. ನಗುತ್ತ "ನನಗಿದು ಏಳನೆಯ ತಿಂಗಳು. ಹೆರಿಗೆ ಎಲ್ಲಿ ಏನು ಎಂದು ಯೋಚಿಸಿದ್ದೀರಾ" ಎಂದು ನಗುತ್ತ ಕೇಳಿದಳು.

"ಅದಕ್ಕೇನು ಮಹಾ ಯೋಚನೆ?"

"ಹಾಗಲ್ಲ. ಈಗಿಂದಲೇ ಹೆಚ್ಚಿಗೆ ಹಾಲು, ಟಾನಿಕ್ ತೆಗೆದುಕೊಂಡರೆ ಒಳ್ಳೆಯದು ಅನ್ನುತ್ತಾರೆ. ಕೆಲಸಕ್ಕೆ ಒಬ್ಬ ಆಳನ್ನಾದರೂ ಇಟ್ಟುಕೋ ಅನ್ನುತ್ತಾಳೆ ರಾಜೀವಿ. ಇವತ್ತು ಅಲ್ಲಿಗೆ ಹೋಗಿದ್ದೆ. ಆದರೆ ಹಣ ನೀವು ಕೊಡುವವರಲ್ಲವೆ? ಈಗ ಕೊಡುತ್ತಿರುವ ಹಣ ಮನೆಯ ಖರ್ಚಿಗೇ ಸಾಕಾಗುವುದಿಲ್ಲ. ನನಗೆ ಕೇಳುವುದಕ್ಕೆ ದಾಕ್ಷಿಣ್ಯ."

"ನನ್ನ ಕೈಯಲ್ಲೇನು ಹಣದ ಮಳೆ ಸುರಿಯುತ್ತದೆಯೇ?"

"ನೀವು ಹಾಗೆ ಹೇಳುತ್ತೀರಿ. ಇವತ್ತು ಡೋಬಿಯೂ ಬಂದಿದ್ದ. ಬಾಡಿಗೆಯ ಬನಿಯನೂ ಬಂದಿದ್ದ. ಅವರದೂ ಬಾಕಿ ಇರಬೇಕು. ಅಷ್ಟೆಲ್ಲ ಸಂಬಳ ಬರುವಾಗ ಏನು ಮಾಡುತ್ತೀರೋ! ರೇಸಿಗೆ ಗೀಸಿಗೆ ಹೋಗುವುದಿಲ್ಲವಲ್ಲ. ಮತ್ತೇನಾದರೂ ಚಿಂತೆಯಿಲ್ಲ" ಎಂದಳು. ಅಷ್ಟೇ ಅವಳ ಕೊನೆಯ ಮಾತು.

ಮುಂದೆ ದೀರ್ಘವಾದ ತಾಳ್ಮೆಗೆಟ್ಟ ಭಾಷಣವನ್ನು ಗಾಂವಕರರೇ ಮಾಡಿದರು. "ಯಾರು ನಿನಗೆ ಹೇಳಿದವರು? ನನ್ನ ದುಡಿಮೆಯ ದುಡ್ಡನ್ನು ನಾನೇನು ಮಾಡಿದರೆ ಕೇಳುವುದಕ್ಕೆ ನೀನು ಯಾರು?" ಎಂದು ರೇಗಿ ಮಾತನಾಡಿದರು. ಅದನ್ನು ಕೇಳುವುದಕ್ಕಾಗದೆ, ವಿನತೆ ತನ್ನ ಹಾಸಿಗೆಗೆ ಹೋಗಿ ಮುದುರಿ ಮಲಗಿಕೊಂಡಳು. ಅಲ್ಲಿ ಕಂಬನಿ ಸುರಿಸತೊಡಗಿದಳು. ಆದರೆ ಕೇಳುವುದು ಮುಗಿಯಲಿಲ್ಲ.

"ಎಷ್ಟೆಂದರೂ ನಾನು ಮೂರ್ಖ–ತಿಳಿದೂ, ತಿಳಿದೂ ನಿನ್ನಂತಹ ಕುಲಗೆಟ್ಟ ಹುಡುಗಿಯನ್ನು ತಂದು ಲಗ್ನವಾಗುವುದಕ್ಕೆ. ಜಾತಿ ಗೀತಿ ನೋಡದೆ ನಾನು ಮದುವೆಯಾದುದೇ ಮೂರ್ಖತನವಾಯಿತು. ನೀನೆಷ್ಟು ಸಕ್ಕು ಮಾತನಾಡಿದರೂ ನಿನ್ನ ಹುಟ್ಟುಗುಣ ಹೋಗಲಾರದು. ದುಡ್ಡಿಗಾಗಿ ಹುಟ್ಟಿದ ಕುಲ ನಿಮ್ಮದು. ಮದುವೆಯಾದ ಗಂಡನೂ ಸಹ, ದುಡ್ಡು ಸೆಳೆಯಲಿಕ್ಕಿರುವ ವಿಟನಂತೆ ಕಾಣಿಸುತ್ತಾನೆಯೇ ಹೊರತು, ನಿಮಗೆ ಕೈ ಹಿಡಿದ ಯಜಮಾನನಾಗಿ ಕಾಣಿಸುವುದಿಲ್ಲ" ಎಂದರು.

ಕಾದ ಸೀಸವನ್ನು ಕಿವಿಯ ಮೇಲೆ ಸುರಿದಂತಾಯಿತು ವಿನತೆಗೆ— ಆ ಕೊನೆಯೊಂದು ಮಾತನ್ನು ಕೇಳಿ. ಇಷ್ಟನ್ನು ಅನಿಸಿಕೊಳ್ಳುವುದಕ್ಕೇನೆ, ತಾನು ಮನೆಬಿಟ್ಟು, ಮುಂಬಯಿಗೆ ಬಂದು ಗಂಡನನ್ನು ಅರಸಿ, ಅವನ ಕೈಯನ್ನು ಹಿಡಿದುದು–ಆದಂತಾಯಿತು. ಅಂತೂ ತನ್ನ ಕುಲಕ್ಕಂಟಿದ ಶಾಪ

ಬೆನ್ನು ಬಿಡಲಿಲ್ಲ. ಇಂಥ ಮಾತು ಕೇಳಿಕೊಂಡು ಬದುಕಬೇಕು. ತನ್ನನು ಕೇವಲ ಹಣಕ್ಕಾಗಿ ಮೈಮಾರಿಕೊಂಡ ಸೂಳೆಯನ್ನಾಗಿ ತಿಳಿಯುವ ಪತಿಯೊಡನೆ ಸಂಸಾರ ಸಾಗಿಸಬೇಕು—ಎಂಬ ಕಠೋರ ಸತ್ಯದ ನೆನವರಿಕೆಯಾಯಿತು. ಹೊದೆದ ಮುಸುಕಿನೊಳಗಿಂದ ಎಷ್ಟು ಹೊತ್ತು ಗದ್ಗದಿಸಿದಳು, ಕಣ್ಣೀರು ಕರೆದಳು ಎಂಬುವುದಕ್ಕಿಲ್ಲ. ರಾತ್ರಿಯೆಲ್ಲ ನರಕಯಾತನೆಯೋ. ಮರುದಿನ ಬೆಳಗಾಯಿತು. ವಿಷಮ ಜ್ವರದಿಂದೆದ್ದಷ್ಟು ಅಶಕ್ತಳು ಅವಳು. ಹೇಗೊ ಅಡುಗೆಯನ್ನು ಮಾಡಿದಳು. ಮಕ್ಕಳಿಗೂ ಗಂಡನಿಗೂ ಬಡಿಸಿದಳು. ತುಟಿಯ ಮೇಲೆ ಕೈಯಿಟ್ಟುಕೊಂಡು ಹಾಸುಗೆಗೊರಗಿ ಕುಳಿತು ಚಿಂತಿಸತೊಡಗಿದಳು. ಇಂಥ ಬಾಳಿಗಿಂತ ಸಾವು ಶ್ರೇಯಸ್ಕರವೆನಿಸಿತು—ಆ ಎಳೆ ಮನಸ್ಸಿಗೆ. ಸಾವನ್ನು ನೆನೆದೇ ನೆನೆಯುತ್ತಾಳೆ. ಹೊಟ್ಟೆಯಲ್ಲಿ ಶಿಶುವಿನ ಕನಸನ್ನು ಕಂಡ ಆ ಯೌವನ ಸಾಯಲಂಜುತ್ತದೆ. ನಾಳೆ ಹುಟ್ಟಲಿರುವ ತನ್ನೊಂದು ವಸ್ತುವನ್ನು ಕಂಡೇನೇ' ಎಂದು ಹಂಬಲಗೊಳ್ಳುತ್ತದೆ.

ತಿರುಗಿ ಸಂಜೆಯಾಯಿತು. ಮಕ್ಕಳು ಮನೆಗೆ ಬಂದರು. "ಆಯೀ-ಅಳುತ್ತೀ ಏಕೆ?" ಎಂದು ಅವಳನ್ನು ಕೇಳಿದರು. 'ಏನಿಲ್ಲ' ಎಂದು ಮಾತು ತೇಲಿಸಿದಳು. ತನ್ನದಲ್ಲದ ಆ ಎರಡು ಕೂಸುಗಳಿಗೆ ತನ್ನಲ್ಲಿ ನಂಬಿಕೆಯುಂಟು. ತನ್ನವನೆನಿಸಿದ ಗಂಡನಿಗೆ ಇಲ್ಲದೆ ಹೋಯಿತೇ—ಎಂದು ತೋರತೊಡಗಿತು. ರಾತ್ರಿ ಮನೆಗೆ ಬಂದ ಪತಿಯ ಸಿಡುಕು ಇನ್ನೂ ಶಾಂತವಾಗಿರಲಿಲ್ಲ. ಇವಳ ಶೋಕವೂ ಅಡಗಿರಲಿಲ್ಲ. ಆ ದಿನವೆಲ್ಲ ನೀರನ್ನೂ ಕುಡಿದಿರಲಿಲ್ಲ ಆಕೆ. ಮರುದಿನವೂ ಉಪವಾಸವೇ. ತಮ್ಮ ತಾಯಿ ಎರಡು ದಿನಗಳ ಕಾಲ ಉಂಡಿಲ್ಲ ಎಂದು ಮಾಲತಿ ಮೋಹನರು ತಿಳಿದುಕೊಂಡರು. ತಂದೆ ಬರುವ ತನಕ ಕಾದಿದ್ದು 'ಅಪ್ಪಾ, ಆಯಿಗೇನು ಮಾಡಿದೆ? ಹೊಡೆದೆಯೋ; ಬೈದೆಯೋ; ಅವಳು ನಿನ್ನೆಯೂ, ಇವತ್ತೂ ಊಟಮಾಡಲಿಲ್ಲ. ನಾವು ಕೇಳಿದರೆ ಏಕೆಂದು ಹೇಳುವುದಿಲ್ಲ" ಎಂದಂದರು. ಏನು ಕಂಡಿತೋ ಆತನಿಗೆ "ಊಟ ಮಾಡು ವಿನತೆ" ಎಂದ.

"ಉಣ್ಣುವುದನ್ನೆಲ್ಲ ಉಣ್ಣುತ್ತಿದ್ದೇನೆ. ಇದಕ್ಕಿಂತ ದೊಡ್ಡ ಬಯಕೆಯೂಟವನ್ನು ಯಾರು ನನಗೆ ಕೊಟ್ಟಾರು?" ಎಂದು ಮುಖ ತಿರುಗಿಸಿ, ಮಗುವಿನಂತೆ ತಿರುಗಿ ಅಳತೊಡಗಿದಳು. ಮಾಲತಿ ಮೋಹನರಿಬ್ಬರೂ ಅವಳ ಬಳಿಗೆ ಧಾವಿಸಿ, ತಮ್ಮ ಕೂಗನ್ನು ಸೇರಿಸತೊಡಗಿದೊಡನೆ "ಅಯ್ಯೋ ಜೀವವೇ,

ತನಗೆ ಅಳುವುದಕ್ಕೂ ಸ್ವಾತಂತ್ರ್ಯವಿಲ್ಲವಲ್ಲ" ಎಂದು ತೋರಿತು ವಿನತೆಗೆ ಬಹು ಹೊತ್ತಿನ ಬಳಿಕ ಗಾಂವಕರರು ಬಂದು 'ನೀನು ಉಣ್ಣದಿದ್ದರೆ ನಾನೂ ಉಣ್ಣುವುದಿಲ್ಲ" ಎಂದರು. ಮನಸ್ಸಿಲ್ಲದ ಮನಸ್ಸಿನಿಂದ ಗಂಡನೊಂದಿಗೆ ಅವಳೊಂದಿಷ್ಟು ಅನ್ನದ ಅಗುಳನ್ನು ಗಂಟಲಿಗೆ ತುರುಕಿಸಿಕೊಂಡು, ಮುದ್ದಿನಷ್ಟು ಕಹಿಯಿಂದ ಅದನ್ನು ನುಂಗಬೇಕಾಯಿತು. ಆ ರಾತ್ರಿ ಗಂಡ ಸೋತವನಂತೆ ನಟಿಸಿದ; ಅವಳಲ್ಲಿ ಕ್ಷಮಾಯಾಚನೆ ಮಾಡಿದ. ಅವಳ ಮನಸ್ಸಿಗೆ ಸಮಾಧಾನ ತರಲು ಪ್ರಯತ್ನಿಸಿದ. ಅನಂತರದ ದಿನಗಳಲ್ಲಿ—ಹೆರಿಗೆಯ ವಿಚಾರ, ಆಳಿನ ವಿಚಾರ, ಮನೆಯ ವಿಚಾರ ಅನುಕೂಲವಾಗಿಯೇ ಮಾತನಾಡಿದ. ಮುಂದಿನ ತಿಂಗಳಲ್ಲಿ ನೂರು ರೂಪಾಯಿ ಹೆಚ್ಚಾಗಿ ತಂದು ಅವಳ ಕೈಯಲ್ಲಿರಿಸಿದ. "ಇದನ್ನು ಬೇಕಾದ ಹಾಗೆ ಖರ್ಚು ಮಾಡು. ನಿನಗಲ್ಲದ ದುಡ್ಡು ನನಗೇಕೆ?" ಎಂದು ಉಪಚಾರಮಾಡಿದ. ಮೆಲ್ಲಮೆಲ್ಲಗೆ, ವಿನತೆಯ ಚಿದಾಕಾಶದಲ್ಲಿ ಕವಿದ ಕಾರ್ಮುಗಿಲು ಕಳೆಯುತ್ತ ಬಂದಂತೆ ಕಾಣಿಸಿತು ಹೆರಿಗೆಯ ದಿನಗಳು ಸಮೀಪಿಸಿದವು. ಅಂಧೇರಿಯಲ್ಲಿ ಒಂದು ಹೆರಿಗೆಯ ಆಸ್ಪತ್ರೆಗೆ ಹೋಗುವ ಏರ್ಪಾಡಾಯಿತು. ಗಂಡ ಅವಳನ್ನು ಅಲ್ಲಿಯ ತನಕ ಮುಟ್ಟಿಸಿ ಬಂದ. ಆಸ್ಪತ್ರೆಗೆ ಬಂದರೂ ವಿನತೆಯ ಮನಸ್ಸಿನಲ್ಲಿ ಹಿಂದಣ ವಾಗ್ಬಾಣದ ನೋವು ಮಾಯವಾಗಲಿಲ್ಲ. "ಇನ್ನು ನಾನಾಗಿ ಗಂಡನಲ್ಲಿ ಒಂದು ಕಾಸನ್ನೂ ಕೇಳುವುದಿಲ್ಲ. ಹಣದ ಪ್ರಶ್ನೆಯನ್ನೂ ಮಾಡುವುದಿಲ್ಲ. ಇಷ್ಟ ಬದುಕು ಮರ್ಯಾದೆಯಿಂದ ಹೋದರೆ ಸಾಕು" ಎಂದು ಯೋಚಿಸತೊಡಗಿದಳು. ಆಸ್ಪತ್ರೆಯಲ್ಲಿ ಅವಳನ್ನು ನೋಡುವುದಕ್ಕೆ ರಾಜೀವಿಯೂ ಬಂದಿದ್ದಳು. ಅಲ್ಲಿದ್ದ ಒಂದು ತಿಂಗಳ ಕಾಲದಲ್ಲಿ, ಅವಳು ಹಡೆದ ಹೆಣ್ಣು ಶಿಶುವನ್ನು ನೋಡುವುದಕ್ಕೆ ಇನ್ನೊಮ್ಮೆ ಮಂಜುನಾಥ, ರಾಜೀವಿಯರು ಅಲ್ಲಿಗೆ ಬಂದರು. ಗೆಲುವಿಲ್ಲದ ಅವಳ ಮುಖದಲ್ಲಿ ಏನು ಯೋಚನೆ ತುಂಬಿದೆಯೆಂದು ಅವಳಾಗಿ ಹೇಳಲಿಲ್ಲ. ಅವರಿಗೆ ತಾನಾಗಿ ಗೊತ್ತಾಗಲಿಲ್ಲ.

ವಿನತೆಗೆ ಹೆಣ್ಣು ಶಿಶು ಹುಟ್ಟಿದ ವಾರ್ತೆ ಮುದ್ದೂರಿನಲ್ಲಿರುವ ತಾಯಿಗೂ ತಲ್ಪಿತು. "ತಾಯಿ ಮಕ್ಕಳು ಸುಖವಾಗಿದ್ದಾರೆ" ಎಂದು ಕೇಳಿ ಅವಳಿಗೂ ಸಂತೋಷವಾಯಿತು. ವಿನತೆ ಹೊಸತೊಂದು ಜೀವದೊಡನೆ, ತನ್ನದೇ ಆದ ರತ್ನದೊಡನೆ, ಮಾಲಾಡಿನ ಮನೆಗೆ ತಿರುಗಿ ಬಂದಳು. ಮೋಹನ, ಮಾಲತಿಯರಿಗೆ ತಂಗಿ ಬಂದ ಸಂತೋಷ ಅಷ್ಟಿಷ್ಟಲ್ಲ. ವಿನತೆಗೆ ಗಂಡನ ಮನೋವೃತ್ತಿ

ಮಾತ್ರ ನಿಷ್ಠುರವಾಗಿ ಕಾಣಿಸದಿದ್ದರೂ, ರಸಶೂನ್ಯವಾಗಿ ಕಾಣಿಸತೊಡಗಿತು. ಯಾರೋ ಏನೋ ಎಂಬ ನಡತೆಯದು. ಅವಳ ಬಾಣಂತಿತನ ಕಳೆದ ಬಳಿಕ ಆತ ಇನ್ನಷ್ಟು ಬದಲಿಸಿದ. ವಿನತೆಯನ್ನು ಹೆಚ್ಚಿನ ಪ್ರೀತಿಯಿಂದ ಕಾಣ ತೊಡಗಿದ. ಮನೆಯ ಖರ್ಚು ವೆಚ್ಚಗಳ ವಿಚಾರದಲ್ಲಿ ಅವನ ರೀತಿ ಬದ ಲಾಗಲಿಲ್ಲವಾದರೂ, ಉಳಿದ ವಿಚಾರಗಳಲ್ಲಿ ವಿನತೆಗೆ ತನ್ನ ಪೂರ್ವದ ಚೆಲು ವಿನ ದಿನಗಳು ಬಂದಾವು ಎಂದು ಆಸೆಯನ್ನು ಹುಟ್ಟಿಸಿತು. ಆದರೆ ಅದ ನ್ನೆಲ್ಲ ಯೋಚಿಸುವ ಬದಲು, ತನ್ನನ್ನೇ ನಂಬಿರುವ, ಎದೆ ಹಾಲನ್ನುಣ್ಣುವ ಶಿಶು ಅವಳ ಸರ್ವಸ್ವವಾಗತೊಡಗಿತು. ಯಾವುದೋ ಕತೆಯನ್ನೋದಿದ ನೆನಪಿನಿಂದ, ಅಪೂರ್ವ ಹೆಸರೊಂದನ್ನು ಮಗುವಿಗೆ ಕೊಡುತ್ತೇನೆಂದು ಯೋಚಿಸಿದಳು. ಕೊನೆಗೆ, 'ಬೇಡ ಸಾವಿತ್ರಿ ಎಂಬ ಹೆಸರೇ ಚೆನ್ನಾದುದು' ಎಂದು ಅದನ್ನೇ ಇರಿಸಿದಳು. ಮುದ್ದು ಸಾವಿತ್ರಿಯೂ ಅವಳೂ ಕೂಡಿ ಒಂದು ಅಖಂಡ ಪ್ರಪಂಚವಾದರು. ಆ ಮಗು ನಗತೊಡಗಿದ ಮೇಲಂತು ಅವಳೂ ತಿರುಗಿ ನಗುವಿನಲ್ಲಿ ತೇಲತೊಡಗಿದಳು. ಈ ಮಗುವಿಗಿಂತ ದೊಡ್ಡ ರತ್ನಾಭರಣವೇನು? ಉಡುಗೆತೊಡುಗೆ ಏನು? ಬಯಕೆ ಏನು? ಭಾಗ್ಯ ವೇನು?–ಎಂಬ ಮನಸ್ಸು ಅವಳದಾಯಿತು. ಮಗುವಿಗೀಗ ಆರು ತಿಂಗಳು ಕಳೆದಿದೆ. ಜೀವನಕ್ಕೆ ಕವಿದ ರಾಹು ಅದರಿಂದ ಮಾಯವಾಗಿದೆ. ಕೈಗೆ ಸಾಕಷ್ಟು ಹಣ ಬಾರದಿದ್ದರೂ ಇದ್ದುದರಲ್ಲೇ ಅವಳು ತೃಪ್ತಳು. ಹೀಗೆ ತನ್ನ ಜೀವನ ಸಾಗಿಸಿದರೆ ಸಾಕು, ಪತಿ ಮುದ್ದಾಡದಿದ್ದರೂ ಚಿಂತೆಯಿಲ್ಲ; ಮೂದಲಿಸದಿದ್ದರೆ ಸಾಕು—ಎಂದು ಯೋಚಿಸತೊಡಗಿದಳು.

ಒಂದು ದಿನ ಸಂಜೆ ಐದು ಘಂಟೆಯ ಹೊತ್ತಿಗೆ, ಅವರ ಮನೆಗೆ ಅಪೂರ್ವಕ್ಕೊಮ್ಮೆ ಬರುತ್ತಿದ್ದ ಗಿರಿಧರಲಾಲ ಸೇಠನ ಮೋಟರು ಬಂದಿಯು ಬಂದು ಮನೆಯ ಮುಂದೆ ನಿಂತಿತು. ಯಾರು ಬಂದರೆಂದು ನೋಡುವು ದಕ್ಕೆ ಅವಳು ಹೊರಕ್ಕೆ ಬಂದಳು. ಆಗಷ್ಟೆ ಮಾಲತಿ, ಮೋಹನರು ಶಾಲೆ ಯಿಂದ ಬಂದಿದ್ದರು. ಮೋಟರ್ ಡ್ರೈವರ್ ಬಂದು, ವಿನತೆಗೊಂದು ಪತ್ರ ಕೊಟ್ಟು ನಿಂತ. ಅವಳ ಗಂಡನ ಪತ್ರವದು: "ಸಾಯಂಕಾಲ ನನ್ನ ಧನಿಗಳು ಕಾರು ಕಳುಹಿಸುತ್ತಾರೆ; ಹೋಗು. ಮಗುವನ್ನು ನೋಡಿಕೊಳ್ಳುವುದಕ್ಕೆ ಮಕ್ಕಳಿಬ್ಬರಿಲ್ಲವೆ? ನಾನೂ ಬೇಗ ಬರುತ್ತೇನೆ ಮನೆಗೆ. ನೀನು ಬರುವಾಗ ತುಸು ಹೆಚ್ಚು ವೇಳೆಯಾದರೂ ಯೋಚಿಸಬೇಕಿಲ್ಲ" ಎಂದು ಬರೆದಿದ್ದ. ಆ

ಕಾಗದ ಅವಳಿಗೆ ಏನೂ ಅರ್ಥವಾಗಲಿಲ್ಲ. ಸೇಠ್ ಗಿರಿಧರ್‌ಲಾಲನು, ಗಂಡನಿರುವ ವಿಮಾ ಕಂಪೆನಿಯ ಯಜಮಾನ–ಅಷ್ಟೇ ಅವಳಿಗೆ ಗೊತ್ತು. ತಮ್ಮ ಮನೆಗೂ ಆತ ಒಂದೆರಡು ಬಾರಿ ಬಂದಿದ್ದ. ಬಂದಾಗಿನ ನೆನಪುಗಳು ಮಾತ್ರ ಪ್ರಿಯವಾಗಿರಲಿಲ್ಲ. ಹಿಂದೆ ಬಂದಾಗ, ಉಪಾಹಾರ ಸ್ವೀಕರಿಸುತ್ತಿದ್ದಾಗಲೆಲ್ಲ ತನ್ನನ್ನೇ ನೋಡುತ್ತಿದ್ದ, ಅವನ ವಿಷಯದಲ್ಲಿ ಅವಳಿಗೆ ಒಳ್ಳೆಯ ಅಭಿಪ್ರಾಯ ಹುಟ್ಟಿರಲಿಲ್ಲ. ಈಗ ತಾನು ಅವನಲ್ಲಿಗೆ ಹೋಗುವುದೇತಕ್ಕೆಂದೂ ಅವಳಿಗೆ ಅರ್ಥವಾಗಲಿಲ್ಲ. ತುಂಬ ಯೋಚಿಸಿದಳು. ಆ ಪತ್ರದ ತಲೆ ಬುಡವಾಗಲಿಲ್ಲ. ಹಾಗೆ ಅಲ್ಲಿಗೆ ಹೋಗುವ ವಿಷಯದಲ್ಲಿ ಗಂಡ ಬೆಳಗ್ಗೆ ಏನನ್ನೂ ಹೇಳಿರಲಿಲ್ಲ–ಎಂದೆನಿಸಿ, ಡ್ರೈವರ್ ನೊಡನೆ "ನನಗೀಗ ಬರುವುದಕ್ಕಾಗುವುದಿಲ್ಲ" ಎಂದು ಹೇಳಿದಳು. ಆತ ಹೊರಟು ಹೋದ

ಒಂಬತ್ತು ಘಂಟೆಯ ಹೊತ್ತಿಗೆ ಗಾಂವಕರ ಮನೆಗೆ ಬಂದನು. ಇನ್ನೂ ಮನೆಯಲ್ಲಿಯೇ ಇದ್ದ ಹೆಂಡತಿಯೊಡನೆ "ನಿನ್ನನ್ನು ಕರೆಯಲಿಕ್ಕೆ ಕಾರ್ ಬರಲಿಲ್ಲವೆ? ನನ್ನ ಕಾಗದ ನಿನಗೆ ಸಿಗಲಿಲ್ಲವೇ" ಎಂದು ಕೇಳಿದ.

"ಯಾವುದೋ ಒಂದು ಕಾರು ಬಂದಿತ್ತು. ಬಂದವ ನಿಮ್ಮ ಚೀಟಿಯನ್ನೂ ಕೊಟ್ಟ. ನನಗೇನೂ ಅರ್ಥವಾಗಲಿಲ್ಲ. ನನಗೆ ಅಲ್ಲೇನು ಕೆಲಸವೆಂದು ನಾನು ಹೋಗಲೇ ಇಲ್ಲ. ಹಾಗೆ ಹೋಗಬೇಕಾದರೆ, ನಿಮ್ಮೊಂದಿಗೆ ಇನ್ನೊಂದು ದಿನ ಹೋಗಬಹುದಲ್ಲ" ಎಂದಳು. ಅವನ ಮನಸ್ಸಿಗೆ ತುಸು ಅಸಮಾಧಾನ ಉಂಟಾದ ಹಾಗೆ ಕಾಣಿಸಿತು. ಆ ರಾತ್ರಿ ಊಟವಾಗಿ ಇಬ್ಬರೂ ಜತೆಯಲ್ಲಿ ಮಲಗಿಕೊಂಡಾಗ ಗಾಂವಕರ ಸುಸ್ಪಷ್ಟವಲ್ಲದ ಮಾತಿನಲ್ಲಿ "ನಮಗೆ ಬೇಕಾದವರಲ್ಲಿಗೆ ಒಮ್ಮೆ ಹೋಗಿ ಬಾ ಎಂದರೆ ನಿನ್ನ ಜಂಬ ಬಿಡಲಿಲ್ಲ. ಅವರು ಕಾರನ್ನೂ ಕಳುಹಿಸಿಕೊಟ್ಟಿದ್ದರು. ಏನಾಗುತ್ತಿತ್ತು ಹೋಗಿದ್ದರೆ? ನನ್ನ ಭವಿಷ್ಯವೇ ಅವರ ಕೈಯಲ್ಲಿದೆ. ನಾಳೆಗೆ ಒಂದು ಬಡತಿಯೋ, ಪ್ರಯೋಜನವೋ ಆಗಬೇಕಾದರೆ ಅವರಿಂದಲೇ ಆಗಬೇಕು. ನಾನೇ ಹೋಗೆಂದು ನಿನಗೆ ಚೀಟಿ ಕಳುಹಿಸಿದ ಮೇಲೆ ಹೋಗಬಹುದಿತ್ತಲ್ಲ? ಆಗೊಂದು ತಪ್ಪಾಗುತ್ತಿರಲಿಲ್ಲ. ನಾವು ಸುಖವಾಗಿರಬೇಕು, ಕೈತುಂಬ ಹಣ ಬೇಕು ಎಂದಿದ್ದರೆ–ಇನ್ನೊಬ್ಬರ ಹಂಗಿನಲ್ಲಿರುವಾಗ ನಾವು ಸ್ವಲ್ಪ ಉದಾರವಾಗಿರಬೇಕು" ಎಂದು ಹೇಳಿದ ಆ ಮಾತುಗಳ ಅರ್ಥ ವಿನತೆಯನ್ನು ವಿಚಿತ್ರ ಯೋಚನೆಗಳಿಗೆ ಒಯ್ಯಬೇಕಾಯಿತು. ಅವಳು ಮಾತನಾಡಲಿಲ್ಲ.

ಗಂಡ ಆ ಕತ್ತಲಲ್ಲಿ ಅವಳ ಮುಖ ನೋಡಬೇಕಾದ ಸಂಕೋಚವಿಲ್ಲದೆ ತನ್ನಷ್ಟಕ್ಕೆ "ಇನ್ನೊಮ್ಮೆ ಹಾಗೆ ಕರೆ ಬಂದರೆ ಹೋಗದಿರಬೇಡ. ಅದೊಂದು ದೊಡ್ಡ ವಿಷಯವಲ್ಲ" ಎಂದು ಹೇಳಿದ.

ಯಾವುದೋ ಒಂದು ಚಿತ್ರಭೋಜನವೋ, ಸೇರಾದ ಊಟದ ಕರೆಯೋ ಆ ದಿನದ ಆಮಂತ್ರಣಕ್ಕೆ ಕಾರಣವಾಗಿದ್ದರೆ, ಆ ವಿಚಾರದ ಸುದ್ದಿಯನ್ನಾದರೂ ಹೇಳಬಹುದಿತ್ತು. ಬದಲು, ತಾನು ಅಲ್ಲಿಗೆ ಹೋಗಬೇಕಾದುದೇ ಮುಖ್ಯ ವಿಷಯ— ಎಂಬಂತೆ ಮಾತನಾಡುತ್ತಿದ್ದಾರೆ; ಅದರಿಂದಲೇ ಸೇಠಜಿಯ ಕೃಪೆ- ಎಂದು ಪತಿ ಹೇಳುವುದನ್ನು ಕೇಳಿದಾಗ ಅವಳ ಮೈ ಉರಿಯತೊಡಗಿತು. ದುಃಖಕ್ಕಿಂತ ಹೆಚ್ಚಾಗಿ ರೋಷ ಕುದಿಯತೊಡಗಿತು. ನಾಲಗೆ ತಡೆಯಲಾಗಲಿಲ್ಲ. "ಒಳ್ಳೆಯ ಮಾತಾಡುತ್ತಿದ್ದೀರಿ; ಅಂದು ಹಣಕ್ಕಾಗಿ ಬಂದ ಸೂಳೆ ನಾನು-- ಎಂದು ಹೇಳಿದಿರಿ. ಇಂದು ನಿಮ್ಮ ಬಡತಿಗಾಗಿಯೋ, ಹಣಕ್ಕಾಗಿಯೋ — ನನ್ನನ್ನು ಮಾರುವುದಕ್ಕೆ ಸಿದ್ಧರಾಗಿದ್ದೀರಿ. ಅಯ್ಯೋ! ನನ್ನ ಮಂಜುನಾಥ ತಿಳಿದೂ ತಿಳಿದೂ ಎಂಥ ಭಾಗ್ಯ ನನಗೆ ಕಟ್ಟಿಕೊಟ್ಟ" ಎಂದಳು. ಹಾಸಿಗೆಯಲ್ಲೇ ಎದ್ದು ಕುಳಿತಳು. ಗಂಡನ ಬಳಿಯಲ್ಲಿ ಮಲಗಿರುವುದಕ್ಕೂ ಅಸಹ್ಯವೆನಿಸಿತು. ದೂರಕ್ಕೆ ಸರಿದು ಕುಳಿತಳು. ಅಷ್ಟಕ್ಕೆ ಸಾವಿತ್ರಿ ನಿದ್ರೆಯಲ್ಲಿ ಕಿರುಚಿಕೊಂಡಳು. ತೊಟ್ಟಿಲ ಬಳಿಗೆ ಹೋಗಿ ಅದನ್ನು ತೂಗತೊಡಗಿದವಳು, ನಿದ್ರೆಯಿಂದ ಕಾಲು ಕುಸಿಯುವ ತನಕವೂ ನಿಂತು ತೂಗುತ್ತಲೇ ಇದ್ದಳು.

ಮರುದಿನ ಗಂಡ ಹೆಂಡಿರಲ್ಲಿ ತಿರುಗಿ ಮಾತುಕತೆಗಳಾಗಲಿಲ್ಲ. 'ನಾನು ಮಾತಾಡಿದರೆ ನನ್ನಾಣೆ' ಎನ್ನುವ ರೋಷ ಮನತೆಗಾಗಿತ್ತು. ಅವಳ ದುಃಖ ಹೇಳುವುದಕ್ಕಿಲ್ಲ; ಬಚ್ಚಿಟ್ಟುಕೊಳ್ಳುವುದಕ್ಕಿಲ್ಲ. ಮಕ್ಕಳೂ ಯಜಮಾನರೂ ಹೊರಟುಹೋದ ಮೇಲೆ ಆಕೆ ತನ್ನ ಕೂಸನ್ನು ಬಚ್ಚಿಕೊಂಡು, ರೈಲಿನಲ್ಲಿ ಕುಳಿತು ಪರೇಲಿಗೆ ಧಾವಿಸಿದಳು. ಅದು ರಜಾ ದಿನವಲ್ಲ ಎಂಬ ನೆನಪೂ ಅವಳಿಗಾಗಿರಲಿಲ್ಲ. ಬೀಗ ಹಾಕಿದ ಮಂಜುನಾಥನ ಬಿಡಾರ ನೋಡಿ ನಿಂತಳು. ಈಚೆಯ ಮನೆಯವರು ಕದ ತೆರೆದು ಆಮಂತ್ರಿಸಿದ್ದರಿಂದ ಅಲ್ಲಿ ಕುಳಿತು ಸಮಯ ಕಳೆದಳು. ರಾಜೀವಿ ಸಮೀಪದ ಆಫೀಸಿನಿಂದ ಬಂದಾಗಲೇ ಐದೂವರೆ ಘಂಟೆಯಾಗಿತ್ತು. ಘಂಟೆ ನೋಡಿದರೆ ಭಯವಾಯಿತು. ಮನೆಯಲ್ಲಿ ಮಕ್ಕಳು ಬರುವ ವೇಳೆ; ಇಲ್ಲಿ ತಾನಿದ್ದೇನೆ—ಎಂದು ಅಂಜಿ, ಅಂಜಿ

"ರಾಜೀವಿ, ಇವತ್ತೊಂದು ದಿನ ನನ್ನೊಂದಿಗೆ ಬಾ; ಮಂಜುನಾಥನಿಗೆ ಚೀಟಿ ಬರೆದಿಡು" ಎಂದು ಕಾರಣ ಹೇಳದೆ, ಒತ್ತಾಯಿಸಿ ಮಾಲಾಡಿಗೆ ಧಾವಿಸಿದಳು. ದಾರಿಯಲ್ಲಾದರೂ ಸುದ್ದಿ ಹೇಳುವುದಕ್ಕಿರಲಿಲ್ಲ. ಬಂಡಿಯಲ್ಲಿ ಜನರ ನಿಗ್ಗು ಹೆಚ್ಚಿತ್ತು; ನಿಲ್ಲುವುದಕ್ಕೆ ಜಾಗವಿರಲಿಲ್ಲ. ಮನೆಗೆ ಬರುವಾಗ ದೊಡ್ಡ ಮಕ್ಕಳಿಬ್ಬರೂ ತಾಯಿಗಾಗಿ ಕಾದು ಬೇಸತ್ತಿದ್ದರು. ಅವಕ್ಕೆ ಉಪಾಹಾರವನ್ನು ಕೊಟ್ಟು, ಅಡುಗೆ ಮಾಡಿ, 'ಹೊರಗೆ ಹೋಗಿಬರುವ' ಎಂದು ಕತ್ತಲಲ್ಲಿ ರಾಜೀವಿಯೊಡನೆ, ಬಳಿಯ ತೆಂಗಿನ ತೋಟಕ್ಕೆ ಹೋಗಿ ಕುಳಿತುಕೊಂಡು ಹಿಂದಣ ದಿನ ರಾತ್ರಿಯ ಕಥೆಯನ್ನು ಹೇಳತೊಡಗಿದಳು. 'ತಾನಾಗಲೀ ತನ್ನ ಗಂಡನಾಗಲೀ ಈ ಮೊದಲೇ ಗಾಂವಕರರ ಸ್ವಭಾವವನ್ನರಿಯದೆ ಹೋದೆವೇ'--ಎಂದು ರಾಜೀವಿಯೂ ಬೇಸರಗೊಂಡಳು. ಅವಳಿಗೂ ವಿನತೆಯ ಭವಿಷ್ಯದ ವಿಚಾರದಲ್ಲಿ ಭಯ, ಭೀತಿಗಳು ಉಂಟಾಗತೊಡಗಿದವು. ಆದರೂ ಸಮಾಧಾನ ಹೇಳಬೇಕಲ್ಲ: "ಯಾಕೆ ವಿನತೆ? ದುಡಿಯುವ ತ್ರಾಣವಿದ್ದರೆ ಯಾರಿಗೂ ಅಂಜಬೇಕಾಗಿಲ್ಲ. ನಮ್ಮ ದಾರಿ ಸರಿಯಾಗಿದ್ದರಾಯಿತು. ಅವರು ಕೀಸಿಗೆ ಇಳಿದ ಮೇಲೆ–ಹಣ ಹೇಗಾದರೂ ಸಂಪಾದಿಸಬೇಕು— ಮರ್ಯಾದೆ ಅದಕ್ಕೆ ಬೇಕಿಲ್ಲ–ಎಂದು ತಿಳಿದ ಹಾಗೆ ಕಾಣುತ್ತದೆ. ಇಷ್ಟು ಸಮಯ, ನಮಗೆ ಅವರ ಗುರುತಿದ್ದರೂ ಸ್ವಭಾವ ಹೀಗೆಂದು ಏನೂ ತಿಳಿಯದೆ ಹೋಯಿತಲ್ಲ. ಈಗ ತಿಳಿದೂ ಏನೂ ಮಾಡುವಂತಿಲ್ಲ. ಏನೂ ಆಗಲಿ, ನಿನಗೆ ತುಂಬ ತೊಂದರೆಯಾಗಿ ಕಂಡರೆ ನಮ್ಮ ಮನೆಗೆ ಬಂದಿರು" ಎಂದಳು. ಹೊತ್ತಾದುದರಿಂದ ಇಬ್ಬರೂ ತಿರುಗಿ ಮನೆಗೆ ಬಂದರು. ರಾತ್ರಿ ಬಂದ ಯಜಮಾನ ರಾಜೀವಿಯನ್ನು ಅಲ್ಲಿ ಕಂಡು ಸಂತೋಷಗೊಳ್ಳಲಿಲ್ಲ. ಆದರೂ ಗುರುತಿಲ್ಲದಂತೆ ನಟಿಸಲಿಲ್ಲ. ಒಂದೆರಡು ಮಾತನ್ನಾಡಿದ. "ಆಫೀಸ್ ದಿನಗಳ ನಡುವೆ ಏಕೆ ಬಂದೆ?" ಎಂದೂ ಕೇಳಿದ. ಅದರೆ ಆ ರಾತ್ರಿ ತನ್ನ ಹೆಂಡತಿಯಲ್ಲಿ 'ರಾಜೀವಿಯೊಡನೆ ಏನಾದರೂ ಹೇಳಿದೆಯಾ?' ಎಂದು ಕೇಳುವ ಧೈರ್ಯ ಅವನಿಗಾಗಲಿಲ್ಲ; ಅವಕಾಶವೂ ಇರಲಿಲ್ಲ. ಬಂದ ರಾಜೀವಿ ಬೆಳಗಿನ ನಸುಕಿಗೆ ರೈಲನ್ನು ಹಿಡಿದು ಪರ್ಕಳಕ್ಕೆ ಓಡಿದಳು. ಮಂಜುನಾಥನ ಕಿವಿಗೆ ಈ ಹೊಸ ಸುದ್ದಿಯನ್ನು ಮುಟ್ಟಿಸಿದಳು. ಗಾಂವಕರ ತಮ್ಮ ನಿತ್ಯದಂತೆ ಆಫೀಸಿಗೆ ಹೊರಬಿದ್ದ.

ಅವನ ಮನಸ್ಸು ಸ್ವಂತ ವಿಚಾರದಲ್ಲಿಯೂ, ಸ್ವಂತ ಸಂಸಾರದ ವಿಚಾರ

ದಲ್ಲಿಯೂ ಸಮೃದ್ಧಿಯಾಗಿರಲಿಲ್ಲ. ಹಾಗೆಂದು ಅವನ ಸ್ನೇಹಿತರಿಗಾಗಲೀ ಕಾರ್ಯಾಲಯದವರಿಗಾಗಲೀ ಅವನ ಒಳ ಹೊರಗುಗಳಾವುವೂ ತಿಳಿಯುತ್ತಿರಲಿಲ್ಲ. ಎಲ್ಲರ ತೋರಿಕೆಗೂ 'ಆತ ತುಂಬ ಶಕ್ತ; ಚೆನ್ನಾದ ಮನುಷ್ಯ; ಸೌಮ್ಯ ಸ್ವಭಾವಿ' ಎಂದು ತೋರುತ್ತಿತ್ತೇ ಹೊರತು, ವಿನತೆಯು ಮನಗಂಡಂಥ ಸ್ವಭಾವ, ಸ್ವರೂಪಗಳು ಇತರರಿಗೆ ಕಾಣುವುದಕ್ಕೆ ಸಿಕ್ಕಿರಲಿಲ್ಲ.

ಅವನಿಗೆ ಸೇಠ್ ಗಿರಿಧರಲಾಲನ ವಿಮಾ ಕಂಪೆನಿಯಲ್ಲಿ ನೌಕರಿಯಿತ್ತು. ಆಗ ಸಂಬಳವೂ ಚೆನ್ನಾಗಿತ್ತು. ಸಹವಾಸದೋಷದಿಂದ ಕುದುರೆಯ ಜೂಜಿನ ಹುಚ್ಚು ಹೆಚ್ಚಾಗುತ್ತ ಹೋಯಿತು. ಇದು ಹಿಂದಿನಿಂದಲೂ ಬಂದ ಹುಚ್ಚು. ಮೊದಲಿನ ಹೆಂಡತಿ ಇದ್ದಾಗ ಅವಳೂ ಅದನ್ನೆಲ್ಲ ಕಂಡು, ತಾಪಪಟ್ಟು, ಒಂದು ಬಾಣಂತಿತನದಲ್ಲಿ ತೀರಿಕೊಂಡಳು. ಋಣದ ತಾಪತ್ರಯ ಎಂದಿಗೂ ಅವನಿಗೆ ತಪ್ಪಿದಂತಿಲ್ಲ. 'ನಾಳೆ ಕೊಡುತ್ತೇನೆಂಬ ಭರವಸೆಯ ಮೇಲೆ ಎತ್ತಿದ ಸಾಲಗಳು ಹಲವು. ಈ ತಾಪತ್ರಯ ನಿವಾರಣೆಗಾಗಿ ತನ್ನ ಉದ್ಯೋಗದಲ್ಲಿ ಕುತಂತ್ರ ನಡೆಯಿಸಿ ಸ್ವಲ್ಪ ಹಣವನ್ನೂ ಅಪಹರಿಸಿದ್ದ. ಅದನ್ನು ಮರೆಯಿಸುವಷ್ಟು ಚಮತ್ಕಾರಿಕೆಯನ್ನೂ ತೋರಿದ್ದ. ಆ ವಿಮಾ ಕಂಪೆನಿಯನ್ನು ನಡೆಯಿಸುವವರಲ್ಲಿ ಗಿರಿಧರಲಾಲ್ ಮತ್ತು ಅವರ ಸೋದರರು ಮುಖ್ಯರು. ಈಗಂತು ಗಿರಿಧರಲಾಲನನ್ನು ಒಳಿತುಮಾಡಿಕೊಳ್ಳುವ ದಾರಿಯನ್ನು ಅವನು ಕಲಿತಿದ್ದುದರಿಂದ, ಭಯವಿಲ್ಲದೆಯೆ ದಿನಗಳನ್ನು ಸಾಗಿಸುತ್ತಿದ್ದ. ಆತನೂ ರೇಸಿನಲ್ಲಿ ಹಣ ಚೆಲ್ಲುವವನು. ಇಬ್ಬರೂ ಜತೆಗೆ ಹೋಗುವುದುಂಟು. ಯಾವುದೇ ಬಗೆಯಲ್ಲಿ ಅವನ ಪ್ರೀತಿಯನ್ನು ಸಂಪಾದಿಸುವ ದಾರಿ ಅವನದು. ಅದನ್ನು ಪಡೆಯುವ ಸಡಿಲುತನ ಗಿರಿಧರಲಾಲನದು. ವಿನತೆಯ ಮನೋಭಾವ ಅವನ ಇಚ್ಛೆಗೆ ವಿರುದ್ಧವಾಗಿರುವುದನ್ನು ಕಂಡ ಮೇಲೆ, ತನ್ನ ಧನಿಯ ಮನಸ್ಸಿಗೆ ಬೇಸರವಾಗುತ್ತದೆ ಎಂದು ಗಾಂವಕರ ತಿಳಿಯಬೇಕಾಯಿತು. ಅದರಿಂದಾಗಿ, ತಾನು ಅದೇ ವಿಮಾ ಮಂಡಳದಲ್ಲಿರುವುದು ತೊಡಕಿಗೆ ಕಾರಣವಾಗಬಹುದೋ, ಹಳೆಯ ಕಸಗಳು ಮೇಲೆ ಬಿದ್ದಾವೋ—ಎಂಬ ಭಯ ಉಂಟಾಯಿತು. ಆದುದರಿಂದ ಇನ್ನೂ ನಾಲ್ಕು ಕಡೆ ನೌಕರಿ ವಿಚಾರಿಸತೊಡಗಿದ. ಒಬ್ಬಿಬ್ಬರನ್ನು ಭೇಟಿಯಾದ. ಮುಂದಿನ ಒಂದೆರಡು ತಿಂಗಳಲ್ಲಿ ಹಳೆಯ ಕಚೇರಿಯಲ್ಲಿ ತನ್ನ ತಪ್ಪಿನ ಕುರುಹುಗಳನ್ನು ಉಜ್ಜಿ, ಹೊರಬಿದ್ದು, ಹೆಸರಾದ ಜಯಲಕ್ಷ್ಮಿ ವಿಮಾ ಕಂಪೆನಿಯಲ್ಲಿ

ಉದ್ಯೋಗ ಗಳಿಸಿಕೊಂಡ. ಹಾಗೆ ಗಳಿಸಿಕೊಳ್ಳುವ ತನಕ ವಿನತೆಯ ಚಿಂತೆಗಿಂತ, ಅವನ ಆತ್ಮಭಯವೇ ವಿಶೇಷವಾಗಿತ್ತು. ಈಗ ಬದಲು ಉದ್ಯೋಗ ದೊರೆಯಿತು. ಬಡತಿಯೂ ಬಂದಿತು. ಮುಖದಲ್ಲಿ ವ್ಯಕ್ತವಾಗದಂಥ ಹೆಮ್ಮೆ ಮನದಲ್ಲಿ ನಟ್ಟುಕೊಂಡಿತು. ಆಫೀಸಿನಲ್ಲಿ ತೋರಿಸಲಾರದ ದರ್ಪ ಮನೆಯಲ್ಲಿ ತೋರತೊಡಗಿದೆ. ಸ್ವಂತ ಮನೆ ಅಪ್ರಿಯವಾಗತೊಡಗಿತು; ಹೊರಗಿನ ಆವರಣ ಪ್ರಿಯವಾಗತೊಡಗಿತು. ಮನೆಗೆ ಬಂದಾಗ ವಿನತೆಯೊಡನೆ ಮಾತು ತುಂಬ ಕಡಿಮೆಯಾಗುತ್ತ ಬಂದಿತು. ಅವಳೋ? ಕೈಗೆ ಹಣ ಬಾರದೆ ಎಷ್ಟು ಕಷ್ಟವಾದರೂ ತಾನಾಗಿ ಕೇಳುವುದಿಲ್ಲ. ನೇರಾಗಿ ಅವಳ ಕೈಗೇನೇ ಆತ ಹಣವನ್ನಿರಿಸುವ ಕ್ರಮವೂ ಇರಲಿಲ್ಲ. ಮಕ್ಕಳ ಮುಖಾಂತರ ಹತ್ತು ಇಪ್ಪತ್ತು ರೂಪಾಯಿಗಳನ್ನು ಆತ ಕೊಡುತ್ತಾನೆ. ಅವಳನ್ನು ನೋಡುವಾಗಲೆಲ್ಲ ಸಂಶಯಗ್ರಸ್ತ ಕಣ್ಣುಗಳಿಂದಲೇ ನೋಡುತ್ತಾನೆ. ಇದು ಅವನ ಮನಸ್ಸಿನಲ್ಲಿ ಹುಟ್ಟಿದ ಹೊಸ ವಿಕಾರ. ಅದು ವಿಕಾರವೋ, ಅವನ ಮನಸ್ಸು ಇನ್ನಾವುದೋ ಕಾರಣದಿಂದ ಹಿಡಿಯುತ್ತಿದ್ದ ಕುಹಕ ಮಾರ್ಗವೋ-ಎಂಬುದೂ ಅವಳಿಗೂ ತಿಳಿಯುತ್ತಿರಲಿಲ್ಲ. ಆದರೆ ಆಕೆ ಎಲ್ಲದಕ್ಕೂ ತಟಸ್ಥೆ.

ತನಗಿನ್ನು ಮುಂದೆ ಸಂತೋಷದ ದಿನಗಳಿಲ್ಲ. ತನ್ನ ಸಂತೋಷವೇನಿದ್ದರೂ ಎಳೆಯ ಸಾವಿತ್ರಿಯಿಂದ. ಇನ್ನೂ ತನ್ನನ್ನು ವಿಶ್ವಾಸವಾಗಿ ಕಾಣುತ್ತಿರುವ ಮಾಲತಿ, ಮೋಹನರಿಂದ. ತನ್ನ ಯಜಮಾನರು ತನ್ನನ್ನು ನೋಡುತ್ತಿರುವ ಬಗೆಯನ್ನು ಕಂಡರೆ, ತನ್ನನ್ನೊಂದು ದಿನ ಅವರು ದಾರಿಯಲ್ಲಿ ತೊರಿದು ಬಿಡಲೂಬಹುದು—ಎಂಬ ಅನುಮಾನವೂ ಅವಳಿಗಾಗುತ್ತಿತ್ತು. ಆದರೆ ಬಳಿಗೆ ಬರುವ ಪತಿಯನ್ನು ತಾನಾಗಿ ನೂಕಿ, ತನ್ನ ದುರ್ದಿನವನ್ನು ಸಮೀಪ ಕರೆದುಕೊಳ್ಳುವುದಿಲ್ಲ-ಎಂದು ನಿರ್ಧರಿಸಿದ್ದಾಳೆ. ಅದು ಅವಳ ಸುಖಕ್ಕೊದಗದ ನಡತೆ. ಪತಿ, ಯಾವ ದಿನ ತನ್ನನ್ನು ಪಣ ಕನ್ಯೆಯನ್ನಾಗಿ ತಿಳಿದನೋ, ಆ ದಿನ ಅವಳ ಪ್ರೇಮದ ಜೀವನ ಕೊನೆಗಂಡಿತ್ತು. ಮಾತು ಮನಸ್ಸುಗಳಿಗೆ ಇರುವ ಮಿಡುಗುಹೋಯಿತು. ಪಣಕನ್ಯೆಯಾಗಿ ತನ್ನನ್ನೇ ಮಾರಲು ಹೊರಟ ದಿನ ಪ್ರೇಮವೆಂಬ ಮಾತು ಸುಳ್ಳಾಗಿ ಕಾಣಿಸಿತು. ಈಗುಳಿದುದು ದಾಂಪತ್ಯವಲ್ಲ. ದಾಂಪತ್ಯದಿಂದ ಪ್ರಾಪ್ತವಾದ ಒಂದು ಲೌಕಿಕ ಬಂಧನ. ಬಂಧಿಯಾದವಳು ಜೈಲಿನ ರಕ್ಷಕ ಕೊಟ್ಟದ್ದನ್ನುಣ್ಣಬೇಕು. ಆ ಆಹಾರಕ್ಕೆ ಸವಿಯೆಂಬುದಿಲ್ಲ,ರುಚಿಯೂ ಇಲ್ಲ-ಹಾಗಾಗಿದೆ ಪತಿಯೊಡನೆ ಅವಳ ಶರೀರ

ಸಂಪರ್ಕ. ಅವಳಾಗಿ ಅದನ್ನೆಂದೂ ಕೋರಿದವಳಲ್ಲ. ಮನಸ್ಸು ಮುನಿದಿದ್ದರೂ, ತನ್ನ ಕಾಮತಪ್ತ ಜೀವನಕ್ಕೆ ಅವಳನ್ನು ಆಹುತಿಯನ್ನಾಗಿ ಮಾಡುವ ಪತಿಯನ್ನು ನಿರಾಕರಿಸಲಾರಳು. ಅದರಿಂದ ಫಲಪ್ರಾಪ್ತಿಯೊಂದೇ—ಇನ್ನೊಮ್ಮೆ ಆಕೆ ಗರ್ಭಿಣಿಯಾದುದು. ಸಂಸಾರದ ಹೊರೆಯನ್ನು ಹೆಚ್ಚಿಸಿಕೊಂಡು ಮುಂದಿನ ಚಿಂತೆ ವಿಸ್ತರಿಸಿತು. ಬಾಳುವುದಕ್ಕೆ ಬೇಕಾದ ಸವಿಯಾಸೆ ಮಾತ್ರ ದೊರೆತಿಲ್ಲ; ದೊರೆಯುವಂತಿಲ್ಲ. ಈ ಎರಡನೆಯ ಬಾಣಂತಿತನಕ್ಕಾಗಿ ಅವಳು ಸಂತೋಷಿಸುವ ಬದಲು ತುಂಬ ಪರಿತಪಿಸಿದಳು. ಹಿಗ್ಗುವ ಬದಲು ಕುಗ್ಗಿದಳು. ರಾಜೀವಿ ಮಂಜುನಾಥರು ಆಗಾಗ ಬಂದು, ಆಗ ಆಕೆಯೂ ಗರ್ಭಿಣಿ, ಗಾಂವಕರರೊಡನೆ "ಪಾಪ, ಒಂದು ವರ್ಷದ ಪುಟ್ಟ ಮಗುವಿರುವಾಗ ಇಲ್ಲಿಯೇ ಬಾಣಂತನ ಕಷ್ಟವಾದೀತು. ನಿಮಗೂ ಕಷ್ಟವೇ. ನಮ್ಮ ರಾಜೀವಿಯೂ ತವರಿಗೆ ಹೋಗುತ್ತಾಳೆ. ಇವಳೂ ಹೋಗಲಿ. ನಿಮ್ಮ ಒಪ್ಪಿಗೆಯಿದ್ದರೆ ನಾನು ಅವಳ ತಮ್ಮನಿಗೆ ಕಾಗದ ಹಾಕುತ್ತೇನೆ—ಬಂದು ಕರೆದುಕೊಂಡು ಹೋಗುತ್ತಾನೆ. ಅವಳಾಗಿ ಹೇಳಿದ್ದಾಳೆಂದು ತಿಳಿಯಬೇಡಿ. ನನಗಾಗಿ ತೋರುವ ಮಾತು" ಎಂದರು. ಹೆರವರ ಮುಂದೆ ತನ್ನ ಕೊಂಕನ್ನು ತೋರಿಸಿಯೇ ಗೊತ್ತಿಲ್ಲದ ಸಂಭಾವಿತನಾದ ಗಾಂವಕರ ಥಟ್ಟನೆ "ಅದೇ ಒಳ್ಳೇದು. ನಾನೂ ಹಾಗೆಯೇ ಮಾಡಲು ಯೋಚಿಸಿದ್ದೆ. ಅವಳ ಮನಸ್ಸೂ ಗೆಲುವಾಗಿಲ್ಲ. ತಾಯನ್ನು ನೋಡಿ ಸ್ವಲ್ಪ ಸಂತೋಷವಾದರಾಗಲಿ" ಎಂದ. ತಾನೇ ಮುದ್ದೂರಿಗೆ ತಂತಿಯನ್ನು ಕೊಟ್ಟ. ರಾಮಕೃಷ್ಣ ಅಕ್ಕನನ್ನು ಕರೆದುಕೊಂಡು ಹೋಗಲು ಬಂದ. ಅವನೊಡನೆ ತಮ್ಮ ಸಹಧರ್ಮಿಣಿಯನ್ನೂ ಶಿಶುವನ್ನೂ ಕೊಟ್ಟು ಕಳುಹಿಸುವ ದಿನ ಹಡಗಿನ ಧಕ್ಕೆಯ ತನಕ ಹೋಗಿ 'ಜಾಗ್ರತೆ; ಹುಷಾರಾಗಿ ಬಾ' ಎಂದು ಮಾತಿನ ನಾಟಕವನ್ನು ಹೂಡಿ ಬಂದುದಾಯಿತು. ಅದೇ ಹಡಗಿನಲ್ಲಿ ಕಾರವಾರಕ್ಕೆ ಬಾಣಂತಿತನದ ಸಲುವಾಗಿ ರಾಜೀವಿಯೂ ಹೊರಟಳು.

ಹಡಗಿನಲ್ಲಿ ಹೋಗಿ ಕುಳಿತ ವಿನತೆ ಮಾತ್ರ, ಪತಿಯು ಹೊರಟು ಹೋದ ಮೇಲೆ, ಹಿಂದಕ್ಕೆ ಕಣ್ಣನ್ನು ಹೊರಳಿಸಲಿಲ್ಲ. 'ಅವರಿನ್ನು ನನ್ನನ್ನು ಕರೆಯಿಸುವುದುಂಟೇ!' ಎಂಬ ಯೋಚನೆಯನ್ನು ಹೊತ್ತೇ ಪಯಣವನ್ನು ಸಾಗಿಸಿದಳು.

# ಹದಿನೆರಡನೆಯ ಅಧ್ಯಾಯ

ತಾಯಿಯನ್ನು ಕಾಣುತ್ತೇನೆಂಬ ಹಂಬಲದಿಂದ ವಿನತೆ ತನ್ನ ಊರಿಗೆ ಬಂದಿದ್ದಳಾದರೂ–ಬರುವಾಗ, ಬಂದಾಗ, ಬಂದ ಮೇಲೆ, ಅವಳ ಮನಸ್ಸು ಚಿಂತಾಪೂರಿತವಾಗಿಯೇ ಇತ್ತು. ಆ ತನಕ ಪತಿಯ ಕೈಯಲ್ಲಿ ಅನುಭವಿಸಿದ ವಿಚಿತ್ರ ನಡವಳಿಕೆಗಾಗಿಯೂ ಆಕೆ ಚಿಂತಿಸುತ್ತಿದ್ದಳು; ನಾಳಿನ ಭವಿಷ್ಯವನ್ನು ನೆನೆದೂ ಚಿಂತಿಸಬೇಕಾಗಿತ್ತು. ಸುಖವೋ, ದುಃಖವೋ—ತನ್ನ ಭವಿಷ್ಯತ್ತನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂಬುದು ಅವಳ ಹಟ. ತನ್ನ ಮನಸ್ಸಿಗೆ ಎಷ್ಟು ನೋವಾದರೂ ಬಾಳು ಸಾಗಿಸಿಕೊಂಡು ಹೋಗುತ್ತೇನೆ; ಸೋತು ಮರಳಿದ್ದೇನೆ ಎಂದೆನ್ನಿಸಬಾರದು—ಎಂದು ಯೋಚಿಸುತ್ತಲೇ ಇರುತ್ತಾಳೆ. ಆದರೆ ಪತಿಯಿಂದ ತಿರುಗಿ ಕರೆ ಬಂದೀತು ಎಂಬ ಧೈರ್ಯ ಮಾತ್ರ ಇರಲಿಲ್ಲ. ಈಗ ಊರಿಗೆ ಬಂದು ಎರಡನೆಯ ಕೂಸೊಂದಕ್ಕೆ ತಾಯಿಯಾದಳು. ಅದು ಗಂಡು ಕೂಸು. ಅದರಿಂದ ಮನಸ್ಸಿಗೆ ಎಷ್ಟೋ ನೆಮ್ಮದಿಯಾಯಿತು. ಆ ಸುದ್ದಿಯನ್ನು ಗಂಡನಿಗೆ ತಿಳಿಸಿದರೂ ಅವನಿದ ಮಾರೋಲೆ ಬರಲಿಲ್ಲ. ಒಂದು ತಿಂಗಳ ಮೇಲೆ 'ನಿನ್ನ ಪತ್ರ ಬಂದಿತ್ತು' ಎಂಬ ಚುಟುಕಿನ ಉತ್ತರದಿಂದಲೇ ಸಮಾಧಾನಪಡಬೇಕಾಯಿತು. ಅದೇ ಪತ್ರದಲ್ಲಿ "ನೀನೆಷ್ಟು ದಿನ ಊರಲ್ಲಿರಬೇಕೆಂದು ಬಯಸುತ್ತೀಯಾ, ಅಷ್ಟು ಕಾಲ ಇದ್ದು ಬಾ" ಎಂದು ಬರೆದುದನ್ನು ನೋಡಿ ಭಯವೂ ಆಯಿತು. ಮೂರು ತಿಂಗಳುಗಳ ಕಾಲ. ತನ್ನ ಬಾಣಂತಿತನದ ದಣಿವು ಕಳೆದುಕೊಂಡ ಮೇಲೆ, ತಮ್ಮನನ್ನು ಕರೆದುಕೊಂಡು ಅವಳು ಮುಂಬಯಿಗೆ ಹೊರಟಳು. ತಾಯಿಯನ್ನು ವಂದಿಸಿ ಬೀಳ್ಕೊಟ್ಟಳು. ಮನೆಯಲ್ಲಿದ್ದಷ್ಟು ದಿನ ತಾನು ಅನುಭವಿಸಿದ ನೋವುಗಳನ್ನು ಅವರಿಗೆ ಹೇಳುವುದಕ್ಕೆ ಹೋಗಲಿಲ್ಲ. ಹೊರಡುವ ವೇಳೆ, ಗಂಡನಿಗೆ ತಂತಿ ಕೊಟ್ಟಿದ್ದಳಾದುದರಿಂದ ಗಾಂವಕರನು ರೈಲ್ವೆ ನಿಲ್ದಾಣಕ್ಕೇನೆ ವೇಳೆಗೆ ಸಮನಾಗಿ ಬಂದು ಕಾದು ನಿಂತಿದ್ದ. ಅಲ್ಲಿಂದ ಸ್ಥಳಿಕ ರೈಲು ಬಂಡಿಯ ಮೇಲೆ ಕುಳಿತು, ಮಾಲಾಡಿನ ಮನೆಯನ್ನು ಸೇರಿದರು.

ಮನೆಯಲ್ಲಿ ಅವಳ ಸವತಿಯ ಮಕ್ಕಳಿದ್ದಿರಲಿಲ್ಲ. ಮೋಹಿನಿಯನ್ನು ಯಲ್ಲಾಪುರದಿಂದ ಅವಳ ಅಜ್ಜನ ಮನೆಯವರು ಬಂದು ಕರೆದುಕೊಂಡು

ಹೋಗಿದ್ದರಂತೆ. ಮೋಹನನನ್ನು ಹಾಸ್ಟೆಲ್ ಒಂದಕ್ಕೆ ಹಾಕಿ ಅಲ್ಲಿ ವಾಸದ ಏರ್ಪಾಟು ಮಾಡಿದ್ದ. "ಇನ್ನು ಅವರನ್ನು ತಿರುಗಿ ಕರೆಯಿಸಬಾರದೇ?" ಎಂದರೆ 'ಯಾಕೆ, ಅವಸರವಿಲ್ಲ' ಎಂಬ ಪ್ರತ್ಯುತ್ತರ ಗಂಡನಿಂದ ಬಂದಿತು. ಭಾವ ರಾಮಕೃಷ್ಣ, ಇದ್ದಷ್ಟು ದಿನ ಗಾಂವಕರ ವಿನತೆಯೊಡನೆ ಯಾವ ಬೇಸರವೂ ಇಲ್ಲದಂತೆ ನಟಿಸಿದ. ಆತ ಹದಿನೈದು ದಿನಗಳ ಕಾಲ ಇದ್ದು ಊರಿಗೆ ಮರಳಿದೊಡನೆ ಅವನ ಬಣ್ಣ ಬದಲಾಯಿತು. ಹೊಸಬಣ್ಣವೇನಲ್ಲ-ಮೊದಲಿನ ಸ್ವಭಾವವೇ. ಕಿರಿಯ ಗಂಡು ಕೂಸಿಗಾಗಿ ಯಾವ ಸಂತೋಷವೂ ಅವನ ಮುಖದಲ್ಲಿ ವ್ಯಕ್ತವಾಗಲಿಲ್ಲ. ವಿನತೆಯ ಮಕ್ಕಳು ತನ್ನದಲ್ಲವೋ ಎಂಬ ವಿಚಿತ್ರ ರೀತಿಯಲ್ಲಿ ವರ್ತಿಸತೊಡಗಿದ. ಆದರೆ ಆ ವರ್ತನೆಯು ಎಳೆಯ ಮಕ್ಕಳಿಗೇನೂ ಅರ್ಥವಾಗುವಂತಿಲ್ಲ. ದಿನದಲ್ಲಿ, ಮನೆಯಲ್ಲಿ ತಂದೆ ವೇಳೆ ಕಳೆದರಲ್ಲವೇ, ಮಕ್ಕಳಿಗೆ ತಂದೆಯ ಪ್ರೇಮವೇನೆಂದು ತಿಳಿಯುವುದು?

ರಾಮಕೃಷ್ಣ ಹೊರಟುಹೋದ ತುಸು ದಿವಸಗಳಲ್ಲಿ ತನ್ನ ಪತಿಯ ಸಂಶಯದ ಕಣ್ಣುಗಳಿಗೆ ನಿಶ್ಚಯವಾದ ಬೇರೆಯೇ ಅರ್ಥವಿದೆ ಎಂಬುದು ಅವಳಿಗೆ ತಿಳಿಯತೊಡಗಿತು. ಇದ್ದಕ್ಕಿದ್ದಂತೆ ಅವನು ಒಂದು ದಿನ ರಾತ್ರಿ "ನೀನು ಅಚೀಚೆ ಮನೆಗಳಿಗೆ ನಿನ್ನ ಇಷ್ಟ ಕಂಡಂತೆ ಹೋಗಿಬರುತ್ತೀಯಾ. ಊರಿಗೆ ಹೋದಾಗ ನಿನ್ನ ಸ್ವಭಾವ ಎಂಥದಿತ್ತೆಂದು ನನಗೆ ತಿಳಿಯುವುದು ಶಕ್ಯವಾಯಿತು. ಅದರಿಂದಲೇ ನಾನು ನನ್ನ ಎರಡೂ ಮಕ್ಕಳನ್ನು ಕಳುಹಿಸಿಕೊಟ್ಟೆ" ಎಂದ. ವಿನತೆ ಅದಕ್ಕೆ ಮಾತು ಕೆದಕಿ ಇನ್ನೇನಾದರೂ ಅಪವಚನ ಕೇಳುವುದು ಬೇಡೆಂದು ಮೌನವಾದಳು.

ಅದೂ ಕಷ್ಟವೇ! "ನಾನು ಹೇಳಿದ ಮಾತಿನ ಅರ್ಥವಾಗುತ್ತದೆಯಲ್ಲ?" ಎಂದ ತಿರುಗಿ.

"ಅರ್ಥ? ಹೇಳಿದವರಿಗೇನೆ ಗೊತ್ತು! ನಾನು ತಪ್ಪಿ ನಡೆದಿದ್ದರೆ ನನಗೆ ಗೊತ್ತಾಗಬೇಕು."

"ಚಮತ್ಕಾರದ ಮಾತುಗಳಿಂದ ನನ್ನನ್ನು ವಂಚಿಸಲು ಬರುತ್ತದೆಂದು ತಿಳಿಯಬೇಡ."

"ನನ್ನ ಚಮತ್ಕಾರವನ್ನು ಯಾರಲ್ಲಿ ತೋರಿಸಬೇಕು? ಅದನ್ನು ತೋರಿಸುವುದಕ್ಕೆ ತಾಯಿಯ ಹತ್ತಿರ ಜಗಳಮಾಡಿಕೊಂಡು ಮನೆ ಬಿಟ್ಟು ಇಲ್ಲಿಗೆ ಬಂದು, ಕಣ್ಮುಚ್ಚಿ, ನಿಮ್ಮೊಡನೆ ಸಂಸಾರವೇಕೆ ಮಾಡುತಿದ್ದೆ? ನನ್ನ ಪಾಲಿಗೆ

ಕಟ್ಟಿಟ್ಟ ಸುಖ, ದುಃಖ ಏನಿದೆಯೋ ಅದನ್ನು ಅನುಭವಿಸುವುದಕ್ಕೆ ಬಂದೆ. ನೀವು ಬಾ ಎಂದು ಕರೆಯದಿದ್ದರೂ ನಾನಾಗಿ ಇಲ್ಲಿಗೆ ಬರಬಾರದಿತ್ತೆ?"

"ನೀನು ನನಗಾಗಿ ಹಿಂದೆಯೂ ಬಂದವಳಲ್ಲ, ಇಂದೂ ಬಂದವಳಲ್ಲ."

"ದೇವರು ನಿಮಗೆ ಯಾವ ತೆರನ ಬುದ್ಧಿ ಕೊಡುತ್ತಾರೋ ಹಾಗೆ ಮಾತನಾಡಿ. ನಾನೇನೂ ಅನ್ನುವುದಿಲ್ಲ. ನನ್ನ ಭವಿಷ್ಯ ಹೇಗಾಗುತ್ತದೆ, ನನ್ನ ಪಾಲಿನ ಸುಖ ಏನು ಎಂಬುದನ್ನೆಲ್ಲ ಬಲ್ಲೆ; ಅನುಭವಿಸುತ್ತೇನೆ. ಹೀಗೆ ಮಾತನಾಡಿ ಏಕೆ ನನ್ನನ್ನು ಹಿಂಸಿಸುತ್ತೀರೋ ನನಗೆ ಗೊತ್ತಾಗುವುದಿಲ್ಲ. ಆ ದಿನ, ನೀವು ಹೇಳಿದ ಹಾಗೆ ನಾನು ಕುಣಿದಿದ್ದರೆ, ಮರ್ಯಾದೆಯನ್ನು ಮಾರಿಕೊಂಡಾದರೂ ಸುಖವಾಗಿರಬಹುದಿತ್ತೋ ಏನೋ. ಅಂಥ ಸುಖವನ್ನು ಊರಲ್ಲಿದ್ದೇ ನಾನು ಪಡೆಯಬಹುದಿತ್ತು. ಅದು ಬೇಡ; ಮಾನವಂತಳಾಗಿ ಬದುಕಬೇಕು–ಎಂದು ಬಯಸಿ ನಾನಿಲ್ಲಿಗೆ ಬಂದೆ. ಅದು ತಪ್ಪೆಂದು ನನಗೆಂದೂ ಕಾಣುವುದಿಲ್ಲ. ನನ್ನ ಆತ್ಮಸಾಕ್ಷಿಗೆ ಸರಿಯಾಗಿ ಬದುಕುತ್ತೇನೆ. ನಿಮಗೆ ಪ್ರೀತಿ ಕಂಡರೆ ಇಷ್ಟು ಅನ್ನ ನೀರು ಕೊಡಿ; ಇಲ್ಲವಾದರೆ ಇಲ್ಲಿಯೇ ಉಪವಾಸ ಬಿದ್ದು ಸಾಯುತ್ತೇನೆಯೇ ಹೊರತು ಹೆದರಿ ಓಡುತ್ತೇನೆ ಎಂದು ತಿಳಿಯಬೇಡಿ" ಎಂದು ನುಡಿದು ಮೂಕಳಾದಳು. ಅನಂತರ ತಾಸೆರಡು ತಾಸುಗಳ ತನಕ, ಗಾಂವಕರ ತನ್ನ ನಾಲಿಗೆಯನ್ನು ವಿಚಿತ್ರವಾಗಿ ಹರಿಯಗೊಟ್ಟ. ಆ ಮಾತಿನ ಪ್ರವಾಹ ಹೀನತೆಯನ್ನು ಕೊರೆಯುತ್ತಿದ್ದರೂ ಅವಳಿಗೆ ಅವರ ಸ್ವಭಾವದ ಪರಿಚಯವಿದ್ದುದರಿಂದ, ಅಂಥ ಮಾತುಗಳನ್ನು ಕೇಳುವುದು ತನ್ನ ಹಣೆಯಲ್ಲಿ ಬರೆದಿದೆ ಎಂದು ತಿಳಿದು ಸುಮ್ಮನಾದಳು. ಆದರೆ ಮನಸ್ಸು ಸುಮ್ಮನಾಗಿರಲಿಲ್ಲ. ರಾತ್ರಿಯೆಲ್ಲ ತನ್ನ ಭವಿಷ್ಯದ ಭಯ ಮೂಡಿಕೊಂಡಿತ್ತು. ತಾನು ಹೇಗೆ ಬಾಳಲಿ, ಹೇಗೆ ತನ್ನ ಮುಂದಿನ ಪ್ರಶ್ನೆಗಳನ್ನು ಇದಿರಿಸಲಿ; ಸಂಸಾರದಲ್ಲಿ ನೆಚ್ಚಿಬಂದ ಆ ಎರಡು ಕೂಸುಗಳನ್ನು ಹೇಗೆ ಬೆಳೆಯಿಸಲಿ–ಎಂಬ ಚಿಂತೆಗಳು ಅವಳನ್ನು ಅನಂತವಾಗಿ ಕೊರೆಯತೊಡಗಿದುವು. ನಾಳೆ ಏನಾದೀತೆಂದು ಮುಂಗಾಣುವ ಶಕ್ತಿ ಅವಳಿಗಿಲ್ಲ. ಸ್ಪಷ್ಟವಾಗಿ ಕಾಣಿಸದ ಭವಿಷ್ಯಕ್ಕಾಗಿ, ಅವಳು ಪರಿಹಾರವನ್ನು ಯೋಚಿಸುವುದಕ್ಕೂ ಇಲ್ಲ. ಅಳುವುದಕ್ಕೆ ಸಹ ಕಣ್ಣೀರಿನ ಬುಗ್ಗೆ ಬತ್ತಿ ಹೋಗಿತ್ತು. ತುಟಿಗಳನ್ನು ಕಚ್ಚಿಕೊಂಡು, ಕಿರಿಯ ಕೂಸಿನ ಮೇಲೆ ಕೈಯಾಡಿಸುತ್ತ ನಿದ್ದೆಯಿಲ್ಲದ ರಾತ್ರಿಯೊಂದನ್ನು ಕಳೆದಳು.

ಬೆಳಕು ಹರಿಯಿತು. ನಿದ್ದೆಯಿಲ್ಲದ ಶರೀರಾಯಾಸ ಅವಳನ್ನು ಕಾಡುತಿತ್ತು. ಪತಿಯ ಮಾತುಗಳು ಮನಸ್ಸನ್ನು ಕೊರೆಯುತಿದ್ದವು. ಮೈಮನಗಳೆರಡು ಬೆಂದಿದ್ದರೂ ಎಂದಿನಂತೆ ನಿತ್ಯದ ಕೆಲಸತೊಡಗಿದಳು. ಒಂಬತ್ತು ಗಂಟೆಯ ವೇಳೆಗೆ ಗಂಡನಿಗೆ ಅನ್ನ ಬಡಿಸಿದಳು. ಸಟ್ಟನೆ ಉಡುಗೆ ಉಟ್ಟು ಗಾಂವಕರ್ ಊಟಮುಗಿಸಿ ಹೊರಕ್ಕೆ ಬಂದ. ಹೊರಕ್ಕೆ ಬಂದು, ಮುಂಬಾಗಿಲಿನ ಕದ ಎಳೆದುಕೊಂಡು, ತನ್ನ ಪೂರ್ವ ಯೋಜನೆಯಂತೆ, ಕದಪಿಕ್ಕಿ ಬೀಗಹಾಕಿ ಹೊರಟೇ ಹೋದ. ಬೀಗಪಿಕ್ಕುವ ಸದ್ದು ವನಿತೆಗೆ ಕೇಳಿಸಿತು. ಆಗವಳು ಊಟ ಮಾಡುತಿದ್ದಳು. ಕೈ ತೊಳೆದುಕೊಂಡು ಎದ್ದು ಬಂದಳು. ನಿಜಕ್ಕೂ ಹೊರಗಣ ಬಾಗಿಲು ಹಾಕಿತ್ತು. "ಇಷ್ಟನ್ನು ಮಾಡುವುದಕ್ಕಾಗಿಯೇ ನಿನ್ನೆಯ ಆರೋಪಗಳು" ಎಂದು ಅವಳಿಗೆ ಹೊಳೆಯಿತು. ತೆರೆಯಲಾರದ ಬಾಗಿಲನ್ನು ಮುಟ್ಟಿ ನೋಡಿದಾಗಲೇ ಕಂಬನಿ ಉದುರತೊಡಗಿತು. ಒಳಗೆ ಹೋಗಿ ಮಂಚದ ಮೇಲೆ ಕುಳಿತುಕೊಂಡಳು. ಕಂಬನಿ ಉದುರುತ್ತಲೇ ಇತ್ತು. "ಇಷ್ಟು ಅಪನಂಬಿಕೆ ಇದ್ದರೆ 'ನೀನು ಮನೆಗೆ ಬರಬೇಡ' ಎಂದು ಬರೆಯಬಹುದಿತ್ತಲ್ಲ. ಹೆಂಡತಿಯ ಮೇಲೆ ಸಂಶಯವಿರುವ ಯಾವ ಗಂಡನಿಗೂ ಚಿಂತೆ ತಪ್ಪಿದ್ದಲ್ಲ. ಆದರೆ ನಾಲ್ಕು ಮಂದಿಗೆ ಕಾಣಿಸುವಂತೆ ಅಸಹ್ಯ ಪರಿಸ್ಥಿತಿಯಲ್ಲಿ ತನ್ನನ್ನು ಸೆರೆಮನೆಯಲ್ಲಿರಿಸಿ ಹೋಗಬೇಕಾದ ಪ್ರಮೇಯವಿರಲಿಲ್ಲ. 'ನೀನು ಮನೆಯಿಂದ ತೊಲಗು' ಎಂದಿದ್ದರೆ ಎಷ್ಟೋ ಚೆನ್ನ. ಹೀಗೆ ಮಾಡುವುದು ಧೈರ್ಯವಿಲ್ಲದ ಭೀರುವಿನ ಕೆಲಸ" ಎಂದಂದುಕೊಂಡು ಅಳುತ್ತಲೇ ಕುಳಿತಳು. ಕಿರಿಯ ಕೂಸು ಅಳತೊಡಗಿದಾಗ, ಅದಕ್ಕೆ ಹಾಲೂಡಲು ಹೋದಳು. ತನ್ನ ಅಳುವನ್ನು ಮರೆತಳು. 'ಒಂದು ಗಳಿಗೆ ಅಂಗಳದ ತನಕ ಮಕ್ಕಳನ್ನು ಆಡಿಸುವುದಕ್ಕೂ ಕೊಂಡುಹೋಗದಂತೆ ಮಾಡಿದರು. ಈ ರಾತ್ರಿ ಸ್ಪಷ್ಟವಾಗಿ ಕೇಳುತ್ತೇನೆ. ಹೀಗೆಲ್ಲ ಮಾಡಬೇಕಾಗಿಲ್ಲ. ನಿಮಗೆ ನಾನು ಬೇಡವೆಂದು ಕಂಡರೆ ಹಾಗೆಯೇ ಹೇಳಿಬಿಡಿ. ಹೊರಟುಹೋಗುತ್ತೇನೆ. ಯಾರು ಎಷ್ಟು ನಿಷ್ಕರುಣಿಗಳಾದರೂ, ಉಂಟುಮಾಡಿದ ದೇವರೊಬ್ಬನಿದ್ದಾನಲ್ಲ; ಸತ್ಯಾಸತ್ಯ ಬಲ್ಲವ. ಅವನಿಗೆ ಕರುಣೆ ಇರುವಷ್ಟು ದಿನ ಬದುಕಬಲ್ಲೆ' ಎಂದಂದುಕೊಂಡು ಕುಳಿತಳು. ಆದರೆ ಈ ಬಹಿರಂಗದ ಅವಮಾನವನ್ನು ನೆನೆದಾಗಲೆಲ್ಲ, ಎದೆ ತಳಮಳಿಸುತಿತ್ತು.

ಮಧ್ಯಾಹ್ನ ಊಟಮುಗಿಸಿಕೊಂಡು, ಆಕೆಯ ಗುಜರಾತಿ ಗೆಳತಿ

ಕೃಷ್ಣಾಬೆನ್ ಬಂದು ಕದ ತಟ್ಟಿದಳು. "ವಿನತಾ ಬಾಯಿ, ಕದ ತೆರೆಯಿರಿ" ಎಂದು ಕೇಳುತ್ತಲೇ, ಅವಳಿಗಿನ್ನೊಮ್ಮೆ ದುಃಖ ಉಕ್ಕಿ ಬಂದಿತು. ಆದರೆ ಹೆರ ವರ ಮುಂದೆ ಮನೆಯ ಕೊಳಕನ್ನು ತೋಡಿಕೊಳ್ಳುವುದಕ್ಕೆ ಮನಸ್ಸಾಗದೆ "ಅವರಿಲ್ಲೋ ಮರೆವಿನಿಂದ ಹೊರಗಿನ ಬಾಗಿಲಿಗೆ ಬೀಗ ಹಾಕಿ ಆಫೀಸಿಗೆ ಹೋಗಿಬಿಟ್ಟರು" ಎಂದಳು.

"ಹಾಗಾದರೆ ಇವತ್ತೆಲ್ಲ ನಿಮಗೆ ಜೈಲುವಾಸವೇನು?"

"ಹಾಗೇ ಕಾಣಿಸುತ್ತದೆ; ನೆನಪಾಗಿ ಬೇಗ ಬಂದರಾಯಿತು. ಇಲ್ಲದೆ ಹೋದರೆ ರಾತ್ರಿಯ ತನಕ ಜೈಲೇ" ಎಂದುಕೊಂಡು, ಮನೆಯಲ್ಲೇನೂ ಆಗಿರದಂತೆ, ಅವರೊಡನೆ ಕಿಟಿಕಿಯ ಸರಳುಗಳ ಎಡೆಯಿಂದಲೇ ಮಾತ ನಾಡಿ ಕಳುಹಿಸಿಕೊಟ್ಟಳು. ಸಂಜೆ ಸಾವಿತ್ರಿ ಹೊರಗೆ ಹೋಗಬೇಕೆಂದು ಹಟ ಹಿಡಿದಾಗ ವಿನತೆಯ ವ್ಯಥೆಯನ್ನು ಹೇಳುವುದಕ್ಕಿಲ್ಲ. ಅನಂತರ ಹಾಲಿನ ಭಯ್ಯಾ ಬಂದ. ಕೂಗಿ ಕರೆದು, ಪರಿಸ್ಥಿತಿಯನ್ನು ಕಂಡು ನಕ್ಕು, ಹಾಲಿನ ಪಾತ್ರೆಯನ್ನು ಹೊರಗೇನೇ ಇರಿಸಿಹೋದ. ಗಳಿಗೆ ಸರಿದಂತೆ ಅಪಮಾನದ ನೋವೂ, ಅದು ಹತ್ತು ಜನಗಳಲ್ಲಿ ಹಬ್ಬಬಹುದಾದ ಗತಿ, ರೀತಿಗಳನ್ನೆಲ್ಲ ಊಹಿಸಿ ಅಳುತ್ತ ಕುಳಿತಳು. ಅಡುಗೆಯ ನೆನಪಾಯಿತು. ಒಲೆ ಹೊತ್ತಿಸಲು ಕಡ್ಡಿಪೆಟ್ಟಿಗೆ ಮುಗಿದುಹೋಗಿತ್ತು. ನೆರೆಮನೆಯವರನ್ನು ತಿರುತಿ ಕೂಗಿ ಕರೆದು ಕಡ್ಡಿಪೆಟ್ಟಿಗೆಯನ್ನೊದಗಿಸಿಕೊಂಡು ಅಡುಗೆಮಾಡಿದಳು. ರಾತ್ರಿ ಒಂಬತ್ತು ಘಂಟೆಗೆ ಗಾಂವಕರರ ಸವಾರಿ ಬಂದಿತು. ಮನೆ ಜಗುಲಿಯನ್ನೇರುವ ಮುಂಚೆ ಮಧ್ಯಾಹ್ನ ಬಂದು ಹೋದ ಕೃಷ್ಣಾಬೆನ್ "ಗಾಂವಕರ್ ಭಾಯಿ, ಏನು ಮಾಡಿ ಹೋಗಿದ್ದರಿ? ಅಷ್ಟು ಮರವೆಯೋ? ಬೀಗಹಾಕಿ ಹೋಗಿಬಿಟ್ಟಿರಲ್ಲ" ಎಂದು ಪರಿಹಾಸ್ಯ ಮಾಡಿದರೂ, ಉತ್ತರಕೊಡದೆ ಮನೆಗೆ ಬಂದು, ಕದ ತೆರೆದ. ಭಯ್ಯಾ ತಂದಿರಿಸಿದ ಹಾಲು ಹೊರಗೇನೇ ಇತ್ತು. ಅಳುವ ಮಗು ವಿಗೆ ಹಾಲನ್ನೂ ಕೊಡುವುದಕ್ಕೂ ಆಗಿರಲಿಲ್ಲ. ಆದರೂ ಆ ವಿಚಾರದಲ್ಲಿ ಮಾತನಾಡುವುದಿಲ್ಲವೆಂದುಕೊಂಡ ವಿನತೆ ಸುಮ್ಮನಿದ್ದಳು.

ಮರುದಿನ ಅವನ ನಡತೆಯಲ್ಲಿ- ತುಸು ಬದಲಾವಣೆಯಾಯಿತು. "ನಿನಗೇನಾದರೂ ಬೇಕಾಗುವುದಿದ್ದರೆ, ಅದನ್ನೆಲ್ಲ ನಾನು ಹೊರಡುವ ಮುಂಚೇನೇ ತಂದಿರಿಸಿಕೋ. ಅದೆಲ್ಲ ಕಷ್ಟವಾಗಿ ಕಾಣುವುದಾದರೆ ನಿನಗೆ ಬೇಕಾದ ಹಾಗೆ ಮಾಡು" ಎಂದನು. ವಿನತೆ ಉತ್ತರಿಸಲಿಲ್ಲ. ಅವಳ

ಮನಸ್ಸಿಗೂ ದಿಟ್ಟತನ ಪ್ರಾಪ್ತಿಸಿತ್ತು. 'ನನ್ನ ಧೈರ್ಯ, ಹಟಗಳನ್ನು ತೂಕ ಮಾಡಲು ಹೊರಟಿದ್ದಾರೆ. ಮಾಡಿಕೊಳ್ಳಲಿ. ಇದರಿಂದ ನನ್ನೊಬ್ಬಳ ಮರ್ಯಾದೆಯನ್ನು ಕಳೆಯಬಹುದೆಂದು ಅವರು ಯೋಚಿಸಿದ್ದಾರೆ. ನೆರೆಕರೆಯವರ ಮುಂದೆ ಎಲ್ಲರ ಮರ್ಯಾದೆ ಹೋಗುತ್ತದೆ ಎಂಬ ಯೋಚನೆಯನ್ನು ಮಾಡುವ ಹಾಗಿಲ್ಲ. ಮಾತಲಿ, ಬಿಡಲಿ; ನನಗೇನು?' ಎಂದು ಸುಮ್ಮನಾದಳು. ಮರುದಿನ ಮುಂಚಿನಂತೆ ಬೀಗಹಾಕಿ ಹೊರಟುಹೋದ ಮೇಲೆ, ಬೇಕೆಂದೇ, ನೆರೆಮನೆಯ ಗುಜರಾತಿ ಹೆಂಗಸು ಕೃಷ್ಣಾ ಬೆನ್, ವಿನತೆಯ ಮನೆಗೆ ಬಂದಳು. ಅಂದೂ ಕದವಿಕ್ಕಿದುದನ್ನು ನೋಡಿದಳು. "ವಿನತಾ ಬಾಯಿ, ನೀವು ಹೇಳದಿದ್ದರೂ ನಮಗೆ ಇದೆಲ್ಲ ಗೊತ್ತಾಗುವುದಿಲ್ಲವೆ? ನಿಮ್ಮ ಪತಿಯ ಸ್ವಭಾವ ನಮಗೇನೂ ಹೊಸತಲ್ಲ. ಎಂದಿನಿಂದ ನಾವು ಇಲ್ಲಿದ್ದವರು. ಅವರ ಹಿಂದಿನ ಹೆಂಡತಿ ಇಲ್ಲಿದ್ದಾಗಲೂ ನಾವು ಇದ್ದೆವು. ಅವಳಿಗೂ ಈ ಬಗೆಯ ಹಿಂಸೆಯನ್ನು ಕೊಟ್ಟರು. ಪುಣ್ಯಕ್ಕೆ ಸಾವು ಬಂದು ಅವಳು ಪಾರಾದಳು. ಈಗ ನಿಮ್ಮ ಕೈಹಿಡಿದು ನಿಮ್ಮನ್ನು ಬಲಿಕೊಡುವುದಕ್ಕೆ ಯೋಚಿಸುತ್ತಿದ್ದಾನೆ. ಏನೂ ಬುದ್ಧಿಯಿಲ್ಲದ ಮನುಷ್ಯ. ರಾತ್ರಿ ಬರಲಿ—ನಿಮಗೆ ಹೇಳಲಿಕ್ಕೆ ಬಾಯಿ ಬಾರದಿದ್ದರೆ ನಾನು ಹೇಳುತ್ತೇನೆ" ಎಂದಳು. ಒಳಗಿನಿಂದ ಗಟ್ಟಿಯಾಗಿ ಉತ್ತರಿಸುವುದಕ್ಕೆ ವಿನತೆಗೆ ಗಂಟಲಿಲ್ಲದಾಯಿತು. ಅವಳು ಗೆಳತಿಯ ಮುಖವನ್ನು ನೋಡಿ "ಅಕ್ಕಾ, ಹೆಣ್ಣಾಗಿ ಹುಟ್ಟಿದ ಮೇಲೆ ಏನು ಕಷ್ಟ ಬಂದರೂ ಅನುಭವಿಸಬೇಕು" ಎಂದಳು.

"ಮೊತ್ತಗೆ ಕುಳಿತರೆ ಅನುಭವಿಸಬೇಕಾಗುತ್ತದೆ. ನಿಮಗೇನು ಅಭಿಮಾನವಿಲ್ಲವೇ? ಜೀವವಿಲ್ಲವೆ? ತ್ರಾಣವಿಲ್ಲವೇ? ಗಂಡಸರಿಗೆ ತಾವು ಮಾರಿಹೋಗಿದ್ದೇವೆ-ಎಂದು ತೋರಿಸಿಕೊಂಡರೆ, ಹೆಣ್ಣು ಬಾಳ್ವೆ ಮಾಡುವುದಕ್ಕಿಲ್ಲವಾದೀತು. ಇಂಥ ಗಂಡನ ಕೈ ಹಿಡಿಯುವುದಕ್ಕಿಂತ ನರಕದಲ್ಲಿ ಸುಖವಾಗಿರಬಹುದು"ಎಂದು ಏನೇನೋ ಹೇಳಿ ಹೊರಟುಹೋದಳು. ವಿನತೆಯ ಸುಸ್ವಭಾವವನ್ನು ಚೆನ್ನಾಗಿ ಬಲ್ಲ ಆಕೆಗೆ, ತನ್ನಂತಿರುವ ಇನ್ನೊಂದು ಜೀವಕ್ಕೆ ಈ ಬಗೆಯ ಅಪಮಾನವಾದುದು ಇಷ್ಟಿಷ್ಟೂ ಸಹಿಸದಾಗಿತ್ತು. ಹಿಂದೆ ಆತನ ಮೊದಲಿನ ಹೆಂಡತಿ ಇದ್ದಾಗ, ಗಾಂವಕರರಿಗೆ ಬುದ್ಧಿ ಹೇಳಹೋಗಿ ಆಕೆ ನಿಷ್ಠುರಕ್ಕೆ ಗುರಿಯಾದುದುಂಟು. ಅವಳು ಸತ್ತ ಬಗೆ; ಅನಂತರ ಒಂದೊಂದಾಗಿ ಬೆಳಕಿಗೆ ಬಂದ ಗಾಂವಕರನ ಸ್ವಭಾವ, ಕೀರ್ತಿ—ಅವಳ

ಮನಸ್ಸಿನಲ್ಲಿ ಅವನನ್ನು ಕುರಿತಾದ ನಿಷ್ಠುರವನ್ನೇ ಹುಟ್ಟಿಸಿದ್ದವು. ಹೀಗಾಗಿ ಆ ರಾತ್ರಿ ಆತ ಹಿತ್ತಿಲಿನ ಬಾಗಿಲಿಂದ ಒಳಹೊಕ್ಕೊಡನೆಯೇ ತನ್ನ ಗಂಡನನ್ನು ಕರೆದಳು. ಆಚೀಚಿನ ಮನೆಯವರನ್ನೂ ಸಮೀಪ ಕರೆದಳು. ಗಾಂವಕರ ತನ್ನ ಮನೆಯ ಬೀಗವನ್ನು ತೆಗೆಯುವ ವೇಳೆಗೆ ಸಮನಾಗಿ–ದೊಡ್ಡ ಧ್ವನಿಯಲ್ಲಿ ಅವನನ್ನು ಅವಮಾನಿಸುವಂತೆ ಗದರಿಸತೊಡಗಿದಳು. ಅವಳ ಗಂಟಲ ಸ್ವರಕ್ಕೆ ನಾಲ್ಕಾರು ಮಂದಿ ಬಂದು ಸೇರಿದರು. ಒಬ್ಬಿಬ್ಬರು ಜತೆಗೆ ಸ್ವರಗೂಡಿಸಿದರು. ಗಾಂವಕರನನ್ನು ಕೂಡಿಯೇ ಬೈದರು. ಕೃಷ್ಣಾಬಾಯಿ ತನ್ನನ್ನುಳಿಸುವುದಕ್ಕೆ ಬಂದು, ಇಷ್ಟೆಲ್ಲ ಪ್ರಸಂಗ ತಂದೊಡ್ಡುತ್ತಾಳೆ ಎಂದು ವಿನತೆ ಎಣಿಸಿರಲಿಲ್ಲ. ಅವಳು ಧಾವಿಸಿ ಹೊರಕ್ಕೆ ಬಂದು, ಆಕೆಯನ್ನು ತಬ್ಬಿಕೊಂಡು ಅಳುತ್ತ "ಅಕ್ಕ, ನೀವ್ಯಾಕೆ ಹೀಗೆ ಬೈಯ್ಯುತ್ತೀರಿ? ಇವರನ್ನೆಲ್ಲ ಏಕೆ ಒಟ್ಟುವ ಹಾಗೆ ಮಾಡಿದಿರಿ? ನನ್ನ ಪಾಡಿಗೆ ಇದನ್ನು ಅನುಭವಿಸುವ ಶಕ್ತಿ ನನಗಿದೆ. ನನ್ನ ಮೇಲಿನ ಪ್ರೀತಿಯಿದ್ದರೆ ನೀವು ಹೊರಟುಹೋಗಿ" ಎಂದು ಅಂಗಲಾಚಿ, ಬಂದವರನ್ನು ಮರಳಿ ಕಳುಹಿಸಿದಳು.

ಗಾಂವಕರ್ ಅಂತರಂಗದಲ್ಲಿ ಕುದಿಯತೊಡಗಿದ. ಹೆಂಡತಿಗನ್ನುವುದಕ್ಕಿಲ್ಲ; ಕೃಷ್ಣಾಬಾಯಿ ತನಗೆ ಮಾಡಿದ ಅಪಮಾನ ಸಹಿಸುವುದಕ್ಕಿಲ್ಲ. ಅದರಿಂದ--ಊಟಮಾಡದೆಯೆ ಮಲಗಿಕೊಂಡ. ನಿದ್ದೆ ಹತ್ತಲಿಲ್ಲ. ಆಚೀಚೆ ಬಿಡಾರಗಳಿಂದ ಗುಜರಾತಿ, ಮರಾಠಿ ಭಾಷೆಗಳಲ್ಲಿ ಅವನನ್ನು ಕುರಿತಾದ ಮಾತುಗಳೇ ಕೇಳಿಸುತಿದ್ದವು. ಅಂಥ ಮಾತುಗಳಲ್ಲೊಂದು ಹೀಗಿತ್ತು: "ಹಿಂದಿನ ಹೆಂಡತಿಯನ್ನು ವಿಷವಿಕ್ಕಿ ಆತ ಕೊಂದ ಎನ್ನುತ್ತಾರೆ. ಹೊಡೆದು ಕೊಂದ ಎನ್ನುತ್ತಾರೆ. ನಾವೆಲ್ಲ ಅದು ಹಾಗೆಂದೂ ಇರಲಾರದು ಎಂದು ಸುಮ್ಮನಾಗಿದ್ದೆವು. ನಾಳೆ ಅಂಥದೇ ಒಂದು ಸಂಗತಿ ಇವನಿಂದ ಆಗಲಾರದು ಎಂದು ಹೇಳಲಿಕ್ಕೆ ಬರುವುದಿಲ್ಲ. ಇದನ್ನೆಲ್ಲ ತಿಳಿಸಿ ಪೋಲಿಸರಿಗೊಂದು ಸುದ್ದಿಕೊಟ್ಟರೆ ಹೇಗೆ?" ಎಂಬ ಚರ್ಚೆಯೊಂದು ತೀರ ಸಮೀಪದ ಮನೆಯೊಂದರಿಂದ ಅವನಿಗೆ ಕೇಳಿಸಿತು. ಆಗ ಗಾಂವಕರ್ ತನ್ನ ಮೂರ್ಖತನವನ್ನು ಕುರಿತು ಯೋಚಿಸತೊಡಗಿದನೋ ಏನೋ. ಅಂತು ಮೂರನೆಯ ದಿನ, ಮನೆಗೆ ಬೀಗವನ್ನು ಹಾಕಿ ಹೋಗಿಲ್ಲವೆಂಬುದನ್ನು ವಿನತೆ ಕಂಡುಕೊಂಡಳು. ಅದನ್ನು ಮೊದಲಿಗೆ ಬಂದು ತಿಳಿಸಿದವಳು ಕೃಷ್ಣಾಬೆನ್. ಆಕೆ ಬಂದು, ಕದ ತೆರೆದು ಒಳಗೆ ಹೋಗಿ, ತುಂಬ ಸಮಾಧಾನ ಹೇಳಿದಳು.

ತಾನು ಆಚೀಚೆ ಕೇಳಿದ ಹಿಂದಣ ಸುದ್ದಿಗಳ ಭಯ ಹುಟ್ಟಿಸಿದಳು. "ನೀವು ಗಾಬರಿಯಾಗಬಾರದು. ಅಂಥದೇನಾದರೂ ಹೆದರಿಕೆ ಕಂಡರೆ ಗಟ್ಟಿಯಾಗಿ ಕಿರುಚಿ ತಿಳಿಸಿಬಿಡಿ. ನಾವಿಲ್ಲೇ ಇದ್ದೇವಲ್ಲ" ಎಂದು ಧೈರ್ಯವನ್ನು ಹೇಳಿದಳು. ಮುಂದೆ ಮಾತು ಎಲ್ಲೆಲ್ಲಿಗೋ ಸರಿಯಿತು. ವಿನತೆ ಮಾತನಾಡುತ್ತ "ನೀನು ಹೊರಗೆ ಹೋಗಕೂಡದು ಎಂದು ಬಾಯ್ಬಿಟ್ಟು ಹೇಳಿದರೆ ನಾನು ಹೋಗುತ್ತಿದ್ದೆನೇ? ನನಗೆ ಹೋಗಿ ಏನಾಗಬೇಕು? ಈಗಲಾದರೂ ಎಲ್ಲಿಗೆ ಹೋಗುತ್ತಿದ್ದೇನೆ? ನಿಮ್ಮ, ಅವರ, ಈ ಹತ್ತಿರಲ್ಲೇ ಇರುವ ಎರಡು ಮಂದಿಯ ಮನೆಗೆ ಹೊತ್ತು ಕಳೆಯುದಕ್ಕೆ ಹೋಗುತ್ತಿದ್ದೇನೆ. ನೀವೂ ಇಲ್ಲಿಗೆ ಬರುತ್ತಿದ್ದೀರಿ. ಇದಕ್ಕಿಂತ ಬೇರೆ ನಾನೇನು ಮಾಡಿದ್ದೇನೆ? ಆಗಲಿ; ಬೇಡ, ಅವರಿಗಿಷ್ಟವಿಲ್ಲವಾದರೆ ಅದನ್ನೂ ಮಾಡುವುದಿಲ್ಲ" ಎಂದಳು.

"ವಿನತಾ ಬಾಯಿ, ಹಾಗೆ ಹೆದರಿದರೆ ಪ್ರಯೋಜನವೇ ಇಲ್ಲ. ಅಷ್ಟು ಕಷ್ಟ ಸಹಿಸಿಕೊಂಡು ಯಾಕೆ ಬದುಕಬೇಕು, ಹೇಳಿ?"

"ಇವೆರಡು ಪಾಪದ ಜೀವಗಳಿದ್ದಾವಲ್ಲ."

"ನಾನಾದರೆ ಅವೆರಡನ್ನೂ ಅವರ ತಲೆಯ ಮೇಲೆ ಹೊರಿಸಿ, ಪ್ರಾಣ ತೆಗೆದುಕೊಳ್ಳುತ್ತಿದ್ದೆ" ಎಂದು ಅಂತಹುದೇ ಸಾಂಸಾರಿಕ ಜೀವನದ ಒಂದೆರಡು ದಾರುಣ ಕಥೆಗಳನ್ನು ಹೇಳಿದಳು. ಅವಳು ಹೊರಟುಹೋದ ಮೇಲೆ, ವಿನತೆಯ ಮನಸ್ಸಿನಲ್ಲಿ 'ತಾನು ಇಷ್ಟು ನಮ್ರಳಾಗಿರುವುದು ಯೋಗ್ಯವೇ? ನನ್ನ ಸಿಟ್ಟಿನ್ನೇತಕ್ಕೆ ಅದುಮಿ ಹಿಡಿಯಬೇಕು? ಹೆಣ್ಣೆಂಬ ಪದಾರ್ಥ ಅಷ್ಟು ಕಸವಾಯಿತೇ? ಒಂದು ದಿನ, ಕೃಷ್ಣಾ ಬಾಯಿ ಹಿಂದಿನ ರಾತ್ರಿ ಹೇಳಿದಂತೆ, ಮಾಡಿದರೆ ಏನಾದೀತು?" ಎಂದು ಯೋಚಿಸಿದಳು. 'ಅವಕಾಶ ಸಿಗಲಿ' ಎಂದು ಎಣಿಕೆ ಹಾಕತೊಡಗಿದಳು. ಘಂಟೆ, ದಿನ, ಸಮಯ ಸರಿದ ಮೇಲೆ ಮನಸ್ಸಿನ ಉದ್ವೇಗ ತಗ್ಗಿತು; 'ಅವರಿಗಂತು ಬುದ್ಧಿಯಿಲ್ಲ. ನಾನೂ ಒಬ್ಬಳು ಗಯ್ಯಾಳಿ ಯಾತಕ್ಕಾಗಬೇಕು?' ಎಂದು ಯೋಚಿಸಿ ಮೊದಲಿನಂತೆ ಪತಿಯೊಡನೆ ಮೂಕವ್ರತ ಹಿಡಿದಳು. ಕೇಳಿದ್ದಕ್ಕೆ ಮಾತ್ರ ಉತ್ತರ. ಅದೂ, ಎಷ್ಟು ಬೇಕೋ ಅಷ್ಟು. ತಿಂಗಳೆರಡು ತಿಂಗಳ ಮಟ್ಟಿಗೆ ಪರಿಸ್ಥಿತಿಯಲ್ಲಿ ವ್ಯತ್ಯಾಸ ಕಾಣಿಸಲಿಲ್ಲ. ಮೊದಲಿಗಿಂತ ಗಾಂವಕರನು ಹಿಂದೆ ಕಠಿಣನಾಗಲೂ ಇಲ್ಲ. ನಡೆದುದನ್ನು ಮರೆಯಲೂ ಇಲ್ಲ. ಅವನ ಮನಸ್ಸಿನಲ್ಲಿಯೂ ನೆಮ್ಮದಿ ಉಳಿಯಲಿಲ್ಲ.

ಅವನೇ ಕಲ್ಪಿಸಿಕೊಂಡ ನರಕ ಅವನದು. ತನ್ನ ಮೂರ್ಖತೆ ಅವನಿಗೆ ಕಾಣಿಸುವುದಿಲ್ಲ. ಹೆಂಡತಿಯಾದವಳು, ತನ್ನ ಒಂದು ಹಕ್ಕನ್ನೂ ಬಯಸದೆ, ಕೇವಲ ಬೆಲೆಗೆ ಕೊಂಡ ವಸ್ತುವಿನಷ್ಟು ಅಗ್ಗದಲ್ಲಿ ಕುಣಿದಾಡಬೇಕು ಎಂಬುದು ಅವನ ದಾಂಪತ್ಯ ಜೀವನದ ಕಲ್ಪನೆಯಾಗಿತ್ತು. ತಾನು ತನ್ನ ದುಶ್ಚಟಗಳಿಗಾಗಿ ಎಷ್ಟೇ ಹಣ ವ್ಯಯಿಸಿದರೂ ಅದನ್ನು ಕೇಳುವ ಅಧಿಕಾರ ಯಾರಿಗೂ ಇರಬಾರದು. ತನ್ನಿಂದ ಯಾವ ಬಗೆಯ ತ್ಯಾಗ ಸಾಗದಿದ್ದರೂ, ಹೆಂಡತಿ ತನಗಾಗಿ ತ್ಯಾಗಮಾಡಬೇಕಾದುದು ಕರ್ತವ್ಯವೆಂದೇ ತಿಳಿದಿದ್ದಾನೆ. ತನ್ನನ್ನು ವಿನತೆಯ ಬಲೆಗೆ ಬೀಳುವಂತೆ ಮಾಡಿದ್ದು ಮಿತ್ರ ಮಂಜುನಾಥನವಾಗ್ಜಾಲ; ಬೇಕೆಂದೇ ತನ್ನನ್ನು ಮನೆಗೆ ಬರಮಾಡಿಸಿ ಅವಳ ರೂಪಕ್ಕೆ ಬಲಿಯಾಗುವಂತೆ ಮಾಡಿದ. ತನ್ನಂಥವನಿಗೆ ಬೇರೆ ಯಾರೂ ಹೆಣ್ಣು ಕೊಡುತಿದ್ದರು; ಈ ಕುಲಗೆಟ್ಟ ಹುಡುಗಿಯ ಸೆರೆಯಲ್ಲಿ ತಾನು ಸಿಗುವಂತೆ ಮಾಡಿದ. ತನ್ನಲ್ಲಿನ ಕೊರತೆಗಳನ್ನು ಮುಚ್ಚಿಕೊಳ್ಳುವುದಕ್ಕೆ ಎಂದನೇನೋ. ಅನ್ಯರ ಮೇಲೆ ಆರೋಪ ಹೊರಿಸುತ್ತದೆ ಅವನ ಮನಸ್ಸು. ಹಾಗೆಂದು ಧೈರ್ಯವಾಗಿ ಮಂಜುನಾಥನಲ್ಲಿ ಈ ಆರೋಪ ಹೊರಿಸಿದವನಲ್ಲ. ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಎಂಬಂತಿತ್ತು ಅವನ ಬಗೆ.

ಈಗ ಅವನಿಗೆ ವಿಮೋಚನೆಯ ದಾರಿಯೇ ಕಾಣಲೊಲ್ಲದು. ವಿನತೆಯನ್ನು ಎಂದಿಗೂ ತೊರೆಯುವುದಕ್ಕೆ ಆತ ಸಿದ್ಧನೇ. ತಾನಾಗಿ ತೊರೆಯುವ ಹೊಣೆಯನ್ನು ಹೊರಲಾರ. ಎರಡೆರಡು ಮಕ್ಕಳಿವೆ–ಎಂಬುದರಿಂದ ಅದು ಮಕ್ಕಳ ಮೇಲಿನ ಮೋಹದಿಂದಲೂ ಅಲ್ಲ. ಆ ಮೋಹವಿದ್ದಲ್ಲಿ ಮನಸ್ಸು ಇಷ್ಟು ವಿಕೋಪಕ್ಕೆ ಹೋಗುತ್ತಿರಲಿಲ್ಲ. ತಾನಾಗಿ ಬಿಟ್ಟರೆ ತೊಂದರೆಯಿದೆ ಎನ್ನುವುದರಿಂದ. ಹೀಗಾಗಿ ಅವಳಾಗಿ ತನ್ನನ್ನು ಬಿಡುವಂತೆ ಏನೇನು ಮಾಡಬಹುದೋ ಅಂತಹ ಉಪಾಯಗಳನ್ನು ಹೂಡುವುದು ಅವನ ನಿತ್ಯದ ಯೋಚನೆಯಾಯಿತು. ಅದು ಮಾತ್ರ ಸುಲಭವಲ್ಲ; ಅದೇ ಅವನಿಗೆ ಬಂದಿರುವ ತೊಡಕು.

ಅವಳು ಹೇಗಾದರೆ ತಾನು ಅವಳನ್ನು ಬಿಡುವುದು ಸುಲಭ ಎಂಬುದು — ಅವನಿಗರಿವಿಲ್ಲದೆ ಅವನ ಮಾತು ಹೊರಡಿಸಿತ್ತು. ಆ ಮಾತು ಕೇಳಿದ ಮೇಲೆಯೂ ವಿನತೆಯು ಕಲ್ಲಾಗಿ ಕುಳಿತಿದ್ದಾಳೆ. ಇದೇ ಅವನ ಕಷ್ಟ. ಇತ್ತ ವಯಸ್ಸಾದ ತಾನು, ಎರಡೆರಡು ಸಂಸಾರಗಳನ್ನು ನಡೆಯಿಸುವ ಕತೆ

ಯನ್ನು ನಾಲ್ಕು ಜನಗಳಿಂದ ಕೇಳಿಕೊಂಡವರು, ಮೂರನೆಯ ಬಾರಿಗೆ ಹೆಣ್ಣು ಕೊಡಲಾರರು— ಎಂಬುದನ್ನೂ ಗೊತ್ತುಹಚ್ಚಿದ್ದ. ಆದುದರಿಂದಲೇ ತನ್ನ ಕಾರ್ಯಾಲಯದಲ್ಲಿ, ತನ್ನ ಬಯಕೆಗೆ ಇಂಬು ದೊರೆಯಬಹುದೇ ಎಂದೂ ಬಯಸಿದ್ದ. ಅದು ದೊರೆಯದಿದ್ದುದರಿಂದಲೋ, ಇನ್ನಾವ ಕಾರಣದಿಂದಲೋ ವನಿತೆಯ ಶರೀರವನ್ನೂ, ಅದರ ಚೆಲುವನ್ನೂ ಅವನು ಮರೆಯಲು ಶಕ್ತನಾಗಿರಲೇ ಇರಲಿಲ್ಲ. ಹಾಗೆಯೇ ಅವಳ ಮೇಲಿನ ಸ್ನೇಹವನ್ನೂ ಮರೆಯುವವನಾಗಿದ್ದಿರಲಿಲ್ಲ. ಈ ಪರಸ್ಪರ ವಿರುದ್ಧ ಮನೋಭಾವಗಳು ಅವನ ಮುಂದಣ ಮೂರು ವರ್ಷಗಳ ಸಂಸಾರಿಕ ಜೀವನವನ್ನು ವಿರೂಪಿಸಿದುವು. ಅದರ ಒಟ್ಟು ಪರಿಣಾಮ- ವನಿತೆಯ ಪಾಲಿಗೆ ಸಹಿಸಲಾರದ ರೌರವವಾಗಿತ್ತು. ಸಹಿಸಿಯೇ ಅವನನ್ನು ಸಾಧಿಸುತ್ತೇನೆ ಎಂಬ ಕೆಚ್ಚನ್ನು ಅವಳಲ್ಲಿ ಅದು ಬೆಳೆಯಿಸಿಕೊಂಡು ಬಂದಿತು.

ಅನಂತರದ ದಿನಗಳಲ್ಲಿ ಗಾಂವಕರ ಮನೆಗೆ ಮಲಗುವುದಕ್ಕಷ್ಟೆ ಬರತೊಡಗಿದ. ಬೆಳಗ್ಗೆ ಸಪಕ್ಕಿಷ್ಟು ಚಹಾ ಕುಡಿದು, ಸ್ನಾನಮಾಡಿ, "ಆಫೀಸ್‌ನಲ್ಲಿ ತುಂಬ ಕೆಲಸವಿದೆ" ಎಂದು ನೆಪ ಹೇಳಿ ಹೊರಟುಹೋದರೆ, ಹೋಟೆಲಿನಲ್ಲಿ ಉಂಡು ಮನೆಗೆ ಬರತೊಡಗಿದ. ಅದಕ್ಕೆ ನೆಪ ಹೇಳುವುದಿಲ್ಲ. ಉಳಿದ ವಿಚಾರಗಳಲ್ಲಿ ಆತ ಮೌನಿ. ಹಣಕ್ಕಾಗಿ ಉಸಿರೆತ್ತದ ವನಿತೆಯ ಕೈಯಲ್ಲಿ ಆತ ಸೋಲನ್ನೊಪ್ಪಿಕೊಳ್ಳಬೇಕಾಯಿತು. ತಿಂಗಳಿಗೆ ನಾಲ್ವತ್ತು-ಐವತ್ತು, ಅದೂ ಒಮ್ಮೆಗೇ ಅಲ್ಲ, ಎಂಟು-ಹತ್ತರಂತೆ, ರೂಪಾಯಿಗಳನ್ನು ಮೇಜಿನ ಮೇಲಿರಿಸಿ "ಅಲ್ಲಿ ಮಡ್ತಿರಿಸಿದ್ದೇನೆ" ಎಂದು ಹೇಳಿ ಆತ ಹೊರಟುಹೋಗುತ್ತಾನೆ. ಇದರಲ್ಲಿ ಊಟ, ಉಡುಗೆ, ಡೋಬಿ, ಬಾಡಿಗೆ— ಎಲ್ಲವೂ ಆಗಬೇಕು. ಸಾಲಿಗರು ಬರುವಾಗ ಆತ ಮನೆಯಲ್ಲಿರುವುದೆಂಬುದೇ ಇಲ್ಲ. ಹೀಗಾಗಿ ಬಾಡಿಗೆಯವನು, ಡೋಬಿ, ಹಾಲಿನವರು ಅವಳನ್ನೇ ಕೇಳುತ್ತಾರೆ. ಆಗ ಜೀವನ ತುಂಬ ಕಷ್ಟವಾಗಿ ಕಾಣುತ್ತದೆ. ಅದಕ್ಕೆ ಅವಳೂ ಒಂದು ಉಪಾಯವನ್ನು ಮಾಡಿದಳು. ನೆರೆಕರೆಯ ನಾಲ್ಕು ಜನಗಳ ಅನುತಾಪ, ಸ್ನೇಹಗಳಿದ್ದುದರಿಂದ, ಕೃಷ್ಣಾಬೆನ್ನಳ ಮನೆಯಲ್ಲಿ ಕುಳಿತುಕೊಂಡು, ಅವಳ ಹೊಲಿಗೆ ಯಂತ್ರದಲ್ಲಿ, ತನ್ನ ಬಿಡುವಿನ ವೇಳೆಯಲ್ಲಿ ಬಟ್ಟೆ ಹೊಲಿದು ಕೊಡತೊಡಗಿದಳು. ಅಚೀಚಿನ ನಾಲ್ಕು ಮಂದಿ ಶಾಲೆಯ ಹುಡುಗರನ್ನು ಕೂಡಿಸಿಕೊಂಡು ಇಂಗ್ಲಿಷ್ ಪಾಠ ಹೇಳಿಕೊಡತೊಡಗಿ, ಇಪ್ಪತ್ತು ಮೂವತ್ತು

ರೂಪಾಯಿಗಳನ್ನು ಗಳಿಸತೊಡಗಿದಳು. ಈ ಕಷ್ಟದೊಡನೆಯೇ ಮೂರನೆಯ ಬಾಣಂತಿತನದ ಕಷ್ಟವೂ ಬಂದಿತು. ಆಗ ಅವಳು ಪಾರಾದುದು ಕೃಷ್ಣಾಬೆನ್ನಳಂಥ ಸ್ನೇಹಿತಳ ಆಶ್ರಯದಿಂದಲೇ. ಆಕೆ ಗರ್ಭಿಣಿಯಾಗಿರುವಳೆಂದು ತಿಳಿದ ದಿನವೇ ಕೃಷ್ಣಾಬೆನ್ನಿಗೆ ಬಂದ ಕೋಪ ಅಷ್ಟಿಷ್ಟಲ್ಲ. "ಮನೆಗೆ ಸಾಮಾನು ತಂದು ಹಾಕಲಾರ. ನಿಮ್ಮನ್ನು ಮರ್ಯಾದೆಯಿಂದ ಕಾಣಲಾರ. ಆದರೂ ನಿಮ್ಮ ಹೆಣ್ಣು ಶರೀರ ಮಾತ್ರ ಅವನಿಗೆ ಬೇಕು" ಎಂದು ನಂಜಿನಿಂದ ಹೇಳಿದಳು. ಆ ನಂಜಿನ ಅರ್ಥ ವಿನತೆಯ ಎದೆಯನ್ನು ಚುಚ್ಚಿತ್ತು. ತಂದೆಯ ಪ್ರೀತಿಯೇನೆಂದು ಕಾಣಲಾರದ ಮಗುವೊಂದನ್ನು ತಾನು ತಿರುಗಿ ಹಡೆಯುತ್ತಿದ್ದೇನಲ್ಲ. ಅವುಗಳನ್ನು ಹೊರೆಯುವ ಭಾಗ್ಯ ಇನ್ನೂ ಅಧಿಕವಾಗುತ್ತಿದೆಯಲ್ಲ-ಎಂದು ತೋರುತ್ತಲೇ ಇತ್ತು. ಆ ಗಳಿಗೆಯಲ್ಲಿ—ಹೇಳ ಹೆಸರಿಲ್ಲದ ತನ್ನ ತಂದೆ ಆನಂದ ನಾಯಕರು ಸಹ ತನ್ನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆಟವಾಡಿದ ನೆನಪು ಬಂತು. 'ಅವಕ್ಕಿಂತ ಕೀಳಾಯಿತಲ್ಲ ನನ್ನ ಮಕ್ಕಳ ಪಾಡು' ಎಂಬ ವ್ಯಥೆಯು ಮೂಡತೊಡಗಿತು. ಅಂಥ ವ್ಯಥೆಗಳು ಅವಳ ಮೈಮನಗಳನ್ನು ತಿನ್ನತೊಡಗಿದವು. ತಿರುಗಿ ತಾಯಾದಳು. ಇನ್ನೊಂದು ಹೆಣ್ಣು ಕೂಸನ್ನು ಹಡೆದಳು. ಸಾವಿತ್ರಿ, ಕೃಷ್ಣ, ರಂಜನಿ—ಎಂದು ಮಕ್ಕಳ ಮುದ್ದು ಹೆಸರನ್ನು ಜಪಮಾಡುವುದರಲ್ಲೇ ತನ್ನ ಸ್ವರ್ಗವಿದೆ ಎಂದು ತಿಳಿದುಕೊಂಡಳು. ಬದುಕು ಸರಿಯಿತು. ದಿನ, ಕತ್ತಲುಗಳು ಒಂದೇ ಸಮನೆ ಉರುಳತೊಡಗಿದವು. ಅವಳ ಪಾಲಿನ ಬಾಳು ಯುಗಮಾನದ ಗಾತ್ರದ ಅಮಾವಾಸ್ಯೆಯಾಗತೊಡಗಿತು. ಅದರಲ್ಲಿ ಮಿನುಗಿ ಕಾಣುವ ನಕ್ಷತ್ರಗಳು ಆ ಮೂವರು ಮಕ್ಕಳು ಮಾತ್ರ. ಅಥವಾ ಆಗಾಗ ಅವಳ ಮನೆಗೆ ಬಂದು ಸಮಾಧಾನ ಹೇಳುತ್ತಿರುವ ಕೃಷ್ಣಾ ಬೆನ್, ರಾಜೀವಿ, ಮಂಜುನಾಥರು ಮಾತ್ರ.

ಅವಳ ಸಂಪೂರ್ಣ ವಿಮೋಚನೆಗೆ ಇನ್ನೂ ಒಂದು ಮಗುವನ್ನು ಹೆರುವ ಭಾಗ್ಯ ಉಳಿದಿತ್ತು. ಅನಂತರದ ವರ್ಷದ ಕೊನೆಗೆ, ನಾಲ್ಕನೆಯ ಕೂಸನ್ನು ಹಡೆದಳು. ನಿರಾಶೆಯ ಪರಮಾವಧಿಯಲ್ಲಿ ಹುಟ್ಟಿದ ಆ ಕೂಸಿಗೆ ಹೆಸರಾದರೂ ಒಳ್ಳೆಯದಿರಲಿ ಎಂದು 'ಆಶಾ' ಎಂದು ಕರೆಯತೊಡಗಿದಳು. ಆಶೆಯ ಜನ್ಮದಿಂದ ಅವಳ ದಾಂಪತ್ಯ ಜೀವನದ ಆಸೆಯ ಘಟ್ಟವೂ ಕೊನೆಗೊಂಡಂತಾಯಿತು.

ಒಂದು ದಿನ ರಾತ್ರಿ ಮನೆಗೆ ಬಂದ ಗಾಂವಕರನು ಮೂಕನಾಗಿ, ಮಧ್ಯರಾತ್ರಿಯ ತನಕವೂ ಓದುತ್ತ ಕುಳಿತಿದ್ದ. ಅನಂತರ, ಬಾಗಿಲಿನ ಕದಗಳನ್ನೆಲ್ಲ ಮುಚ್ಚಿಕೊಂಡು, ತೂಕಡಿಸುತ್ತಿದ್ದ ಹೆಂಡತಿಯನ್ನು ಕರೆದು 'ಇಲ್ಲಿ ಬಾ' ಎಂದ. ಆಗ ಅವನ ಸ್ವರವೇ ವಿಚಿತ್ರವಾಗಿತ್ತು. ವಿನತೆ ಎದ್ದು ಬಂದಳು. ಬಳಿಕ ಆತ—ತಾನು ಬರೆದು ತಂದ ಒಂದು ಕಾಗದದ ತುಂಡನ್ನು ಅವಳ ಮುಂದಕ್ಕಿರಿಸಿ, 'ಇದಕ್ಕೆ ಸಹಿಮಾಡು' ಎಂದ. ಬಿರುಗಣ್ಣಿನಿಂದ ಅವಳು, ಆ ಕಾಗದವನ್ನು ಮುಟ್ಟದೆಯೇ ಅದರ ಒಕ್ಕಣೆಯನ್ನೆಲ್ಲ ಓದಿದಳು. ಅವನ ಮುಖವನ್ನೇ ದುರದುರನೆ ನೋಡಿದಳು. "ನಾನು ನಿಮ್ಮನ್ನೇ ನಂಬಿ ಬಂದ ಹೆತ್ತಳು ನಿಜ: ಆದರೆ ಅಷ್ಟು ಹೆತ್ತಳಲ್ಲ" ಎಂದಳು.

"ಸಹಿಮಾಡುವುದಿಲ್ಲವೇ?"

"ಇಲ್ಲ, ನಾನು ಅಂಥ ಕೆಲಸ ಮಾಡಿದ್ದರೆ, ಈ ಮಕ್ಕಳು ನಿಮ್ಮ ರಕ್ತದಿಂದ ಹುಟ್ಟಿದವಲ್ಲವಾಗಿದ್ದರೆ ಅದಕ್ಕೆ ಸಹಿಮಾಡುತ್ತಿದ್ದೆ. ನನ್ನ ಕೈಯಿಂದಲೇ ನಾನು ಮಾನಗೇಡಿ ಎಂದು ಬರೆಯಿಸಿಕೊಳ್ಳುವುದಕ್ಕೆ, ನೀವು ನಾಲ್ಕು ಬಾಣಂತಿತನಗಳ ಭಾಗ್ಯ ನನಗೆ ಕೊಟ್ಟಿರಿ ಎಂದು ಕಾಣುತ್ತದೆ" ಎಂದು ಮುಖ ತಿರುಗಿಸಿ ಹೊರಟುಹೋದಳು.

ಇನ್ನೊಮ್ಮೆ "ಇಲ್ಲಿ ನೋಡು" ಎಂದರು. ಆ ಮಾತಿನ ಧ್ವನಿ ಮತ್ತೂ ವಿಚಿತ್ರವಾಗಿತ್ತು. ತಿರುಗಿ ಅವಳು ಗಂಡನನ್ನು ನೋಡಿದಳು. ಅವನ ಕೈಯಲ್ಲೊಂದು ನೀಳಗತ್ತಿ ಇದ್ದಿತು. ಅದನ್ನು ಕಂಡು ಥಟ್ಟನೆ ಅವಳ ಬಾಯಿಂದ ಉತ್ತರ ಬಂದಿತು: "ಅಷ್ಟು ಮಾಡಿದರೆ ನಾನು ಪಾರಾಗುತ್ತೇನೆ" ಎಂದಳು.

"ನೀನು ಪಾರಾಗುವುದಲ್ಲ. ನಿನ್ನ ಮೈಯನ್ನು ನಾನು ಮುಟ್ಟುವುದಿಲ್ಲ. ಆ ನಾಲ್ಕು ಕುನ್ನಿಗಳನ್ನು ಕೊಂದು ನಾನು ಇಲ್ಲೇ ಆತ್ಮಹತ್ಯೆಮಾಡಿಕೊಳ್ಳುತ್ತೇನೆ" ಎಂದ ಆತ. ಅವನ ಮುಖವನ್ನು ನೋಡಿದಾಗ, ವಿನತೆಗೆ ಬೆದರಿಕೆಯಿಂದ ಕಿರುಚುವ ಬುದ್ಧಿಯೂ ಉಂಟಾಗಲಿಲ್ಲ. ಆದರೆ ಮಕ್ಕಳ ಜೀವಗಳ ಭಯವಾಯಿತು. ಒಂದು ಕ್ಷಣ—'ಅವುಗಳು ಹೋದರೆ ತಾನೆಲ್ಲಿ? ತನ್ನ ಮೂರ್ಖತೆಗೆ ಅವುಗಳ ಜೀವ ಹೋಗಬೇಕೇ' ಎಂಬ ವಿಚಾರವು ಹೊಳೆದು, ಅದು ಇಷ್ಟಿಷ್ಟೂ ಸಹಿಸದಾಯಿತು. ಆಗ ತಿರುಗಿ ಅವಳು ಬೇರೊಂದು ಎಣಿಕೆಯನ್ನೂ ಮಾಡದೆಯೇ—ತನ್ನಷ್ಟಕ್ಕೆ 'ಸತ್ಯ ದೇವರಿಗೂ ಗೊತ್ತಿದೆ' ಎಂದುಕೊಂಡು, ನೆಟ್ಟಗೆ ಗಂಡನ ಬಳಿಗೆ ಹೋಗಿ, ಆ ಪತ್ರಕ್ಕೆ

ಸಹಿಮಾಡಿದಳು. 'ತಾನು ವ್ಯಭಿಚಾರಿಣಿ. ಈ ಮಕ್ಕಳು ಗಂಡನಿಂದ ಹುಟ್ಟಿದುವಲ್ಲ. ಅವು ಪರರಿಂದಾದುವು. ತನ್ನ ಮತ್ತು ಅವುಗಳ ಪೋಷಣೆಗೆ ಗಂಡ ಹೊಣೆಗಾರನಲ್ಲ'-ಎಂಬ ಆ ಪತ್ರಕ್ಕೆ ಕಣ್ಣೀರಿನಿಂದ ಸಹಿಮಾಡಿದಳು. ಗಾಂವಕರನಿಗೆ ಅಷ್ಟೇನೆ ಬೇಕಿತ್ತು. ಅದಕ್ಕಾಗಿಯೇ ಆತ ಮೂರು ನಾಲ್ಕು ವರ್ಷಗಳ ಕಾಲ ಕಾದಿದ್ದನೋ ಏನೋ. ಹಸಿದ ಹದ್ದಿನಂತೆ, ಆ ಪತ್ರಕ್ಕೆ ಸಹಿ ಬಿದ್ದೊಡನೆ ಅದನ್ನು ಕಿತ್ತುಕೊಂಡು, ಕಿಸೆಗೆ ತುರುಕಿ, ಮನೆಯಿಂದ ಆವೇಗಳಿಗೆಗೆ ಹೊರಟುಹೋದ. ವನಿತೆಯ ಸಂಸಾರಿಕ ಜೀವನಕ್ಕೆ ಆಗ ಮೋಕ್ಷ ಬಂದೊದಗಿದಂತಾಯಿತು. ಆತ ಹೊರಟುಹೋದೊಡನೆಯೇ ಕದವಿಕ್ಕಿಕೊಂಡು ಅವಳು ಕಂಬನಿಯ ಮಳೆ ಕರೆಯುತ್ತೊಡಗಿದಳು. 'ಆತ ತಿರುಗಿ ಬಂದಾನೇ? ಪತ್ರ ಪಡೆದ ಮೇಲೂ ಆಡಿದ ಮಾತನ್ನು ಸಾಧಿಸಿಯಾನೇ?' ಎಂಬ ಭಯ ಅವಳಿಗಿತ್ತು. ಮುಸುಕು ಹರಿದೊಡನೆ ನೆರೆಮನೆಗೋಡಿ ಕೃಷ್ಣಾಬೆನ್ನಳನ್ನು ಮನೆಗೆ ಕರೆತಂದು, ತನ್ನ ದುಃಖವನ್ನು ತೋಡಿಕೊಂಡಳು. ಆಕೆಗೂ ಅಳು ಬಂದಿತು: 'ಇಂಥ ಒಬ್ಬ ಕಟುಕ ಇದ್ದಾನೆಯೆ! ಮಾನವನಾಗಿ ಇದ್ದಾನೆಯೇ?' ಎಂದರೆ ಅವಳ ಮನಸ್ಸೇ ನಂಬಲೊಲ್ಲದು. ಆದರೆ ವನಿತೆ ಹೇಳುತ್ತಿದ್ದ ಸುದ್ದಿ ಎಳ್ಳಿಲ್ಲದ ಸತ್ಯವೆಂದು ಮನವರಿಕೆಯಾಗಲು ಕಷ್ಟವೇ? "ಅಮ್ಮಾ, ಇಂಥ ಕಥೆಗಳನ್ನು ಮಾತ್ರ ಕೇಳಿದ್ದೇನೆ. ಆದರೆ ಇದು ನಿಜವಾಗಲೂ ಬಹುದು ಎಂದು ಈಗ ತಿಳಿದ ಹಾಗಾಯಿತು. ಆತ ಏನೂ ಮಾಡಿಯಾನು. ನೀವು ನಾಳೆ ಅವನಿಂದ ಜೀವನಾಂಶಕ್ಕೆ ಹಣವನ್ನು ಕೇಳಬಹುದು ಎಂದು ಹೆದರಿ, ಇಷ್ಟೆಲ್ಲವನ್ನು ಮಾಡಿರಬೇಕು. ಯಾಕೆ ಹೆದರುತ್ತೀರಿ? ಯಾರು ಕೈ ಬಿಟ್ಟರೂ ದೇವರು ನಿಮ್ಮ ಕೈ ಬಿಡಲಾರ ಎಂದು ನನ್ನ ಅಂತರಂಗ ಹೇಳುತ್ತದೆ" ಎಂದು ಅವಳಿಗೆ ಧೈರ್ಯವನ್ನು ಹೇಳಿದಳು. "ಇನ್ನೇನು ಮಾಡುತ್ತೀರಿ?" ಎಂದು ಅವಳನ್ನೇ ಕೇಳಿದಳು.

"ಇನ್ನೇನು? ಆಗುವುದೆಲ್ಲವೂ ಆಗುತ್ತದೆ. ಇದಕ್ಕಿಂತ ಹೆಚ್ಚಿಗೆ ಆಗುವುದೇನಿದೆ? ಬೆಳಗ್ಗೆ ಮಕ್ಕಳಿಗಿಷ್ಟು ಅನ್ನಮಾಡಿ ಉಣಿಸಿ ಹೋಗುತ್ತೇನೆ. ಇವತ್ತು ಆದಿತ್ಯವಾರ. ಮಂಜುನಾಥ ಊರಲ್ಲಿ ಇದ್ದಾನು. ಅವನೊಡನೆ ಯೋಚಿಸಿ ಬರುತ್ತೇನೆ. ನೀವು ಸ್ವಲ್ಪ ಮಕ್ಕಳನ್ನು ನೋಡಿಕೊಳ್ಳುತ್ತೀರಾ?" ಎಂದು ಕೇಳಿ ಮುಂದಣ ದಾರಿಯನ್ನು ಯೋಚಿಸಿದಳು.

ಬೆಳಗಿನ ಹತ್ತು ಘಂಟೆಗೆ, ತಮ್ಮ ಒಂದೇ ಒಂದು ಮಗುವನ್ನಾಡಿಸುತ್ತ

ಮನೆಯಲ್ಲಿ ಕುಳಿತಿದ್ದ ಮಂಜುನಾಥ ರಾಜೀಪಿಯರ ಮುಂದೆ, ವಿನತೆ ಧಾವಿಸಿ ಬಂದು, ಮುಗ್ಗುರಿಸಿ ಬಿದ್ದು, ಅಳತೊಡಗಿದಳು. ಅವರೊಡನೆ ಎಲ್ಲ ಸಂಗತಿಗಳನ್ನು ಬಣ್ಣಿಸಿದಳು. ಅವರಿಬ್ಬರೂ–ತಾವು ಯಾವ ದುರ್ದಿನದಲ್ಲಿ ಆ ನಂಟುತನದ ಬೋಧನೆ ಮಾಡಿದೆವೋ–ಎಂಬ ಚಿಂತೆಗೆ ಗುರಿಯಾದರು. ಆದರೂ ಬಂದವಳಿಗೆ ಏನು ಸಮಾಧಾನ ಹೇಳಲಿ? ಯಾವ ತಾಯ ಹೃದಯಕ್ಕೂ ಇಂಥ ಸನ್ನಿವೇಶದಲ್ಲಿ ಸಮಾಧಾನ ತಂದೊಡ್ಡುವುದು ಕಷ್ಟ. ಸಾವಿಗಾಗಿ ಸಂತಾಪವನ್ನು ಸೂಚಿಸಬಹುದು; ಸಾವಿಗಿಂತ ಕೀಳಾದ ಬಾಳಿಗೆ ಸಮಾಧಾನ ಹೇಳುವುದು ಕಷ್ಟ. "ನೀನೂ, ಧೈರ್ಯವಾಗಿರು. ಒಂದೋ, ನೀನು ನಮ್ಮಲ್ಲಿಗೇ ಬಂದಿರು. ಇಲ್ಲವೇ ನಾವು ಅಲ್ಲಿಗೆ ಬಂದಿರುತ್ತೇವೆ. ನೀನೊಬ್ಬಂಟಿಯೆಂದು ತಿಳಿಯಬೇಡ" ಎಂದು ಸಮಾಧಾನ ಹೇಳಿ, ಅವಳೊಡನೆ ಮಾಲಾಡಿಗೆ ಹೋದರು. ಅಲ್ಲಿಯ ತನಕವೂ ಮಾತನಾಡದಿದ್ದ ವಿನತೆ, ಅಲ್ಲಿಗೆ ಹೋದ ಮೇಲೆ, ತನ್ನ ಮುಂದಿನ ನಿರ್ಧಾರವನ್ನು ತಿಳಿಸಿದಳು.

"ಮಂಜು, ಅವರು ನನ್ನನ್ನು ಸೋಲಿಸಬೇಕೆಂದು ಇಷ್ಟೆಲ್ಲ ಮಾಡಿದರು. ನಾನು ಹೆಣ್ಣು ಹೌದು; ಈಗ ನಾಲ್ಕುಮಕ್ಕಳ ತಾಯಿಯೂ ಹೌದು. ಆದರೆ ಯಾವಾಗಲೂ ಸೋಲುವುದಿಲ್ಲ. ಇವೇ ಮಕ್ಕಳನ್ನು ಬೆಳೆಯಿಸಿ, ಅವುಗಳನ್ನು ಮರ್ಯಾದವಂತ ಜೀವಗಳನ್ನಾಗಿ ಮಾಡಿ ನಾನು ಸತ್ತರೆ ಸಂತೋಷ. ಅಲ್ಲಿಯ ವರೆಗೆ ಸಾಯುವುದಿಲ್ಲ. ನಿಮ್ಮ ಪರೇಲಿಗೂ ಬರುವುದಿಲ್ಲ; ಸ್ವಂತ ಊರಿಗೂ ಹೋಗುವುದಿಲ್ಲ. ನನ್ನ ಹೊರೆಯನ್ನು ಯಾರೊಬ್ಬರ ಮೇಲೆಯೂ ಹೇರುವುದಿಲ್ಲ. ದುಡಿಯುವ ಶಕ್ತಿಯನ್ನು ದೇವರು ಕೊಟ್ಟಿದ್ದಾನೆ. ದೇವರು ಎಸ್. ಎಸ್. ಎಲ್. ಸಿಯ ತನಕವಾದರೂ ಓದಿಸಿದ್ದಾನೆ. ಏನಾದರೊಂದು ಚಾಕರಿಯನ್ನು ಗಳಿಸಿ ಇಲ್ಲಿಯೇ ಇರುತ್ತೇನೆ. ಮುಂಬಯಿಯಲ್ಲಿ ಸಾಯಬೇಕೆಂದು ಬ್ರಹ್ಮ ಹಣೆಯಲ್ಲಿ ಬರೆದಿದ್ದರೆ ಇಲ್ಲಿಯೇ ಸಾಯುತ್ತೇನೆ. ಇವೇ ಮಕ್ಕಳು ದೊಡ್ಡವರಾಗಿ, ನನ್ನನ್ನು ಸುಟ್ಟು ಬೂದಿಮಾಡಿ, ತಾಯ ಋಣದಿಂದ ವಿಮೋಚನೆಗೊಂಡಾರು" ಎಂಬ ಕಠೋರ ನಿರ್ಧಾರವನ್ನು ಹೇಳಿದಳು.

*     *     *     *     *

ವಿನತೆ ಆಡಿದ ಮಾತಿಗೆ ತಕ್ಕುದಾಗಿಯೇ ಬದುಕಿ ಬಾಳತೊಡಗಿದಳು. ಪತಿಯ ಸಹವಾಸದಿಂದ ಕಣ್ಣೆದುರಿಗೆ ಕವಿದ ಕತ್ತಲು ಚೆದರುವಂತೆಯೂ

ಕಂಡಿತು. ಮದುವೆಯಾದ ಆರೆಂಟು ತಿಂಗಳುಗಳ ಕಾಲವಷ್ಟೆ ನಗುವಿನ ಬೆಳದಿಂಗಳು ಅವಳ ಮುಖವನ್ನರಳಿಸಿತ್ತು. ಅನಂತರದ ಬಾಳು ಅಸಹನೆಯಿಂದ ಕೂಡಿತ್ತು. ಮನಸ್ಸಿನಲ್ಲಿ ಹೊಸ ನಿರ್ಧಾರ ಮೂಡಿತು. ಗಂಡನ ಚುಚ್ಚುಮಾತುಗಳನ್ನೋ, ತಾತ್ಸಾರದ ನಡತೆಯನ್ನೋ ಇನ್ನು ಮುಂದೆ ತಾನು ಕಾಣಬೇಕಾಗಿಲ್ಲ. ತಾನಾಗಿ ಅವರನ್ನು ತೊರೆದವಳಲ್ಲ. ಅವರಾಗಿ ಸೋತು ತನ್ನನ್ನು ತೊರೆದರು. ಅಷ್ಟರ ಮಟ್ಟಿನ ಗಡಸುತನ ತನ್ನದಾಗಿದೆ. ಆ ಗಡಸುತನವೇ ತನ್ನನ್ನು ಕಾಯ್ದೀತು — ಎಂಬ ಕೆಚ್ಚಿನಿಂದ ಜೀವನವನ್ನೆದುರಿಸತೊಡಗಿದಳು. ತೀರ ಕಿರಿಯ ಕೂಸು, ಆಶಾ, ಕೊಂಚ ದೊಡ್ಡವಳಾಗುವ ತನಕ ಅವಳಿಗೆ ಬಿಡುವು ಕಡಿಮೆಯಾಗಿತ್ತು. ಆದರೂ—ಹಾಗೂ ಹೀಗೂ ಜೀವನ ಸಾಗಿಸಿದಳು. ಅನಂತರ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಹುಡುಗಿಯನ್ನು ಗೊತ್ತುಮಾಡಿ, ಮಾಲಾಡಿನ ಒಂದು ಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿಕೊಂಡಳು. ಮನೆಗೆ ಬಂದ ಒಬ್ಬಿಬ್ಬರು ಮಕ್ಕಳಿಗೂ ಪಾಠ ಹೇಳಿದಳು. ಬಡತನದಿಂದ, ಆದರೂ ಮರ್ಯಾದೆಯಿಂದ, ತನ್ನ ಬದುಕನ್ನು ಸಾಗಿಸಿದಳು. ದಿವಸಗಳು ಸರಿದಂತೆ ಅವಳ ಧೈರ್ಯವೂ ಹೆಚ್ಚಿತು. ತನ್ನ ಕಷ್ಟವನ್ನು ಮಂಜುನಾಥನ ಮೇಲೆ ಹೊರಿಸುವುದಕ್ಕೆ ಅವಳಿಗೆ ಇಷ್ಟಿಷ್ಟೂ ಇಷ್ಟವಿರಲಿಲ್ಲ. ಇತ್ತ ಮೂರನೆಯ ಮಹಾಯುದ್ಧ ತೊಡಗಿ, ವಸ್ತುಗಳ ಬೆಲೆಯೇರಿ, ಜೀವನ ಕಷ್ಟವಾದರೂ, ಬಡತನಕ್ಕಾಗಿ ಕೊರಗನ್ನು ಹಚ್ಚಿಕೊಳ್ಳಲಿಲ್ಲ. ತನ್ನ ನಾಲ್ಕು ಕೊಟಡಿಗಳ ಮನೆಯಲ್ಲಿ ಎರಡನ್ನು ತಿರುಗಿ ಬಾಡಿಗೆಗೆ ಕೊಟ್ಟು, ಸ್ವಲ್ಪ ಮಟ್ಟಿನ ಹೊರೆ ಇಳಿಸಿಕೊಂಡಳು. ಅಲ್ಲಿ ಬಾಡಿಗೆಗೆ ಬಂದ ಸಂಸಾರಿಗರೂ ಅವಳ ಮಕ್ಕಳೊಡನೆ ಮೆಚ್ಚಿನಿಂದ ವರ್ತಿಸಿದರು. ಇದನ್ನೆಲ್ಲ ಕಂಡು ವಿನತೆಯ ವಿಚಾರದಲ್ಲಿ ಕೃಷ್ಣಾಬೆನ್ನಳಂತಹ ಆಪ್ತಳ ಮನಸ್ಸಿನಲ್ಲಿ ವಿಸ್ಮಯ ಹುಟ್ಟುವಂತಾಯಿತು. "ಇಷ್ಟು ಧೈರ್ಯಶಾಲಿ ಹೆಂಗಸು, ಮೊದಲಿನಿಂದಲೇ ಗಂಡನೊಡನೆ ಆ ಧೈರ್ಯವನ್ನು ತೋರಿಸಿದ್ದರೆ ಆತ ಮಣಿಯುತ್ತಿರಲಿಲ್ಲವೆ!" ಎಂಬ ವಿಸ್ಮಯ ಅವಳಿಗೆ.

ವಿನತೆಯ ಕಿವಿಗೆ, ಗಾಂವಕರ ಕೆಲವೇ ದಿನಗಳಲ್ಲಿ, ಊರು ಬಿಟ್ಟು ಡಿಲ್ಲಿಗೆ ಹೋದ ಸುದ್ದಿಯು ದೊರೆಯಿತು. ಅವಳಿಗೆ ಅತಿ ಸಂತೋಷವಾದ ಒಂದು ವಿಷಯವೆಂದರೆ, ತನ್ನದಲ್ಲದ ಮಗುವಾದರೂ ಕೂಡ, ಮೋಹನ, ತಂದೆಯ ಇಚ್ಛೆಗೆ ವಿರುದ್ಧವಾಗಿ, ಅಪೂರ್ವಕ್ಕೊಮ್ಮೆಯಾದರೂ ಅವಳ

ಮನೆಗೆ ಬಂದು ನೋಡಿ ಹೋಗುತ್ತಿದ್ದ. ತಂದೆ ದೇಹಲಿಗೆ ಹೋದ ಮೇಲೆ ಪ್ರತಿ ಆದಿತ್ಯವಾರ 'ಆಯಿ'ಯ ಮನೆಗೆ ಆತ ಬರುತ್ತಿದ್ದ. ಆದರೆ ಒಂದು ದಿನವಾದರೂ ವಿನತೆ ಅವನೊಡನೆ 'ನಿನ್ನ ತಂದೆ ನನಗಿಂಥ ಅನ್ಯಾಯ ಬಗೆದರು' ಎಂದವಳಲ್ಲ.

ಗಾಂವಕರ ದಿಲ್ಲಿಯಿಂದ ಮೋಹನನಿಗೂ, ಯಲ್ಲಾಪುರದಲ್ಲಿರುವ ಮಗಳಿಗೂ ಏನೋ ಅಲ್ಪಸ್ವಲ್ಪ ಹಣ ಕಳುಹಿಸುತ್ತಿದ್ದ. ಮೋಹನ ಸಾಕಷ್ಟು ಕಷ್ಟದಿಂದಲೇ ಶಾಲೆ ಓದಬೇಕಾಗಿತ್ತು. ಹಾಸ್ಟೆಲಿನ ವೆಚ್ಚ, ಶಾಲೆಯ ವೆಚ್ಚಗಳು ಸ್ವಲ್ಪವಲ್ಲ. ತಂದೆ ದಿಲ್ಲಿಯಲ್ಲಿ ಕುಳಿತು ದುಂದುಗಾರನಾಗಿ, ಎಂದಿನಂತೆ ಜೂಜಿನಲ್ಲಿ ಹಣ ಕಳೆದುಕೊಳ್ಳುತ್ತ ವಿಲಾಸದಲ್ಲಿಯೇ ಇದ್ದ. ಕೆಲವು ಬಾರಿ ವಿನತೆಯೊಡನೆ ಮೋಹನ "ಆಯಿ, ನನಗೆ ನಾಲ್ಕು ರೂಪಾಯಿ ಕೊಡುತ್ತೀಯಾ?" ಎಂದು ಕೇಳಿದುದೂ ಉಂಟು. ಆಕೆ ಸ್ವಂತವಾಗಿ ಉಪಾಧ್ಯಾಯಿನಿಯಾಗಿ ದುಡಿಯುತ್ತಿರುವುದೂ ಕಾಣಿಸುತ್ತದೆ. ಅವಳೊಡನೆ ಹಣ ಕೇಳಲಾರ; ಕೇಳದಿರಲಾರ. ಆದರೆ ತನ್ನ ತಂದೆ ಮನೆಯ ವೆಚ್ಚಕ್ಕೆ ಹಣವನ್ನು ಕಳುಹಿಸುತ್ತಿರಬಹುದು ಎಂಬುದು ಅವನ ಊಹೆ. ವಿನತೆ ತನಗೆ ಕಷ್ಟವಾದರೂ, ಆ ಮಗುವಿನ ಮನಸ್ಸನ್ನು ನೋಯಿಸಲಾರದೆ, ಅದೂ ತನ್ನ ಮಗು ಎಂಬ ಭಾವನೆಯಿಂದಲೇ ನಡೆಯಿಸಿಕೊಂಡು ಹೋದಳು. ಅದರಿಂದ ಅವನು ಮೆಟ್ರಿಕ್ ಮುಗಿಸಿ ಕಾಲೇಜ್ ಸೇರುವಂತಾಯಿತು.

ತಂದೆ ದಿಲ್ಲಿಗೆ ಹೋಗಿ ಮೂರು ವರ್ಷಗಳಾದರೂ ಊರಿಗೆ ಬರಲಿಲ್ಲ. 'ಆಯಿ'ಯನ್ನು ಕರೆಯಿಸಿಕೊಳ್ಳಲಿಲ್ಲ ಎಂಬ ಸಮಸ್ಯೆ–ಅವನಿಗೆ ಮೆಲ್ಲ ಮೆಲ್ಲ ಅರ್ಥವಾಗತೊಡಗಿತು. ಅವನ ಆ ನತತೆ ಅವನಲ್ಲಿ ಮಗನಿಗಿದ್ದ ಆದರವನ್ನು ಕಡಿಮೆಮಾಡಿತು

* * * * *

ಒಂದು ದಿನ ಇದ್ದಕ್ಕಿದ್ದಂತೆ ಮಂಜುನಾಥ ಕೆಲಸಮಾಡುತ್ತಿದ್ದ ರಾಜಸ್ಥಾನ ವಿಮಾ ಕಂಪೆನಿಯ ಕಚೇರಿಗೆ, ಜಯಲಕ್ಷ್ಮಿ ವಿಮಾ ಕಂಪೆನಿಯಿಂದ ಒಂದು ಫೋನ್ ಕರೆ ಬಂದಿತು. ಆಗಲೇ ಅವನಿಗೆ ಗೊತ್ತು–'ಗಾಂವಕರ್ ಕಾಲು ಕಳೆದುಕೊಂಡು, ದಿಲ್ಲಿಯಿಂದ ರೈಲನ್ನೇರಿ ಮುಂಬಯಿಗೆ ಬರುತ್ತಿದ್ದಾನೆಂದು'. "ಅವರ ಮೂಲಾಡಿನ ಮನೆಯ ವಿಳಾಸ ಯಾವುದು? ರೈಲಿಗೆ ಅವರನ್ನು ಭೇಟಿಯಾಗುವುದಕ್ಕೆ ಬನ್ನಿ. ಅವರ ಹೆಂಡತಿಗೆ ಈ ಸಂಗತಿಯನ್ನು

ತಿಳಿಸಿ—ಯಜಮಾನರು ಕಾಲು ಕುಂಟಾಗಿ ಬರುತ್ತಿದ್ದಾರೆಂದು" ಎಂಬ ಹೊಸ ಸುದ್ದಿ ಅವನಿಗೆ ದೊರೆಯಿತು. ಆತ ದಿಗಿಲುಗೊಂಡ. 'ನಾಳೆ ಬರುವುದಷ್ಟೇ! ತಿರುಗಿ ಫೋನ್ ಮಾಡುತ್ತೇನೆ' ಎಂದು ತತ್ಕಾಲ ಉತ್ತರಿಸಿ, ರಜೆ ತೆಗೆದುಕೊಂಡು, ನೆಟ್ಟಗೆ ಮಾಲಾಡಿಗೆ ಧಾವಿಸಿದ. "ವಿನೂ, ಹೀಗೊಂದು ಸುದ್ದಿ ಬಂದಿದೆಯಲ್ಲ. ಅವರ ಕಾಲಿನ ಮೇಲೆ ಮಿಲಿಟರಿ ಲಾರಿ ಹೋಗಿ ಕಾಲು ಮುರಿದಿದೆಯಂತೆ. ನಾಳೆಗೇ ಬರುತ್ತಾರಂತೆ. ಇನ್ಸೂರೆನ್ಸ್ ಕಂಪೆನಿಯವರು ಅವರನ್ನು ನೆಟ್ಟಗೆ ಕರೆದುಕೊಂಡು ನಿನ್ನ ಮನೆಗೆ ಬಂದರೇನು ಗತಿ?" ಎಂಬ ಭೀಕರ ಸುದ್ದಿ ಹೇಳಿದ.

"ಮೋಹನನಿಗೆ ಗೊತ್ತೇ, ಈ ಸುದ್ದಿ?"

"ನನಗೆ ತಿಳಿಯದು; ಮೋಹನನೇನು ಮಾಡಿಯಾನು? ಅವನು ಸಣ್ಣ ಹುಡುಗ. ನೀನು ಅವರನ್ನು ಕಟ್ಟಿಕೊಂಡು ಇನ್ನು ತಿರುಗಿ ರೌರವ ಅನುಭವಿಸಬೇಕಾದ ಪ್ರಸಂಗವನ್ನು ನಾನು ಎಣಿಸಲಾರೆ. ಈ ಸಂಗತಿ ಹೇಳುವುದಕ್ಕಷ್ಟೆ ಬಂದೆ. ಹೋಗಿ ಫೋನಿನ ಮೂಲಕ ಉತ್ತರಕೊಡುತ್ತೇನೆ—'ವಿನು ಈಗ ಮಾಲಾಡಿನಲ್ಲಿಲ್ಲ. ಅವಳು ಊರಿಗೆ ಹೋಗಿರಬೇಕು; ಅವರಿಗೆ ಬೇರೆಲ್ಲಾದರೂ ವ್ಯವಸ್ಥೆ ಮಾಡು' ಎಂದು. ಅದೇ ಒಳಿತಲ್ಲವೇ?" ಎಂದಾಗ, ಅವಳ ಮುಖ ಕಪ್ಪಾಯಿತು. ಮನಸ್ಸು ವಿಚಾರಮಗ್ನವಾಯಿತು. ಆತ್ಮ "ಅವರು ಕಟುಕರು. ನೀನೂ ಕಟುಕಳೇ?" ಎಂಬ ಪ್ರಶ್ನೆಯನ್ನವಳಿಗೆ ಕೇಳಿತು. ಅವಳೆಂದಳು: 'ಏನನ್ನುತ್ತೀ ಮಂಜು, ನನಗೆ ಅವರೇನೂ ಅನ್ಯಾಯ ಮಾಡಿರಲಿ; ನನ್ನನ್ನು ಕೈಹಿಡಿದವರು. ನನ್ನ ಮನಸ್ಸು ಭಯಗೊಳ್ಳುತ್ತಿದೆ. ಆದರೆ ಕಾಲು ಕಳೆದುಕೊಂಡು, ಭವಿಷ್ಯ ಕಳೆದುಕೊಂಡು, ನಿರ್ಗತಿಕರಾಗಿ ಬರುವಾಗ, ನೆರಳಿಲ್ಲ, ಆಶ್ರಯವಿಲ್ಲ, ಎನ್ನುವುದು ಹೇಗೆ?" ಎಂದಳು.

"ಯಲ್ಲಾಪುರದಲ್ಲಿ ಅವರಿಗೆ ಹಿರಿಯರ ಮನೆ ಇದೆ. ಯಾರಾದರೂ ಕುಟುಂಬದವರಿರಬಹುದು. ಅಲ್ಲಿಗೇ ಹೋಗಲಿ. ಮಾಡಿದ್ದನ್ನನುಭವಿಸುತ್ತಾರೆ. ಖಂಡಿತ ಅವರು ಇಲ್ಲಿಗೆ ಬರುವುದು ಬೇಡ. ನಾನು ಹಾಗೆ ತಿಳಿಸುತ್ತೇನೆ."

"ನನ್ನಾಣೆ, ನನ್ನ ಪ್ರಾರಬ್ಧ ಏನಿದ್ದರಿರಲಿ. ಅದನ್ನೆಲ್ಲ ಅನುಭವಿಸುತ್ತೇನೆ. ನೀನು ಹಾಗೆ ಮಾಡುವುದು ಬೇಡ" ಎಂದಳುತ್ತ ಮುಖ ತಿರುಗಿಸಿದಳು.

ವಿನತೆಯ ಅಪ್ಪಣೆಯನ್ನು ಕೇಳಿಕೊಂಡು, ಸಖೇದ ಭರಿತನಾಗಿಯೇ ಮಂಜುನಾಥ ತನ್ನ ಕಚೇರಿಗೆ ಹೊರಟುಹೋದ. ಮರುದಿನ ಸಂಜೆ ರೈಲಿನಲ್ಲಿ ಬಂದ ಗಾಂವಕರರನ್ನು ಮಾತಿಲ್ಲದೆ ಸ್ವಾಗತಿಸಿದ. ಮನಸ್ಸಿಲ್ಲದ ಮನಸ್ಸಿನಿಂದ ವಿನತೆಯ ಮನೆಗೆ ಅವಸಾಗಿ ಕರೆದುಕೊಂಡು ಬಂದು ಮುಟ್ಟಿಸಿದ. ಮನೆಗೆ ಬರುವಾಗ ಗಾಂವಕರರ ಮುಖವೂ ಕಪ್ಪಾಗಿತ್ತು. ಕಂಬನಿ ತುಳುಕುತಿತ್ತು. ವಿನತೆಯ ಮುಖ ಕಾಣುವ ಧೈರ್ಯವಿದ್ದರಲಿಲ್ಲ. ತೊಯ್ದ ಕಪೋಲಗಳಿಂದ ಅವಳೇನೇ ಗಂಡನನ್ನು ಕೈಹಿಡಿದು, ಅವನ ಕೈಯನ್ನು ತನ್ನ ಭುಜದ ಮೇಲೆ ಹಾಕಿಕೊಂಡು, ಮಂಚದಲ್ಲಿ ತಂದು ಮಲಗಿಸಿದಳು. ಕೃಷ್ಣಾ ಬೆನ್ ಮೂಕಳಾಗಿ ಇದೆಲ್ಲವನ್ನು ನೋಡಬೇಕಾಯಿತು. ಅವಳ ಕಣ್ಣಿಂದಲೂ ಅಶ್ರುಧಾರೆ ಸುರಿಯುತಿತ್ತು. ಅದು ಗಾಂವಕರರ ಸಲುವಾಗಿ ಅಲ್ಲ. ತನ್ನ ಗೆಳತಿಯ ದೈವತ್ವವನ್ನು ನೆನೆದು; ಅವಳ ನಾಳಿನ ಭವಿಷ್ಯವನ್ನು ಇನ್ನಷ್ಟು ಹೆದರಿಕೆಯಿಂದ ಕಂಡಳು. ಮನೆಗೆ ಮರಳುವಾಗ ಕೃಷ್ಣಾ ಬೆನ್ನಳ ಮನಸ್ಸಿನಲ್ಲಿ "ಯಾರ ಮನಸ್ಸೂ ಇಷ್ಟು ಮಿದುವಾಗಿರಬಾರದು; ಹಾಗಿದ್ದೇ ಅವಳ ಬಾಳೆಲ್ಲವೂ ಕಣ್ಣೀರಾದುದು. ಇನ್ನು ಮುಂದೆ ಆಗುವುದೂ ಅಷ್ಟೇನೇ" ಎಂದು ತುಟಿ ಕಚ್ಚಿ ತನ್ನ ಮನೆಯನ್ನು ಸೇರಿದಳು.

ದೇಹಲಿಯಿಂದ ರೈಲು ಬಂಡಿಯನ್ನೇರಿ ಹೊರಟ ಗಾಂವಕರ ತನ್ನ ಭವಿಷ್ಯವನ್ನು ನೆನೆಯದೆ ಪಯಣ ಸಾಗಿಸುವುದು ಶಕ್ಯವಿರಲಿಲ್ಲ. ಅದನ್ನು ನೆನೆದೇನೆ "ಸ್ವರ್ಗದಿಂದ ನರಕಕ್ಕೆ ಹೋಗುತ್ತೇನೆ" ಎಂದಿದ್ದ. ಹೊರಡುವಾಗಲೇ ಆತ ಆ ನರಕ ಯಾವುದೆಂದೂ ತಿಳಿದುಕೊಂಡಿದ್ದ. ಆ ನರಕಕ್ಕೆ ಹೊರಡುವಾಗಲೂ—ತಾನು ವಿನತೆಯನ್ನು ನಡೆಯಿಸಿದ ಬಗೆ; ಅವಳಿಂದ ಸಹಿ ಪಡೆದ ಕಾಗದ ಒಂದೊಂದೇ ಅವನ ನೆನಪಿಗೆ ಬರುತಿದ್ದವು. ಆದರೆ ಈ ಆಪತ್ತಿನ ಗಳಿಗೆಯಲ್ಲಿ ಇನ್ನಾರನ್ನೂ ತಾನು ಸೇರಲು ಅನುಕೂಲವಿಲ್ಲವೆಂಬುದೂ ತಿಳಿದಿತ್ತು. ತಾನು ಮಾಡಿದುದು ಅನ್ಯಾಯ ಎಂಬ ನೋವಿಗಿಂತ ಹೆಚ್ಚಾಗಿ, ಈ ಎರಡು ಮೂರು ವರ್ಷಗಳ ಕಾಲ ತಾನು ಅನುಭವಿಸಿದ ಸುಖದ ನೆನಪು,ಅವನನ್ನು ಕಾಡುತಿದ್ದವು. ಅಂಜಲಿ ಕೈತಪ್ಪಿದಳು;ಮಂಜುಳೆ ಮಾಯವಾದಳು. ತನ್ನ ಸ್ವೈರ ಜೀವನಕ್ಕೆ ಕೊನೆ ಬಂದು, ತಾನು ಇನ್ನಾರದೋ ಅಂಕೆಗೆ ಬಗ್ಗಿ ನಡೆಯುವ ದುರ್ದಿನ ಬಂದಿತಲ್ಲ--ಎಂಬ ಚಿಂತೆ ತೊಡಗಿತ್ತು. ನಷ್ಟವಾದ ವಸ್ತುಗಳ ಬಗ್ಗೆ ಕೊರಗು, ಅವನ ಅರ್ಧ ದಾರಿಯುದ್ದಕ್ಕೆ

ತುಂಬಿಕೊಂಡಿದ್ದರೆ, ಮುಂದಿನ ಅರ್ಧ ದಾರಿಯಲ್ಲೆಲ್ಲ ವಿನತೆಯ ಮನೆಯನ್ನು ಸೇರಬೇಕಾಗುತ್ತದಲ್ಲ-ಎಂಬ ಭಯ ತುಂಬಿತ್ತು. ಅವಳು ತನ್ನನ್ನು ನಿರಾಕರಿಸುತ್ತಾಳೆ. ಆಗ ನನ್ನ ಪಾಡೇನು — ಯಲ್ಲಾಪುರಕ್ಕೆ ಹೋಗಲೇ? ಮುಂಬಯಿಯಲ್ಲೇ ಇದ್ದರೆ ಕಾಲು ನೋವು ಗುಣವಾದ ಬಳಿಕ ಕೃತಕ ಕಾಲನ್ನಾದರೂ ಇಟ್ಟುಕೊಂಡು ಓಡಾಡಿ, ಜೀವನ ಸಂಪಾದಿಸಬಹುದು' ಎಂಬ ಯೋಚನೆಯಿಂದ ಅಲ್ಲಿಗೇ ಹೊರಟ. ಆದರೆ ಕೃತಕ ಕಾಲನ್ನು ಇರಿಸಿಕೊಂಡು ನಡೆಯುವ ಚೇತನ ಬರುವ ತನಕ, ತಾನು ಅನ್ಯರ ಆಶ್ರಯದಲ್ಲಿರಬೇಕಲ್ಲ ಎಂಬ ಚಿಂತೆ ಕಾಡತೊಡಗಿತು.

ಆ 'ಅನ್ಯೆ' ತನ್ನಿಂದಲೇ ಪರಿತ್ಯಕ್ತಳಾದ ವಿನತೆಯೇ ಆಗಬೇಕೇ .? ಆದರೆ ಆಗಲೂ ಪಶ್ಚಾತ್ತಾಪದ ಬುದ್ಧಿ ಅವನಿಗೆ ಬರಲಾರದು. ಮುಂಬಯಿಗೆ ಬಂದ ಬಳಿಕ, ಅವಳು ಮಾಲಾಡಿನಲ್ಲಿರುವುದು ತಿಳಿಯಿತು. ಅವನು ಬೇಡವೆಂದರೂ, ಬೇರೆ ಯಾರೂ ತನಗೆ ಆಶ್ರಯ ಕೊಡಲಾರರೆಂದೂ ತಿಳಿದಿತ್ತು. ಆದುದರಿಂದ ಬೇರೆ ಉಪಾಯಗಾಣದೆ ಅಲ್ಲಿಗೇನೆ ಹೊರಡಬೇಕಾಯಿತು. ಅವಳು "ಹೋಗು-ಇಲ್ಲಿ ಬೇಡ" ಎಂದರೇನು ಎಂಬ ಭಯ ಅವನ ಎದೆಯಲ್ಲಿಯೂ ತುಂಬಿತ್ತು. ನಿಲ್ದಾಣಕ್ಕೆ ಬಂದ ಮಂಜುನಾಥನೊಡನೆ "ನನ್ನ ಗತಿ ಹೀಗಾಯಿತು" ಎಂದು ನಿರ್ದೋಷಿಯಂತೆ ಕರುಣೆ ಬೇಡಿ ಅತ್ತ; ಮಂಜುನಾಥನ ಮನಸ್ಸು ಕಠಿಣವಾಗಿತ್ತು. ಆತ ಅವನೊಡನೆ ಒಂದು ಮರುಕದ ಮಾತನ್ನೂ ಆಡಲಿಲ್ಲ. ಬದಲು ವಿಮಾ ಕಂಪೆನಿಯವರು ಒದಗಿಸಿದ ಮೋಟರಿನಲ್ಲಿ ಅವನನ್ನು ಕುಳ್ಳಿರಿಸಿಕೊಂಡು ಹೊರಟಾಗ,ದಾರಿಯಲ್ಲಿ 'ಇನ್ನೊಬ್ಬರಾಗಿದ್ದರೆ ನಿಮ್ಮ ಮುಖವನ್ನೂ ನೋಡುತ್ತಿರಲಿಲ್ಲ. ಅವಳು, ವಿನತೆ, ಒಬ್ಬಳು ದೇವತೆಯಾದುದರಿಂದ ನಿಮ್ಮನ್ನು ಕರೆದುಕೊಂಡು ಬನ್ನಿ ಅಂದಳು. ಇನ್ನಾದರೂ ಅವಳ ಜೀವವನ್ನು ತಿನ್ನದೆ ನಡೆಯಿಸಿಕೊಂಡು ಹೋಗಿ. ಬದಲು ಮುಂಚಿನದೇ ಬುದ್ಧಿಯನ್ನು ತೋರಿಸಿದರೆ-ನಾನೇ ಅಲ್ಲಿಗೆ ಬಂದು, ನಿಮ್ಮನ್ನು ಹೊರಗೆ ಕಳುಹಿಸಬೇಕಾಗುತ್ತದೆ. ಈಗ ನಿಮಗೆ—ಸಂಕಟ ಬಂದಾಗ 'ವೆಂಕಟರಮಣ-ಎಂದು ತೋರುವುದು ಸಹಜ"ಎಂದು ಮುಂತಾಗಿ ಮನಸ್ಸಿಗೆ ಚುಚ್ಚಿ ನುಡಿದ. ವಿನತೆಗೆ ಈತ ಸಲಿಸಿದ ಸಂತಾಪದ ಅರಿವು ಅವನನ್ನು ಬೇಯಿಸುತ್ತಿತ್ತು; ಎದೆ, ಮನಸ್ಸುಗಳಲ್ಲಿ ಅವೇ ತುಂಬಿ ತುಳುಕುತಿದ್ದುವು.

ಆದರೆ ಗಾಂವಕರ ತೀರ ಮೂಕನಾಗಿದ್ದ. ತನ್ನ ಈಗಿನ ಪರಿಸ್ಥಿತಿಯು

ಅನ್ನಿಸಿಕೊಳ್ಳುವುದಕ್ಕಿದೆಯೇ ಹೊರತು ತಾನು ಅನ್ನುವುದಕ್ಕಿಲ್ಲ. 'ಎಲ್ಲಾದರೂ ತನಗೆ ಆಶ್ರಯ ಸಿಕ್ಕಿದರೆ ಸಾಕು' ಎನ್ನುವ ಚಿಂತೆ ಅವನದು. ಆದರೆ ಅವನ ಅಂತರಂಗದಲ್ಲಿ 'ನನ್ನ ಮಗನ ಮೆಟ್ರಿಕ್ ಆಯಿತು. ಮೇಲೆ ಒಂದೆರಡು ವರ್ಷ ಕಾಲೇಜಿನಲ್ಲೂ ಓದಿದ್ದಾನೆ. ಅವನ ಓದು ನಿಲ್ಲಿಸುತ್ತೇನೆ. ಅವನಿಗೆ ಒಂದು ಉದ್ಯೋಗವನ್ನು ದೊರಕಿಸಿಕೊಟ್ಟರೆ ಮುಂದೆ ಅವನೊಡನೆ ಬಿಡಾರ ಹೂಡುತ್ತೇನೆಯೇ ಹೊರತು, ವಿನತೆಯ ಹಂಗಿನ ಅನ್ನವನ್ನು ಬಹು ದಿನ ಉಣ್ಣುವುದಿಲ್ಲ' ಎಂದು ಯೋಚಿಸಿದ.

ಏನೂ ಆಗಲಿ, ವಿನತೆಯ ಮನೆಯು ಸಮೀಪಿಸಿದಾಗ ಮನಸ್ಸು ಮಣಿಯಿತು; ನಾಚಿಕೆ ತುಂಬಿತು. 'ಎಂಥ ಸ್ಥಿತಿಯಿಂದ ಎಂಥ ಸ್ಥಿತಿಗೆ ತಾನು ಬಂದೆ' ಎಂಬ ಅರಿವಾಯಿತು. ತಾನು ಅವಳನ್ನು ಬಿಟ್ಟು ಹೋದ ರಾತ್ರಿಯ ನೆನಪೂ ಹೊಳೆಯಿತು. ವಿನತೆ ಅವನನ್ನು ಹಿಡಿದೆತ್ತಿ ಒಳಕ್ಕೆ ಕರೆದೊಯ್ದಾಗ— ಅವಳ ಮುಖದಲ್ಲಿ ಕಂಬನಿಯನ್ನು ನೋಡಿದಾಗ–"ತಾನು ತೀರ ಪಾಪಿ" ಎಂದು ತೋರದಿರಲಿಲ್ಲ.

ಆ ಒಂದೆರಡು ತಿಂಗಳ ಕಾಲ ಎಲ್ಲಿದ್ದರೂ ಅವನಿಗೆ ಅವಳೇ ಬೇಕಿತ್ತು. ಅವನೊಡನೆ ಎಂದೋ ಮಾತನ್ನು ನಿಲ್ಲಿಸಿದ ವಿನತೆ- ಅವನೇ ತನ್ನನ್ನು ಬೇಡಿ ಕೇಳುವ ಸ್ಥಿತಿಗೆ ತರಬಾರದೆಂದು, ಪ್ರತಿಯೊಂದನ್ನೂ ತಾನೇ ಕೇಳಿ ಉಪಚರಿಸಿದಳು. ಅವನನ್ನು--ಸ್ನಾನ ಮಾಡಿಸಿದಳು, ಮಲಗಿಸಿದಳು, ಕುಳ್ಳಿರಿಸಿದಳು, ಒಯ್ದಳು, ಉಪಚರಿಸಿದಳು. ಅವನಿಗೆ ನೋವು ಆಗದಂತೆ ತನ್ನ ಪಾಲಿನ ಕರ್ತವ್ಯವನ್ನು ಸಲ್ಲಿಸಿದಳು.

# ಹದಿಮೂರನೆಯ ಅಧ್ಯಾಯ

ವಿಶ್ರಾಂತಿಗೆಂದು ರತ್ನಾಕರನ ಮನೆಗೆ ಬಂದ ಮಂಜುಳೆಗೆ, ತಾನು ಎಣಿಸಿಕೊಳ್ಳದ ಸಂಭಾವನೆಯು ದೊರೆಯಿತಾದರೂ, ಎಣಿಸಿಕೊಂಡು ಬಂದ ಮನಶ್ಶಾಂತಿ ಮಾತ್ರ ದೊರೆಯಲಿಲ್ಲ. ವಿನತೆಯ ತಾಯಿ ಮತ್ತು ತಮ್ಮನ ಸಂದರ್ಶನಮಾಡಿಕೊಂಡು, ತನ್ನ ಮನೆಗೆ ಬಂದ ಬಳಿಕ ಮನಸ್ಸು ಒಂದೇ ಸವನೆ ಅವಳನ್ನು ಕೊರೆಯತೊಡಗಿತು. ವಿನತೆಯ ಬಾಲ್ಯದ ಗೆಳತಿಯವಳು. ತನ್ನ ನಿರಾಶೆಯನ್ನೂ ಆಶೆಯನ್ನೂ ಅವಳಲ್ಲಿ ತೋಡಿಕೊಂಡು ಚರ್ಚಿಸಿದವಳು ಅವಳು. ಹಾಗೆಯೇ ಅವಳ ಎಳೆತನದ ಯೌವನದ ಆಶೆ ನಿರಾಶೆಗಳಲ್ಲಿ ಈಕೆ ಭಾಗಿಯಾಗಿದ್ದವಳು. ತಮಗೆ ಬಂದ ಪತ್ರಗಳನ್ನು ಕುರಿತು ಇಬ್ಬರೂ ಓದಿ ತಮ್ಮ ಮನಸ್ಸಿನ ಹಿಗ್ಗು, ಕುಗ್ಗುಗಳನ್ನು ತೋಡಿಕೊಂಡಿದ್ದರು. ವಿನತೆಯು ತಮ್ಮನಿಂದ ಅವಳ ಬಾಳಿನ ಕೆಲವೊಂದು ಕಥೆಯ ತುಣುಕುಗಳನ್ನು ಕೇಳಿದಳು. ಅವನ್ನು ಮನಸ್ಸಿನಲ್ಲಿ ಎಣಿಸಿಕೊಂಡಂತೆ, ತನಗೂ ಅವಳಿಗೂ ಇರುವ ದೂರ ಸ್ಪಷ್ಟವಾಗುತ್ತ ಬಂದಿತು. ತನ್ನ ನಿಲುಮೆಗೂ ಅವಳ ನಿಲುಮೆಗೂ ಇರುವ ಅಂತರ ಎಣಿಸಲಾರದಷ್ಟು. ಅವಳು ಹುಟ್ಟಿದ್ದು–ತನ್ನಂತೆ ಕುಲೀನ ಕುಟುಂಬದಲ್ಲಲ್ಲ. ಆ ನೋವಿನಿಂದಲೇ ಪ್ರೇರಿತಳಾಗಿ ಒಳ್ಳೆಯ ಬಾಳನ್ನು ಬಾಳಬೇಕೆಂಬ ಹಟಹಿಡಿದು, ಮುಂದೆ ಓದುವ ಸಂಕಲ್ಪವನ್ನು ಬಿಸುಟು, ಮನೆಯನ್ನೇ ತೊರೆದಳು. ತಾನು ಮಾತ್ರ ಓದಿನ ನೆಪದಿಂದ ಮನೋಹರನನ್ನು ಪಡೆಯುವ ಸುಖದ ಕನಸಿಗಾಗಿ ಕಾಲೇಜನ್ನು ಸೇರಿದೆ. ಅದೇನೂ ತಪ್ಪಲ್ಲ. ಆದರೆ ತನ್ನ ಪ್ರಯತ್ನದಲ್ಲಿ ನಿರಾಶೆಗೊಂಡು ಇಳಿದ ಹಾದಿ ಮಾತ್ರ ಸಮಂಜಸವೇ–ಎಂಬ ಪ್ರಶ್ನೆ ಅವಳನ್ನು ಚುಚ್ಚುತ್ತಿದೆ. ಮುಂದೆ ದೊರೆಸಾಮಿಯ ಪ್ರಕರಣವಾಗಿ ಇನ್ನೊಂದು ನಿರಾಶೆ ಪ್ರಾಪಿಸಿದ ಬಳಿಕ, ಗೆಳತಿ ಅಂಜಲಿಯ ವರ್ಚಸ್ಸಿಗೆ ಒಳಗಾದಳು. ಅಲ್ಲಿಂದ ಮುಂದಿನ ನಡತೆಯನ್ನು ನೆನೆದುಕೊಂಡಂತೆ ತನ್ನ ಎಂಟು ಹತ್ತು ವರ್ಷಗಳ ಬಾಳು ಕೇವಲ ಶರೀರದ ತೃಪ್ತಿಗಾಗಿ, ಮಾಂಸದ ಪ್ರೇಮಕ್ಕಾಗಿ ಮೀಸಲಾಯಿತಲ್ಲ. ತನ್ನ ಸ್ವಾತಂತ್ರ್ಯಜೀವನವು ಹಿಡಿದ ಹಾದಿ ಗೌರವವಿಲ್ಲದ್ದಾಯಿತಲ್ಲ. ಬಾಳೆಲ್ಲ ಗುರಿಯಿಲ್ಲದ ಪತಂಗದ ಹಾರಾಟವಾಯಿತಲ್ಲ. ಪತಂಗವಾದರೂ ಜೇನಿನ ಆಸೆಗೆ, ಹೊಟ್ಟೆಯ ಹಂಬಲಕ್ಕೆ ಓಡಾಡುತ್ತದೆ. ತನ್ನ ಧರ್ಮವನ್ನದು ನಡೆಸು

ತ್ತದೆ. ತಾನು ಮಾತ್ರ ಪತಂಗಪ್ರಾಯಳಾದ್ದಷ್ಟೇ ಬಂತು. ತನ್ನನ್ನು ಸೆಳೆದೊಯ್ದು ದಾರಿ, ಸ್ಪಷ್ಟವಾಗಿ ಕಾಮ ವಾಸನೆಯೊಂದೇ. ತನ್ನ ತುಂಬಿ ಬೆಳೆದ ಜೀವನದಲ್ಲಿ ಅದೂ ತುಂಬಿಕೊಂಡಿದೆ; ತನ್ನ ಪಾಲನ್ನು ಬೇಡುತ್ತಿದೆ. ಅದರಲ್ಲೇನು ತಪ್ಪಿಲ್ಲ ಎಂದು ತೋರಿದರೂ, ಅದಕ್ಕಾಗಿ ತಾನೇನೆಲ್ಲ ಮಾಡಿದೆ– ಎಂದು ನೆನೆದಾಗ ಮನಸ್ಸು ಚುಚ್ಚತೊಡಗಿತು.

ಹಿಂದೆ ಶಾಲೆಯಲ್ಲಿ ಆಡಿದ 'ಸಾವಿತ್ರಿ ಸತ್ಯವಾನ' ನಾಟಕದಲ್ಲಿ, ತಾನು ಹೆಣ್ಣಾಗಿ, ಸಾವಿತ್ರಿಯಾಗಿ ನಟಿಸಿದವಳು; ವಿನತೆ ಗಂಡಾಗಿ ನಟಿಸಿದವಳು. ಅವಳೂ ಲಜ್ಜಾಶೀಲನಾದ ಗಂಡಿನಂತೆ ವರ್ತಿಸಿದ್ದು ಅವಳ ಕಣ್ಣಿಗೆ ಹೊಳೆಯುತ್ತದೆ. ನಾಟಕದಲ್ಲಷ್ಟೇ ಅವಳು ಅಧೈರ್ಯದಿಂದ ಗಂಡಾದಳು. ಮುಂದೆ ತಾನು ಕೇಳಿದ ಕತೆಯ ತುಣುಕುಗಳಿಂದ, ಅವಳ ಬಾಳ್ವೆ, ಗಂಡುತನವನ್ನೇ ನಾಚಿಸುವಂತಹುದಿತ್ತು ಎಂದು ತೋರತೊಡಗಿತು. ಅವಳ ಕೆಚ್ಚನ್ನು ಮೆಚ್ಚಿದಳು. ಅವಳ ಪರದೇಶವಾಸವನ್ನು ತನ್ನದರೊಡನೆ ಹೋಲಿಸಿ ನೋಡಿದಳೋ! ಅವಳೂ ಮನೆಯನ್ನು ಬಿಟ್ಟಳು. ತಾನೂ ಮನೆಯನ್ನು ಬಿಟ್ಟವಳು. ಅವಳು ತನ್ನ ಸಂಕಟದಲ್ಲಿ ಏನನ್ನೋ ಸಾಧಿಸಿಕೊಂಡಂತಿದೆ. ತಾನು ತನ್ನ ನಿರಾತಂಕ ಸಂತೋಷದಲ್ಲಿ ಯಾವುದನ್ನೂ ಸಾಧಿಸಿದಂತಿಲ್ಲ: ಬರಿದೆ ಅಂಜಲಿಯಂತೆ ಬದುಕಿದ್ದು ಮಾತ್ರ. ಅಂಜಲಿ ಮೊದಲಿನಿಂದಲೂ ಆ ಬಗೆಯ ನಿರ್ಬಂಧವಿಲ್ಲದ ಜೀವನವನ್ನು ಬಯಸಿದವಳು. ತಾನು ಪ್ರೇಮಮಯ ದಾಂಪತ್ಯವನ್ನು ಬಯಸಿದಳು. ಅವಳ ಇಚ್ಛೆಯಂತೆ ಅವಳ ದಾರಿಯೇನೋ ಸರಿ. ತನ್ನ ಇಚ್ಛೆಯಂತೆಯೂ ತನ್ನ ದಾರಿ ಸರಿಯಲ್ಲ — ಎಂಬ ಕೊರಗು ಅವಳನ್ನು ಕಾಡತೊಡಗಿತು.

ನಡುನಡುವೆ ಅರುಂಧತಿಯ ಎಳೆಯ ಕೂಸಿನ ನೆನಪು ಮೂಡಿಯುತ್ತಿದ್ದರೆ, ಅವಳಂತೆ ತನಗೆ ಭಾಗ್ಯವಿಲ್ಲದಾಯಿತೇ, ಎಂಬ ನೋವು ಉಂಟಾಗುತ್ತದೆ. ಅದು ತನ್ನ ಮಗುವಿನ ಮೋಹದಲ್ಲಿ ಹೇಗೆ ಪ್ರಪಂಚವನ್ನು ಮರೆಯುತಿದ್ದಾಳೆ. ಬಾಳಿನಲ್ಲಿ ಮನುಷ್ಯ ಪಡೆಯಬಹುದಾದ ಎಲ್ಲ ಸಂಪತ್ತಿಗಿಂತ– ಮಿಕ್ಕಿದ ಸಂಪತ್ತು ತಾಯ್ತನವಲ್ಲವೇ? ಶಿಶುವಿಗೆ ಮೊಲೆಯೂಡಿಸುವ ಗಳಿಗೆಯಿಂದ ಅದನ್ನು ಬೆಳೆಸಿ ಪ್ರಬುದ್ಧನನ್ನಾಗಿ ಮಾಡಿ ಪ್ರಪಂಚಕ್ಕೆ ಒಪ್ಪಿಸುವ ಹೊಣೆ ಎಷ್ಟು ಹೆಚ್ಚಿನದೋ ಆ ಹೊಣೆಯ ನಿರ್ವಹಣೆಯ ಭಾಗ್ಯವೂ ಹೆಚ್ಚಿನದಲ್ಲವೆ? ತನ್ನಲ್ಲಿ ಆ ಆಸೆಯಿಲ್ಲವೆ? ತಾನು ಬಂಜೆಯೇ?— ಅಂದರೆ, ಎಳೆ

ಗೂಸುಗಳನ್ನು ಕಂಡಾಗ ಈ ಮಗು ತನ್ನದಾಗದೇ ಅಥವಾ ತನಗೂ ಒಂದು ಮಗುವಾಗಬಾರದೇ — ಎಂಬ ಹಂಬಲ ಎಷ್ಟು ಬಾರಿ ಅವಳಲ್ಲಿಯೂ ಮೂಡಿಲ್ಲ. ಮೂಡಿದರೇನು ಬಂತು? ಸಮಾಜ ಭಯದಿಂದ, ನಾಚಿಕೆಯಿಂದ, ತಾಯ್ತನವನ್ನು ಕಳೆದುಕೊಂಡುದನ್ನು ನೆನೆದರೆ ಮನಸ್ಸಿಗೆ ಹುಚ್ಚುಂಟಾಗುತ್ತದೆ. ತಾನು ಹಿಡಿದ ದಾರಿಯೇನಾಗಿತ್ತೆಂದು ನೆನೆದಲ್ಲಿ ಆ ಕೊರಗು ಹೇಳಿತೀರದು. ಹೇಗೆ ಹೇಗೋ ಬಾಳ್ವೆ ಮಾಡಿದೆ. ಆದರೆ ಅದರಿಂದ ಕಾಣಬಹುದಾದ ಸಂತಾನ ಸುಖವನ್ನಾಗಲೀ ಹೊಣೆಯನ್ನಾಗಲೀ ನಿರ್ವಹಿಸದೆ ಹೋದ ಹೇಡಿ ತಾನಲ್ಲವೆ, ಎಂದು ತೋರಿತು. ತನಗೆ ಪ್ರತಿಯಾಗಿ ನಿಂತ ವಿನತೆಯು ನಾಲ್ಕು ಮಕ್ಕಳ ತಾಯಾಗಿದ್ದಾಳಂತೆ. ಗಂಡನಿಂದ ಬಂದ ಕಷ್ಟಗಳನ್ನು ಅನುಭವಿಸಿ, ತಾನೇ ದುಡಿದು ಆ ಮಕ್ಕಳನ್ನು ಬೆಳೆಯಿಸುವ ಧೀರೆಯಾಗಿದ್ದಾಳೆ.

ಆ ಕಷ್ಟ ಯಾರಿಂದ ಬಂದಿರಬಹುದು ಎಂಬುದನ್ನು ನೆನೆದಾಗ, ಅತಿಶಯವಾದ ಪಶ್ಚಾತ್ತಾಪವೂ ಉಂಟಾಗುತ್ತದೆ. ಗಾಂವಕರನ ಪತನಕ್ಕೆ ತಾನೇ ಸಂಪೂರ್ಣ ಕಾರಣಳಲ್ಲವಾದರೂ, ದಿಲ್ಲಿಯಲ್ಲಿ ಅವನೊಡನೆ ತಾನು ಕಳೆದ ದಿನಗಳನ್ನು ಅವಳು ಮರೆಯಲಾರಳು. ತಾನೂ, ಅಂಜಲಿಯೂ ಕೂಡಿದ್ದುದರಿಂದ ಆತ ಅಷ್ಟು ದೀರ್ಘಕಾಲ ಅವಳನ್ನು ತೀರ ಮರೆಯುವಂತೆ ಮಾಡಿದ್ದೆವು. ಆತ ಎಂಥವನೇ ಇದ್ದಿರಲಿ. ತಮ್ಮ ಅಪರಾಧ ಮಾತ್ರ ಸ್ವಲ್ಪವಲ್ಲ. ಅದರಲ್ಲಿ ತಮ್ಮ ಪಾಲು ದೊಡ್ಡದು. ಗಾಂವಕರನು ದಿಲ್ಲಿ ಬಿಡುವ ಮುಂಚೆ ತನ್ನ ಸಂಗತಿಯನ್ನು ಹೆಂಡತಿಗೂ ತಿಳಿಸಬಾರದೆಂದುದು, 'ಸ್ವರ್ಗದಿಂದ ನರಕಕ್ಕೆ ಹೋಗುತ್ತೇನೆ' ಎಂದುದು, ನೆನಪಾಯಿತೆಂದರೆ ವಿನತೆಯಲ್ಲಿ ಅವನಿಗಿದ್ದ ದ್ವೇಷವೂ ಸ್ಪಷ್ಟವಾಗುತ್ತದೆ. ಆಗ ಮಂಜುಳೆಗೆ ತನ್ನ ಅಪರಾಧವೇನಿಲ್ಲ-ಎಂಬ ಸಮಾಧಾನವೂ ಒಮ್ಮೊಮ್ಮೆ ಬರುತ್ತದೆ. ಆದರೆ ಮಾನವತೆಯ ಮಟ್ಟದಿಂದ ದೈವತ್ವದ ಮಟ್ಟಕ್ಕೆ, ತಾನೇ ಮನಸ್ಸಿನಲ್ಲೇರಿಸಿದಂಥ ವಿನತೆಯನ್ನು ತಿರುಗಿ ಕೆಳಕ್ಕೆ ಇಳಿಸುವ ಧೈರ್ಯ ಅವಳಿಗೆ ಬಾರದು. ಗಾಂವಕರನಿಗೆ ವಿನತೆಯಲ್ಲಿ ವಿರಕ್ತಿಯೋ, ಕೋಪವೋ ಉಂಟಾಗುವುದಕ್ಕೆ ಏನು ಕಾರಣಗಳಿರಬಹುದೆಂದು ಊಹಿಸುತ್ತಾಳೆ. ಆದರೆ 'ವಿನತೆ ಕಾರಣಳಲ್ಲ. ಕಾರಣಳಾಗುವುದು ಶಕ್ಯವಿಲ್ಲ' ಎಂದೇ ಅವಳ ಮನಸ್ಸಿಗೆ ತೋರುತ್ತದೆ.

ತಾನು ಈ ಊರಲ್ಲಿ ನಿಲ್ಲಲಾರೆ. ನಿಂತು ಮಾಡುವುದೇನಿಲ್ಲ. ಹೊಟ್ಟೆ

ಯ ಪಾಡಿಗಾದರೂ ತಿರುಗಿ ಮುಂಬಯಿಗೆ ಹೋಗಿಯೇ ಬಾಳಬೇಕು. ಹೋದ ದಿನವೇ ಅಥವಾ ಹೋದ ಕ್ಷಿಪ್ರದಲ್ಲಿಯೇ ತನ್ನ ಕೆಲಸ, ವಿನತೆ ಯನ್ನು ಅರಸಿ ಭೇಟಿಯಾಗುವುದೆಂದು ತೋರುತ್ತದೆ. 'ಅಕ್ಕಾ, ನಿನ್ನ ಸುಖ ಜೀವನಕ್ಕೆ ಕಂಟಕಪ್ರಾಯಳಾಗಿ ಬಂದ ನನ್ನನ್ನು ಕ್ಷಮಿಸು' ಎನ್ನುವುದು ತನ್ನ ಮೊದಲನೆಯ ಕರ್ತವ್ಯವೆಂದು ತಿಳಿಯುತ್ತಾಳೆ. ಹಾಗೆ ಹೇಳುವುದಕ್ಕೆ ತಾನು ಅಂಜುವವಳಲ್ಲವೆಂದೂ, ವಿನತೆ ತನ್ನ ದುಃಖಮಯ ಬಾಳಿನ ಅರ್ಥಮಾಡಿ ಕೊಳ್ಳಬಲ್ಲಳೆಂದೂ, ಎಣಿಸಿಕೊಳ್ಳುತ್ತಾಳೆ. 'ಅಲ್ಲಿಗೆ ಹೋಗುವ ತನಕ ಏತಕ್ಕೆ ಕಾಯಬೇಕು? ಅವಳ ತಮ್ಮನಿಂದ ವಿಳಾಸ ದೊರಕಿಸಿಕೊಳ್ಳಬಹುದಲ್ಲ. ಅವಳಿಗೆ ಕಾಗದ ಬರೆಯಬಹುದಲ್ಲ. ಮುಖದ ಇದಿರಿಗೇ ಹೇಳುವುದಕ್ಕಿಂತ ದೂರದಿಂದ ಪತ್ರ ಬರೆಯುವುದು ಸುಲಭವಲ್ಲವೇ?' ಎಂದೂ ತೋರು ತ್ತದೆ. ಪತ್ರ ಬರೆಯಲು 'ಅವಳ ವಿಳಾಸ ತರುತ್ತೇನೆ' ಎಂದು ಯೋಚಿಸಿ ಹೊರಟಾಗಲೆಲ್ಲ, ಏನೋ ಒಂದು ಅಧೈರ್ಯ ಅವಳನ್ನು ತಡೆದು ಹಿಡಿಯು ತ್ತದೆ. ರಾಮಕೃಷ್ಣ 'ಅಕ್ಕನೇ ತನ್ನ ಗಂಡನನ್ನೂ ಸಾಕಬೇಕಾಗಿದೆ' ಎಂದ ಮಾತುಗಳ ನೆನಪಾಗುತ್ತವೆ. ಅವರಿಬ್ಬರೂ ಜತೆಯಲ್ಲಿ ವಾಸಿಸುತ್ತಿರುವಾಗ, ತನ್ನ ಪತ್ರ ವಿನತೆಯ ಕೈಯನ್ನು ಸೇರಿದರೆ, ಆಗ ಅವಳು ತನ್ನನ್ನು ಕ್ಷಮಿಸ ಬಲ್ಲಳೇ ಅಥವಾ ಅಕಸ್ಮಾತ್ ಆ ಕಾಗದ ಗಾಂವಕರನ ಕೈಯಲ್ಲಿ ಸಿಕ್ಕಿದರೆ, ಅದು ಅವಳಿಗೆ ಸಿಗುವುದುಂಟೇ—ಎಂಬೆಲ್ಲ ಭಯ ಮೂಡುತ್ತದೆ. 'ಇಲ್ಲ, ಅನಾಮಧೇಯಳಾಗಿ ಬರೆಯುವುದನ್ನಲ್ಲ ಬರೆಯುತ್ತೇನೆ. ಹೆಸರನ್ನು ಹಾಕುವುದಿಲ್ಲ' ಎಂದು ನೆನೆಯುತ್ತಾಳೆ. 'ಅದು ನಾಚಿಕೆಗೇಡು ಕೆಲಸ. ನನಗೆ ಸಲ್ಲದ್ದು' ಎಂದು ತೋರತೊಡಗುತ್ತದೆ. 'ಅಂತು ಎಲ್ಲವೂ ಮುಂಬಯಿ ಯನ್ನು ಸೇರಿದ ಮೇಲೆ' ಎಂಬ ಕೊನೆಯ ನಿರ್ಧಾರಕ್ಕೆ ಬಂದಳು.

"ಮುಂಬಯಿಗೆ ಹೋಗುವ ಮುಂಚೆ ನಮ್ಮ ಮನೆಗೊಮ್ಮೆ ಬರುವು ದಿಲ್ಲವೇ?" ಎಂದು ಸೊಸೆ ಅರುಂಧತಿ ಕೇಳಿದ್ದಳು. ಆಕೆಯ ತಾಯಿಗೆ ತನ್ನ ಮೇಲೆ ಅಸಮಾಧಾನವಿದ್ದರೂ, ಅರುವನ್ನು ತಾನು ಆಡಿಸಿದ್ದೇನೆ; ಅವಳ ಮದುವೆಯನ್ನು ಹರಸಿದ್ದೇನೆ . . . ಮಗುವನ್ನೆತ್ತಿ ಆಡಿಸಿದ್ದೇನೆ. ಆ ಮಗು ವನ್ನು ಕಾಣುವ ಆಸೆ ಮತ್ತೂ ಮತ್ತೂ ಬೆಳೆಯುತ್ತಿದೆ—ಎಂಬುದರಿಂದ ಒಂದು ದಿನ ಮುದ್ದೂರಿನಿಂದ ಮಂಜೇಶ್ವರದಲ್ಲಿರುವ ಅರುವಿನ ಮನೆಗೆ ಅಕಸ್ಮಾತ್ ಭೇಟಿಕೊಟ್ಟಳು. 'ಒಂದೇ ದಿನ ಅಲ್ಲಿಹೋಗಿರುತ್ತೇನೆ. ಹೆಚ್ಚಾಗಿ

ದ್ದರೆ ಆ ಮಗುವನ್ನು ನೋಡುನೋಡುತ್ತ ನನಗೆ ಬುದ್ಧಿ ಭ್ರಮಣೆಯಾಗುತ್ತದೆ' ಎಂದುಕೊಂಡು ಹೊರಟಿದ್ದಳು. ಆದರೆ ಹೋದ ಬಳಿಕ, ಅವಳಾಗಲೀ ಅವಳ ಗಂಡನಾಗಲೀ ತೋರಿದ ಆದರ ಅಲ್ಲಿರುವುದಕ್ಕೆ ಅನುಮಾನವಿಲ್ಲದಂತೆ ಮಾಡಿದುವು. ಅರುವಿನ ಗಂಡು ಕೂಸಿನ ಹೊಳೆಯುವ ಕಣ್ಣುಗಳು, ತೊದಲುವ ನುಡಿ, ಮುದ್ದು ಮುಖ ಇವುಗಳನ್ನೆಲ್ಲ ನೋಡುತ್ತ ಹೋದಂತೆ, ಅದನ್ನವಳು ಎತ್ತಿ ಕೊಂಡಾಡಿದಂತೆ, ಅದನ್ನು ಬಿಟ್ಟು ಹೋಗಲಾರಳು. ಮನಸ್ಸು ಹುಚ್ಚುಗೊಂಡಿತು. ಆ ಮಗುವಿನ ಸ್ನೇಹದಲ್ಲಿ ತಾನೊಂದು ಸ್ವರ್ಗದಲ್ಲಿದ್ದೇನೆ — ಎಂಬ ಭಾವನೆ ಮೂಡುತ್ತಿತ್ತು. ಅಲ್ಲಿ ತಿಂಗಳ ಕಾಲ ವಿಚಿತ್ರ ಸಂತೋಷದಲ್ಲಿ ಜೀವನ ಕಳೆದಳು. ಆ ಸಂತೋಷಕ್ಕೆ ಸಮನಾದ ಪರಿತಾಪವನ್ನು, ಒಂಟಿಯಾಗಿದ್ದಾಗಲೆಲ್ಲ, ಪಟ್ಟಳು. ಆ ಮಗು ರಾತ್ರಿಯ ವೇಳೆಯಲ್ಲಿ ಅರುವಿನ ಬದಲು ಅವಳನ್ನೇ ಆಶ್ರಯಿಸುತ್ತದೆ. ಅದನ್ನು ತಬ್ಬಿಕೊಂಡು ಮಲಗುತ್ತಾಳೆ. ಕೆಲವೊಮ್ಮೆ ಕೂಸು ಮೊಲೆಹಾಲಿಗಾಗಿ ಅವಳನ್ನು ಹಂಬಲಿಸಿ ಬೇಡುತ್ತದೆ. ಅದರ ಸಂಗಾತಿ, ತೊದಲು ಮಾತುಗಳು, ತಾನೊಬ್ಬಳೇ ಮಲಗಿದಾಗ ನೆನವರಿಕೆಗೆ ಬಂದುವೆಂದರೆ — ಕಣ್ಣೀರಿನ ಬುಗ್ಗೆ ಒಡೆದು ಹರಿಯತೊಡಗುತ್ತದೆ; ಒರಗಿಕೊಂಡ ದಿಂಬು ತೊಯ್ಯುತ್ತದೆ; ತುಟಿಗಳು ನಡುಗುತ್ತವೆ; ಕಂಠ ಗದ್ಗದಿಸುತ್ತದೆ. 'ತನ್ನ ಹೊಟ್ಟೆಯಲ್ಲಿ ಅಂಥದೇ ಒಂದು ಕೂಸು ಹುಟ್ಟುತಿತ್ತೋ, ಏನೋ? ತಾನೇನು ಮಾಡಿದೆ!' ಎಂಬ ಪರಿತಾಪದ ಈಟಿಯೊಂದು ಅವಳನ್ನು ತಿವಿಯುತ್ತದೆ.

ಮನಸ್ಸು ವಿಕಲ್ಪಗೊಳ್ಳುತ್ತದೆ. ತನ್ನ ಬಾಳು ಅರ್ಥ ಶೂನ್ಯವಾದದ್ದಾಯಿತಲ್ಲ; ತನ್ನಂಥ ಪ್ರೇಮ ಬಂಜೆ ಬದುಕಿದರೇನು ಸತ್ತರೇನು—ಎಂದು ತೋರುತ್ತದೆ. ಎಷ್ಟೋ ಬಾರಿ ಮನಸ್ಸು ಅವಳನ್ನು ಆತ್ಮಹತ್ಯೆಗೆ ಒತ್ತಾಯಿಸುತ್ತದೆ. ಆಗ ಸಮಾಧಾನ ಕೊಡುವುದೆಂದರೆ ವಿನತೆಯ ನೆನಪು. 'ಅವಳೆಷ್ಟು ಧೀರೆ? ತಾನೆಂಥ ಅಂಜುಬುರುಕಿಯಾದೆ! ವಿನತೆಯ ಮುಖ ಕಾಣುವ ತನಕ, ತನ್ನ ಮೃತ್ಯುವಿನ ಹಂಬಲವು ಸಲ್ಲದ ದಾರಿ. ಎಂಥ ಕಷ್ಟದಲ್ಲೂ ಅವಳನ್ನೇ ಕಾಣುತ್ತೇನೆ, ಕೇಳುತ್ತೇನೆ" ಎಂದು ನಿರ್ಧರಿಸುತ್ತಾಳೆ.

ತಿಂಗಳು ಕಳೆದು, ಮನಸ್ಸೆಲ್ಲ ಮಂಕುಗೊಂಡು, ಸೊಸೆಯ ಮನೆಯಿಂದ ಅಣ್ಣನ ಮನೆಗೆ ಧಾವಿಸಿ ಬಂದಳು. ಅರುವಿನ ಮಗುವನ್ನು ನೋಡಿದಂತೆಲ್ಲ ತನ್ನ ಭ್ರಮೆ ಹೆಚ್ಚುತ್ತಿದೆ—ಎಂಬ ಭಯ ಅವಳಿಗೂ ಆಯಿತು.

ಇನ್ನೆರಡು ತಿಂಗಳ ಕಾಲ ಅಣ್ಣನ ಮನೆಯಲ್ಲಿಯೇ ಕಾಲಹಾಕಿದಳು. ಆಗ ಯಾರೊಡನೆಯೂ ಹೆಚ್ಚಿಗೆ ಮಾತಿರಲಿಲ್ಲ. ಹಿತ್ತಿಲಿಂದ ಹೊರಕ್ಕೆ ವಿಹಾರವೆಂಬುದಿರಲಿಲ್ಲ. ಏನೇನೋ ಚಿಂತೆಗಳಿಂದ ಮೂಕ ತಪಸ್ಸನ್ನು ಮಾಡುತ್ತಿರುವುದೊಂದೇ ಅವಳ ಕೆಲಸವಾಯಿತು. ಅವಳ ಸ್ಥಿತಿಯನ್ನು ಕಂಡು ಆತನೂ ಭಯಪಡಬೇಕಾಯಿತು—"ಹುಷಾರಿಲ್ಲವೆ ನೀನು? ನಿನಗೇನಾಗಿದೆ?" ಎಂದು ಮೇಲಿಂದ ಮೇಲೆ ಕೇಳಬೇಕಾಯಿತು. "ಏನಿಲ್ಲ" ಎಂದು ಬಾರಿಬಾರಿಗೆ ಅವಳು ಉತ್ತರಿಸಿದರೂ, ಅವಳ ಮೂಕ ಜೀವನಕ್ಕೆ ಅವನಿಗೂ ಅರ್ಥ ಕಾಣುತ್ತಿರಲಿಲ್ಲ. ತನಗೆ ಏನಾಗಿದೆ ಎಂದು ಅವಳಿಗೇನೆ ತಿಳಿಯುತ್ತಲಿಲ್ಲ. ತಂಗಿಯ ವಿಚಾರದಲ್ಲಿ ಅಣ್ಣ ರತ್ನಾಕರನೂ, ಅತ್ತಿಗೆ ಸುಮಿತ್ರೆಯೂ ಯೋಚಿಸುವ ಕಾಲ ಬಂದೊದಗಿತು.

ಹಿಂದಿನ ವ್ಯಕ್ತಿಯ ದೆಸೆಯಿಂದಲೋ, ಯುದ್ಧ ಕ್ಷೇತ್ರದ ಬಳಿ ನಲಿದಾಡಿದುದರ ಫಲವಾಗಿಯೋ, ಅಥವಾ ಇನ್ನೇತರಿಂದಲೋ ಮಂಜುಳೆಯ ಮನಸ್ಸಿಗೆ ಹೇಳಲಾರದ ಆಘಾತವಾಗಿದೆ— ಎಂಬ ಊಹೆಯನ್ನು ರತ್ನಾಕರ ಮಾಡಬೇಕಾಯಿತು. ದಿನದಿನಕ್ಕೂ ಹೆಚ್ಚುತ್ತಿರುವ ಅವಳ ವಿಚಿತ್ರ ಮೌನಕ್ಕೆ ಅಂತರ್ನಿರೀಕ್ಷೆಯೋ, ನಿರಾಶೆಯೋ, ಪಶ್ಚಾತ್ತಾಪವೋ, ಬೇರೆಯಾವುದೋ ಕಾರಣವಿರಬೇಕೆಂಬ ಊಹೆಯಾಯಿತು. ಏನಿದ್ದರೂ ಅವಳು ಉದ್ಯೋಗವಿಲ್ಲದೆ ಯೋಚಿಸುತ್ತ ಕುಳಿತಂತೆ, ಈ ವಿಭ್ರಮೆ ವಿಶೇಷವಾಗಬಹುದೆಂಬ ಭಯವಾಗಿ, ತಂಗಿಯೊಡನೆ "ನೀನು ಮನೆಯಿಂದ ಹೋಗಬೇಕೆಂದು ಹೇಳುವುದಲ್ಲ. ಖಂಡಿತಕ್ಕೂ ಹಾಗೆಂದೂ ತಿಳಿಯಬೇಡ. ನಿನಗೇನೋ ಕಷ್ಟವಾಗಿದೆ. ಅದರಿಂದ ಈ ರೀತಿ ಮಂಕುಗೊಂಡಿದ್ದೀಯೆ. ಇಷ್ಟು ದಿನ ನೀನು ಒಂದಲ್ಲ ಒಂದು ಉದ್ಯೋಗದಲ್ಲಿದ್ದೆ. ನಿನಗೆ ಒಂದೆರಡು ತಿಂಗಳುಗಳ ವಿಶ್ರಾಮವೂ ಸಂತೋಷ, ಶಾಂತಿಗಳನ್ನು ಕೊಡಲಾರದೆ ಹೋದುದನ್ನು ನೋಡಿದರೆ, ತಿರುಗಿ ನೀನು ಚಾಕರಿಗೆ ಸೇರುವುದೇ ಲೇಸು. ಹೀಗೆ ಚಿಂತಿಸುತ್ತ ಕುಳಿತಿರುವುದು ಕ್ಷೇಮವಲ್ಲ ಎಂದು ನನಗೆ ಕಾಣಿಸುತ್ತದೆ" ಎಂದು ಬೋಧಿಸಿದ.

ಮಂಜುಳೆ, ಹಿಂದಿನ ದಿನಗಳಲ್ಲಾಗಿದ್ದರೆ, ತನ್ನ ಅಣ್ಣನ ಈ ಮಾತುಗಳನ್ನು ವಿಪರೀತಾರ್ಥಕ್ಕೆ ಕೊಂಡೊಯ್ಯುತ್ತಿದ್ದಳು. ಇಂದು ಆ ಬಗೆಯ ದ್ವೇಷ ಅಣ್ಣನ ವಿಚಾರದಲ್ಲಿ ಅವಳಿಗಿಲ್ಲ; ಮಾತ್ರವಲ್ಲ, ಅವನ ಹಿತವಚನವನ್ನು ತಾನು ಮೀರಿದ್ದು ತಪ್ಪಾಯಿತೆಂದು ಅನೇಕ ಬಾರಿ ತೋರಿದಿದೆ.

ತಾನು ನಿರುದ್ಯೋಗಿಯಾಗಿರುವುದು ಒಳಿತಲ್ಲವೆಂದು ಅವಳಿಗೂ ಮೇಲಿಂದ ಮೇಲೆ ಕಾಣಿಸುತ್ತಿದೆ. ತಿರುಗಿ ನೌಕರಿಯನ್ನು ದೊರಕಿಸಿಕೊಳ್ಳುವುದಕ್ಕೆ ಕಷ್ಟವಿಲ್ಲ. ಆದರೆ ಹೆಚ್ಚು ಕಡಿಮೆ ಮುಂಬಯಿಯೊಂದೇ ಅದಕ್ಕೆ ಸುಲಭ ಸಾಧ್ಯವಾದ ಊರು. ಅಲ್ಲಿನ ವಾತಾವರಣವನ್ನು ಒಮ್ಮೆ ತಾನು ಸೇವಿದೆನಾದರೆ ಇನ್ನಾವಾವುದೋ ಬಿರುಗಾಳಿಗಳಿಗೆ ಸಿಲುಕಿ, ತೊಡಕುಗಳಿಗೆ ಗುರಿಯಾಗಬೇಕಲ್ಲ-ಎಂಬ ಭಯವೂ ಉಂಟಾಗುತ್ತಿತ್ತು. ಆದರೆ ಸುನೀತೆಯ ನೆನಪಾದಾಗಲೆಲ್ಲ, ಅವಳನ್ನು ಕಾಣುವ ಹಂಬಲವಾಗಿ ಮುಂಬಯಿಯನ್ನೇ ಬಯಸುತ್ತಾಳೆ. ತನಗೆ— ಮುಂಚಿನ ವ್ಯವಹಾರಿಕ ಕಾರ್ಯಾಲಯಗಳ ತಂಟೆ ಬೇಡ. ಶಾಂತವಾಗಿ ತನ್ನ ಮನಸ್ಸನ್ನು ಹದ್ದಿನಲ್ಲಿರಿಸಿಕೊಳ್ಳಬಹುದಾದ ಆವರಣ ಬೇಕು-ಎಂಬ ಬಯಕೆ ಉಂಟಾಗುತ್ತದೆ. ಹೀಗೆ ಅವಳು ಚಿಂತಿಸುತ್ತಿದ್ದ ಗಳಿಗೆಯಲ್ಲಿ, ಒಂದು ದಿನ ರತ್ನಾಕರ ಅವಳ ಕೈಯಲ್ಲೊಂದು ವರ್ತಮಾನ ಪತ್ರವನ್ನು ತಂದಿರಿಸಿದ. "ಈ ಪ್ರಕಟಣೆಯನ್ನು ನೋಡಿದೆಯಾ? ಒಳ್ಳೆಯ ಸಂಬಳವಿದೆ. ನಿನಗಾಗಬಹುದಾದ ಕೆಲಸವಿದು ಎಂದು ಕಾಣುತ್ತದೆ" ಎಂದು ಹೇಳಿದ.

ಮುಂಬಯಿಯ ಅಂಧೇರಿಯಲ್ಲಿ ಹೊಸತಾಗಿ ತೆರೆಯುವ 'ಗೋಕುಲದಾಸ್ ಅನಾಥಾಲಯಕ್ಕೆ, ಸಂಪೂರ್ಣ ಸಮಯವನ್ನು ತೆರಬಲ್ಲ ಒಬ್ಬಳು ಮೇಟ್ರನ್ ಬೇಕಾಗಿದ್ದಾಳೆ' ಎಂಬ ಜಾಹೀರಾತು ಅದು. ನಿವಾಸದ ಮನೆ ಕೊಡುತ್ತಾರೆ. ಸಹಾಯಕರಿದ್ದಾರೆ. ಇನ್ನೂರು ರೂಪಾಯಿಗಳ ತನಕ ವೇತನವಿದೆ. ಕೆಲಸದ ಪರಿಮಿತಿಯಷ್ಟೇ ಅವಳಿಗೆ ಹೊಣೆಯ ಭಾರವಷ್ಟು. ಅದು ಅನಾಥಾಲಯ— ಎಂದೊಡನೆಯೇ, ನೂರಾರು ಚಿಕ್ಕಮಕ್ಕಳಿರುವ ತಾಣ, ತಾಯ್ತಂದೆಯರನ್ನು ಕಳೆದುಕೊಂಡು ಗತಿಯಿಲ್ಲದೆಯೇ ಬಂದು ಸೇರುವವರ ಮನೆ—ಎಂದು ಕಾಣಿಸಿತು. ಅವಳ ಸುಪ್ತ ಬಯಕೆಯೊಂದಕ್ಕೆ ಅದು ಆಶಾದಾಯಕವಾಗಿ ಕಾಣಿಸಿತು. ತನ್ನದಲ್ಲವಾದರೂ ಹತ್ತೆಂಟು ಕೂಸುಗಳನ್ನು ಎತ್ತಿ, ಆಡಿ, ಪಾಲಿಸಿ, ತಾನು ಸಂತೋಷಪಡಬಹುದಾದ ಉದ್ಯೋಗವದು. ಎಷ್ಟು ಶ್ರಮವಾದರೂ ಅದರಿಂದ ಹೆಚ್ಚಿನ ಆನಂದ ದೊರೆಯಬಹುದು. ಅಲ್ಲದೆ, ಆ ಕೆಲಸ ದೊರೆತಲ್ಲಿ ತನ್ನದೇ ಆದ ಸ್ವತಂತ್ರ ವಾತಾವರಣ ಸಿಗುತ್ತದೆ. ತಾನಾಗಿ ಬಿರುಗಾಳಿಯನ್ನು ಕರೆಯಬೇಕೇ ಹೊರತು, ಇತರರು ಬೀಸುವ ಬಿರುಗಾಳಿಗಳಿಗೆ ಅಲ್ಲಿ ಅವಕಾಶವಿಲ್ಲ—ಎಂದು ತುಂಬ ಆಸೆಯುಂಟಾಯಿತು.

ಅದೇ ದಿನ ಮಂಜುಳೆಯು, ತನಗಿರುವ ವಿವಿಧ ಅನುಭವಗಳನ್ನು ಸೂಚಿಸಿ, ತಾನು ಕೆಲವು ಕಾಲ W. A. C. ಆಗಿದ್ದೆನೆಂದು ತಿಳಿಸಿ, ಅರ್ಜಿಯೊಂದನ್ನು ಬರೆದು ಕಳುಹಿಸಿದಳು. ಕಳುಹಿಸುವಾಗ ಆ ಉದ್ಯೋಗ ತನಗೆ ಸಿಗಬೇಕೆಂಬ ಆಸೆಯುದ್ದರೂ ಸಿಕ್ಕೀತೆಂಬ ಭರವಸೆ ಅವಳಿಗಿರಲಿಲ್ಲ. 'ಅಂದಿನ ದಿನಗಳಲ್ಲಿ ಯುದ್ಧದ ಸೇವೆಯಿಂದ ಬಿಡುಗಡೆಗೊಂಡ ಸಾವಿರಾರು ಜನಗಳಿದ್ದರು. ಈ ಕೆಲಸಕ್ಕೆ ಬೇಕಾಗುವ ಯಾವ ವಿಶೇಷ ಅನುಭವ, ಪರಿಶ್ರಮಗಳಿಲ್ಲದ ತನಗೆ ಅದು ದೊರೆಯುವುದು ಕಷ್ಟ—ಎಂಬ ಅನುಮಾನ ಅವಳಿಗಿದ್ದಿತ್ತು. ತನ್ನ ಮನವಿಯು ಸ್ವೀಕಾರವಾಗಲಿ, ಆಗದೆ ಹೋಗಲಿ, ಉತ್ತರವಾದರೂ ಬರಬೇಕಲ್ಲ–ಎಂದು ಮುಂದಿನ ದಿನಗಳನ್ನು ಯುಗಗಳಂತೆ ಕಾದಳು. ಉತ್ತರ ದೊರೆಯುವ ತನಕ, ಅನಾಥಾಲಯದಲ್ಲಿ ನೆಲೆಸಿರಬಹುದಾದ ವಿವಿಧ ಮಕ್ಕಳನ್ನು ಮನದಲ್ಲಿ ಕಲ್ಪಿಸಿಕೊಂಡು, ಅವುಗಳೊಡನೆ ಕಲ್ಪನೆಯ ಆಟ ಆಡಿದಳು. ಆ ಒಂದು ಕೆಲಸದಿಂದಲಾದರೂ ತನ್ನ ತಪ್ಪುಗಳಿಗೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ. ನಿಷ್ಪ್ರಯೋಜನವಾದ ಬಾಳ್ವೆ ಮಾಡುವುದಿಲ್ಲ—ಎಂದು ಯೋಚಿಸತೊಡಗಿದಳು. ಅಲ್ಲಿಂದ ಕಲ್ಪನೆಯ ರಾಜ್ಯದಲ್ಲಿ ತೇಲುತಿದ್ದ ಅವಳ ಮನಸ್ಸು ಎಷ್ಟೋ ಹೆಚ್ಚಿನ ಗೆಲುವನ್ನು ಪಡೆಯಿತು.

ಅವಳ ಅದೃಷ್ಟಕ್ಕೆ ಸಮನಾಗಿ, ಅವಳಿಗೆ ಆ ಅನಾಥಾಲಯದಿಂದ ಭೇಟಿಗೆ ಕರೆಯೂ ಬಂದಿತು. ಅಣ್ಣನ ಅನುಮತಿ ಪಡೆದು, ಭೇಟಿಯ ದಿನಕ್ಕೆ ಮುಂಚಿತವಾಗಿ ಆಕೆ ಮುಂಬಯಿಯನ್ನು ಸೇರಿದಳು. ಸೇರಿದ ದಿವಸ ತಾನು ಎಲ್ಲಿಗೆ ಹೋಗಿ ಇಳಿಯಬೇಕೆಂದೇ ತಿಳಿಯಲಿಲ್ಲ. ಮೊದಲ ದಿನ ಮುಂಬಯಿಯಲ್ಲಿ ಆಶ್ರಯಕೊಟ್ಟ ತನ್ನ ಬಂಧುಗಳನ್ನು ನೆನೆದಳು. ಬಳಿಕ ಕಚೇರಿಯ ಸಹೋದ್ಯೋಗಿಗಳನ್ನು ನೆನೆದಳು. ತನ್ನ ಹಳೆಗಾಲದ ವಸತಿ ಗೃಹವನ್ನು ನೆನೆದಳು—ಎಲ್ಲಿಗೂ ಹೋಗುವುದು ಬೇಡ ಎನಿಸಿತು; ಹೋಟೆಲೊಂದನ್ನು ಸೇರಿ, ಕೊಟಡಿಯನ್ನು ಬಾಡಿಗೆಗೆ ಹಿಡಿದು, ಕದವಿಕ್ಕಿಕೊಂಡು, ದಿನವನ್ನು ಕಳೆದಳು. ಮರುದಿನ ಬೆಳಗಿನ ಹತ್ತು ಘಂಟೆಗೆ ಸಮನಾಗಿ ಅಂಧೇರಿಗೆ ಹೊರಟಳು.

ರೈಲು ನಿಲ್ದಾಣದಿಂದ ಅರ್ಧ ಮೈಲು ಪೂರ್ವಕ್ಕೆ, ಆ ಹೊಸತಾಗಿ ತೆರೆದ ಅನಾಥಾಲಯವಿತ್ತು. ಅವಳು ಒಂದೆರಡು ಬಾರಿ ತನ್ನ ದುರ್ದಿನಗಳನ್ನು ಕಳೆದ ಡಾ. ನಾರಿಯಲ್‌ವಾಲನ ಹೆರಿಗೆಯ ಆಸ್ಪತ್ರೆಯನ್ನು ದಾಟಿ

ಅಲ್ಲಿಗೆ ನಡೆದುಕೊಂಡು ಹೋಗಬೇಕಿತ್ತು. ಆ ಸ್ಥಳವನ್ನು ದಾಟಿ ಮುಂದುವರಿಯುತಿದ್ದಾಗ, ಅವಳಲ್ಲಿದ್ದ ಆಸೆ, ಗೆಲುವುಗಳೆಲ್ಲವು ಒಮ್ಮೆಗೇ ಮಾಯವಾದಂತೆ ಕಂಡಿತು. ದುಃಖದಿಂದ ಆ ನೋವನ್ನು ಅಡಗಿಸುವುದಕ್ಕೂ ಅವಳಿಗೆ ಸಾಧ್ಯವಾಗಲಿಲ್ಲ. ಅದೇ ಸ್ಥಿತಿಯಲ್ಲಿ ಮತ್ತೂ ಎರಡು ನೂರು ಗಜ ನಡೆದು ಅನಾಥಾಲಯಕ್ಕೆ ಹೋದಳು. ಅದರ ಕಚೇರಿಯಲ್ಲಿ ವಯೋವೃದ್ಧನಾದ ಗುಜರಾತಿ ಸೇಠ್ ಗೋಕುಲ್‌ದಾಸ್ ಕುಳಿತಿದ್ದ. ಬಳಿಯಲ್ಲೇ ಅವನ ಒಬ್ಬಿಬ್ಬರು ಗೆಳೆಯರಿದ್ದರು. ಭೇಟಿಗೆ ಬಂದ ಒಬ್ಬೊಬ್ಬರನ್ನೇ ಅವನು ಕರೆದು ವಿಚಾರಿಸತೊಡಗಿದ್ದನು. ಇವಳಿಗೆ ಆ ಸೇಠಜಿಯ ವಿಚಾರವಾಗಿ ಏನೇನೂ ಗೊತ್ತಿರಲಿಲ್ಲ. ಆ ಸಂಸ್ಥೆಯ ವಿಚಾರವಾಗಿಯೂ ಗೊತ್ತಿರಲಿಲ್ಲ. ಹೋದವಳು —ಸುಮಾರು ನೂರು ಮಕ್ಕಳ ಸಲುವಾಗಿ ಕಟ್ಟಿದ, ಆ ದೊಡ್ಡ ಕಟ್ಟಡದ ನೆಲ, ಉಪ್ಪರಿಗೆ, ತೋಟಗಳನ್ನೆಲ್ಲ ಕಾಣುತ್ತ ವೇಳೆ ಕಳೆದಳು. ಭೇಟಿಗೆ ಅವಳ ಸರದಿ ಬಂದಿತು. ಹೋಗಿ ಸೇಠಜೀಗೆ ವಂದಿಸಿದಳು. ಆತ ಹತ್ತೆಂಟು ಪ್ರಶ್ನೆಗಳನ್ನು ಕೇಳಿದ. ಅವುಗಳಲ್ಲಿ ಕೆಲವು ಇವು: "ನಿಮಗೆ ಮದುವೆಯಾಗಿದೆಯೇ?"

"ಇಲ್ಲ."

"ಯಾವುದಾದರೂ ಮಕ್ಕಳ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೀರಾ?"

"ಇಲ್ಲ."

"ಹಾಗಿದ್ದರೆ ಈ ಕೆಲಸ ನಿಮ್ಮಿಂದಾಗುತ್ತದೆಯೇ? ಇಷ್ಟೊಂದು ಮಕ್ಕಳನ್ನು ನೋಡಿಕೊಳ್ಳಬಲ್ಲಿರಿ ಎಂದು ಏನು ಧೈರ್ಯ?"

"ನನಗೆ ಅನುಭವವಿಲ್ಲ ನಿಜ. ಆದರೆ ಎಳೆಯ ಮಕ್ಕಳೊಡನೆ ಬಾಳಬೇಕೆಂಬ ಒಂದೇ ಆಸೆಯಿಂದ ನಾನೀ ಕೆಲಸವನ್ನು ಅಪೇಕ್ಷಿಸಿದ್ದು. ಸಂಬಳ, ಮತ್ತೊಂದು ಯಾವುದೂ ನನ್ನನ್ನಾಕರ್ಷಿಸಿದ್ದಲ್ಲ."

ಸೇಠಜಿ ನಕ್ಕನು. ಅವಳ ಮುಖವನ್ನೇ ತುಸು ಹೊತ್ತು ನೋಡಿದನು. ಬಂದ ಇತರ ಮನವಿದಾರರು ಇವಳಿಗಿಂತಲೂ ವಯಸ್ಸಾದವರಿದ್ದರು. ಅನೇಕ ರೀತಿಯ ಕಷ್ಟಗಳಿಂದಾಗಿ, ಆ ಚಾಕರಿಯನ್ನು ಹಂಬಲಿಸಿ ಬಂದಿದ್ದರು. ಜತೆಗೆ ಶಿಫಾರಸು ಪತ್ರಗಳನ್ನೂ ತಂದಿದ್ದರು. ಇವಳು ಹಾಗೇನೂ ಮಾಡದೆ ಬರಿದೆ ಅಲ್ಲಿಗೆ ಬಂದಿದ್ದಳು. ಬರುವಾಗ ಆಫೀಸು ಕೊಟಡಿ ತೆರೆದಿತ್ತು. ಎದುರಿನ ಗೇಟಿನಿಂದ ಬರುವವರು ಕಾಣಿಸುತಿದ್ದರು. ಎದುರಿನ ಅಂಗಳದಲ್ಲಿ

ನಾಲ್ಕಾರು ಮಕ್ಕಳು ಆಡುತ್ತಿದ್ದರು. ಮಂಜುಳೆ ಬಂದಾಗ ಆ ಮಕ್ಕಳನ್ನು ನೋಡುತ್ತ ನಾಲ್ಕು ಕ್ಷಣ ನಿಂತಿದ್ದಳು. ಅಲ್ಲಿದ್ದೊಂದು ಕಿರಿಯ ಮಗುವಿನ ಗಲ್ಲಕ್ಕೆ ಕೈಸವರಿ, ತನ್ನ ಬೆರಳುಗಳನ್ನು ಮುದ್ದಿಟ್ಟು, ಧಾವಿಸಿ ಈಚೆ ಬಂದು, ತನ್ನ ಸರದಿಗಾಗಿ ಮಂಚದ ಮೇಲೆ ಹೋಗಿ ಕುಳಿತಿದ್ದುದನ್ನು ಸೇಠಜಿ ಕಂಡಿದ್ದನು. ಆಗಲೇ, ತನ್ನ ಆಚೀಚೆ ಕುಳಿತಿದ್ದ ಮಿತ್ರರೊಡನೆ, 'ಅಲ್ಲೊಬ್ಬಳು ಬರುತ್ತಿದ್ದಾಳೆ, ನೋಡಿ' ಎಂದಿದ್ದನು. ಮಂಜುಳೆ ಕೊನೆಯಲ್ಲಾಡಿದ ಆ ಒಂದು ಮಾತೂ, ಆಕೆ ಬರುವ ಮುಂಚೆಯೇ ತೋರಿದ ಆ ಒಂದು ಕೃತಿಯೂ ಅವಳಿಗೇನೇ ಆ ಕೆಲಸವನ್ನು ದೊರಕಿಸಿಕೊಡುವಂತಾಯಿತು. ಸೇಠಜೀ ಮಾತನಾಡುತ್ತ:

"ನಿಮ್ಮ ವಯಸ್ಸು ಮೂವತ್ತು ಮೂವತ್ತೈದು ಇರಬಹುದಲ್ಲವೆ."

"ಸುಮಾರು ಅಷ್ಟು."

"ಇನ್ನೂ ಸಾಕಷ್ಟು ಚಿಕ್ಕವರು ನೀವು; ಚೆನ್ನಾಗಿ ದುಡಿಯಬಲ್ಲ ಶಕ್ತಿ ನಿಮಗಿರಬೇಕು. W. A. C. ಆಗಿ ಕೆಲವು ಸಮಯ ಕೆಲಸ ಮಾಡಿದ್ದೀರಿ ಎಂದಿರಿ. ಅದರಿಂದ ಅನಾಥರ ಶುಶ್ರೂಷೆ ನೀವು ಕಲಿತಿರಬಹುದು. ಆದರೂ ನನಗೆ ವ್ಯಕ್ತಿಶಃ, ವ್ಯಾಕ್ ಉದ್ಯೋಗದ ಮೇಲೆ ವಿಶೇಷವಾದ ಗೌರವವಿಲ್ಲ. ಇಲ್ಲಿನ ಆವರಣ ಬೇರೆ; ಅಲ್ಲಿನದು ಬೇರೆ."

"ನೀವೆನ್ನುವ ಮಾತು ತೀರ ನಿಜ. ಈ ಹೊತ್ತು ನನಗೂ ಅದರಲ್ಲಿ ಆದರ ಉಳಿದಿಲ್ಲ. ವ್ಯಾಪಾರೀ ಕಂಪನಿ, ಕಾರ್ಯಾಲಯಗಳ ಗದ್ದಲವೂ ನನಗೆ ಬೇಡಾಗಿದೆ. ಏನಾದರೂ ನಿಸ್ಸೀಮವಾದ ಸೇವೆ ಸಲ್ಲಿಸುವ ಭಾಗ್ಯಬೇಕು ಎಂದು ಮನಸ್ಸು ಹೇಳುತ್ತಿದೆ."

"ಆಗಲಿ, ಎಂದಿನಿಂದ ನೀವು ಕೆಲಸಕ್ಕೆ ಬರುತ್ತೀರಿ?"

"ಈಗಿಂದಲೇ."

ಸೇಠಜೀ ನಕ್ಕನು. ಅವಳನ್ನು ಕರೆದುಕೊಂಡು ಆ ಮಂದಿರವನ್ನೆಲ್ಲ ಸುತ್ತಿ ತೋರಿಸಿಕೊಂಡು ಬಂದನು. ಅವಳ ಕೆಲಸದ ಹೊಣೆಯನ್ನು ವಿವರಿಸಿ ಹೇಳಿದನು. "ಹಗಲು, ಬೇರೆ ಸಹಾಯಕರಿದ್ದಾಗ ಒಂದೆರಡು ಗಳಿಗೆ ಹೊರಗೆ ತಿರುಗಾಟಕ್ಕೆ ನೀವು ಹೋಗಬಾರದು ಎಂದು ನಾನೆನ್ನುವುದಿಲ್ಲ. ಆದರೆ ಕತ್ತಲಿಂದ ಬೆಳಗಿನ ತನಕ ಇಲ್ಲಿಯೇ ಇರಬೇಕಾಗುತ್ತದೆ. ಮೂರು ತಿಂಗಳ ಕಾಲ ಪರೀಕ್ಷೆಗಾಗಿ ನೀವಿಲ್ಲಿರಿ. ನನಗೆ ನಿಮ್ಮ ಕೆಲಸ, ನಡವಳಿಕೆ

ಸಮಾಧಾನವಾದರೆ ಕೆಲಸ ಖಾಯಂ ಮಾಡುತ್ತೇನೆ” ಎಂದ.

ಅಂದಿನಿಂದ ಮಂಜುಳೆಯ ಜೀವನದಲ್ಲಿ ಹೊಸ ಘಟ್ಟವೊಂದು ಪ್ರಾರಂಭಿಸಿದಂತಾಯಿತು. ವಿಶೇಷವಾದ ಆನಂದ, ಉತ್ಸಾಹಗಳು ಅವಳಲ್ಲಿ ತುಂಬಿಕೊಂಡವು. ಕೆಲಸಕ್ಕೆ ನಾಲ್ವರು ಸಹಾಯಕಿಯರಿದ್ದರು. ಅಡುಗೆಗೆ ಕೆಲಸಗಾರರಿದ್ದರು. ಚಿಲ್ಲರೆ ಚಾಕರಿಗೆ ಜವಾನರು ಇದ್ದರು. ಬರವಣಿಗೆಗೆ ಗುಮಾಸ್ತರಿದ್ದರು. ಆದರೆ ವಯಸ್ಸಿನಲ್ಲಿ ಅಂತರವಿರುವ, ಶಿಕ್ಷಣದಲ್ಲಿ, ಜನ್ಮದಲ್ಲಿ ಅಂತರವನ್ನು ಪಡೆದೇ ಬಂದಿರುವ, ಐವತ್ತು ಅರುವತ್ತು ಮಕ್ಕಳ ನಿತ್ಯ ಊಟ, ಆಟ, ಪಾಠ ಚಟುವಟಿಕೆ, ಜಗಳ-ಇವುಗಳನ್ನೆಲ್ಲ ನೋಡಿಕೊಂಡು, ಅವುಗಳ ಮನಸ್ಸಿಗೆ ನೋವಾಗದಂತೆ, ಅವುಗಳ ಚಾಳಿ ಕೆಡದಂತೆ, 'ತಾವು ಅನಾಥರು; ತಮ್ಮನ್ನು ಇಲ್ಲಿ ಕೇಳುವವರಿಲ್ಲ' ಎಂದು ಕಾಣಿಸದಂತೆ ನಡೆಯಿಸುವ ಹೊಣೆ ಮಾತ್ರ ಸಾಮಾನ್ಯದ್ದಾಗಿರಲಿಲ್ಲ. ಅವಳಿಗಿಂತ ಪೂರ್ವದಲ್ಲಿ, ಒಬ್ಬಳು ನಿವೃತ್ತ ಉಪಾಧ್ಯಾಯಿನಿ ಆ ಕೆಲಸದಲ್ಲಿದ್ದಳು. ಅವಳು ತನ್ನ ಠೀವಿಯಿಂದ, ಇನ್ನೂ ತಾನು ಉಪಾಧ್ಯಾಯಿನಿಯೇ ಎಂಬ ಅಧಿಕಾರದಿಂದ, ಆ ಮಕ್ಕಳನ್ನು ನಡೆಸಿಕೊಂಡು ಹೋದವಳು. ಅವಳು ಬಂದೊಡನೆ ಮಕ್ಕಳು ಥಟ್ಟನೆ ಎದ್ದು ನಿಲ್ಲಬೇಕಾದ ಶಿಸ್ತನ್ನು ಹೊರಿಸಿದ್ದಳು. ಆಗ ಪ್ರತಿಯೊಂದೂ 'ಹಾಗೆ ಮಾಡಬೇಡ, ಹೀಗೆ ಮಾಡಬೇಡ' ಎಂಬಂತಹ ಅಪ್ಪಣೆಯ ರಾಜ್ಯವಾಗಿತ್ತು. ಅಲ್ಲಿನ ಹಳೆಯ ಆವರಣವೆಂಬುದು ಅನಾಥರ ಪಾಲಿನ ಒಂದು ಸರಕಾರವಾಗಿತ್ತು. ಅಲ್ಲಿ ಜಾಗ ವಿಶಾಲವಾಗಿದೆ; ಕಟ್ಟಡವೂ ಚೆನ್ನಾಗಿದೆ. ಸೇಠಜಿಯು ಮಕ್ಕಳ ಊಟ ಅರಿವೆಗಳ ಕೊರತೆಯನ್ನು ನೀಗಿಸುವುದಕ್ಕೆ ಬೇಕಷ್ಟು ಹಣವನ್ನು ವ್ಯಯಿಸುತ್ತಿದ್ದಾನೆ. ಆದರೆ ಮಕ್ಕಳ ಕೊಳೆ ಬಟ್ಟೆಗಳನ್ನು ಸಮನಾಗಿ ತೊಳೆಯುವವರಿದ್ದಿರಲಿಲ್ಲ; ಕೊಟಡಿಯ ಧೂಳನ್ನು ಸಮನಾಗಿ ಗುಡಿಸುವವರು ಇದ್ದಿರಲಿಲ್ಲ. ಈ ಪರಿಸ್ಥಿತಿಯು ಮಂಜುಳೆಯ ಭಾವಮಯ, ಪ್ರೀತಿಮಯ ಸ್ವಭಾವಕ್ಕೆ ಸಂಪೂರ್ಣ ವಿರುದ್ಧವಾಗಿತ್ತು. ಅಲ್ಲಿ ಕುಳಿತ ಗಳಿಗೆಯಿಂದ, ಅವಳು ಸುತ್ತಲಿನ ವಾತಾವರಣದೊಡನೆ ಕಾದಾಡತೊಡಗಿದಳು. ತನ್ನ ಸಹಾಯಕರ ಮನಸ್ಸನ್ನು ಮಿದುಗೊಳಿಸಲೆತ್ನಿಸಿದಳು. ಪ್ರತಿಯೊಂದು ಕೂಸಿನ ಪರಿಚಯಮಾಡಿಕೊಳ್ಳತೊಡಗಿದಳು. ಅಲ್ಲಲ್ಲಿ ಬಿದ್ದ ಕೊಳೆ ಕಸಗಳನ್ನು ತಾನೇ ಹೆಕ್ಕಿ ತೆಗೆಯತೊಡಗಿದಳು. ಕೆಲಸಗಾರರು ಚೊಕ್ಕವಾಗಿ ತೊಳೆಯದ ಅರಿವೆಗಳನ್ನು, ತಾನೇ ತೊಳೆಯುವುದಕ್ಕೂ ಮುಂದಾದಳು.

ಇದು ಉಳಿದ ಕೆಲಸಗಾರರಿಗೆ ಸಂಕೋಚವನ್ನುಂಟುಮಾಡಿತು. ಅಲ್ಲಿಂದ ಹವಾಮಾನ ಬದಲಿಸಿತು. ಮಕ್ಕಳ ಮನಸ್ಸು ಗೆಲವುಗೊಳ್ಳತೊಡಗಿತು. ಭಯದಿಂದ ಅಳುಕುತ್ತಿದ್ದ ಅವರ ಮನಸ್ಸುಗಳು ಭೀತಿಯ ಬದಲು ಪ್ರೀತಿಗೆ ತುಂಬುಕೊಟ್ಟುವು. ಹೀಗೆ ಮಂಜುಳೆ ಒಂದು ಮಗುವಿಗಲ್ಲ; ಅರವತ್ತು ಮಕ್ಕಳಿಗೆ "ತಾಯಿ"ಯಾದಳು. ಆದರೆ ಮಾತ್ರ, ಈ ಕೆಲಸಗಳು ಅವಳ ಪ್ರತಿಯೊಂದು ಕ್ಷಣವನ್ನೂ ನುಂಗುವ ಕೆಲಸಗಳಾದುವು.

ಪ್ರತಿ ಆದಿತ್ಯವಾರವೂ ಸೇಠಜಿ ಅಲ್ಲಿಗೆ ಬಂದು ಹೋಗುತ್ತಿದ್ದರು. ಮೂರು ತಿಂಗಳ ಅವಧಿಯಲ್ಲಿ ತನ್ನ ಆಯ್ಕೆ ತಪ್ಪಾಗಲಿಲ್ಲ ಎಂಬ ಭಾವನೆ ಅವನಿಗೂ ಉಂಟಾಯಿತು. ಆತ ಒಂದು ದಿನ ಮಂಜುಳೆಯೊಡನೆ 'ಈಗ ನನ್ನ ಮನಸ್ಸಿಗೆ ಸಮಾಧಾನವಾಗಿದೆ. ಇಷ್ಟು ದಿನ– ನನ್ನ ಹಣ ಖರ್ಚಾಗುತ್ತಿದೆ, ಮಕ್ಕಳ ಹೊಟ್ಟೆಗೇನೋ ಇಷ್ಟು ಅನ್ನ ಬೀಳುತ್ತಿದೆ–ಎಂಬ ಸಮಾಧಾನವಿತ್ತೇ ಹೊರತು, ಮಕ್ಕಳ ಮುಖದಲ್ಲಿ ಹೆಚ್ಚಿನ ಗೆಲುವನ್ನು ನಾನು ಕಂಡಿರಲಿಲ್ಲ. ದೇವರು ನನಗೆ ದುಡ್ಡು ಕೊಟ್ಟಿದ್ದಾನೆ; ಮೂವರು ಹೆಂಡಿರಿದ್ದಾರೆ. ಆದರೆ ಸಂತಾನ ಭಾಗ್ಯವನ್ನು ಕಂಡಿಲ್ಲ ಎಂಬ ಕೊರಗು ನನ್ನದು. ಇದೊಂದೊಂದಾದರೂ ಒಳ್ಳೆಯ ಕೆಲಸವನ್ನು ಮಾಡಿ ಸಾಯುತ್ತೇನೆ ಎಂಬ ಅಪೇಕ್ಷೆಯಿಂದ 'ಈ ಅನಾಥಾಲಯ ತೊಡಗಿದರೆ, ಮನಸ್ಸಿಗೆ ಸಮಾಧಾನ ಬರಲೇ ಇಲ್ಲ. ಇನ್ನು ಬಂದೀತು" ಎಂದು ಮಂಜುಳೆಯ ಭುಜ ತಟ್ಟಿ ಹೇಳಿದನು. ಮತ್ತೊಂದು ದಿನ, ಅವಳ ಕೆಲಸ ಸಾಯಂ ಮಾಡಿದ ಬಳಿಕ, "ನಿಮಗೆ ಇಲ್ಲಿನ ಎಲ್ಲಾ ಏರ್ಪಾಟುಗಳಲ್ಲಿ ಸಮಾಧಾನವಿದೆಯೋ? ಏನಾದರೂ ಬದಲಾವಣೆಗಳಾಗಬೇಕೇ" ಎಂದು ಕೇಳಿದರು.

"ಆಗಬೇಕಾದದ್ದೆಷ್ಟೋ ಇರಬಹುದು. ನಿಮ್ಮ ಆಶಯವೇನೆಂದು ನನಗೆ ಪೂರ್ಣ ತಿಳಿದಿಲ್ಲ. ಇವರಲ್ಲಿ ದೊಡ್ಡ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡಬಹುದಲ್ಲ. ಅಥವಾ ಏನಾದರೊಂದು ವೃತ್ತಿ ಹೇಳಿಕೊಡಬಹುದಲ್ಲ– ಎನಿಸುತ್ತದೆ. ಸಣ್ಣ ಮಕ್ಕಳು ಬರಿಯ ಮಣ್ಣಿನಲ್ಲೇ ಆಡುತ್ತಿರಬೇಕಾಗಿದೆ. ಅವರಿಗೇನಾದರೂ ಆಟದ ಉಪಕರಣಗಳನ್ನು ತಂದು ಹಾಕಬಹುದೆನಿಸುತ್ತದೆ" ಎಂದು, ಮುಂದೆ ನಿಧಾನಿಸಿ ಇನ್ನೇನೇನೋ ಹೇಳುವುದಕ್ಕೆ ಹೋದಳು.

ಸೇಠಜೀ "ಕೇಳುತ್ತಿದ್ದೇನೆ. ಎಲ್ಲವನ್ನೂ ಹೇಳಿ" ಎಂದ.

"ಮತ್ತೇನಿಲ್ಲ–ನಾನು ಹೊರಗಿಂದ ಕೇಳಿದ ಸಮಾಚಾರ– ನೀವು ತೆಗೆ

ಯಿಸಿಕೊಡುತ್ತಿರುವ ಆಹಾರ, ಅರಿವೆ, ಸಾಮಗ್ರಿಗಳು— ಅವುಗಳ ಲೆಕ್ಕಾಚಾರವೊಂದೂ ನನಗೆ ತಿಳಿಯದು. ಅವುಗಳು ಸಂಪೂರ್ಣ ಇಲ್ಲಿಗೆ ಬರುತ್ತಿವೆಯೋ—ಎಂದೂ ತಿಳಿಯದು. ಹಾಲಿನವನೊಡನೆಯೂ 'ಮೋಸ ಮಾಡುತ್ತೀಯಲ್ಲ' ಎಂದು ನಾನು ಜಗಳಾಡಬೇಕಾಯಿತು. ಹಾಗೆ ಕೆಲಸಗಾರರೊಡನೆ ದ್ವೇಷ ಕಟ್ಟಿಕೊಳ್ಳುವುದಕ್ಕೆ ಇಷ್ಟವಾಗದೆ ಸುಮ್ಮನಿದ್ದೇನೆ" ಎಂದಳು.

"ನನಗೂ ಅದು ತಿಳಿದಂಥ ಸಂಗತಿಯೆ. ಇಲ್ಲಿನ ಗುಮಾಸ್ತರಾದಿಯಾಗಿ ಎಲ್ಲರೂ ವಂಚಿಸುತಿದ್ದಾರೆ. ನಾನು ಒಬ್ಬಂಟಿಗ, ಏನು ಮಾಡಲಿ—ಎಂಬ ಚಿಂತೆ ನನಗೂ ಇದೆ. ಪ್ರತ್ಯಕ್ಷ ನಿದರ್ಶನ ನನಗೆ ಸಿಕ್ಕಿಲ್ಲವಾದರೂ, ಅಂತಹ ಅನುಮಾನ ನನಗಂತೂ ಇದ್ದೇ ಇದೆ. ನಮ್ಮ ಜನಗಳ ಸ್ವಭಾವವೇ ಹಾಗೆ" ಎಂದರು.

"ಹಾಗಿದ್ದರೆ ಆ ವಿಷಯದಲ್ಲಿ ನಾನು ಕಣ್ಣಿಟ್ಟು ನೋಡಲೇ? ಆದರೆ ಅದು ನಿಷ್ಠುರಕ್ಕೆ ಕಾರಣವಾಗುವುದು ಖಂಡಿತ."

"ನೋಡಲೇ ಬೇಕು. ನಾನು ಇಷ್ಟೆಲ್ಲ ಮಾಡಿದುದು ಆ ಮಕ್ಕಳಿಗಾಗಿ, ಅದರಲ್ಲಿ ಯಾವ ವಂಚನೆಯಾದರೂ ತಪ್ಪೇ. ಆ ವಿಷಯದಲ್ಲಿ ಯಾರ ಮೇಲೆಯೂ ದಾಕ್ಷಿಣ್ಯವಿರಕೂಡದು" ಎಂದಂದು ಹೋದ. ಮಕ್ಕಳನ್ನು ಒಲಿಸುವುದು ಮಂಜುಳೆಗೆ ಕಷ್ಟವಾಗಲಿಲ್ಲ. ಅವರ ಆವರಣವನ್ನು ಬಿಟ್ಟು ಅವಳು ತಿರುಗಾಟಕ್ಕೆ ಹೋಗುತ್ತಿರಲಿಲ್ಲ. ಹೋದರೂ ಸಂಜೆಯ ಹೊತ್ತಿಗೆ ಹತ್ತೆಂಟು ಮಕ್ಕಳನ್ನು ಜತೆಗೆ ಕಟ್ಟಿಕೊಂಡು, ಆಟದ ಬಯಲಿಗೆ ವಿಹಾರಕ್ಕೆ ಹೋಗುತ್ತಾಳೆ. ಆದರೆ ಜತೆಯಲ್ಲಿಯೇ ಕೆಲಸ ಮಾಡುವ ತನ್ನ ಸಹಾಯಕರನ್ನಾಗಲಿ ಹಣದ ವಿಷಯದಲ್ಲಿ ಕೊಳ್ಳುವ, ಕೊಡುವ ಗುಮಾಸ್ತ, ಸೇವಕ, ಮೊದಲಾದವರನ್ನು ಅನುಮಾನಿಸಿ, ಹೊಂಚು ಹಾಕುತ್ತಿರುವುದು ಕಠಿಣ. ಹಾಗೆ ಅವರು ಕೊಳ್ಳುವ ಸಾಮಾನುಗಳಲ್ಲಿಯೂ ಮೋಸವಿತ್ತು. ಕೊಡುವ ಅಂಗಡಿಕಾರನಿಂದಲೂ ಮೋಸವಿತ್ತು. ಮಕ್ಕಳಿಗಾಗಿ ತಂದುದರಲ್ಲಿ ಸ್ವಲ್ಪವನ್ನು ಗುಟ್ಟಾಗಿ ಮಾರುವ, ಸಾಗಿಸುವ ಹಿರಿಯ ಕಿರಿಯ ಮೋಸಗಳಿಂದಲೇ ಅಲ್ಲಿಯ ವ್ಯವಹಾರ ತುಂಬಿಕೊಂಡಿತ್ತು. ಆಕೆ ವ್ಯವಹಾರ ಒಂದೊಂದರ ವಿವರವನ್ನೂ ಬರೆದಿರಿಸಿಕೊಂಡಳು. ಕಳ್ಳತನ ಗೊತ್ತುಹಚ್ಚಿದಳು. ಸಹಾಯಕರಾದವರ ನಿಷ್ಠುರಕ್ಕೂ ಪಾತ್ರಳಾದಳು. ಎಲ್ಲವಕ್ಕೂ ಸಂಬಂಧಿಸಿದವರನ್ನು ನಿಲ್ಲಿಸಿಕೊಂಡೇ ಸೇಠಜೀಯ ಮುಂದೆ ಬಯಲಿಗೆ ತಂದಳು. ಒಬ್ಬೊಬ್ಬ

ರನ್ನು ಕೆಲಸದಿಂದ ಬಿಡಿಸಬೇಕಾಗಿಯೂ ಬಂದಿತು. ಉಳಿದವರು ಹೆದರಿ ಕ್ಷಮೆ ದೊರಕಿಸಿಕೊಂಡರು. ಮಂಜುಳೆಯನ್ನು ಶಪಿಸತೊಡಗಿದರು. ಒಂದು ವರ್ಷ ಕಾಲ ಹೀಗೆ ಅವಳು ಕಾಲ ಹಾಕಿದಳು. ಸೇಠಜೀಗೆ ಅವಳಲ್ಲಿ ಅತಿ ಹೆಚ್ಚಿನ ವಿಶ್ವಾಸವುಂಟಾಗಿ ಅವಳು ಹೇಳಿದಂಥ ವೆಚ್ಚ, ಮಾಡಿದ ಸೂಚನೆ-ಮನ್ನಿಸುವುದಕ್ಕೆ ಸಿದ್ಧನಾದನು. "ಇಷ್ಟೇ, ನನಗಿರುವ ತಲೆ ಬೇನೆ ಎಳೆಯರಾದ ನಿಮ್ಮ ತಲೆಗೆ ಸುತ್ತಿಕೊಳ್ಳುವಂತಾಯಿತು" ಎಂದ.

"ಈ ಮಕ್ಕಳ ಸೇವೆಯೊಂದು ತಲೆಬೇನೆ ಎಂದು ನಾನೆಣಿಸಿಕೊಂಡಿಲ್ಲ. ಶ್ರಮವೇನೋ ಆಗುತ್ತಿದೆ. ಒಬ್ಬಿಯ ಸಹಾಯಕರಿದ್ದರೆ ಕೆಲಸವೂ ಸುಲಭವಾಗಬಹುದು ಎಂದನಿಸುತ್ತದೆ" ಎಂದಳು.

"ನೀವೇ ಹುಡುಕಿ ನೋಡಿ; ಇನ್ನೊಬ್ಬರನ್ನು ಸಹಾಯಕರಾಗಿ ಕರೆದುಕೊಳ್ಳಿ. ನನ್ನದೇನಾಕ್ಷೇಪ?" ಎಂದ ಆತ.

* * * * *

ತಾನು ಅಲ್ಲಿಗೆ ಬಂದ, ಒಂದು ವರ್ಷದ ಹಬ್ಬವನ್ನು ಮಂಜುಳೆ ವಿಚಿತ್ರ ರೀತಿಯಿಂದ ನಡೆಸಿದಳು. ಅವಳ ಊಟ ಅಲ್ಲಿಯೇ ನಡೆಯುತಿತ್ತು. ಖಾಸಗಿಯ ವೆಚ್ಚ, ಉಡುಗೆತೊಡುಗೆಗಳ ಆಡಂಬರ ಮೊದಲಾದ ಭ್ರಮೆಗಳು ಹೊರಟುಹೋಗಿವೆ. ಹೀಗಾಗಿ ವರ್ಷ ಕೊನೆಗಂಡ ದಿನ, ತನ್ನ ವಶದಲ್ಲಿರುವ ಎಲ್ಲ ಮಕ್ಕಳಿಗೂ, ತನ್ನ ವೆಚ್ಚದಲ್ಲಿ ಚೆಲುವಿನ ಉಡುಗೆತೊಡುಗೆ ಮಾಡಿಸಿಕೊಟ್ಟು ಹಿಗ್ಗಿದಳು. ಆ ಸಂಜೆ ಅವರನ್ನೆಲ್ಲ ತನ್ನ ಆತ್ಮಸಂತೋಷಕ್ಕಾಗಿ ಹೊರಗೆ ತಿರುಗಾಟಕ್ಕೆ ಕರೆದೊಯ್ದಳು. ಅಂಧೇರಿಯಿಂದ ಹೊರಟು, ಸಾಂತಾಕ್ರೂಸಿಗೆ ಹೋಗಿ, ಅಲ್ಲಿನ ವಿಮಾನ ನಿಲ್ದಾಣವನ್ನು ಮಕ್ಕಳಿಗೆ ತೋರಿಸಿ, ಮುಂದೆ ಕಡಲು ತೀರಕ್ಕೆ ಅವರನ್ನು ಕರೆದೊಯ್ದಳು. ಅವರನ್ನೆಲ್ಲ ಕಂಡು, ಕಡಲು ವಿಶೇಷ ಉಕ್ಕಿನಿಂದ ನಗುತ್ತಿದಂತೆ ಭಾಸವಾಯಿತು ಮಂಜುಳೆಗೆ. ತೆಂಗಿನ ಮರದ ತೋಪೊಂದರಲ್ಲಿ ತನ್ನ ಆಶ್ರಯದ, ಎಳೆಯ ಕೂಸೊಂದರ ಜತೆಗೆ ಕುಳಿತುಕೊಂಡಳು. ಉಳಿದ ಮಕ್ಕಳು ಮರಳಿನ ದಂಡೆಯಲ್ಲಿ ಆಡುತ್ತಿರುವುದನ್ನು ಕಾಣುತ್ತ ವಿಚಾರಮಗ್ನಳಾದಳು. ಆ ಮಗು ಇವಳನ್ನು ಏನೇನೋ ಕೇಳುತಿತ್ತು. ಇವಳ ಮನಸ್ಸು ಇನ್ನೆಲ್ಲಿಗೋ ಹೊರಟಿತ್ತು. ಸುತ್ತಲೆಲ್ಲ—ವಿನೋದ ಮಗ್ನರಾಗಿ, ವಿಲಾಸ ಮಗ್ನರಾಗಿ ಸದ್ದುಮಾಡುತ್ತಿರುವ ಪ್ರಣಯಿಗಳನ್ನೋ ವಿಹಾರಿಗಳನ್ನೋ ಕಂಡು ಅವಳ ಮನಸ್ಸು

ಅಂತರ್ಮುಖಿಯಾಗಿತ್ತು. 'ನಾನೂ ಹಾಗೆ ಸಾಕಷ್ಟು ಹುಚ್ಚಾಟ ಆಡಿದವಳಲ್ಲವೆ? ಇಲ್ಲಿಗೆ ಹಲವು ಬಾರಿ ವಯ್ಯಾರಿಯಾಗಿ ಬಂದವಳಲ್ಲವೆ?' ಎಂದು ತನ್ನ ನಾಚಿಕೆಯ ದಿನಗಳನ್ನು ನೆನಪು ಮಾಡಿಕೊಡುತಿತ್ತು. ಆ ವೇಳೆಗೆ ಸಮನಾಗಿ–ಯಾರೋ ಇಬ್ಬರು ಎದುರಿಂದ ಬರುವುದು ಕಾಣಿಸಿತು. ಗುರುತಿಸದೆ, ಆಕೆ ನೆಲವನ್ನು ನೋಡುತ್ತ ಕುಳಿತಳು. ಬಂದವರಲ್ಲಿ ಒಬ್ಬನು ಮಧ್ಯವಯಸ್ಕ; ಯೋಧ ಉಡುಗೆಯಲ್ಲಿದ್ದ. ಅವನ ಜತೆಗಾರ್ತಿಯಾದವಳು ಹುಚ್ಚಳಂತೆ ಅವಳ ಬಳಿಗೇ ಓಡಿಬಂದು ಅವಳ ಭುಜ ತಟ್ಟಿದಳು; ಅವಳನ್ನೆಳೆದು 'ಮಂಜುಳಾ' ಎಂದು ಹಿಗ್ಗಿನಿಂದ ಚೀರಿದಳು. ಅವಳಿಗೆ ಎಚ್ಚರವಾಯಿತು. ಚಕಿತಳಾಗಿ ನೋಡುತ್ತಾಳೆ: ಎದುರಿಗೆ ನಿಂತುದು ಅಂಜಲಿ! ಆಕೆ ನಗುತ್ತ ಆ ಯೋಧ ಮಿತ್ರನನ್ನು ಕರೆದು "ಮುಜುಮುದಾರ್, ಇವಳು ನನ್ನ ಜೀವದ ಗೆಳತಿ ಮಂಜುಳ. ಸ್ವಲ್ಪ ಕಾಲ W. A. C. ಆಗಿ ನನ್ನೊಡನಿದ್ದವಳು. ಇದು ಯಾರು ಗೊತ್ತೇ? ಮಿಸ್ಟರ್ ಅಂಜಲಿ" ಎಂದು ಅವಳಿಗೂ ಮುಜುಮುದಾರನ ಪರಿಚಯ ಮಾಡಿಕೊಟ್ಟು ನಕ್ಕಳು. ಹತ್ತಿರ ಆಡುತ್ತಿದ್ದ ಮಗುವಿನ ಗಮನ ಇಲ್ಲದೆಯೆ ಮಂಜುಳೆ ಎದ್ದು ನಿಂತಳು. "ಮಿಸ್ಟರ್ ಅಂಜಲಿ?" ಎಂದುದರ ಅರ್ಥ ತಿಳಿಯದೆ ಆಚೀಚೆ ನೋಡಿದಳು.

"ಅದು ನನ್ನ ಗಂಡನಾದ ಪದಾರ್ಥಕ್ಕೆ ನಾನು ಕೊಟ್ಟಿರುವ ಸೇಡಿನ ಹೆಸರು. ನಾನೀಗ ಮಿಸೆಸ್ ಮುಜುಮುದಾರಳಾಗಿದ್ದೇನೆ. ಮದುವೆಯಾಗಿ ಆರು ತಿಂಗಳಾದುವು" ಎನ್ನುತ್ತ, ಮಂಜುಳೆಯ ಬಳಿ ಆಡುತ್ತಿದ್ದ ಮಗುವನ್ನು ತೋರಿಸಿ "ಇದು ನಿನ್ನ ಮಗುವೇ?" ಎಂದು ಕೇಳಿದಳು.

ಆಗ ಮಂಜುಳೆಗೆ ನಗು ಬಂದಿತು. ಆ ಮಗುವನ್ನು ಎತ್ತಿಕೊಂಡಳು. ಕಡಲು ದಿನ್ನೆಯಲ್ಲಾಡುತ್ತಿದ್ದ ಇತರ ಮಕ್ಕಳನ್ನು ತೋರಿಸಿ "ಅವರೆಲ್ಲರೂ ಈಗ ನನ್ನ ಮಕ್ಕಳೇ" ಎಂದಳು. ಅಂಜಲಿಗೆ ಅರ್ಥ ತಿಳಿಯದಾಯಿತು. ಮಂಜುಳೆಯೇ ವಿವರಿಸಿ ಹೇಳಿದಳು– ತನ್ನ ಹೊಸ ಉದ್ಯೋಗವೇನೆಂದು ಬಣ್ಣಿಸಿ ಹೇಳಿದಳು.

"ಏನು ಮಂಜುಳಾ, ನೀನು ವಿರಕ್ತಳಾದವಳಂತೆ ಕಾಣಿಸುತ್ತಿತ್ತು. ನೀನು ತೀರ ಬೇರೆಯಾಗಿದ್ದೀಯ."

"ನಿಜ, ನಿನ್ನಂಥವಳೇ ಮದುವೆಯಾದ ಮೇಲೆ, ನಾನು ವಿರಾಗಿಯಾಗುವುದರಲ್ಲೇನು ಆಶ್ಚರ್ಯ?"

ಆಗ ಅಂಜಲಿಗೂ ನಗು ಬಂದಿತು. "ಮುಜುಮದಾರ್, ಮಂಜುಳೆಯೊಡನೆ ನಾನು ಮದುವೆಯಾಗುವುದಿಲ್ಲವೆಂದೇ ಹೇಳಿದ್ದೆ. ಅದಕ್ಕೀಗ ಅವಳು ಚುಚ್ಚಿ ನುಡಿಯುತ್ತಾಳೆ. ನಾನೆಷ್ಟೋ ಮೂರ್ಖತನ ಮಾಡಿದ್ದೇನೆ. ಇದೂ ಒಂದು ಮೂರ್ಖತನವಾಯಿತಲ್ಲವೇ?"

ಅದಕ್ಕೆ ಮಂಜುಳೆ "ನಾನು ಹಾಗೆ ಹೇಳುವುದಿಲ್ಲ" ಎಂದಳು. ಅಷ್ಟಕ್ಕೆ ಗಡಿಯಾರವನ್ನು ನೋಡಿದಳು. ವೇಳೆ ಸರಿದಿತ್ತು. ಅವಳು ಮಕ್ಕಳನ್ನು ಅನಾಥಾಲಯಕ್ಕೆ ಕರೆದೊಯ್ಯುವ ಸಮಯವಾಗಿತ್ತು. "ಅಂಜಲಿ, ನಿನ್ನೊಡನೆ ತುಂಬ ಮಾತನಾಡಬಹುದಿತ್ತು. ಈಗ ವೇಳೆ ಸರಿದಿದೆ. ನಾನೀಗ ಅಂಧೇರಿಗೆ ಹೋಗಬೇಕು" ಎಂದು, ತನ್ನ ವಿಳಾಸವನ್ನು ಅವಳಿಗೆ ತಿಳಿಸಿ, ಬರಲೇ ಬೇಕೆಂದು ಪ್ರಾರ್ಥಿಸಿ, ಅವಳನ್ನು ನೋಡನೋಡುತ್ತ ಮಕ್ಕಳನ್ನು ಕರೆದುಕೊಂಡು ಹೊರಟುಹೋದಳು. ಅಂಜಲಿಯೂ ಅವಳ ಗಂಡನೂ ಹತ್ತು ಹೆಜ್ಜೆ ಅವಳ ಜತೆಯಲ್ಲಿ ಹೋಗಿ ಅನಂತರ ಬೀಳ್ಕೊಟ್ಟರು.

ಆ ರಾತ್ರಿಯೆಲ್ಲ ಅಂಜಲಿಯದೇ ಕನಸು ಮಂಜುಳೆಗೆ. 'ಹೇಗಿದ್ದ ಅಂಜಲಿ ಹೇಗಾದಳು? ತುಂಬ ಒಳ್ಳೆಯ ಕೆಲಸವನ್ನೇನೋ ಮಾಡಿದಳು. ಆದರೆ ಹೇಗಿರುತ್ತಾಳೋ! ಮೊದಲಿನಂತೆಯೇ ನಾಲ್ಕು ದಿನಗಳ ಪ್ರಣಯ, ಸ್ನೇಹವಾಗದಿದ್ದರೆ ಸಾಕು, ಎಂದು ಮನಸ್ಸಿನಲ್ಲೇ ಪ್ರಾರ್ಥಿಸಿದಳು. ಆ ದಿನ ರಾತ್ರಿಯೆಲ್ಲ ಅವಳ ಕನಸಿನಲ್ಲಿ ಅಂಜಲಿಯ ಸಮಸ್ಯೆ ತುಂಬಿಕೊಂಡಿತ್ತು. ಯಾಕೆ ಅವಳಂಥ ಸ್ವಾತಂತ್ರ್ಯಪ್ರಿಯೆ, ಒಬ್ಬ ಗಂಡುಸಿನ ಹುಚ್ಚಿನಿಂದ ತಾನು ಇಷ್ಟಪಡದಂಥ ಮದುವೆಯ ಬಂಧನಕ್ಕೆ ಸಿಲುಕಿಕೊಂಡಳು--ಎಂಬ ಪ್ರಶ್ನೆ ಅವಳಿಗೆ ಅರ್ಥವಾಗಲಿಲ್ಲ. ಅಥವಾ ಅವಳ ಸ್ವಭಾವವನ್ನು ಬಲ್ಲ ಒಬ್ಬ ಗಂಡುಸು, ಅವಳ ಸೆರೆಗೆ ಸಿಲುಕಬಹುದೇ ಎಂಬ ಸೋಜಿಗವೂ ಅರ್ಥವಾಗಲಿಲ್ಲ. ಗಂಡು ಹೆಣ್ಣುಗಳ ಮೋಹ ಎಂಬ ಮಾಯೆ ಎಂಥ ವಿಚಿತ್ರ ದೈವ ಸಂಕಲ್ಪ--ಎಂಬ ಆಶ್ಚರ್ಯ ಮಾತ್ರ, ಅವಳ ಕನಸುಗಳನ್ನು ಬೆರಗುಗೊಳಿಸಿತು.

ಅಂಜಲಿದೇವಿಯ ಸಮಸ್ಯೆ ಬಗೆ ಹರಿಯುವುದಕ್ಕೆ ಬಹುಕಾಲ ಹಿಡಿಯಲಿಲ್ಲ. ಮರುದಿನ ಮಧ್ಯಾಹ್ನವೇ ಅವಳೇ ಭೇಟಿಗಾಗಿ ಕಾತರಿಸಿ, ಧಾವಿಸಿ ಮಂಜುಳೆಯಿರುವಲ್ಲಿಗೆ ಬಂದಿದ್ದಳು. ಅವಳ ಮುಖದಲ್ಲಿ ನಗು, ಚೇತನ, ಗೆಲುವುಗಳೆಲ್ಲ ತುಂಬಿ ಹೊರಸೂಸುತಿದ್ದುವು. ಮಿಗದ ನಡಿಗೆಯಿಂದ ಬಂದು

ಒಳಕ್ಕೆ ದುಮುಕಿದಳು. ಬಂದು ಮಂಜುಳೆಯನ್ನು ತಬ್ಬಿ ಹಿಡಿದಳು. ಮರುಳಾಗಿ ಮುತ್ತುಕೊಟ್ಟಳು. ಒಡನೆಯೇ ಮಾತಿಗೆ ತೊಡಗಿದಳು: "ಅಂಬಾಲದಲ್ಲಿ ನಿನಗೆ ವರ್ಗವಾದುದಲ್ಲವೆ? ಅಲ್ಲಿಂದ ಎಷ್ಟು ಸಮಯವಾಯಿತು? ಆ ಒಂದೋ ಮೇಲೆ ಎರಡು ಕಾಗದಗಳನ್ನು ನಿನಗೆ ನಾನು ಬರೆದಿರಬೇಕು. ಮತ್ತೆ ನೋಡು, ಆ ಹುಚ್ಚು ಪ್ರಪಂಚದಲ್ಲಿ ಸಿಕ್ಕಿದ ಮೇಲೆ ಯಾವುದೂ ಬೇಕಾಗುವುದಿಲ್ಲ. ನಿನ್ನಂತಹ ಸ್ನೇಹಿತೆಯೂ ಮರೆವೆಯಾದಳು. ನಿನ್ನೆ, ಜುಹೂವಿನಲ್ಲಿ ನಿನ್ನನ್ನು ನೋಡಿದಾಗ ನನಗೆ ಎಷ್ಟು ಸಂತೋಷವಾಯಿತು, ಗೊತ್ತೇ?" ಎಂದಳು.

"ನನಗೆ ಸಂತೋಷವಾಗಲಿಲ್ಲ ಎಂದು ಹೇಳುತ್ತೀಯಾ?"

"ನಿನ್ನ ಮುಖ ಅದನ್ನು ತಿಳಿಸಿ ಹೇಳಲಿಲ್ಲ. ಇವತ್ತೇ ಗೆಲುವಾಗಿದ್ದೀಯ ನೀನು. ನಿನ್ನೆ ಅಷ್ಟು ಸಂತೋಷವಾಗಿದ್ದ ಹಾಗೆ ಕಾಣಿಸಲಿಲ್ಲ. ಆಶ್ಚರ್ಯಪಟ್ಟ ಹಾಗೆ ಕಾಣುತಿತ್ತು.

"ನಿಜ, ನಾನು ಮದುವೆಯಾದುದನ್ನು ನೋಡಿ ನನಗೇನೆ ಆಶ್ಚರ್ಯವಾಗಿತ್ತು. ನಿನಗೇನು ಆಗುವುದು ದೊಡ್ಡದಲ್ಲ."

"ನಿಜ; ಆ ಆಶ್ಚರ್ಯ ಇನ್ನೂ ಹೋಗಲಿಲ್ಲ. ನಿನ್ನೆ ರಾತ್ರಿ ಕನಸಿನಲ್ಲಿಯೂ ಅದನ್ನೇ ಕುರಿತು ಯೋಚಿಸುತಿದ್ದೆ."

"ನಿನಗೆ ಕೇಳುವ ಇಚ್ಛೆಯಿರುವಂತೆ, ಹೇಳುವ ಉತ್ಕಟ ಅಪೇಕ್ಷೆ ನನಗೂ ಆಗಿದೆ" ಎಂದು ತನ್ನ ಕಥಾನಕವನ್ನು ಪ್ರಾರಂಭಿಸಿದಳು. ಅಂಬಾಲಾ, ಅಲ್ಲಿಂದ ಆಗ್ರಾ, ಕಾನಪುರ ಮೊದಲಾದ ಕಡೆಗಳಲ್ಲಿ ಲೀಲಾಜಾಲವಾಗಿ ಅಲೆದಾಡಿದ ಸುದ್ದಿಯನ್ನು ಹೇಳಿದಳು. ಅನಂತರ "ನೋಡು, ಒಂದು ದಿನ ಸಿಕಂದರಾಬಾದಿನಲ್ಲಿ ನನಗೆ ಕಾಯಿಲೆಯಾಯಿತು; ವಿಷಮ ಜ್ವರದಿಂದ ಮಲಗಿಕೊಂಡೆ. ಎಲ್ಲರೂ ನನ್ನ ಆಸೆ ಬಿಟ್ಟಿದ್ದರು. ನನ್ನನ್ನು ಮದುವೆಯಾದ ಈ ಮುಜುಮುದಾರರಿದ್ದಾರಲ್ಲ, ಇವರು ನನ್ನೂರಿನವರೇ, ಅಂದರೆ ನಾಗಪುರದವರು. ಊರವರಷ್ಟೆ; ಜಾತಿಯವರಲ್ಲ. ನನ್ನ ಸ್ನೇಹಕ್ಕೊಳಗಾದವರು. ಅಲ್ಲಿ ನಾನು ಜೀವದ ಆಸೆಯಿಲ್ಲದೆ ಮಲಗಿದ್ದಾಗ, ಆಗಾಗ ಬಂದು, ನೋಡಿ, 'ನೀನು ಬದುಕುತ್ತೀಯಾ. ಯಾಕೆ ನಿರಾಶಳಾಗುತ್ತೀ?' ಎಂದೆನ್ನುತಿದ್ದರು. ನನಗೆ ಆ ಗಳಿಗೆಯಲ್ಲಿ, ಬದುಕಬೇಕೆಂಬ ಆಸೆಯೇನೋ ತುಂಬ ಇತ್ತು. ಆದರೆ ಅಣ್ಣ, ತಾಯಿಯರನ್ನು ಮರೆತು ಊರುಬಿಟ್ಟು ಹೊರಟು, ಅವರಲ್ಲಿ

ನಿಷ್ಠುರ ಕಟ್ಟಿಕೊಂಡು, ಅವರಿಗೆ ನನ್ನ ಸುದ್ದಿಯೇ ಬೇಡವಾಗಿದ್ದು, ಒಬ್ಬೊಂಟಿಗಳಾಗಿ, ಅನಾಥಳಾಗಿ ಮಲಗಿದ್ದಾಗ, ಇಲ್ಲಿ ಯಾವುದೋ ಊರಿನಲ್ಲಿ, ಯಾವುದೋ ಆಸ್ಪತ್ರೆಯಲ್ಲಿ, ಯಾರೂ ಮೂಸುವವರಿಲ್ಲದೆ, ತನ್ನವರೆಂಬವರಿಲ್ಲದೆ ಸಾಯುತ್ತಿದ್ದೇನಲ್ಲ. ನನಗೆ ಎಷ್ಟೆಲ್ಲ ಜನ ಸ್ನೇಹಿತರಿದ್ದರು. ಈಗಲೂ ಇದ್ದಾರೆ. ಒಬ್ಬ ಮುಜುಮದಾರನನ್ನು ಬಿಟ್ಟು ಇನ್ನೊಬ್ಬರು ನನ್ನನ್ನು ನೋಡ ಬರಲಿಲ್ಲ. ಹಲವರು ಚೆನ್ನಾಗಿದ್ದಾಗ ನನ್ನನ್ನು ಬಯಸಿದರೂ, ಈಗ ನಾನು ಯಾರಿಗೂ ಬೇಡವಾಗಿದ್ದೇನೆ' ಎಂಬ ಚಿಂತೆ ಕಾಡತೊಡಗಿತು. ತನ್ನವರೊಬ್ಬರು ಬಳಿಯಲ್ಲಿಲ್ಲದೆ ಸಾಯುತಿದ್ದೇನಲ್ಲ–ಎಂಬ ಆ ಭಯ, ನೋವನ್ನು ನೆನೆದರೆ ಇವತ್ತಿಗೂ ಕಣ್ಣೀರು ಬರುತ್ತದೆ. ಆ ಒಂದು ಯೋಚನೆ ನನ್ನ ಮನಸ್ಸನ್ನು ಬದಲಿಸಿತು. ಅದು ಕೇವಲ ಸ್ವಾರ್ಥವೆಂದು ಬಲ್ಲೆ. ಆ ಸ್ವಾರ್ಥವಿಲ್ಲದೆಹೋದರೆ ಜೀವನ ಸತ್ಯವಾಗುವುದಿಲ್ಲ ಎಂದು ತೋರತೊಡಗಿತು. ಮುಂದೆ ಕಾಯಿಲೆಯಿಂದ ಪಾರಾದೆ. ವಿಶ್ರಾಂತಿಗೊಂಡು ಹೊರಬಿದ್ದೆ. ಆಗ ಮುಜುಮದಾರರಿಗೆ ಅಲ್ಲಿಂದ ವರ್ಗವಾಗಿತ್ತು. ಹುಷಾರಾದ ಮೇಲೆ ನಾನು ಅವರಿಗೆ ಕೃತಜ್ಞತೆಯನ್ನು ಸೂಚಿಸಿ ಒಂದು ಪತ್ರ ಬರೆದೆ. ಅವರೂ ಉತ್ತರ ಬರೆದರು. ನಾನು ಅವರಿಗೆ ಬರೆದ ಕಾಗದದಲ್ಲಿ ನನ್ನ ಜ್ವರದ ಕಾಲದಲ್ಲಿ ಉಂಟಾದ ಯಾತನೆಗಳನ್ನೆಲ್ಲ ತಿಳಿಸಿದ್ದೆ. ಅವರಿಂದ ಬಂದ ಕಾಗದದಲ್ಲಿ 'ನೀನು ಬಯಸಿದರೆ ನಿನ್ನವರಿದ್ದಾರೆ. ನೀನೊಬ್ಬಂಟಿಗಳಲ್ಲ' ಎಂಬ ಪ್ರತ್ಯುತ್ತರ ಬಂದಿತು. 'ನಿಜಕ್ಕೂ ಹಾಗೆ ಹೇಳುತಿದ್ದೀರಾ?' ಎಂದು ಬರೆದೆ. 'ಅಹುದು' ಎಂದು ಅವರೂ ಬರೆದರು. 'ನಾಲ್ಕು ಜನರೊಡನೆ ನಾನು ಹಾರಾಡಿದುದನ್ನು ನೋಡಿದ್ದೀರಿ. ಆ ಮೇಲೆಯೂ ನನ್ನನ್ನು ನಿಮ್ಮವಳೆಂದು ಬಯಸುತ್ತೀರಾ?' ಎಂದು ಕೇಳಿದೆ. ಅದಕ್ಕೆ ಪ್ರತ್ಯುತ್ತರ ಬರಲಿಲ್ಲ. ಒಂದು ವಾರದ ಮೇಲೆ ಅವರೇನೆ ಬಂದರು. ಬಂದು 'ಹೌದು; ನೀನು ನನ್ನನ್ನು ನಂಬುವುದು ಸಾಧ್ಯವಿದ್ದರೆ ನಾನು ನಿನ್ನನ್ನು ನಂಬುತ್ತೇನೆ' ಎಂದರು.

"ಅದೆಲ್ಲವನ್ನು ನೆನೆದರೆ ಮಂಜುಳಾ, ಒಬ್ಬೊಬ್ಬರ ಜೀವನದಲ್ಲಿ ಏನೇನಾಗುತ್ತದೆ ಎನ್ನುವುದಕ್ಕೆ ಬರುವುದಿಲ್ಲ. ನಾನು ನಿವೃತ್ತಿಗೊಂಡ ಮೇಲೆ ಅವರನ್ನು ಮದುವೆಯಾದೆ. ನಾನು ನಿವೃತ್ತಿಗೊಂಡೆ; ಅವರಲ್ಲ. ಅವರಿನ್ನೂ ಕೆಲಸದಲ್ಲಿದ್ದಾರೆ. ಸೇನೆಯಲ್ಲಿ ಕೆಪ್ಟನ್ ಆಗಿದ್ದಾರೆ. ನನ್ನ ಜೀವನವನ್ನು ತಿಳಿದೂ ಮದುವೆಯಾದುದನ್ನು ನೋಡಿ ನನಗೇನೆ ಆಶ್ಚರ್ಯವಾಯಿತು."

"ಅವರದು ತೀರ ದೊಡ್ಡ ಮನಸ್ಸು. ನೀನೂ ಒಳ್ಳೆಯ ಕೆಲಸ ಮಾಡಿದೆ. ಆದರೆ ಮೊದಲಿನಂತೆ ಮಾತ್ರ ಇರಬೇಡ. ಹಾಗೆ ಮಾಡಿದರೆ ನೀನೂ ಹಾಳಾಗುತ್ತೀ, ಅವರನ್ನೂ ಹಳ್ಳಕ್ಕೆ ತಳ್ಳುತ್ತೀಯ" ಎಂದಳು ಮಂಜುಳೆ.

"ಅಷ್ಟು ಸ್ವಾರ್ಥಿಯೇನು ನಾನು? ಈ ಹೊತ್ತು ನನ್ನ ಜೀವನಕ್ಕೆ ಅವರೊಬ್ಬರೇ ಆಧಾರವಾಗಿದ್ದಾರೆ. ನಾನು ಅವರನ್ನು ಕರೆದುಕೊಂಡು ನನ್ನ ವೃದ್ಧ ತಾಯನ್ನು ನೋಡಹೋದಾಗ ಅವಳು ಎಷ್ಟು ಸಂತೋಷಗೊಂಡಳು ಗೊತ್ತೇ? ದೀರ್ಘಕಾಲದ ಬೇಸರವನ್ನೆಲ್ಲ ಮರೆತು 'ಈಗಲಾದರೂ ನಿನಗೆ ಒಳ್ಳೆಯ ಬುದ್ಧಿ ಬಂದಿತಲ್ಲ' ಎಂದು ಆನಂದಿಸಿ, ಹರಸಿದಳು." ಇನ್ನೂ ಎಷ್ಟೆಷ್ಟೋ ಸಂತೋಷದ ಮಾತುಗಳನ್ನಾಡಿದಳು. ಆ ಮಾತುಗಳ ಎಡೆಯಲ್ಲಿ "ನೀನೂ ಮಂಜುಳಾ–ಯಾಕೆ ಮದುವೆಯಾಗಬಾರದು? ಮದುವೆಯನ್ನೇ ಆಗುವುದಿಲ್ಲ ಎಂದವಳು ನಾನು; ಆಗಬೇಕು ಎಂದು ಹಂಬಲಿಸಿದವಳು ನೀನು. ನಿನಗೆ ಅದು ಸಾಧ್ಯವಿಲ್ಲವೇ?" ಎಂದು ಕೇಳಿದಳು.

"ನಾನು ಹಂಬಲಿಸಿದಾಗ ನನಗೇನು ದೊರೆಯಿತು? ಇನ್ನು ಹಂಬಲಿಸಿದರೆ ಯಾರು ದೊರೆಯುತ್ತಾರೆ? ನಿನ್ನ ಮುಕುಂದರಂಥವರು, ತಿಳಿದು ಉದಾರಿಗಳಾಗಬಲ್ಲವರು, ಅಥವಾ ನನ್ನಲ್ಲಿಯೂ ತಪ್ಪಿದೆ, ತನ್ನಲ್ಲಿಯೂ ತಪ್ಪಿರಬಹುದು—ತನ್ನದನ್ನು ಮರೆಯಿಸಿ, ಹೆರವರ ತಪ್ಪನ್ನು ದೊಡ್ಡದು ಮಾಡಬಾರದು–ಎಂದು ತಿಳಿಯುವವರೆಷ್ಟು ಜನರಿದ್ದಾರೆ? ಅಲ್ಲದೆ ನೋಡು, ನನಗೆ ಆ ಆಸೆ ಇಲ್ಲವೆಂದಲ್ಲ. ಅದನ್ನೆಲ್ಲ ಮರೆತು ಈ ಕೆಲಸದಲ್ಲಿ ತೊಡಗಿದ್ದೇನೆ. ಇವತ್ತು ನನಗೆ ಮೊದಲಿನ ಮೋಹಕ ರೂಪವೂ ಇಲ್ಲ. ನೀನೋ? ಚಿರ ಯೌವನೆ; ಚಿರ ಸುಂದರಿ. ಒಬ್ಬೊಬ್ಬರ ಪುಣ್ಯ ಒಂದೊಂದು ವಿಧ."

ಅಷ್ಟಕ್ಕೆ 'ಚೆಲುವ'ನ್ನು ಕುರಿತಾಗಿ ಒಂದು ಉಪನ್ಯಾಸ ತೊಡಗಿದಳು. 'ಎಂಥೆಂಥ ವಿಚಿತ್ರಾಕಾರದ ಪ್ರಾಣಿಗಳಿಗೆ ಗಂಡಂದಿರು ಸಿಕ್ಕಿದ್ದಾರೆ' ನಿನಗೆ ಸಿಗಲಾರದೇ? ಎಂಬ ಕಥೆ ಹೇಳಿದಳು. ನಕ್ಕಳು. 'ಮದುವೆಯಾಗೇ, ಎಂದು ಅವಳನ್ನು ಒತ್ತಾಯಿಸಿದಳು.

"ಅದು ನನ್ನಿಚ್ಛೆಯೇ? ಅದೃಷ್ಟ. ನಾನು ಅದೃಷ್ಟಕ್ಕೆ ಹೊಂದಿಕೊಳ್ಳ ಲೆತ್ನಿಸುತಿದ್ದೇನೆ. ಒಂದೇನೋ ಸಂತೋಷಪಡುತಿದ್ದೇನೆ—ನಾನು ನನ್ನದಾಗುವ ಮಕ್ಕಳನ್ನು ಕಳೆದುಕೊಂಡಿದ್ದರೂ, ನನ್ನನ್ನು ತಾಯಿಯಾಗಿ ಮಾಡಿಕೊಂಡ ಇಷ್ಟು ಮಂದಿ ಮಕ್ಕಳಿದ್ದಾರೆ. ಅಷ್ಟಾದರೂ ಭಾಗ್ಯ ನನ್ನದು"

ಎಂದೆಂದಳು. ಬಂದ ಅಂಜಲಿ ಹೊರಟುಹೋದಳು. ಮಂಜುಳೆಯ ಸುಖದ ದಿನಗಳಲ್ಲಿ ಅವಳ ಆಗಮನ ತುಂಬ ಸವಿ ನೆನಪಿನಿಂದ ಕೂಡಿದ್ದಾಯಿತು.

# ಹದಿನಾಲ್ಕನೆಯ ಅಧ್ಯಾಯ

ವಿನತೆಗೆ ತನ್ನ ನಾಲ್ಕು ಮಕ್ಕಳ ಸಂಸಾರವನ್ನು ಸಾಗಿಸಿಕೊಂಡು ಹೋಗುವ ಹೊಣೆಯೇ ಹೆಚ್ಚು; ಆ ಮೇಲೆ ನಿರಾಧಾರಿಯಾಗಿ ಬಂದ ಪತಿಯನ್ನು ತತ್ಕಾಲಕ್ಕಾದರೂ ಸಾಕುವ ಹೊಣೆ ಅವಳದ್ದಾಯಿತು. ಗಾಂವಕರ ತನ್ನ ಮನಸ್ಸಿನಲ್ಲಿ ಏನೇನೋ ಕನಸುಗಳನ್ನು ಹೆಣೆಯುತಿದ್ದಾನೆ. ಬೇಗನೆ ಗುಣವಾಗಿ, ಕೃತಕ ಕಾಲುಗಳನ್ನು ಧರಿಸಿ, ತನ್ನ ಜೀವನ ಸಾಗಿಸಬಹುದು ಎಂಬ ಧೈರ್ಯ ಅವನದು. ತತ್ಕಾಲಕ್ಕೆ ತಾನು ನಿಸ್ಸಹಾಯನೆಂದು ಅವನಿಗೆ ತೋರುತ್ತಿದೆ. 'ಸಂಪೂರ್ಣ ಹುಷಾರಾಗಲು ಇನ್ನೂ ಆರು ತಿಂಗಳು ಹಿಡಿದೀತು. ಮುಂದೆ ಎಂದೂ ಹಂಗಿನ ಬಾಳ್ವೆಬೇಡ' ಎಂದು ನೆನೆದುಕೊಳ್ಳುತ್ತಾನೆ. ಆದರೆ ಎಂದೂ ವಿನತೆ ಹಂಗಿನ ಮಾತನ್ನು ಅವನೊಡನೆ ಆಡಿದವಳಲ್ಲ. ಪತಿಯೊಡನೆ ತನಗಿದ್ದ ಮೌನವನ್ನು ಮುರಿದು, ಅವನ ನಿಸ್ಸಹಾಯತನದಲ್ಲಿ ಸೇವೆಮಾಡುವುದಕ್ಕೆ ಅವಳು ಹಿಂಜರಿಯಲಿಲ್ಲ. ಅವನ ವಿಷಯದಲ್ಲಿ ಅವಳಿಗೆ ಕರುಣೆಯುಂಟಾಗಿತ್ತಾದರೂ, ಅಭಿಮಾನ ಉಂಟಾಗುವುದಾಗಲಿ, ತಿರುಗಿ ಪ್ರೇಮ ಹುಟ್ಟುವುದಾಗಲೀ, ಇಷ್ಟೆಲ್ಲವನ್ನು ಅನುಭವಿಸಿದ ಮೇಲೆ ಅಸಾಧ್ಯದ ಮಾತಾಗಿತ್ತು. ಅಂಥ ಜಯವನ್ನು ಗಳಿಸುವುದು ಗಾಂವಕರನಿಗೆ ಸಾಧ್ಯವಾದ ಕೆಲಸವಾಗಿತ್ತು. ಆದರೆ ಅಂಥ ಪ್ರಯತ್ನಕ್ಕೆ ಹೋಗುವ ಸ್ವಭಾವ ಮಾತ್ರ ಅವನದಿರಲಿಲ್ಲ.

ತನ್ನನ್ನು ನೋಡಲು ಬಂದ ಮಗ ಮೋಹನನೊಡನೆ "ನನ್ನ ಸ್ಥಿತಿ ಹೀಗಾಯಿತು ಮಗು. ನಿನ್ನ ಓದನ್ನು ಮುಂದುವರಿಸುವುದು ಅಸಾಧ್ಯ. ನನ್ನ ಗುರುತಿನವರಿಗೆ ಕಾಗದಗಳನ್ನು ಕೊಡುತ್ತೇನೆ. ಏನಾದರೊಂದು ಚಾಕರಿ ಗಳಿಸಿಕೋ. ಆ ಮೇಲೆ ನಾವು ಬೇರೆ ಬಿಡಾರ ಮಾಡುವ; ಮಾಲತಿಯನ್ನು ಕರೆಯುವ; ಅವಳು ಮನೆ ನೋಡಿಕೊಂಡಾಳು" ಎಂದು ವಿನತೆಯು ಮರೆಯಲ್ಲಿದ್ದಾಗ ಮಾತನಾಡಿದ. ಸಾಲದುದಕ್ಕೆ "ನಿನ್ನ ಚಿಕ್ಕಮ್ಮನ ಸ್ವಭಾವ ನಿನಗೆ ತಿಳಿಯದು. ನನಗೂ ಅವಳಿಗೂ ಹೊಂದಿಕೆಯಾಗದಿದ್ದುದರಿಂದಲೇ ನಾನು ಡಿಲ್ಲಿಗೆ ವರ್ಗಮಾಡಿಕೊಂಡೆ. ಆದರೆ ನನಗೆ ಹೀಗೆಲ್ಲ ಆಗಬಹುದೆಂದು ಯಾರು ಎಣಿಸಿದ್ದರು?" ಎಂದು ಗೊಣಗಿದ.

'ತನ್ನ ಚಿಕ್ಕತಾಯಿಯ ಸ್ವಭಾವ' ಎಂಥದೆಂಬುದು ಆ ಎಳೆಯನಿಗೆ

ಮಾತ್ರ ತೀರ ಪರಿಚಯವಾಗಿತ್ತು. ತನ್ನ ತಂದೆ ಅವಳನ್ನು ದೂರಿದರೂ, ಅವಳು ತಂದೆಯನ್ನು ದೂರಿದ್ದನ್ನು ಆತ ಕೇಳಿರಲಿಲ್ಲ! ಹೀಗಿರುತ್ತ, ಅವನಿಗೆ ತಂದೆಯ ಮಾತುಗಳು ಅರ್ಥವಾಗುವಂತಿರಲಿಲ್ಲ. ಆದರೆ ತಂದೆಯೊಡನೆ ವಾದಿಸುವ ಧೈರ್ಯ ಅವನಿಗೆಲ್ಲಿಂದ ಬರಬೇಕು? ಕಾಲೇಜನ್ನು ಬಿಡಬೇಕಾದ ಪ್ರಮೇಯದಿಂದಾಗಿ ಅವನಿಗೆ ದುಃಖವಾಯಿತು. ತಂದೆಯಿಂದ ಹಣ ಸಿಗದಾದ ಮೇಲೆ, ಬೇರೆ ಗತಿಯಿಲ್ಲವೆಂದು ಕಾಲೇಜನ್ನು ಬಿಟ್ಟು, ನೌಕರಿ ಹುಡುಕುತ್ತ ಅಲೆದಾಡಿದ. ತಿಂಗಳಿಗೆ ಎಪ್ಪತ್ತೈದು ರೂಪಾಯಿ ವರಮಾನದ ಒಂದು ಕೆಲಸವೇನೋ ಸಿಕ್ಕಿತು. ಆದರೆ ಮನೆಯಲ್ಲಿದ್ದು ಆ ಹಣವನ್ನು ತಾಯಿಯ ಕೈಗೆ ಕೊಡುವಂತಿರಲಿಲ್ಲ. ಮೂವತ್ತು ನಾಲ್ವತ್ತು ರೂಪಾಯಿಗಳನ್ನು ತಂದೆ ತನ್ನ ಅನುಪಾನಕ್ಕೆ ಅವನಿಂದಲೇ ತಿಂಗಳ ಮೊದಲಿಗೆ ಕಿತ್ತುಕೊಳ್ಳುತ್ತಿದ್ದ. ಉಳಿದದ್ದು ಅವನ ವೆಚ್ಚಕ್ಕೆ ಬೇಕಾಗುತ್ತಿತ್ತು. ಆರು ತಿಂಗಳ ಅನುಪಾನದಲ್ಲಿ ಗಾಂವಕರ ಚೇತರಿಸಿದ. ಆದರೆ ಕಾಲು ಮುರಿದು ವಿಕೃತಗೊಂಡಿತ್ತು; ಉಳಿದೊಂದು ಕಾಲೂ ತುಂಬ ಕುಂಟುತ್ತಿತ್ತು. ಅಂತು ಯಾರಾದನ್ನೋ ಕೇಳಿ, ಸಾಲಮಾಡಿ, ತಂದೆಗೆ ಕೃತಕ ಕಾಲುಗಳನ್ನು ಒದಗಿಸುವ ಪ್ರಯತ್ನ ಮಾಡಿದ. ಕೈಗೋಲುಗಳನ್ನೂರಿ ಕುಂಟಿಸಿ ನಡೆಯುವ ಶಕ್ತಿ ಅವನಿಗೆ ಬಂದುದೇ ತಡ, ಊಟದ ವೇಳೆಗೆ ಮಾತ್ರ ಆತ ಮನೆಯಲ್ಲಿರತೊಡಗಿದ. ಪೇಟೆಯಲ್ಲಿ ಅಲೆದಾಡುವುದು; ಸ್ನೇಹಿತರಲ್ಲಿಗೆ ಹೋಗುವುದು; ಕತ್ತಲಿಗೆ ಮಾತ್ರ ಮನೆಗೆ ಬರುವುದು. ಸಾಲದುದಕ್ಕೆ, ಮನೆಯಲ್ಲಿರುವಾಗಲೂ ಹೊರಗೆ ಅಲೆದಾಡುವಾಗಲೂ, ವಿನತೆಯೇನು ಮಾಡುತ್ತಿರಬಹುದೆಂದು ಹೊಂಚು ಹಾಕುವುದೂ ಅವನ ಕೆಲಸವಾಯಿತು. ತನ್ನ ತಾಯಿ ದಿನವೆಲ್ಲ ದುಡಿದು ಮನೆಗೆ ಅಕ್ಕಿ, ಕಟ್ಟಿಗೆ, ಕಾಳುಗಳನ್ನು ತಂದು ಹಾಕುವ ಕಷ್ಟ ಮೋಹನನಿಗೆ ಗೋಚರವಾಗುತ್ತಿದೆಯಾದರೂ, ತಂದೆಗೆ ತಿಳಿಸದೆ, ಆತ ಹಣ ಕೊಡಲಾರ. ತಂದೆಗೆ ಸಲುವ ಪಾಲು ಹೆಚ್ಚುತ್ತಲೇ ಇತ್ತು. ಮೇಲೆ "ಅವಳಿಗ್ಯಾಕೆ ನೀನು ಹಣಕೊಡಬೇಕು? ಅವಳಿಗೆ ಸಂಪಾದನೆಯಿದೆ" ಎಂದು ಮಗನೊಡನೆಯೇ ವಿನತೆಯ ಕುರಿತು ನಂಜು ಮಾತನಾಡುತ್ತಿದ್ದ. ಹೀಗಾಗಿ ಮೋಹನನಗೆ ಮನೆಯ ಆವರಣ ಬರಿಯ ರಾತ್ರಿಯನ್ನು ಕಳೆಯುವುದಕ್ಕೂ ಹಿತಕರವಾಗಿ ಕಾಣಿಸಲಿಲ್ಲ. ತಂದೆ 'ಬೇರೆ ಬಿಡಾರಮಾಡು' ಅನ್ನುತ್ತಿದ್ದ. ಬೇರೆ ಮನೆ ದೊರಕಿಸಿಕೊಳ್ಳುವುದು--ಬಾಡಿಗೆ, ಪಾಗಡಿ ಕೊಡುವುದು—ಇವು ಅವನ ಕನಸಿಗಿಂತ

ದೂರವಾಗಿದ್ದ ಸಂಗತಿಗಳಾಗಿದ್ದುವು. ಆದುದರಿಂದ ತನ್ನ ಭಾರವನ್ನಾದರೂ ಆಕೆಯಿಂದ ತಪ್ಪಿಸುತ್ತೇನೆಂದು ಯೋಚಿಸಿದ; ಒಂದು ದಿನ ತಂದೆಗೆ ತಿಳಿಸದೆ ಓಡಿಹೋದ. ಅನಂತರ ಅಹಮ್ಮದಾಬಾದಿನ ಗಿರಣಿಯೊಂದರಲ್ಲಿ ಕೆಲಸ ದೊರಕಿಸಿಕೊಂಡು ಅಲ್ಲಿ ದಿನ ಕಳೆಯತೊಡಗಿದ.

ಇತ್ತ ಗಾಂವಕರ ಏನಾದರೊಂದು ಚಾಕರಿ ಹುಡುಕಿಕೊಂಡಿದ್ದರೆ, ಆ ಸ್ಥಿತಿಯಲ್ಲಿಯೂ ತಿಂಗಳಿಗೊಂದು ಮೂವತ್ತು ರೂಪಾಯಿಗಳನ್ನಾದರೂ ದುಡಿದು ತಂದುಕೊಡುವುದು ಸಾಧ್ಯವಿತ್ತು. ಕಾಲು ಮುರಿದುಕೊಂಡುದು ದುಡಿಯದಿರುವುದಕ್ಕೊಂದು ನೆಪವಾಯಿತು; ಜಗತ್ತಿನ ಕರುಣೆ ಬೇಡುವುದಕ್ಕೊಂದು ಅವಕಾಶವಾಯಿತು. ತನ್ನ ದುಸ್ಥಿತಿಯು ತನ್ನ ಸ್ನೇಹಿತರ ಮೇಲೆ ಹೊರಿಸಬಹುದಾದ ಅಧಿಕಾರ ಅಥವಾ ಹಕ್ಕು ಎಂಬ ಯೋಚನೆ ಆತನಲ್ಲಿ ಬರತೊಡಗಿತು. ಕಾಲನ್ನು ಕುಂಟಿಸಿಕೊಂಡು, ನಾಲ್ಕು ಕಡೆಗಳಿಗೆ ಹೋಗಿ ಬರುತ್ತ, ಸ್ನೇಹಿತರಿಂದ ಅಲ್ಪಸ್ವಲ್ಪ ಹಣ ಸಂಪಾದಿಸತೊಡಗಿದ. ಪೂರ್ವ ಸ್ನೇಹಿತ ಸೇಠ್ ಗಿರಿಧರಲಾಲನಲ್ಲಿಗೂ ಹೋಗಿ ಬಂದ. ಅವನ ಕರುಣೆಯನ್ನು ಪಡೆದು, ತಿಂಗಳಿಗೆ ಹತ್ತು ರೂಪಾಯಿಗಳ ಉಂಬಳಿಯನ್ನು ದೊರಕಿಸಿಕೊಂಡ. ಈ ಹಣ ಬಹಳವಾಗಿಲ್ಲವಾದರೂ, ಅದೆಲ್ಲವೂ ಅವನ ವೆಚ್ಚಕ್ಕೆ, ಚಹ, ಸಿಗರೇಟು, ಆಲೆದಾಟಗಳಿಗೆ ಹೋಗುತ್ತಿದ್ದುವೇ ಹೊರತು, ವಿನತೆಯ ಬಡತನಕ್ಕೆ ನೆರವಾಗಲಿಲ್ಲ. ತಾನು ತನ್ನ ಪತ್ನಿಯ ಮೇಲೆ ಹೊರೆಯಾಗಿ ನಿಂತಿದ್ದೇನೆ ಎಂಬ ನೋವೂ ಅವನಿಗಿಲ್ಲ. ಬದಲು ಸಂಶಯಗ್ರಸ್ತ ಮನಸ್ಸು ಅವನದು. ತನ್ನ ಹೆಂಡತಿಯು ಇಷ್ಟು ದೀರ್ಘ ಕಾಲ, ತನ್ನ ನಾಲ್ಕು ಮಕ್ಕಳನ್ನು ಕಟ್ಟಿಕೊಂಡು, ಚಿಂತೆಯಿಲ್ಲದೆ ಸಂಸಾರ ಸಾಗಿಸುವುದಕ್ಕೆ ಆತ ಬೇರೆಯೇ ಕಾರಣ ಹುಡುಕುತ್ತಾನೆ. 'ಅವಳ ಉಪಾಧ್ಯಾಯ ವೃತ್ತಿ ಅಥವಾ ಹೊಲಿಗೆ ಕೆಲಸ ಮೊದಲಾದವುಗಳಿಂದ ಈ ಕಾಲದಲ್ಲಿ ಜೀವನ ನಿರ್ವಹಿಸುವುದಕ್ಕೆ ಬರಲಾರದು' ಎಂದೆಣಿಸಿಕೊಳ್ಳುತ್ತಾನೆ. 'ಅವಳು ಅಡ್ಡಹಾದಿಯಿಂದಲೇ ಹಣ ಸಂಪಾದಿಸುತ್ತಿದ್ದಾಳೆ' ಎಂದು ಯೋಚಿಸುತ್ತಾನೆ. ಮನಸ್ಸಷ್ಟು ಕೊಂಕಾಗಿ ವಾದಿಸಿದರೂ ಅವನಿಗೆ ಅವಳ ಅನ್ನಬೇಕು; ಸೇವೆಯೂ ಬೇಕು. ಅವಿಲ್ಲದೆ ಒಂದು ದಿನವನ್ನೂ ಕಳೆಯಲಾರ.

ಅವನು ಚೇತನಗೊಂಡ ಸ್ವಲ್ಪ ಸಮಯದಲ್ಲಿ–ಅವನ ಅಂತರಂಗದ ಅನುಮಾನವನ್ನು ಬಲಪಡಿಸಿ, ಮನಸ್ಸಿನ ದ್ವೇಷ ಬೆಳೆಯುವುದಕ್ಕೆ ವಿನತೆ

ಅವಕಾಶ ಕಲ್ಪಿಸಿಕೊಟ್ಟದ್ದು ನಿಜ. ಅದಕ್ಕೆ ಕಾರಣ ಅವಳ ಭಯ; ಇವನ ವರ್ತನೆಯಿಂದ ಉಂಟಾದ ಭೀತಿ. ಒಂದು ದಿನ ರಾತ್ರಿ ಗಾಂವಕರ ಮಲಗಿದ್ದಾಗ, 'ಬಾ'ರೆಂದು ಅವಳನ್ನು ತನ್ನ ಸಮೀಪಕ್ಕೆ ಕರೆದ. ಏನಾದರೂ ಸಹಾಯಬೇಕಿರಬಹುದೆಂದು ಊಹಿಸಿ, ಮಕ್ಕಳ ಮಗ್ಗುಲನ್ನು ಬಿಟ್ಟು, ವಿನತೆ, ಅವನ ಬಳಿಗೆ ಹೋದಳು. "ಏನು ಬೇಕು? ಬಾಯಾರಿಕೆ ಆಗುತ್ತಿದೆಯೇ? ಹೊರಗೆ ಹೋಗಬೇಕೇ?" ಎಂದು ವಿಚಾರಿಸಿದಳು. ಅದಕ್ಕೆ ಪ್ರತ್ಯುತ್ತರವಾಗಿ, ಆತ ಅವಳ ಕೈಯನ್ನು ಹಿಡಿದು ಬಳಿಗೆ ಎಳೆದ. ಅವಳಿಗೂ ಆ ಸಂಭಾವನೆಯ ಅರ್ಥವಾಯಿತು. ಕೈಯನ್ನು ಸೆಳೆದುಕೊಂಡು, ತನ್ನಷ್ಟಕ್ಕೆ ದೂರಹೋಗಿ, ಮಕ್ಕಳೊಡನೆ ನಿಶ್ಚಿಂತೆಯಿಂದ ಮಲಗಿಕೊಂಡಳು. ಪತಿಯೊಡನೆ ಯಾವ ವಿಲಾಸಕ್ಕೂ ಅವಳು ಸಿದ್ಧಳಿರಲಿಲ್ಲ. ಎಂದು ಆತ, ಅವಳನ್ನು ಜಗತ್ತಿಗೆ ಹಾದರಗಿತ್ತಿಯನ್ನಾಗಿ ಮಾಡಿ ತೋರಿಸಬೇಕೆಂದು ಪತ್ರ ಬರೆದು, ಚೂರಿ ತೋರಿಸಿ, ಭಯ ಹುಟ್ಟಿಸಿ, ಸಹಿಯನ್ನು ಪಡೆದನೋ—ಆ ದಿನವೇ ತನ್ನ ಕೊರಳಿಗೆ ಮಾಂಗಲ್ಯವನ್ನು ಕಟ್ಟಿದ ಗಂಡ ಇಲ್ಲವೆಂದೇ ತಿಳಿದುಕೊಂಡಿದ್ದಳು. ಆ ಮನೋಭಾವ ಇನ್ನೆಂದಿಗೂ ಬದಲಾಗುವಂತಿಲ್ಲ. ಅಂದಿನಿಂದ ಅವಳ ಶರೀರದಿಂದ ಕಾಮವಾಸನೆ ಹಿಂಗಿಹೋದಂತಾಗಿತ್ತು. ನಾಲ್ಕು ಜೀವಗಳನ್ನು ಜಗತ್ತಿಗೆ ತಂದು, ಅವಳ ಹೊಣೆಯನ್ನು ನಾಲ್ಮಡಿಸಿದ ಗಂಡನ ಪ್ರೇಮದ ಭಾರ ಅವಳನ್ನು ಕುಗ್ಗಿಸಿತ್ತು. ಇನ್ನು ತನಗೆ ಮಕ್ಕಳಾಗುವುದು ಬೇಡ; ಹೆತ್ತ ಮಕ್ಕಳ ಋಣ ತೀರಿಸಿದರೆ ಸಾಕು—ಎಂದು ನಿರ್ಧರಿಸಿದ್ದಳು. ಯಾವೊಂದು ಬಗೆಯಿಂದಲೂ ತನ್ನ ಸ್ನೇಹಕ್ಕೆ, ಸೇವೆಗೆ, ಮನ ಕರಗದಿದ್ದ ಗಂಡನನ್ನು ಅವಳಿಂದು ಸಾಕುವುದಿದ್ದರೆ—ಅದು ಮಕ್ಕಳಿಗಾಗಿ. ಹೆತ್ತ ತಂದೆಯ ಮುಖವನ್ನು ನೋಡುವ ಋಣವನ್ನು ಅವುಗಳಿಂದ ತಪ್ಪಿಸಬಾರದು ಎಂಬುದಕ್ಕಾಗಿಯೇ ಹೊರತು, ಗಂಡನೆಂಬ ಅಭಿಮಾನದಿಂದಲ್ಲ. ಅಂಥ ಅಭಿಮಾನವು ಎಂದೋ ಸುಟ್ಟು ಬೂದಿಯಾಗಿದೆ. ಬೂದಿಯಿಂದ ಮೂಲ ಸ್ವರೂಪ ಎಂದೂ ಹೊರಡಲಾರದಷ್ಟೆ.

ಮಗನೂ ಮೋಸಕೊಡದಿದ್ದರೆ, ಗಾಂವಕರ ತನ್ನ ಹೆಂಡತಿಯ ಇಂಥ ತಾತ್ಸಾರವನ್ನು ಕಂಡ ಬಳಿಕ ಅಲ್ಲಿರುತ್ತಿರಲಿಲ್ಲ. ಕೇವಲ ತನ್ನ ಸ್ವಾರ್ಥಕ್ಕಾಗಿಯೇ ಆತ ಉಳಿದುಕೊಂಡ. ಬೇಡದ ಮಕ್ಕಳ ತಂದೆ ಎನಿಸಿದ.

ಕಾಲಿಲ್ಲದಿದ್ದರೂ ನಾಲಿಗೆಯೊಂದಿರುವ ತನಕ, ಅವನ ಸೇಡಿನ ಚಟ

ಹೋಗಲೊಲ್ಲದು. ವಿನತೆಯನ್ನು ಆತ ಪ್ರತ್ಯಕ್ಷವಾಗಿ ಬಯ್ಯಲಾರನಾದರೂ ಪರೋಕ್ಷವಾಗಿ, ಮಕ್ಕಳೆದುರಿಗೆ, ಹಂಗಿಸುತ್ತಿದ್ದ. ವಿನತೆ ಅವನ ಕಾಮದ ಕರೆಯನ್ನು ನಿರಾಕರಿಸಿದ ಮೇಲೆ ಈ ಸೇಡು ಉಲ್ಬಣಿಸಿತು. ಒಂದು ದಿನ ದಾರಿಯಲ್ಲಿ ಯಾವನೋ ಗಂಡಸಿನೊಡನೆ ವಿನತೆ ನಿಂತು ಮಾತನಾಡಿದು ದನ್ನು ದೂರದಿಂದ ಕಂಡಿದ್ದ. ಅದನ್ನು ತನ್ನ ನೆನಪಿನಲ್ಲಿರಿಸಿಕೊಂಡು "ಏನು ಮಾಡುವುದು ನನ್ನ ದುರ್ದೈವಕ್ಕೆ! ಮೋಹನ ಹಾಗೆ ಮೋಸಕೊಡುತ್ತಿದ್ದ ನೆಂದು ನಾನೆಣಿಸಿರಲಿಲ್ಲ. ನೀನೇ ಅವನಿಗೆ ದುರ್ಬೋಧನೆ ಕೊಟ್ಟು ಅವನನ್ನು ಅಹಮ್ಮದಾಬಾದಿಗೆ ಓಡಿಸಿದವಳು. ನನಗೆಲ್ಲವೂ ತಿಳಿಯುತ್ತದೆ. ನಾನಿಲ್ಲಿರು ವುದು ನಿನಗೆ ಇಷ್ಟವಿಲ್ಲವೆಂಬುದೂ ಗೊತ್ತಿದೆ. ಇದ್ದರೂ ನಿನಗೆ ತೊಂದರೆಯು. ಮನೆಗೆ ಬೇಕಾದವರನ್ನು ಕರೆಯುವುದಕ್ಕೆ ಆಗುತ್ತದೆಯೇ? ಇಲ್ಲ; ನಾನಿಲ್ಲಿರು ವುದಿಲ್ಲ. ಕೈಯಲ್ಲೊಂದು ನೂರು ರೂಪಾಯಿ ಸಿಕ್ಕಿದರೆ, ಯಲ್ಲಾಪುರಕ್ಕೆ ಹೋಗುತ್ತೇನೆ. ನನ್ನ ಮಾಲತಿ ನನ್ನನ್ನು ನೋಡಿಕೊಂಡಾಳು" ಎಂದು ಶಪಿ ಸಿದ. ಇದರಿಂದ ಇನ್ನೊಮ್ಮೆ ವಿನತೆಗೆ ಕಣ್ಣೀರು ಬಂದಿತೇ ಹೊರತು ಬೇರೇನು ಫಲವಾಗಲಿಲ್ಲ. ಯಾರಾದರೂ ಸ್ನೇಹಿತರು ಕರುಣೆಯಿಂದ ಗಾಂವಕರನಿಗೆ ಹತ್ತಿಪ್ಪತ್ತು ರೂಪಾಯಿಗಳನ್ನು ಕೊಟ್ಟರೆ ಕುಂಟಕಾಲನ್ನು ಹೊತ್ತುಕೊಂಡು ಮಹಾಲಕ್ಷ್ಮಿ ರೇಸ್ ಕೋರ್ಸ್‌ನಲ್ಲಿ ಆ ಹಣ ಕಳೆಯುವ ಬುದ್ಧಿ ಅವನದು. ಅಂತು ಒಂದೂವರೆ ವರ್ಷಗಳ ಕಾಲ ಅವನ ಸಡಿಲುಬಿಟ್ಟ ನಾಲಿಗೆಯನ್ನು ಸಹಿಸಿಯೂ ವಿನತೆ ಅವನನ್ನು ಸಾಕಿದಳು. ಮುಂದೆ ಅವನ ನಾಲಗೆ ಶಾಂತ ವಾಯಿತು. ಅದರಿಂದ ವಿನತೆಯ ಕಷ್ಟ ಮಾತ್ರ ಕಡಮೆಯಾಗಲಿಲ್ಲ.

ಒಂದು ದಿನ ಗಾಂವಕರ ಬೆಳಗಿನ ಅಲೆದಾಟಕ್ಕೆ ಹೊರಡುವ ಮುಂಚೆಯೆ, ಮನೆಯ ಹಿತ್ತಿಲಲ್ಲೇ ಕುಸಿದುಬಿದ್ದ. ಶರೀರವು ಪಾರ್ಶ್ವವಾತದಿಂದ ಮರಗಟ್ಟಿತು. ವಿನತೆ ನೆರೆಕರೆಯವರ ಸಹಾಯದಿಂದ ಅವನನ್ನು ಆಸ್ಪತ್ರೆಗೆ ಸಾಗಿಸಿದಳು. ಸಾಲಮಾಡಿ, ಎರಡು ತಿಂಗಳ ಕಾಲ ಅಲ್ಲಿನ ಖರ್ಚುವೆಚ್ಚ ನೋಡಿಕೊಂಡಳು. ಅನಂತರ ಅಲ್ಲಿಂದ ಬಿಡುಗಡೆಗೊಂಡ ಅವನನ್ನು ತನ್ನ ಮನೆಗೆ ಸಾಗಿಸಿ ತಂದಳು; ಚಿರಶಯ್ಯೆಯಲ್ಲಿ ಮಲಗಿಸಿ ಕಾಪಾಡಿದಳು. ಮುಂದೆ ಅವನ ಕಣ್ಣುಗಳೇನು ಹೇಳುತಿದ್ದುವೋ ಅಷ್ಟೇನೆ ವಿನತೆಗೆ ಗೊತ್ತು; ಹೊರತು,ನಾಲಗೆ ನುಡಿಯುವ ಶಕ್ತಿಯನ್ನೆಲ್ಲ ಕಳೆದುಕೊಂಡಿತ್ತು. ಸುಮಾರು ಎರಡು ವರ್ಷಗಳ ಶರತಲ್ಪ ಮಲಗಿದ ಗಾಂವಕರಗೆ ಸಂದಿತು. ದಾರಿದ್ರ್ಯದ

ಶರತಲ್ಪ ನವೆಯಬಲ್ಲ ವಿನತೆಯ ಪಾಲಿಗೆ ಸಂದಿತು. ಮೋಹನ ತಂದೆಯನ್ನು ಬಂದು ನೋಡಿಹೋಗಿದ್ದ. ಅನಂತರ ಆತ ಪ್ರತಿ ತಿಂಗಳೂ ತಾಯಿಗೆ ಐವತ್ತು ರೂಪಾಯಿಗಳಷ್ಟು ಹಣ ಕಳುಹಿಸತೊಡಗಿದ. ಅದರಿಂದ ಗಾಂವ ಕರನ ಮದ್ದು ಉಪಚಾರಗಳಿಗಾದರೂ ಹೆಚ್ಚಿನ ಸಹಾಯವಾಯಿತು. ಆದರೆ ಏರುತ್ತಿರುವ ಬೆಲೆ, ಬೆಳೆಯುತ್ತಿರುವ ಮಕ್ಕಳು, ಇವೆಲ್ಲ ಸೇರಿ, ವಿನತೆಯ ದುಡಿಯುವ ಶಕ್ತಿಯನ್ನು ನುಂಗಿದುವು. ಉಪಾಧ್ಯಾಯ ವೃತ್ತಿಯಾಗಲಿ, ಬಿಡು ಹೊಲಿಗೆಯ ಕೆಲಸಗಳಾಗಲೀ ಜೀವನ ನಿರ್ವಹಣಕ್ಕೆ ಸಾಲದಾ ಗುತ್ತ ಬಂದಿತು. 'ಇನ್ನೇನು ಮಾಡಲಿ?' ಎಂದು ಯೋಚಿಸುವಾಗಲೇ ಬಿಡು ಗಡೆ ದೊರೆಯಿತು. ಗಾಂವಕರ ಒಂದು ರಾತ್ರಿ ಮಲಗಿದಾತ ಏಳಲಿಲ್ಲ. ಉಪಚಾರಕ್ಕೆ ಹೋದ ವಿನತೆಯು ಕೈತಣ್ಣಗಾಯಿತು; ಚಕಿತಳಾಗಿ ಚೀರಿದಳು. ಆ ಒಂದು ಗಳಿಗೆಯಲ್ಲಿ, ಪತಿಯ ಸಂದ ಬಾಳಿಗಾಗಿ ಅವಳು ನಿಜಕ್ಕೂ ಗೋಗರೆದಳು. ಸತ್ತವನ ಮೇಲಿನ ದ್ವೇಷವನ್ನೆಲ್ಲ ಮರೆತು, ಕಾಲು ಹಿಡಿದು "ನಿಮಗೆ ಅಪಚಾರ ಮಾಡಿಲ್ಲವೆಂದಲ್ಲ; ಆದರೆ ನಿಮಗೆ ನಾನು ಅನ್ಯಾಯ ಬಗೆದಿಲ್ಲ. ನೀವು ಊಹಿಸಿಕೊಂಡಂತೆ ತಪ್ಪುದಾರಿಯಲ್ಲಿ ಬಾಳಲಿಲ್ಲ" ಎಂದು ಅಳುತ್ತ ಪ್ರಮಾಣ ಮಾಡಿದಳು. ನೆರೆಮನೆಯ ಕೃಷ್ಣಾಬೆನ್ ಧಾವಿಸಿ ಬಂದು ಆ ಸಾಧ್ವಿಯನ್ನು ಮೈದಡವಿ ಎಷ್ಟು ಸಂತೈಸಿದರೂ, ಸಂದ ವಸ್ತುವಿಗಾಗಿ ಅವಳ ರೋದನ ನಿಲ್ಲದಾಯಿತು.

ಮೋಹನ ಬಂದು, ತಂದೆಯ ಅಪರಕ್ರಿಯೆಗಳನ್ನು ನಡೆಯಿಸಿದ. ಬಹು ದಿನಗಳಿಂದ ದೂರಾಗಿದ್ದ ಮಾಲತಿಯೂ ಅಲ್ಲಿಗೆ ಬಂದಿದ್ದಳು. ಆ ಮಗಳ ಮುಂದೆ ಮಾತ್ರ, ವಿನತೆ ತಡೆಯಲಾರದೆ, ತನ್ನ ದುರಂತ ಜೀವನದ ಇತಿಹಾಸವನ್ನು ಚಾಚೂ ತಪ್ಪದೆ ಹೇಳಿದಳು. ತಂದೆಯ ನಷ್ಟಕ್ಕಾಗಿ ಮರು ಗಿದ ಮಾಲತಿ, ತಾಯಿಯ ಬದುಕಿಗಾಗಿಯೂ ಅತ್ತಳು. ಮುಂದೆ ಮೋಹನ, ಮಾಲತಿಯರು "ಆಯೀ, ಅವರು ಹೋದರೆಂದು ನಮ್ಮನ್ನು ಮರೆಯುವು ದಿಲ್ಲವಲ್ಲ" ಎಂದು ಅತ್ತು, ಕೇಳಿ, ಬೀಳ್ಕೊಟ್ಟರು. ಗಾಂವಕರನ ಇತಿಹಾಸ ಮುಗಿದರೂ, ಅವನ ಸೇವೆಗಾಗಿ ವಿನತೆಯು ಮಾಡಿದ ಸಾಲವಾಗಲಿ, ನಿತ್ಯ ಜೀವನದ ಕಷ್ಟವಾಗಲಿ ಮುಗಿಯುವಂತಿರಲಿಲ್ಲ. ಸಮೀಪದಲ್ಲೆಲ್ಲಾದರೂ ಇದಕ್ಕಿಂತ ತುಸುವೇ ಉತ್ತಮವಾದ ಚಾಕರಿ ತನಗೆ ಸಿಗಲಾಗದೇ ಎಂದು ಯೋಚಿಸುತ್ತಿದ್ದಾಗ, ಕೃಷ್ಣಾಬೆನ್ 'ಗುಜರಾತಿ ಸಮಾಚಾರ' ಪತ್ರಿಕೆಯ

ಜಾಹೀರಾತೊಂದನ್ನು ಅವಳಿಗೆ ತಂದು ತೋರಿಸಿದಳು. ಅದು ಅಂಧೇರಿ ಅನಾಥಾಲಯದ ಒಂದು ಪ್ರಕಟಣೆಯಾಗಿತ್ತು. ನೋಡಿದಳು: "ಯೋಗ್ಯತೆಯ ಮೇಲೆ ವೇತನ—ನೂರರಿಂದ ಮೇಲ್ಪಟ್ಟು; ಸಹಾಯಕ ಮೇಟ್ರನ್ ಬೇಕು. ಮನವಿಗಳನ್ನು ಮಿಸ್. ಮಡರ್, ಗೋಕುಲದಾಸ್ ಅನಾಥಾಲಯ, ಅಂಧೇರಿ–ಇವರಿಗೆ ಕಳುಹಿಸುವುದು" ಎಂದಿತ್ತು.

ವಿನತೆ ಆ ಜಾಹೀರಾತನ್ನು ಎವೆಮುಚ್ಚದೆ ನೋಡಿದಳು. ಅಂಧೇರಿಯೇನೋ ಅವಳಿಗೆ ಸಮೀಪವಾಗಿದೆ. ಕೆಲಸ ಆಗಬಾರದೆಂದಿಲ್ಲ. ಆದರೆ ಅದು ತನಗೆ ದೊರಕೀತು ಎಂಬ ಧೈರ್ಯ ಮಾತ್ರ ಅವಳಿಗೆ ಬರಲಿಲ್ಲ. ಕೃಷ್ಣಾಬೆನ್ನಳೊಡನೆ "ಇದಕ್ಕೆ ಅರ್ಜಿ ಹಾಕಬೇಕೆನ್ನುತ್ತೀರಾ? ಆಕೆ ಯಾವುದೋ ಇಂಗ್ಲಿಷ್ ಹೆಂಗಸಿರಬಹುದು ಅಥವ ಎಂಗ್ಲೋ ಇಂಡಿಯನ್ ಇರಬಹುದು. ನಮಗೇತಕ್ಕೆ ಅವನ್ನು ಕೊಟ್ಟಾರು?" ಎಂದು ನಿರಾಶೆತೋರಿಸಿದಳು.

ಕೃಷ್ಣಾ ಬೆನ್ ಅದಕ್ಕೆ "ನಿಮಗೇನು ನಷ್ಟ? ಅಂಧೇರಿ ದೂರವೇ? ಅರ್ಜಿ ಹಾಕುವ ಮೊದಲು, ಅದೆಂಥ ಕೆಲಸ, ಏನು ಎಂದು ವಿಚಾರಿಸಿಕೊಂಡಾದರೂ ಬರಬಹುದಲ್ಲ. ಸ್ಥಳ ಸಮೀಪವೇ ಇದೆ. ಅಲ್ಲಿಗೆ ನಿಮಗೊಬ್ಬರಿಗೇ ಹೋಗಲು ಬೇಸರವಾದರೆ ನಾನೂ ಬರುತ್ತೇನೆ. ನಮ್ಮ ಗುಜರಾತಿ ಸೇಠ್ ಒಬ್ಬರು ಕಟ್ಟಿಸಿದ ಅನಾಥಾಲಯ ಅದು. ಅಲ್ಲಿ ಗುಜರಾತಿಗಳು ಯಾರಾದರೂ ಇದ್ದರೆ, ನಾನು ಗುಜರಾತಿ ಭಾಷೆ ಮಾತನಾಡಿದಲ್ಲಿ, ಬೆಳೆಯೂ ಬರಬಹುದು" ಎಂದು ಹೇಳಿದಳು. ಅಲ್ಲಿಗೆ ಹೋಗುವ ನಿಶ್ಚಯಮಾಡಿದರು.

ಅನಾಥಾಲಯದ ಮುಖ್ಯ ಮೇಟ್ರನ್ 'ಮಿಸ್ ಮಡರ್' ತನ್ನ ಗೆಳತಿಯಾಗಿರಬಹುದು ಎಂಬ ಊಹೆ ವಿನತೆಗೆ ಆಗುವುದೆಂದೂ ಶಕ್ಯವಲ್ಲ. W. A. C. ವೃತ್ತಿಯನ್ನು ಕೈಕೊಂಡ ಬಳಿಕ, ಮಂಜುಳೆಯು 'ಮಿಸ್ ಮುದ್ದೂರ್' ಎಂದು ಹೆಸರು ಬದಲಿಸಿಕೊಂಡಿದ್ದಳು. ಇಂಗ್ಲಿಷಿನಲ್ಲಿ ಆ ನಾಮಕರಣ 'ಮಿಸ್ ಮಡರ್' ಎಂಬ ವಿಚಿತ್ರ ಉಚ್ಚಾರಕ್ಕೆ ಕಾರಣವಾಗಿತ್ತು. ಮಂಜುಳೆಯ ಮನಸ್ಸಿನಲ್ಲಿ ವಿನತೆಯ ವಿಚಾರ ಎಂದೂ ಮರವೆಯಾಗಿದ್ದಿರಲಿಲ್ಲ. ಗಾಂವಕರ ಅವಳೊಡನೆಯೇ ಇದ್ದಾನೆ ಎಂದರಿತುಕೊಂಡ ಮೇಲೆ ಹೋಗಿ ನೋಡಲು ಭಯ, ಸಂಕೋಚಗಳು ಅವಳನ್ನು ಕಾಡಿ, ಅವಳ ಆಸೆಯನ್ನು ತಣಿಸಿದುವಲ್ಲದೆ, ಇನ್ನೇನೂ ಅಲ್ಲ. ಮುಂದೆ ಉದಾಸೀನ ಭಾವ ಸಂಗತಿಯನ್ನು ಮರೆಯುವಂತೆ ಮಾಡಿರಬಹುದು.

ವಿನತೆ ಕೃಷ್ಣಾ ಬೆನ್ನಳೊಡನೆ, ಅಂಧೇರಿಗೆ ಹೊರಡುವುದಕ್ಕೆ, ಇನ್ನೂ ಎರಡು ಮೂರು ದಿನಗಳ ಕಾಲ ಸರಿಯಿತು. ಆ ತನ್ಮಧ್ಯೆ ಅಹಮ್ಮದಾಬಾದಿಗೆ ಹೊರಟುಹೋದ ಮೋಹನನಿಂದ ಒಂದು ಪತ್ರ ಬಂದಿತು: 'ಈ ತನಕ ನಾನೇನೂ ವೆಚ್ಚಕ್ಕೆ ಕಳುಹಿಸುತ್ತಿದ್ದೆ. ಅದೂ ಕಷ್ಟದಿಂದಲೇ. ಇನ್ನು ಮುಂದೆ ಹೇಗಾಗುತ್ತದೋ. ನಮ್ಮ ಅಜ್ಜನ ಮನೆಯವರು ತೀರ ಬಡವರು. ಅವರೂ ತೊಂದರೆಯಲ್ಲಿದ್ದಾರಂತೆ. ನಮ್ಮ ಮಾಲತಿಗೆ ನಂಟುತನ ಹುಡುಕುತ್ತಿದ್ದಾರೆ. ನಾನು ಎರಡೂ ಕಡೆಗಳಿಗೆ ಸಹಾಯಮಾಡುವುದು ಕಷ್ಟ. ನನ್ನಿಂದ ನಿಮಗೆ ಕೆಲವು ಕಾಲ ಏನೂ ಕಳುಹಿಸುವುದಾಗವಿದ್ದರೆ ಸಿಟ್ಟು ಮಾಡಬಾರದು' ಎಂದು ಕ್ಷಮೆ ಕೇಳಿ ಪತ್ರ ಬರೆದಿದ್ದ. ವಿನತೆಯಲ್ಲಿ ಹಾಗೆ ಕ್ಷಮೆಯನ್ನು ಕೇಳಬೇಕಾಗಿರಲಿಲ್ಲ. ಪರವೂರಲ್ಲಿ ಹೊಟೇಲಿನಲ್ಲಿ ವಾಸಮಾಡಿಕೊಂಡಿರುವಾತ ಅಲ್ಪ ವೇತನದಲ್ಲಿ, ಹಣ ಉಳಿಸುವುದು ಕಷ್ಟ. ಅಲ್ಲದೆ ಅವನು ತಂಗಿಯ ನೆರವಿಗೆ ಹೋಗಬೇಕಾದುದೂ ನ್ಯಾಯ. ತಾನು ಸಹ ಪರರ ಆಶ್ರಯದಿಂದ ಬದುಕಬಾರದು—ಎಂಬ ಯೋಚನೆ ವಿನತೆಯದು. ಹೀಗಿರುತ್ತ ಅವಳು ತನ್ನ ಸಾಧನೆಯನ್ನು ತ್ವರೆಗೊಳಿಸಲು ಹವಣಿಸಿದಳು. ಒಂದು ಶನಿವಾರ ಕೃಷ್ಣಾ ಬೆನ್ನಳನ್ನು ಕರೆದುಕೊಂಡು, ಅಂಧೇರಿಗೆ ಸಮಾಚಾರ ತಿಳಿಯಲು ಹೊರಟಳು. ರೈಲಿನಿಂದಿಳಿದು, ಅರ್ಧ ಮೈಲು ದೂರ ಸಾಗಿ, ಅನಾಥಾಲಯವನ್ನು ಅವರು ಸೇರಿದಾಗ, ಅಲ್ಲಿನ ಕಚೇರಿಯಲ್ಲಿ ಯಾರೂ ಕಾಣಿಸಲಿಲ್ಲ. ಕೆಲಸದಾಕೆ ಇವರನ್ನು ಕಂಡು "ಯಾರು, ಏನು?" ಎಂದು ವಿಚಾರಿಸಿದಳು. "ಇವತ್ತು ಶನಿವಾರ; ಸ್ವಲ್ಪ ಬೇಗನೆ ಅವರ ಕೆಲಸ ಮುಗಿಯಿತು. ಮನೆಗೆ ಹೋಗಿ ವಿರಮಿಸಿದ್ದಾರೆ. ಸೋಮವಾರ ಬನ್ನಿ" ಎಂದಳು.

"ಮನೆಯೆಲ್ಲಿ?" ಎಂದು ಕೇಳಿದಳು ಕೃಷ್ಣಾ ಬೆನ್.

"ಇಲ್ಲಿಯೇ ಬೆಂಗಡೆಯಲ್ಲಿದೆ." ಹಾಗೆನ್ನುತ್ತಲೇ ಹಿರಿಯಳಾದ ಆಕೆ, ನೆಟ್ಟಗೆ ಅಲ್ಲಿಗೇನೇ ಹೊರಟು ಹೋದಳು. ವಿನತೆ ಅಳುಕುತ್ತ ಅವಳನ್ನು ಹಿಂಬಾಲಿಸಿದಳು. ವಿಶ್ರಾಂತಿಯಲ್ಲಿರುವವರನ್ನು ತಾವಾಗಿ ಕರೆದು ಕೆಣಕಿದರೆ ತಪ್ಪಾಗುತ್ತದೆ. ಆಕೆ ಇಂಗ್ಲಿಷ್ ಮರ್ಜಿಯವಳಿರಬಹುದು — ಎಂಬ ಭಯ ಅವಳಿಗೆ. ಅವಳ ಕಾಲ ಹೆಜ್ಜೆ ಅನುಮಾನಿಸುತ್ತಲೇ ಇತ್ತು. ಅಷ್ಟರಲ್ಲಿ ಕೃಷ್ಣಾ ಬೆನ್ ಮಂಜುಳೆಯ ಮನೆಗೆ ಹೋಗಿ, ಕದ ತಟ್ಟಿ, ಬಾಗಿಲು ತೆರೆಯಿಸಿ, ಅವಳನ್ನು ಹೊರಕ್ಕೆ ಬರುವಂತೆ ಮಾಡಿಯೂ ಆಯಿತು. ಅವಳಿಗೆ

ಜಾಹೀರಾತಿನ ಕಾಗದವನ್ನು ತೋರಿಸಿಯೂ ಆಯಿತು. ತಾವು ಬಂದ ಉದ್ದೇಶವನ್ನು ಹೇಳಿಯೂ ಆಯಿತು. ಕೃಷ್ಣಾಬೆನ್ ಗುಜರಾತಿಯಲ್ಲಿ ಮಾತು ತೊಡಗಿದಳು. ಆಕೆಗೆ ಅದು ಅರ್ಥವಾಗಲಿಲ್ಲವೆಂದು ತಿಳಿದು ಅನಂತರ ಹಿಂದುಸ್ಥಾನಿಯಲ್ಲಿ ಮಾತು ಮುಗಿಸಿದಳು.

"ಯಾರು ನೀವು? ನಿಮಗಾಗಿ ಕೆಲಸ ಕೇಳುತ್ತಿದ್ದೀರಾ, ಬೇರೊಬ್ಬರಿಗಾಗಿಯೋ?" ಎಂದು ಮಂಜುಳೆ ಪ್ರಶ್ನಿಸಿದಳು. ಕೃಷ್ಣಾ ಬೆನ್ ಹಿಂದಿರುಗಿ ನೋಡಿದಳು. ವಿನತೆ ಬಹು ದೂರದಲ್ಲಿ ಅಳುಕಿ ನಿಂತುದು ಕಾಣಿಸಿತು. ಅದನ್ನು ಕಂಡು "ನನಗಾಗಿಯಲ್ಲ ಬಂದದ್ದು. ನನ್ನೊಬ್ಬ ಆಪ್ತಳಿಗಾಗಿ ಬಂದೆ. ಬಹಳ ಒಳ್ಳೆಯವಳು. ನೋಡಿದರೆ ನಿಮಗೇ ತಿಳಿದೀತು" ಎಂದು ಅವಳನ್ನು ಕರೆಯುವುದಕ್ಕೆ ಹೊರಟಳು. ಮಂಜುಳೆ ತುಸು ಕುತೂಹಲದಿಂದ, ಬಂದವರು ಯಾರಿರಬಹುದೆಂದು ನೋಡುತ್ತಿದ್ದಾಗ, ಇನ್ನೊಂದು ಕಟ್ಟಡದ ಮರೆಯಿಂದ ಬರುತ್ತಿದ್ದ ವಿನತೆಯ ರೂಪು ಕಾಣಿಸಿತು. ಆದರೆ ಪೂರ್ವ ಸ್ಮರಣೆಯಾಗದೆ ಸಮೀಪಕ್ಕೆ ಬರುವ ತನಕವೂ ಮುಖವನ್ನೆ ದಿಟ್ಟಿಸಿ ನೋಡಿದಳು. ಕೃಷ್ಣಾ ಬೆನ್ ತಿರುಗಿ ಸಮೀಪಕ್ಕೆ ಬಂದು "ಇವರೇನೇ, ವಿನತಾ ಗಾಂವಕರ್" ಎಂದು ಪರಿಚಯದ ಪೀಠಿಕೆ ತೊಡಗಿದಳು. ಹೆಸರನ್ನು ಕೇಳಿ ಮಂಜುಳೆಯ ಮೈಯಲ್ಲಿ ವಿದ್ಯುತ್ ಸಂಚರಿಸಿದಂತಾಯಿತು. ಧಾವಿಸಿ ಹೋಗಿ ಅವಳನ್ನು ತಬ್ಬಿ ಹಿಡಿದು ಭುಜದ ಮೇಲೆ ಕತ್ತುಹಾಕಿ ಒತ್ತಿಕೊಂಡಾಗ ವಿನತೆಗೆ ಏನೆಂದೇ ಗೊತ್ತಾಗಲಿಲ್ಲ. ಮಾತೇ ಇಲ್ಲದ ಆ ಸಂಭಾವನೆ, ಮೈ ಸಡಲಿಸಲಾರದ ಗಾಢಾಲಿಂಗನ–ಎರಡು ನಿಮಿಷಗಳ ಕಾಲವಾದರೂ ಅವರ ಮೈಯನ್ನು ಬೆಚ್ಚಗೆಗೊಳಿಸಿರಬೇಕು. ಮಂಜುಳೆ ಮೈ ಸಡಲಿಸಿದಳು. ಅವಳ ತೋಳನ್ನು ಹಿಡಿದಳು. "ವಿನತಾ, ಗುರುತಾಗುವುದಿಲ್ಲವೇ?" ಎಂದು ಕೇಳಿದಳು. ಎನ್ನುವಾಗ ಅವಳ ಕಣ್ಣುಗಳಲ್ಲಿ ಕಂಬನಿ ಉದುರುತಿತ್ತು. 'ಮಿಸ್. ಮಡರ್ ಒಬ್ಬ'ಳು ಹಿಂದೂ ಸ್ತ್ರೀ. ಅದೂ ತನಗೆ ಗೊತ್ತಿರುವವಳು ಎಂಬುದನ್ನೆಷ್ಟು ನೆನೆದರೂ ವಿನತೆಯ ಸ್ಮೃತಿಪಥಕ್ಕೆ ಬರದು. ಆ ಚಿತ್ರ ಬರುವುದಕ್ಕೂ ಕಷ್ಟವಿತ್ತು. ಮಂಜುಳೆಯು ಮೊದಲಿಗಿಂತ ಕರ್ರಗಾಗಿದ್ದಳು; ಸ್ಥೂಲಳಾಗಿದ್ದಳು. ಎಳೆತನದಲ್ಲಿ ಮುಖದಲ್ಲಿ ಮಿಂಚುತ್ತಿದ್ದ ಕಾಂತಿ, ನಗು, ಚೆಲುವುಗಳು ಈಗ ಮೊದಲಿನ ಕಾಲಂಶದಷ್ಟೂ ಇರಲಿಲ್ಲ. ವಿನತೆಯಾಗ "ಯಾರು ನೀವು, ನೆನಪಾಗುವುದಿಲ್ಲ ನನಗೆ" ಎಂದಳು. ಮಂಜುಳೆ ಅವಳನ್ನೇ

ಬಿರಬಿರನೆ ನೋಡಿದಳು. ಅವಳಿಗೆ ನಗು ಬಂದಿತು; ನಾಚಿಕೆಯಾಯಿತು. ಆಗ ಏನೂ ಹೇಳಲಿಲ್ಲ. ಇಬ್ಬರನ್ನೂ ಮನೆಯ ಕೊಟಡಿಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿದಳು. ಹೆಚ್ಚಿಗೆ ಮಾತಾಡದೆ, ಚಹ ಮಾಡಿಕೊಟ್ಟಳು. 'ಈ ಕೆಲಸಕ್ಕಾಗಿ ಬಂದಿರಾ? ಕೆಲಸ ಎಂಥದು, ಇಲ್ಲಿಯೇ ಇರಬೇಕಾಗುತ್ತದೆ' ಎಂಬುದನ್ನೆಲ್ಲ ವಿವರಿಸಿದಳು. ಆಗ ವಿನತೆಯ ಮುಖದಲ್ಲಿ ನಿರಾಶೆ ಮೂಡಿತು. ಮಾಲಾಡಿನಲ್ಲಿದ್ದುಕೊಂಡು ಇಲ್ಲಿಗೆ ನಿತ್ಯ ಬರಬಹುದೆಂದು ಅವಳೆಣಿಸಿದ್ದರೆ, ಹಾಗಾಗುವುದು ಶಕ್ಯವಿಲ್ಲ–ಎಂಬ ಅನುಮಾನವಾಯಿತು.

"ವಿಚಾರಮಾಡಿ" ಎಂದಳು ಮಂಜುಳೆ. ಗೆಳತಿಯ ಮುಖವನ್ನು ನೋಡಿ "ಈಗ ಹೋಗೋಣ" ಎಂದಳು ಕೃಷ್ಣಾ ಬೆನ್.

"ಚಹ ಕುಡಿಯಲೇ ಇಲ್ಲ."

"ಕುಡಿಯುತ್ತೇವೆ" ಎಂದಳು ಕೃಷ್ಣಾ ಬೆನ್. ಅವರಿಬ್ಬರ ಮನಸ್ಸಿನಲ್ಲೂ ಆಕೆಯು ಯಾವುದೋ ತಪ್ಪು ಕಲ್ಪನೆಯಿಂದ ವಿನತೆಯನ್ನು ನೋಡಿ, ಆ ಬಗೆಯ ಸ್ವಾಗತಮಾಡಿರಬೇಕು. ತನ್ನ ಆ ನೆನಪು ತಪ್ಪಾಯಿತು ಎಂದು ತೋರಿದ ಮೇಲೆ, ವ್ಯವಹಾರಕ್ಕೆ ಬೇಕಾದಷ್ಟೆ ಮಾತನ್ನಾಡಿದಳು—ಎಂದು ತೋರಿತು. ಮಂಜುಳೆಗೆ ವಿನತೆ ಒಂದು ಕ್ಷಣ 'ನಿಮ್ಮ ಗುರುತಿಲ್ಲ' ಅಂದಾಗ ಅನುಮಾನವಾದರೂ, ಆ ಅನುಮಾನ ಒಂದೇ ಕ್ಷಣ ಉಳಿದಿತ್ತು. ಆದರೆ ತನ್ನಲ್ಲಿ ಒತ್ತಿ ಬರುತ್ತಿದ್ದ ಆವೇಶ ಚೆಲ್ಲಿಕೊಳ್ಳುವುದಕ್ಕೆ ಮೂರನೆಯ ಕೃಷ್ಣಾ ಬಾಯಿಯ ಸಾನ್ನಿಧ್ಯ ತೊಡಕಾಗಿ ಕಾಣಿಸಿತು. ಅವರಿಬ್ಬರು 'ಹೊರಡುತ್ತೇವೆ' ಎಂದು ಎದ್ದೊಡನೆ, ಥಟ್ಟನೆ ಮಂಜುಳೆ ಅಂದಳು: "ಅಮ್ಮಾ, ನೀವೊಮ್ಮೆ ನಮ್ಮ ಆಚಿನ ಆಫೀಸಿನ ಬಳಿ ಉಳಿದುಕೊಳ್ಳುತ್ತೀರಾ? ಇವರಲ್ಲಿ ನಾನು ಕೇಳಬೇಕಾದ ಕೆಲವು ಮಾತುಗಳಿವೆ" ಎಂದಳು.

"ಕೆಲಸದ ವಿಷಯದಲ್ಲೇ?"

"ಹೂಂ."

"ಆಗಲಿ" ಎಂದು ಕೃಷ್ಣಾಬೆನ್ ಮುಂದಿನ ಕಟ್ಟಡಕ್ಕೆ ಹೋದಳು. ವಿನತೆ ಅಲ್ಲಿ ನಿಂತೇ ಇದ್ದಳು. ಮಂಜುಳೆಯ ಮುಖದಲ್ಲಿ ಇನ್ನೊಮ್ಮೆ ಹುಚ್ಚು ಆವೇಶ ಕಾಣಿಸಿತು: "ವಿನತಾ, ನೀನು ಮರೆತೆ. ಮರೆಯುವುದಕ್ಕೆ ಯೋಗ್ಯ ಪದಾರ್ಥ ನಾನು. ನನ್ನ ಹೆಸರೋ, ರೂಪವೋ! ನಿನ್ನ ಬಾಲ್ಯದ ಗೆಳತಿ ಮಂಜುಳೆಯನ್ನು ಮರೆಯುವಂತೆ ಮಾಡಿವೆ."

"ಮಂಜುಳಾ!" ಎಂದು ಸ್ತಂಭಿತಳಾದಳು ವಿನತೆ. ಅಲ್ಲಿಂದ ತಿರುಗಿ ಮಂಜುಳೆ ಅವಳ ಕುರ್ಚಿಯ ಬಳಿಯಲ್ಲೇ ನೆಲದ ಮೇಲೆ ಕುಳಿತಳು; ಅವಳನ್ನೇಳುವುದಕ್ಕೂ ಬಿಡಲಿಲ್ಲ. "ವಿನತಾ, ಕಳೆದ ವರ್ಷ ನಾನು ನಮ್ಮ ಊರಿಗೆ ಹೋಗಿದ್ದೆ. ಅಲ್ಲಿ ನಿನ್ನ ಸಂಗತಿ ತಿಳಿಯಿತು. ನಿನ್ನ ತಮ್ಮ ಎಲ್ಲವನ್ನೂ ಹೇಳಿದ. ಅಮ್ಮನೂ ಹೇಳಿದಳು. ನಾವು ಪರಸ್ಪರ ಅಗಲಿ ಎಷ್ಟು ವರ್ಷಗಳಾದರೇನು—ನಿನ್ನನ್ನು ಮರೆಯಬಲ್ಲೆನೇ? ಅಂದಿನಿಂದಲೇ ನಿನಗೆ ಕಾಗದ ಬರೆಯಬೇಕು. ನಿನ್ನನ್ನು ಕಾಣಬೇಕು— ಎಂದು ನಿಶ್ಚಯಿಸಿಕೊಂಡಿದ್ದೆ. ಆದರೆ ಧೈರ್ಯವೇ ಬರಲಿಲ್ಲ."

ಗೆಳತಿಯ ಮುಖವನ್ನು ನೋಡಿ ವಿನತೆಗೆ ಬಾಲ್ಯದ ಸ್ಮರಣೆಗಳು ಆನಂದವನ್ನು ಹುಟ್ಟಿಸಿದುವು. ಆದರೆ ಅವಳ ಪರಿತಾಪಪೂರಿತ ಮುಖದ ಅರ್ಥವೇ ಅವಳಿಗೆ ಆಗಲಿಲ್ಲ. ಅವಳಿಗೆ ಅಳುವು ಒತ್ತಿ ಬರುವುದು ಕಾಣುತಿತ್ತು. ವಿನತೆಯಲ್ಲೂ ದುಃಖ ಆಗ ನುಡಿಯಿತು. "ಮಂಜುಳಾ, ನನ್ನನ್ನು ಕಾಣುವುದಕ್ಕೆ ನಿನಗೆ ಅಧೈರ್ಯವೇ? ನೀನೆಷ್ಟು ದೊಡ್ಡ ಕೆಲಸದಲ್ಲಿದ್ದೀಯಾ! ನನ್ನ ಅವಸ್ಥೆಯೇನು!" ಎಂದಳು.

"ನನ್ನ ಕೆಲಸದ ಮಾತನ್ನು ಬಿಡು. ನನ್ನ ದೊಡ್ಡಸ್ತಿಕೆಯನ್ನೂ ಬಲ್ಲೆ. ನೋಡು—ನೀನು ಎಷ್ಟೆಲ್ಲ ಕಷ್ಟ ಪಟ್ಟಿದ್ದೀಯೆಂದು ನಾನು ಊಹಿಸಲು ಶಕ್ತಳಲ್ಲ. ಆದರೆ ಅದರಲ್ಲಿ ಅರ್ಧದಷ್ಟು ಕಷ್ಟಕೊಟ್ಟವಳು ನಾನು ಎಂದು ನನಗೆ ಗೊತ್ತಿದೆ. ಅದರಿಂದಲೇ ನೀನಿದ್ದಲ್ಲಿಗೆ ಬರಲು ಅಂಜಿಕೆಯಾಯಿತು. ಯಾವ ಮುಖ ತೆಗೆದುಕೊಂಡು ಬರಲಿ? ನೀನೊಬ್ಬಳೇ ಇದ್ದಿದ್ದರೆ ಬರುತ್ತಿದ್ದೆನೋ ಏನೋ-ನಿನ್ನ ಕಾಲು ಹಿಡಿದು ಕ್ಷಮೆ ಕೇಳುವುದಕ್ಕೆ." ಆ ಮಾತನ್ನಾಡುವಾಗ ಮಂಜುಳೆಯ ಒಂದು ಕೈ, ವಿನತೆಯ ಒಂದು ಪಾದದ ಮೇಲೆ ಸರಿದಿತ್ತು. ವಿನತೆ ಆ ಚರ್ಯೆಯನ್ನು ಕಂಡು ನಿಜಕ್ಕೂ ವಿಸ್ಮಯದಿಂದ ನಡುಗಿದಳು. ಕಾಲನ್ನು ಹಿಂದೆಗೆದು ನಿಂತಳು.

"ಯಾಕೆ ಹೀಗೆ ಮಾಡುತ್ತೀ ಮಂಜುಳ; ನನಗೊಂದೂ ಅರ್ಥವಾಗುವುದಿಲ್ಲ. ಇಷ್ಟು ವರ್ಷ ನೀನು ನನ್ನನ್ನು ಕಣ್ಣಿಂದಲೂ ಕಂಡಿರಲಿಲ್ಲ. ನಾನು ನಿನ್ನನ್ನು ಕಂಡಿರಲಿಲ್ಲ. ಹೀಗಿರುತ್ತ ಅಪರಾಧ ಎಂಬ ಮಾತೇಕೆ?"

"ನಿನಗೆ ತಿಳಿಯದು. ಆದ್ದರಿಂದಲೇ ನಾನು ಎಲ್ಲವನ್ನು ಹೇಳಿ ನಿನ್ನಲ್ಲಿ ಕ್ಷಮೆ ಬೇಡಬೇಕಾಗಿದೆ . . . . ಅವರೆಲ್ಲಿ?"

ವಿನತೆ ಮೇಲಕ್ಕೆ ನೋಡಿದಳು.

"ಇಲ್ಲವೆ?, ಬಿಟ್ಟು ಹೋದರೇ?"

"ತೀರಿಕೊಂಡರು."

"ಸತ್ತವರ ದೂರು ಹೇಳಬಾರದೆನ್ನುತ್ತಾರೆ. ಅವರ ದೂರನ್ನು ನಾನು ಹೇಳುವುದಿಲ್ಲ. ಡಿಲ್ಲಿಯಲ್ಲಿ ಅವರಿದ್ದಾಗ ಮೂರು ವರ್ಷಗಳ ಕಾಲ ನಾನೂ ಇನ್ನೊಬ್ಬಳೂ ಕೂಡಿ ಅವರೊಡನೆ ಹುಚ್ಚು ಬಾಳ್ವೆ ಮಾಡಿ, ನಿನ್ನನ್ನು ಮರೆಯುವ ಹಾಗೆ ಮಾಡಿದೆವು. ಊರಿಗೆ ಹೋದಾಗ-ನೀನು ಗಾಂವಕರರನ್ನು ಮದುವೆಯಾಗಿದ್ದೀ—ಎಂದು ಕೇಳಿದಾಗಲೇ ನಾನು ಮಾಡಿದ ಅನ್ಯಾಯ ನನಗೆ ಗೊತ್ತಾಯಿತು. ನಮ್ಮ ಕಣ್ಣೆದುರಿಗೇನೇ ಆ ದಿನ, ಮಿಲಿಟರಿ ಲಾರಿ ಅವರನ್ನು ಕಿತ್ತುಕೊಂಡು ಹೋಗಿ ಉರುಳಿಸಿತು. ಈಗ ನೋಡಿದರೆ ಆ ದಿನ ನಾನೇ ಸಾಯಬಹುದಿತ್ತು ಎಂದೆನಿಸುತ್ತದೆ. ವಿನತೆ, ಎಲ್ಲವನ್ನು ಹೇಳಬೇಕೆನಿಸುತ್ತದೆ. ನಿನ್ನ ಜತೆಯಲ್ಲಿ ಮದುವೆಯ ಆಸೆ ಹಿಡಿದು ಹೊರಟ ನಾನು, ಎಂಥ ಭಿಕಾರಿಯಾದೆ ಎಂದು ಹೇಳಬೇಕೆಂದು ಅನಿಸುತ್ತದೆ. ನಿನಗೆ ವೇಳೆ ಇದೆಯೋ ಇಲ್ಲವೋ. ನನ್ನನ್ನು ಕ್ಷಮಿಸುತ್ತೀ ಎಂದರೆ ಎಲ್ಲವನ್ನು ಹೇಳುತ್ತೇನೆ" ಎಂದು ಮಾತಿಗೆ ತೊಡಗಿಯೇ ಬಿಟ್ಟಳು.

ಇಬ್ಬರ ವಾಣಿಗಳೂ ದೀನವಾದುವು. ಕಣ್ಣುಗಳು ಸಿಲ್ಲಿಸದೆ ಕಂಬನಿ ಉದುರಿಸುತ್ತಿದ್ದುವು. ಪ್ರಪಂಚ ಮರೆತವರಂತೆ, ಯಾವುದೋ ದೋಣಿಯಲ್ಲಿ ಕುಳಿತು ಕಡಲಿನ ಅಬ್ಬರಕ್ಕೆ ಅಪ್ಪಳಿಸಿ, ದೋಣಿ ನುಚ್ಚುನೂರಾಗಿ, ಅನಾಥರಾಗಿ ದಂಡೆಗೆ ಎಸೆಯಲ್ಪಟ್ಟ ದುರ್ದೈವಿಗಳಾದ ನಾವಿಕರಂತೆ, ಮುಖಮುಖ ನೋಡಿ ಆತ್ಮಕಥನ ತೊಡಗಿದರು. ಮಂಜುಳೆ ಒಂದು ಚೂರನ್ನೂ ಬಿಡದೆ ತನ್ನ ಇತಿಹಾಸ ಹೇಳಿದಳು. ಅವಳನ್ನು ಸಮಾಧಾನಪಡಿಸುವ ಕಷ್ಟ ವಿನತೆಗೆ ಬಂದೊದಗಿತು. ಅವಳೆಂದಳು "ನಾಳೆ ನಾನೊಬ್ಬಳೇ ತಿರುಗಿ ಇಲ್ಲಿಗೆ ಬರುತ್ತೇನೆ. ಕೃಷ್ಣಾ ಬೆನ್ನಳನ್ನು ಹೀಗೆ ಕಾಯಿಸುವುದು ಬೇಡ. ಅವರೆ ನೀನು ಹೀಗೆ ಕೊರಗಬಾರದು. ನಿನ್ನಿಂದ ಅವರು ಹಾಳಾದುದಲ್ಲ; ನಾನೂ ಹಾಳಾಗಿಲ್ಲ" ಎಂದು ಅವಳಿಗೆ ಸಮಾಧಾನ ಹುಟ್ಟಿಸಲು, ಡಿಲ್ಲಿಗೆ ಹೊರಡುವ ಮುಂಚೆ ತನ್ನ ಗಂಡ ಬರೆಯಿಸಿಕೊಂಡ, ತನ್ನಿಂದ ಸಹಿಮಾಡಿಸಿಕೊಂಡ ಕಾಗದದ ಕಥೆಯನ್ನು ಹೇಳಿ, ಎದ್ದಳು. ಇಬ್ಬರೂ ಬೇನೆಯಿಂದೆದ್ದವರಂತೆ ಒಬ್ಬರನ್ನೊಬ್ಬರು ತಬ್ಬಿಹಿಡಿದು ಕೃಷ್ಣಾಬೆನ್ ಇರುವಲ್ಲಿಗೆ ಬಂದರು. ಅವರೊ

ಡನೆ "ಅಮ್ಮಾ, ಈ ವಿನತೆಯು ನನ್ನ ಸಹಪಾಠಿ. ಆದರೆ ಅವಳನ್ನು ಕಂಡದ್ದು ಈಗಷ್ಟೆ. ನೀವು ಅವರ ಕೆಲಸದ ಚಿಂತೆಯನ್ನು ಹಚ್ಚಿಕೊಳ್ಳಬೇಡಿ; ನಾನಿದ್ದೇನೆ" ಎಂದು ಹೇಳಿ ಬೀಳ್ಕೊಟ್ಟಳು. ಮಂಜುಳೆ ಮರುದಿನ ತಾನೇ ಅವಳಲ್ಲಿಗೆ ಬರುವೆನೆಂದು ಹೇಳಿದಳು.

ವಿನತೆಯ ಮನಸ್ಸು ವಿಚಿತ್ರ ಕನಸಿನ ಲೋಕವೊಂದರಲ್ಲಿ ಸಂಚರಿಸಿ ಬಂದವರಂತಾಗಿತ್ತು. ತನ್ನ ಗೆಳತಿಯು ಏನೇ ಮಾಡಿರಲಿ, ಎಷ್ಟು ನಿಸ್ಪೃಹವಾದ ಮನದಿಂದ ಹೇಳಿದಳು! ಕ್ಷಮೆ ಯಾಚಿಸಿದಳು! ತನ್ನನ್ನು ಒಂದು ಗಂಡು ಜೀವ ಮದುವೆಯಾಗಿ ಮೋಸಗೊಳಿಸಿದ್ದರೆ, ಮಂಜುಳೆಯ ಬಾಳು ಕೆಟ್ಟುದು ಅಂಥವೇ ಇತರ ಜೀವಗಳಿಂದ; ಮದುವೆಯಾಗುವೆನೆಂದು ಮೋಸಗೊಳಿಸಿದವರಿಂದ; ಮನೋಹರನಂಥವರಿಂದ. ಅವನೂ ತನಗೆ ತಿಳಿದಂಥ ವ್ಯಕ್ತಿ; ಸಹಪಾಠಿ. ಅವನ ಊರಿಗೆ ತಾವೆಲ್ಲ ಹೋಗಿಲ್ಲವೆ—ಎಂಬ ವಿಚಿತ್ರ ನೆನಪುಗಳಿಂದ ಕವಿದು, ತಾನು ಕೆಲಸವನ್ನು ಹುಡುಕಿ ಹೋದ ವಿಚಾರವನ್ನೇ ಅವಳು ಮರೆಯುವಂತೆ ಮಾಡಿತು. ಮನೆಗೆ ಹೋಗುವ ತನಕವೂ, ಮನೆಗೆ ಹೋದ ಮೇಲೆಯೂ, ಮಂಜುಳೆಯ ಜೀವನ ಚಿತ್ರ ಅವಳ ಮನಸ್ಸಿನಲ್ಲಿ ಸುತ್ತಿ ಸುಳಿಯತೊಡಗಿತು. ಅವಳೆಂದು ಬಂದಾಳು, ಅವಳನ್ನು ಎಂದು ಕಂಡೇನು–ಎಂಬ ಆಸೆ ತುದಿಕಾಲಲ್ಲಿ ನಿಂತಿತ್ತು.

ಮಂಜುಳೆಗೂ ಹಾಗೆಯೇ—ಆ ದಿನವೆಲ್ಲ ಚಿಂತೆ, ಸಂತೋಷಗಳ ಹೊಯ್ದಾಟದಲ್ಲಿ ಅವಳು ತೇಲಾಡುತಿದ್ದಳು. ಎದೆಯ ಮೇಲಿನ ಹೊರೆಯೊಂದನ್ನು ಎತ್ತಿ ಇರಿಸಿದಷ್ಟು ಮನಸ್ಸು ಹಗುರವಾಯಿತು. "ಇನ್ನೇ–ಅವಳು ನನ್ನವಳು. ನನಗೆ ಅವಳೇ ಮಾರ್ಗದರ್ಶಕಳು. ಅವಳಿಗೆ ಕೆಲಸ ಕೊಡಿಸುವುದು ಕಷ್ಟವಲ್ಲ. ಆ ಬಗ್ಗೆ ಸೇಠ್ ಗೋಕುಲದಾಸರಿಗೆ ಸಮಾಧಾನ ಹೇಳುವ ಕೆಲಸವೂ ಕಷ್ಟವಲ್ಲ. ನನ್ನ ಮನಸ್ಸು ಇನ್ನೂ ಕೆಲವೊಂದು ವಿಚಾರಗಳಲ್ಲಿ ಸ್ಥಿಮಿತಗೊಂಡಿಲ್ಲ. ಶಾಂತಿಯನ್ನು ಪಡೆದಿಲ್ಲ. ಅವಳಂತಹ ಗೆಳತಿ ಬಳಿಯಲ್ಲಿದ್ದರೆ ನನಗೊಂದು ಧೈರ್ಯ" ಎಂದು ನೆನೆದುಕೊಂಡು ಆ ರಾತ್ರಿಯನ್ನು ಹೇಗೋ ಕಳೆದಳು. 'ಈ ರಾತ್ರಿಗೆ ಎಷ್ಟು ಗಳಿಗೆಗಳಪ್ಪ' ಎಂದು ದೂರಿದಳು.

ಮರುದಿನವೇ ಆದಿತ್ಯವಾರವಾಗಿತ್ತು. ಅನಾಥಾಲಯಕ್ಕೆ ರಜೆಯೆಂಬುದಿರಲಿಲ್ಲ. ಆದರೆ ನಿತ್ಯಕ್ಕಿಂತ ಹೆಚ್ಚಿನ ವಿಶ್ರಾಂತಿ ಮಂಜುಳೆಗಿತ್ತು. ಸಂಜೆ,

ಆಲಯದ ಮಕ್ಕಳನ್ನು ತಿರುಗಾಟಕ್ಕೆ ಕರೆದೊಯ್ಯಬೇಕು. ಅವಳೇ ಅದನ್ನು ಮಾಡಬೇಕೆಂದಿಲ್ಲ. ಆ ಸಂತೋಷವನ್ನು ತಪ್ಪಿಸಿಕೊಳ್ಳುವುದಕ್ಕೆ ಅವಳಿಗೆ ಇಷ್ಟವಾಗಲಿಲ್ಲ. ಹಾಗೆಂದು ಬೆಳಗ್ಗೇನೇ ಉಪಾಹಾರ ಮುಗಿಸಿ, ಟ್ರೈನು ಹತ್ತಿ, ಮಾಲವಾಡಿಗೆ ಹೋಗಿ, ಬೆಳಗಿನ ಒಂಬತ್ತು ಗಂಟೆಯೊಳಗೆ ವಿನತೆಯ ಗುಡಿಸಲನ್ನು ಸೇರಿಯೂ ಆಯಿತು. ಒಂದು ಒಂದೂವರೆ ವರ್ಷಗಳ ಅಂತರದಲ್ಲಿ ಹುಟ್ಟಿದ ತನ್ನ ನಾಲ್ವರು ಮಕ್ಕಳನ್ನುಪಚರಿಸುತ್ತ ಆಕೆ ಕುಳಿತಿದ್ದಳು. ಮಂಜುಳೆ ಬರುತ್ತಲೇ ಜಿಗಿದೆದ್ದು ಅವಳನ್ನು ಸ್ವಾಗತಿಸಿದಳು. ಮಂಜುಳೆ ಆ ಮಕ್ಕಳ ಹೆಸರುಗಳನ್ನು ಕೇಳಿದಳು. ಅವರ ಆಟದಲ್ಲಿ ಬೆರೆತಳು. ಆಕೆ ಮಧ್ಯಾಹ್ನ ಮರಳಿ ಬರುವೆನೆಂದು ಬಂದಿದ್ದರೂ ಸಂಜೆಯ ತನಕ ಹೋಗಲಿಲ್ಲ. ಹೋಗುವುದೇ ಆಗಲಿಲ್ಲ. ವಿನತೆ ಮಕ್ಕಳನ್ನು ಆಡುವುದಕ್ಕೆ ಹಿತ್ತಿಲಲ್ಲಿ ಬಿಟ್ಟ ಮೇಲೆ, ಅವರಿಬ್ಬರ ಸಂಭಾಷಣೆಗೆ ಪ್ರಾರಂಭವಾಯಿತು. ಈಗ ವಿನತೆಯ ಸರದಿ ಬಂದಿದೆ. ತನ್ನ ಪಾಲಿನ ಕಥೆಯನ್ನು ಹೇಳುವಾಗ ಅನಾಸಕ್ತಳಾದ ಪ್ರೇಕ್ಷಕಳಂತೆ ಹೇಳತೊಡಗಿದಳು. ತಾನು ಊರಿಂದ ಹೊರಟಂದಿನಿಂದ, ಪತಿಯ ಅಂತಿಮ ಯಾತ್ರೆಯ ತನಕ ನಡೆದ ಎಲ್ಲ ಚರಿತ್ರೆಯನ್ನೂ ಬಣ್ಣಿಸಿದಳು. ಹಳೆಯ ನೆನಪುಗಳಿಂದ, ಗಂಡನ ಮೇಲಿನ ನಂಜನ್ನು ಕಾರದೆ, ಯಾರಿಗೋ ನಡೆದ ಅನ್ಯಾಯದಂತೆ ಆತ್ಮಕಥೆಯನ್ನು ಹೇಳಿ ಮುಗಿಸಿದಳು. "ಏನೋ ಮಂಜುಳಾ, ಧೈರ್ಯಮಾಡಿ ಮದುವೆಯಾದೆ. ಆಯಿತು, ಒಂದು ಕಥೆ. ಈ ಮಕ್ಕಳನ್ನು ಸಾಕಿ ದೊಡ್ಡದುಮಾಡಬೇಕು ಎಂಬುದು ಎರಡನೆಯ ಆಸೆ. ನಮಗೆ ಶ್ರೀಮಂತಿಕೆಯ ಯೋಗವಿಲ್ಲದಿದ್ದರೇನು? ಬಡವರಾಗಿದ್ದರೂ ಮರ್ಯಾದೆಯನ್ನಿಟ್ಟುಕೊಳ್ಳಬರುವುದಿಲ್ಲವೆ? ಅಷ್ಟು ಮಾಡಿ ಸತ್ತರೆ ನನ್ನ ಕೆಲಸ ಮುಗಿಯಿತು. ಈಗ ಕೈಗೆ ಬರುವ ದುಡ್ಡು ಏನೂ ಸಾಲದು ಎಂದು ಯೋಚಿಸುತ್ತಿದ್ದಾಗ, ನಿನ್ನೆ ನನ್ನ ಜತೆಗೆ ಬಂದರಲ್ಲ, ಅವರು ಹೇಳಿದರು: ಅವರು ಇಲ್ಲೇ ಎದುರಿನ ಮನೆಯಲ್ಲಿದ್ದಾರೆ" ಎಂದು ತಾನು ಅವಳಲ್ಲಿಗೆ ಬಂದ ಕೆಲಸದ ನೆನಪನ್ನು ಹುಟ್ಟಿಸಿದಳು.

"ನೀನು ಕೆಲಸದ ಚಿಂತೆಯನ್ನು ಬಿಡು. ನನಗೇ ನಿನ್ನನ್ನು ಸಮೀಪಕ್ಕೆ ಕರೆಯಿಸಿಕೊಳ್ಳಬೇಕೆಂದಿದೆ."

"ಇಲ್ಲಿನ ಮನೆಯನ್ನೇನು ಮಾಡಲಿ? ಇಡೀ ದಿವಸ ಅಲ್ಲಿರುವುದು ನನಗೆ ಸಾಧ್ಯವೇ? ನಿನಗೆ ಮಕ್ಕಳಿಲ್ಲ. ನೀನು ಇದ್ದೀಯ. ನಾನು ಇವುಗಳನ್ನು

ರಾತ್ರಿ ಬಿಟ್ಟಿರುವುದಕ್ಕೆ ಬರುತ್ತದೆಯೇ?"

"ಏನೂ, ಅದೊಂದನ್ನೂ ನೀನು ಹೇಳಬೇಡ. ನೀನು ಬೇರೆ; ನಾನು ಬೇರೆ-ಎಂದು ತಿಳಿಯಲೇಬೇಡ. ಇನ್ನೊಂದು ದಿನ ನಿನ್ನನ್ನು ಕರೆದೊಯ್ಯುವುದಕ್ಕೇ ಬರುತ್ತೇನೆ" ಎಂದಳು. ಅಲ್ಲಿಂದ ಮಾತು ಎಲ್ಲೆಲ್ಲಿಗೋ ಸರಿಯಿತು. ನಮ್ಮ ಬಾಲ್ಯದ ಇತರ ಗೆಳತಿಯರ ನೆನವರಿಕೆಗಳು ಹುಟ್ಟಿದುವು. ಪ್ರತಿಯಾಗಿ ಮಂಜುಳೆ, ತನ್ನ ಗೆಳತಿ ಅಂಜಲಿಯ ಕತೆಯನ್ನು ಹೇಳುವುದಕ್ಕೂ ಮರೆಯಲಿಲ್ಲ. ಆ ದಿನ ತುಂಬ ಸಂತೋಷದಿಂದ ಅವಳ ಮನೆಗೆ ಬಂದ ಮಂಜುಳೆ ಹೊರಟುಹೋದಳು.

ಮಂಜುಳೆ ಇನ್ನೊಮ್ಮೆ ವಿನತೆಯನ್ನು ಕರೆಯಲು ಬರುವುದಕ್ಕೆ ಒಂದು ತಿಂಗಳ ಕಾಲವೇ ಸರಿಯಿತು. ಸೇಠಜಿ ಅಂಧೇರಿಗೆ ಬರಬೇಕಾಗಿತ್ತು. ಬಂದ ಮೇಲೆ ಇತರ ಅರ್ಜಿಗಳನೇಕವಿದ್ದರೂ, ತನ್ನ ಇಂಥ ಪರಿಚಿತೆಗೆ ಆ ಕೆಲಸ ಕೊಡಿಸಬೇಕೆಂದು ಅವನನ್ನು ಬೇಡಿದಳು. "ನಿಮಗೆ ವಿಶ್ವಾಸವಿದ್ದರೆ ನನಗೂ ವಿಶ್ವಾಸವೇ" ಎಂದ ಆತ. ಮುಂದೆ "ಅವರ ಮನೆ ಇಲ್ಲಿಂದ ದೂರವಿದೆ. ಅವರಿಗೆ ನಾಲ್ಕು ಮಕ್ಕಳಿದ್ದಾರೆ. ಅವರ ಬಿಡಾರ ನನ್ನೊಡನೆಯೇ ಇದ್ದರೆ ನಿಮಗೆ ಆಕ್ಷೇಪವೆ?" ಎಂದು ಕೇಳಿದಳು. ಅದಕ್ಕೂ ಸಮ್ಮತಿ ದೊರೆಯಿತು. ಹೀಗಾಗಿ ಅವಳು ವಿನತೆಯ ಮನೆಯನ್ನು ಮಂಜುನಾಥನ ಒಬ್ಬ ಮಿತ್ರನಿಗೆ, ಬಾಡಿಗೆಗೆ ಕೊಡಿಸಿದಳು. ಅನಂತರ ವಿನತೆಯನ್ನು ಬೇರು ಸಹಿತವಾಗಿ ತನ್ನ ಬಿಡಾರಕ್ಕೇನೇ ಕಿತ್ತು ತಂದಳು. ವಿನತೆ ನಂಬಿಕೆಗೆ ತಕ್ಕವಳೆನಿಸಿದ್ದುದರಿಂದ, ವಿಶೇಷ ಶ್ರಮದಾಯಕವಲ್ಲದ ಉಗ್ರಾಣದ ಕೆಲಸ ವಹಿಸಿಕೊಟ್ಟಳು. ಕೊಳ್ಳುವ, ತರುವ, ವಿತರಣೆಮಾಡುವ ಕೆಲಸ ಅವಳದು. ಮಂಜುಳೆಯ ಮನೆಯಲ್ಲಿ, ವಿನತೆಯ ಮಾಲಾಡಿನ ಮನೆಗಿಂತಲೂ ಹೆಚ್ಚಾಗಿ ಸ್ಥಳವಿತ್ತು. ಹೀಗಾಗಿ ಅಲ್ಲಿಯೇ ವಿನತೆ ತನ್ನ ಬಿಡಾರ ಹೂಡಿದಳು. ಬಾಡಿಗೆಯ ವೆಚ್ಚ ಉಳಿಯಿತು. ಪ್ರಾರಂಭದಲ್ಲಿ ವೇತನ ನೂರು ರೂಪಾಯಿಗಳು ಎಂದು ನಿಷ್ಕರ್ಷೆಯಾಗಿತ್ತು. 'ಮೊದಲಿಗಿಂತ ಎಷ್ಟೋ ವಾಸಿಯಲ್ಲವೆ' ಎಂಬುದು ಅವಳ ಸಮಾಧಾನ. ಆದರೆ ದಿನ ಹೋಗುತ್ತ ಖರ್ಚುವೆಚ್ಚಗಳ ವಿಚಾರದಲ್ಲಿ ಮಂಜುಳೆಯೆ ಭಾರ ಹೊರತೊಡಗಿದುದನ್ನು ಕಂಡು ಅವಳಿಗೆ ಸಮಾಧಾನವಾಗಲಿಲ್ಲ. ಆಕೆ ಹಕ್ಕಿನಿಂದೆಂಬಂತೆ ಖರ್ಚಿಗೆ ಮುಂದಾಗುತ್ತಾಳೆ. "ನನಗೆ ಯಾರಿದ್ದಾರೆ ಹೇಳು? ನಿನ್ನ ಮಕ್ಕಳೂ ನನ್ನವೇ. ನನಗೆ

ಇನ್ಯಾವ ಆಸೆಯೂ ಉಳಿದಿಲ್ಲ. ಈ ದುಡ್ಡು ಯಾರಿಗಾಗಿ? ಅವರೇನೋ ನನಗೆ ಕೈ ತುಂಬ ಸಂಬಳ ಕೊಡುತ್ತಾರೆ, ನಿಜ. ನನಗೆ ಅಷ್ಟು ಬೇಕಿಲ್ಲ. ನಾನೀ ತನಕ ಮಕ್ಕಳಿಗಾಗಿಯೇ ಅದನ್ನು ವ್ಯಯಿಸುತ್ತಿದ್ದೆ" ಎಂದಳು.

ವಿನತೆ ವ್ಯಗ್ರಳಾಗಿ "ಮಂಜುಳಾ, ನಿನ್ನ ಮನಸ್ಸು ದೊಡ್ಡದು, ನಿಜ. ನಾನು ಯಾರನ್ನೂ ಬೇಡದೆ ನನ್ನ ಮಕ್ಕಳನ್ನು ಬೆಳೆಯಿಸಿ ದೊಡ್ಡದು ಮಾಡಬೇಕೆಂಬ ಹಟದಿಂದ ಬಾಳಿ ಬಂದವಳು. ನನ್ನ ಮನಸ್ಸಿಗೆ ಹೇಗೆ ಸಮಾಧಾನವಾದೀತು?" ಎಂದಾಗ ಆಕೆ "ನೋಡು, ಹಾಗಿದ್ದರೆ ನಾನು ಇವುಗಳ ಹೆಸರಿಗೆ ಅವು ದೊಡ್ಡದಾದ ಮೇಲೆ ಸಿಗುವಂತೆ, ಓದಿಗೋ ಮದುವೆಗೋ ಸಿಗುವಂತೆ ತೆಗೆದಿರಿಸಲೇ. ನಿನಗೆ ಕೊಡುವುದಲ್ಲ; ಅವಕ್ಕೆ ಕೊಡುವುದು. ಬೇಡೆನ್ನುವ ಹಕ್ಕು ನಿನಗಿಲ್ಲ" ಎಂದು ಏನೇನೋ ಸಮಾಧಾನ ಹೇಳಿದಳು. ದಿನಗಳು ಸರಿದಂತೆ ಅವರ ಬಾಲ್ಯದ ದಿನಗಳೇ ತಿರುಗಿ ಬಂದಂತಾಯಿತು. ಮಂಜುಳೆಯ ಪ್ರೇಮದಲ್ಲಿ, ವಿನತೆ ತಾನು ಬೇರೆ,ಆಕೆ ಬೇರೆ, ಎಂದು ತಿಳಿದು ವರ್ತಿಸುವುದು ಅಸಾಧ್ಯವಾಯಿತು. ಕೊನೆಗೆ ಅದನ್ನೆಲ್ಲ ಎಣಿಸಿ–ದೈವವೇ ಅವಳನ್ನು ತನ್ನ ಸಲುವಾಗಿ ಕಳುಹಿಸಿದ ನೆರವು–ಎಂದು ಆಕೆ ತಿಳಿಯಬೇಕಾಯಿತು.

* * * * *

ಒಂದು ದಿನ ಅವರ ಅನಾಥಾಲಯಕ್ಕೆ 'ಈ ಒಂದು ಮಗುವನ್ನು ಸೇರಿಸಿಕೊಳ್ಳಿ' ಎಂದು ಬೇಡಲು ಬರುವ ಬಂಧುಗಳಂತೆ, ಒಬ್ಬ ತರುಣ, ಯಾರ ಸಲುವಾಗಿಯೋ ಆಶ್ರಯವನ್ನು ಕೇಳುವುದಕ್ಕೆ ಮಂಜುಳೆಯಲ್ಲಿಗೆ ಬಂದಿದ್ದ. ಆಗ ಮಂಜುಳೆ ಅಷ್ಟೊಂದು ವಿರಾಮದಲ್ಲಿರಲಿಲ್ಲ. ಆದರೂ ಬಂದ ತರುಣನ ಆತುರದ ಮುಖವನ್ನು ಕಂಡು 'ಏನು ಬಂದಿರಿ? ಪ್ರಾಯಶಃ ಯಾರದ್ದಾದರೂ ಪ್ರವೇಶಕ್ಕಾಗಿ ಬಂದಿರಬೇಕು. ಇಲ್ಲಿ ಎಷ್ಟು ಮಂದಿಯನ್ನು ಸಾಕಲು ಬಂದೀತು? ಈಗಾಗಲೇ ಅರುವತ್ತು ಮಂದಿಯನ್ನು ನೋಡಿಕೊಳ್ಳುತ್ತಿದ್ದೇವೆ. ಅದಕ್ಕೂ ಹೆಚ್ಚಿಗೆ ಜಾಗ ಬೇಡವೇ? ಅನುಕೂಲತೆ ಬೇಡವೇ? ನಮ್ಮ ಸೇಠಜಿಯಾದರೂ ಎಷ್ಟು ಹಣ ಖರ್ಚು ಮಾಡಬಹುದು' ಎಂದು ಉದಾಸೀನವಾಗಿ ನುಡಿದಳು.

ಬಂದ ತರುಣನು "ನೀವು ಹಾಗೆ ಹೇಳುವುದಾದರೆ ಹೋಗುತ್ತೇನೆ. ನಾಲ್ಕು ದಿನ ಸಾಕುವವರಿದ್ದರೆ ನಿಮ್ಮಿಂದ ಒಂದು ಕೂಸು ಬದುಕೀತು–ಎಂಬ ಆಸೆಯಿಂದ ನಾನಿಲ್ಲಿಗೆ ಬಂದೆ. ಅದು ನನ್ನ ಮಗುವೇನೂ ಅಲ್ಲ; ನನ್ನ

ಬಂಧುಗಳದೂ ಅಲ್ಲ. ಯಾರದೋ ಮಗು; ನಿತ್ಯವೂ ನಮ್ಮ ಕಣ್ಮುಂದೆ ಒಣಗಿ ಸಾಯುವುದನ್ನು ಕಾಣಲಾರದೆ ನಾನಾಗಿ ಓಡಿ ಬಂದೆ."

"ಏನು ಸಂಗತಿ?"

"ಮತ್ತೇನಿಲ್ಲ. ಮಾತುಂಗದಲ್ಲಿ ನಮ್ಮ ಚಾಲಿನ ಕೆಳಗಡೆಯ ಒಂದು ಮನೆಯಲ್ಲಿ ಒಂದು ಸಣ್ಣ ಕೂಸಿದೆ. ಅದಕ್ಕೆ ಒಂದು ವರ್ಷ ಪ್ರಾಯ ಕೂಡ ಆಗಿರದು. ಸಾಕುವವರಿಲ್ಲದೆ ತೀರ ಒಣಗಿ ಸಾಯುತ್ತಿದೆ. ಅದರ ತಾಯಿ ಕಾಣಿಸುವುದಿಲ್ಲ. ಇದ್ದಳಂತೆ; ಎಲ್ಲಿಗೋ ಓಡಿ ಹೋದಳಂತೆ. ತಂದೆಯೊಬ್ಬ ಇದ್ದಾನೆ. ವಯಸ್ಸು ಹೆಚ್ಚಾಗಿಲ್ಲ. ಆತನೂ ಹಾಸಿಗೆಯನ್ನು ಹಿಡಿದಿದ್ದಾನೆ. ಕೆಮ್ಮುವುದು, ಮಲಗಿರುವುದು ನೋಡಿದರೆ, ಅವನಿಗೆ ಕ್ಷಯವೆಂದು ಕಾಣುತ್ತದೆ. ಅವನಿಗೂ-ಯಾರಾದರೂ ಒಂದಿಷ್ಟು ಹಾಲು, ಒಂದೆರಡು ಹಣ್ಣುಗಳನ್ನು ತಂದು ಕೊಟ್ಟರೆ ಉಂಟು; ಇಲ್ಲವಾದರೆ ಇಲ್ಲ. ಮಗುವಂತು ಒಣಗಿ ಸಾಯುವಂತಾಗಿದೆ. ತನ್ನನ್ನೇ ನೋಡಿಕೊಳ್ಳಲಾರದವನು ಆತ, ಅವನೂ ಸಾಯುವವನೇ. ಅವನಿಗಿಂತ ಆ ಮಗು ಮೊದಲು ಸತ್ತಿದ್ದರೂ ಚಿಂತೆಯಿರಲಿಲ್ಲ. ನಾಸಿರುವುದು ಆ ಕಟ್ಟಡದ ಮೇಲಿನ ಮಹಡಿಯಲ್ಲಿ. ನಿತ್ಯ ಹೊರಕ್ಕೆ ಹೋಗುವಾಗ ಅವರ ಮನೆಯ ತೆರೆದ ಬಾಗಿಲಿನ ಎಡೆಯಿಂದ ಆ ಮಗುವಿನ ಒಣಕಲು ಶರೀರವನ್ನು ಕಾಣುತಿದ್ದೇನೆ. ನಾನು ಹೀಗೆಯೇ ನೋಡತೊಡಗಿ ಮೂರು ತಿಂಗಳಾದುವು. ನಾನೇ ಅಲ್ಪ ಸ್ವಲ್ಪ ಸಹಾಯಮಾಡುತಿದ್ದೇನೆ. ನಮ್ಮ ಆಚೀಚಿನ ನಾಲ್ಕು ಚಾಲುಗಳನ್ನು ಸುತ್ತಿ ಬಂದೆ. ಆ ಕಾಯಿಲೆ ಮಲಗಿದಾತ ಒಬ್ಬ ಕೋಕಣಸ್ಥನಂತೆ. 'ಯಾರಾದರೂ ಇದನ್ನು ಸಾಕುವವರಿದ್ದಾರೆಯೇ-' ಎಂದು ಆತ ಹೇಳಿದ್ದಕ್ಕೆ, ಆಚೀಚಿನವರನ್ನು ವಿಚಾರಿಸಿದೆ. ಮಕ್ಕಳಿಲ್ಲದವರನ್ನು ಹೋಗಿ ಕೇಳಿದೆ. ಅದನ್ನು ನೋಡುವುದಕ್ಕೂ ಬಂದವರಿಲ್ಲ. ಕೊನೆಯ ಒಂದು ಪ್ರಯತ್ನ ಮಾಡುವ ಎಂದು, ಇವತ್ತು ನಿಮ್ಮನ್ನು ಕೇಳುವುದಕ್ಕೆ ಬಂದೆ."

ಆ ಅನಾಥಾಲಯವನ್ನು ಸೇರಿದ ಕೆಲವೊಂದು ಮಕ್ಕಳ ದಾರುಣ ಕತೆಗಳನ್ನು ಕೇಳಿದ ಮಂಜುಳೆಯ ಮನಸ್ಸು ಇದರಿಂದ ಕರಗಿತು. ಬಂದ ತರುಣ ಒಳ್ಳೆಯ ಸ್ವಭಾವದವನಾಗಿ ಕಾಣುತ್ತಾನೆ. ಯಾರ ಸಲುವಾಗಿಯೋ ಬೇಡುತಿದ್ದಾನೆ-ಎಂದು ಅವಳಿಗೆ ಅನುಕಂಪ ತೋರಿತು. ಪ್ರಶ್ನಿಸಿದಳು:

"ಯಾರು ಆತ? ಹೆಸರು ಗೊತ್ತೇ?"

"ಗೋಖಲೆ ಎಂದು ಹೆಸರು. ಅವನ ವಿಚಾರ ಹೆಚ್ಚಿನ ಸಂಗತಿ ನನಗೂ ತಿಳಿಯದು."

"ಅದು ಅವನ ಮಗುವೇ?"

"ಇರಬೇಕು, ಅವನದ್ದೇ."

"ನಾನು ವಿಚಾರಿಸಿ ಹೇಳುತ್ತೇನೆ; ನಮ್ಮ ಧನಿಗಳ ಅಪ್ಪಣೆ ಪಡೆಯಬೇಕು. ಅದಕ್ಕೂ ಮುಂಚೆ ಆತ ಬರಹ ಮೂಲಕವಾಗಿ 'ಇದು ನನ್ನ ಮಗು; ನಿಮಗೆ ಬಿಟ್ಟುಕೊಡುತ್ತೇನೆ' ಎಂದು ಬರೆದುಕೊಡಲಿ. ಇನ್ನೊಂದು ಎಂಟು ದಿನಗಳಲ್ಲಿ ನಿಮಗೆ ಉತ್ತರವನ್ನು ತಿಳಿಸುತ್ತೇನೆ. ಅಲ್ಲಿಯ ತನಕ ಹೇಗಾದರೂ ಅದನ್ನು ನೋಡಿಕೊಂಡಿರಿ" ಎಂದು ಹೇಳಿ ಅವನನ್ನು ಕಳುಹಿಸಿದಳು.

ಆ ತರುಣ ತಿರುಗಿ ಮರುದಿನ ಸಂಜೆಯೇ ಅವಳನ್ನು ಕಾಣುವುದಕ್ಕೆ ಬಂದ. ಬಂದು ಹೇಳಿದ: "ನೀವು ಅಷ್ಟೆಲ್ಲ ಕೃಪೆ ಮಾಡಿದರೂ ದೈವ ಏನೋ ಎಣಿಸುತ್ತಿದೆಯಲ್ಲ" ಎಂದ

"ಯಾಕೆ, ಮಗು ಸತ್ತುಹೋಯಿತೇ?"

"ಇಬ್ಬರೂ ಬದುಕಿದ್ದಾರೆ. ನಾನು-ನೀವು ಹೇಳಿದಂತೆ ಅರ್ಜಿ ಬರೆದು, ಸಹಿ ಮಾಡು-- ಎಂದು ಅವನಲ್ಲಿಗೆ ಅದನ್ನು ತೆಗೆದುಕೊಂಡುಹೋದರೆ ಆತ 'ಆ ಮಗು ನನ್ನದೆಂದು ಬರೆಯಬೇಡ' ಎನ್ನುತ್ತಾನೆ. ಅದರ ತಾಯಿಯ ಹೆಸರನ್ನೇನೋ ಹೇಳಿದ. 'ಅಷ್ಟು ಬರೆದರೆ ಸಾಕು' ಎನ್ನುತ್ತಾನೆ ಆತ. ಹಾಗೆ ಬರೆಯಿಸಿಕೊಂಡು ಬರಲೇ?"

"ಅದರ ತಾಯಿ ಅಲ್ಲಿಲ್ಲ ಅನ್ನುತ್ತೀರಿ. ತಾಯಿ ಇದ್ದಲ್ಲಿ ಅವಳ ಮಗುವನ್ನು ಇವನು ಕೊಡುತ್ತೇನೆ ಎನ್ನುವುದರಲ್ಲಿ ಅರ್ಥವೇನು? ನನಗೊಂದೂ ಅರ್ಥವಾಗುವುದಿಲ್ಲ. ನೀವೀಗ ಹೋಗಿ. ಆದಿತ್ಯವಾರ ಬೆಳಿಗ್ಗೆ ತಿರುಗಿ ಬನ್ನಿ. ನಾನು ನನ್ನಿಂದೇನಾದರೂ ಮಾಡುವುದು ಶಕ್ಯವಿದ್ದರೆ ಮಾಡುತ್ತೇನೆ" ಎಂದು ಅವನನ್ನು ಕಳುಹಿಸಿಕೊಟ್ಟಳು. ಆ ತರುಣ, ಆದಿತ್ಯವಾರ ತಿರುಗಿ ಬರುತ್ತೇನೆಂದು ಹೇಳಿ ಹೊರಟುಹೋದ. ಆವನಿಗೂ ಆ ಪರಿಸ್ಥಿತಿ ಅರ್ಥವಾಗಲಿಲ್ಲ. ಆದರೆ ಅದು ಮಂಜುಳೆಗೆ ಅರ್ಥವಾಗಿತ್ತು. ಆದ್ದರಿಂದಲೇ ಅವಳು ತೀರ ಯೋಚನೆಗೀಡಾದಳು. 'ಅದು ಆತನ ಮಗುವೇ ಇರಬೇಕು; ಮದುವೆಯ ಹೊರಗೆ ಹುಟ್ಟಿದ್ದೆಂಬುದರಿಂದ, ಆತ ತನ್ನ ಹೆಸರನ್ನುಳಿಸಿಕೊಳ್ಳುವುದಕ್ಕೆ, ಹೀಗೆ ಸೂಚಿಸುತ್ತಿದ್ದಾನೆ' ಎಂದು ತೋರಿತು. 'ಹೋಗಲಿ, ಅವನ ಕರ್ಮ

ವನ್ನು ಅವನು ಅನುಭವಿಸಲಿ' ಎಂದು ಒಮ್ಮೆ ಕಾಣಿಸಿದರೂ ತಿರುಗಿ ಅವಳ ಮನಸ್ಸು ಕೊರೆಯತೊಡಗಿತು. ವಿನತೆಯೊಡನೆ ಕುಳಿತು ಯೋಚಿಸಿದಳು. ಆಕೆಗೂ ಮಂಜುಳೆಗುಂಟಾದ ಸಂಶಯ, ಆ ಮಗುವಿನ ಹಿರಿಯನ ವಿಚಾರ ದಲ್ಲಿ ಉಂಟಾಯಿತು. ಅವಳೆಂದಳು: "ಆದರೂ ಅಷ್ಟು ಚಿಕ್ಕ ಮಗುವನ್ನು ಅದರ ತಾಯಿ ಬಿಟ್ಟು ಹೋದುದು ಹೇಗೋ! ಎಂಥ ತಾಯಿಯವಳು? ಅಥವಾ ಅವಳು ಸತ್ತುಹೋಗಿರಬಹುದೇ? ಇವನಿಗೆ ತಾನು ಅದರ ತಂದೆ ಎನ್ನುವುದಕ್ಕೇನು ಸಂಕೋಚ?"

"ತಂದೆ ಎಂದು ಬರೆದುಕೊಟ್ಟರೆ, ಅವನು ತಂದೆಯಾಗಿರಲಿ, ಆಗ ದಿರಲಿ, ನಾವು ನ್ಯಾಯವಾದ ಕ್ರಮದಲ್ಲಿ ಆ ಮಗುವನ್ನು ಪಡೆದ ಹಾಗಾಗುತ್ತದೆ. ಅಲ್ಲದೆ ನಾಳೆ ಆ ಮಗು ಬೆಳೆದು ದೊಡ್ಡದಾದ ಮೇಲೆ, ಕುಟುಂಬ ಜೀವನದಿಂದಲೇ ಹುಟ್ಟಿದ್ದು ಎಂಬ ದಾಖಲೆಯಿದ್ದಲ್ಲಿ, ಅದನ್ನು ದೊಡದು ಮಾಡಿ ಪಾರುಮಾಡುವುದಕ್ಕೂ ಸುಲಭವಾಗುತ್ತದೆ. ಅದು ಗಂಡೋ ಹೆಣ್ಣೋ—ಎಂದು ಕೇಳಲೇ ಇಲ್ಲವಲ್ಲ."

"ಗಂಡು, ಹೆಣ್ಣು ಎರಡೂ ಒಂದೇ ಅಲ್ಲವೇ?" ಎಂದಳು ವಿನತೆ.

"ದಾಂಪತ್ಯದ ಹೊರಗೆ ಹುಟ್ಟಿದ ಹೆಣ್ಣಾದರೆ ನಾಳೆ ಅದರ ಪಾಲಿನ ಕಷ್ಟ ಇನ್ನೂ ಹೆಚ್ಚಲ್ಲವೆ" ಎಂದಳು ಮಂಜುಳೆ.

ವಿನತೆಗೆ ತನ್ನ ಜನ್ಮದ ಕಳಂಕ ಮರವೆಯಾಗುವುದುಂಟೆ? "ಅಹುದು, ಅದು ನಿಜ. ಹಾಗಿದ್ದರಂತೂ ಅದನ್ನು ಪಾರು ಮಾಡಿದರೆ ಪುಣ್ಯ ಬಂದೀತು. ನೀನು ಹೋಗಿ ನೋಡಿ ಬರುತ್ತೀಯಾ? ಅವನಿಗೆ ಒತ್ತಾಯದಿಂದಲಾದರೂ ಬುದ್ಧಿ ಹೇಳಿ ಬರೆಯಿಸಿಕೊಂಡು ಬರಬಹುದೋ ಏನೋ."

ಮಂಜುಳೆ ಹಾಗೆಯೇ ಮಾಡಲು ನಿರ್ಧರಿಸಿದಳು. ಮುಂದಿನ ಆದಿತ್ಯವಾರ, ಆ ತರುಣನ ಆಗಮನವನ್ನು ನಿರೀಕ್ಷಿಸುತ್ತ ಕುಳಿತಳು.

# ಹದಿನೈದನೆಯ ಅಧ್ಯಾಯ

ಲಚ್ಚಯ್ಯ ಸೆಟ್ಟರು ಮನೋಹರನ ಸಹಾಯದಿಂದ ನಿರ್ಮಾಣ ಮಾಡಿದ "ಬೆಳುದಿಂಗಳ ರಾತ್ರಿಯಲ್ಲಿ" ಎಂಬ ಚಿತ್ರ ಪೆಟ್ಟಿಗೆಯೊಳಗೇ ಕುಳಿತ್ತಿತ್ತು ಬಹುದಿನ. ಚಿತ್ರ ಸಾಮಾನ್ಯವಾಗಿತ್ತು. ನಷ್ಟಗೊಳಿಸುವ ಚಿತ್ರವಲ್ಲ ಎಂದವರು ಬಲ್ಲರಾದರೂ "ನನ್ನ ದುಡ್ಡು ತೀರ ಮುಳುಗಿತು" ಎಂದು ನಾಲ್ಕು ಜನಗಳ ಮುಂದೆ ನಟಿಸಿತೋರಿಸಿದರು. ಅದರಲ್ಲಿ ಮನೋಹರನ ಸ್ವಲ್ಪ ಹಣವೂ ಬಿದ್ದಿತ್ತು. ಅಲ್ಲದೆ ಅವನಿಗೆ ಲಾಭಾಂಶದಲ್ಲಿ ಸೆಟ್ಟರು ಒಂದು ಪಾಲನ್ನೂ ಕೊಡಬೇಕಾಗಿತ್ತು. 'ಇದಕ್ಕೆಲ್ಲ ಟೊಪ್ಪಿ ಹಾಕುವುದು ಹೇಗೆ?' ಎಂಬ ಚಿಂತೆ ಅವರದು. ಹಾಗಾಗಿ ಮನೋಹರ ಬೆಂಗಳೂರಲ್ಲಿರುವ ತನಕ ಚಿತ್ರವೇ ಹಾಳಾಯಿತು ಎಂಬ ಶೋಕವನ್ನು ಪ್ರಕಟಿಸಿದರು. ಆತ ಮುಂಬಯಿಯನ್ನು ಸೇರಿದ ಬಳಿಕ, ಕಂಗಾಲು ಜೀವನವನ್ನು ನಡೆಸುತಿದ್ದ ಆತ, ತನ್ನ ಗೆಳೆಯ ಸುಬ್ಬರಾಯನಿಗೆ, 'ಶೆಟ್ಟರಿಂದ ತನಗೇನಾದರೂ ಹಣ ಕೊಡಿಸು' ಎಂದು ಪ್ರಾರ್ಥಿಸಿ ಪತ್ರಗಳನ್ನು ಬರೆಯತೊಡಗಿದ. ಸುಬ್ಬರಾಯ ಮಧ್ಯಸ್ತಿಕೆಯ ನಾಟಕ ಹೂಡಿದ; ಮನೋಹರನ ಸಂಪೂರ್ಣ ಹಕ್ಕನ್ನು ಹತ್ತು ಸಾವಿರ ರೂಪಾಯಿಗಳಿಗೆ ಸೆಟ್ಟರಿಗೆ ಬರೆಯಿಸಿಕೊಡುವಂತೆ ಮಾಡಿದ. ಅದರಿಂದ ದೊರೆತ ಲಾಭದಲ್ಲಿ ತಾನು ಸ್ವಲ್ಪವನ್ನು ಇರಿಸಿಕೊಂಡು ಉಳಿದ ಹಣವನ್ನು ಗೆಳೆಯನಿಗೆ ಕಳುಹಿಸಿಕೊಟ್ಟ.

ಮುಂಬಯಿ ಸೇರಿದ ಮೊದಲಿನ ಎರಡು ತಿಂಗಳ ಕಾಲ ಮನೋಹರ, ನಿರಾಶೆಗೊಂಡ ಭಿಕಾರಿಯಂತೆ ಅಲೆದಾಡಬೇಕಾಯಿತು. ಕಾಸಿಲ್ಲದೆ ಅವನ ಯಾವ ಅಭಿಲಾಷೆಗಳೂ ನೆರವೇರಲಾರವು. "ನಾಟ್ಯ ಶಾಲೆ ತೆರೆಯುತ್ತೇನೆ, ಒಂದು ತಂಡವನ್ನು ತರಬೇತುಗೊಳಿಸಿ ಚಿತ್ರಕಾರರಿಗೆ ತನ್ನ ಗುಂಪಿನ ನರ್ತನಗಳನ್ನು ಸಲ್ಲಿಸುತ್ತೇನೆ" ಎಂದು ಏನೇನೋ ಕನಸು ಹೂಡಿದ. ಹಣ ಕೈಗೆ ಬರುವ ತನಕ ಅದು ಬರಿಯ ಆಸೆಯಾಗಿತ್ತು. ನಿಜಕ್ಕೂ ಅವನಿಗೆ ಹೊಟ್ಟೆ ಬಟ್ಟೆಗೂ ಕಷ್ಟವಾಗಿತ್ತು. ಇರುವುದಕ್ಕೆ ಒಂದು ತುಣುಕು ಜಾಗವೂ ಸಿಕ್ಕಿರಲಿಲ್ಲ. ಒಬ್ಬಿಬ್ಬರು ಶೋಕಿಯ ಗೆಳೆಯರಷ್ಟೇ ಸಿಕ್ಕಿದ್ದರು. ಆದರೆ ಬೆಂಗಳೂರಿಂದ ಹಣ ಬಂದದ್ದೇ ತಡ, ಅದನ್ನು ವ್ಯಯಿಸಿ ಕನಸು ಕಟ್ಟುವ ಆತುರತೊಡಗಿದ. ಮಾತುಂಗದಲ್ಲಿ, ಪಾಗಡಿ ಕೊಟ್ಟು, ಒಂದು ಚಾಲಿನಲ್ಲಿ

ಕಿರಿಯ ಕೋಣೆಯನ್ನು ಬಾಡಿಗೆಗೆ ಗೊತ್ತು ಮಾಡಿದ. ಸಂಗೀತಗಾರರ ಪರಿಚಯ ಬೆಳೆಸಿದ; "ಗೋಖಲೆ ಇನ್‌ಸ್ಟಿಟ್ಯೂಟ್ ಒಫ್ ಡಾನ್ಸ್ ಎಂಡ್ ಮ್ಯೂಸಿಕ್" ಎಂಬ ಬೋರ್ಡನ್ನು ತಗಲಿಸಿಕೊಂಡು ಹಾರಾಟಕ್ಕೆ ತೊಡಗಿದ. ನಾಟ್ಯರಾಣಿ ಒಬ್ಬಳಿಲ್ಲದೆ ತನ್ನ ಕನಸು ಸಾಧ್ಯವಾಗದೆಂದು, ಕಾರವಾರದ ಇಂದಿರಾ ಸಾನಿಗೆ ಪತ್ರ ಬರೆದ. ಕುಸುಮೆಯ ಅಣ್ಣನಿಂದ ಸಾಕಷ್ಟು ಸಂಗತಿ ತಿಳಿದುಕೊಂಡಿದ್ದ ಅವಳು ಇವನ ಪತ್ರಕ್ಕೆ ಉತ್ತರವನ್ನೇ ಕೊಡಲಿಲ್ಲ. ಅನಂತರ ಮನೋಹರ ಮುಂಬಯಿಯಲ್ಲಿ ಗುರುತಾದ ಒಬ್ಬ ಸ್ನೇಹಿತನನ್ನು ಕರೆದುಕೊಂಡು ಶಿರ್ಸಿಗೆ ಹೋಗಿ, ಅಲ್ಲಿಂದ, ವ್ಯವಸಾಯಕ್ಕೆ ಬಿದ್ದ ತರುಣಿಯೊಬ್ಬಳನ್ನು ಹೊತ್ತುಕೊಂಡು ಮುಂಬಯಿಗೆ ತರುವ ತನಕ ಅವನ ಕಳವಳ ಹೇಳುವುದಕ್ಕಿಲ್ಲ. ಇಪ್ಪತ್ತನಾಲ್ಕು ವಯಸ್ಸಿನ ಶಿರ್ಸಿಯ ಪದ್ಮಾಸಾನಿ, ಇವನ ಪಾಲಿಗೆ 'ಪದ್ಮಾರಾಣಿ'ಯಾದಳು. ಆಕೆ ಹುಟ್ಟು ಕಲಾವಂತಿಯಾದ್ದರಿಂದ ಸ್ವಲ್ಪ ಹಾಡುವುದಕ್ಕೂ ಕುಣಿಯುವುದಕ್ಕೂ ಕಲಿತಿದ್ದಳು. ಇದರಿಂದ ಇವನ ನಾಟ್ಯಗಳಲ್ಲಿ ನೆರವಾಗತೊಡಗಿದಳು. ಈತ 'ನಾಟ್ಯಾಚಾರ್ಯ ಗೋಖಲೆ'ಯಾಗಿ, ಕಲಾಶಾಲೆಯನ್ನು ತೆರೆದು, ಹತ್ತೆಂಟು ಮಂದಿ ತರುಣರ ಗುಂಪುಗೂಡಿಸಿದ. ನಾಟ್ಯ ಕಲಿಯುವುದಕ್ಕೆ ಬರಲು ಆಚೀಚಿನ ಕೆಲವು ಬಾಲಿಕೆಯರನ್ನು ಆಕರ್ಷಿಸಿದ. ಒಂದಷ್ಟು ದಿನ ನರ್ತನ ಅಭ್ಯಾಸವೂ ಸಾಗಿತು. ಸಾಕಷ್ಟು ಪ್ರಚಾರ, ಜಾಹೀರಾತುಗಳಿಲ್ಲದೆ ಸಿನೆಮಾ ನಿರ್ದೇಶಕರ ಮನ ಸೆಳೆಯುವುದು ಮುಂಬಯಿಯಲ್ಲಿ ಅಸಾಧ್ಯ ಎಂಬುದರಿಂದ ಖಾಸಗಿ ಮಂದಿರವೊಂದರಲ್ಲಿ ಒಂದು ನಾಟ್ಯ ಪ್ರದರ್ಶನದ ಏರ್ಪಾಟನ್ನು ಮಾಡಿದ. ಮಾತುಂಗದಲ್ಲಿಯೇ ಅದರ ಏರ್ಪಾಟಾಯಿತು. ಕೆಲವು ಪ್ರತಿಕೋದ್ಯೋಗಿಗಳ ಗುರುತು ಮಾಡಿಕೊಂಡು, ನೃತ್ಯಗಳ ಚಿತ್ರ ತೆಗೆಯಿಸಿ ಪ್ರಕಟಣೆಗೆ ಕೊಟ್ಟ. ಸ್ನೇಹಿತರನ್ನು ಕಟ್ಟಿಕೊಂಡು ಆಚೀಚೆ ಟಿಕೇಟ್ ಮಾರುವ ಕೆಲಸವನ್ನೂ ನಡೆಯಿಸಿದ. ಹೀಗೆ ಪ್ರಥಮ ದೇಖಾವೆಯೂ ನಡೆಯಿತು. ಪ್ರಮುಖ ನರ್ತಕ ನರ್ತಕಿಯರು, ಆಚಾರ್ಯ ಗೋಖಲೆ ಮತ್ತು ಪದ್ಮಾರಾಣಿಯರು ಕೂಡಿ ಎಂದಿನಂತೆ—"ಖಾವಾಡಿಗ, ಪತಂಗ ನೃತ್ಯ, ಶಿವ ತಾಂಡವ, ರಾಸಲೀಲಾ" ಮೊದಲಾದ ಕೆಲವು ನೃತ್ಯಗಳನ್ನು ತೋರಿಸಿದರು. ಅವನ ತರುಣ ಮಿತ್ರರನೇಕರು ಬಂದು ಅವನ ಬೆನ್ನು ಚಪ್ಪರಿಸಿದರು. ಇವೆಲ್ಲ ತಯಾರಿಕೆಗಳಿಗಾಗಿ, ಉಡುಗೆ, ಪ್ರಚಾರಗಳಿಗಾಗಿ ಕೈ ತುಂಬ ಹಣ ವೆಚ್ಚವಾಗಿದ್ದರೂ,

ಹೆಚ್ಚೇನೂ ಫಲಿತಾಂಶವಾಗಲಿಲ್ಲ. ಅರ್ಧದಷ್ಟೂ ಖರ್ಚು ಹುಟ್ಟಲಿಲ್ಲ. ಆದರೆ ಗುರುತಿನವನಲ್ಲದ, ಹೊರಗಿಂದ ಬಂದ, ಗುಜರಾತಿ ಭಾಷೆಯಲ್ಲಿ ಇಂಗ್ಲಿಷ್ ಬೆರಸಿ ಮಾತನಾಡುತ್ತಿದ್ದ ಒಬ್ಬ ಯೌವನಸ್ಥನ ಪ್ರಶಂಸೆ ಮನೋಹರನಿಗೆ ಈ ಪ್ರದರ್ಶನದಿಂದಾಗಿ ದೊರೆಯಿತು. ಹಾಗೆ ಬಂದು ಇವನ ಬೆನ್ನು ಚಪ್ಪರಿಸಿದಾತ ತ್ರಿಕಮ್‌ದಾಸ್ ಎಂಬೊಬ್ಬ ಗುಜರಾತಿನ ವ್ಯಾಪಾರಿ. ಅವನಿಗೂ ಸಿನೆಮಾ ಸಂಗೀತ, ನೃತ್ಯಗಳ ಹುಚ್ಚಿದ್ದಂತೆ ಕಾಣಿಸುತಿತ್ತು. ಬಡೋದೆ, ಬ್ರೋಚ್‌ಗಳಲ್ಲಿ ಮಳಿಗೆಗಳನ್ನು ನಡೆಸಿಕೊಂಡು ಹೋಗುತ್ತಿರುವ ಒಬ್ಬ ಶ್ರೀಮಂತನಾತ ಎಂಬ ತಿಳಿವು ಗೋಖಲೆಗೆ ಬಂದಿತು. ಅಲ್ಲಿಂದ ಅವರವರ ಸ್ನೇಹಾಚಾರ ಬಹಳ. ಆತ ಮುಂಬಯಿಯಲ್ಲಿ ಯಾವಾಗಲೂ ಇರುವವನಲ್ಲವೆಂದೂ, ಆಗಾಗ ವ್ಯಾಪಾರಕ್ಕಾಗಿ ಬಂದು ಹೋಗುತ್ತಿರುವ ಮಹಾನುಭಾವನೆಂದೂ ಮನೋಹರ ತಿಳಿದುಕೊಂಡ. ಅವನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಸನ್ಮಾನ ಮಾಡತೊಡಗಿದ. ಹೆಚ್ಚಿನ ಸಹಾಯ ನಿರೀಕ್ಷೆಯಿಂದ, ತನ್ನ ಗುಂಪಿನ ವಿದ್ವಾಂಸರನ್ನು ಅವನ ಮುಂದೆ ಕೊಂಡಾಡಿದ. ಅವನಿಗೆ ಪದ್ಮಾರಾಣಿಯ ಪರಿಚಯವನ್ನೂ ಮಾಡಿಕೊಟ್ಟ. ಆತನಿಗೆ—ನಾಟ್ಯ ಸಂಗೀತಗಳ ಅಭಿರುಚಿ ಏನೇ ಇದ್ದಿರಲಿ, ನಾಟ್ಯಾಚಾರ್ಯ ಗೋಖಲೆಯನ್ನು ಬಹುವಾಗಿ ಕೊಂಡಾಡಿ, ಅವನ ಸ್ನೇಹವನ್ನು ಬೆಳೆಸುವುದಕ್ಕೆ, ಪದ್ಮಾರಾಣಿಯ ರೂಪ ಯೌವನಗಳು ಮುಖ್ಯ ಕಾರಣವಾಗಿದ್ದವು.

ಮನೋಹರ ಆವನೊಡನೆ, ತಾನು ಲಾಹೋರು ಬೆಂಗಳೂರುಗಳಲ್ಲಿ ಮಾಡಿದಂಥ ಕೆಲಸಗಳನ್ನೆಲ್ಲ ಬಹುವಾಗಿ ಬಣ್ಣಿಸಿದ. ಆದ ನಿರಾಶೆಗಳನ್ನೂ ಹೇಳಿದ. "ನಿಮ್ಮಂಥಹ ವ್ಯವಹಾರ ಬಲ್ಲವರು, ಅಭಿರುಚಿ ಇರುವವರು ಸಿನೆಮಾ ಕೈಗಾರಿಕೆಗೆ ಕೈ ಹಾಕಿದಾದರೆ ಯಶಸ್ಸು ಖಂಡಿತ" ಎಂದು ಅವನನ್ನು ಹೊಗಳಿದ.

ತ್ರಿಕಮದಾಸ್ ಸಹ ಮೂಕನಲ್ಲ. ತುಂಬ ವಾಚಾಳಿ; ರಸಿಕ. "ನನಗೂ ಬಹು ದಿವಸಗಳಿಂದ ಅಂಥ ಆಸೆಯಿದೆ. ಆದರೆ ಯುದ್ಧ ಮುಗಿದು ಪರಿಸ್ಥಿತಿ ಇನ್ನೂ ಹದಕ್ಕೆ ಬಂದಿಲ್ಲ. ಹಣ ವ್ಯಾಪಾರದಲ್ಲಿ ಸೇರಿಕೊಂಡದ್ದನ್ನು ಒಮ್ಮೆಗೇ ಹಿಂತೆಗೆಯಲು ಬರುವುದಿಲ್ಲ. ಮೆಲ್ಲಮೆಲ್ಲನ ನೀವು ಹೇಳಿದಂಥ ಸೂಚನೆಗಳನ್ನು ಕಾರ್ಯಕ್ಕೆ ತರಬೇಕು" ಎಂದ. ಅನಂತರ ಮನೋಹರನಿಗೆ ತನ್ನ ಪಾಲಿನ ಹಿತೋಪದೇಶವಾಗಿ "ನೀವು ಇಂಥ ಕಿರಿಯ ಸಂದಿನಲ್ಲಿ, ನಿಮ್ಮ

ಇನ್‌ಸ್ಟಿಟ್ಯೂಟ್ ತೆರೆದು ಕುಳಿತರೆ ಅದಕ್ಕೆ ಬೆಲೆ ಬರಲಾರದು. ನಾಟ್ಯಾಭ್ಯಾಸಕ್ಕೆ ದೊಡ್ಡ ಸ್ಥಳಬೇಕು. ಕಿಂಗ್ಸ್ ಸರ್ಕಲಿನಂತಹ ಆಕರ್ಷಕ ಕೇಂದ್ರದಲ್ಲಿ ಅದಿರಬೇಕು. ಈ ಇಂಥ ಸಂದುಗೊಂದಿನಲ್ಲಿ ಅದಿರುವುದಿಲ್ಲ. ನಾಟ್ಯ ಪ್ರದರ್ಶನಮಾಡುವಾಗ ಮುಂಬಯಿ ಮೇಯರರನ್ನೊ ಅಥವ ಹೈಕೋರ್ಟ್ ಜಡ್ಜರನ್ನೋ ಆಮಂತ್ರಿಸಿ ಅವರಿಂದ ಅದರ ಪ್ರಾರಂಭ ನಡೆಸಬೇಕು. ಹಾಗೆ ಮಾಡಿದರೆ ಮಾತ್ರ ನಿಮ್ಮ ಕುಣಿತಕ್ಕೆ ಬೆಲೆ ಬರುತ್ತದೆ. ಉದಯಶಂಕರ್, ರಾಮಗೋಪಾಲ್—ಇವರೆಲ್ಲ ಮೇಲೆ ಬಂದದ್ದು ಹೇಗೆ? ಅವರಿಗೆ ಚೆನ್ನಾದ ಪ್ರಚಾರದ ಕ್ರಮ ಗೊತ್ತು. ಜನಗಳನ್ನು ಮೆಚ್ಚಿಸುವ ಕ್ರಮಗಳು ಗೊತ್ತು" ಎಂದು ಮುಂದಿನ ಹಲವು ಹಂಚಿಕೆಗಳನ್ನು ಬೋಧಿಸಿದ. ಆ ಬೋಧನೆಯಲ್ಲಿ ಅಸತ್ಯವಾದದ್ದೇನೂ ಇರಲಿಲ್ಲ. ವ್ಯವಹಾರಿಕ ಜೀವನದಲ್ಲಿ ಆಗಬೇಕಾದ ಕೆಲಸಗಳವು.

ಈ ಮಾತುಗಳನ್ನು ಕೇಳಿ ಮನೋಹರನ ಕಿವಿಗಳು ನೆಟ್ಟಗಾದುವು. ತ್ರಿಕಮ್‌ದಾಸನ ಉಪದೇಶವೂ, ಸಹಾಯವೂ ಒಂದೇ ಎಂದು ತಿಳಿದು—ಬೇರೊಂದು ಕಡೆಗೆ ತನ್ನ ನಾಟ್ಯಶಾಲೆಯನ್ನು ಒಯ್ಯುವ ಏರ್ಪಾಟುಮಾಡಿದ. ಇನ್ನೊಂದು ವಿಶಾಲವಾದ ಮಹಡಿಯನ್ನು ತನ್ನ ಮನೆಗೆ ಸಮೀಪದಲ್ಲಿ ಹುಡುಕಿ, ತಿಂಗಳಿಗೆ ಇನ್ನೂರು ರೂಪಾಯಿ ಬಾಡಿಗೆಯ ಮೇಲೆ ನಾಟ್ಯಶಾಲೆಗೆಂದು ಗೊತ್ತುಮಾಡಿದ. ಎರಡು ವರ್ಷಗಳ ಬಾಡಿಗೆಯ ಹಣ ಮುಂಗಡವಾಗಿ ಕೊಡಬೇಕಾಗಿ ಬಂದಿತು. ಅಷ್ಟೆಲ್ಲ ಕೊಟ್ಟ ಬಳಿಕ, ಅವನ ಕೈಯಲ್ಲಿ ಉಳಿದದ್ದು ಬಹು ಸ್ವಲ್ಪ. ನಾಳಿನ ದಿನದ ಯೋಚನೆ ಮಾಡುವುದಕ್ಕೆ ಏನೇನೂ ಕಲಿತಿರದ ಮನೋಹರ, ಇಂದು ಈ ಹುಚ್ಚು ಕೆಲಸಕ್ಕೆ ದುಮುಕುವ ಮುಂಚೆ ಯೋಚಿಸುತ್ತಾನೆಯೆ? ಇತ್ತ ತ್ರಿಕಮ್‌ದಾಸ್, ಅವನಿಗೆ ತನ್ನ ಪಾಲಿನ ಸಹಾಯವೆಂದು, ಐನೂರು ರೂಪಾಯಿಗಳ ಚೆಕ್ ಕೊಟ್ಟಾಗ, ತನ್ನ ಸಹಾಯಕ ತುಂಬ ಧಾರಾಳಿಯೆಂದು ಮನೋಹರನಿಗೆ ವಿಶ್ವಾಸವಾಯಿತು. ಅಷ್ಟೆಲ್ಲ ತನಗಾಗಿ ಮಾಡುತ್ತಿರುವ ಆತ, ಈ ಅವಕಾಶದಲ್ಲಿ ಅವನ ಪ್ರೇಯಸಿ ಪದ್ಮರಾಣಿಯೊಡನೆ ಸಲುಗೆಯಿಂದಿದ್ದರೆ, ಅದೊಂದು ಯೋಚಿಸತಕ್ಕ ವಿಷಯವೆಂದು ಅವನಿಗೂ ಹೊಳೆದಿರಲಿಲ್ಲ. ಒಮ್ಮೊಮ್ಮೆ, ಪದ್ಮರಾಣಿಯಂಥ ಚೆಲುವೆಯು ತನ್ನ ಜತೆಯಲ್ಲಿದ್ದುದರಿಂದಲೇ, ತನಗೆ ಇನ್ನೂ ಹೆಚ್ಚಿನ ಸಹಾಯ ಬಂದೀತೆಂಬ ವಿಶ್ವಾಸವುಂಟಾಗುತ್ತಿತ್ತು. ತಿಂಗಳಿಗೆ ಒಂದೆರಡಾ

ವೃತ್ತಿ ತ್ರಿಕಮ್‌ದಾಸ್ ಅಲ್ಲಿಗೆ ಬರುತ್ತಿದ್ದ. ಹೊಸ ನಾಟ್ಯಶಾಲೆಯ ಪ್ರಾರಂಭಕ್ಕೂ ಆತ ಬಂದಿದ್ದ. ಆಗಲೂ ನೂರಿನ್ನೂರು ರೂಪಾಯಿಗಳ ಹಣವನ್ನು ಕೊಟ್ಟುಹೋಗಿದ್ದ.

ಈ ಎಲ್ಲ ಅವಧಿಯಲ್ಲಿ ಪದ್ಮಾರಾಣಿ, ಮನೋಹರನ ಶಿಶುವನ್ನು ತನ್ನ ಹೊಟ್ಟೆಯಲ್ಲಿ ಹೊರುತ್ತಿದ್ದಳು ಎಂಬ ವಿಚಾರ ಅವನಿಗೂ ತಿಳಿದಿತ್ತು. ತ್ರಿಕಮ್‌ದಾಸ್ ಹೇಳಿದಂತೆ, ಇನ್ನಷ್ಟು ದೊಡ್ಡ ಮಾದರಿಯಲ್ಲಿ ಒಂದು ನಾಟ್ಯಪ್ರದರ್ಶನ ಏರ್ಪಡಿಸಬೇಕೆಂಬ ಆಕಾಂಕ್ಷೆಗೆ ಪದ್ಮರಾಣಿಯ ಬೆಳೆಯುತ್ತಿರುವ ದೇಹ ಒಂದು ಆತಂಕವಾಗಿತ್ತು. ಉಳಿದ ಸಂಗಾತಿಗಳನ್ನು ಮಾತ್ರ ಕಟ್ಟಿಕೊಂಡು ನಾಟ್ಯ ಜರುಗಿಸಿದರೆ, ಅದಕ್ಕೆ ಮನ್ನಣೆ ದೊರೆಯದೆಂದೂ, ತನ್ನ ನಾಟ್ಯಗಳಿಗೆ ಪದ್ಮಳೇ ಜೀವ ಎಂದೂ ತಿಳಿದಿದ್ದ ಮನೋಹರ, ಅವಳ ಹೆರಿಗೆಯ ಕಾಲದ ತನಕವೂ ಚಡಪಡಿಸುತ್ತ ಬರಿದೆ ಕುಳಿತಿರಬೇಕಾಯಿತು. ಹಣಕ್ಕೂ ತೊಂದರೆಯಾಗುತ್ತ ಬಂದಿತು. ತಿಂಗಳು ತುಂಬಿದ ಪದ್ಮಳನ್ನು ಹೆರಿಗೆಯ ಆಸ್ಪತ್ರೆಗೆ ಕಳುಹಿಸಿದ. ಇದೇ ವೇಳೆ ಅವನಿಗೂ ಮೆಲ್ಲಮೆಲ್ಲಗೆ ಮೈಯಲ್ಲಿ ಜ್ವರ ಕಾಣಿಸತೊಡಗಿತು. ಅವಳ ವಿಷಯದ ಆತುರ, ಭವಿಷ್ಯದ ಚಿಂತೆಗಳಿಂದ ಸ್ವಂತ ಆರೋಗ್ಯದ ಕಡೆಗೆ ಗಮನಕೊಡಲಿಲ್ಲ. 'ಶಿರ್ಸಿಗೆ ಹೋಗಿದ್ದೆ; ಇನ್ನೆಲ್ಲಿಗೋ ಹೋಗಿದ್ದೆ; ಇದು ಮಲೇರಿಯ ಇರಬೇಕು" ಎಂದು, ಅದಕ್ಕೆ ಇಷ್ಟು ಕ್ವಿನೀನನ್ನು ತಂದು ಕುಡಿದು, ದಿನ ಕಳೆದನು. ಪದ್ಮಾ ಹೆಣ್ಣು ಕೂಸನ್ನೊಂದನ್ನು ಹೆತ್ತು, ಹದಿನೈದು ದಿವಸಗಳಲ್ಲಿ ಅವನ ಮನೆಯನ್ನು ತಿರುಗಿ ಸೇರಿದಳು. ಮನೆಯೇನು! ಇಕ್ಕಟ್ಟಾದ ಒಂದು ಕೋಣೆ. ಬಾಣಂತಿಯ ಉಪಚಾರವನ್ನು ಅವನೇ ಮಾಡಬೇಕಾಯಿತು. ಪ್ರತಿ ತಿಂಗಳಿಗೂ—ಕೆಲಸವಿರಲಿ ಇಲ್ಲದಿರಲಿ, ಪದ್ಮಾರಾಣಿಗೆ, ಊಟಕೊಟ್ಟು ನೂರು ರೂಪಾಯಿಗಳ ಸಂಬಳವನ್ನು ಆತ ಕೊಡಬೇಕಿತ್ತು. ಆ ಮಟ್ಟಿಗೆ ಅವಳು ಪ್ರೇಯಸಿಯಲ್ಲ; ಕೆಲಸಕ್ಕೆ ಬಂದವಳು. ಇಂಥ ವೇಳೆಯಲ್ಲಿ—ತ್ರಿಕಮ್‌ದಾಸ್ ಅಲ್ಲಿಗೆ ಬಂದು ನೂರಿನ್ನೂರು ರೂಪಾಯಿಗಳನ್ನು ಕೊಟ್ಟಿದ್ದರೆ, ಅವನ ಭಾರ ಎಷ್ಟೋ ಕಡಿಮೆಯಾಗುತ್ತಿತ್ತು. ಹಾಗಾಗುವ ಬದಲು, ಇನ್ನೇನೋ ಆಯಿತು. ಒಂದು ಸಂಜೆ ಮನೋಹರ ತನ್ನ ಗೆಳೆಯರೊಡನೆ 'ಮೆಟ್ರೊ' ಥಿಯೇಟರಿನಲ್ಲಿ ಒಳ್ಳೆಯ ಚಿತ್ರ ಬಂದಿದೆ ಎಂದು, ನೋಡಲು ಹೋಗಿದ್ದ. ರಾತ್ರಿ, ಮನೆಗೆ ಬರುವಾಗ ಒಂಬತ್ತು ಘಂಟೆಯಾಗಿತ್ತು. ಮನೆಯ ಕದ

ಸಾಚಿತ್ತು; ಅದರ ಕೀಲಿ ಹಾಕಿರಲಿಲ್ಲ. ಬಾಗಿಲು ತಳ್ಳಿದ. ಒಳಕ್ಕೆ ಹೋದಾಗ ಹಾಸಿಗೆಯಲ್ಲಿ ಕೂಸು ಮಾತ್ರ ಕಾಣಿಸಿತು. ಅದರ ತಾಯಿ ಪದ್ಮಾ ಕಾಣಿಸಲಿಲ್ಲ. "ಇಷ್ಟು ಹೊತ್ತಿಗೆ ಇವಳೆಲ್ಲಿ" ಎಂದು ಆಚೀಚೆ ನೋಡಿಕೊಂಡು ಬಂದ. ಕೂಗಿ ಕರೆದ. ಆದರೆ ಯಾರೂ ಕಾಣಿಸಲಿಲ್ಲ. ಪದ್ಮಾ ಆ ಮೇಲೆ ಬರಲೂ ಇಲ್ಲ. ಆ ರಾತ್ರಿಯುದ್ದಕ್ಕೂ ಜಾಗರನಾಗಿ ಕುಳಿತು, ಆಕೆ ಬಾರದಿದ್ದುದನ್ನು ಕಂಡ ಬಳಿಕವೇ ಅವನಿಗೆ ಜ್ಞಾನೋದಯವಾಯಿತು. ಆಕೆ, ತನ್ನ ಆ ಹೆಣ್ಣು ಕೂಸನ್ನು ತನಗೇ ದಾನಮಾಡಿ, ಯಾರದೋ ಬೆನ್ನುಹತ್ತಿ ಹೋಗಿದ್ದಾಳೆಂದು—ಅನಿಸಿತು. ಮುಖ ಕಪ್ಪಾಯಿತು. ಮುಂದಿನ ಭವಿಷ್ಯ ಇನ್ನಷ್ಟು ಕಪ್ಪಾಗಿ ಕಾಣಿಸಿತು. 'ಅವಳೆಲ್ಲಿದ್ದಾಳೆಂದು ಗೊತ್ತಾಗಿದ್ದರೆ ಹೋಗಿ ಬೇಡಿಯಾದರೂ ತರುತ್ತಿದ್ದೆ' ಎಂದು ಯೋಚಿಸಿದ. ಅವಳ ಸುಳಿವೇ ಹುಟ್ಟಲಿಲ್ಲ. ತನ್ನ ಮತ್ತು ಅವಳ ಪರಿಚಯದ ಹತ್ತು ಮನೆಗಳಿಗೆ ಹೋಗಿ ಬಂದರೂ, ಪದ್ಮಾ ಅಲ್ಲೆಲ್ಲಿಗೂ ಬಂದ ಸಮಾಚಾರ ಸಿಗಲಿಲ್ಲ. ಒಬ್ಬಿಬ್ಬರು ಗೆಳೆಯರು "ಅವಳು ನಿಮ್ಮ ತ್ರಿಕಮ್‌ದಾಸನೊಡನೆ ಮಾತನಾಡುವ ರೀತಿಯನ್ನು ಕಂಡಾಗ ಅವನ ಮೇಲೆಯೇ ಸಂಶಯ ನಮಗೆ" ಎಂದು ಅಂದರು. ಆದರೆ ಮನೋಹರ, ಬಹು ದಿನಗಳ ತನಕ ಅಂಥ ಸಂಶಯಕ್ಕೆ ಎಡೆಕೊಟ್ಟಿರಲಿಲ್ಲ. ಕೊಡಲಿ, ಬಿಡಲಿ—ತ್ರಿಕಮ್‌ದಾಸ್ ತಿರುಗಿ ಅವನಲ್ಲಿಗೆ ಬರಲಿಲ್ಲ. ಪದ್ಮಳನ್ನು ಶೋಧಿಸುವ ಪ್ರಯತ್ನವಂತೂ ವ್ಯರ್ಥವಾಯಿತು. ಆತ ಮತ್ತೂ ವಿಚಾರಿಸಿದಾಗ, ಅವಳು ತನ್ನ ಹುಟ್ಟೂರಾದ ಶಿರ್ಸಿಯನ್ನೂ ಸೇರಿಲ್ಲವೆಂದು ತಿಳಿಯಿತು.

ಹಣದ ಚಿಂತೆ, ಪ್ರೇಯಸಿಯನ್ನು ಕಳೆದುಕೊಂಡ ವ್ಯಥೆ, ಕೈಯ ಹಣವನ್ನು ಮುಂಗಡ ಬಾಡಿಗೆ ಕೊಟ್ಟು, ಮುಂದೆ ಕೆಲಸ ಸಾಗಿಸಲಾರದ ಭೀತಿ, ತನ್ನ ಪ್ರೇಮದ ಫಲವಾಗಿ ಹುಟ್ಟಿದ ಹೆಣ್ಣು ಕೂಸನ್ನು ಹೊರೆಯುವ ಭಾರ—ಇವೆಲ್ಲವೂ ಮನೋಹರನಿಗೆ ಅಸಹ್ಯವಾಗಿ ಕಾಣಿಸಿತು. ಹಿಂದೆ ಬೆಂಗಳೂರಲ್ಲಿ ಕುಸುಮೆಯನ್ನು ಉಪಚರಿಸಿದ ಅವನಿಗೆ ಕ್ಷಯದ ಬಾಧೆ ಅಂಟಿಕೊಂಡು, ನೊಂದ ಮನ, ಬೆಂದ ಶರೀರಕ್ಕೆ ತಾಪಕೊಡತೊಡಗಿತು. ಮೊದಲಷ್ಟು ದಿನ ಆತ ತಿರುಗಾಡುತ್ತ ಯಾರಾರನ್ನೋ ಬೇಡಿ, ಜೀವ ಹೊತ್ತುಕೊಂಡು ಅಲೆದಾಡಿದ. ಇವನು ಬೇಡುವುದು ಹೆಚ್ಚಾದಂತೆ, ಇವನ ಕಲಾಭಿಮಾನಿ ಮಿತ್ರರೂ, ಶಿಷ್ಯರೂ, ಒಬ್ಬೊಬ್ಬರಾಗಿ ಅವನಿಂದ ದೂರವಾಗತೊಡಗಿದರು.

ಕೈಯಲ್ಲಿ ದುಡ್ಡಿಲ್ಲದ ಒಬ್ಬಿಬ್ಬರು ಮಾತ್ರ ತಮ್ಮಿಂದಾದ ಸಹಾಯ ಮಾಡ ತೊಡಗಿದರು. ಹೀಗೆ ಎಂಟೊಂಬತ್ತು ತಿಂಗಳ ಕಾಲ ಸಲುವುದರೊಳಗಾಗಿ, ಆತ ಹಾಸಿಗೆಗೆ ಅಂಟಿ ಮಲಗಿರಬೇಕಾಯಿತು. ಶರೀರವು ತೀರ ಕೃಶಗೊಂಡಿತು. ಕೆಮ್ಮು, ಕಫ, ಜ್ವರ--ಇವುಗಳ ಪೀಡೆಯ ಜತೆಗೆ ಶಿಶುವನ್ನು ನೋಡುವ ಭಾರ ಅವನದಿತ್ತು. ಕೂಸನ್ನು ಕೈಯ್ಯಾರೆ ಕೊಲ್ಲಲಾರದೆ, ಸಾಕುವ ಕಷ್ಟ ಒದಗಿತು. ಅಚೀಚಿನ ಮನೆಯವರು ಏನಾದರೂ ಅದಕ್ಕೆ ಹಾಲು, ತಿನಿಸು ತಂದುಕೊಡುತ್ತಾರೆ. ಆದರೆ ಅದಕ್ಕಿಂತ ಹೆಚ್ಚಿನ ಸಹಾಯಕ್ಕೆ ಬರಲು ಅವರಿಗೂ ಭೀತಿ. ಕೈಕೊಟ್ಟಲ್ಲಿ ಗಾಣಕ್ಕೆ ಕೈ ಕೊಟ್ಟಂತಾಗುವ ಕೆಲಸವದು. 'ಆ ಮಗುವನ್ನು ಕೊಂಡೊಯ್ದು ಸಾಕಿರಿ' ಎಂದರೂ, ಯಾರಿಗೆ ಬೇಕಾಗಿತ್ತು ಆ ಹೆಣ್ಣುಕೂಸು? ಸಮೀಪದಲ್ಲಿದ್ದವರಿಗೆ ಅದು ಕುಲವಿಲ್ಲದ ಕೂಸೆಂದೂ ತಿಳಿದಿತ್ತು. ತಾಯಿ ಪದ್ಮಾಸಾನಿಯ ರೂಪ, ಬೆಡಗು, ಗುಣಗಳನ್ನು ಯಾವ ಬಾಯಿಂದ ದಿನವೆಲ್ಲ ಹೊಗಳಿದನೋ, ಅದೇ ಬಾಯಿಂದ ತನ್ನ ಮೇಲೆ ಆ ಕೂಸನ್ನು ಹೊರಿಸಿದ ಅವಳ ಕಟುಕ ವೃತ್ತಿಯನ್ನು, ಮಾತೃತ್ವವನ್ನು ಮೂದಲಿಸಿ, ಕಠೋರ ಹೃದಯವನ್ನು ಶಪಿಸುವುದು ಅವನ ಕೆಲಸವಾಯಿತು. ಯಾರಾದರೂ ಕರುಣೆಯಿಂದ ಅವನನ್ನು ಕಾಣಲು ಬಂದರೆ "ಅಯ್ಯೋ, ನನ್ನ ಗತಿ ಹೀಗಾಯಿತೇ" ಎಂದು ಕೆಮ್ಮುತ್ತ ಗೋಳಿಡುವ ಆ ನೋಟ, ಕಾಣುವುದು ಕಷ್ಟವಾಯಿತು. ಕಾಣುವವರ ಕಣ್ಣಿಗೆ 'ಇವೆರಡೂ ಸಾಯುವ ಪದಾರ್ಥಗಳೇ. ದೇವರೇ ಕರುಣೆಯಿಂದ ಅವನ್ನು ಬೇಗ ಮುಗಿಸಿಬಿಡಬಾರದೇ' ಎಂದು ಬೇಡುವಂತಾಯಿತು. ಆತ ಸಾಮಾನ್ಯ ರೋಗಿಯಾಗಿದ್ದರೆ ಎಲ್ಲಾದರೊಂದು ಆಸ್ಪತ್ರೆಗೆ, ನಾಲ್ಕು ಜನ ಕೂಡಿ ಒಯ್ದು ಹಾಕುತಿದ್ದರೋ ಏನೋ. ಕ್ಷಯ ರೋಗಿಯನ್ನು ಈ ಸ್ಥಿತಿಯಲ್ಲಿ ಸ್ವೀಕರಿಸುವ ಧರ್ಮಾಸ್ಪತ್ರೆ ಎಲ್ಲಿದೆ?—ಎಂದು ಅಂಜಿ ಆ ಪ್ರಯತ್ನಕ್ಕೂ ಹೋದವರಿಲ್ಲ. ನೆರೆಮನೆಯ ಒಬ್ಬಳು ಮುದುಕಿಯಲ್ಲದಿದ್ದರೆ, ಆ ಮಗುವನ್ನು ನೋಡುವವರಿದ್ದರಲಿಲ್ಲ. ಅವಳೂ ಸಂಸಾರವಂದಿಗಳು. ಆದರೂ ಆಕೆ ದಿನಕ್ಕೆ ನಾಲ್ಕು ಬಾರಿ ಬಂದು ಅದರ ಪೋಷಣೆ, ಶುಚಿ ನೋಡಿಕೊಂಡು ಹೋಗುತ್ತಾಳೆ. ಅಶಕ್ತಿಯಿಂದ ಅದು ಕಡ್ಡಿಯಾಗಿತ್ತು. ತಾನು ಕಿರುಚಿದರೆ ಕೇಳುವವರಿಲ್ಲವೆಂದೋ ಏನೋ, ಹೆಚ್ಚಿಗೆ ಅಳುತ್ತಲೂ ಇದ್ದಿಲ್ಲ. ಅಷ್ಟೇ ದೊಡ್ಡದು. ಈ ಎಲ್ಲ ಘಟನೆಗಳನ್ನು ನಿತ್ಯವೂ ಮಹಡಿಯಿಂದ ಕೆಳಗಿಳಿದೊಡನೆಯೇ ನೋಡಬೇಕಾಗಿದ್ದ ಅವಸ್ಥೆ

ತೀರ ಮೇಲಿನ ಮಹಡಿಯಲ್ಲಿ ವಾಸಿಸುತ್ತಿರುವ ತರುಣ ಭಾಸ್ಕರನಿಗೆ ಪ್ರಾಪ್ತವಾಗಿತ್ತು. ಅವನೂ ಒಡವ. ಯಾರದೋ ಮನೆಯಲ್ಲಿ ಉಂಡು, ತಿಂದು ದಿನ ಕಳೆಯಬೇಕಾದವ. ಹೆಚ್ಚಿನ ಸಹಾಯವನ್ನು ಮಾಡಲಾರ. ಪರೋಕ್ಷವಾಗಿ ಏನಾದರೂ ನೆರವನ್ನು ಕೊಡಲು ಬಂದೀತೇ- ಎಂದು ಯೋಚಿಸಿ, ಗೋಕುಲದಾಸ್ ಅನಾಥಾಲಯದ ಹೆಸರನ್ನು ಕೇಳಿ, ಆ ಶಿಶುವನ್ನು ಅಲ್ಲಿ ಸೇರಿಸಲು ಬಂದೀತೇ ಎಂದು ನೋಡಲು ಹೋಗಿದ್ದ.

ಆತ ಅಲ್ಲಿಗೆ ಹೋಗಬೇಕಾಗಿದ್ದ ಆದಿತ್ಯವಾರ ಬಂದಿತು. ಭಾಸ್ಕರ್ ತನ್ನ ಮಹಡಿಯಿಂದಿಳಿದು ಕೆಳಕ್ಕೆ ಬಂದು, ಗೋಖಲೆಯನ್ನು ಸಂದರ್ಶಿಸಿ ಹೋಗುವ, ಎಂದು ನೋಡುತ್ತಿದ್ದಾಗಲೇ ಒಳಗೆ ಬಿಸಿಬಿಸಿ ಮಾತುಗಳು ಕೇಳಿಸುತ್ತಿದ್ದವು. ಬಾಡಿಗೆಯ ವಸೂಲಿಗಾಗಿ ಆ ಚಾಳಿನ ಒಡೆಯನ ದೂತ ಬಂದು ಗಟ್ಟಿಯಾಗಿ ಮಾತನಾಡುತ್ತಿದ್ದ. ಮೂರು ನಾಲ್ಕು ತಿಂಗಳಿನಿಂದಲೂ ಬಾಡಿಗೆ ಬಾಕಿ ಎಂಬುದೇ— ಅವನ ಕೂಗಿನ ಸಾರಾಂಶವಾಗಿತ್ತು. ಮಲಗಿದ ರೋಗಿಯು ಉತ್ತರ ಕೊಡದಿದ್ದುದಕ್ಕಾಗಿ ಮತ್ತಷ್ಟು ರೋಷ ಅವನಿಗೆ. ನೆರೆಯ ಕೋಟಡಿಯವರು ಬಂದು "ಯಾಕಿಷ್ಟು ಕೋಪ? ಅವರ ಈ ಸ್ಥಿತಿಯಲ್ಲಿ ನೀವು ಯಮನ ಹಾಗೆ ಕೂಗಿದರೇನು ಬಂದೀತು? ತಲೆ ಹೊಡೆಯುವಷ್ಟು ಪಾಗಡಿ ಕೊಂಡೇ ಅವರಿಗೆ ನೀವು ಬಾಡಿಗೆಗೆ ಕೊಟ್ಟಿರಿ. ಅವರಿಗೆ ಚೈತನ್ಯವಿಲ್ಲದೆ ಬಿದ್ದಿರುವಾಗ ಗೊತ್ತಿದ್ದೂ ಬಾಡಿಗೆ ಕೇಳುತ್ತೀರಲ್ಲ. ಅವರು ಬದುಕಿದರೆ ಕೊಟ್ಟಾರು. ಸತ್ತರೆ ಹ್ಯಾಗೂ ನಿಮ್ಮ ಪಾಗಡಿ ದಕ್ಕಿತು" ಎಂದು ದೂರಿ ಅವನ ರೋಷವನ್ನು ಹೆಚ್ಚಿಸಿದರು. ಇನ್ನೊಬ್ಬ ನೆರೆಮನೆಯವ ಬಂದು "ನಿಮ್ಮ ಬಾಡಿಗೆ ಸಿಗುವ ತನಕ ಆ ಮಗುವನ್ನು ಅಮಾನತು ತೆಗೆದುಕೊಂಡುಹೋಗಿ" ಎಂದು ಪರಿಹಾಸ್ಯಮಾಡಿದ. ಬಂದ ದೂತ ಮರು ಮಾತನಾಡಲಾರದೆ, ಅವನ ಸಾವನ್ನು ನೆನೆಯುತ್ತ ಹೊರಟು ಹೋದ. ಗದ್ದಲ ಶಾಂತವಾಯಿತು. ಆತ ಹೋದ ಬಳಿಕ ಭಾಸ್ಕರ್ ಮೆಲ್ಲಗೆ ಒಳಕ್ಕೆ ಪ್ರವೇಶಿಸಿದ. ಅವನನ್ನು ಕಂಡು ಕ್ಷೀಣ ಸ್ವರದಿಂದ ಗೋಖಲೆ "ಬನ್ನಿ" ಎಂದು ಕರೆದ.

"ಬಂದದ್ದಾಯಿತಲ್ಲ. ಮೊನ್ನೆ ಹೇಳಿದ ಸಂಗತಿ ನಿಮಗೆ ನೆನಪಿದೆಯಲ್ಲ. ಅನಾಥಾಲಯಕ್ಕೆ ಹೋಗಿ ಮಿಸ್. ಮಡರ್‌ಳನ್ನು ಕರೆದು ತರುತ್ತೇನೆ. ಬರುತ್ತೇನೆ ಎಂದಿದ್ದಾರೆ. ಆದರೆ ಮಗು ನಿಮ್ಮದು, ತೆಗೆದುಕೊಂಡುಹೋಗ

ಬಹುದು, ಎಂದು ನೀವು ಇನ್ನಾದರೂ ಸಹಿಮಾಡಿ ಬರೆದುಕೊಟ್ಟರೆ ಒಂದು ಸಂಕಟದಿಂದ ಪಾರಾಗುತ್ತೀರಿ."

ನಾಲ್ಕೈದು ನಿಮಿಷಗಳ ಕಾಲ ಪ್ರತ್ಯುತ್ತರ ಬರಲಿಲ್ಲ. ಅದಕ್ಕೆ ಕಾರಣ- ಮಗು ತನ್ನದು ಎನ್ನುವುದಕ್ಕಲ್ಲ; ಹಾಗೆ ಬರೆದುಕೊಡುವುದಕ್ಕೆ. ಅದು ತಪ್ಪೆಂದು ಅವನಿಗೂ ಗೊತ್ತಿತ್ತು. ಆದುದರಿಂದಲೇ "ಅವಳು ಇಂಥ ಸ್ಥಿತಿಗೆ ನನ್ನನ್ನು ತರುತ್ತಾಳೆಂದು ನಾನೆಣಿಸಿರಲಿಲ್ಲ" ಎಂದ.

"ಅವಳು ತಂದಾಯಿತು; ಯಾವ ಹೆಂಗಸೂ ಹಾಗೆ ಮಾಡಬಾರದಿತ್ತು, ನಿಜ. ಆದರಲ್ಲಿಯೂ ಕೈಹಿಡಿದ ಹೆಂಡತಿಯಾದವಳು ಹಾಗೆ ಮಾಡುವುದು ತೀರ ತಪ್ಪು. . . . ಆದರೆ ಈಗ ನೀವು ದುಃಖಿಸಿ ಫಲವೇನು?"

"ಡಾಕ್ಟರ್, ನಿಮ್ಮಲ್ಲೇನು ಮರೆ! ಎಲ್ಲರೂ ಕೈಬಿಟ್ಟಾಗ ನೀವೊಬ್ಬರು ಆಗಾಗ ಬಂದು ಹೋಗುತ್ತಿದ್ದೀರಿ. ಅವಳು ನನ್ನ ಹೆಂಡತಿಯೆನ್ನದಿದ್ದರೆ ಅವಳಿಗೂ ಪ್ರತಿಷ್ಠೆಯಿಲ್ಲ; ನನಗೂ ಸ್ಥಾನವಿಲ್ಲ-ಎಂದು ಹಾಗೆ ಹೇಳುತ್ತಿದ್ದೆ ನಾನು. ನಿಜಕ್ಕೂ ಅವಳು ನನ್ನ ಹೆಂಡತಿಯಾಗಿರಲಿಲ್ಲ. ಅವಳು ಎಂಥವಳಾದರೂ, ತಾಯಿಯಾಗಿ ಹಾಗೆ ಮಾಡಬಾರದಿತ್ತು." ಮುಂದಿನ ಸ್ವಲ್ಪ ಸಮಯ ಕೆಮ್ಮುವುದಕ್ಕೆ ಹೋಯಿತು. ಹತ್ತಿರವಿರಿಸಿದ ಡಬ್ಬಿಯೊಂದಕ್ಕೆ ರಕ್ತಮಿಶ್ರಿತ ಕಫವನ್ನು ಉಗುಳುವುದರಲ್ಲಿ ಕಳೆಯಿತು.

"ಏನಾದರೇನು? ಆಯಿತು; ಹೋಯಿತು; ಮಗು ನಿಮ್ಮದೆಂದಾದರೂ ಒಪ್ಪಬಾರದೇ."

"ಒಪ್ಪಿದರಾದರೂ ಕೊಂಡುಹೋಗುತ್ತಾರೆಯೇ?"

"ಹೋದಾರು. ಇವತ್ತು ಅವರೇ ಒಂದು ನೋಡುತ್ತೇನೆಂದಿದ್ದಾರೆ. ಅದೂ ನಾನು, ನಿಮ್ಮ ಈ ಸ್ಥಿತಿಯನ್ನು ಬಣ್ಣಿಸಿದ್ದಕ್ಕೆ. ಇಲ್ಲವಾದರೆ ಅಲ್ಲಿ ಸಾಕಷ್ಟು ಮಕ್ಕಳು ತುಂಬಿದ್ದಾರೆ. ಅವರು ಇಲ್ಲಿಗೆ ಬಂದ ಮೇಲೆ, ಇಲ್ಲ ಎನ್ನಬೇಡಿ" ಎಂದು ಬೋಧಿಸಿ ಹೋದ. ಮನೋಹರ ಕೆಮ್ಮುತ್ತ ಚಿಂತೆಯಲ್ಲಿ ಹೊತ್ತುಕಳೆದ. ಅವನ ಮನಸ್ಸಿನಲ್ಲಿ 'ಯಾರಾದರೂ ತನ್ನನ್ನು ಆಸ್ಪತ್ರೆಗೆ ಒಯ್ದು ಹಾಕಿದ್ದರೆ ಬದುಕಿಕೊಂಡೇನು' ಎಂಬ ಆಸೆ ಕಾಣುತಿತ್ತು. ಯಾರೂ ಬಳಿಗೆ ಸುಳಿಯದಾಗ ನಿರಾಶೆ ಉಂಟಾಗುತಿತ್ತು. ಊರಿಗೆ ಕಾಗದ ಬರೆಯಲೇ-ಎಂದು ಯೋಚನೆಯೂ ಬಂದದ್ದುಂಟು. ತಾನು ಮಾಡಿದ ಕೆಲಸಗಳನ್ನೆಲ್ಲ ನೆನೆದಾಗ, ತಾಯಿಯ ಮೃತ್ಯುಶಯ್ಯೆಯ ಬಳಿಗೂ ಹೋಗ

ಬಿದ್ದುದನ್ನು ನೆನೆದಾಗ, ತನ್ನ ತಮ್ಮಂದಿರು ಬಂದು, ಏನಾದರೂ ಸಹಾಯ ಮಾಡಬಹುದು ಎಂದು ತೋರಲಿಲ್ಲ. ಬದಲು ತಾನು ಸತ್ತರೆ, ಅವರು ಮಾಡಿದ ಆಸ್ತಿಯೊಂದು ಗೋಪಾಲನ ಮಾವನಿಗೆ ನಿಶ್ಚಿಂತೆಯಿಂದ ದೊರೆಯುತ್ತದೆ. ಆದುದರಿಂದಲೇ "ನಿಮಗೆ ಬಂಧುಗಳು ಯಾರಿಲ್ಲವೆ?" ಎಂದು ಒಬ್ಬಿಬ್ಬರು ಕೇಳಿದಾಗ, "ಇದ್ದಾರೆ. ಆದರೆ ಅವರಿಗೂ ನನಗೂ ಅಷ್ಟಕ್ಕಷ್ಟೆ" ಎಂದಿದ್ದ.

ಈಗಲೂ ಅಂಥದೊಂದು ಆಸೆ ಉದಯಿಸಿತು. ಅಷ್ಟರೊಳಗೆ ದಣಿವಿನಿಂದ ಅವನ ಕಣ್ಣು ಬಾಡಿತು. ನಿದ್ರೆಯ ಚೂರೊಂದು ಬಂದಿತು. ಕಣ್ದೆರೆದು ನೋಡುವಾಗ ಹೆಂಗುಸೊಬ್ಬಳು ಬಂದು ಡಾಕ್ಟರ್‌ನೊಡನೆ, ಬಾಗಿಲ ಬಳಿಯಲ್ಲಿ ನಿಂತು ಪಿಸುಮಾತಾಡುತ್ತಿದ್ದಳು. ಅವಳ ದೃಷ್ಟಿ, ಒಂದು ಚಾಪೆಯ ಮೇಲೆ ಮಲಗಿಕೊಂಡ ಅವನ ಕೂಸಿನ ಕಡೆಗಿತ್ತು. ಅದರ ಒಣಗಿದ ದೇಹ, ಎಲುಬು ಕಾಣುವ ಮುಖ, ನಿಸ್ತೇಜ ಕಣ್ಣುಗಳು-ಅವಳನ್ನು ವಿಚಾರಕ್ಕೆ ಗುರಿ ಮಾಡಿದ್ದವು. 'ಅದನ್ನು ಕೊಂಡುಹೋದರೆ ತುಂಬ ಉಪದ್ರ, ಅಪಖ್ಯಾತಿಗಳೇ ಹೊರತು ಇನ್ನೇನಿಲ್ಲ. ಅದನ್ನು ಬದುಕಿಸುವುದೂ ಕಷ್ಟ. ಏನು ಮಾಡಲಿ!' ಎಂಬ ಯೋಚನೆ ಅವಳದು. ಆ ಯೋಚನೆಯು, ಜತೆಗೆ ಈ 'ಗೋಖಲೆ ಎಂಬವರು ಯಾರು? ಎಲ್ಲಿಯವರು?' ಎಂದೇನೇನೋ ವಿಚಾರಿಸಿಕೊಳ್ಳುತ್ತಿದ್ದಳು. ಅದಕ್ಕೆ ಉತ್ತರವಾಗಿ ಡಾಕ್ಟರ್:

"ಕನ್ನಡ ಜಿಲ್ಲೆಯವರೆನ್ನುತ್ತಾರೆ. ಉತ್ತರ ಕನ್ನಡವೋ, ದಕ್ಷಿಣ ಕನ್ನಡವೋ ಗೊತ್ತಿಲ್ಲ–ಯಾವುದಾದರೂ ಸರಿಯೆ. ಅವರದು ತುಂಬ ಕಷ್ಟದ ಸ್ಥಿತಿ. ಸಮೀಪದ ಬಂಧುಗಳೂ ಇಲ್ಲಿಲ್ಲ. 'ಬಂಧುಗಳಿದ್ದಾರೆಯೇ?' ಎಂದು ಕೇಳಿದರೆ 'ಇದ್ದರೂ ಬರಲಾರರು' ಎನ್ನುತ್ತಾರೆ. ಅವರು ಚೇತರಿಸುವ ಧೈರ್ಯವಿಲ್ಲ. ನಿಮ್ಮಿಂದಾದ ಸಹಾಯ ಮಾಡಿದರೆ ಆಗಬಹುದು" ಎನ್ನುತ್ತಿದ್ದಾಗಲೇ, ಒತ್ತಿ ಬಂದ ಕೆಮ್ಮಿನಿಂದಾಗಿ ಗೋಖಲೆಗೆ ಎಚ್ಚರವಾಯಿತು. ಆತ ಕಣ್ದೆರೆದು ನೋಡಿದ. ಅವನಿಗೆ ಎಚ್ಚರವಾದುದನ್ನು ಕಂಡು ಅವರೂ ಒಳಕ್ಕೆ ಬಂದರು.

ಮಂಜುಳೆ ಆ ಕೊಟಡಿಯ ನಾಲ್ಕು ಸುತ್ತಲೂ ನೋಡಿದಳು. ಅಲ್ಲಲ್ಲಿ ಬಿದ್ದ ಮಲಿನ ವಸ್ತ್ರರಾಶಿಗಳನ್ನು, ಉಗುಳು ಪಾತ್ರೆಗಳನ್ನು, ಮೇಜಿನ ಮೇಲೆ ಬಿದ್ದ ಕಾಗದ ಚೂರುಗಳನ್ನು ನೋಡಿದಳು. ಏನೋ ಮನಸ್ಸಾಗಿ, ಕೈಯಲ್ಲಿ

ತಂದಿದ್ದ ಫಾರ್ಮ್ ತೆಗೆದುಕೊಂಡು, ಬಾಡ್ಕರ್‌ನೊಡನೆ ಒಂದೊಂದಾಗಿ ಪ್ರಶ್ನೆಯನ್ನು ಕೇಳತೊಡಗಿದಳು. ಅವೇ ಪ್ರಶ್ನೆಗಳನ್ನು ಬಾಡ್ಕರ್ ತಿರುಗಿ ಗೋಖಲೆಯೊಡನೆ ಕೇಳುತ್ತಿದ್ದ; ಅವಳು ಬಂದ ಉತ್ತರಗಳನ್ನು ಬರೆಯ ತೊಡಗಿದಳು.

"ಮಗುವಿನ ಹೆಸರು?"

"ಇಟ್ಟಿಲ್ಲ."

"ಅದರ ತಾಯಿ ಮದುವೆಯಾದವಳಲ್ಲ ಎನ್ನುತ್ತೀರಿ. ಆದರೆ ತಾಯಿ ಯಾವ ಊರವಳು? ಹೆಸರೇನು?"

"ಶಿರ್ಡಿಯವಳು. ಪದ್ಮಾ."

"ಯಾಕೆ ಹೋದಳು?"

ಉತ್ತರವಿಲ್ಲ.

"ನಿಮ್ಮ ಹೆಸರು?"

"ಗೋಖಲೆ."

"ಸಂಪೂರ್ಣ ಹೆಸರು, ವಿಳಾಸ ಬೇಕು ನನಗೆ."

"ಮನೋಹರ ಗೋಖಲೆ."

ಅಲ್ಲಿಗೆ ಮಂಜುಳೆ ಕತ್ತೆತ್ತಿದಳು; ಮುಖ ವಿವರ್ಣವಾಯಿತು. ಕಣ್ಣು ಬೆರಗುಗೊಂಡಿತು. ರೋಗಿಯನ್ನೇ ಎಡೆಬಿಡದೆ ಬಿರಬಿರನೆ ನೋಡಿದಳು. ಮನಸ್ಸಿನಲ್ಲಿ ನೂರಾರು ವಿಚಾರಗಳ ಸುಳಿವುಗಳು ಮೂಡಿ ಚಿಂತೆಗೀಡು ಮಾಡಿದವು. ಆ ಕ್ಷಣವೇ ಮನಸ್ಸಿಗೆ ವೇದ್ಯವಾಯಿತು—ಅದು ಅವಳ ಮನೋಹರನೆಂದು. ಆತ ತನಗೆ ಅನ್ಯಾಯ ಬಗೆದು ಓಡಿದುದಕ್ಕಿಂತಲೂ ಹೆಚ್ಚಾಗಿ, ಆ ಚೆಲುವಿನ ಗೊಂಬೆ, ನಗುವಿನ ಮುಖ, ಹದಿನೈದು ವರ್ಷಗಳೊಳಗಾಗಿ ತಿರುಗಿ ಹೀಗೆ ಕಣ್ಣಿಗೆ ಕಾಣಸಿಕ್ಕೀತು-ಅದೂ ಇಂಥ ನಿರಾಶಾದಾಯಕ ಪರಿಸ್ಥಿತಿಯಲ್ಲಿ—ಎಂದು ಅವಳೆಣಿಸಿರಲಿಲ್ಲ. ಕಣ್ಣಂಚ ಕಂಬನಿ ತರುವಷ್ಟು ಮರುಕವುಂಟಾದರೂ, ಬಾಯ್ತೆರೆಯಲಾರಳು. ಬೇರೊಂದು ಪರಿಸ್ಥಿತಿಯಲ್ಲಾಗಿದ್ದರೆ, ಆಕೆ ಅವನೊಡನೆ ತಾನಾರು ಎನ್ನುತ್ತಿದ್ದಳು. ಈಗ ಅವನ ಪರಿಚಯದಿಂದ, ತನ್ನ ಮನಸ್ಸು ಅಲ್ಲೋಲಕಲ್ಲೋಲಗೊಂಡಂತೆ, ಅವನ ಮನಸ್ಸೂ ತಳಮಳಕ್ಕೆ ಗುರಿಯಾಗಿ, ಸಾವಿನ ದಿನವನ್ನು ಇನ್ನಷ್ಟು ಸಮೀಪ ತಂದೀತು-ಎಂಬ ಭಯವಾಯಿತು.

ಹೀಗೆ ತಟಸ್ಥವಾಗಿ ಆಕೆ ನಿಂತುದನ್ನು ಕಂಡ ಬಾಡ್ಕರನೂ ಬೆರಗಾದ. "ಯಾಕೆ ಮುಂದಿನದನ್ನು ಬರೆದುಕೊಳ್ಳುವುದಿಲ್ಲ? ಮಗುವನ್ನು ಒಯ್ಯುಲಾರಿರಾ? ನಿಮಗೆ ತುಂಬ ಪುಣ್ಯ ಬಂದೀತು" ಎಂದು ಬೇಡಿದ.

"ಒಯ್ಯುವುದಕ್ಕೇ ಬಂದಿದ್ದೇನೆ; ಒಯ್ಯುತ್ತೇನೆ. ಈ ಪತ್ರಕ್ಕೆ ಅವರು ಸಹಿಮಾಡಲಿ" ಎಂದು ಹೇಳಿ ಕಾಗದವನ್ನು, ಲೇಖನಿಯನ್ನು ಅವನಿಗೆ ಒಪ್ಪಿಸಿದಳು. ಮನೋಹರ ನಡುಗುತ್ತ ಅವಕ್ಕೆ ಸಹಿಯನ್ನು ಹಾಕಿದ. ಸಹಿ ಮಾಡುತ್ತ "ಅಮ್ಮ, ಯಾರಿಗೂ. ಕರ್ಮಾಂತರ ತಪ್ಪುವುದಿಲ್ಲ ಅನ್ನುತ್ತಾರೆ. ನಾನು ಏನೇನು ಮಾಡಿದ್ದೆನೋ ಅದಕ್ಕೆಲ್ಲ ಬಡ್ಡಿ ಕೂಡಿಸಿ ದಂಡ ಕೊಡುತ್ತಿದ್ದೇನೆ ಇಂದು" ಎಂದ. ಅಲ್ಲಿಗೆ ಅವನಿಗೂ ದುಃಖ ಬಂದಿತು. ಮಂಜುಳೆ ತನ್ನ ಮುಖವನ್ನು ಇನ್ನೊಂದೆಡೆಗೆ ತಿರುಗಿಸಿದಳು. ಬಾಡ್ಕರನನ್ನು ಕರೆದುಕೊಂಡು ಹೊರ ಬಾಗಿಲ ಬಳಿಗೆ ಬಂದು ಕೇಳಿದಳು: "ಅವರ ಬಂಧುಗಳಾರೂ ಬರಲಿಲ್ಲವೆ? ನೋಡಿಯುವರು ಎಷ್ಟು ಮಾಡಲಿಕ್ಕೆ ಬರುತ್ತದೆ? ಅವರ ಬಂಧುಗಳಿಗೆ ತಂತಿಕೊಟ್ಟರೆ ಬರುತಿದ್ದರೋ ಏನೋ. ಅದೊಂದು ಪ್ರಯತ್ನಮಾಡಿ" ಎಂದು ಉಪದೇಶಿಸಿ, ತಿರುಗಿ ಒಳಗೆ ಹೋಗಿ, ಅವನ ಬಳಿಗೇನೇ ಹೋಗಿ ತಲೆ ತಗ್ಗಿಸಿ "ಮಗುವನ್ನು ತೆಗೆದುಕೊಂಡು ಹೋಗುತ್ತೇನೆ. ನೀವು ಹುಷಾರಾದ ಮೇಲೆ ಬಂದು ಕೇಳಿದರೆ, ನಿಮಗೆ ಸಂತೋಷದಿಂದ ಕೊಡುತ್ತೇನೆ" ಎಂದು ಹೇಳಿದಳು. ತನಗೇ ತಿಳಿಯದಂತೆ ಅವನ ಹಣೆಯ ಮೇಲೆ ಕೈಯನ್ನಿರಿಸಿ "ಹೋಗುತ್ತೇನೆ" ಎಂದು ಇನ್ನೊಮ್ಮೆ ಹೇಳಿ, ಮಗುವಿನ ಬಳಿಗೆ ಬಂದಳು. ಬಾಡ್ಕರನನ್ನು ಮಾತನಾಡಿಸುತ್ತ "ಯಾರು ಇದನ್ನು ಈ ತನಕ ನೋಡಿಕೊಂಡವರು?" ಎಂದು ವಿಚಾರಿಸಿದಳು. ಆತ ನೆರೆಮನೆಯಲ್ಲಿದ್ದ ಒಬ್ಬ ಮುದುಕಿಯನ್ನು ಅಲ್ಲಿಗೆ ಕರೆದುತಂದ. ಅವಳು ಮಂಜುಳೆಯನ್ನು ಕಂಡು "ತುಂಬ ಪುಣ್ಯವನ್ನು ಕಟ್ಟಿಕೊಂಡಿರಿ. ಕಷ್ಟದಲ್ಲಿರುವ ನಾನು, ಯಾವುದೋ ಜನ್ಮಾಂತರದ ಋಣವೆಂದು–ಅದನ್ನು ಈ ತನಕ ನೋಡಿಕೊಂಡೆ. ಅದನ್ನು ಸಾಕುವುದಕ್ಕೆ ನನಗೆಲ್ಲಿ ತ್ರಾಣವಿದೆ" ಎಂದಳು. ಮಂಜುಳೆಯು ಅದನ್ನೆತ್ತಿ ಹಿಡಿದಾಗ "ಅದನ್ನು ಒಯ್ಯುತ್ತಿದ್ದಾರೆ. ಯಾರಾದರೂ ಅದನ್ನು ಉಳಿಸಿಕೊಳ್ಳಲಿ" ಎಂಬ ಆಸೆ ಅವಳಿಗಾಗಿತ್ತು. ಈ ತನಕ ತಾನು ಸಾಕಿದ ಮಗುವನ್ನು ಬೀಳ್ಕೊಡುವಾಗ, ಅವಳಿಗೂ ದುಃಖವಾಯಿತು. 'ಜನ್ಮಾಂತರದ ಋಣ' ಎಂಬ ಅವಳ ನುಡಿಯನ್ನು ಕೇಳಿ ಮಂಜುಳೆಯ ಅಂತರಂಗ ಕೊರೆ

ಯಿತು. "ನಿಜ, ಅಮ್ಮ, ಎಲ್ಲವೂ ಒಂದೊಂದು ಋಣಾನುಬಂಧ" ಎಂದು ಹೇಳಿ, ಮಗುವನ್ನು ಎತ್ತಿಕೊಂಡು ಅಲ್ಲಿಂದ ಹೊರಟಳು. ಬಾಡ್ಕರ್ ಅವಳನ್ನು ರೈಲಿನ ತನಕವೂ ಬಿಟ್ಟುಬಂದ. ಅಲ್ಲಿಯೂ ಮಂಜುಳೆ ಅವನೊಡನೆ "ಒತ್ತಾಯದಿಂದಲಾದರೂ, ಅವರ ವಿಳಾಸವನ್ನು ಕೇಳಿ, ಅವರ ಮನೆಗೆ ತಂತಿ ಕೊಡಿ. ಸಾಧ್ಯವಾದರೆ ನಾಳೆ ನಾನು ಒಬ್ಬ ವೈದ್ಯನನ್ನು ಕರೆದುಕೊಂಡು ಬರುತ್ತೇನೆ. ಹಾಗೆ ನನಗೆ ಬರುವುದಾಗದಿದ್ದರೆ ನೀವು ಏನು ಮಾಡಿದಿರೆಂದು ತಿಳಿಸಿ. ಯಾರೂ ಹೀಗೆ ನಿರ್ಗತಿಕರಾಗಿ ಸಾಯಬಾರದು. ಆ ಎಲ್ಲ ಕಾಗದ ಪತ್ರಗಳ ರಾಶಿಯಲ್ಲಿ ಅವರ ಮನೆಯವರ ವಿಳಾಸ ಸಿಕ್ಕೀತು. ಹುಡುಕಿ ನೋಡಿ" ಎಂದು ಅವನಿಗೆ ಬೋಧಿಸಿ ಹೊರಟುಹೋದಳು. ಬಾಡ್ಕರ್ ಮರಳಿ ಬಂದು, ಆತನನ್ನು ಬಂಧುಗಳ ವಿವರ ಹೇಳಲು ಒತ್ತಾಯಿಸಿದ. "ಇದ್ದಾರೆ ಮೂವರು ಮಂದಿ ತಮ್ಮಂದಿರು. ನನ್ನ ಪಾಲಿಗೆ ಅವರಿಲ್ಲರೂ ಸತ್ತ ಹಾಗೆಯೇ" ಎಂದು ಆತ ಮಾತನ್ನು ಚುಟುಕಿನಲ್ಲಿ ಮುಗಿಸಿದ. ಆ ಮಧ್ಯಾಹ್ನವೂ ಬಾಡ್ಕರ್ ಬಂದು, ಆತ ನಿದ್ದೆಮಾಡಿದ ವೇಳೆಯಲ್ಲಿ, ಮೇಜಿನ ಕಾಗದಗಳನ್ನು ತಿರುವಿ ಹಾಕಿ ಹುಡುಕಿ ನೋಡಿದ. ಬರಿಯ ನರ್ತನ, ಸಿನೆಮಾಗಳ ಕಾಗದ ಪತ್ರಗಳಷ್ಟೇ ಅಲ್ಲಿದ್ದವು. ಆದುದರಿಂದ ಅವನ ಮನೆಯವರ ವಿಳಾಸ ತಿಳಿಯಲಾರದೆ ಹಿಂತಿರುಗಿದ.

ಮಂಜುಳೆ, ಹತ್ತಾರು ರಾತ್ಲ ತೂಕವೂ ಇಲ್ಲದ ಆ ಲಘುವಾದ ಹೊರೆಯನ್ನು ಹೊತ್ತು ಮರಳಿ ಬರುವಾಗ ಆನೆಯ ಭಾರವೆಲ್ಲ ಅವಳ ಎದೆಯನ್ನು ಜಗ್ಗಿಸುತಿತ್ತು. ಬಂದೊಡನೆ ವಿನತೆ ಎದುರಾದಳು. 'ಕೂಸನ್ನು ನೋಡುವ, ನೋಡುವ' ಎಂದು ಹಿಡಿದು ಎತ್ತಿಕೊಂಡಳು. ಇಬ್ಬರೂ ತಮ್ಮ ನಿವಾಸಕ್ಕೆ ಹೋದರು. ಕೂಸು ದೀನ ಮುಖದಿಂದ ಅವರನ್ನು ಕಾಣುತ್ತಲಿತ್ತು. ಅದರೆದುರಿಗೆ ಕುಳಿತು ಮಂಜುಳೆ ಇನ್ನಷ್ಟು ದೀನಳಾಗಿ ಅಳತೊಡಗಿದಳು. ವಿನತೆಗೆ ಅದೇಕೆಂದು ಅರ್ಥವಾಗಲಿಲ್ಲ. "ಈ ಮಗು ಬದುಕಲಾರದೆಂದು ನಿನಗೆ ಬೇಸರವೇ? ಬದುಕೀತು; ಅದರ ಮೈಯ್ಯು ತುಂಬಿ ಚೆನ್ನಾಗಿ ಆಗುವುದಕ್ಕೆ ಸಮಯ ಹಿಡಿದೀತು-ಅಷ್ಟೆ. ಅಲ್ಲಿನ ಸಂಗತಿ ಏನೇನೆಂದು ಹೇಳುತ್ತೀಯ?" ಎಂದು ಕೇಳಿದಳು.

ಮಂಜುಳೆ ಹೃದಯಬಿರಿದವರಂತೆ ಗದ್ಗದಿಸಿ ಮಾತನಾಡತೊಡಗಿದಳು: "ವಿನೂ, ಯಾರ ವಿಧಿ ಹೇಗೆ, ಹೇಗೆ ನಡೆಯಿಸುತ್ತದೆ ಎಂದು ಹೇಳು

ವುದು ಸಾಧ್ಯವೇ? ನಾನು ಅಲ್ಲಿಗೆ ಹೋಗದಿದ್ದರೇನೆ ಚೆನ್ನಾಗಿತ್ತು; ಈಗ ಹೋಗಿ, ನೋಡಿ ಕೆಟ್ಟೆ. ನನ್ನಿಂದ ಈ ದುಃಖ ತಡೆಯುವುದಕ್ಕಾಗುವುದಿಲ್ಲ."

"ಏನು ಮಂಜುಳಾ, ಹಾಗೇಕೆನ್ನುತ್ತೀ? ಏನಾಯಿತು ನಿನಗೆ?"

"ನನಗೇನಾಗಬೇಕು! ಆಗಬೇಕಾದ್ದೇ ಆಯಿತು. ಅಲ್ಲಿ ಕಾಣಬಾರದ್ದನ್ನು ಕಂಡೆ. ಈ ಮಗು ಯಾರದ್ದೆಂಬುದು ಗೊತ್ತಾಯಿತು. ಅದು ಯಾಕೆ ಇಲ್ಲಿಗೆ ಬಂತೆಂಬುದೂ ಗೊತ್ತಾಯಿತು. ಇದು ಬಂದದ್ದು ನನ್ನನ್ನು ದಂಡಿಸುವುದಕ್ಕೆ. ನನ್ನ ಮೇಲೆ ದೇವರು ಸೇಡು ತೀರಿಸುವುದಕ್ಕೆ ಹೊರಟಿದ್ದಾನೆ."

"ಹೀಗೇಕೆ ಹುಚ್ಚುಹುಚ್ಚು ಮಾತಾಡುತ್ತೀಯ? ಯಾಕೆ ಹಾಗೆನ್ನುತ್ತೀ? ಒಂದು ಜೀವವನ್ನು ಉಳಿಸಿದಂಥ ಪುಣ್ಯ ನಿನಗೆ ಬರುವುದಿಲ್ಲವೇ? ನಾನಿದ್ದೇನಲ್ಲ ನಿನ್ನ ಸಹಾಯಕ್ಕೆ. ಯಾಕೆ ಭಯ? ಇದನ್ನು ನೋಡಿಕೊಂಡೇನು. ಸೇಠಜಿ ಏನಾದರೂ ಹೇಳಿಯಾರು—ಇದನ್ನು ಸೇರಿಸಿಕೊಂಡೆಯೇಕೆಂದು ಕೇಳಿಯಾರೆಂದು ಅಂಜಿಕೆಯೇ?"

"ಛೀ ಛೀ, ಅದೊಂದೂ ಅಲ್ಲ. ಅಲ್ಲಿ ಯಾರನ್ನು ಕಂಡೆ-ಗೊತ್ತೇ? ನನ್ನ ಮನೋಹರನನ್ನು. ನಾನೂ ನೀನೂ ಯಾರ ಮನೆಗೆ ಹೋಗಿ, ಅನ್ನ ತಿಂದು ಬಂದೆವೋ ಆ ಮನೋಹರನನ್ನು. ಅದೇ ಅನ್ನದ ಋಣವನ್ನು ತೀರಿಸಬೇಕಾಗಿದೆ ಇಂದು" ಎಂದು ಅಳತೊಡಗಿದಳು.

"ಮನೋಹರನೇ! ಗೋಖಲೆ ಮನೋಹರನೇ; ನಮ್ಮ ಸಹಪಾಠಿಯಾಗಿದ್ದನಲ್ಲ ಅವನೇ?" ಎಂದಳು ವಿನತೆ.

"ಹೂಂ," ಎಂದು ಅಲ್ಲಿಂದೆದ್ದು, ಮುಖ ತೊಳೆದುಕೊಂಡು ಬಂದು ವಿರಾಮವಾಗಿ ಕುಳಿತು, ತನ್ನ ದುಃಖವನ್ನು ತಡೆದು ಹಿಡಿಯುತ್ತ ತಾನು ಕಂಡು ಬಂದ ಗೆಳೆಯನ ಪಾಡನ್ನು ಬಣ್ಣಿಸಿದಳು. ಅವನ ಕಂಗಾಲು ಸ್ಥಿತಿಯನ್ನು ಚಿತ್ರಿಸಿದಳು. 'ನನಗೇನು ಮಾಡುವುದೆಂದೂ ಗೊತ್ತಾಗುವುದಿಲ್ಲ' ಎಂದು ರೋದಿಸಿದಳು. ವಿನತೆಗೆ, ತನ್ನ ಗೆಳತಿಯು, ಹಳೆಯ ನೆನಪುಗಳಿಂದ ಕಂಗೆಟ್ಟು ಹೀಗೆ ಹುಚ್ಚಿಯಾದಳು ಎಂಬುದು ಸ್ಪಷ್ಟವಾಯಿತು. ಅವಳನ್ನಲ್ಲಿಯೆ ಬಿಟ್ಟು, ಆ ಕೂಸು ತತ್ಕಾಲಕ್ಕೆ ತನ್ನ ಕೊಟಡಿಯಲ್ಲಿರುವುದು ಲೇಸೆಂದು ಯೋಚಿಸಿ, ಅದಕ್ಕೆ ಬೇಕಾದ ಏರ್ಪಾಟು ಮಾಡಲು ಸರಿದಳು.

ಬಹು ವರ್ಷಗಳ ಅನಂತರ, ತನ್ನ ಊರಿಗೆ ಹೋದಾಗ ಯಾವ ಮಂಕು, ಭಯ, ನೋವು ಮಂಜುಳೆಯನ್ನು ಕಾಡಿದುವೋ ಅವೆಲ್ಲ ಸೇರಿ,

ನೂರು ಪಾಲಿನಷ್ಟು ಆವೇಗವನ್ನು ಗಳಿಸಿ ಈಗ ತಿರುಗಿ ಬಂದು ಕಾಡತೊಡಗಿದಂತೆ ಕಾಣಿಸುತ್ತಿತ್ತು. ಮಗುವನ್ನು ತಂದುದಕ್ಕಾಗಿ ಅವಳಿಗೆ ಬೇಸರವಿರಲಿಲ್ಲ. ಅದನ್ನವಳು ಸಾಕುವವಳೇ. ಆ ಪರಿಸ್ಥಿತಿಯನ್ನು ನೆನೆದಾಗ, ವಿನತೆ ತನಗೆ ಬೇಡದ ಗಂಡನನ್ನು ಸಾಕಿ ಉಪಚರಿಸಿದ ನೆನಪು, ಅವಳಿಗೆ ಆದರ್ಶವಾಗುತ್ತದೆ. ಮನೋಹರ ತನ್ನನ್ನು ವಂಚಿಸಿದನಾದರೂ ಈ ದಾರುಣ ಸ್ಥಿತಿಯಲ್ಲಿ ಅವನನ್ನು ಪಾರುಮಾಡುವುದಕ್ಕಾದೀತೇ ಎಂದು ಅವಳು ಯೋಚಿಸುತ್ತಾಳೆ. ಎಂಥ ಅನ್ಯಾಯಗಾರನಿಗೂ ಅಂಥ ನಿರಾಧಾರ ಪರಿಸ್ಥಿತಿ ಬಂದುದನ್ನು ನೋಡಿಕೊಂಡಿರುವುದು ಅವಳ ಮನಸ್ಸಿಗೊಪ್ಪದ ಮಾತಾಗಿದೆ; ಹೃದಯಕ್ಕಂತೂ ಅದು ಸಲ್ಲದೇ ಸಲ್ಲದು. 'ಆತನಿಗೆ ಗುಣವಾಗದೇನು? ಕ್ಷಯರೋಗ ತಟ್ಟಿ ಬದುಕಿದವರಿಲ್ಲವೆ? ಆತ ಗುಣವಾದ ಮೇಲೆ ಒಳ್ಳೆಯವನಾಗಬಾರದೆಂದಿದೆಯೋ?' ಎಂದೇನೇನೋ ಎಣಿಸುತ್ತಾಳೆ. ಆಸೆ, ಆಸೆಗೆ ಪುಟ ಕೊಡುತ್ತದೆ. ಯೌವನದಲ್ಲಿ ತನ್ನ ಉತ್ಸಾಹಕ್ಕೆ ಆದರ್ಶನಾದ ಅವನ ಚೆಲುವಿನ ರೂಪ ಕಣ್ಮುಂದೆ ಸ್ಫುರಿಸುತ್ತದೆ. ಅಂಜಲಿಯ ನೆನಪೂ ಅವಳ ಕಣ್ಣೆದುರಿಗೆ ಒಮ್ಮೆ ನಲಿದೋಡಿತು. ತಾನೂ ತಪ್ಪಿತಸ್ಥಳು. ಆತ ತಪ್ಪು ದಾರಿ ತುಳಿದವನೆಂಬುದೂ ಸಿದ್ಧವಾದ. ಆದರೂ ಒಬ್ಬರನ್ನೊಬ್ಬರು ಕ್ಷಮಿಸಿ, ಒಳ್ಳೆಯ ಬದುಕಿನ ಹಾದಿ ಹಿಡಿಯಲು ಶಕ್ಯವಿಲ್ಲವೆ—ಎಂಬ ಯೋಚನೆ, ತಲೆಕೂದಲಿನಷ್ಟು ಸಪುರವಾದ ಹಗ್ಗ, ಅವಳ ಆ ಭಾರವಾದ ಆಸೆಯನ್ನು ತೂಗಿ ಹಿಡಿದಿದೆ. ರಾತ್ರಿಯೆಲ್ಲ ಅದೇ ಚಿಂತೆ; ಅಂಥದೇ ಕನಸು.

ಮರುದಿನ ಬೆಳಿಗ್ಗೆ ಎದ್ದವಳೇ ವಿನತೆಯೊಡನೆ, "ವಿನೂ, ಯಾವನಾದರೊಬ್ಬ ಡಾಕ್ಟರರನ್ನು ಕರೆದುಕೊಂಡು ಹೋಗಿ ಅವನನ್ನು ತೋರಿಸಿ ಬರುತ್ತೇನೆ. ನಾನು ನನ್ನ ಗುರುತನ್ನು ಅವನಿಗೆ ಹೇಳಲಿಲ್ಲ; ಹೇಳುವುದೂ ಇಲ್ಲ. ಅವನ ಸ್ಥಿತಿಯೂ ನನ್ನನ್ನು ಗುರುತಿಸುವಂತಿಲ್ಲ. ಆದರೆ ನನಗೆ ಅದನ್ನು ನೋಡಲಿಕ್ಕಾಗುವುದಿಲ್ಲ. ತಿಳಿದೂ ತಿಳಿದೂ ನಾನು ಮರೆತುಬಿಡಲಾರೆ. ಈ ಮಗು ಕಣ್ಣೆದುರಿಗಿರುವಷ್ಟು ದಿನ, ಅವನ ರೂಪ ನನ್ನನ್ನು ಬೇತಾಳವಾಗಿ ಕಾಡೀತು" ಎಂದಂದು, ಅಂಧೇರಿಯಲ್ಲಿರುವ ಒಬ್ಬ ಡಾಕ್ಟರನನ್ನು ಕರೆದುಕೊಂಡು ಅಲ್ಲಿಗೆ ಹೋದಳು. ಅಲ್ಲಿ ರೋಗಿಯ ಪರೀಕ್ಷೆಯಾಯಿತು. ಅವನನ್ನು ಅದೇ ಕೂಡಲೇ ಸಾಗಿಸಿ ಎಕ್ಸ್ ರೇ ಮಾಡಿಸಿ ತಿರುಗಿ ಮನೆಗೆ ತಂದು ಬಿಟ್ಟುದೂ ಆಯಿತು. ಆ ವೈದ್ಯನಿಂದ 'ಅದು ಸಂಪೂರ್ಣ ನಿರಾಶೆಗೊಳ್ಳ

ಬೇಕಾದ ಸ್ಥಿತಿಯೆಂದೂ, ಇನ್ನು ಅವನ ಸಾವಿಗೆ ತಿಂಗಳೂ ಹೋಗಲಾರದು; ವಾರ ಹೋಗುವುದೂ ಕಷ್ಟ'ವೆಂದೂ ತಿಳಿದುಕೊಂಡಳು.

ಬಾಡ್ಕರ್ ರೋಗಿಯ ಮೇಲಿನ ಕನಿಕರದಿಂದ ತಿರುಗೊಮ್ಮೆ ಮಂಜುಳೆಯಿರುವಲ್ಲಿಗೆ ಬಂದಿದ್ದ. ಹಾಗೊಂದು ದಿನ ಬಂದು "ನೀವು ಅವನನ್ನು ಎಕ್ಸ್-ರೇ ಮಾಡಿಸಿಕೊಂಡು ಬಂದಿರಂತೆ; ಏನು ಹೇಳುತ್ತಾರೆ ಡಾಕ್ಟರರು? ಎಲ್ಲಿಗಾದರೂ ಅವನನ್ನು ಕಳುಹಿಸುವುದು ಸಾಧ್ಯವೇ? ಮನೆಯವರ ಸುದ್ದಿಯನ್ನು ಹೇಳುವುದಿಲ್ಲ ಆತ" ಎಂದು ಹೇಳಿದ.

"ನಾವೇನೂ ಮಾಡುವ ಸ್ಥಿತಿಯಲ್ಲಿಲ್ಲ. ಅದು ಕಠಿಣ ರೂಪದ ಕ್ಷಯ. ಚಿಕಿತ್ಸೆ ಈ ಸ್ಥಿತಿಯಲ್ಲಿ ಅಸಾಧ್ಯ ಎನ್ನುತ್ತಾರೆ ವೈದ್ಯರು; ನಾವೇನು ಮಾಡ ಬರುತ್ತದೆ!" ಎಂದು ಅವನಿಗೆ ಸಮಾಧಾನ ಹೇಳಿ ಕಳುಹಿಸಿಕೊಟ್ಟಳು. ಮನುವಿನ ಕಠಿಣ ಸ್ಥಿತಿಯು ತಿಳಿದು ಬರುತ್ತಲೇ, ಅವಳು ಆ ಸಂಗತಿಯನ್ನು ವಿವರಿಸಿ ಅವನ ಸೋದರ ಗೋಪಾಲನಿಗೆ ತಂತಿ ಮೂಲಕ ತಿಳಿಸಿದ್ದಳು. ಈಗ ಅವನ ಬರವನ್ನೇ ಇದಿರು ಕಾಯುತ್ತಿದ್ದಳು. ಮುದ್ರಾಡಿಸಿಂದ ಹಳ್ಳಿಯ ಊರಿಗೆ ಆ ತಂತಿಯು ಮುಟ್ಟಿ, ನಾಲ್ಕನೆಯ ದಿನ ಗೋಪಾಲನೂ ಧಾವಿಸಿ ಬಂದ. ಆತ ಅವಳಿರುವಲ್ಲಿಗೆ ನೆಟ್ಟಗೆ ಬಂದಿದ್ದ. "ನೀವೇನು ತಂತಿಕೊಟ್ಟವರು? ಎಲ್ಲಿದ್ದಾನೆ ನನ್ನ ಅಣ್ಣ?" ಎಂದು ಅವಳನ್ನು ಕೇಳಿದ. ಮಂಜುಳೆ ತಾನ್ಯಾರು ಎನ್ನುವುದಕ್ಕೆ ಹೋಗದೆ, ಅವನನ್ನು ಮಾತುಂಗಕ್ಕೆ ಕರೆದೊಯ್ದಳು. ದಾರಿಯಲ್ಲಿ ಮನೋಹರನ ನಿರಾಶಾದಾಯಕ ಸ್ಥಿತಿಯನ್ನು ಬಣ್ಣಿಸಿದಳು. "ನಾಳೆಯೇ ಮಂಗಳೂರಿಗೆ ಹೋಗುವ ಹಡಗಿದೆಯಂತೆ. ಅವನನ್ನು ಕೊಂಡೊಯ್ಯಿರಿ. ಊರಿಗೆ ಹೋಗಿ ಸಾಯುವ ಭಾಗ್ಯವಾದರೂ ಅವನಿಗಿರಲಿ. ಬದುಕುವ ಸ್ಥಿತಿಯಂತು ಕಾಣುವುದಿಲ್ಲ" ಎಂದು ಎಲ್ಲವನ್ನೂ ಹೇಳಿ, ಅವನನ್ನಲ್ಲಿಗೆ ಕರೆದೊಯ್ದಳು. ಅಣ್ಣನ ಪ್ರೇತರೂಪಿ ಶರೀರವನ್ನು ಕಂಡು ಗೋಪಾಲ ಅತ್ತುದಕ್ಕೊಂದು ಮಿತಿಯಿರಲಿಲ್ಲ. 'ತನ್ನ ಅಣ್ಣ ಹಾಗಾದಾನು; ಮನೆಯ ಸಂಪರ್ಕವನ್ನೆ ಕಡಿದು ಮಾಯವಾದಾನು' ಎಂದು ಅವನೆಣಿಸಿರದಿದ್ದರೂ, ಇನ್ನೂ ಸೋದರ ವಾತ್ಸಲ್ಯ ಅವನ ಎದೆಯಿಂದ ಆರಿರಲಿಲ್ಲ. "ಅಣ್ಣ, ನಿನ್ನನ್ನು ಕರೆದೊಯ್ಯುವುದಕ್ಕೆ ಬಂದಿದ್ದೇನೆ. ನೀನೇನೂ ತಿಳಿದುಕೊಳ್ಳಬೇಡ. ನಮಗೇನೂ ನಿನ್ನ ಮೇಲೆ ಸಿಟ್ಟಿಲ್ಲ" ಎಂದು ರೋದಿಸುವ ತಮ್ಮನ ಸ್ವರವನ್ನು ಕೇಳಿದಾಗ, ಅವನ ರೂಪವನ್ನು ನೋಡಿದಾಗ, ಮನೋಹರನ

ಕಣ್ಣುಗಳಿಂದಲೂ ಕಂಬನಿ ಉಕ್ಕಿತು. ಮಂಜುಳೆ ಆಗ ಹೊರಕ್ಕೆ ಬಂದು ಜಗುಲಿಯಲ್ಲಿ ನಿಂತುಕೊಂಡಳು. ಅವಳಿಂದ ನೋಡುವುದಾಗದಂಥ ನೋಟವದು. ಅವರಿಬ್ಬರನ್ನು ಒಟ್ಟಿಗೆ ಕಂಡಾಗ, ಹಿಂದೆ ಅವರನ್ನು ಒಟ್ಟಿಗೆ ಕಂಡ ನೆನಪು, ಅವರ ತಾಯ್ತಂದೆಯರ ಚಿತ್ರ ಕಣ್ಣಿಗೆ ಕಟ್ಟುತಿತ್ತು.

ಮನೋಹರ ತಾನು ಸೋದರರ ಮೇಲೆ ಇಲ್ಲದ ದ್ರೋಹವೆಣಿಸಿದ್ದಕ್ಕೆ ಚಿಂತಿಸಿದ; ಪರಿತಪಿಸಿದ; ಕ್ಷಮೆ ಯಾಚಿಸಿದ. "ಗೋಪು, ನಿನ್ನನ್ನು ಬರಮಾಡಿದವರಾರು? ಯಾರು ನಿನಗೆ ತಂತಿಕೊಟ್ಟರು? ನನ್ನ ಸುದ್ದಿ ಹೇಳಿದವರಾರು? ಬಾಡ್ಕರನೇ?" ಎಂದು ಕೇಳಿದ.

ಗೋಪಾಲ ಬಾಗಿಲ ಹೊರಗೆ ನಿಂತ ಮಂಜುಳೆಯನ್ನು ತೋರಿಸುತ್ತ "ಅವರು; ಯಾವ ಊರಿನವರೋ ನಿನೋ; ಮಿಸ್ ಮಡರ್ ಎಂಬವರು; ಅವರು ತಂತಿಕೊಟ್ಟಿದ್ದರು ನನಗೆ. ಕೂಡಲೆ ಬಂದೆ'' ಎಂದ. ಆ ಹೆಸರು ಅವನಿಗೇನನ್ನೂ ಸೂಚಿಸುವಂತಿರಲಿಲ್ಲ. ಗೋಪಾಲ ಮರುದಿನದ ಹಡಗಿನಲ್ಲಿ ಅವನನ್ನು ಕರೆದೊಯ್ಯುವ ನಿರ್ಧಾರಮಾಡಿದ. ಹೊರಕ್ಕೆ ಬಂದ. ಮಂಜುಳೆ ಆಗ "ನೀವೇನೂ ಯೋಚಿಸಬೇಕಾಗಿಲ್ಲ. ಬೆಳಿಗ್ಗೆ ಏಳು ಘಂಟೆಗೇ ನಾನು ಬರುತ್ತೇನೆ. ಹತ್ತು ಘಂಟೆಯೊಳಗೆ ಧಕ್ಕೆಯಲ್ಲಿದ್ದರೆ ಸಾಕು. ಅದಕ್ಕೆ ಏನೇನು ಬೇಕೋ ಅದೆಲ್ಲ ಏರ್ಪಾಟು ಮಾಡಿ ಬರುತ್ತೇನೆ" ಎಂದು ತಿಳಿಸಿ ಹೊರಟುಹೋದಳು. ಅವಳ ಮನಸ್ಸಿನ ಭಾರ ತುಸು ಕಡಮೆಯಾಯಿತಾದರೂ, ಮನೋಹರನನ್ನು ಅಂಥ ಸ್ಥಿತಿಯಲ್ಲಿ ನಾನು ಬೀಳ್ಕೊಡುತಿದ್ದೇನೆ-ಎಂಬ ಚಿತ್ರ ಮಾತ್ರ ಅಸಹನೀಯವಾಯಿತು. ತಾನೊಬ್ಬಳೇ ಇರುತ್ತಿದ್ದರೆ, ಅವನನ್ನು ಕೊಂಡುಹೋಗಿ ಸಾಕುತಿದ್ದೆ. ಅನಾಥಾಲಯದಲ್ಲಿ ಹಾಗೆ ಮಾಡುವುದಕ್ಕಿಲ್ಲ-ಎಂದು ಅವಳ ಹೃದಯ ಹೇಳುತಿತ್ತು. ಚಿಂತೆಯಿಂದ ಇನ್ನೊಂದು ರಾತ್ರಿಯನ್ನು ಕಳೆದಳು. ವಿನತೆಗೆ ಎಲ್ಲ ಸಂಗತಿಗಳನ್ನು ತಿಳಿಸಿದಳು. ಮರುದಿನ ಬೆಳಿಗ್ಗೆ ಏಳು ಘಂಟೆಗೇನೇ ಮಾತುಂಗಕ್ಕೆ ಧಾವಿಸಿ ಹೋದಳು. ಮನುವಿನ ತಮ್ಮ ಗೋಪಾಲ ನಿಸ್ಸಹಾಯನಾಗಿ ಕುಳಿತಿದ್ದ. ಬಾಡ್ಕರನೂ ಬಂದು ನಿಂತಿದ್ದ. ಅಲ್ಲಿದ್ದ ಅವರ ನಾಲ್ಕಾರು ವಸ್ತುಗಳನ್ನು ಕಟ್ಟುವುದಕ್ಕೆ ಸಹಾಯಕನಾದ. ಹೊರಗೆ ಟೇಕ್ಸಿ ಬಂದು ನಿಂತಿತು. ಎಲ್ಲರೂ ಮನುವನ್ನೆತ್ತಿಕೊಂಡು ಅದರಲ್ಲಿ ಮಲಗಿಸಿದರು. ಉಳಿದವರು ಹಾಗೂ ಹೀಗೂ ಅದೇ ಬಂಡಿಯಲ್ಲಿ ತಮ್ಮ ಶರೀರಗಳನ್ನು ತುರುಕಿಸಿ, ಕುಳಿತು ಧಕ್ಕೆಗೆ ಸಾಗಿದರು. ಅಲ್ಲಿಂದ

ಹಡಗಿಗೆ ಅವನನ್ನು ಒಯ್ದು ಮಲಗಿಸಿದ್ದಾಯಿತು. ಹಡಗು ಹೊರಡುವ ತನಕ ಬಾಡ್ಕರ್, ಮಂಜುಳೆಯರಿಬ್ಬರೂ ಅಲ್ಲಿಯೇ ಕಾಲ ಕಳೆದರು. ವೇಳೆಯಾಗುತ್ತಲೇ ಮಂಜುಳೆ ಗೋಪಾಲನನ್ನು ಸಮೀಪಿಸಿ "ಹೋಗುತ್ತೇವೆ" ಎಂದುದಲ್ಲದೆ, ಮನೋಹರನ ಬಳಿಗೂ ಹೋದಳು. ತಡೆಯಲಾರದ ವ್ಯಥೆಯಿಂದ ಅವನನ್ನು ನೋಡುತ್ತ "ಮನೂ, ಹೋಗಿ ಬಾ" ಎಂದಳು. ಯಾಕೆ ಹಾಗೆ ಹೇಳಿದಳೋ ಅವಳಿಗೇ ತಿಳಿಯದು. "ಅವಳ್ಯಾರು?" ಎಂದು ತಮ್ಮನನ್ನು ಅನಂತರ ಮನು ಎಷ್ಟು ಕೇಳಿದರೂ, ಅವನು ಹೇಳಲಾರನಾದ. ಹಡಗು ಹೊರಟಿತು. ಅವರಿಬ್ಬರ ಪಯಣ ಸಾಗಿತು.

ದಾರಿಯಲ್ಲಿ ಅನೇಕ ಬಾರಿ ಮನು ತಮ್ಮನನ್ನು ಕೇಳುತ್ತಲೇ ಇದ್ದ: "ಅವಳ್ಯಾರು; ನನಗಾಗಿ ಯಾಕೆ ಅಷ್ಟು ಸಹಾಯಮಾಡಿದಳು? ನನ್ನ ಗುರುತಿದ್ದವರಂತೆ 'ಮನೂ, ಹೋಗಿ ಬಾ' ಎಂದಳಲ್ಲ—ಏನು ಕಾರಣ?" ಎಂದು ಪ್ರಶ್ನಿಸುತ್ತಲೇ ಇದ್ದ.

ಮನೆಗೆ ಬಂದರೂ ಮಂಜುಳೆಯ ಮನಸ್ಸು ಪ್ರೇತರೂಪಿಯಾದ ಮನೋಹರನ ದೀನ ಸ್ಥಿತಿಯನ್ನು ನೆನೆಯುತ್ತಲೇ ಇತ್ತು. ಅದನ್ನು ಮರೆಯುವುದಂತು ಶಕ್ಯವಾಗಲಿಲ್ಲ. ನಾಲ್ಕನೆಯ ದಿವಸ ತಂತಿಯೊಂದು ಅವಳ ಕೈಯ್ಯನ್ನು ಸೇರಿತು. ಮನೋಹರ ಅರ್ಧ ಪಯಣದಲ್ಲಿ ಸತ್ತನೆಂಬ ಸುದ್ದಿ ದೊರೆಯಿತು. ಅವಾಕ್ಕಾದಳು ಮಂಜುಳೆ. ಮೇಲಿಂದ ಮೇಲೆ ತಂತಿಯನ್ನು ಓದಿದಳು. ಗೋಪಾಲ ಕೊಟ್ಟ ತಂತಿಯದು. ಕೃತಜ್ಞತೆಯ ಮಾತುಗಳಿವೆ. ವಿಷಾದ ವ್ಯಕ್ತಮಾಡುತ್ತಾನೆ. ಅದರ ಮುಖ್ಯ ಒಕ್ಕಣೆ ಮಾತ್ರ ಅವಳ ಹೃದಯವನ್ನು ಕೊರೆಯುತ್ತಿದೆ. "ಅರ್ಧ ಪಯಣದಲ್ಲಿ ಮನು ತೀರಿಕೊಂಡ" ಎಂದಿತ್ತು. "ಊರಿನ ನೆಲವನ್ನು ಕಾಣುವ ಋಣವಿಲ್ಲದೆ ಆತ ಸತ್ತ. ತನ್ನ ಜೀವನದ ಅರ್ಧ ಪಯಣದಲ್ಲಿಯೇ ಸತ್ತ. ನನ್ನ ಜೀವನದ ಅರ್ಧ ಪಯಣ ನನ್ನನ್ನು ತಬ್ಬಲಿಯಾಗಿ ಮಾಡಿಯೇ ಸತ್ತ" ಎಂದು ಮಂಜುಳೆ ತುಟಿಬಿಗಿದು, ತನ್ನ ಕೊಟಡಿಗೆ ಹೋದಳು. ಆ ತಂತಿಯನ್ನು ವಿನತೆಯ ಕೈಯಲ್ಲಿ ಕೊಟ್ಟಳು. ಮೂಕಳಾಗಿದ್ದ ಗೆಳತಿಯೊಡನೆ ವಿನತೆ "ಮಂಜುಳಾ, ಎಲ್ಲವೂ ವಿಧಿಯ ಆಟವಲ್ಲವೆ! ನೀನ್ಯಾತಕ್ಕೆ ಅಷ್ಟು ಚಿಂತೆಮಾಡುತ್ತೀ? ನಿನ್ನ ಕರ್ತವ್ಯವನ್ನು ಮಾಡಿದೆ. ಯಾವುದೋ ಒಂದು ಜನ್ಮದಲ್ಲಿ ನೀನೂ ಅವನೂ ಗಂಡಹೆಂಡಿರಾಗಿಯೇ ಇದ್ದಿರಬೇಕು. ಇಲ್ಲವಾದರೆ ಇಷ್ಟೆಲ್ಲ ಆಗುತ್ತಿರಲಿಲ್ಲ; ಅದನ್ನು

ಮರೆತುಬಿಡು. ನಿನ್ನ ಧೈರ್ಯ ಇಷ್ಟೇ ಏನು? ನನಗೆಷ್ಟು ಕಷ್ಟ ಬಂದಿರಲಿಲ್ಲ. ನಾನು ಹೀಗೆ ಕಂಗಾಲಾಗಿದ್ದರೆ, ನನ್ನ ಗತಿ ಏನಿತ್ತು? ನನ್ನ ಮಕ್ಕಳ ಗತಿ ಏನಾಗುತಿತ್ತು? ಹೋದ ವಸ್ತುವಿಗಾಗಿ ಅಳುವುದು ಮೂರ್ಖತನ. ದೇವರು ಉಳಿಸಿದ್ದಕ್ಕಾಗಿ ನಗಬೇಕು" ಎಂದಳು.

"ಹೂಂ, ನಿಜ- ಆದರೆ ಆ ಬುದ್ಧಿ ಸುಲಭದಲ್ಲಿ ಬರುತ್ತದೆಯೆ? ನಿನಗೆ ಬಂದಿತು. ನೀನಿದ್ದೀಯಾ ನನ್ನ ಜತೆಯಲ್ಲಿ; ನನಗೂ ಅದೇ ಧೈರ್ಯ" ಎಂದು ವಿಶೇಷ ಮಾತುಗಳಿಗೆ ಇಂಬುಕೊಡದೆ, ತನ್ನ ಚಿಂತೆಯನ್ನು ತಾನೇ ನುಂಗಿ ಕೊಂಡು, ಅನಾಥಾಲಯದ ಇತರ ಮಕ್ಕಳ ಮುಖವನ್ನು ಕಾಣುವುದಕ್ಕೆ ಸರಿದಳು.

ಮನೋಹರನ ನೆನಪು ಬಹು ದಿನಗಳ ತನಕವೂ ಮಂಜುಳೆಯ ಮನಸ್ಸನ್ನು ಆಗಾಗ ಕಲಕುತ್ತಿತ್ತು. ಅದರ ಪ್ರತಿಕ್ರಿಯೆ ಎಂಬಂತೆ ಅವಳು ಅವನಿಂದ ತಂದ ಕೂಸಿಗೆ "ಮುದ್ದು" ಎಂಬ ನಾಮಕರಣವನ್ನು ಮಾಡಿ ದಳು. ವಿನತೆಗಿಂತಲೂ ಹೆಚ್ಚಾಗಿ, ತಾನು ಆ ಶಿಶುವಿನ ಆರೈಕೆಯನ್ನು ನೋಡಿಕೊಳ್ಳತೊಡಗಿದಳು. ಎಲ್ಲಿಗೆ ಹೋಗುವಾಗಲೂ ಅದನ್ನೆತ್ತಿಕೊಂಡು ಹೋಗುತ್ತಾಳೆ; ಮಾತನಾಡಿಸುತ್ತಾಳೆ. ಸಂಸ್ಥೆಯ ಸ್ಥಾಪಕರಾದ ವೃದ್ಧ ಗೋಕುಲ್‌ದಾಸರು ಬಂದಾಗ "ಇದನ್ನು ನಿಮ್ಮನ್ನು ಕೇಳದೆ ನಾನಾಗಿ ತಂದೆ. ಅದರ ಸ್ಥಿತಿ ಹೀಗಿತ್ತು" ಎಂದು ತಿಳಿಸಿದಳು. ಅವರದಕ್ಕೆ "ಒಳ್ಳೆಯ ಕೆಲಸ ಮಾಡಿದಿರಿ. ಆದರೆ ಬಹು ಚಿಕ್ಕ ಕೂಸಲ್ಲವೆ? ಸಾಕುವುದು ಕಷ್ಟವಲ್ಲವೇ? ಅದಕ್ಕೆ ಸಮನಾದ ಆರೋಗ್ಯವೂ ಇಲ್ಲ. ಆಗಲಿ, ಸಂತೋಷ" ಎಂದಂದು ಹೋದರು.

ಮುದ್ದುವನ್ನು ತನ್ನ ಮಗ್ಗುಲಿಗೇನೆ ಮಲಗಿಸಿಕೊಂಡು ರಾತ್ರಿಯನ್ನು ಕಳೆಯುತ್ತಾಳೆ ಆಕೆ. ಎರಡು ಮೂರು ತಿಂಗಳ ಲಾಲನೆ ಪಾಲನೆಯಲ್ಲಿ ಆ ಮಗುವಿನ ಸ್ಥಿತಿ ಬಹು ಸುಧಾರಿಸಿತಾದರೂ ಮುಂದೆ ಅದು ಅಳುವುದಂತು ಹೆಚ್ಚಾಯಿತು. ಹಾಗೆಂದೂ ಕೂಗುತ್ತಿದ್ದ ಶಿಶು ಅದಲ್ಲ. ಅದರ ಪಚನಶಕ್ತಿ ಕಡಿಮೆಯಾಯಿತು. ಹೊಟ್ಟೆ ದೊಡ್ಡದಾಗುತ್ತ ಬಂದಿತು. ಅನಾಥಾಲಯಕ್ಕೆ ಬರುವ ವೈದ್ಯರು "ಅದಕ್ಕೆ ಹಾಲನ್ನು ಕೊಡಬೇಡಿ; ಬರಿ 'ವೇ' ಕೊಡಿ. ಹಣ್ಣಿನ ರಸ ಕೊಡಿ" ಎಂದು ಹೇಳಿಹೋದರು. ಅದೇ ರೀತಿ ತಿಂಗಳ ಕಾಲ ಅನು ಪಾನ ನಡೆಯಿಸಿದ್ದಾಯಿತು. ಆದರೆ ಮಗುವಿನ ಹೊಟ್ಟೆಯ ಉಬ್ಬು ಇಳಿಯ

ಲಿಲ್ಲ. ಅನುದಿನ ಜ್ವರವೂ ಬರತೊಡಗಿತು; ಅದರ ರೋದನ ಈ ಸಾಕು ತಾಯಿಯನ್ನು ಕೊರೆಯುತಿತ್ತು. ಅವಳೇ ಅದನ್ನೆತ್ತಿಕೊಂಡು ಇನ್ನೊಬ್ಬರು ವೈದ್ಯರಲ್ಲಿಗೆ ಹೋಗಿ, ತೋರಿಸಿ ತಂದಳು. "ಇದರ ಯಕೃತ್ತು ದೊಡ್ಡದಾಗಿದೆ. ಇಷ್ಟು ದಿನ ನೀವು ಅದನ್ನು ಹಾಗೆ ಬಿಡಬಾರದಿತ್ತು. ಮೊದಲು ಅದಕ್ಕೆ ಆಹಾರ ಚೆನ್ನಾಗಿದ್ದರಲಿಲ್ಲವೆಂದು ಕಾಣುತ್ತದೆ" ಎಂದಂದು ಚಿಕಿತ್ಸೆಗೆ ಆರಂಭಿಸಿದರು. ಚಿಕಿತ್ಸೆಯ ಶ್ರಮವಷ್ಟೇ ಮಂಜುಳೆಯ ಪಾಲಿನ ಪಾರಿತೋಷಕವಾಯಿತು.

ಒಂದು ದಿನ ಮಧ್ಯಾಹ್ನ ಮಂಜುಳೆ ವಿನತೆಯೊಡನೆ ಮಾತನಾಡುತ್ತ ಆರಾಮ ಕುರ್ಚಿಯಲ್ಲಿ ಕುಳಿತುಕೊಂಡಿದ್ದಳು. ಎದುರಿನ ಪುಟ್ಟ ಹಾಸಿಗೆಯಲ್ಲಿ ಆ ಮಗು ಮಲಗಿತ್ತು; ತನ್ನ ಕೈಕಾಲುಗಳನ್ನು ಅಲ್ಲಾಡಿಸುತಿತ್ತು. ಮುಖದಲ್ಲಿ ನಗುವೂ ಕಾಣಿಸುತಿತ್ತು.

"ವಿನೂ, ಮುದ್ದು ಇವತ್ತು ನಗುತ್ತಿದೆ ನೋಡಿದೆಯ? ಇವತ್ತೇ ಅಲ್ಲವೆ ಅದರ ನಗುವನ್ನು ಕಂಡದ್ದು ನಾವು!" ಎಂದಳು ಮಂಜುಳೆ. ಇಬ್ಬರೂ ಅದರ ಬಳಿಗೆ ಹೋಗಿ ಅದರ ಕಪೋಲವನ್ನು ಸವರಿದರು. ಅದು ಕಿಲಕಿಲನೆ ನಕ್ಕಿತು. ಆಗ ಅವರಿಗಾದ ಹರ್ಷ ಅಷ್ಟಿಷ್ಟಲ್ಲ. ಮನಸ್ಸಿಗೆ ಅದೆಷ್ಟೋ ಧೈರ್ಯವಾಯಿತು.

"ವಿನೂ,ಅದು ಹುಟ್ಟಿದ ಮೇಲೆಯೆ ನಕ್ಕಿರಲಾರದು. ಏನು ವಿಧಿಯೋ ಅದರದ್ದು. ಇವತ್ತು ಅದರ ನಗುವನ್ನು ನೋಡಿ ನನಗೆ ಸ್ವರ್ಗ ಸಿಕ್ಕಿದ ಹಾಗಾಯಿತು" ಎಂದಳು ಮಂಜುಳೆ.

"ಹೌದು, ತುಂಬ ಗೆಲುವಾಗಿದೆ ಇವತ್ತು" ಎಂದಳು ವಿನತೆ.

ಆ ರಾತ್ರಿ ಮಗು ಚೀರಲಿಲ್ಲ. ನಿತ್ಯದಂತೆ ಮಂಜುಳೆಯ ನಿದ್ರೆಯನ್ನು ಕೆಡಿಸಲಿಲ್ಲ. ಮರುದಿನ ಬೆಳಿಗ್ಗೆ ಮಾತ್ರ, ಮುಂಚಿನ ದಿನ ನಕ್ಕ ನಗು, ಆ ಮಗುವಿನ ಕೊನೆಯ, ಪ್ರಾಯಶಃ ಏಕಮಾತ್ರ ನಗು ಎಂಬ ಅನುಭವ ಅವರಿಗಾಯಿತು. ಮುದ್ದು ತಿರುಗಿ ಏಳಲಿಲ್ಲ. 'ನಂದುವ ದೀಪಕ್ಕೆ ಪ್ರಕಾಶ ಹೆಚ್ಚು' ಎಂಬ ನಾಣ್ಣುಡಿಗೆ ಸಮನಾಗಿ, ಅದು ತನ್ನ ಸಾಕುತಾಯಿಂದಿರ ಋಣ ಸಲ್ಲಿಸುತ್ತೇನೆಂದು, ತನ್ನ ನಗುವಿನಿಂದಲೇ ಕೃತಜ್ಞತೆಯನ್ನು ಸಲ್ಲಿಸಿ, ತಂದೆಯ ಮನೆಗೆ ಹೊರಟಿತ್ತು. ಅಲ್ಲಿಂದ ಮಂಜುಳೆಯ ಭಾವ ಬಿಗುಪುಗೊಂಡಿತು. ನಗುವಿನ ಛಾಯೆಯೇ ಅವಳ ಮುಖದಿಂದ ಹೊರಡದಾಯಿತು.

ಮಗುವನ್ನು ಮಣ್ಣುಗೂಡಿಸಿ ಬಂದುದಾಯಿತು. ಮಂಜುಳೆಯ ಜೀವನ ತಿರುಗಿ ಕತ್ತಲಿಂದ ತುಂಬಿತು. ವಿನತೆಯಂತೆ, ಧೈರ್ಯದಿಂದ ಆ ಮಗುವನ್ನು ಬೆಳೆಸಿಯಾದರೂ, ತನ್ನ ಪ್ರೇಮದ ಋಣವನ್ನು ಸಲ್ಲಿಸುತ್ತೇನೆಂಬ ಅವಳ ಬಯಕೆ, ಅವಳ ಪೂರ್ವದ ಅನೇಕ ಸುಂದರ ಬಯಕೆಗಳಂತೆ ಧೂಳೀಧ್ವಂಸ ವಾಯಿತು. ಗೆಲುವಡಗಿದ ಅವಳ ಮುಖ, ವಿನತೆಗೆ ಮಾತ್ರವಲ್ಲ, ಅನಾಥಾಲಯದ ಪ್ರತಿಯೊಂದು ಕೂಸಿಗೂ ತಿಳಿಯುವಷ್ಟು ಸ್ಪಷ್ಟವಾಯಿತು. ವೃದ್ಧ ಗೋಕುಲದಾಸ ಬಂದು ಅವಳನ್ನು ಸಂತೈಸಿಯೂ ಹೋದ. ನೂರಕ್ಕೆ ಒಂದು ಸೊಲ್ಲು ಮಾತನಾಡುವ ಮೌನ ಮಂಜುಳೆಯದು. ನಿತ್ಯದ ಕೆಲಸ ಮಾಡುತ್ತಾಳೆ; ಅದೂ ಗೆಲುವಿಲ್ಲದ ಯಂತ್ರದಂತೆ.

ಒಂದು ರಾತ್ರಿ ವಿನತೆಯ ಮಗ್ಗುಲಲ್ಲಿ ಮಂಜುಳೆ ಮಲಗಿಕೊಂಡಿದ್ದಳು. ಆಚೀಚೆ ವಿನತೆಯ ಮಕ್ಕಳು ಮಲಗಿದ್ದರು. ಮಂಜುಳೆ ಅರ್ಧ ನಿದ್ರೆಯಲ್ಲಿದ್ದ ವಿನತೆಯನ್ನು ತಬ್ಬಿಕೊಂಡು 'ವಿನೂ' ಎಂದು ಕರೆದಳು. ವಿನತೆಗೆ ಎಚ್ಚರವಾಯಿತು. "ಏನು ಮಂಜುಳೆ, ಏನು ಸ್ವರವಿದು?"

"ಸ್ವರ ಕೇಳಿಸಿತೇ?"

"ಕರೆದೆಯಲ್ಲವೇ ನೀನು? ನನ್ನನ್ನು ಎಚ್ಚರಿಸಿ ಕರೆದೆ."

"ಹೌದೆಂದು ಕಾಣುತ್ತದೆ."

"ಯಾಕೆ? ಏನು? ಏನಾದರೂ ಕನಸು ಕಂಡೆಯ?"

"ಕನಸಲ್ಲ."

"ಚಿಂತೆಯೇ! ಮುದ್ದುವನ್ನು ನೆನೆಯುತ್ತ ಮಲಗಿದ್ದೆಯಾ?"

"ಹೌದು."

"ಮರೆತು ಬಿಡು, ಮಂಜುಳಾ! ಅದನ್ನು ಎಷ್ಟೆಂದು ನೆನೆದೀಯಾ?"

"ಮರೆತು ಬಿಡುವುದೇ! ವಿನೂ, ನನ್ನ ತುಂಬಿದ ಎದೆಯಿಂದ ಒಂದು ಮಗುವಿಗೂ ಹಾಲೂಡಿಸದೆ ನಾನು ಸಾಯಬೇಕು, ಅನ್ನುತ್ತೀಯಾ? ನೀನು ನಾಲ್ಕು ಮಕ್ಕಳ ತಾಯಿ. ನಿನಗೆ ನನ್ನ ದುಃಖ ಹೇಗೆ ಗೊತ್ತಾಗಬೇಕು? ನಾನು ಅರುವತ್ತು ಮಕ್ಕಳನ್ನು ಸಾಕುತ್ತಿರುವೆನಾದರೂ ಅವಾವುದೂ ನನ್ನವಲ್ಲ. ನನ್ನದೆಂಬ ಪದಾರ್ಥ—ನನಗಿಲ್ಲ ಎಂದು ಕರುಳು ಕೊರೆಯುತ್ತಿದೆ. ನಾನು ತಾಯಿಯಾಗದೆ ಸಾಯಲಾರೆ. ನಾನು ಹೆಣ್ಣು; ಅದಕ್ಕಾಗಿ ಹುಟ್ಟಿದವಳು ನಾನು—ಎಂದು ನನ್ನ ಹೃದಯ ಹೇಳುತ್ತಿದೆ."

ಮುಂದೆ ಅವಳಿಂದ ಮಾತಿಲ್ಲ. ವಿನು ಅವಳ ಗಲ್ಲವನ್ನು ಸವರಿದಳು.
"ಆಗಬಾರದೇಕೆ? ಇನ್ನೂ ಆಗಬಹುದು. ದೇವರು ಅಷ್ಟು ನಿಷ್ಕರುಣಿಯಲ್ಲ."

Harsha Printery & Publications, Puttur. S.K. 6-53-1,000